ಖುತ್‌ಬಾತ್

- ಇಸ್ಲಾಮಿನ ಬುನಾದಿಗಳು -

✍ ಸಯ್ಯದ್ ಅಬುಲ್ ಆಲಾ ಮೌದೂದಿ

ಪರಮದಯಾಮಯ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

1938ರಲ್ಲಿ ಪಂಜಾಬಿನ ಪಠಾಣ್ ಕೋಟ್‌ಗೆ ಹತ್ತಿರದ 'ದಾರುಲ್ ಇಸ್ಲಾಮ್' ಎಂಬ ಪುಟ್ಟ ಗ್ರಾಮದ ಮಸೀದಿಯೊಂದರಲ್ಲಿ ಆಧುನಿಕ ಇಸ್ಲಾಮೀ ವಿದ್ವಾಂಸ ಹಾಗೂ ಚಿಂತಕರಾಗಿದ್ದ ಮೌ| ಸಯ್ಯಿದ್ ಅಬುಲ್ ಆಲಾ ಮೌದೂದಿಯವರು ಮಾಡಿದ ಜುಮಾ ಖುತ್ಬಾಗಳ ಸಮಾಹಾರವೇ ನಿಮ್ಮ ಕೈಯಲ್ಲಿರುವ ಈ 'ಖುತ್‌ಬಾತ್' ಎಂಬ ಬೃಹತ್ ಗ್ರಂಥ. ಧರ್ಮದ ಬಗ್ಗೆ ಹೆಚ್ಚೇನೂ ತಿಳಿದಿರದ ಗ್ರಾಮೀಣ ಜನರಿಗೆ ಇಸ್ಲಾಮ್ ಧರ್ಮದ ಮೂಲಭೂತ ವಿಷಯಗಳನ್ನು ಸರಳ ಉರ್ದು ಭಾಷೆಯಲ್ಲಿ ಮನವರಿಕೆ ಮಾಡಲು ಅವರು ಪ್ರಯತ್ನಿಸಿದ್ದಾರೆ. ಅನಂತರ ಎಲ್ಲರಿಗೂ ಪ್ರಯೋಜನಕಾರಿಯಾಗಲೆಂದು ಈ ಪ್ರವಚನಗಳನ್ನು ಈಮಾನ್, ಇಸ್ಲಾಮ್, ನಮಾಝ್ ಮತ್ತು ಉಪವಾಸ ವ್ರತ, ಝಕಾತ್, ಹಜ್ಜ್ ಮತ್ತು ಜಿಹಾದ್ ಎಂಬ ಹೆಸರುಗಳಲ್ಲಿ ಪ್ರತ್ಯೇಕ ಕಿರುಹೊತ್ತಿಗೆಗಳಾಗಿ ಪ್ರಕಟಿಸಲಾಯಿತು. ಇವು ಬಹುತೇಕ ಎಲ್ಲ ಪ್ರಾಂತೀಯ ಭಾಷೆಗಳಲ್ಲೂ ಪ್ರಕಟಗೊಂಡಿವೆ. ಕನ್ನಡದಲ್ಲೂ 'ಶಾಂತಿ ಪ್ರಕಾಶನ'ದ ವತಿಯಿಂದ ಪ್ರಕಟಿಸಲಾಯಿತು.

ಸುಮಾರು 79 ವರ್ಷಗಳು ಕಳೆದರೂ ಇಸ್ಲಾಮಿನ ಮೂಲಭೂತ ಬೋಧನೆಗಳನ್ನು ಮನಮುಟ್ಟುವ ಶೈಲಿಯಲ್ಲಿ ವಿವರಿಸುವಂತಹ ಗ್ರಂಥ ಬೇರೆ ಬಂದಿಲ್ಲ. ಈ ಗ್ರಂಥ ಇಂದಿಗೂ ಪ್ರಸ್ತುತವಾಗಿದೆ. ಆರು ಭಾಗಗಳಲ್ಲಿ ಪ್ರಕಟಗೊಂಡಿರುವ ಪುಸ್ತಕಗಳನ್ನು ರಕ್ಷಿಸಿಡುವುದು ಎಲ್ಲರಿಂದಲೂ ಸಾಧ್ಯವಿರುವ ವಿಷಯವಲ್ಲ. ಆದುದರಿಂದ ಆರು ಭಾಗಗಳನ್ನು ಒಂದೇ ಸಂಪುಟದಲ್ಲಿ ಪ್ರಕಟಿಸಬೇಕೆಂಬ ಬೇಡಿಕೆ ವ್ಯಾಪಕವಾಗಿತ್ತು. ಅದರ ಸಾಕ್ಷಾತ್ಕಾರವೇ ಈ ಬೃಹತ್ ಗ್ರಂಥ. ಇದರಲ್ಲಿ ಕುರ್‌ಆನ್, ಹದೀಸ್ ಇತ್ಯಾದಿಗಳನ್ನು ಮೂಲ ಅರಬಿಯಲ್ಲೇ ಅಳವಡಿಸಿ ಪರಿಷ್ಕರಿಸಿ ಮುದ್ರಿಸಲಾಗಿದೆ.

ಖುತ್‌ಬಾತ್‌ನ ವಿವಿಧ ಭಾಗಗಳನ್ನು ಮರ್ಹೂಮ್ ಎಸ್. ಅಬ್ದುಲ್ ಗಫ್ಫಾರ್ ಸುಳ್ಯ, ಬಿ.ಎಸ್. ಶರ್ಫುದ್ದೀನ್ ಬಣಕಲ್ ಮತ್ತು ಅಬ್ದುಸ್ಸಲಾಮ್ ಪುತ್ತಿಗೆಯವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಇಸ್ಲಾಮಿನ ವೈಚಾರಿಕ ಕ್ರಾಂತಿಯಲ್ಲಿ ಮಹತ್ತರ ಪಾತ್ರವನ್ನು ವಹಿಸಿದ ಈ ಗ್ರಂಥವು ಸರ್ವರಿಗೂ ಉಪಯುಕ್ತವಾಗಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

ಅಧ್ಯಾಯಗಳು

ಅನುಕ್ರಮಣಿಕೆ

ಅಧ್ಯಾಯ -1 : ಈಮಾನ್

ಅಧ್ಯಾಯ -4 : ಉಪವಾಸ ವ್ರತ

ಅಧ್ಯಾಯ -5 : ಝಕಾತ್

ಅಧ್ಯಾಯ -6 : ಹಜ್ಜ್

ಅಧ್ಯಾಯ -7 : ಜಿಹಾದ್

❖ ❖ ❖

ಅಧ್ಯಾಯ -1

ಈಮಾನ್

○

◆ ಮುಸ್ಲಿಮನಾಗಲು ಜ್ಞಾನ ಅತ್ಯವಶ್ಯಕ

◆ ಮುಸ್ಲಿಮ್-ಮುಸ್ಲಿಮೇತರರ ನಡುವಿನ ನೈಜ ಅಂತರ

◆ ಯೋಚಿಸತಕ್ಕ ವಿಚಾರಗಳು

◆ ಪವಿತ್ರ ವಚನದ ತಾತ್ಪರ್ಯ

◆ ಪವಿತ್ರ ವಚನ ಮತ್ತು ಪೈಶಾಚಿಕ ವಚನ

◆ ಪವಿತ್ರ ವಚನದ ಮೇಲೆ ವಿಶ್ವಾಸವಿರಿಸುವುದರ ಉದ್ದೇಶ

○

ಮುಸ್ಲಿಮನಾಗಲು ಜ್ಞಾನ ಅತ್ಯವಶ್ಯಕ

ಅಲ್ಲಾಹನ ಮಹಾ ಅನುಗ್ರಹ

ಮುಸ್ಲಿಮ್ ಸಹೋದರರೇ!

'ಇಸ್ಲಾಮ್' ಜಗತ್ತಿನಲ್ಲಿ ಅಲ್ಲಾಹನ ಮಹಾ ಅನುಗ್ರಹವೆಂದು ಪ್ರತಿಯೊಬ್ಬ ಮುಸ್ಲಿಮನೂ ಮನಃಪೂರ್ವಕ ಭಾವಿಸುತ್ತಾನೆ. ಇಸ್ಲಾಮಿನ ಅನುಗ್ರಹವನ್ನು ದಯಪಾಲಿಸಿ, ಪ್ರವಾದಿವರ್ಯರ(ಸ) ಸಮುದಾಯದಲ್ಲಿ ಸೇರಿಸಿದ್ದಕ್ಕಾಗಿ ಪ್ರತಿಯೊಬ್ಬ ಮುಸ್ಲಿಮನೂ ಅಲ್ಲಾಹನನ್ನು ಸ್ತುತಿಸುತ್ತಾನೆ. ಅಲ್ಲಾಹನು ಸ್ವತಃ ಅದನ್ನು ತನ್ನ ದಾಸರ ಮೇಲೆ ಮಾಡಿದ ಮಹಾ ಅನುಗ್ರಹವೆಂದು ಸಾರಿದ್ದಾನೆ. ಪವಿತ್ರ ಕುರ್‌ಆನಿನಲ್ಲಿ ಈ ಕುರಿತು ಹೀಗೆನ್ನಲಾಗಿದೆ -

ٱلْيَوْمَ أَكْمَلْتُ لَكُمْ دِينَكُمْ وَأَتْمَمْتُ عَلَيْكُمْ نِعْمَتِي وَرَضِيتُ لَكُمُ
ٱلْإِسْلَامَ دِينًا ۚ

"ಇಂದು ನಾನು ನಿಮ್ಮ ಧರ್ಮವನ್ನು ನಿಮಗಾಗಿ ಪರಿಪೂರ್ಣಗೊಳಿಸಿದ್ದೇನೆ. ನನ್ನ ಕೊಡುಗೆಯನ್ನು ನಿಮ್ಮ ಮೇಲೆ ಪರಿಪೂರ್ಣಗೊಳಿಸಿದ್ದೇನೆ ಮತ್ತು ಇಸ್ಲಾಮನ್ನು ಧರ್ಮವೆಂಬ ನೆಲೆಯಲ್ಲಿ ಅಂಗೀಕರಿಸಿದ್ದೇನೆ." (5:3)

ಉಪಕಾರಸ್ಮರಣೆ ಹೇಗೆ?

ಅಲ್ಲಾಹನು ನಿಮ್ಮ ಮೇಲೆ ಮಾಡಿದ ಉಪಕಾರವನ್ನು ಸ್ಮರಿಸುವುದು ನಿಮ್ಮ ಮೇಲೆ ಕಡ್ಡಾಯವಾಗಿದೆ. ಏಕೆಂದರೆ ಉಪಕಾರಸ್ಮರಣೆ ಮಾಡದ ವ್ಯಕ್ತಿ ಮಹಾ ಕೃತಘ್ನನಾಗಿದ್ದಾನೆ. ಮಾನವ ತನ್ನ ಪ್ರಭುವಿನ ಉಪಕಾರಸ್ಮರಣೆ ಮಾಡದಿರುವುದು ಎಲ್ಲದಕ್ಕಿಂತ ಮಿಗಿಲಾದ ಕೃತಘ್ನತೆಯಾಗಿದೆ. ಹಾಗಾದರೆ ದೇವನ ಉಪಕಾರಸ್ಮರಣೆ ಮಾಡುವುದು ಹೇಗೆ? ಎಂದು ನೀವು ಪ್ರಶ್ನಿಸಬಹುದು. ದೇವನು ನಿಮ್ಮನ್ನು ಪ್ರವಾದಿವರ್ಯರ(ಸ) ಸಮುದಾಯದಲ್ಲಿ ಸೇರಿಸಿರುವಾಗ ಸಂಪೂರ್ಣವಾಗಿ ಅವರ ಅನುಯಾಯಿಯಾಗಿ ಮಾರ್ಪಡುವುದೇ ನೀವು ಮಾಡಬಹುದಾದ ಉಪಕಾರ ಸ್ಮರಣೆಯಾಗಿದೆ ಎಂಬುದು ನಾನು ಕೊಡುವ ಉತ್ತರ. ದೇವನು ನಿಮ್ಮನ್ನು ಮುಸ್ಲಿಮ್ ಸಮುದಾಯದ ಸದಸ್ಯನನ್ನಾಗಿ ಮಾಡಿರುವಾಗ ಅಕ್ಷರಶಃ ಮುಸ್ಲಿಮನಾಗಿ

ಮಾರ್ಪಡುವುದೇ ನೀವು ಅದಕ್ಕೆ ಮಾಡಬಹುದಾದ ಕೃತಜ್ಞತೆಯಾಗಿದೆ. ಇದರ ಹೊರತು ಆ ಮಹದುಪಕಾರಕ್ಕೆ ಯಾವ ರೀತಿಯಲ್ಲೂ ನೀವು ಕೃತಜ್ಞತೆ ಸಲ್ಲಿಸಲಾರಿರಿ. ಒಂದು ವೇಳೆ ಹೀಗೆ ನೀವು ಕೃತಜ್ಞರಾಗದಿದ್ದರೆ ಆ ಉಪಕಾರ ಎಷ್ಟು ಮಹತ್ತರವಾಗಿದೆಯೋ ನಿಮ್ಮ ಕೃತಘ್ನತೆಗಾಗಿ ಅಷ್ಟೇ ಮಹಾ ಯಾತನೆಯನ್ನು ನೀವು ಎದುರಿಸಬೇಕಾಗುವುದು. ದೇವನು ನಮ್ಮೆಲ್ಲರನ್ನೂ ಇಂತಹ ಯಾತನೆಯಿಂದ ರಕ್ಷಿಸಲಿ- ಆಮೀನ್.

ಮುಸ್ಲಿಮನಾಗುವ ಪ್ರಥಮ ಹೆಜ್ಜೆ

ಅನಂತರ ಅಕ್ಷರಶಃ ಮುಸ್ಲಿಮನಾಗುವುದೆಂದರೆ ಹೇಗೆ ಎಂಬುದು ನೀವು ಕೇಳುವ ಎರಡನೆಯ ಪ್ರಶ್ನೆಯಾಗಿರಬಹುದು. ಅದರ ಉತ್ತರಕ್ಕೆ ಸಾಕಷ್ಟು ವಿವರಣೆಯ ಅಗತ್ಯವಿದೆ. ಮುಂದಿನ ಶುಕ್ರವಾರದ ಪ್ರವಚನಗಳಲ್ಲಿ ಅದರ ಒಂದೊಂದೇ ಸ್ತರಗಳನ್ನು ಸವಿವರ ಪ್ರಸ್ತಾಪಿಸಲಾಗುವುದು. ಆದರೆ ಇಂದಿನ ಪ್ರವಚನದಲ್ಲಿ ನಾನು, ಮುಸ್ಲಿಮನಾಗಲು ಬೇಕಾಗಿರುವ ಅತ್ಯಂತ ಪ್ರಾಥಮಿಕ ವಿಷಯವನ್ನು ನಿಮ್ಮೊಡನೆ ಪ್ರಸ್ತಾಪಿಸುತ್ತೇನೆ. ಅದನ್ನು ಈ ಮಾರ್ಗದ ಪ್ರಥಮ ಹೆಜ್ಜೆಯೆಂದು ಭಾವಿಸಬೇಕಾಗಿದೆ.

ಮುಸ್ಲಿಮ್ ಎಂದರೆ ಕುಲನಾಮವೇ?

ಮೆದುಳಿಗೆ ಒತ್ತು ಕೊಟ್ಟು ಸ್ವಲ್ಪ ಆಲೋಚಿಸಿ ನೋಡಿ. ನೀವು ಹೇಳುವ 'ಮುಸ್ಲಿಮ್' ಪದದ ಅರ್ಥವೇನು? ಮನುಷ್ಯ ತಾಯಿಯ ಉದರದಿಂದಲೇ ಇಸ್ಲಾಮನ್ನು ಜತೆಯಲ್ಲಿ ತರುತ್ತಾನೆಯೇ? ಮುಸ್ಲಿಮನೊಬ್ಬನ ಮಗ ಅಥವಾ ಮೊಮ್ಮಗನಾಗಿರುವ ಮಾತ್ರಕ್ಕೆ ಒಬ್ಬನು ಮುಸ್ಲಿಮನೆನಿಸಿಕೊಳ್ಳುತ್ತಾನೆಯೇ? ಬ್ರಾಹ್ಮಣನೊಬ್ಬನ ಮಗ ಬ್ರಾಹ್ಮಣನಾಗಿ ಹುಟ್ಟುವಂತೆ, ರಜಪೂತನ ಮಗ ರಜಪೂತನಾಗುವಂತೆ, ಶೂದ್ರನ ಮಗ ಶೂದ್ರನಾಗುವಂತೆ ಮುಸ್ಲಿಮನೂ ಹುಟ್ಟಿನಿಂದಾಗಿ ಮುಸ್ಲಿಮನಾಗಿರುತ್ತಾನೆಯೇ? ಅಥವಾ ಮುಸ್ಲಿಮ್ ಎಂಬುದು ಒಂದು ಕುಲ ಅಥವಾ ವಂಶದ ಹೆಸರೇ? ಬ್ರಿಟಿಷನೊಬ್ಬ, ಬ್ರಿಟಿಷನ ಮನೆಯಲ್ಲಿ ಹುಟ್ಟಿದ ಕಾರಣಕ್ಕಾಗಿ ಬ್ರಿಟಿಷನಾಗುವಂತೆ, ಜಾಟ್‌ನೊಬ್ಬ ಜಾಟ್ ಗೋತ್ರದಲ್ಲಿ ಹುಟ್ಟಿದ್ದಕ್ಕಾಗಿ ಜಾಟನಾಗುವಂತೆ. ಮುಸ್ಲಿಮನೂ ಮುಸ್ಲಿಮ್ ಎಂಬ ಕುಲದಲ್ಲಿ ಹುಟ್ಟಿದ್ದಕ್ಕಾಗಿ ಮುಸ್ಲಿಮನೆಸಿಕೊಳ್ಳುತ್ತಾನೆಯೇ? ನನ್ನ ಈ ಪ್ರಶ್ನೆಗಳಿಗೆ ನೀವು ಹೇಗೆ ಉತ್ತರಿಸುವಿರಿ? "ಇಲ್ಲ ಮಹಾಶಯರೇ! ಅಂತಹವರನ್ನು ಮುಸ್ಲಿಮರೆಂದು ಕರೆಯಲಾಗುವುದಿಲ್ಲ. ಮುಸ್ಲಿಮನೊಬ್ಬ ತನ್ನ ಕುಲದಿಂದಾಗಿ ಮುಸ್ಲಿಮನೆನಿಸಿಕೊಳ್ಳುವುದಿಲ್ಲ. ಬದಲಾಗಿ ಇಸ್ಲಾಮ್ ಸ್ವೀಕರಿಸಿದ್ದರಿಂದಾಗಿ ಅವನು ಮುಸ್ಲಿಮನೆನಿಸಿಕೊಳ್ಳುತ್ತಾನೆ. ಇಸ್ಲಾಮನ್ನು ತ್ಯಜಿಸಿದರೆ ಅವನು ಮುಸ್ಲಿಮನಾಗಿ ಉಳಿಯುವುದಿಲ್ಲ. ಒಬ್ಬ ವ್ಯಕ್ತಿ ಅವನು ಬ್ರಾಹ್ಮಣನಾದರೂ ರಜಪೂತನಾದರೂ ಬ್ರಿಟಿಷನಾದರೂ ಜಾಟ್ ಆದರೂ ಪಂಜಾಬಿಯಾದರೂ ಅಥವಾ ನೀಗ್ರೋವೇ ಆಗಿದ್ದರೂ ಇಸ್ಲಾಮ್ ಸ್ವೀಕರಿಸಿದ ತಕ್ಷಣ ಅವನು

ಮುಸ್ಲಿಮರಲ್ಲಿ ಶಾಮೀಲಾಗಿ ಬಿಡುತ್ತಾನೆ. ಇನ್ನೊಬ್ಬ ವ್ಯಕ್ತಿ ಮುಸ್ಲಿಮರ ಮನೆಯಲ್ಲಿ ಹುಟ್ಟಿ ಇಸ್ಲಾಮಿನ ಅನುಸರಣೆಯನ್ನು ಬಿಟ್ಟುಬಿಟ್ಟರೆ ಅವನು ಮುಸ್ಲಿಮ್ ಸಮಾಜದಿಂದ ದೂರವಾಗುತ್ತಾನೆ. ಅವನು ಸಯ್ಯದ್‌ನ ಮಗನಾಗಿದ್ದರೂ ಪಠಾಣನ ಮಗನಾಗಿದ್ದರೂ ಸರಿಯೇ" ಎಂದು ನೀವು ಉತ್ತರಿಸುವಿರಿ ತಾನೇ.

ಸರಿ, ಹಾಗಾದರೆ ನಿಮ್ಮ ಉತ್ತರದಿಂದಲೇ ಮುಸ್ಲಿಮನಾಗುವ ಅಲ್ಲಾಹನ ಮಹಾ ಅನುಗ್ರಹ ಒಂದು ಅನುವಂಶೀಯ ಸೊತ್ತಲ್ಲ ಎಂದು ವ್ಯಕ್ತವಾಯಿತು. ಆದ್ದರಿಂದ ನೀವದರ ಕಡೆಗೆ ಗಮನ ಹರಿಸಿದರೂ ಇಲ್ಲದಿದ್ದರೂ ತಂದೆ-ತಾಯಂದಿರ ಮೂಲಕ ವಾರೀಸಿನಲ್ಲಿ ದೊರೆತು ಅದು ಕಾಲಾನುಕಾಲಕ್ಕೆ ಮುಂದುವರಿಯುತ್ತಾ ಹೋಗುವುದಿಲ್ಲ. ಬದಲಾಗಿ ಅಲ್ಲಾಹನ ಈ ಮಹಾ ಅನುಗ್ರಹವನ್ನು ಪಡೆಯಬೇಕಾದರೆ ನೀವು ಸ್ವತಃ ಪ್ರಯತ್ನಿಸುವ ಅಗತ್ಯವಿದೆ. ನೀವು ಪ್ರಯತ್ನಿಸಿದರೆ ನಿಮಗದು ಪ್ರಾಪ್ತವಾಗುತ್ತದೆ. ಅದರಿಂದ ಅಲಕ್ಷ್ಯರಾದರೆ ನೀವದರಿಂದ ವಂಚಿಸಲ್ಪಡುತ್ತೀರಿ. (ಶಾಂತಂ ಪಾಪಂ)

ಇಸ್ಲಾಮ್ ಸ್ವೀಕರಿಸುವುದರ ಅರ್ಥ

ಇಸ್ಲಾಮ್ ಸ್ವೀಕರಿಸಿದರೆ ವ್ಯಕ್ತಿ ಮುಸ್ಲಿಮನಾಗುತ್ತಾನೆ ಎಂದು ನೀವು ಹೇಳುತ್ತೀರಿ. ಹಾಗಾದರೆ ಇಸ್ಲಾಮ್ ಸ್ವೀಕರಿಸುವುದೆಂದರೇನು? ಇಸ್ಲಾಮ್ ಸ್ವೀಕರಿಸುವುದೆಂದರೆ ವ್ಯಕ್ತಿ "ನಾನು ಮುಸ್ಲಿಮನಾಗಿದ್ದೇನೆ" ಅಥವಾ "ಮುಸ್ಲಿಮನಾಗಿ ಪೂರ್ವಟ್ಟಿದ್ದೇನೆ" ಎಂದು ಬಾಯಿಯಿಂದ ಹೇಳಿದರೆ ಸಾಕೇ? ಅಥವಾ ಬ್ರಾಹ್ಮಣ ಅರ್ಚಕನೊಬ್ಬ ಅರ್ಥಗ್ರಹಣ ಮಾಡದೆ ಸಂಸ್ಕೃತದ ಮಂತ್ರೋಚ್ಚಾರ ಮಾಡುವಂತೆ ಅರ್ಥವರಿಯದೆ ಅರಬಿಯ ಕೆಲವು ಸಾಲುಗಳನ್ನು ಉಚ್ಚರಿಸಿದ ಮಾತ್ರಕ್ಕೆ ಓರ್ವನು ಮುಸ್ಲಿಮನಾಗುತ್ತಾನೆಯೇ? ಈ ಪ್ರಶ್ನೆಗೆ ನಿಮ್ಮ ಉತ್ತರ ಏನಾಗಿರಬಹುದೆಂದು ನೀವೇ ಹೇಳಿ. "ಇಸ್ಲಾಮ್ ಸ್ವೀಕರಿಸುವುದೆಂದರೆ ಪ್ರವಾದಿವರ್ಯರ(ಸ) ಬೋಧನೆಗಳನ್ನು ಅರಿತು, ಮನವರಿಕೆ ಮಾಡಿ, ಹೃತ್ಪೂರ್ವಕವಾಗಿ ಸ್ವೀಕರಿಸಿ ಅದರಂತೆ ಜೀವನ ಸಾಗಿಸುವವನೇ ಮುಸ್ಲಿಮ್. ಹಾಗೆ ಮಾಡದವನು ಮುಸ್ಲಿಮನಲ್ಲ" ಎಂದೇ ನೀವು ಉತ್ತರಿಸುವಿರಿ ತಾನೆ?

ಜ್ಞಾನ-ಮೊದಲ ಅವಶ್ಯಕತೆ

ನಿಮ್ಮ ಉತ್ತರದಿಂದ ಇಸ್ಲಾಮ್ ಎಂದರೆ ಮೊದಲನೆಯದಾಗಿ ಜ್ಞಾನ, ಅನಂತರ ಅನುಸರಣೆ ಎಂದು ವ್ಯಕ್ತವಾಗುತ್ತದೆ. ಒಬ್ಬ ವ್ಯಕ್ತಿ ಜ್ಞಾನವಿಲ್ಲದೆಯೂ ಬ್ರಾಹ್ಮಣನಾಗಬಲ್ಲ. ಏಕೆಂದರೆ ಅವನು ಬ್ರಾಹ್ಮಣರಲ್ಲಿ ಜನಿಸಿದ್ದಾನೆ ಮತ್ತು ಬ್ರಾಹ್ಮಣನಾಗಿಯೇ ಇರುತ್ತಾನೆ. ಜ್ಞಾನವಿಲ್ಲದೆ ಒಬ್ಬ ವ್ಯಕ್ತಿ ಜಾಟನಾಗಲೂಬಹುದು. ಏಕೆಂದರೆ ಅವನು ಜಾಟರಲ್ಲಿ ಜನ್ಮ ತಾಳಿದನು ಮತ್ತು ಜಾಟನಾಗಿಯೇ ಇರುವನು. ಆದರೆ ಜ್ಞಾನವಿಲ್ಲದೆ ಒಬ್ಬ ವ್ಯಕ್ತಿ ಮುಸ್ಲಿಮನಾಗಲಾರ. ಏಕೆಂದರೆ ಹುಟ್ಟಿನಿಂದ ಯಾರೂ ಮುಸ್ಲಿಮರಾಗುವುದಿಲ್ಲ. ಬದಲಾಗಿ

ಜ್ಞಾನದಿಂದ ಆಗುತ್ತಾರೆ. ಒಬ್ಬನಿಗೆ ಪ್ರವಾದಿ ಮುಹಮ್ಮದ್‌ರ(ಸ) ಬೋಧನೆಗಳೇನು ಎಂಬುದರ ಜ್ಞಾನವಿಲ್ಲದಿದ್ದರೆ ಅವನು ಅದರಲ್ಲಿ ವಿಶ್ವಾಸವಿಡುವುದು ಅಥವಾ ಅದರಂತೆ ವರ್ತಿಸುವುದು ಹೇಗೆ? ತಿಳಿದು ಮನವರಿಕೆಯಾದ ನಂತರ ಅದರಲ್ಲಿ ವಿಶ್ವಾಸವಿಡದಿದ್ದರೆ ಅವನು ಮುಸ್ಲಿಮನಾಗುವುದಾದರೂ ಹೇಗೆ? ಹಾಗಾದರೆ ಅಜ್ಞಾನದೊಂದಿಗೆ ಮುಸ್ಲಿಮನಾಗುವುದು ಅಥವಾ ಮುಸ್ಲಿಮನಾಗಿರುವುದು ಸಾಧ್ಯವಿಲ್ಲವೆಂದಾಯಿತು. ಮುಸ್ಲಿಮರ ಮನೆಯಲ್ಲಿ ಹುಟ್ಟಿದ, ಮುಸ್ಲಿಮರಂತೆ ಹೆಸರನ್ನು ಹೊಂದಿರುವ, ಮುಸ್ಲಿಮರಂತೆ ಬಟ್ಟೆ ಧರಿಸುವ ಮತ್ತು ತನ್ನನ್ನು ಮುಸ್ಲಿಮ್ ಎಂದು ಹೇಳಿಕೊಳ್ಳುವ ಪ್ರತಿಯೊಬ್ಬನೂ ಮುಸ್ಲಿಮನಲ್ಲ. ಇಸ್ಲಾಮನ್ನು ಅರಿತಿರುವ ಮತ್ತು ಪ್ರಜ್ಞಾಪೂರ್ವಕವಾಗಿ ಅದನ್ನು ಅಂಗೀಕರಿಸುವವನೇ ನಿಜವಾದ ಮುಸ್ಲಿಮನಾಗಿದ್ದಾನೆ. ಒಬ್ಬ ಮುಸ್ಲಿಮ್ ಮತ್ತು ಕಾಫಿರನ (ಸತ್ಯನಿಷೇಧಿ) ನಡುವೆ ಇರುವುದು ಕೇವಲ ಹೆಸರಿನ ಅಂತರವಲ್ಲ. ಅವನು 'ರಾಮ್ ಪ್ರಸಾದ್' ಆಗಿರುವುದಕ್ಕಾಗಿ ಕಾಫಿರನೂ ಇವನು 'ಅಬ್ದುಲ್ಲಾ' ಆಗಿರುವುದಕ್ಕಾಗಿ ಮುಸ್ಲಿಮನೂ ಆಗುವುದಿಲ್ಲ. ಹಾಗೆಯೇ ಒಬ್ಬ ಕಾಫಿರ ಮತ್ತು ಮುಸ್ಲಿಮನ ನಡುವಿನ ಅಂತರ ವೇಷ ಭೂಷಣಾದಿಗಳ ಅಂತರವೂ ಅಲ್ಲ. ಧೋತಿ ಕಟ್ಟುವುದಕ್ಕಾಗಿ ಅವನು ಕಾಫಿರನೂ ಇಜಾರು ಧರಿಸುವುದಕ್ಕಾಗಿ ಇವನು ಮುಸ್ಲಿಮನೂ ಆಗುವುದಿಲ್ಲ. ಅವರಿಬ್ಬರ ನಡುವಿನ ನೈಜ ವ್ಯತ್ಯಾಸ ಜ್ಞಾನದ ವ್ಯತ್ಯಾಸವಾಗಿದೆ. ಅವನು ಕಾಫಿರನಾಗಿರುವುದು ಏಕೆಂದರೆ ಜಗದೊಡೆಯನಿಗೆ ತನ್ನೊಂದಿಗೂ ತನಗೆ ಜಗದೊಡೆಯನೊಂದಿಗೂ ಯಾವ ಸಂಬಂಧವಿದೆ ಎಂದು ಅವನಿಗೆ ತಿಳಿದಿರುವುದಿಲ್ಲ. ಸೃಷ್ಟಿಕರ್ತನ ಇಚ್ಛೆಯಂತೆ ಭೂಮುಖದಲ್ಲಿ ಬಾಳುವೆ ನಡೆಸುವ ವಿಧಾನವೇನೆಂದೂ ಅವನು ಅರಿತಿರುವುದಿಲ್ಲ. ಒಬ್ಬ ಮುಸ್ಲಿಮನ ಅವಸ್ಥೆಯೂ ಇದೇ ರೀತಿಯಿದ್ದರೆ ಮುಸ್ಲಿಮ್ ಮತ್ತು ಕಾಫಿರನ ನಡುವೆ ನೀವು ವ್ಯತ್ಯಾಸ ಕಲ್ಪಿಸುವುದು ಯಾವ ಆಧಾರದಲ್ಲಿ. ಅವನು ಕಾಫಿರ ಮತ್ತು ಇವನು ಮುಸ್ಲಿಮ್ ಎಂದು ನೀವು ಹೇಳುವುದಾದರೂ ಯಾಕೆ?

ಬಂಧುಗಳೇ! ನನ್ನ ಈ ಮಾತುಗಳನ್ನು ಕಿವಿಗೊಟ್ಟು ಕೇಳಿ, ಶಾಂತಚಿತ್ತದಿಂದ ಆಲೋಚಿಸಿರಿ. ನೀವು ಕೃತಜ್ಞತೆಯನ್ನು ಪ್ರಕಟಿಸುವ ಸೃಷ್ಟಿಕರ್ತನ ಈ ಮಹಾ ಅನುಗ್ರಹದ ಪ್ರಾಪ್ತಿ ಅಥವಾ ಅಪ್ರಾಪ್ತಿಗಳೆರಡೂ ಜ್ಞಾನವನ್ನು ಆಧರಿಸಿದೆ ಎಂದು ನೀವು ಚೆನ್ನಾಗಿ ತಿಳಿದಿರಬೇಕು. ಜ್ಞಾನದ ವಿನಾ ಈ ಅನುಗ್ರಹ ಮನುಷ್ಯನಿಗೆ ದೊರೆಯಲಾರದು. ಒಂದು ವೇಳೆ ಅಲ್ಪ ಸ್ವಲ್ಪ ದೊರೆತರೂ ಅಜ್ಞಾನದಿಂದ ಆ ಮಹಾ ಅನುಗ್ರಹ ಯಾವ ಕ್ಷಣದಲ್ಲಾದರೂ ಅವನ ಕೈಯಿಂದ ಜಾರಿ ಹೋಗುವ ಸಾಧ್ಯತೆ ಇದೆ. ಅಜ್ಞಾನದಿಂದಾಗಿ ಅವನು ನಾನಿನ್ನೂ ಮುಸ್ಲಿಮನಾಗಿದ್ದೇನೆ ಎಂಬ ನಂಬಿಕೆಯಲ್ಲಿರುವನು. ಆದರೆ ವಾಸ್ತವದಲ್ಲಿ ಅವನು ಮುಸ್ಲಿಮನಾಗಿ ಉಳಿದಿರುವುದಿಲ್ಲ. ಇಸ್ಲಾಮ್ ಮತ್ತು ಕುಫ್ರ್ (ಸತ್ಯನಿಷೇಧ) ಹಾಗೂ ಇಸ್ಲಾಮ್ ಮತ್ತು ಶಿರ್ಕ್‌ನ (ಬಹುದೇವಾರಾಧನೆ) ನಡುವಿನ ವ್ಯತ್ಯಾಸವನ್ನೇ ಅರಿಯದವನ ಸ್ಥಿತಿಯು ಕತ್ತಲೆಯಲ್ಲಿ ಕವಲು ದಾರಿಯಲ್ಲಿ ನಡೆಯುವವನಂತಿದೆ. ನೇರ ಹಾದಿಯಲ್ಲಿ ನಡೆಯುತ್ತಿರುವಾಗಲೇ ಅವನ ಹೆಜ್ಜೆಗಳು ಬೇರೆ ದಾರಿಯೆಡೆಗೆ ತಿರುಗುವ ಮತ್ತು ತಾನು ಹಾದಿ ತಪ್ಪಿದ್ದೇನೆಂಬ ಅರಿವೂ

ಅವನಿಗಿಲ್ಲದಿರುವ ಸಾಧ್ಯತೆ ಇದೆ. ಅಥವಾ ಹಾದಿಯಲ್ಲಿ ಸಿಗುವ ಧೂರ್ತನೊಬ್ಬ ಅವನೊಡನೆ, "ಮಿತ್ರ! ನೀನು ಕತ್ತಲೆಯಲ್ಲಿ ದಾರಿ ತಪ್ಪಿರುವೆ. ನನ್ನ ಜತೆ ನಡೆ. ನಾನು ಗುರಿ ತಲುಪಿಸುವೆ" ಎಂದು ಹೇಳಿದರೆ, ಸ್ವತಃ ಕತ್ತಲೆಯನ್ನು ಭೇದಿಸಿ ನೇರಮಾರ್ಗವನ್ನು ಗುರುತಿಸಲಾಗದ ಆ ಬಡಪಾಯಿ ತನ್ನ ಕೈಯನ್ನು ಆ ಧೂರ್ತನಿಗೆ ಕೊಟ್ಟು ಬಿಡುವ ಸಾಧ್ಯತೆ ಇದೆ. ಅವನು ಆ ಯಾತ್ರಿಕನನ್ನು ದಾರಿತಪ್ಪಿಸಿ ಎಲ್ಲಿಂದೆಲ್ಲಿಗೋ ಕೊಂಡೊಯ್ಯುವನು. ಅವನು ಈ ಅಪಾಯದ ಅಂಚಿಗೆ ಸಾಗಲು ಕಾರಣವೇನೆಂದರೆ ಸ್ವತಃ ಅವನ ಬಳಿ ಯಾವುದೇ ಬೆಳಕಿಲ್ಲ. ಅವನು ಸ್ವತಃ ತನ್ನ ಹಾದಿಯ ಗುರುತುಗಳನ್ನು ಪತ್ತೆ ಹಚ್ಚಲಾರ. ಅವನ ಬಳಿ ಬೆಳಕಿದ್ದಿದ್ದರೆ ಅವನು ಸ್ವತಃ ದಾರಿ ತಪ್ಪುತ್ತಲೂ ಇರಲಿಲ್ಲ. ಇನ್ನೊಬ್ಬ ಅವನನ್ನು ದಾರಿ ತಪ್ಪಿಸಲೂ ಸಾಧ್ಯವಿರಲಿಲ್ಲ. ಈ ಉದಾಹರಣೆಯ ಆಧಾರದಲ್ಲೇ ಚಿಂತಿಸಿ ನೋಡಿ. ಸ್ವತಃ ಇಸ್ಲಾಮಿನ ಜ್ಞಾನವನ್ನು ಗಳಿಸಿಕೊಳ್ಳದಿರುವುದು, ಪವಿತ್ರ ಕುರ್‌ಆನ್ ಏನು ಕಲಿಸುತ್ತದೆ, ಪ್ರವಾದಿವರ್ಯರು(ಸ) ಯಾವ ಮಾರ್ಗದರ್ಶನ ನೀಡಿದ್ದಾರೆ ಎಂದು ಸ್ವತಃ ತಿಳಿದುಕೊಳ್ಳದಿರುವುದೇ ಮುಸ್ಲಿಮನ ಮುಂದಿರುವ ಅತಿದೊಡ್ಡ ಗಂಡಾಂತರ ಎಂದು ಇದರಿಂದ ನಮಗೆ ವ್ಯಕ್ತವಾಗುತ್ತದೆ. ಅವನ ಅಜ್ಞಾನದಿಂದಾಗಿ ಸ್ವತಃ ದಾರಿ ತಪ್ಪಬಹುದು ಅಥವಾ ಇತರ ಧೂರ್ತರು ಅವನನ್ನು ದಾರಿ ತಪ್ಪಿಸಬಹುದು. ಆದರೆ ಅವನ ಬಳಿ ಜ್ಞಾನದ ಜ್ಯೋತಿ ಇದ್ದರೆ ಜೀವನದ ಪ್ರತಿ ಹೆಜ್ಜೆಯಲ್ಲೂ ಅವನು ಇಸ್ಲಾಮಿನ ಸನ್ಮಾರ್ಗವನ್ನು ಕಾಣಬಲ್ಲ. ಸತ್ಯನಿಷೇಧ, ಬಹುದೇವಾರಾಧನೆ, ಪಥಭ್ರಷ್ಟತೆ ಮತ್ತು ದುಷ್ಕೃತ್ಯಗಳ ವಕ್ರದಾರಿಗಳನ್ನು ಅವನು ಹೆಜ್ಜೆಹೆಜ್ಜೆಗೂ ಗುರುತಿಸಿ ಅದರಿಂದ ತನ್ನನ್ನು ರಕ್ಷಿಸಿಕೊಂಡು ನಡೆಯಬಲ್ಲ. ದಾರಿಯಲ್ಲಿ ಸಿಗುವ ದಾರಿತಪ್ಪಿಸುವವರ ನಾಲ್ಕಾರು ಮಾತುಗಳಿಂದಲೇ ಇವನು ದಾರಿ ತಪ್ಪಿಸುವವನು ಮತ್ತು ಇವನನ್ನು ಅನುಸರಿಸಬಾರದೆಂದು ಸ್ವತಃ ತಿಳಿದುಕೊಳ್ಳಬಲ್ಲ.

ಜ್ಞಾನದ ಪ್ರಾಮುಖ್ಯತೆ

ಬಂಧುಗಳೇ! ನಾನು ನಿಮ್ಮೊಡನೆ ಪ್ರಸ್ತಾಪಿಸುತ್ತಿರುವ ಈ ಜ್ಞಾನದ ಆಧಾರದಲ್ಲೇ ನೀವು ಮತ್ತು ನಿಮ್ಮ ಸಂತತಿ ಮುಸ್ಲಿಮರಾಗಲು ಮತ್ತು ಮುಸ್ಲಿಮರಾಗಿ ಮುಂದುವರಿಯಲು ಸಾಧ್ಯ. ಆದ್ದರಿಂದ ಅದರ ಬಗ್ಗೆ ಅಲಕ್ಷ್ಯರಾಗುವುದು ಸಾಮಾನ್ಯ ಸಂಗತಿಯೇನಲ್ಲ. ನೀವು ನಿಮ್ಮ ವ್ಯವಸಾಯದ ಬಗ್ಗೆ ಅಲಕ್ಷ್ಯರಾಗುವುದಿಲ್ಲ. ಅದರ ನೀರಾವರಿ ಮತ್ತು ಫಸಲಿನ ರಕ್ಷಣೆಯ ಬಗ್ಗೆ ನಿರ್ಲಕ್ಷ್ಯರಾಗುವುದಿಲ್ಲ. ಜಾನುವಾರುಗಳಿಗೆ ಮೇವು ಹಾಕುವುದರಲ್ಲಾಗಲಿ ನಿಮ್ಮ ಉದ್ಯೋಗಕ್ಕೆ ಸಂಬಂಧಪಟ್ಟ ಕೆಲಸಗಳಲ್ಲಾಗಲಿ ಉದಾಸೀನತೆ ತೋರುವುದಿಲ್ಲ. ಏಕೆಂದರೆ ಅದರಿಂದ ಅಲಕ್ಷ್ಯರಾದರೆ ನೀವು ಹಸಿವೆಯಿಂದ ಸಾಯಬೇಕಾಗುವುದು ಮತ್ತು ನಿಮಗೆ ಅತ್ಯಂತ ಪ್ರಿಯವಾದ ಪ್ರಾಣವನ್ನು ತ್ಯಜಿಸಬೇಕಾಗುವುದು ಎಂಬ ಭಯ ನಿಮ್ಮನ್ನು ಕಾಡುತ್ತದೆ. ಹಾಗಿರುವಾಗ ನೀವು ಮುಸ್ಲಿಮರಾಗಲು ಮತ್ತು ಮುಸ್ಲಿಮರಾಗಿ ಉಳಿಯಲು ಅನಿವಾರ್ಯ ವಾದ ಆ ಜ್ಞಾನದ ಬಗ್ಗೆ ಅಷ್ಟೇಕೆ ಅಸಡ್ಡೆ ತೋರುತ್ತೀರಿ? ಆದ್ದರಿಂದ 'ಸತ್ಯವಿಶ್ವಾಸ'ದಂತಹ ಅತ್ಯಂತ ಪ್ರಿಯವಾದ ಅಮೂಲ್ಯ ನಿಧಿ ನಷ್ಟವಾಗುವ ಭಯವಿಲ್ಲವೇ? 'ಸತ್ಯವಿಶ್ವಾಸ' ಪ್ರಾಣ

ಕ್ಕಿಂತ ಪ್ರಿಯವಾದುದಲ್ಲವೇ? ಪ್ರಾಣವನ್ನು ರಕ್ಷಿಸುವ ಕಾರ್ಯಗಳಲ್ಲಿ ನೀವೆಷ್ಟು ಸಮಯ ಮತ್ತು ಶ್ರಮವನ್ನು ವ್ಯಯಿಸುತ್ತೀರೋ ಅದರ ಹತ್ತರಲ್ಲೊಂದಂಶವನ್ನಾದರೂ ಸತ್ಯವಿಶ್ವಾಸದ ರಕ್ಷಣೆಗೆ ವ್ಯಯಿಸಲು ನಿಮಗೆ ಅಸಾಧ್ಯವೇ?

ನಿಮ್ಮಲ್ಲಿ ಪ್ರತಿಯೊಬ್ಬರೂ ಮೌಲ್ವಿ(ಧರ್ಮವಿದ್ವಾಂಸ)ಯಾಗಬೇಕು, ಮಹದ್ಗ್ರಂಥ ಗಳನ್ನು ಓದಬೇಕು, ತನ್ನ ಜೀವನದ ಹತ್ತು-ಹನ್ನೆರಡು ವರ್ಷಗಳನ್ನು ಕಲಿಕೆಯಲ್ಲೇ ಕಳೆಯ ಬೇಕೆಂದು ನಾನು ಹೇಳುವುದಿಲ್ಲ. ಮುಸ್ಲಿಮನಾಗಲು ಅಷ್ಟೆಲ್ಲಾ ಕಲಿಯಬೇಕಾಗಿಲ್ಲ. ನಿಮ್ಮಲ್ಲಿ ಪ್ರತಿಯೊಬ್ಬರೂ ದಿನ-ರಾತ್ರಿಗಳ ಇಪ್ಪತ್ತನಾಲ್ಕು ತಾಸುಗಳಲ್ಲಿ ಕೇವಲ ಒಂದು ತಾಸನ್ನು ಧಾರ್ಮಿಕ ವಿದ್ಯಾಭ್ಯಾಸಕ್ಕಾಗಿ ಮೀಸಲಿಡಬೇಕೆಂದಷ್ಟೇ ನಾನು ಬಯಸುತ್ತೇನೆ. ಪವಿತ್ರ ಕುರ್‌ಆನ್ ಯಾವ ಉದ್ದೇಶಕ್ಕಾಗಿ ಬಂದಿದೆಯೋ ಮತ್ತು ಯಾವುದರ ಬೋಧನೆಗಳನ್ನು ಕೊಡುತ್ತದೋ ಅದರ ಸಾರ ತಿಳಿಯುವಂತಾಗಬೇಕು. ಪ್ರವಾದಿವರ್ಯರು(ಸ) ಯಾವುದನ್ನು ಅಳಿಸಿ ಯಾವುದರ ಸಂಸ್ಥಾಪನೆ ಮಾಡಲು ಆಗತರಾಗಿದ್ದಾರೋ ಅದನ್ನು ಚೆನ್ನಾಗಿ ಗ್ರಹಿಸಿಕೊಳ್ಳಬೇಕು. ಅಲ್ಲಾಹನು ಮುಸ್ಲಿಮರಿಗಾಗಿ ಗೊತ್ತು ಪಡಿಸಿರುವ ಆ ವಿಶಿಷ್ಟ ಜೀವನ ಪದ್ಧತಿಯನ್ನು ಅರಗಿಸಿಕೊಳ್ಳಬೇಕು. ಕನಿಷ್ಠ ಇಷ್ಟು ಜ್ಞಾನವನ್ನು ಅಬಾಲವೃದ್ಧರೆಲ್ಲರೂ ಸಂಪಾದಿಸಿಕೊಳ್ಳಬೇಕು. ಈ ಜ್ಞಾನದ ಸಂಪಾದನೆಗಾಗಿ ಹೆಚ್ಚು ಸಮಯ ಬೇಕಾಗಿಲ್ಲ. ಸತ್ಯವಿಶ್ವಾಸ ಒಬ್ಬನಿಗೆ ಪ್ರಿಯಕರವಾಗಿದ್ದರೆ ದಿನದ ಒಂದು ಗಂಟೆಯನ್ನು ಅದಕ್ಕಾಗಿ ಮೀಸಲಿಡುವುದು ತ್ರಾಸದಾಯಕವೇನಲ್ಲ.

○

ಮುಸ್ಲಿಮ್-ಮುಸ್ಲಿಮೇತರರ ನಡುವಿನ ನೈಜ ಅಂತರ

ಮುಸ್ಲಿಮ್-ಮುಸ್ಲಿಮೇತರರಲ್ಲಿ ವ್ಯತ್ಯಾಸವೇಕೆ?

ಮುಸ್ಲಿಮ್ ಸಹೋದರರೇ!

ಮುಸ್ಲಿಮರು ಮುಸ್ಲಿಮೇತರರಿಗಿಂತ ಮೇಲು. ಮುಸ್ಲಿಮನನ್ನು ದೇವನು ಮೆಚ್ಚುತ್ತಾನೆ ಮತ್ತು ಮುಸ್ಲಿಮೇತರರನ್ನು ಅವನು ಮೆಚ್ಚುವುದಿಲ್ಲ. ಮುಸ್ಲಿಮನು ಅಲ್ಲಾಹನ ಸನ್ನಿಧಿಯಲ್ಲಿ ಕ್ಷಮಿಸಲ್ಪಡುತ್ತಾನೆ. ಆದರೆ ಮುಸ್ಲಿಮೇತರನಿಗೆ ಕ್ಷಮೆ ಇರುವುದಿಲ್ಲ. ಮುಸ್ಲಿಮನು ಸ್ವರ್ಗ ಪ್ರವೇಶ ಮಾಡುವನು ಮತ್ತು ಮುಸ್ಲಿಮೇತರನು ನರಕ ಪ್ರವೇಶ ಮಾಡುವನು ಎಂದು ಪ್ರತಿಯೊಬ್ಬ ಮುಸ್ಲಿಮನೂ ಭಾವಿಸುತ್ತಾನೆ. ನೀವೂ ಹಾಗೆ ಭಾವಿಸಿರಬಹುದು. ಮುಸ್ಲಿಮ್ ಮತ್ತು ಮುಸ್ಲಿಮೇತರರ ನಡುವೆ ಇಷ್ಟು ಅಂತರವಾದರೂ ಯಾಕಿದೆ? ಈ ಬಗ್ಗೆ ನೀವಿಂದು ಚಿಂತಿಸಬೇಕೆಂದು ನಾನು ಹೇಳ ಬಯಸುತ್ತೇನೆ. ಮುಸ್ಲಿಮೇತರನೂ ನಿಮ್ಮಂತೆಯೇ ಆದಿಪಿತ ಆದಮ್‌ರ(ಅ) ಸಂತತಿ, ಮುಸ್ಲಿಮೇತರನೂ ನಿಮ್ಮಂತೆಯೇ ಮಾನವಕುಲಕ್ಕೆ ಸೇರಿದವನು. ನಿಮ್ಮಂತೆಯೇ ಅವನಿಗೂ ಕೈ-ಕಾಲು, ಕಣ್ಣು ಮತ್ತು ಕಿವಿಗಳಿವೆ. ಅವನೂ ನಾವು ಸೇವಿಸುವ ಗಾಳಿಯನ್ನೇ ಸೇವಿಸುತ್ತಾನೆ. ಇದೇ ನೀರನ್ನು ಕುಡಿಯುತ್ತಾನೆ. ಈ ಭೂಮಿಯಲ್ಲೇ ನೆಲೆಸುತ್ತಾನೆ. ಅದರ ಫಲಗಳನ್ನೇ ತಿನ್ನುತ್ತಾನೆ. ಅವನೂ ಅದೇ ರೀತಿಯಲ್ಲಿ ಹುಟ್ಟುತ್ತಾನೆ ಮತ್ತು ಸಾಯುತ್ತಾನೆ. ನಿಮ್ಮನ್ನು ಸೃಷ್ಟಿಸಿದ ಸೃಷ್ಟಿಕರ್ತನೇ ಅವನನ್ನೂ ಸೃಷ್ಟಿಸಿದ್ದಾನೆ. ಹಾಗಿರುವಾಗ ಅವನು ಕೀಳು ಮತ್ತು ನೀವು ಮೇಲು ಆಗುವುದಾದರು ಹೇಗೆ? ನಿಮಗೇಕೆ ಸ್ವರ್ಗ ಸಿಗುತ್ತದೆ ಮತ್ತು ಅವನೇಕೆ ನರಕಾಗ್ನಿಗೆ ಬೀಳುವನು?

ಕೇವಲ ಹೆಸರಿನ ಅಂತರವೇ?

ಇದು ಕಿಂಚಿತ್ ಆಲೋಚಿಸಬೇಕಾದಂತಹ ವಿಷಯ. ನೀವು ಅಬ್ದುಲ್ಲಾ, ಅಬ್ದುರ್ರಹ್ಮಾನ್ ಮತ್ತಿತರ ಹೆಸರುಗಳಿಂದ ಕರೆಯಲ್ಪಡುತ್ತೀರಿ. ಅವರು ದೀನ್‌ದಯಾಲ್, ಕರ್ತಾರ್‌ಸಿಂಗ್ ಮತ್ತು ರಾಬರ್ಟ್‌ಸನ್‌ನಂತಹ ಹೆಸರುಗಳಿಂದ ಕರೆಯಲ್ಪಡುತ್ತಾರೆ ಎಂಬ ಕ್ಷುಲ್ಲಕ ಕಾರಣಕ್ಕಾಗಿ ಮನುಷ್ಯ-ಮನುಷ್ಯರ ನಡುವೆ ಇಷ್ಟು ದೊಡ್ಡ ಅಂತರ ತಲೆದೋರಲಾರದು ಅಥವಾ ನೀವು

ಮುಂಜಿ (Circumcission) ಮಾಡಿಸುತ್ತೀರಿ, ಅವರು ಮಾಡಿಸುವುದಿಲ್ಲ, ನೀವು ಮಾಂಸ ತಿನ್ನುತ್ತೀರಿ, ಅವರು ತಿನ್ನುವುದಿಲ್ಲ ಎಂಬುದೂ ಅದಕ್ಕೆ ಹೇತುವಾಗಲಾರದು. ಮಾನವರೆಲ್ಲರನ್ನೂ ಸೃಷ್ಟಿಸಿರುವ ಮತ್ತು ಎಲ್ಲರನ್ನೂ ಪರಿಪಾಲಿಸುತ್ತಿರುವ ಅಲ್ಲಾಹನು ಇಂತಹ ಅನ್ಯಾಯವನ್ನೆಂದೂ ಮಾಡಲಾರ. ಇಂತಹ ಸಣ್ಣ-ಪುಟ್ಟ ಕಾರಣಗಳಿಗಾಗಿ ತನ್ನ ಸೃಷ್ಟಿಗಳ ನಡುವೆ ಭೇದ ಕಲ್ಪಿಸಿ, ಒಬ್ಬನನ್ನು ಸ್ವರ್ಗಕ್ಕೂ ಮತ್ತೊಬ್ಬನನ್ನು ನರಕಕ್ಕೂ ಕಳುಹಿಸಲಾರ.

ನೈಜ ವ್ಯತ್ಯಾಸ ಯಾವುದು?

ಕಾರಣ ಇದಲ್ಲವೆಂದಾದರೆ ಮತ್ತೆ ಆ ಇಬ್ಬರ ನಡುವಿನ ನಿಜವಾದ ವ್ಯತ್ಯಾಸ ಯಾವುದು ಎಂದು ಸ್ವಲ್ಪ ಆಲೋಚಿಸಿ, ಅದಕ್ಕಿರುವ ಉತ್ತರ ಒಂದೇ. ಅವರಿಬ್ಬರ ನಡುವಿನ ನೈಜ ವ್ಯತ್ಯಾಸ ಇಸ್ಲಾಮ್ ಮತ್ತು ಸತ್ಯನಿಷೇಧದ ವ್ಯತ್ಯಾಸವಾಗಿದೆ. ಇಸ್ಲಾಮ್ ಎಂದರೆ ದೇವಾನುಸರಣೆ; ಸತ್ಯನಿಷೇಧವೆಂದರೆ ದೇವನ ಆಜ್ಞೋಲ್ಲಂಘನೆಯಾಗಿದೆ. ಮುಸ್ಲಿಮ್ ಮತ್ತು ಮುಸ್ಲಿಮೇತರರಿಬ್ಬರೂ ಮನುಷ್ಯರೇ ಆಗಿದ್ದಾರೆ. ಅವರಿಬ್ಬರೂ ದೇವನ ದಾಸರು. ಆದರೆ ಅವರಲ್ಲಿ ಒಬ್ಬನು ದೇವನನ್ನು ಗುರುತಿಸಿದ್ದಾನೆ, ಅವನ ಆಜ್ಞಾನುಸರಣೆ ಮಾಡುತ್ತಾನೆ ಮತ್ತು ಅವನ ಆಜ್ಞೋಲ್ಲಂಘನೆಯ ಪರಿಣಾಮದ ಬಗ್ಗೆ ಭಯಪಡುತ್ತಾನೆ. ಆದ್ದರಿಂದ ಅವನು ಶ್ರೇಷ್ಠನಾಗಿದ್ದಾನೆ. ಇನ್ನೊಬ್ಬ ಮನುಷ್ಯ ತನ್ನ ಒಡೆಯನನ್ನು ಗುರುತಿಸುವುದಿಲ್ಲ. ಅವನ ಅನುಸರಣೆ ಮಾಡುವುದಿಲ್ಲ. ಅದರಿಂದಾಗಿ ಅವನು ಶ್ರೇಷ್ಠ ಸ್ಥಾನದಿಂದ ಅಧೋಗತಿ ಗಿಳಿಯುತ್ತಾನೆ. ಆದ್ದರಿಂದ ಮುಸ್ಲಿಮನ ಬಗ್ಗೆ ದೇವನು ಸಂತುಷ್ಟನಾಗುತ್ತಾನೆ ಮತ್ತು ಮುಸ್ಲಿಮೇತರನ ಬಗ್ಗೆ ಅಸಂತುಷ್ಟನಾಗುತ್ತಾನೆ. ಮುಸ್ಲಿಮನಿಗೆ ಅವನು ಸ್ವರ್ಗದ ವಾಗ್ದಾನ ಮಾಡುತ್ತಾನೆ ಮತ್ತು ಮುಸ್ಲಿಮೇತರನಿಗೆ ನರಕದ ಎಚ್ಚರಿಕೆ ಕೊಡುತ್ತಾನೆ.

ವ್ಯತ್ಯಾಸಕ್ಕೆ ಕಾರಣ: ಜ್ಞಾನ ಮತ್ತು ಕರ್ಮ

ಇದರಿಂದ ಮುಸ್ಲಿಮನನ್ನು ಮುಸ್ಲಿಮೇತರನಿಂದ ಪ್ರತ್ಯೇಕಿಸುವ ಸಾಧನ ಕೇವಲ ಎರಡು ಎಂದು ತಿಳಿದು ಬರುತ್ತದೆ. ಮೊದಲನೆಯದು ಜ್ಞಾನ, ಎರಡನೆಯದು ಕರ್ಮ. ಅರ್ಥಾತ್ ಮೊಟ್ಟ ಮೊದಲನೆಯದಾಗಿ ಅವನು ತನ್ನ ಪ್ರಭು ಯಾರು? ಅವನ ಆದೇಶಗಳೇನು?. ಅವನಿಚ್ಛೆಯಂತೆ ನಡೆಯುವ ವಿಧಾನ ಯಾವುದು? ಯಾವ ಕೆಲಸಗಳಿಂದ ಅವನು ಸಂತುಷ್ಟ ನಾಗುತ್ತಾನೆ? ಯಾವ ಕಾರ್ಯಗಳಿಂದ ಅವನು ಅಸಂತುಷ್ಟನಾಗುತ್ತಾನೆ? ಇತ್ಯಾದಿಗಳನ್ನು ತಿಳಿದು ಕೊಳ್ಳಬೇಕು. ಎರಡನೆಯದಾಗಿ ಈ ವಿಷಯಗಳನ್ನು ತಿಳಿದ ನಂತರ ಮಾನವ ತನ್ನನ್ನು ಪ್ರಭುವಿನ ದಾಸನನ್ನಾಗಿ ಮಾಡಿಕೊಳ್ಳಬೇಕು. ಪ್ರಭುವಿನ ಇಚ್ಛೆಯಂತೆಯೇ ನಡೆಯಬೇಕು. ತನ್ನ ಸ್ವೇಚ್ಛೆಯನ್ನು ತ್ಯಜಿಸಬೇಕು. ಮನಸ್ಸಿನ ಬಯಕೆ, ಪ್ರಭುವಿನ ಆಜ್ಞೆಗೆ ವಿರುದ್ಧವಾಗಿದ್ದರೆ ದೇಹೇಚ್ಛೆಯನ್ನು ಅನುಸರಿಸದೆ ದೇವೇಚ್ಛೆಯನ್ನು ಅನುಸರಿಸಬೇಕು. ಅವನಿಗೆ ಹಿತಕರವೆಂದು ಕಾಣುವುದರ ಬಗ್ಗೆ

ಪ್ರಭು ಅದು ಕೆಟ್ಟದೆಂದು ಹೇಳಿದ್ದರೆ ಅದನ್ನು ಕೆಟ್ಟದ್ದೆಂದೇ ಭಾವಿಸಬೇಕು. ತಾನು ಕೆಟ್ಟದೆಂದು ಭಾವಿಸುವುದರ ಬಗ್ಗೆ ಪ್ರಭು, ಅದು ಒಳ್ಳೆಯದೆಂದು ಹೇಳಿದ್ದರೆ ಅದನ್ನು ಒಳ್ಳೆಯದೆಂದೇ ಭಾವಿಸಬೇಕು. ಒಂದು ಕೆಲಸ ಅವನಿಗೆ ನಷ್ಟಕರವಾಗಿ ತೋರುತ್ತದೆ, ಆದರೆ ಪ್ರಭು ಅದನ್ನು ಮಾಡಬೇಕೆಂದು ಆದೇಶಿಸಿದರೆ ಆಗ ಅದರಲ್ಲಿ ಪ್ರಾಣ ಮತ್ತು ಸೊತ್ತಿನ ಎಷ್ಟು ಮಹಾ ನಷ್ಟ ಸಂಭವಿಸುವುದಿದ್ದರೂ ಅದನ್ನು ಮಾಡಿಯೇ ತೀರಬೇಕು. ಇನ್ನೊಂದು ಕೆಲಸ ಅವನಿಗೆ ಫಲಪ್ರದವೆಂದು ತೋರುತ್ತದೆ. ಆದರೆ ಪ್ರಭು ಅದರಿಂದ ತಡೆದುಕೊಳ್ಳುತ್ತಾನೆ. ಆಗ ಅದರಲ್ಲಿ ಸಮಸ್ತ ಲೋಕದ ಸಂಪತ್ತು ದೊರೆಯುವುದಿದ್ದರೂ ಆ ಕೆಲಸವನ್ನು ಮಾಡಲೇಬಾರದು.

ಇಂತಹ ಜ್ಞಾನ ಮತ್ತು ಕರ್ಮದಿಂದಾಗಿಯೇ ಮುಸ್ಲಿಮನು ಅಲ್ಲಾಹನ ಪ್ರೀತಿಯ ದಾಸನಾಗುತ್ತಾನೆ. ಅವನ ಮೇಲೆ ದೇವಾನುಗ್ರಹ ವರ್ಷಿಸುತ್ತದೆ. ಅವನಿಗೆ ಘನತೆಯನ್ನು ದಯಪಾಲಿಸಲಾಗುತ್ತದೆ. ಮುಸ್ಲಿಮೇತರನು ಇಂತಹ ಜ್ಞಾನವನ್ನು ಹೊಂದಿರುವುದಿಲ್ಲ. ಜ್ಞಾನವಿಲ್ಲದಿರುವುದರಿಂದ ಅವನ ಕರ್ಮವೂ ಅಪೇಕ್ಷಿತ ರೀತಿಯಲ್ಲಿರುವುದಿಲ್ಲ. ಅಂತೆಯೇ ಅವನು ದೇವನನ್ನು ಗುರುತಿಸದ ಮತ್ತು ಅವನ ಆಜ್ಞೋಲ್ಲಂಘನೆ ಮಾಡುವ ದಾಸನಾಗಿರುತ್ತಾನೆ. ಆದ್ದರಿಂದಲೇ ದೇವನು ಅವನನ್ನು ತನ್ನ ಅನುಗ್ರಹದಿಂದ ವಂಚಿತಗೊಳಿಸುತ್ತಾನೆ.

ಹಾಗಾದರೆ ನ್ಯಾಯೋಚಿತ ರೀತಿಯಲ್ಲಿ ನೀವೇ ಆಲೋಚಿಸಿ. ತನ್ನನ್ನು ಮುಸ್ಲಿಮ್ ಎಂದು ಹೇಳಿಕೊಳ್ಳುವವನು ಮುಸ್ಲಿಮೇತರನಂತೆಯೇ ಅಜ್ಞಾನಿಯಾಗಿದ್ದರೆ, ಅವನಂತೆಯೇ ಆಜ್ಞೋಲ್ಲಂಘನೆ ಮಾಡುವವನಾಗಿದ್ದರೆ ಕೇವಲ ಹೆಸರು, ಉಡುಪು ಮತ್ತು ತಿನ್ನುವ, ಕುಡಿಯುವ ವ್ಯತ್ಯಾಸದಿಂದಾಗಿ ಅವನು ಮುಸ್ಲಿಮೇತರನಿಗಿಂತ ಉನ್ನತನಾಗುವುದು ಹೇಗೆ? ಯಾವ ಕಾರಣದಿಂದಾಗಿ ಅವನು ಇಹ-ಪರಗಳಲ್ಲಿ ದೇವಾನುಗ್ರಹಕ್ಕೆ ಅರ್ಹನೆನಿಸಿಕೊಳ್ಳುತ್ತಾನೆ.

ಇಸ್ಲಾಮ್ ಎಂದರೆ ಕುಲಗೋತ್ರ ಅಥವಾ ಸಂತತಿಯ ಹೆಸರಲ್ಲ. ಅದು ತಂದೆಯಿಂದ ಮಗನಿಗೂ ಮಗನಿಂದ ಮೊಮ್ಮಗನಿಗೂ ಬಳುವಳಿಯಾಗಿ ವರ್ಗಾಯಿಸಲ್ಪಡುವುದಿಲ್ಲ. ಬ್ರಾಹ್ಮಣನ ಮಗ ಎಷ್ಟೇ ಅಜ್ಞಾನಿಯಾಗಿದ್ದರೂ ಎಷ್ಟು ಕೆಟ್ಟ ಕೆಲಸಗಳನ್ನು ಮಾಡಿದರೂ ಅವನು ಉನ್ನತನೇ ಆಗಿರುತ್ತಾನೆ. ಏಕೆಂದರೆ ಅವನು ಬ್ರಾಹ್ಮಣರ ಮನೆಯಲ್ಲಿ ಹುಟ್ಟಿದ್ದಾನೆ ಮತ್ತು ಉನ್ನತ ಜಾತಿಗೆ ಸೇರಿದವನಾಗಿದ್ದಾನೆ. ಚಮ್ಮಾರನ ಮಗ ಜ್ಞಾನ ಮತ್ತು ಕರ್ಮದ ದೃಷ್ಟಿಯಿಂದ ಅವನಿಗಿಂತ ಎಷ್ಟೇ ಮುಂದುವರಿದಿದ್ದರೂ ಅವನು ಕೀಳಾಗಿಯೇ ಇರುತ್ತಾನೆ. ಏಕೆಂದರೆ ಅವನು ಚಮ್ಮಾರನ ಮನೆಯಲ್ಲಿ ಹುಟ್ಟಿದ ಅಧಮನಾಗಿದ್ದಾನೆ ಎಂಬ ತತ್ವಕ್ಕೆ ಇಲ್ಲಿ ಆಸ್ಪದವಿಲ್ಲ. ಅಲ್ಲಾಹನು ತನ್ನ ಗ್ರಂಥದಲ್ಲಿ ಸ್ಪಷ್ಟವಾಗಿ ಹೀಗೆಂದಿದ್ದಾನೆ,

إِنَّ أَكْرَمَكُمْ عِندَ اللَّهِ أَتْقَاكُمْ

"ನಿಶ್ಚಯವಾಗಿ ಅತ್ಯಧಿಕ ದೇವಭಯ ಉಳ್ಳವನೇ ನಿಮ್ಮಲ್ಲಿ ಅತಿ ಹೆಚ್ಚು ಗೌರವಾರ್ಹನು." (49:13)

ಅರ್ಥಾತ್ ದೇವನನ್ನು ಅತಿ ಹೆಚ್ಚು ಅರಿಯುವವನು ಮತ್ತು ಹೆಚ್ಚು ಅನುಸರಿಸುವವನೇ ಅವನ ದೃಷ್ಟಿಯಲ್ಲಿ ಗೌರವವುಳ್ಳವನು. ಹ.ಇಬ್ರಾಹೀಮ್‌ರವರು(ಅ) ಮೂರ್ತಿ ಪೂಜಕರೊಬ್ಬರ

ಮನೆಯಲ್ಲಿ ಜನಿಸಿದರು. ಆದರೆ ಅವರು ದೇವನನ್ನು ಗುರುತಿಸಿ ಅವನನ್ನು ಅನುಸರಿಸಿದರು. ಆದ್ದರಿಂದ ದೇವನು ಅವರನ್ನು ಲೋಕನಾಯಕನನ್ನಾಗಿ ಮಾಡಿದನು. ಹ.ನೂಹ್‌ರ(ಅ) ಮಗ ಸಂದೇಶವಾಹಕರೊಬ್ಬರ ಮನೆಯಲ್ಲಿ ಹುಟ್ಟಿದನು. ಆದರೆ ಅವನು ದೇವನನ್ನು ಗುರುತಿಸಲಿಲ್ಲ. ಮಾತ್ರವಲ್ಲ ದೇವಧಿಕ್ಕಾರವೆಸಗಿದನು. ಆದ್ದರಿಂದ ದೇವನು ಅವನ ಕುಟುಂಬವನ್ನು ಗಮನಿಸದೆ ಅವನನ್ನು, ಜಗತ್ತಿನ ಜನರಿಗೆ ಇಂದಿಗೂ ಪಾಠಪ್ರದವಾಗಿರುವ ರೀತಿಯಲ್ಲಿ ದಂಡಿಸಿದನು. ಇದರಿಂದ ಮಾನವ-ಮಾನವರ ನಡುವೆ ಇರುವ ಅಂತರ ಜ್ಞಾನ ಮತ್ತು ಕರ್ಮದಿಂದಾಗಿ ಮಾತ್ರ ಎಂದು ಚೆನ್ನಾಗಿ ತಿಳಿದುಕೊಳ್ಳಿ. ದೇವನನ್ನು ಗುರುತಿಸುವ, ಅವನ ಸನ್ಮಾರ್ಗವನ್ನು ಬಲ್ಲ ಮತ್ತು ಅವನ ಆಜ್ಞಾಪಾಲನೆ ಮಾಡುವ ಜನರಿಗೆ ಮಾತ್ರವೇ ಇಹ-ಪರಗಳಲ್ಲಿ ದೇವಾನುಗ್ರಹ ಪ್ರಾಪ್ತವಾಗುತ್ತದೆ. ಈ ಗುಣವಿಶೇಷತೆಗಳಿಲ್ಲದಿದ್ದರೆ ಅಬ್ದುಲ್ಲ, ಅಬ್ದುರ್ರಹ್ಮಾನ್ ಎಂದು ಹೆಸರಿದ್ದರೂ ದೀನ್‌ದಯಾಲ್, ಕರ್ತಾರ್‌ಸಿಂಗ್ ಎಂದು ಹೆಸರಿದ್ದರೂ ಅವರಿಬ್ಬರ ನಡುವೆ ಯಾವ ವ್ಯತ್ಯಾಸವೂ ಇಲ್ಲ. ಅವರಿಗೆ ದೇವಾನುಗ್ರಹವನ್ನು ಪಡೆಯುವ ಯಾವ ಅರ್ಹತೆಯೂ ಇರುವುದಿಲ್ಲ.

ಇಂದು ಮುಸ್ಲಿಮರೇಕೆ ಹೀನಾಯರಾಗಿರುವರು?

ಬಂಧುಗಳೇ! ನೀವು ನಿಮ್ಮನ್ನು ಮುಸ್ಲಿಮರೆಂದು ಕರೆದುಕೊಳ್ಳುತ್ತೀರಿ. ಮುಸ್ಲಿಮರ ಮೇಲೆ ದೇವನ ಅನುಗ್ರಹವಿರುತ್ತದೆ ಎಂದೂ ನೀವು ನಂಬುತ್ತೀರಿ. ಆದರೆ ಸ್ವಲ್ಪ ಕಣ್ತೆರೆದು ನೋಡಿ! ದೇವಾನುಗ್ರಹ ನಿಮಗೆ ಪ್ರಾಪ್ತವಾಗುತ್ತಿದೆಯೇ? ಪರಲೋಕದಲ್ಲೇನಾಗಲಿದೆ ಎಂಬುದನ್ನು ನೀವು ಅನಂತರ ಕಾಣುವಿರಷ್ಟೆ. ಆದರೆ ಈ ಲೋಕದಲ್ಲಿ ನಿಮ್ಮ ಅವಸ್ಥೆ ಹೇಗಿದೆ ಯೆಂಬುದನ್ನು ನೋಡಿರಿ. ಈ ದೇಶದಲ್ಲೇ ನೀವು ಕೋಟಿಗಟ್ಟಲೆ ಸಂಖ್ಯೆಯಲ್ಲಿದ್ದೀರಿ. ನಿಮ್ಮ ಸಂಖ್ಯೆ ಎಷ್ಟು ಹೆಚ್ಚಿದೆಯೆಂದರೆ ಒಬ್ಬೊಬ್ಬ ವ್ಯಕ್ತಿ ಒಂದೊಂದೇ ಕಲ್ಲುಗಳನ್ನೆಸೆದರೂ ಪರ್ವತವೇ ನಿರ್ಮಾಣವಾಗಬಹುದು. ಆದರೆ ಇಷ್ಟು ಅಪಾರ ಸಂಖ್ಯೆಯ ಮುಸ್ಲಿಮರು ಇರುವೆಡೆಯಲ್ಲಿ ದೇವಧಿಕ್ಕಾರಿಗಳು ಆಡಳಿತ ನಡೆಸುತ್ತಿದ್ದಾರೆ. ನಿಮ್ಮ ಕೊರಳು ಅವರ ಕೈಯಲ್ಲಿದೆ. ಅವರು ಅದನ್ನು ಬೇಕಾದೆಡೆಗೆ ತಿರುಗಿಸಬಹುದಾಗಿದೆ. ದೇವೇತರರ ಮುಂದೆ ಎಂದೂ ಬಾಗದಿರುತ್ತಿದ್ದ ನಿಮ್ಮ ಶಿರ ಈಗ ಮನುಷ್ಯರ ಮುಂದೆ ಬಾಗುತ್ತಿದೆ. ಹಿಂದೆ ಯಾರಿಗೂ ಹಸ್ತಕ್ಷೇಪ ನಡೆಸಲು ಸಾಧ್ಯವಿಲ್ಲದಿದ್ದ ನಿಮ್ಮ ಘನತೆ ಗೌರವಗಳು ಇಂದು ಮಣ್ಣು ಮುಕ್ಕುತ್ತಿವೆ. ಸದಾ ಮೇಲಾಗಿಯೇ ಇರುತ್ತಿದ್ದ ನಿಮ್ಮ ಕೈಗಳು ಈಗ ಕೆಳಗಾಗಿವೆ, ಅದು ದೇವಧಿಕ್ಕಾರಿಗಳ ಮುಂದೆ ಚಾಚಲ್ಪಡುತ್ತಿದೆ. ಅಜ್ಞಾನ, ದಾರಿದ್ರ್ಯ ಮತ್ತು ಸಾಲದಿಂದಾಗಿ ನೀವು ಎಲ್ಲೆಡೆಯೂ ನಿಂದ್ಯರಾಗಿದ್ದೀರಿ. ಇದು ದೇವಾನುಗ್ರಹವೇ? ಖಂಡಿತಾ ಅಲ್ಲ. ಬದಲಾಗಿ ಇದು ಸ್ಪಷ್ಟವಾದ ದೇವಕ್ರೋಧವಾಗಿದೆ. ಹಾಗಾದರೆ ಇದೆಂತಹ ವಿಚಿತ್ರ! ಮುಸ್ಲಿಮನಾಗಿರುತ್ತಾ ಅವನ ಮೇಲೆ ದೇವಕ್ರೋಧ ಎರಗುವುದು, ಮುಸ್ಲಿಮನಾಗಿ ಅವನು ನಿಂದ್ಯನಾಗಿರುವುದು, ಮುಸ್ಲಿಮನಾಗಿ ಅವನು ದಾಸ್ಯದ ಶೃಂಖಲೆಯಲ್ಲಿರುವುದು! ಒಂದು ವಸ್ತು ಏಕ ಕಾಲದಲ್ಲಿ ಯಾವ ರೀತಿ ಕಪ್ಪಾಗಿಯೂ

ಬಿಳಿಯಾಗಿಯೂ ಇರಲು ಸಾಧ್ಯವಿಲ್ಲವೋ ಹಾಗೆಯೇ ಇದೂ ಸಾಧ್ಯವಿಲ್ಲದ ಮಾತು. ಮುಸ್ಲಿಮನು ದೇವನಿಗೆ ಆಪ್ತನಾದವನೆಂದಾದರೆ, ದೇವನ ಆಪ್ತನು ಲೋಕದಲ್ಲಿ ನಿಂದ್ಯನೂ ನೀಚನೂ ಆಗುವುದು ಹೇಗೆ? ನೀವು ಅಲ್ಲಾಹನ ಹಕ್ಕನ್ನು ಅರಿತು ಅವನ ಅನುಸರಣೆ ಮಾಡಿದ್ದಕ್ಕೆ ಪ್ರತಿಯಾಗಿ ದೇವಧಿಕ್ಕಾರಿಗಳನ್ನು ನಿಮ್ಮ ಮೇಲಿನ ಆಡಳಿತಾಧಿಕಾರಿಯನ್ನಾಗಿ ಮಾಡಿ, ಅನುಸರಣೆಗೆ ಪ್ರತಿಯಾಗಿ ನಿಮಗೆ ಶಿಕ್ಷೆ ನೀಡಲು ಅಲ್ಲಾಹನೇನು ಅಕ್ರಮಿಯೇ? (ಅಲ್ಲಾಹನು ರಕ್ಷಿಸಲಿ) ದೇವನು ಅಕ್ರಮಿಯಲ್ಲ, ದೇವಾನುಸರಣೆಗೆ ಪ್ರತಿಯಾಗಿ ನಿಂದ್ಯತೆ ಸಿಗಲು ಸಾಧ್ಯವಿಲ್ಲ ಎಂದು ನೀವು ವಿಶ್ವಾಸವಿರಿಸುತ್ತೀರೆಂದಾದರೆ 'ಮುಸ್ಲಿಮ್' ಎಂದು ನಿಮ್ಮನ್ನು ನೀವು ಹೇಳಿಕೊಳ್ಳುವುದರಲ್ಲೇ ಎಲ್ಲೋ ಎಡವಿದ್ದೀರಿ ಎಂದು ನೀವು ಒಪ್ಪಿಕೊಳ್ಳ ಬೇಕಾಗುತ್ತದೆ. ಸರಕಾರಿ ಕಾಗದ ಪತ್ರಗಳಲ್ಲಿ ನಿಮ್ಮ ಹೆಸರನ್ನು 'ಮುಸ್ಲಿಮ್' ಎಂದೇ ದಾಖಲಿಸ ಲಾಗುತ್ತದೆ. ಆದರೆ ಅಲ್ಲಾಹನ ಬಳಿ ಸರಕಾರಿ ಕಛೇರಿಗಳ ಸನದಿನ ಆಧಾರದಲ್ಲಿ ತೀರ್ಮಾನ ಗಳು ನಡೆಯುವುದಿಲ್ಲ. ದೇವನ ಬಳಿಯ ಕಡತ ಬೇರೆಯೇ ಇದೆ. ಅಲ್ಲಿ ನಿಮ್ಮ ಹೆಸರು ಆಜ್ಞಾನುಸರಣೆ ಮಾಡುವವರ ಯಾದಿಯಲ್ಲಿದೆಯೋ ಅಥವಾ ಆಜ್ಞೋಲ್ಲಂಘನೆ ಮಾಡುವವರ ಯಾದಿಯಲ್ಲಿದೆಯೋ ಎಂದು ಹುಡುಕಿರಿ.

ದೇವನು ನಿಮ್ಮ ಬಳಿ ಗ್ರಂಥವನ್ನು ಕಳುಹಿಸಿದನು. ನೀವದನ್ನು ಓದಿ ನಿಮ್ಮ ಪ್ರಭುವನ್ನು ಗುರುತಿಸಿ ಅವನ ಆಜ್ಞಾಪಾಲನೆಯ ಹಾದಿಯನ್ನು ಕಂಡುಕೊಳ್ಳಬೇಕೆಂಬುದು ಅದರ ಉದ್ದೇಶ. ಆ ಗ್ರಂಥದಲ್ಲಿ ಏನು ಬರೆದಿದೆ ಎಂದು ತಿಳಿದುಕೊಳ್ಳಲು ನೀವೆಂದಾದರೂ ಪ್ರಯತ್ನಿಸಿದ್ದೀರಾ? ನೀವು ಮುಸ್ಲಿಮರಾಗುವುದು ಹೇಗೆ ಎಂದು ತಿಳಿಸಲು ದೇವನು ತನ್ನ ಪ್ರವಾದಿಯನ್ನು ನಿಮ್ಮೆಡೆಗೆ ಕಳುಹಿಸಿದನು. ಆ ಪ್ರವಾದಿ ಏನನ್ನು ಕಲಿಸಿದರೆಂದು ತಿಳಿದುಕೊಳ್ಳಲು ನೀವೆಂದಾದರೂ ಪ್ರಯತ್ನಿಸಿದ್ದೀರಾ? ದೇವನು ನಿಮಗೆ ಇಹ-ಪರಗಳಲ್ಲಿ ಗೌರವ ಪ್ರಾಪ್ತಿಯ ಮಾರ್ಗ ತೋರಿದನು. ನೀವದರಂತೆ ನಡೆಯುತ್ತೀರಾ? ಯಾವ ಕೆಲಸಗಳಿಂದ ಮಾನವ ಇಹ-ಪರಗಳಲ್ಲಿ ನಿಂದ್ಯ ನಾಗುತ್ತಾನೆ ಎಂದು ದೇವನು ಸ್ಪಷ್ಟವಾಗಿ ಹೇಳಿದ್ದಾನೋ ನೀವು ಆ ಕೆಲಸಗಳಿಂದ ದೂರವಿರುತ್ತೀರಾ? ಇದಕ್ಕೆ ನಿಮ್ಮ ಬಳಿ ಏನು ಉತ್ತರವಿದೆ. ನೀವು ದೇವಗ್ರಂಥ ಮತ್ತು ದೇವ ಪ್ರವಾದಿಯ ಜೀವನದಿಂದ ಜ್ಞಾನ ಸಂಪಾದಿಸಲಿಲ್ಲ ಮತ್ತು ಅದರ ಮಾರ್ಗದರ್ಶನದಂತೆ ಜೀವನ ಸಾಗಿಸಲಿಲ್ಲ. ಇದನ್ನು ನೀವು ಒಪ್ಪಿಕೊಳ್ಳುತ್ತೀರೆಂದಾದರೆ ಮುಸ್ಲಿಮನಾಗಿರುವುದರ ಸತ್ಫಲಗಳನ್ನು ಪಡೆಯಲು ನೀವು ಮುಸ್ಲಿಮರೇ ಆಗಿರಲಿಲ್ಲವೆಂದಾಯಿತು. ನೀವೆಂತಹ ಮುಸ್ಲಿಮರಾಗಿದ್ದೀರೋ ಅದಕ್ಕೆ ತುಕ್ಕುದಾದ ಪ್ರತಿಫಲಗಳನ್ನು ಪಡೆಯುತ್ತಿದ್ದೀರಿ. ಪರಲೋಕದಲ್ಲೂ ಅಂತಹ ಪ್ರತಿಫಲಗಳನ್ನೇ ನೀವು ಎದುರಿಸುವಿರಿ.

ಮುಸ್ಲಿಮ್-ಮುಸ್ಲಿಮೇತರರ ನಡುವೆ ಜ್ಞಾನ ಮತ್ತು ಕರ್ಮದ ವಿನಾ ಬೇರಾವುದೇ ವ್ಯತ್ಯಾಸವಿಲ್ಲ ಎಂದು ನಾನು ಈ ಮೊದಲು ಹೇಳಿದ್ದೇನೆ. ಒಬ್ಬನ ಜ್ಞಾನ ಮತ್ತು ಕರ್ಮ ದೇವಧಿಕ್ಕಾರಿಯಂತೆಯೇ ಇದ್ದು ಅವನು ತನ್ನನ್ನು ಮುಸ್ಲಿಮ್ ಎಂದು ಹೇಳಿಕೊಳ್ಳುತ್ತಿದ್ದರೆ ಅವನು ಹೇಳುತ್ತಿರುವುದು ಸುಳ್ಳು. ದೇವಧಿಕ್ಕಾರಿಯು ಪವಿತ್ರ ಕುರ್‌ಆನನ್ನು ಓದುವುದಿಲ್ಲ, ಅದರಲ್ಲಿ ಏನು ಬೋಧಿಸಲಾಗಿದೆ ಎಂದು ತಿಳಿದಿರುವುದಿಲ್ಲ. ಮುಸ್ಲಿಮನ ಅವಸ್ಥೆಯೂ ಇದೇ

ರೀತಿಯಾದರೆ ಅವನನ್ನು ಮುಸ್ಲಿಮ್ ಎಂದೇಕೆ ಕರೆಯಬೇಕು? ಪ್ರವಾದಿವರ್ಯರ(ಸ) ಬೋಧನೆಗಳೇನು, ಅವರು ದೇವನೆಡೆಗೆ ತಲುಪಲು ತೋರಿದ ಸನ್ಮಾರ್ಗ ಯಾವುದು ಎಂದು ದೇವಧಿಕ್ಕಾರಿಗೆ ತಿಳಿದಿರುವುದಿಲ್ಲ. ಅವನಂತೆಯೇ ತಿಳಿಗೇಡಿತನವಿದ್ದರೆ ಮುಸ್ಲಿಮನು, ಮುಸ್ಲಿಮನಾಗುವುದು ಹೇಗೆ? ದೇವಧಿಕ್ಕಾರಿಯು ದೇವೇಚ್ಛೆಯ ಬದಲು ದೇಹೇಚ್ಛೆಯನ್ನು ಪಾಲಿಸುತ್ತಾನೆ. ಮುಸ್ಲಿಮನೂ ಅವನಂತೆಯೇ ಸ್ವೇಚ್ಛಾಚಾರಿಯೂ ಸ್ವತಂತ್ರನೂ ಅವನಂತೆಯೇ ತನ್ನ ವೈಯಕ್ತಿಕ ಅಭಿಪ್ರಾಯಗಳನ್ನು ಪಾಲಿಸುವವನೂ ದೇವನ ಬಗ್ಗೆ ನಿರಪೇಕ್ಷನೂ ದೇಹೇಚ್ಛೆಗಳ ದಾಸನೂ ಆಗಿದ್ದರೆ ಅವನಿಗೆ ತನ್ನನ್ನು 'ಮುಸ್ಲಿಮ್' ಅರ್ಥಾತ್ ಅಲ್ಲಾಹನ ಆಜ್ಞಾನುಸಾರಿ ಎಂದು ಕರೆದುಕೊಳ್ಳುವ ಅರ್ಹತೆ ಇರುವುದು ಹೇಗೆ? ದೇವಧಿಕ್ಕಾರಿಯು ಒಳಿತು ಕೆಡುಕುಗಳಲ್ಲಿ ಭೇದ ಕಲ್ಪಿಸುವುದಿಲ್ಲ. ತನಗೆ ಇಷ್ಟವಾಗುವ ಮತ್ತು ಉಪಯುಕ್ತವೆನಿಸಿದ ಎಲ್ಲವನ್ನೂ ಅವನು ಅನುಸರಿಸುತ್ತಾನೆ. ಅದು ದೇವನ ದೃಷ್ಟಿಯಲ್ಲಿ ಸಿಂಧುವಾದರೂ ಅಸಿಂಧುವಾದರೂ ಸರಿಯೇ. ಮುಸ್ಲಿಮನ ದೃಷ್ಟಿಕೋನವೂ ಹೀಗೆಯೇ ಇದ್ದರೆ ಅವನಿಗೂ ಒಬ್ಬ ದೇವಧಿಕ್ಕಾರಿಗೂ ಇರುವ ವ್ಯತ್ಯಾಸವೇನು? ಮುಸ್ಲಿಮನೂ ದೇವಧಿಕ್ಕಾರಿಯಷ್ಟೇ ಇಸ್ಲಾಮಿನ ಬಗ್ಗೆ ಅಜ್ಞನಾಗಿದ್ದು, ದೇವಧಿಕ್ಕಾರಿಯು ಮಾಡುವುದನ್ನೆಲ್ಲಾ ಮುಸ್ಲಿಮನೂ ಮಾಡಿದರೆ ಅವನಿಗೆ ದೇವಧಿಕ್ಕಾರಿಗಿಂತ ಮಿಗಿಲಾದ ಶ್ರೇಷ್ಠತೆ ಯಾಕಿರಬೇಕು? ಅವನ ಪರಿಣಾಮವೂ ದೇವಧಿಕ್ಕಾರಿಯಂತೆಯೇ ಯಾಕಾಗಬಾರದು? ಈ ಕುರಿತು ನಾವೆಲ್ಲರೂ ಶಾಂತಚಿತ್ತದಿಂದ ಆಲೋಚಿಸಬೇಕಾಗಿದೆ.

ಚಿಂತಿಸಬೇಕಾದಂತಹ ಸಂದರ್ಭ

ಪ್ರಿಯ ಬಂಧುಗಳೇ! ನಾನು ಮುಸ್ಲಿಮರನ್ನು ದೇವಧಿಕ್ಕಾರಿಯನ್ನಾಗಿ ಮಾಡಲು ಹೊರಟಿದ್ದೇನೆ ಎಂದು ನೀವು ಭಾವಿಸಬಾರದು. ಸರ್ವಥಾ ನನ್ನ ಉದ್ದೇಶ ಅದಲ್ಲ. ನಾವು ದೇವಾನುಗ್ರಹದಿಂದ ವಂಚಿತರಾಗಿರುವುದಾದರೂ ಯಾಕೆ ಎಂದು ನಾನು ಸ್ವತಃ ಆಲೋಚಿಸುತ್ತೇನೆ. ಅದರ ಜತೆಗೆ ನಮ್ಮಲ್ಲಿ ಪ್ರತಿಯೊಬ್ಬರೂ ಆಲೋಚಿಸಬೇಕಾಗಿದೆ. ಯಾಕೆ ಎಲ್ಲ ಕಡೆಗಳಿಂದಲೂ ನಮ್ಮ ಮೇಲೆ ವಿಪತ್ತುಗಳು ಬಂದೆರಗುತ್ತಿವೆ. ನಾವು ಯಾರನ್ನು ದೇವಧಿಕ್ಕಾರಿಗಳು ಮತ್ತು ಆಜ್ಞೋಲ್ಲಂಘಕರೆಂದು ಕರೆಯುತ್ತೇವೋ ಅವರು ಯಾಕೆ ಎಲ್ಲೆಡೆಯೂ ನಮ್ಮ ಮೇಲೆ ಪ್ರಾಬಲ್ಯ ಸಾಧಿಸಿದ್ದಾರೆ? ದೇವಾನುಸರಣೆಯ ಬಗ್ಗೆ ಹೇಳಿಕೊಳ್ಳುವ ನಾವೇಕೆ ಎಲ್ಲೆಡೆಯೂ ಪರಾಧೀನತೆಗೆ ಈಡಾಗಿದ್ದೇವೆ? ಇದರ ಕಾರಣದ ಬಗ್ಗೆ ಹೆಚ್ಚೆಚ್ಚು ಆಲೋಚಿಸಿದಷ್ಟು ನಮ್ಮ ಮತ್ತು ದೇವಧಿಕ್ಕಾರಿಗಳ ನಡುವೆ ಇರುವುದು ಕೇವಲ ಹೆಸರಿನ ಅಂತರ ಮಾತ್ರ ಎಂದು ನನಗೆ ದೃಢವಾಗುತ್ತಾ ಹೋಯಿತು. ದೇವನ ಬಗ್ಗೆ ಅಲಕ್ಷ್ಯ, ನಿರ್ಭಯ ಮತ್ತು ಆಜ್ಞೋಲ್ಲಂಘನೆಯಲ್ಲಿ ನಾವೆಲ್ಲಿ ಅವರಿಗಿಂತ ಹಿಂದಿದ್ದೇವೆ. ನಮ್ಮ ಮತ್ತು ಅವರ ನಡುವೆ ಸ್ವಲ್ಪ ವ್ಯತ್ಯಾಸ ಖಂಡಿತ ಇರಬಹುದು. ಆದರೆ ಆ ಕಾರಣಕ್ಕಾಗಿ ನಾವು ಪ್ರತಿಫಲಕ್ಕೆ ಅರ್ಹರಲ್ಲ, ಬದಲಾಗಿ ಶಿಕ್ಷೆಗೆ ಅರ್ಹರು. ಏಕೆಂದರೆ ಪವಿತ್ರ ಕುರ್‌ಆನ್, ಅಲ್ಲಾಹನ ಗ್ರಂಥವೆಂದು ತಿಳಿದೂ ನಾವದರ ಜತೆ ದೇವಧಿಕ್ಕಾರಿಗಳು ವರ್ತಿಸುವಂತೆ ವರ್ತಿಸುತ್ತೇವೆ. ದೇವಧಿಕ್ಕಾರಿಗಳಂತೆಯೇ

ಅದರ ಅನುಸರಣೆಯಿಂದ ನಾವು ದೂರ ಓಡುತ್ತೇವೆ. ಸುಳ್ಳು ಹೇಳುವವರ ಮೇಲೆ ದೇವಶಾಪ ವಿದೆ. ಲಂಚ ಕೊಡುವವರು ಮತ್ತು ಸ್ವೀಕರಿಸುವವರಿಗೆ ನರಕದ ಎಚ್ಚರಿಕೆ ಇದೆ. ಬಡ್ಡಿ ತಿನ್ನುವ ಮತ್ತು ತಿನ್ನಿಸುವವರನ್ನು ಮಹಾ ಅಪರಾಧಿಗಳೆಂದು ಕರೆಯಲಾಗಿದೆ. ಪರನಿಂದೆ ಮಾಡುವುದು ಮೃತ ಸಹೋದರನ ಮಾಂಸ ಭಕ್ಷಣೆ ಮಾಡಿದಂತೆ ಎನ್ನಲಾಗಿದೆ. ಅಶ್ಲೀಲತೆ, ನಿರ್ಲಜ್ಜೆ ಮತ್ತು ದುಷ್ಕೃತ್ಯಗಳಿಗೆ ಘೋರ ಶಿಕ್ಷೆ ಇದೆ ಎಂಬುದೆಲ್ಲಾ ನಮಗೆ ಚೆನ್ನಾಗಿ ತಿಳಿದಿದೆ. ಆದರೆ ಇದನ್ನು ತಿಳಿದ ನಂತರವೂ ನಾವು ದೇವಧಿಕ್ಕಾರಿಗಳಂತೆ ಸುಲಭದಲ್ಲಿ ಈ ಎಲ್ಲಾ ಕೃತ್ಯಗಳನ್ನೆಸಗುತ್ತೇವೆ. ದೇವಭಯ ಕಿಂಚಿತ್ತು ಇಲ್ಲವೇನೋ ಎಂಬಂತೆ ನಾವು ವರ್ತಿಸುತ್ತೇವೆ. ಆದ್ದರಿಂದಲೇ ದೇವಧಿಕ್ಕಾರಿಗಳಿಗೆ ಪ್ರತಿಯಾಗಿ ಮುಸ್ಲಿಮರಿಗೆ ದೇವನ ಅನುಗ್ರಹ ಪ್ರಾಪ್ತವಾಗುವುದಿಲ್ಲ. ಬದಲಾಗಿ ಶಿಕ್ಷೆ ಕೊಡಲಾಗುತ್ತದೆ. ದೇವಧಿಕ್ಕಾರಿಗಳು ನಮ್ಮ ಮೇಲೆ ಆಡಳಿತ ನಡೆಸುತ್ತಿರುವುದು, ಎಲ್ಲೆಡೆಯೂ ನಾವು ಸೋಲಿಗೆ ಒಳಗಾಗಿರುವುದು, ಇದೆಲ್ಲವೂ ಇಸ್ಲಾಮಿನ ಅನುಗ್ರಹ ಪ್ರಾಪ್ತವಾದ ಬಳಿಕವೂ ಅದಕ್ಕೆ ಬೆಲೆ ಕೊಡದಿರುವುದರ ಶಿಕ್ಷೆಯೇ ಆಗಿದೆ.

ಪ್ರಿಯರೇ! ಇಂದಿನ ಪ್ರವಚನದಲ್ಲಿ ನಾನು ಏನೆಲ್ಲಾ ಹೇಳಿರುವೆನೋ ಅದರ ಉದ್ದೇಶ ನಿಮ್ಮನ್ನು ದೂಷಿಸುವುದಲ್ಲ. ನಾನು ದೂಷಣೆ ಮಾಡಲು ಹೊರಟವನಲ್ಲ. ಯಾವುದನ್ನು ನಾವು ಕಳಕೊಂಡಿದ್ದೇವೋ ಅದನ್ನು ಮರಳಿ ಗಳಿಸುವ ಬಗ್ಗೆ ಆಲೋಚಿಸಬೇಕೆಂಬುದು ನನ್ನ ಉದ್ದೇಶ ವಾಗಿದೆ. ತಾನು ಕಳಕೊಂಡಿರುವ ವಸ್ತು ಯಾವುದು ಮತ್ತು ಅದೆಷ್ಟು ಅಮೂಲ್ಯವಾದುದೆಂದು ತಿಳಿದಾಗಲೇ ಮನುಷ್ಯ ಅದನ್ನು ಮರಳಿ ಪಡೆಯಲು ಪ್ರಯತ್ನಿಸುತ್ತಾನೆ. ಆದ್ದರಿಂದ ನಾನು ನಿಮ್ಮನ್ನು ಎಚ್ಚರಿಸಲು ಪ್ರಯತ್ನಿಸಿದ್ದೇನೆ. ನಿಮ್ಮ ಬಳಿಯಿದ್ದ ಬೆಲೆಬಾಳುವ ನಿಧಿಯೊಂದು ಕಳೆದುಹೋಗಿದೆ ಎಂಬ ಎಚ್ಚರ ನಿಮಗೆ ಬಂದರೆ ಖಂಡಿತ ಅದನ್ನು ಮತ್ತೆ ಸಂಪಾದಿಸುವ ಬಗ್ಗೆ ಆಲೋಚಿಸುವಿರಿ.

ಜ್ಞಾನ ಗಳಿಕೆಯ ಚಿಂತೆ

ಒಬ್ಬ ಮುಸ್ಲಿಮನಿಗೆ, ಮುಸ್ಲಿಮನಾಗಲು ಬೇಕಾಗಿರುವಂತಹ ಮೊದಲ ಅವಶ್ಯಕತೆ ಇಸ್ಲಾಮಿನ ಜ್ಞಾನವಾಗಿದೆ ಎಂದು ನಾನು ಹಿಂದಿನ ಪ್ರವಚನದಲ್ಲಿ ಹೇಳಿದ್ದೇನೆ. ಪವಿತ್ರ ಕುರ್‌ಆನಿನ ಬೋಧನೆ ಏನು? ಪ್ರವಾದಿವರ್ಯರ(ಸ) ವಿಧಾನ ಯಾವುದು? ದೇವಾನುಸರಣೆ ಯೆಂದರೇನು? ದೇವಾನುಸರಣೆ (ಇಸ್ಲಾಮ್) ಮತ್ತು ದೇವಧಿಕ್ಕಾರದ (ಕುಫ್ರ್) ನಡುವೆ ಅಂತರ ಏಕಿದೆ? ಮುಂತಾದವುಗಳ ಜ್ಞಾನ ಸಂಪಾದಿಸದೆ ಯಾವ ವ್ಯಕ್ತಿಯೂ ಮುಸ್ಲಿಮನಾಗಲಾರ. ಆದರೆ ದುರದೃಷ್ಟವಶಾತ್ ನೀವು ಈ ನಿರ್ದಿಷ್ಟ ಜ್ಞಾನದ ಸಂಪಾದನೆಗಾಗಿಯೇ ಪ್ರಯತ್ನಿಸು ವುದಿಲ್ಲ. ಅಂದರೆ ನೀವು ಎಷ್ಟು ದೊಡ್ಡ ಅನುಗ್ರಹದಿಂದ ವಂಚಿತರಾಗಿದ್ದೀರಿ ಎಂಬುದರ ಪರಿವೆಯೇ ನಿಮಗಿಲ್ಲವೆಂದಾಯಿತು. ಬಂಧುಗಳೇ! ತಾಯಿಯೂ ಮಗುವಿಗೆ ಹಾಲುಣಿಸ ಬೇಕಾದರೆ ಅದು ಅಳಬೇಕು. ನೀರಡಿಕೆಯಾದರೆ ವ್ಯಕ್ತಿ ಸ್ವತಃ ನೀರಿಗಾಗಿ ಹುಡುಕಾಟ ನಡೆಸುತ್ತಾನೆ. ದೇವನು ಅವನಿಗಾಗಿ ನೀರನ್ನು ಒದಗಿಸುತ್ತಾನೆ ಕೂಡ. ನೀರಡಿಕೆಯೇ ಇಲ್ಲದವನ ಮುಂದೆ

ನೀರು ತುಂಬಿದ ಬಾವಿಯೇ ಇದ್ದರೂ ಏನು ಪ್ರಯೋಜನ. ಧರ್ಮದ ಬಗ್ಗೆ ಅಜ್ಞರಾಗಿರುವುದು ಎಷ್ಟು ದೊಡ್ಡ ನಷ್ಟವೆಂದು ನೀವು ಸ್ವತಃ ತಿಳಿದುಕೊಳ್ಳಬೇಕು. ದೇವಗ್ರಂಥ ನಿಮ್ಮ ಬಳಿ ಇದೆ. ಆದರೆ ಅದರಲ್ಲಿ ಏನಿದೆ ಎಂಬುದು ನಿಮಗೆ ತಿಳಿಯದಿರುವುದಕ್ಕಿಂತ ಮಿಗಿಲಾದ ನಷ್ಟ ಯಾವುದಿದೆ? ನೀವು ನಮಾಝ್ ನಿರ್ವಹಿಸುತ್ತೀರಿ. ಆದರೆ ನಮಾಝಿನ ವೇಳೆ ದೇವನೊಂದಿಗೆ ನೀವೇನು ಹೇಳುತ್ತಿದ್ದೀರಿ ಎಂದು ತಿಳಿಯದಿರುವುದಕ್ಕಿಂತ ಮಿಗಿಲಾದ ನಷ್ಟವೇನಿದೆ? ಯಾವ 'ಕಲಿಮ' (ಪವಿತ್ರ ವಚನ)ವನ್ನು ಪಠಿಸಿ ನೀವು ಇಸ್ಲಾಮ್ ಸ್ವೀಕರಿಸಿದ್ದೀರೋ ಅದರ ಅರ್ಥ ವೇನೆಂದೂ ನೀವು ಅರಿತಿಲ್ಲ. ಅದನ್ನು ಉಚ್ಚರಿಸಿದ ನಂತರ ಯಾವ ಕರ್ತವ್ಯಗಳು ನಿಮ್ಮ ಮೇಲೆ ಹೇರಲ್ಪಡುತ್ತದೆ ಎಂಬುದೂ ನಿಮಗೆ ತಿಳಿದಿಲ್ಲ. ಒಬ್ಬ ಮುಸ್ಲಿಮನ ಮಟ್ಟಿಗೆ ಇದಕ್ಕಿಂತ ಮಿಗಿಲಾದ ನಷ್ಟ ಬೇರಾವುದಿದೆ. ಹೊಲ ಹೊತ್ತಿ ಹೋದರೆ ಆಗುವ ನಷ್ಟ ನಿಮಗೆ ತಿಳಿದಿದೆ. ಉದ್ಯೋಗ ಸಿಗದಿದ್ದರೆ ಆಗುವ ನಷ್ಟದ ಬಗೆಗೂ ನಿಮಗೆ ತಿಳಿದಿದೆ. ಸಂಪತ್ತು ನಶಿಸಿ ಹೋದರೆ ಆಗುವ ನಷ್ಟವೂ ನಿಮಗೆ ಗೊತ್ತಿದೆ. ಆದರೆ ಇಸ್ಲಾಮಿನ ಬಗ್ಗೆ ಅಜ್ಞರಾಗಿರುವುದರಿಂದಾಗುವ ನಷ್ಟದ ಬಗ್ಗೆ ಮಾತ್ರ ನಿಮಗೆ ತಿಳಿದಿಲ್ಲ. ಈ ನಷ್ಟದ ಅರಿವು ಮೂಡಿದರೆ ಅದರಿಂದ ಪಾರಾಗಲು ನೀವೇ ಮುಂದಾಗುವಿರಿ. ಹಾಗೆ ಅದಕ್ಕೆ ನೀವೇ ಮುಂದಾದರೆ ದೇವನಿಚ್ಛಿಸಿದರೆ ನಷ್ಟದಿಂದ ಪಾರಾಗುವ ವ್ಯವಸ್ಥೆಯೂ ಆಗಿಬಿಡುತ್ತದೆ.

○

ಯೋಚಿಸತಕ್ಕ ವಿಚಾರಗಳು

ಪವಿತ್ರ ಕುರ್‌ಆನ್‌ನೊಂದಿಗೆ ನಮ್ಮ ವರ್ತನೆ

ಮುಸ್ಲಿಮ್ ಬಾಂಧವರೇ!

ಇಂದು ಜಗತ್ತಿನಲ್ಲಿ ಮುಸ್ಲಿಮರೇ ಅತ್ಯಂತ ಸುದೈವಿಗಳಾಗಿದ್ದಾರೆ. ಏಕೆಂದರೆ ಅವರ ಬಳಿ ಅಲ್ಲಾಹನ ಗ್ರಂಥ ಅತ್ಯಂತ ಸುರಕ್ಷಿತವಾಗಿ, ಎಲ್ಲಾ ವಿಧದ ಹಸ್ತಕ್ಷೇಪಗಳಿಂದ ಮುಕ್ತವಾಗಿ ಅಲ್ಲಾಹನ ಪ್ರವಾದಿಯವರಿಗೆ(ಸ) ಅವತೀರ್ಣಗೊಂಡ ಯಥಾರೂಪದಲ್ಲಿ ಲಭ್ಯವಿದೆ. ಅಂತೆಯೇ ಮುಸ್ಲಿಮರೇ ಜಗತ್ತಿನ ಅತ್ಯಂತ ದುರ್ದೈವಿಗಳಾಗಿದ್ದಾರೆ. ಏಕೆಂದರೆ ಅವರು ಅಲ್ಲಾಹನ ಗ್ರಂಥವನ್ನು ಹೊಂದಿರುವುದರ ಹೊರತಾಗಿಯೂ ಅದರ ಸಮೃದ್ಧಿ ಮತ್ತು ಅಗಣಿತ ಅನುಗ್ರಹಗಳಿಂದ ವಂಚಿತರಾಗಿದ್ದಾರೆ. ಪವಿತ್ರ ಕುರ್‌ಆನನ್ನು ಅವರು ಓದಿ, ಅರ್ಥೈಸಿ, ಅದನ್ನು ಅನುಸರಿಸಿ, ಅದರ ಪ್ರಕಾರ ದೇವನ ಭೂಮಿಯಲ್ಲಿ ದೇವಶಾಸನದಂತೆ ಆಡಳಿತ ನಡೆಸುವ ಉದ್ದೇಶದಿಂದ ಅವರ ಬಳಿಗೆ ಅದನ್ನು ಕಳುಹಿಸಲಾಗಿತ್ತು. ಇದು ಅವರಿಗೆ ಗೌರವ ಮತ್ತು ಶಕ್ತಿಯನ್ನು ಪ್ರದಾನ ಮಾಡಲು ಬಂದಿತ್ತು. ಅದು ಅವರನ್ನು ಭೂಮಿಯಲ್ಲಿ ಅಲ್ಲಾಹನ ನೈಜ ಪ್ರತಿನಿಧಿಗಳನ್ನಾಗಿ ಮಾಡಲು ಬಂದಿತು. ಅದರ ಮಾರ್ಗದರ್ಶನದಂತೆ ಅವರು ವರ್ತಿಸಿದಾಗ ಅದು ಅವರನ್ನು ಜಗತ್ತಿನ ನಾಯಕರನ್ನಾಗಿಯೂ ಮಾಡಿ ತೋರಿಸಿತು ಎಂಬುದಕ್ಕೆ ಇತಿಹಾಸ ಸಾಕ್ಷಿ ಇದೆ. ಆದರೆ ಇಂದು ಕುರ್‌ಆನನ್ನು, ಭೂತ-ಪ್ರೇತಗಳನ್ನು ಓಡಿಸಲಿಕ್ಕಾಗಿ ಮನೆಯಲ್ಲಿಡುವುದು, ಅದರ ಸೂಕ್ತಗಳನ್ನು ಬರೆದು ಕೊರಳಲ್ಲಿ ನೇತಾಡಿಸುವುದು, ಬರೆದು ಕುಡಿಯುವುದು ಮತ್ತು ಕೇವಲ ಪುಣ್ಯ ಗಳಿಕೆಯ ಉದ್ದೇಶದಿಂದ ಅದನ್ನು ಅರ್ಥವರಿಯದೆ ಪಠಿಸುವುದನ್ನು ಬಿಟ್ಟರೆ ಬೇರಾವುದಕ್ಕೂ ಅದು ಬಳಕೆಯಾಗುತ್ತಿಲ್ಲ. ಅವರು ತಮ್ಮ ಜೀವನಕ್ಕೆ ಅದರಿಂದ ಮಾರ್ಗದರ್ಶನವನ್ನು ಯಾಚಿಸುವುದಿಲ್ಲ. ನಮ್ಮ ವಿಶ್ವಾಸ ಶ್ರದ್ಧೆಗಳು ಏನಾಗಿರಬೇಕು? ನಮ್ಮ ವರ್ತನೆ ಹೇಗಿರಬೇಕು? ನಮ್ಮ ಚಾರಿತ್ರ್ಯ ಎಂತಿರಬೇಕು? ನಮ್ಮ ಲೇವಾದೇವಿ ಹೇಗಿರಬೇಕು? ಮಿತ್ರತ್ವ ಮತ್ತು ಶತ್ರುತ್ವಕ್ಕೆ ನಾವು ಯಾವ ಮಾನದಂಡ ಅನುಸರಿಸಬೇಕು? ದೇವನದಾಸರ ಮತ್ತು ಸ್ವತಃ ನಮ್ಮ ದೇಹದ ಯಾವ ಹಕ್ಕುಗಳು ನಮ್ಮ ಮೇಲಿದೆ. ಅದನ್ನು ಈಡೇರಿಸುವ ಬಗೆ ಹೇಗೆ? ನಮ್ಮ ಪಾಲಿಗೆ ಸತ್ಯ ಯಾವುದು ಮಿಥ್ಯ ಯಾವುದು? ನಾವು ಯಾರನ್ನು ಅನುಸರಿಸಬೇಕು ಮತ್ತು ಯಾರನ್ನು ಅನುಸರಿಸಬಾರದು? ಯಾರೊಂದಿಗೆ ಸಂಬಂಧ ಬೆಳೆಸಬೇಕು ಮತ್ತು ಯಾರೊಂದಿಗೆ ಬೆಳೆಸಬಾರದು? ನಮ್ಮ ಮಿತ್ರ ಮತ್ತು ಶತ್ರು ಯಾರು? ಯಾವುದರಲ್ಲಿ

ನಮ್ಮ ಗೌರವ, ಯಶಸ್ಸು ಮತ್ತು ಲಾಭ ಅಡಕವಾಗಿದೆ? ನಿಂದ್ಯತೆ, ಪರಾಜಯ ಮತ್ತು ಸೋಲು ಯಾವುದರಲ್ಲಿದೆ? ಎಂಬಿತ್ಯಾದಿ ಎಲ್ಲಾ ವಿಷಯಗಳನ್ನು ಕುರ್‌ಆನ್‌ನಿಂದ ತಿಳಿದುಕೊಳ್ಳು ವುದನ್ನು ಮುಸ್ಲಿಮರು ಈಗ ಬಿಟ್ಟುಬಿಟ್ಟಿದ್ದಾರೆ. ಈಗ ಅವರು, ದೇವಧಿಕ್ಕಾರಿಗಳು, ಬಹುದೇವಾ ರಾಧಕರು, ಪಥಭ್ರಷ್ಟ ಸ್ವಾರ್ಥಿಗಳು ಮತ್ತು ತಮ್ಮ ಸ್ವೇಚ್ಛೆಯೆಂಬ ಪಿಶಾಚಿಯೊಂದಿಗೆ ಈ ವಿಷಯಗಳ ಕುರಿತು ಕೇಳುತ್ತಾರೆ ಮತ್ತು ಅದರಂತೆಯೇ ವರ್ತಿಸುತ್ತಾರೆ. ಆದ್ದರಿಂದಲೇ ದೇವನನ್ನು ಬಿಟ್ಟು ಇತರರ ಆದೇಶಗಳನ್ನು ಅನುಗಮಿಸುವವರ ಪರಿಣಾಮವೇನಾಗುತ್ತದೋ ಅದೇ ಅವರ ಪರಿಣಾಮವೂ ಆಗಿದೆ. ಅದನ್ನೇ ಅವರು ಭಾರತ, ಚೀನಾ, ಜಾವಾ, ಫೆಲೆಸ್ತೀನ್, ಸಿರಿಯಾ, ಅಲ್‌ಜೀರಿಯಾ, ಮೊರೊಕ್ಕೋ ಎಂಬ ಭೇದವಿಲ್ಲದೆ ಎಲ್ಲೆಡೆಯೂ ಅನುಭವಿಸುತ್ತಿ ದ್ದಾರೆ. ಪವಿತ್ರ ಕುರ್‌ಆನ್ ಸಾದ್ಯಂತ ಒಳಿತಿನ ಚಿಲುಮೆಯಾಗಿದೆ. ನೀವು ಎಷ್ಟು ಒಳಿತನ್ನು ಅದರಿಂದ ನಿರೀಕ್ಷಿಸುತ್ತೀರೋ ಅಷ್ಟನ್ನು ಅದು ನೀಡುತ್ತದೆ. ಭೂತ-ಪ್ರೇತಗಳನ್ನು ಓಡಿಸುವುದು, ಕೆಮ್ಮು-ಜ್ವರದ ಚಿಕಿತ್ಸೆ ಮಾಡುವುದು, ಮೊಕದ್ದಮೆಯಲ್ಲಿ ಜಯಗಳಿಸುವುದು, ನೌಕರಿ ಗಳಿಸು ವುದು ಮುಂತಾದ ಕ್ಷುಲ್ಲಕ ವಸ್ತುಗಳನ್ನೇ ನೀವದರಿಂದ ಕೇಳಿದರೆ ಅದೇ ನಿಮಗೆ ಲಭ್ಯವಾಗು ವುದು. ಜಗತ್ತಿನ ಆಧಿಪತ್ಯ ಮತ್ತು ಭೂಮುಖದ ಆಳ್ವಿಕೆಯನ್ನು ಬಯಸಿದರೆ ಅದೂ ಪ್ರಾಪ್ತ ವಾಗುವುದು. ದೇವ ಸಿಂಹಾಸನದ ಬಳಿ ತಲಪಬೇಕೆಂದು ಬಯಸಿದರೆ ಅದು ನಿಮ್ಮನ್ನು ಅಲ್ಲಿಗೂ ತಲಪಿಸುವುದು. ಸಮುದ್ರವಂತೂ ನದಿಯನ್ನೇ ಕೊಡಲು ಸಿದ್ಧವಿರುವಾಗ ಸಮುದ್ರದಿಂದ ನೀರಿನ ಕೇವಲ ಎರಡು ಹನಿಗಳನ್ನು ಯಾಚಿಸುವುದು ನಿಮ್ಮ ಅಲ್ಪತನವಾಗಿದೆ.

ಬಂಧುಗಳೇ! ನಮ್ಮ ಮುಸ್ಲಿಮ್ ಸಹೋದರರು ಅಲ್ಲಾಹನ ಗ್ರಂಥಕ್ಕೆ ಮಾಡುತ್ತಿರುವ ಈ ನಯವಂಚನೆ ಅತ್ಯಂತ ಹಾಸ್ಯಾಸ್ಪದವಾಗಿದೆ. ಇತರ ವಿಷಯಗಳಿಗೆ ಸಂಬಂಧಿಸಿದಂತೆ ಒಬ್ಬನು ಹಾಗೆ ನಡೆದುಕೊಂಡರೆ ಇವರು ಅವನನ್ನು ಗೇಲಿ ಮಾಡಬಹುದು, ಅವನನ್ನು ಹುಚ್ಚನೆಂದು ಕರೆಯಬಹುದು. ಒಬ್ಬ ವ್ಯಕ್ತಿ ವೈದ್ಯರಿಂದ ಔಷಧ ಚೀಟಿಯನ್ನು ಬರೆಸಿ ತಂದು ಅದನ್ನು ತಾಯಿತ ಮಾಡಿ ಕತ್ತಿಗೆ ನೇತಾಡಿಸಿದರೆ ಅಥವಾ ನೀರಿನಲ್ಲಿ ಕಲಸಿ ಕುಡಿದರೆ ಅಂತಹ ವನನ್ನು ನೀವು ಏನೆನ್ನುವಿರಿ. ಅವನ ಕೃತ್ಯ ನಿಮಗೆ ನಗು ಬರಿಸಲಾರದೇ? ಅವನನ್ನು ನೀವು ಮೂರ್ಖನೆನ್ನಲಾರಿರಾ? ಹಾಗಾದರೆ ಆ ಮಹಾ ವೈದ್ಯನು ನಿಮ್ಮೆಲ್ಲಾ ವ್ಯಾಧಿಗಳಿಗೆ ಕೊಟ್ಟಿರುವ ಸಿದ್ಧೌಷದ ಮತ್ತು ಅನುಗ್ರಹದ ಅನುಪಮ ಉಪಾಧಿಯೊಂದಿಗೆ ನಿಮ್ಮ ಕಣ್ಣೆದುರಿಗೆ ಅಹೋರಾತ್ರಿ ಅದೇ ರೀತಿ ವರ್ತಿಸಲಾಗುತ್ತಿದೆ. ಆದರೆ ಯಾರಿಗೂ ಅದು ಹಾಸ್ಯಾಸ್ಪದವಾಗಿ ಕಾಣುವುದಿಲ್ಲ. ಇದು ಕೊರಳಲ್ಲಿ ನೇತಾಡಿಸುವ ಅಥವಾ ಕಲಸಿ ಕುಡಿಯುವ ವಸ್ತುವಲ್ಲ. ಬದಲಾಗಿ ಅದರ ಮಾರ್ಗದರ್ಶನದಂತೆ ಮದ್ದು ಅರೆಯಬೇಕಾದ ವಸ್ತು ಎಂದು ಯಾರೂ ಆಲೋಚಿಸುವುದಿಲ್ಲ.

ಪವಿತ್ರ ಕುರ್‌ಆನಿನ ಜ್ಞಾನ ಮತ್ತು ಅನುಸರಣೆ ಕಡ್ಡಾಯ

ಒಬ್ಬ ವ್ಯಕ್ತಿ ರೋಗಿಯಾದಾಗ ವೈದ್ಯಕೀಯ ಶಾಸ್ತ್ರದ ಯಾವುದಾದರೊಂದು ಪುಸ್ತಕವನ್ನು ಓದಲು ಕುಳಿತು, ಇದನ್ನು ಓದಿದ ಮಾತ್ರಕ್ಕೆ ರೋಗ ಶಮನವಾಗುತ್ತದೆಂದು ಭಾವಿಸಿದರೆ

ಅವನ ಬಗ್ಗೆ ನೀವೇನೆನ್ನುವಿರಿ. ಅವನ ಬುದ್ಧಿ ಕೆಟ್ಟಿದೆ, ಅವನನ್ನು ಹುಚ್ಚಾಸ್ಪತ್ರೆಗೆ ಕಳುಹಿಸಿ ಎಂದು ನೀವು ಹೇಳುತ್ತೀರಿ ತಾನೇ? ಆದರೆ ಆ ಮಹಾನ್ ರೋಗ ನಿವಾರಕ ನಿಮ್ಮ ರೋಗಗಳ ನಿವಾರಣೆಗಾಗಿ ಕಳುಹಿಸಿರುವ ಗ್ರಂಥದೊಂದಿಗೆ ನೀವು ಹಾಗೆಯೇ ವರ್ತಿಸುತ್ತಿದ್ದೀರಿ. ನೀವು ಅದನ್ನು ಪಠಿಸುತ್ತೀರಿ ಮತ್ತು ಪಠಣದಿಂದಲೇ ನಿಮ್ಮೆಲ್ಲಾ ರೋಗ ನಿವಾರಣೆಯಾಗುತ್ತದೆಂದು ಭಾವಿಸುತ್ತೀರಿ. ಅದರ ಮಾರ್ಗದರ್ಶನದಂತೆ ನಡೆಯುವ ಮತ್ತು ಅದು ಹಾನಿಕಾರಕವೆಂದು ಸಾರಿದವುಗಳಿಂದ ದೂರವಿರುವ ಅವಶ್ಯಕತೆ ಇದೆಯೆಂದು ನಿಮಗನಿಸುವುದೇ ಇಲ್ಲ. ಹಾಗಿರುವಾಗ ರೋಗ ಶಮನಕ್ಕಾಗಿ ವೈದ್ಯಶಾಸ್ತ್ರದ ಪುಸ್ತಕವನ್ನು ಓದಿದರೆ ಸಾಕೆಂದು ಭಾವಿಸುವವನಿಗೆ ಅನ್ವಯಿಸುವ ನಿಯಮವನ್ನು ನೀವೇಕೆ ನಿಮಗೂ ಅನ್ವಯ ಮಾಡಿಕೊಳ್ಳುವುದಿಲ್ಲ.

ನಿಮಗೆ ನೀವರಿಯದ ಭಾಷೆಯಲ್ಲಿ ಒಂದು ಪತ್ರ ಬಂದರೆ ಆ ಭಾಷೆಯನ್ನರಿಯುವವರಿಂದ ಅದರ ಅರ್ಥ ಗ್ರಹಿಸಲು ನೀವು ಧಾವಿಸುತ್ತೀರಿ. ಅರ್ಥ ತಿಳಿದುಕೊಳ್ಳುವ ತನಕ ನಿಮಗೆ ನೆಮ್ಮದಿಯಾಗುವುದಿಲ್ಲ. ಇದು ಸಾಮಾನ್ಯ ವ್ಯಾಪಾರಕ್ಕೆ ಸಂಬಂಧ ಪಟ್ಟ ಪತ್ರದೊಂದಿಗೆ ನೀವು ವ್ಯವಹರಿಸುವ ರೀತಿಯಾಗಿದೆ. ಅದರಲ್ಲಿ ಹೆಚ್ಚೆಂದರೆ ಕೆಲವು ರೂಪಾಯಿಗಳ ಪ್ರಯೋಜನವಿರಬಹುದು. ಆದರೆ ಜಗದೊಡೆಯನಿಂದ ನಿಮ್ಮ ಬಳಿಗೆ ಬಂದಿರುವ ಮತ್ತು ಇಹ-ಪರಗಳ ನಿಮ್ಮೆಲ್ಲಾ ಸತ್ಫಲಗಳು ಅಡಕವಾಗಿರುವ ಆ ಪತ್ರವನ್ನು ನೀವು ಹಾಗೆಯೇ ಬಿಟ್ಟು ಬಿಡುತ್ತೀರಿ. ಅದರ ಅರ್ಥ ತಿಳಿಯಲು ನೀವು ಚಿಂತಿತರಾಗುವುದಿಲ್ಲ. ಎಂತಹ ಆಶ್ಚರ್ಯದ ಸಂಗತಿ!

ಗ್ರಂಥಕ್ಕೆ ಅಕ್ರಮವೆಸಗಿದುದರ ಪರಿಣಾಮ

ಈ ಮಾತುಗಳನ್ನು ನಾನು ಮನರಂಜನೆಗಾಗಿ ಹೇಳುತ್ತಿಲ್ಲ. ಈ ವಿಷಯದ ಬಗ್ಗೆ ವಿವೇಚಿಸಿದರೆ ಜಗತ್ತಿನಲ್ಲಿ ಅಲ್ಲಾಹನ ಗ್ರಂಥದೊಂದಿಗೆ ಅತಿ ಹೆಚ್ಚು ಅಕ್ರಮವೆಸಗಲಾಗುತ್ತಿದೆ ಎಂದು ನಿಮ್ಮ ಮನಸ್ಸೇ ಸಾಕ್ಷ್ಯನುಡಿಯುವುದು. ಅಕ್ರಮವೆಸಗುವವರು ಮತ್ತಾರೂ ಅಲ್ಲ, ಆ ಗ್ರಂಥದ ಮೇಲೆ ವಿಶ್ವಾಸವಿಡುವ ಮತ್ತು ಅದಕ್ಕಾಗಿ ಪ್ರಾಣಾರ್ಪಣೆಗೂ ಸಿದ್ಧರೆಂದು ಹೇಳಿಕೊಳ್ಳುವವರೇ ಆಗಿದ್ದಾರೆ. ಅವರು ಅದರ ಮೇಲೆ ವಿಶ್ವಾಸವಿರಿಸುತ್ತಾರೆ ಮತ್ತು ಅದನ್ನು ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುತ್ತಾರೆಂಬುದು ನಿಸ್ಸಂಶಯ. ಆದರೆ ಅವರೇ ಅದರ ಮೇಲೆ ಅತ್ಯಧಿಕ ಅಕ್ರಮವನ್ನೂ ಎಸಗುತ್ತಾರೆ. ಅಲ್ಲಾಹನ ಗ್ರಂಥದ ಮೇಲೆ ಅಕ್ರಮವೆಸಗುವುದರ ಪರಿಣಾಮ ಸುವ್ಯಕ್ತವಿದೆ. ಚೆನ್ನಾಗಿ ವಿವೇಚಿಸಿ- ಅಲ್ಲಾಹನ ವಾಣಿ ಮನುಷ್ಯನ ಬಳಿಗೆ ಅವನನ್ನು ದುರದೃಷ್ಟ, ದಾರಿದ್ರ್ಯ ಮತ್ತು ಸಂಕಷ್ಟದಲ್ಲಿ ಸಿಲುಕಿಸಲಿಕ್ಕಾಗಿ ಬಂದಿಲ್ಲ.

طه ﴿١﴾ مَا أَنزَلْنَا عَلَيْكَ الْقُرْآنَ لِتَشْقَىٰ ﴿٢﴾

"ನಾವು ಈ ಕುರ್‌ಆನನ್ನು ನಿಮ್ಮ ಮೇಲೆ ಅವತೀರ್ಣಗೊಳಿಸಿರುವುದು ನಿಮ್ಮನ್ನು ಸಂಕಷ್ಟಕ್ಕೀಡು ಮಾಡಲಿಕ್ಕಲ್ಲ." (ಪವಿತ್ರ ಕುರ್‌ಆನ್, 20:1) ಕುರ್‌ಆನ್ ಸೌಭಾಗ್ಯ ಮತ್ತು

ಸುದೈವದ ಚಿಲುಮೆಯಾಗಿದೆ. ಸಂಕಷ್ಟ ಮತ್ತು ದುರ್ದೈವದ ಮೂಲವಲ್ಲ. ದೇವವಾಣಿಯನ್ನು ಹೊಂದಿರುವ ಯಾವುದೇ ಸಮುದಾಯ ಲೋಕದಲ್ಲಿ ಹೀನಾಯವಾಗಲು, ಪರಾಧೀನತೆಗೆ ಒಳಪಡಲು, ಕಾಲ್ತುಳಿತಕ್ಕೆ ಗುರಿಯಾಗಲು, ಒದೆತ ತಿನ್ನಲು ಅಥವಾ ಅವರ ಕೊರಳಲ್ಲಿ ದಾಸ್ಯದ ಕೊರಳ ಪಟ್ಟಿ ಇದ್ದು ಇತರರ ಕೈಯಲ್ಲಿ ಅದರ ಹಗ್ಗವಿರಲು, ಪ್ರಾಣಿಗಳಂತೆ ಅವರು ಅಟ್ಟಿಸಲ್ಪಡಲು ಸರ್ವಥಾ ಸಾಧ್ಯವಿಲ್ಲ. ಅಲ್ಲಾಹನ ವಾಣಿಯ ಮೇಲೆ ಅಕ್ರಮವೆಸಗಿದಾಗ ಮಾತ್ರ ಇಂತಹ ಪರಿಣಾಮ ಎದುರಾಗುತ್ತದೆ. ಇಸ್ರಾಈಲ್ ಸಮುದಾಯದ ಪರಿಣಾಮ ನಿಮ್ಮ ಮುಂದಿದೆ. ಅವರ ಬಳಿಗೆ ತೌರಾತ್ ಮತ್ತು ಇಂಜೀಲ್‌ಗಳನ್ನು ಕಳುಹಿಸಿದ ನಂತರ ಹೀಗೆನ್ನಲಾಗಿತ್ತು.

وَلَوْ اَنَّهُمْ اَقَامُوا التَّوْرٰىةَ وَالْاِنْجِيْلَ وَمَاۤ اُنْزِلَ اِلَيْهِمْ مِّنْ رَّبِّهِمْ لَاَكَلُوْا مِنْ فَوْقِهِمْ وَمِنْ تَحْتِ اَرْجُلِهِمْ ؕ

"ಅಕಟ! ಅವರು ತೌರಾತ್, ಇಂಜೀಲ್ ಮತ್ತು ಅವರ ಪಾಲಕ ಪ್ರಭುವಿನ ವತಿಯಿಂದ ಅವರ ಕಡೆಗೆ ಕಳುಹಿಸಲ್ಪಟ್ಟಿದ್ದ ಇತರ ಗ್ರಂಥಗಳನ್ನು ಸಂಸ್ಥಾಪಿಸಿರುತ್ತಿದ್ದರೆ! ಹಾಗೆ ಮಾಡುತ್ತಿದ್ದರೆ ಅವರಿಗಾಗಿ ಆಹಾರವು ಮೇಲ್ಭಾಗದಿಂದ ವರ್ಷಿಸುತ್ತಿತ್ತು. ಕೆಳಭಾಗದಿಂದ ಉಕ್ಕಿ ಬರುತ್ತಿತ್ತು." (ಪವಿತ್ರ ಕುರ್‌ಆನ್, 5: 66)

ಆದರೆ ಅವರು ಅಲ್ಲಾಹನ ಆ ಗ್ರಂಥಗಳ ಮೇಲೆ ಅಕ್ರಮವೆಸಗಿದರು. ಅದರ ಪರಿಣಾಮವಾಗಿ ಅವರು ದುರ್ಗತಿ ಕಾಣಬೇಕಾಯಿತು.

وَضُرِبَتْ عَلَيْهِمُ الذِّلَّةُ وَالْمَسْكَنَةُ وَبَآءُوْ بِغَضَبٍ مِّنَ اللّٰهِ ؕ ذٰلِكَ بِاَنَّهُمْ كَانُوْا يَكْفُرُوْنَ بِاٰيٰتِ اللّٰهِ وَيَقْتُلُوْنَ النَّبِيّٖنَ بِغَيْرِ الْحَقِّ ؕ ذٰلِكَ بِمَا عَصَوْا وَّكَانُوْا يَعْتَدُوْنَ ﴿۶۱﴾

"ಕೊನೆಗೆ ನಿಂದೆ ಮತ್ತು ದಾರಿದ್ರ್ಯಗಳು ಅವರನ್ನಾವರಿಸಿದವು ಮತ್ತು ಅವರು ಅಲ್ಲಾಹನ ಕ್ರೋಧಕ್ಕೆ ಪಾತ್ರರಾದರು. ಇದೆಲ್ಲ ಅವರು ಅಲ್ಲಾಹನ ವಚನಗಳನ್ನು ನಿರಾಕರಿಸುತ್ತಿದ್ದುದರ ಮತ್ತು ಪ್ರವಾದಿಗಳನ್ನು ಅನ್ಯಾಯವಾಗಿ ಕೊಲೆಗೈಯುತ್ತಿದ್ದುದರ ಫಲವಾಗಿತ್ತು. ಇದು ಅವರ ಆಜ್ಞೋಲ್ಲಂಘನೆ ಮತ್ತು ಧರ್ಮ ಸೀಮೋಲ್ಲಂಘನೆ ಮಾಡುತ್ತಲೇ ಸಾಗಿದ್ದುದರ ಪರಿಣಾಮವಾಗಿತ್ತು." (ಪವಿತ್ರ ಕುರ್‌ಆನ್, 2:61)

ಆದ್ದರಿಂದ ಒಂದು ಸಮುದಾಯ ಅಲ್ಲಾಹನ ಗ್ರಂಥವನ್ನು ಹೊಂದಿರುವುದರ ಜತೆಗೆ ಹೀನಾಯ ಸ್ಥಿತಿಯಲ್ಲೂ ಪರಾಧೀನತೆಯಲ್ಲೂ ಇದ್ದರೆ ಆ ಸಮುದಾಯ ಗ್ರಂಥದೊಂದಿಗೆ ಅಕ್ರಮವೆಸಗುತ್ತಿದೆಯೆಂಬುದೇ ವಾಸ್ತವ. ಅದಕ್ಕೆ ಎದುರಾಗಿರುವ ಎಲ್ಲಾ ವಿಪತ್ತುಗಳಿಗೂ

ಈ ಅಕ್ರಮವೇ ಕಾರಣ. ಈ ದೇವಕ್ರೋಧದಿಂದ ಮುಕ್ತವಾಗುವ ಏಕೈಕ ವಿಧಾನ ಆ ಗ್ರಂಥಕ್ಕೆ ಅಕ್ರಮವೆಸಗುವುದನ್ನು ತೊರೆಯುವುದು ಮತ್ತು ಅದು ತಿಳಿಸಿರುವ ಹೊಣೆಗಾರಿಕೆಗಳನ್ನು ನಿಭಾಯಿಸಲು ಪ್ರಯತ್ನಿಸುವುದಾಗಿದೆ. ಈ ಮಹಾ ಪಾಪದಿಂದ ಮುಕ್ತರಾಗದಿದ್ದರೆ ನಿಮ್ಮ ಪರಿಸ್ಥಿತಿ ಎಂದೂ ಬದಲಾಗಲಾರದು. ನೀವು ಹಳ್ಳಿ ಹಳ್ಳಿಯಲ್ಲಿ ಕಾಲೇಜುಗಳನ್ನು ತೆರೆದು ನಿಮ್ಮ ಮಕ್ಕಳೆಲ್ಲಾ ಪದವೀಧರರಾಗಿ ಬಿಟ್ಟರೂ ಸರಿಯೇ ಅಥವಾ ಯಹೂದಿಯರಂತೆ ಬಡ್ಡಿ ತಿಂದು ನೀವು ಕೋಟ್ಯಾಧಿಪತಿಗಳಾಗಿ ಮಾರ್ಪಟ್ಟರೂ ಸರಿಯೇ.

'ಮುಸ್ಲಿಮ್' ಎಂದು ಯಾರನ್ನು ಕರೆಯುತ್ತೇವೆ?

ಬಂಧುಗಳೇ! 'ಮುಸ್ಲಿಮ್' ಎಂದು ಯಾರನ್ನು ಕರೆಯುತ್ತಾರೆ ಮತ್ತು 'ಮುಸ್ಲಿಮ್' ಎಂಬುದರ ಅರ್ಥವೇನು ಎಂದು ಪ್ರತಿಯೊಬ್ಬ ಮುಸ್ಲಿಮನೂ ಮೊಟ್ಟಮೊದಲು ತಿಳಿದು ಕೊಳ್ಳಬೇಕಾಗಿದೆ. ಒಬ್ಬ ಮನುಷ್ಯನಿಗೆ ಮನುಷ್ಯತ್ವ ಎಂದರೇನು ಮತ್ತು ಮಾನವ ಹಾಗೂ ಪ್ರಾಣಿಯ ನಡುವೆ ಇರುವ ಅಂತರವೇನು ಎಂದು ತಿಳಿಯದಿದ್ದರೆ ಅವನು ಪ್ರಾಣಿಗಳಂತೆಯೇ ವರ್ತಿಸುವನು. ಮನುಷ್ಯತ್ವಕ್ಕೆ ಯಾವುದೇ ಬೆಲೆ ಕಲ್ಪಿಸಲಾರನು. ಅದೇ ರೀತಿ ಒಬ್ಬ ವ್ಯಕ್ತಿಗೆ ಮುಸ್ಲಿಮನಾಗುವುದರ ಅರ್ಥವೇನು ಮತ್ತು ಮುಸ್ಲಿಮ್ ಹಾಗೂ ಮುಸ್ಲಿಮೇತರರ ನಡುವೆ ಇರುವ ಅಂತರವೇನೆಂದು ತಿಳಿಯದಿದ್ದರೆ ಅವನು ಮುಸ್ಲಿಮೇತರರಂತೆಯೇ ವರ್ತಿಸುವನು. ತಾನು ಮುಸ್ಲಿಮ್ ಆಗಿರುವುದಕ್ಕೆ ಅವನು ಬೆಲೆ ಕಲ್ಪಿಸಲಾರನು. ಆದ್ದರಿಂದ ತನ್ನನ್ನು ಮುಸ್ಲಿಮ್ ಎಂದು ಕರೆದುಕೊಳ್ಳುವ ಪ್ರತಿಯೊಬ್ಬನೂ ಮುಸ್ಲಿಮ್ ಎಂಬುದರ ಅರ್ಥವೇನು, ಮುಸ್ಲಿಮನಾಗಿ ಬಿಟ್ಟರೆ ಅವನಲ್ಲಿ ಉಂಟಾಗುವ ಮಾನವೀಯ ಪರಿವರ್ತನೆ ಯಾವುದು, ಆ ಮೂಲಕ ಅವನ ಮೇಲೆ ಹೇರಲ್ಪಡುವ ಕರ್ತವ್ಯಗಳೇನು ಮತ್ತು ಯಾವ ಇತಿಮಿತಿಗಳೊಳಗಿದ್ದರೆ ಮಾನವ ಮುಸ್ಲಿಮನಾಗಿರುತ್ತಾನೆ ಮತ್ತು ಯಾವ ಪರಿಧಿಯನ್ನು ದಾಟಿದರೆ, ಅವನು ತನ್ನನ್ನು ಮುಸ್ಲಿಮ್ ಎಂದು ಬಾಯಿಯಿಂದ ಹೇಳಿಕೊಂಡರೂ ವಸ್ತುಶಃ ಅದರಿಂದ ದೂರವುಳಿಯುತ್ತಾನೆ ಎಂದು ತಿಳಿದುಕೊಳ್ಳಬೇಕಾಗಿದೆ.

'ಇಸ್ಲಾಮ್' ಎಂದರೇನು?

ಇಸ್ಲಾಮ್ ಎಂದರೆ ದೇವಾನುಸರಣೆ ಮತ್ತು ದೇವನ ಆಜ್ಞಾಪಾಲನೆಯಾಗಿದೆ. ತನ್ನನ್ನು ಸಂಪೂರ್ಣವಾಗಿ ದೇವನಿಗೆ ಶರಣಾಗಿಸುವುದರ ಹೆಸರೇ ಇಸ್ಲಾಮ್, ದೇವನೆದುರು ತನ್ನ ಸ್ವಾತಂತ್ರ್ಯ ಮತ್ತು ಅಧಿಕಾರದಿಂದ ಮುಕ್ತನಾಗುವುದರ ಹೆಸರೇ ಇಸ್ಲಾಮ್. ದೇವನ ಆಧಿಪತ್ಯ ಮತ್ತು ಆಜ್ಞಾಧಿಕಾರದ ಮುಂದೆ ಶಿರಬಾಗುವುದರ ಹೆಸರೇ ಇಸ್ಲಾಮ್, ತನ್ನೆಲ್ಲಾ ವ್ಯವಹಾರವನ್ನು ದೇವನಿಗೆ ಅರ್ಪಿಸಿ ಬಿಡುವವನು 'ಮುಸ್ಲಿಮ್' ಎನಿಸಿಕೊಳ್ಳುತ್ತಾನೆ. ತನ್ನ ವ್ಯವಹಾರಗಳನ್ನು ತನ್ನ ಕೈಯಲ್ಲೇ ಇರಿಸಿಕೊಳ್ಳುವ ಅಥವಾ ಇತರರ ಕೈಗೊಪ್ಪಿಸಿ ಬಿಡುವವನು 'ಮುಸ್ಲಿಮ್'

ಎನಿಸಿಕೊಳ್ಳುವುದಿಲ್ಲ. ವ್ಯವಹಾರಗಳನ್ನು ದೇವನಿಗೆ ಅರ್ಪಿಸುವುದು ಎಂದರೆ ದೇವನು ತನ್ನ ಗ್ರಂಥ ಮತ್ತು ಪ್ರವಾದಿಯ ಮೂಲಕ ಕಳುಹಿಸಿರುವ ಮಾರ್ಗದರ್ಶನವನ್ನು ಸ್ವೀಕರಿಸುವುದು, ಅದರಲ್ಲಿ ಹಿಂದಡಿ ಇಡದಿರುವುದು ಮತ್ತು ಜೀವನದಲ್ಲಿ ಎದುರಾಗುವ ಎಲ್ಲಾ ವ್ಯವಹಾರ ಗಳಲ್ಲೂ ಪವಿತ್ರ ಕುರ್‌ಆನ್ ಮತ್ತು ಪ್ರವಾದಿಚರ್ಯೆಯನ್ನು ಅನುಸರಿಸುವುದಾಗಿದೆ. ತನ್ನ ಬುದ್ಧಿ, ಲೋಕರೂಢಿ ಮತ್ತು ದೇವೇತರರ ಮಾತುಗಳನ್ನು ತಿರಸ್ಕರಿಸಿ ತಾನೇನು ಮಾಡಬೇಕೆಂದು ದೇವನ ಗ್ರಂಥ ಮತ್ತು ದೇವಪ್ರವಾದಿಯೊಂದಿಗೆ ಮಾತ್ರ ಕೇಳುವ, ಅದರಿಂದ ದೊರೆಯುವ ಮಾರ್ಗದರ್ಶನವನ್ನು ಅಕ್ಷರಶಃ ಅಳುಕಿಲ್ಲದೆ ಸ್ವೀಕರಿಸುವ ಅದಕ್ಕೆ ವಿರುದ್ಧವಾದ ಎಲ್ಲವನ್ನೂ ತೊರೆಯುವ ವ್ಯಕ್ತಿ ಮಾತ್ರವೇ 'ಮುಸ್ಲಿಮ್' ಎನಿಸಿಕೊಳ್ಳುತ್ತಾನೆ. ಏಕೆಂದರೆ ಅವನು ತನ್ನನ್ನು ಸಂಪೂರ್ಣವಾಗಿ ದೇವನಿಗೆ ಅರ್ಪಿಸಿದ್ದು. ಮುಸ್ಲಿಮನಾಗುವುದೆಂದರೆ ನಿಜವಾಗಿ ತನ್ನನ್ನು ಸಂಪೂರ್ಣವಾಗಿ ದೇವನಿಗೆ ಅರ್ಪಿಸಿಕೊಳ್ಳುವುದೇ ಆಗಿದೆ. ಇದಕ್ಕೆ ವಿರುದ್ಧವಾಗಿ ಪವಿತ್ರ ಕುರ್‌ಆನ್ ಮತ್ತು ಪ್ರವಾದಿಚರ್ಯೆಯನ್ನು ಬುನಾದಿಯಾಗಿರಿಸದ, ತನ್ನ ಸ್ವೇಚ್ಛೆಯನ್ನೇ ಅನುಗಮಿಸುವ ತನ್ನ ತಾತ-ಮುತ್ತಾತಂದಿರ ಕಾಲದಿಂದ ನಡೆಯುತ್ತಾ ಬಂದಿರುವುದನ್ನು ಪಾಲಿಸುವ, ಲೋಕ ರೂಢಿಯನ್ನು ಅನುಸರಿಸುವ, ತನ್ನ ವ್ಯವಹಾರಗಳಿಗೆ ಪವಿತ್ರ ಕುರ್‌ಆನ್ ಮತ್ತು ಪ್ರವಾದಿಚರ್ಯೆಯಿಂದ ಮಾರ್ಗದರ್ಶನವನ್ನು ಪಡೆಯುವ ಔಚಿತ್ಯವನ್ನೇ ಗುರುತಿಸ ದವನು ಮುಸ್ಲಿಮನಾಗಲು ಸಾಧ್ಯವಿಲ್ಲ. ಪವಿತ್ರ ಕುರ್‌ಆನ್ ಮತ್ತು ಪ್ರವಾದಿಚರ್ಯೆಯ ಮಾರ್ಗದರ್ಶನ ಏನೆಂದು ತಿಳಿದ ನಂತರವೂ-ನನ್ನ ಬುದ್ಧಿ ಅದನ್ನು ಸ್ವೀಕರಿಸುವುದಿಲ್ಲ, ತಾತ-ಮುತ್ತಾತಂದಿರ ಕಾಲದಿಂದ ಅದಕ್ಕೆ ತದ್ವಿರುದ್ಧವಾಗಿ ವರ್ತಿಸಲಾಗುತ್ತಿದೆ ಅಥವಾ ಲೋಕರೂಢಿ ಅದಕ್ಕೆ ವ್ಯತಿರಿಕ್ತವಾಗಿದೆಯೆಂದು ವಾದಿಸಿ ಅದನ್ನು ಅನುಸರಿಸುವುದಿಲ್ಲ ಎಂದು ಹೇಳುವವನು ತನ್ನನ್ನು ಮುಸ್ಲಿಮ್ ಎಂದು ಹೇಳಿಕೊಳ್ಳುತ್ತಿದ್ದರೂ ಅದು ಸುಳ್ಳಾಗಿದೆ.

ಮುಸ್ಲಿಮನ ಕರ್ತವ್ಯ

ನೀವು "ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದರ್ರಸೂಲುಲ್ಲಾಹ್" ಎಂಬ ಮಂತ್ರೋಚ್ಚಾರ ಮಾಡಿಕೊಂಡು ಮುಸ್ಲಿಮರಾಗಿದ್ದೀರೆಂದು ಅಂಗೀಕರಿಸಿಕೊಳ್ಳುತ್ತೀರಿ. ಇನ್ನು ನಿಮ್ಮ ಪಾಲಿಗೆ ಅಲ್ಲಾಹನ ಶಾಸನ ಮಾತ್ರ ಅಂತಿಮ ಶಾಸನವಾಗಿದೆ. ನಿಮ್ಮ ಒಡೆಯ ಅಲ್ಲಾಹನು ಮಾತ್ರವಾಗಿದ್ದಾನೆ. ನೀವು ಅಲ್ಲಾಹನ ಅನುಸರಣೆಯನ್ನು ಮಾತ್ರ ಮಾಡಬೇಕಾಗಿದೆ. ಅಲ್ಲಾಹನ ಗ್ರಂಥ ಮತ್ತು ಪ್ರವಾದಿವರ್ಯರ(ಸ) ಮೂಲಕ ವ್ಯಕ್ತವಾದುದು ಮಾತ್ರವೇ ನಿಮ್ಮ ಪಾಲಿಗೆ ಸತ್ಯವಾಗಿದೆ. ಅರ್ಥಾತ್ ಮುಸ್ಲಿಮನಾಗುತ್ತಲೇ ದೇವನಿಗೆ ಪ್ರತಿಯಾಗಿ ಇರುವ ಎಲ್ಲಾ ವೈಯಕ್ತಿಕ ಸ್ವಾತಂತ್ರ್ಯವನ್ನು ನೀವು ಕಳೆದುಕೊಳ್ಳುತ್ತೀರಿ. ಇದು ನನ್ನ ಅಭಿಪ್ರಾಯ, ಇದು ಲೋಕರೂಢಿ, ಇದು ಕುಟುಂಬದ ಸಂಪ್ರದಾಯ, ಇದು ಇಂತಿಂತಹ ಹಿರಿಯ ವ್ಯಕ್ತಿಯ ಅನಿಸಿಕೆ ಎಂದು ಮುಂತಾಗಿ ಹೇಳುವ ಅಧಿಕಾರವೇ ನಿಮಗಿರುವುದಿಲ್ಲ. ದೇವವಾಣಿ ಮತ್ತು ಪ್ರವಾದಿ ಚರ್ಯೆಗೆ ಪ್ರತಿಯಾಗಿ ಅವುಗಳ ಪೈಕಿ ಯಾವುದನ್ನೂ ನೀವು ಅನುಸರಿಸುವಂತಿಲ್ಲ. ಈಗ ನೀವು

ಮಾಡಬೇಕಾದ ಕೆಲಸವೇನೆಂದರೆ ಎಲ್ಲವನ್ನೂ ಪವಿತ್ರ ಕುರ್‌ಆನ್ ಮತ್ತು ಪ್ರವಾದಿಚರ್ಯೆಯ ಮುಂದಿಡಬೇಕು. ಅದಕ್ಕೆ ಬದ್ಧವಾಗಿರುವುದನ್ನು ಸ್ವೀಕರಿಸಬೇಕು ಮತ್ತು ಅದಕ್ಕೆ ವಿರುದ್ಧವಾಗಿರುವುದನ್ನು ಕಿತ್ತೆಸೆಯಬೇಕು. ಅದು ಯಾರ ಮಾತು ಅಥವಾ ಯಾರ ವಿಧಾನವಾಗಿದ್ದರೂ ಸರಿಯೇ. ನಿಮ್ಮನ್ನು ಮುಸ್ಲಿಮ್ ಎಂದು ಹೇಳಿಕೊಂಡ ನಂತರ ಪವಿತ್ರ ಕುರ್‌ಆನ್ ಮತ್ತು ಪ್ರವಾದಿಚರ್ಯೆಗೆ ವಿರುದ್ಧವಾಗಿ ನಿಮ್ಮ ಅಭಿಪ್ರಾಯ, ಲೋಕರೂಢಿ ಅಥವಾ ಯಾವುದೇ ಇತರ ವ್ಯಕ್ತಿಗಳ ಮಾತು-ಕೃತಿಗೆ ಪ್ರಾಶಸ್ತ್ಯ ಕಲ್ಪಿಸುವುದು ವಿರೋಧಾಭಾಸವಾಗಿದೆ. ಯಾವ ರೀತಿ ಕುರುಡನಿಗೆ ತಾನು ಕಾಣಬಲ್ಲೆನೆಂದು ಹೇಳಿಕೊಳ್ಳಲು ಸಾಧ್ಯವಿಲ್ಲವೋ ಮೂಗಿಲ್ಲದವನು ತಾನು ಮೂಗಿರುವವನೆಂದು ಹೇಳಿಕೊಳ್ಳಲು ಸಾಧ್ಯವಿಲ್ಲವೋ ಹಾಗೆಯೇ ಒಬ್ಬ ವ್ಯಕ್ತಿ ತನ್ನೆಲ್ಲಾ ವ್ಯವಹಾರಗಳನ್ನು ಪವಿತ್ರ ಕುರ್‌ಆನ್ ಮತ್ತು ಪ್ರವಾದಿಚರ್ಯೆಗೆ ಬದ್ಧಗೊಳಿಸಲು ನಿರಾಕರಿಸಿದರೆ ಅಥವಾ ಅಲ್ಲಾಹ್ ಮತ್ತು ಪ್ರವಾದಿಗೆ ಪ್ರತಿಯಾಗಿ ತನ್ನ ಬುದ್ಧಿ, ಲೋಕರೂಢಿ ಅಥವಾ ಇತರ ಮನುಷ್ಯರ ಮಾತು-ಕೃತಿಗಳನ್ನು ಅನುಸರಿಸಿದರೆ ಅವನು ತನ್ನನ್ನು 'ಮುಸ್ಲಿಮ್' ಎಂದು ಹೇಳಿಕೊಳ್ಳುವಂತಿಲ್ಲ.

ತಾನು ಮುಸ್ಲಿಮನಾಗಿ ಇರಲು ಬಯಸದ ವ್ಯಕ್ತಿಯನ್ನು ಯಾರೂ ಮುಸ್ಲಿಮನಾಗಿರುವಂತೆ ಒತ್ತಾಯಪಡಿಸಲಾರರು. ಯಾವ ಧರ್ಮವನ್ನು ಬೇಕಾದರೂ ಅನುಸರಿಸುವ ಮತ್ತು ಯಾವ ಹೆಸರನ್ನು ಬೇಕಾದರೂ ಇಟ್ಟುಕೊಳ್ಳುವ ಅಧಿಕಾರ ಅವನಿಗಿದೆ. ಆದರೆ ಅವನು ತನ್ನನ್ನು 'ಮುಸ್ಲಿಮ್' ಎಂದು ಹೇಳಿಕೊಳ್ಳುತ್ತಾನೆಂದಾದರೆ ಇಸ್ಲಾಮಿನ ಮೇರೆಯೊಳಗಿದ್ದಾಗ ಮಾತ್ರ ಅವನು ಮುಸ್ಲಿಮನೆನಿಸಿಕೊಳ್ಳುತ್ತಾನೆ ಎಂದು ಅವನು ಚೆನ್ನಾಗಿ ತಿಳಿದುಕೊಳ್ಳಬೇಕು. ದೇವವಾಣಿ ಮತ್ತು ಪ್ರವಾದಿಚರ್ಯೆಯನ್ನು ಸತ್ಯದ ಮಾನದಂಡವೆಂದು ಭಾವಿಸುವುದು ಮತ್ತು ಅದಕ್ಕೆ ವಿರುದ್ಧವಾದ ಎಲ್ಲವನ್ನೂ ಮಿಥ್ಯವೆಂದು ಭಾವಿಸುವುದು ಇಸ್ಲಾಮಿನ ಮೇರೆಯಾಗಿದೆ. ಈ ಮೇರೆಯೊಳಗಿರುವವನೇ ವಾಸ್ತವದಲ್ಲಿ ಮುಸ್ಲಿಮನಾಗಿದ್ದಾನೆ. ಅದರಿಂದ ಹೊರಗೆ ಪಾದ ಬೆಳೆಸುತ್ತಲೇ ಅವನು ಇಸ್ಲಾಮಿನಿಂದ ಹೊರಗಾಗುತ್ತಾನೆ. ಅನಂತರವೂ ಅವನು ತನ್ನನ್ನು 'ಮುಸ್ಲಿಮ್' ಎಂದು ಭಾವಿಸುತ್ತಾನೆ ಮತ್ತು ಹೇಳಿಕೊಳ್ಳುತ್ತಾನೆಂದಾದರೆ ಅವನು ತನಗೂ ಲೋಕಕ್ಕೂ ವಂಚನೆ ಮಾಡುತ್ತಿದ್ದಾನೆಂದರ್ಥ.

وَمَنْ لَّمْ يَحْكُمْ بِمَآ اَنْزَلَ اللّٰهُ فَاُولٰٓئِكَ هُمُ الْكٰفِرُوْنَ ﴿٤٤﴾

"ಅಲ್ಲಾಹನು ಅವತೀರ್ಣಗೊಳಿಸಿದ ಕಾನೂನಿನ ಪ್ರಕಾರ ತೀರ್ಮಾನ ಕೈಗೊಳ್ಳದವರೇ ಸತ್ಯನಿಷೇಧಿಗಳು." (ಪವಿತ್ರ ಕುರ್‌ಆನ್, 5:44)

○

ಪವಿತ್ರ ವಚನದ ತಾತ್ಪರ್ಯ

ಮುಸ್ಲಿಮ್ ಬಂಧುಗಳೇ!

ಮನುಷ್ಯನು ಪವಿತ್ರ ವಚನವೊಂದನ್ನು ಉಚ್ಚರಿಸುವ ಮೂಲಕ ಇಸ್ಲಾಮಿನ ವರ್ತುಲದೊಳಗೆ ಪ್ರವೇಶಿಸುತ್ತಾನೆಂಬುದು ನಿಮಗೆ ತಿಳಿದಿದೆ. ಅದು ಸುದೀರ್ಘವಾದ ವಚನವೇನಲ್ಲ. ಅದರಲ್ಲಿರುವುದು ಕೇವಲ ಕೆಲವು ಪದಗಳು.

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

"ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾಹ್." ಈ ಪದಗಳನ್ನು ನಾಲಗೆಯಿಂದ ಉಚ್ಚರಿಸುತ್ತಲೇ ಮಾನವ ಎಲ್ಲಿಂದೆಲ್ಲಿಗೋ ತಲಪಿಬಿಡುತ್ತಾನೆ. ಮೊದಲು ಅವನು ದೇವಧಿಕ್ಕಾರಿಯಾಗಿದ್ದ, ಈಗವನು ಮುಸ್ಲಿಮನಾಗಿದ್ದಾನೆ, ಮೊದಲು ಅಶುದ್ಧನಾಗಿದ್ದ, ಈಗ ಪರಿಶುದ್ಧನಾಗಿದ್ದಾನೆ. ಮೊದಲು ದೇವಕ್ರೋಧಕ್ಕೆ ಅರ್ಹನಾಗಿದ್ದ, ಈಗ ದೇವನಿಗೆ ಪ್ರಿಯನಾದವನಾಗಿದ್ದಾನೆ. ಮೊದಲು ನರಕಕ್ಕೆ ಹೋಗುವವನಾಗಿದ್ದ ಅವನಿಗೆ ಈಗ ಸ್ವರ್ಗದ ಬಾಗಿಲು ತೆರೆದಿದೆ. ಇಷ್ಟು ಮಾತ್ರವಲ್ಲ, ಈ ವಚನದಿಂದಾಗಿ ಮನುಷ್ಯ-ಮನುಷ್ಯರ ನಡುವೆ ದೊಡ್ಡ ವ್ಯತ್ಯಾಸ ತಲೆದೋರುತ್ತದೆ. ಈ ವಚನವನ್ನು ಪಠಿಸುವವರೆಲ್ಲರೂ ಒಂದು ಸಮುದಾಯ ವಾಗಿ ಮಾರ್ಪಟ್ಟರೆ, ವಚನವನ್ನು ಪಠಿಸದವರು ಇನ್ನೊಂದು ಸಮುದಾಯವಾಗುತ್ತಾರೆ. ತಂದೆ ವಚನವನ್ನು ಪಠಿಸುವವನಾಗಿದ್ದು ಮಗ ಅದನ್ನು ನಿರಾಕರಿಸುವವನಾಗಿದ್ದರೆ ತಂದೆ, ಮಗನ ಸಂಬಂಧ ಉಳಿಯುವುದಿಲ್ಲ. ತಂದೆಯ ಆಸ್ತಿಯಿಂದ ಆ ಮಗನಿಗೆ ಪಾಲು ದೊರೆಯುವುದಿಲ್ಲ. ಮಾತೆ ಮತ್ತು ಸೋದರಿಯರೂ ಅವನೊಂದಿಗೆ ಪರ್ದಾ* ಪಾಲಿಸುವರು. ವಚನ ಪಠಿಸಿರುವ ಪರಕೀಯನೊಬ್ಬ ಆ ಮನೆಯ ಪುತ್ರಿಯನ್ನು ವರಿಸಿದರೆ ಅವನ ಸಂತಾನ ಆ ಮನೆಯ ಆಸ್ತಿಯ ಪಾಲನ್ನು ಪಡೆಯುವರು. ಆದರೆ ವಚನ ಪಠಿಸದ ಮಾತ್ರಕ್ಕಾಗಿ ಸ್ವಂತ ಮಗನೂ ಸಂಪೂರ್ಣ ವಾಗಿ ಪರಕೀಯನಾಗಿ ಬಿಡುವನು. ಅರ್ಥಾತ್ ಈ ವಚನ ಪರಕೀಯರನ್ನು ಪರಸ್ಪರ ಸೇರಿಸಿ

---

*ದೇವಧಿಕ್ಕಾರಿಯಾದ ಮಗನೊಂದಿಗೆ ತಾಯಿ ಮತ್ತು ದೇವಧಿಕ್ಕಾರಿಯಾದ ಸೋದರನೊಂದಿಗೆ ಸೋದರಿ ಪರ್ದಾ ಪಾಲಿಸಬೇಕೆಂದು ಶರೀಅತ್ ಆದೇಶಿಸುವುದಿಲ್ಲ. ಆದರೆ ಸತ್ಯವಿಶ್ವಾಸದಿಂದ ಅಂಕುರಿಸುವ ಸ್ವಾಭಿಮಾನ ಹೊಂದಿರುವ ಮಹಿಳೆಯರು ಅಂತಹ ಸೋದರ ಮತ್ತು ಪುತ್ರರ ಮುಖವನ್ನು ನೋಡಲೂ ವಸ್ತುತಃ ಇಷ್ಟಪಡಲಾರರು.

ಬಿಡುತ್ತದೆ ಮತ್ತು ತನ್ನವರನ್ನು ಪರಸ್ಪರ ಬೇರ್ಪಡಿಸುತ್ತದೆ. ಈ ವಚನ ಎಷ್ಟು ಪ್ರಬಲವಾದು ದೆಂದರೆ ಒಡಹುಟ್ಟು ಮತ್ತು ರಕ್ತದ ಸಂಬಂಧವೂ ಅದನ್ನು ಮೀರಲಾರದು.

ಇಷ್ಟು ದೊಡ್ಡ ಅಂತರವೇಕೆ?

ಮನುಷ್ಯ-ಮನುಷ್ಯರ ನಡುವೆ ಆಗುವ ಈ ಮಹಾ ಪರಿವರ್ತನೆಗೆ ಏನು ಕಾರಣ? ಸ್ವಲ್ಪ ಆಲೋಚಿಸಿ ನೋಡಿ, ಆ ವಚನದಲ್ಲಿ ಇರುವುದಾದರೂ ಏನು? ಕೆಲವು ಪದಗಳಷ್ಟೇ ಅಲ್ಲವೇ? ಅಲಿಫ್, ಲಾಮ್, ಹ, ಮೀಮ್, ವಾವ್, ಸೀನ್ ಹಾಗೂ ಅರಬಿ ವರ್ಣಾಕ್ಷರದ ಇನ್ನಿತರ ಕೆಲವು ಪದಗಳು ಅದರಲ್ಲಿವೆ. ಈ ಪದಗಳನ್ನು ಜೋಡಿಸಿ ಬಾಯಿಯಿಂದ ಉಚ್ಚರಿಸಿದ ಮಾತ್ರಕ್ಕೆ ಮನುಷ್ಯನ ಅದೃಷ್ಟವೇ ಬದಲಾಗಿ ಬಿಡುವುದು ಯಾವ ಮಾಯೆ? ಕೇವಲ ಈ ಕಾರಣಕ್ಕಾಗಿ ಮನುಷ್ಯರ ನಡುವೆ ಆಕಾಶ-ಭೂಮಿಗಳ ಅಂತರ ನಿರ್ಮಾಣಗೊಳ್ಳುವುದು ಹೇಗೆ? ಸೋದರರೇ! ನೀವು ಸ್ವಲ್ಪ ವಿವೇಚಿಸುವುದಾದರೆ, ಕೇವಲ ಬಾಯ್ತೆರೆದು, ನಾಲಗೆಯನ್ನು ಅಲುಗಾಡಿಸಿ ಕೆಲವು ಶಬ್ದಗಳನ್ನು ಉಚ್ಚರಿಸುವುದರಿಂದ ಇಂತಹ ಪ್ರಭಾವ ಉಂಟಾಗಲು ಸಾಧ್ಯವಿಲ್ಲವೆಂದು ನಿಮ್ಮ ಬುದ್ಧಿ ಹೇಳುತ್ತದೆ. ಮೂರ್ತಿಪೂಜಕರಾದ ಬಹುದೇವಾರಾಧಕರು ಹಾಗೆ ಭಾವಿಸುತ್ತಾರೆ ನಿಜ. ಕೇವಲ ಮಂತ್ರೋಚ್ಚಾರ ಮಾಡಿದ ಮಾತ್ರಕ್ಕೆ ಪರ್ವತವು ಕಂಪಿಸುವುದು, ಭೂಮಿ ಹೋಳಾಗು ವುದು, ಚಿಲುಮೆ ಪುಟಿದೇಳುವುದು ಎಂಬುದು ಅವರ ನಂಬಿಕೆ. ಆ ಮಂತ್ರದ ಅರ್ಥ ಯಾರಿಗೂ ತಿಳಿದಿಲ್ಲದಿದ್ದರೂ ಸರಿ. ಏಕೆಂದರೆ ಶಬ್ದದಲ್ಲೇ ಎಲ್ಲಾ ವಿಧದ ಪ್ರಭಾವ ಶಕ್ತಿ ಇದೆ, ಅದು ನಾಲಗೆಯಿಂದ ಹೊರಡುತ್ತಲೇ ಮಾಯಾಜಾಲದ ಕವಾಟ ತೆರೆದುಕೊಳ್ಳುತ್ತದೆಂಬುದು ಅವರ ನಂಬಿಕೆ. ಆದರೆ ಇಸ್ಲಾಮಿನಲ್ಲಿ ಹಾಗಿಲ್ಲ. ಇಲ್ಲಿ ತಾತ್ಪರ್ಯ ಅತ್ಯಂತ ಮಹತ್ವಪೂರ್ಣ ವಾದುದು. ಶಬ್ದದ ಪೂರ್ಣ ಪ್ರಭಾವ ತಾತ್ಪರ್ಯದಲ್ಲೇ ಅಡಕವಾಗಿದೆ. ತಾತ್ಪರ್ಯವಿಲ್ಲ ದಿದ್ದರೆ, ಅದು ಮನದಂತರಾಳಕ್ಕೆ ಇಳಿಯದಿದ್ದರೆ, ಅದರ ಪ್ರಭಾವದಿಂದಾಗಿ ನಿಮ್ಮ ಚಿಂತನೆ, ಚಾರಿತ್ರ್ಯ ಮತ್ತು ವರ್ತನೆ ಬದಲಾಗದಿದ್ದರೆ ಕೇವಲ ಪದಗಳ ಉಚ್ಚಾರದಿಂದ ಯಾವ ಪ್ರಭಾವ ಉಂಟಾದೀತು?

ಇದನ್ನು ಸರಳವಾದ ಒಂದು ಉದಾಹರಣೆಯೊಂದಿಗೆ ನಾನು ನಿಮಗೆ ತಿಳಿಸ ಬಯಸುತ್ತೇನೆ. ನಿಮಗೆ ಚಳಿಯಾಗುತ್ತಿದೆ ಎಂದು ಭಾವಿಸಿ. ನೀವು ನಾಲಗೆಯಿಂದ - "ಹೊದಿಕೆ, ಹೊದಿಕೆ" ಎಂದು ಕೂಗಿದರೆ ಚಳಿ ದೂರವಾಗಲಾರದು. ನೀವು ಇಡೀ ರಾತ್ರಿ ಒಂದು ಲಕ್ಷ ಬಾರಿ 'ಹೊದಿಕೆ' ಎಂಬ ಜಪ ಮಾಡಿದರೂ ಸರಿ, ಅದಕ್ಕೆ ಪ್ರತಿಯಾಗಿ ಹತ್ತಿ ತುಂಬಿದ ಹೊದಿಕೆಯನ್ನು ಹೊದ್ದುಕೊಂಡರೆ ನಿಮ್ಮ ಛಳಿ ನಿಂತು ಬಿಡುತ್ತದೆ. ನಿಮಗೆ ದಾಹವಾಗುತ್ತದೆ ಎಂದು ಭಾವಿಸಿಕೊಳ್ಳಿ. ನೀವು ಬೆಳಗ್ಗಿನಿಂದ ರಾತ್ರಿಯ ತನಕ 'ನೀರು, ನೀರು' ಎಂದು ಎಷ್ಟು ಕಿರುಚಿದರೂ ನಿಮ್ಮ ನೀರಡಿಕೆ ತಣಿಯಲಾರದು. ಅದಕ್ಕೆ ಬದಲು ಒಂದು ಗುಟುಕು ನೀರನ್ನು ಕುಡಿದಾಗ ನಿಮ್ಮ ಒಡಲಿನ ದಾಹದ ಕಿಚ್ಚು ಆರುವುದು. ನಿಮಗೆ ಚಳಿಜ್ವರ ಬಾಧಿಸಿತೆಂದಿಟ್ಟುಕೊಳ್ಳಿ. ಆಗ ನೀವು "ಕಷಾಯ, ಕಷಾಯ" ಎಂಬ ಜಪ ಮಾಡತೊಡಗಿದರೆ ಚಳಿಜ್ವರ ಕಡಿಮೆ ಯಾಗಲಾರದು. ಕಷಾಯ ಮಾಡಿ ಕುಡಿದರೆ ಜ್ವರ ಮಾಯವಾಗುತ್ತದೆ. ಪವಿತ್ರ ವಚನದ ಸ್ಥಿತಿಯೂ ಹಾಗೆಯೇ. ಕೇವಲ ನಾಲ್ಕಾರು

ಅಕ್ಷರಗಳನ್ನು ಉಚ್ಚರಿಸಿ ಬಿಟ್ಟ ಮಾತ್ರಕ್ಕೆ ವ್ಯಕ್ತಿ ಮುಸ್ಲಿಮೇತರನಿಂದ ಮುಸ್ಲಿಮ್, ಅಶುದ್ಧದಿಂದ ಶುದ್ಧಿಯುಳ್ಳವನು, ಶಪಿತಾವಸ್ಥೆಯಿಂದ ಪ್ರಿಯಕರ ಮತ್ತು ನರಕಕ್ಕೆ ಹೋಗುವವನು ಸ್ವರ್ಗಕ್ಕೆ ಹೋಗುವವನಾಗಿ ಮಾರ್ಪಡುವುದಿಲ್ಲ. ಮಾರ್ಪಾಟು ಆಗಬೇಕಾದರೆ ಮೊದಲು ಆ ವಚನದ ಅರ್ಥವರಿಯಬೇಕು, ಅನಂತರ ಅದು ನಿಮ್ಮ ಮನದಂತರಾಳಕ್ಕೆ ಇಳಿಯಬೇಕು. ಅರ್ಥವರಿತು ಆ ವಚನವನ್ನು ನಾಲಗೆಯಿಂದ ಹೊರಡಿಸಿದಾಗ ತಾನು ದೇವನ ಮತ್ತು ಸಮಸ್ತ ಲೋಕದ ಮುಂದೆ ಯಾವುದರ ಕರಾರು ಮಾಡುತ್ತಿದ್ದೇನೆ ಮತ್ತು ಅದರಿಂದ ತಾನು ಯಾವ ಮಹತ್ತರ ಕರ್ತವ್ಯಗಳಿಗೆ ಹಕ್ಕುದಾರ ನಾಗುವೆನು ಎಂಬುದರ ಸರಿಯಾದ ಪರಿಜ್ಞಾನ ನಿಮಗಿರಬೇಕು. ಈ ಭಾವನೆಯೊಂದಿಗೆ ನೀವು ಪವಿತ್ರ ವಚನವನ್ನು ಪಠಿಸುವುದರ ಜತೆಗೆ ನಿಮ್ಮ ಚಿಂತನೆ ಮತ್ತು ಸಂಪೂರ್ಣ ಜೀವನದ ಮೇಲೆ ಅದು ಹಿಡಿತ ಸಾಧಿಸಬೇಕು. ಅನಂತರ ಆ ವಚನಕ್ಕೆ ವಿರುದ್ಧವಾದ ಯಾವುದೂ ನಿಮ್ಮ ಹೃನ್ಮನದಲ್ಲಿ ಸುಳಿಯಬಾರದು. ಈ ವಚನಕ್ಕೆ ವಿರುದ್ಧವಾದುದೆಲ್ಲವೂ ಮಿಥ್ಯ, ಈ ವಚನ ಮಾತ್ರವೇ ಸತ್ಯವೆಂದು ನೀವು ತೀರ್ಮಾನಿಸಬೇಕು. ಜೀವನದ ಎಲ್ಲಾ ವ್ಯವಹಾರಗಳಲ್ಲೂ ಈ ವಚನವೇ ನಿಮ್ಮ ಮಾರ್ಗದರ್ಶಿಯಾಗಿರಬೇಕು. ಈ ವಚನದ ಉದ್ಘೋಷ ಮಾಡಿದ ನಂತರ ನೀವು ಸತ್ಯನಿಷೇಧಿಗಳಂತೆ ಮನಬಂದಂತೆ ಮಾಡುವ ಸ್ವಾತಂತ್ರ್ಯ ಹೊಂದಿರುವುದಿಲ್ಲ. ನೀವು ಈ ವಚನಕ್ಕೆ ಕಂಕಣ ಬದ್ಧರಾಗಿರಬೇಕು. ಅದು ಯಾವುದನ್ನು ಆದೇಶಿಸುತ್ತದೋ ಅದನ್ನು ಮಾಡಬೇಕು, ಯಾವುದರಿಂದ ತಡೆಯುತ್ತದೋ ಅದನ್ನು ತೊರೆಯಬೇಕು. ಹೀಗೆ ಪವಿತ್ರ ವಚನವನ್ನು ಪಠಿಸುವ ಮೂಲಕವೇ ವ್ಯಕ್ತಿ ಮುಸ್ಲಿಮನಾಗುತ್ತಾನೆ. ಹೀಗೆ ಪವಿತ್ರ ವಚನವನ್ನು ಪಠಿಸುವುದರಿಂದಲೇ ವ್ಯಕ್ತಿಗಳ ನಡುವೆ ಪೂರ್ವೋಕ್ತ ರೀತಿಯಲ್ಲಿ ಮಹಾ ಅಂತರ ತಲೆದೋರುತ್ತದೆ.

ಪವಿತ್ರ ವಚನದ ಅರ್ಥವೇನು?

ಬನ್ನಿ! ಪವಿತ್ರ ವಚನದ ಅರ್ಥವೇನು, ಅದನ್ನು ಪಠಿಸುವ ಮೂಲಕ ವ್ಯಕ್ತಿ ಯಾವುದರ ಉದ್ಘೋಷ ಮಾಡುತ್ತಾನೆ. ಆ ಮೂಲಕ ಅವನು ಯಾವುದಕ್ಕೆ ಬದ್ಧನಾಗುತ್ತಾನೆ ಎಂಬುದನ್ನು ನೋಡೋಣ.

'ಅಲ್ಲಾಹನ ಹೊರತು ಆರಾಧ್ಯನಿಲ್ಲ ಮತ್ತು ಪ್ರವಾದಿ ಮುಹಮ್ಮದ್(ಸ) ಅಲ್ಲಾಹನ ಸಂದೇಶವಾಹಕರಾಗಿದ್ದಾರೆ' ಎಂಬುದು ಆ ವಚನದ ಅರ್ಥವಾಗಿದೆ. ವಚನದಲ್ಲಿರುವ 'ಇಲಾಹ್' (ಆರಾಧ್ಯ) ಎಂಬ ಶಬ್ದದ ಅರ್ಥ 'ದೇವ' ಎಂದಾಗಿದೆ. ದೇವನೆಂದರೆ ಒಡೆಯ, ಆಜ್ಞಾಧೀಶ, ಸೃಷ್ಟಿಕರ್ತ, ಪರಿಪಾಲಕ, ಪ್ರಾರ್ಥನೆಗಳನ್ನು ಕೇಳುವ ಮತ್ತು ಸ್ವೀಕರಿಸುವವನು ಹಾಗೂ ಆರಾಧನೆಗೆ ಅರ್ಹನಾದವನು ಎಂದಾಗಿದೆ. ಹಾಗಾದರೆ 'ಲಾ ಇಲಾಹ ಇಲ್ಲಲ್ಲಾಹ್...' ಎಂದು ನೀವು ಪಠಿಸುವುದರ ಜತೆಗೆ ಈ ಲೋಕ, ದೇವನ ವಿನಾ ಸೃಷ್ಟಿಯಾಗಿಲ್ಲ, ಅದಕ್ಕೆ ಅನೇಕ ದೇವರುಗಳೂ ಇಲ್ಲ, ವಾಸ್ತವದಲ್ಲಿ ಲೋಕದೊಡೆಯನೊಬ್ಬನಿದ್ದಾನೆ, ಅವನು ಏಕನಾಗಿದ್ದಾನೆ, ಅವನ ಹೊರತು ಬೇರಾರಿಗೂ ಪ್ರಭುತ್ವದಲ್ಲಿ ಪಾಲಿಲ್ಲ ಎಂದು ನೀವು ಘೋಷಿಸುತ್ತೀರಿ. ಆ

ವಚನದ ಉಚ್ಚಾರದೊಂದಿಗೆ ನೀವು ಮಾಡುವ ಇನ್ನೊಂದು ಘೋಷಣೆ ಎಂದರೆ ಆ ಒಬ್ಬ ದೇವನೇ ನಿಮ್ಮ ಮತ್ತು ಸಮಸ್ತಲೋಕದ ಒಡೆಯನಾಗಿದ್ದಾನೆ. ನೀವು, ನಿಮ್ಮ ಸರ್ವಸ್ವ ಮತ್ತು ಲೋಕದ ಎಲ್ಲ ವಸ್ತುಗಳೂ ಅವನಿಗೆ ಸೇರಿದ್ದಾಗಿದೆ. ಅವನೇ ಸೃಷ್ಟಿಕರ್ತ ಮತ್ತು ಅನ್ನದಾತ. ಜೀವನ ಮರಣಗಳು ಅವನ ಕೈಯಲ್ಲೇ ಇವೆ. ಆರಾಮ ಮತ್ತು ಸಂಕಷ್ಟಗಳನ್ನೂ ಅವನೇ ಕೊಡುತ್ತಾನೆ. ಯಾರಿಗಾದರೂ ಏನನ್ನಾದರೂ ದಯಪಾಲಿಸುವವನು ಮತ್ತು ಕಿತ್ತುಕೊಳ್ಳುವವನೂ ಆತನೇ. ಅವನನ್ನೇ ಭಯಪಡಬೇಕಾಗಿದೆ. ಅವನಿಂದಲೇ ಯಾಚಿಸಬೇಕಾಗಿದೆ. ಅವನ ಮುಂದೆಯೇ ಶಿರಬಾಗಬೇಕಾಗಿದೆ. ಆರಾಧನೆ ಮತ್ತು ದಾಸ್ಯ ಅವನಿಗೆ ಮಾತ್ರ ಸಲ್ಲಬೇಕಾಗಿದೆ. ಅವನ ಹೊರತು ನಾವು ಬೇರೆ ಯಾರ ದಾಸರೂ ಅಲ್ಲ, ಅವನ ಹೊರತು ನಮಗೆ ಬೇರೆ ಒಡೆಯರಾಗಲಿ, ಆಜ್ಞಾಧೀಶರಾಗಲಿ ಇಲ್ಲ, ಅವನ ಅಪ್ಪಣೆಯನ್ನು ಪಾಲಿಸುವ ಮತ್ತು ಅವನ ಕಟ್ಟಳೆಗಳನ್ನು ಅನುಸರಿಸುವುದು ನಮ್ಮ ಕರ್ತವ್ಯ.

ಅಲ್ಲಾಹನೊಂದಿಗೆ ಮಾಡುವ ಪ್ರತಿಜ್ಞೆ

'ಲಾ ಇಲಾಹ ಇಲ್ಲಲ್ಲಾಹ್' ಎಂದು ಹೇಳುವುದರೊಂದಿಗೆ ಈ ಪ್ರತಿಜ್ಞೆಯನ್ನು ನೀವು ಅಲ್ಲಾಹನೊಂದಿಗೆ ಮಾಡುತ್ತೀರಿ. ಅನಂತರ ಇಡೀ ಜಗತ್ತನ್ನೇ ಸಾಕ್ಷ್ಯ ನಿಲ್ಲಿಸುತ್ತೀರಿ. ಅದರ ಉಲ್ಲಂಘನೆ ಮಾಡಿದರೆ ನಿಮ್ಮ ನಾಲಗೆ, ನಿಮ್ಮ ಕೈಕಾಲುಗಳು, ನಿಮ್ಮ ಮೈಯ ಪ್ರತಿಯೊಂದು ರೋಮ ಮತ್ತು ಆಕಾಶ-ಭೂಮಿಗಳಲ್ಲಿರುವ ಕಣಕಣವೂ ಅಲ್ಲಾಹನ ನ್ಯಾಯಾಲಯದಲ್ಲಿ ನಿಮ್ಮ ವಿರುದ್ಧ ಸಾಕ್ಷ್ಯ ಹೇಳುವುದು. ಅಲ್ಲಿ ನೀವು ಎಷ್ಟು ಅಸಹಾಯಕರಾಗಿ ನಿಂತಿರುವಿರೆಂದರೆ ನಿಮ್ಮ ಪರವಾಗಿ ಸಾಕ್ಷ್ಯ ಹೇಳುವವರು ಅಲ್ಲಿ ಯಾರೂ ಇರಲಾರರು. ನೀವೇ ಏಕೆ ಲೋಕದ-ನ್ಯಾಯಾಲಯಗಳಲ್ಲಿ ಕಾನೂನನ್ನು ತಿರುಚಿ ಮುರುಚಿ ಉಪಯೋಗಿಸುತ್ತಿದ್ದ ನ್ಯಾಯವಾದಿ ಮತ್ತು ನ್ಯಾಯಮೂರ್ತಿಗಳೂ ಅಲ್ಲಿ ಅಸಹಾಯಕ ಸ್ಥಿತಿಯಲ್ಲಿರುವರು. ಆ ನ್ಯಾಯಾಲಯದಲ್ಲಿ ನೀವು ಸುಳ್ಳು ಸಾಕ್ಷ್ಯ ಅಥವಾ ಕೃತಕ ದಸ್ತಾವೇಜುಗಳನ್ನು ಒದಗಿಸಿ ಜಾರಿಕೊಳ್ಳುವಂತಿಲ್ಲ. ಲೋಕದ ಆರಕ್ಷಕರಿಂದ ನೀವು ನಿಮ್ಮ ಅಪರಾಧವನ್ನು ಮರೆಮಾಚಬಹುದು. ಆದರೆ ದೇವನ ಆರಕ್ಷಕರಿಂದ ಹಾಗೆ ಮಾಡಲು ಸಾಧ್ಯವಿಲ್ಲ. ಲೋಕದ ಪೊಲೀಸರು ಲಂಚ ತಿನ್ನಬಹುದು. ಆದರೆ ದೇವನ ಪೊಲೀಸರು ಲಂಚ ತಿನ್ನಲಾರರು. ಲೋಕದ ಸಾಕ್ಷಿಗಳು ಸುಳ್ಳಾಡಬಹುದು. ಆದರೆ ಅಲ್ಲಾಹನ ಸಾಕ್ಷಿಗಳು ಸತ್ಯವನ್ನೇ ನುಡಿಯುತ್ತಾರೆ. ಲೋಕದ ಆಡಳಿತಾರೂಢರು ಅನ್ಯಾಯವೆಸಗಬಹುದು. ಆದರೆ ಲೋಕಾಡಳಿತವನ್ನು ನಿರ್ವಹಿಸುತ್ತಿರುವ ಅಲ್ಲಾಹನೆಂದೂ ಅನ್ಯಾಯ ಮಾಡುವುದಿಲ್ಲ. ದೇವನು ವಿಧಿಸುವ ಸೆರೆಮನೆ ವಾಸವನ್ನು ತಪ್ಪಿಸಿಕೊಳ್ಳಲಿಕ್ಕೂ ಯಾರಿಂದಲೂ ಸಾಧ್ಯವಿಲ್ಲ. ಆದ್ದರಿಂದ ದೇವನ ಮುಂದೆ ಸುಳ್ಳು ಪ್ರತಿಜ್ಞೆ ಮಾಡುವುದು ಮಹಾ ಮೂರ್ಖತನವಾಗಿದೆ. ಆದ್ದರಿಂದ ಪ್ರತಿಜ್ಞೆ ಮಾಡುವಾಗ ಚೆನ್ನಾಗಿ ಆಲೋಚಿಸಿ, ಅನಂತರ ಅದನ್ನು ಈಡೇರಿಸಿ. ಸುಮ್ಮನೆ ನಾಲಗೆಯ ಮೂಲಕ ಪ್ರತಿಜ್ಞೆ ಕೈಗೊಳ್ಳಲು ನಿಮ್ಮನ್ನು ಯಾರೂ ಒತ್ತಾಯಿಸುವುದಿಲ್ಲ. ಏಕೆಂದರೆ ಕೇವಲ ಬಾಯಿಯ ಪ್ರತಿಜ್ಞೆ ಯಾವ ಪ್ರಯೋಜನಕ್ಕೂ ಬರಲಾರದು.

ಪ್ರವಾದಿವರ್ಯರನ್ನು(ಸ) ಅನುಸರಿಸುವ ಪ್ರತಿಜ್ಞೆ

'ಲಾ ಇಲಾಹ ಇಲ್ಲಲ್ಲಾಹ್' ಹೇಳಿದ ನಂತರ ನೀವು 'ಮುಹಮ್ಮದರ್ರಸೂಲುಲ್ಲಾಹ' ಎಂದೂ ಹೇಳುತ್ತೀರಿ- ಅರ್ಥಾತ್ ದೇವನು ತನ್ನ ಕಾನೂನನ್ನು ನಿಮ್ಮ ಬಳಿಗೆ ಕಳುಹಿಸಲ ನೇಮಿಸಿದ ಪ್ರವಾದಿ, ಮುಹಮ್ಮದ್‌ರೇ(ಸ) ಆಗಿದ್ದಾರೆಂದು ನೀವು ಒಪ್ಪಿಕೊಳ್ಳುತ್ತೀರಿ ದೇವನನ್ನು ನಿಮ್ಮ ಪ್ರಭು ಮತ್ತು ಪರಿಪಾಲಕನೆಂದು ಅರಿತುಕೊಂಡ ನಂತರ ಆ ಪ್ರಭುವಿ ಬೋಧನೆ ಏನೆಂದು ಅರಿತುಕೊಳ್ಳುವುದು ಅವಶ್ಯಕವಾಗಿದೆ. ಯಾವ ಕೆಲಸಗಳಿಂದ ಅವನ ಸಂತುಷ್ಟನಾಗುತ್ತಾನೆ ಮತ್ತು ಯಾವುದರಿಂದ ಅವನು ಕೋಪಗೊಳ್ಳುತ್ತಾನೆ? ಯಾ ನಿಯಮಗಳ ಪಾಲನೆ ಮಾಡಿದರೆ ಅವನು ನಮ್ಮನ್ನು ಕ್ಷಮಿಸುತ್ತಾನೆ ಮತ್ತು ಯಾವುದರ ವಿರು ನಡೆಯುವುದರಿಂದ ಅವನು ನಮ್ಮನ್ನು ಶಿಕ್ಷಿಸುತ್ತಾನೆ? ಈ ಎಲ್ಲಾ ವಿಷಯಗಳನ್ನು ಮನವರಿ ಮಾಡಿಸಲಿಕ್ಕಾಗಿ ಅಲ್ಲಾಹನು ಮುಹಮ್ಮದ್‌ರನ್ನು(ಸ) ಪ್ರವಾದಿಯಾಗಿ ನೇಮಿಸಿದನು. ಅವ ಮೂಲಕ ತನ್ನ ಗ್ರಂಥವನ್ನು ನಮ್ಮೆಡೆಗೆ ಕಳುಹಿಸಿದನು. ಪ್ರವಾದಿವರ್ಯರು(ಸ) ದೇವ ಅಪ್ಪಣೆಯಂತೆ ಜೀವನ ನಡೆಸುವ ಮೂಲಕ ಮುಸ್ಲಿಮನ ಜೀವನ ಹೇಗಿರಬೇಕೆಂದು ನಮ ತೋರಿಸಿಕೊಟ್ಟರು. ಒಟ್ಟಿನಲ್ಲಿ 'ಮುಹಮ್ಮದರ್ರಸೂಲುಲ್ಲಾಹ್' ಎಂದು ಹೇಳುವ ಮೂಲ ಪ್ರವಾದಿವರ್ಯರು(ಸ) ತೋರಿಸಿದ ಸಂಹಿತೆ ಮತ್ತು ಜೀವನ ವಿಧಾನವನ್ನೇ ಅನುಸರಿಸುತ್ತೀರಿ ಅದಕ್ಕೆ ವಿರುದ್ಧವಾದ ಕಾನೂನುಗಳನ್ನು ಶಪಿಸುತ್ತೀರಿ ಎಂದು ನೀವು ಕರಾರು ಮಾಡಿದಂತಾ ತ್ತದೆ. ಈ ಕರಾರಿನ ನಂತರ ನೀವು ಪ್ರವಾದಿವರ್ಯರು(ಸ) ತಂದ ಸಂಹಿತೆಯನ್ನು ಬಿಟ ಲೋಕದ ಕಾನೂನನ್ನು ಅನುಸರಿಸತೊಡಗಿದರೆ ನಿಮಗಿಂತ ಮಿಗಿಲಾದ ಸುಳ್ಳರು ಮತ್ತು ಅವಿಶ್ವಾ ಗಳು ಬೇರೆ ಯಾರೂ ಇರಲಾರರು. ಏಕೆಂದರೆ ಪ್ರವಾದಿವರ್ಯರು(ಸ) ತಂದ ಸಂಹಿ ಮಾತ್ರವೇ ಸತ್ಯವಾಗಿದೆ ಮತ್ತು ನಾವು ಅದನ್ನೇ ಪಾಲಿಸುತ್ತೇವೆ ಎಂದು ಪ್ರತಿಜ್ಞೆ ಮಾಡು ಮೂಲಕವೇ ನೀವು ಇಸ್ಲಾಮಿನೊಳಗೆ ಪ್ರವೇಶಿಸುತ್ತೀರಿ. ಈ ಪ್ರತಿಜ್ಞೆಯ ಆಧಾರದಲ್ಲೇ ನೀ ಮುಸ್ಲಿಮರ ಸೋದರರಾಗುತ್ತೀರಿ, ಅದರ ನಿಮಿತ್ತವೇ ನೀವು ತಂದೆಯ ಆಸ್ತಿಯನ ಪಡೆಯುತ್ತೀರಿ, ಅದರಿಂದಾಗಿಯೇ ಮುಸ್ಲಿಮ್ ಸ್ತ್ರೀಯೊಂದಿಗೆ ನಿಮ್ಮ ವಿವಾಹ ಏರ್ಪಡುತ್ತ ಅದರಿಂದಾಗಿಯೇ ಮುಸ್ಲಿಮರೆಲ್ಲರೂ ನಿಮ್ಮ ಸಹಾಯಕರಾಗುವ ಹಕ್ಕನ್ನು ನೀವು ಪಡೆಯುತ್ತೀ ಅದರಿಂದಾಗಿ ಅವರು ನಿಮಗೆ 'ಝಕಾತ್' ಕೊಡಲು ಮತ್ತು ನಿಮ್ಮ ಪ್ರಾಣ-ಮಾನ ಮತ ಸೊತ್ತು-ವಿತ್ತಗಳ ರಕ್ಷಣೆ ಮಾಡಲು ಹಕ್ಕುದಾರರಾಗುತ್ತಾರೆ. ಇದೆಲ್ಲದರ ಹೊರತಾಗಿ ನೀ ಪ್ರತಿಜ್ಞಾಭಂಗ ಮಾಡಿದರೆ ಅದಕ್ಕಿಂತ ಮಿಗಿಲಾದ ವಿಶ್ವಾಸ ದ್ರೋಹ ಯಾವುದಿದೆ?

لَآ اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

"ಲಾ ಇಲಾಹ ಇಲ್ಲಲ್ಲಾಹ್, ಮುಹಮ್ಮದರ್ರಸೂಲುಲ್ಲಾಹ್" ಎಂಬ ವಚನ ಅರ್ಥವನ್ನು ನೀವು ಬಲ್ಲಿರಿ ಮತ್ತು ಪ್ರಜ್ಞಾಪೂರ್ವಕ ಅದನ್ನು ಉದ್ಘೋಷಿಸುತ್ತೀರೆಂದಾದ ಯಾವ ಪರಿಸ್ಥಿತಿ ಬಂದರೂ ನೀವು ದೇವನ ಅನುಸರಣೆ ಮಾಡಬೇಕಾಗುತ್ತದೆ. ಅನುಸರ

ಮಾಡುವಂತೆ ನಿರ್ಬಂಧಿಸುವ ಯಾವುದೇ ಪೊಲೀಸ್ ಅಥವಾ ನ್ಯಾಯಾಲಯ ಈ ಲೋಕದಲ್ಲಿ ಇಲ್ಲದಿದ್ದರೂ ಸರಿಯೇ. ದೇವನ ಪೊಲೀಸರು, ಸೇನೆ, ನ್ಯಾಯಾಲಯ ಅಥವಾ ಜೈಲು ಎಲ್ಲೂ ಅಸ್ತಿತ್ವದಲ್ಲಿಲ್ಲ. ಆದ್ದರಿಂದ ದೇವನ ಶಾಸನಗಳನ್ನು ಸುಲಭವಾಗಿ ಮುರಿಯಬಹುದು. ಸರಕಾರವಾದರೋ ಪೊಲೀಸ್, ಸೇನೆ, ನ್ಯಾಯಾಲಯ ಮತ್ತು ಜೈಲನ್ನು ಹೊಂದಿದೆ. ಆದ್ದರಿಂದ ಅದರ ಕಾನೂನನ್ನು ಮುರಿಯುವುದು ಕಷ್ಟವೆಂದು ಯಾರಾದರೂ ಭಾವಿಸುವುದಾದರೆ ಅವನು "ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದರ್‍ರಸೂಲುಲ್ಲಾಹ್"ದ ಸುಳ್ಳು ಪ್ರತಿಜ್ಞೆ ಮಾಡಿದ್ದಾನೆಂದೇ ನಾನು ಹೇಳುವೆ. ಅವನು ತನಗೆ ಮಾತ್ರವಲ್ಲದೆ ದೇವನಿಗೂ ಲೋಕಕ್ಕೂ ಸಮಸ್ತ ಮುಸ್ಲಿಮರಿಗೂ ವಂಚನೆ ಮಾಡುತ್ತಾನೆ.

ಪ್ರತಿಜ್ಞೆಯ ನಂತರದ ಕರ್ತವ್ಯಗಳು

ಸಹೋದರರೇ! ಮಿತ್ರರೇ! ಪವಿತ್ರ ವಚನದ ತಾತ್ಪರ್ಯವನ್ನು ಈಗಷ್ಟೇ ನಾನು ನಿಮಗೆ ವಿವರಿಸಿದ್ದೇನೆ. ಈ ನಿಟ್ಟಿನ ಇನ್ನೊಂದು ವಿಚಾರದ ಕಡೆಗೂ ನಾನು ನಿಮ್ಮ ಗಮನ ಸೆಳೆಯ ಬಯಸುತ್ತೇನೆ.

ಅಲ್ಲಾಹನು ನಿಮ್ಮ ಮತ್ತು ಸಕಲ ವಸ್ತುಗಳ ಒಡೆಯ ಎಂದು ನೀವು ಪ್ರತಿಜ್ಞೆ ಮಾಡುತ್ತೀರಿ. ಇದರ ಅರ್ಥವೇನು? ಅದರರ್ಥ ನಿಮ್ಮ ಪ್ರಾಣ ನಿಮ್ಮದಲ್ಲ, ಅದು ದೇವನ ಸೊತ್ತಾಗಿದೆ. ನಿಮ್ಮ ಕೈ, ಕಾಲು, ಕಣ್ಣು, ಕಿವಿ ಇತ್ಯಾದಿ ದೇಹದ ಯಾವ ಅವಯವಗಳೂ ನಿಮ್ಮದಲ್ಲ. ನೀವು ಒಳುಮೆ ಮಾಡುವ ಈ ಭೂಮಿ, ನೀವು ಸೇವೆ ಮಾಡಿಸುವ ಈ ಜಾನುವಾರುಗಳು, ನೀವು ಪ್ರಯೋಜನ ಪಡೆಯುತ್ತಿರುವ ಈ ಸೊತ್ತುವಿತ್ತಗಳು ಇತ್ಯಾದಿಗಳ ಪೈಕಿ ಯಾವುದೂ ನಿಮ್ಮದಲ್ಲ. ಎಲ್ಲವೂ ದೇವನ ಸೊತ್ತಾಗಿದೆ. ದೇವನು ಅವುಗಳನ್ನು ಉಡುಗೊರೆಯ ರೂಪದಲ್ಲಿ ನಿಮಗ ನೀಡಿದ್ದಾನೆ. ಈ ಬಗ್ಗೆ ಪ್ರತಿಜ್ಞೆ ಮಾಡಿದ ನಂತರ ಈ ಪ್ರಾಣ ನನ್ನದು, ದೇಹ ನನ್ನದು, ಸಂಪತ್ತು ನನ್ನದು, ಅದು ನನ್ನದು, ಇದು ನನ್ನದು ಎಂದು ಮುಂತಾಗಿ ಹೇಳುವ ಅಧಿಕಾರ ನಿಮಗೆಲ್ಲಿದೆ? ಇನ್ನೋರ್ವನನ್ನು ಮಾಲಕನೆಂದ ಬಳಿಕ ಈ ವಸ್ತು ನಿಮಗೆ ಸೇರಿದ್ದೆಂದು ಹೇಳುವುದರಲ್ಲಿ ಅರ್ಥವಿಲ್ಲ. ನಿಜವಾಗಿಯೂ ಪ್ರಾಮಾಣಿಕ ಚಿತ್ತದಿಂದ ಈ ಎಲ್ಲಾ ವಸ್ತುಗಳು ದೇವನಿಗೆ ಸೇರಿದ್ದೆಂದು ನೀವು ನಂಬುತ್ತೀರಾದರೆ ಎರಡು ವಿಷಯಗಳು ನಿಮ್ಮ ಮೇಲೆ ಕಡ್ಡಾಯವಾಗುತ್ತದೆ. ಮೊದಲನೆಯದಾಗಿ ಮಾಲಕನು ದೇವನಾಗಿದ್ದು ಅವನು ಸೊತ್ತನ್ನು ಅಮಾನತ್ತಿನ ರೂಪದಲ್ಲಿ ನಿಮಗೆ ಕೊಟ್ಟಿರುವುದರಿಂದ ಅದರ ಉಪಯೋಗವೂ ಅವನಿಷ್ಟದಂತೆಯೇ ಆಗಬೇಕು. ಅವನಿಷ್ಟಕ್ಕೆ ವಿರುದ್ಧವಾಗಿ ಅದನ್ನು ಉಪಯೋಗಿಸುವುದು ವಂಚನೆಯಾಗಿದೆ. ಅವನಿಷ್ಟಕ್ಕೆ ವಿರುದ್ಧವಾಗಿ ನಿಮ್ಮ ಕೈಕಾಲುಗಳನ್ನು ಅಲ್ಲಾಡಿಸುವ ಅಧಿಕಾರವೂ ನಿಮಗಿಲ್ಲ. ಅವನಿಷ್ಟಕ್ಕೆ ವಿರುದ್ಧವಾಗಿ ನಿಮ್ಮ ಕಣ್ಣುಗಳ ಮೂಲಕ ನೋಡುವಂತೆಯೂ ಇಲ್ಲ. ಅವನಿಷ್ಟಕ್ಕೆ ವಿರುದ್ಧವಾದುದನ್ನು ನಿಮ್ಮ ಹೊಟ್ಟೆಗೆ ಹಾಕಿಕೊಳ್ಳುವಂತೆಯೂ ಇಲ್ಲ. ಜಮೀನು ಆಸ್ತಿಪಾಸ್ತಿಗಳ ಮೇಲೂ ನೀವು ದೇವನ ಅಭೀಷ್ಟಕ್ಕೆ ವಿರುದ್ಧವಾಗಿ ಹಕ್ಕು ಚಲಾಯಿಸುವಂತಿಲ್ಲ. ನೀವು ನಿಮ್ಮವರೆಂದು ಹೇಳಿಕೊಳ್ಳುವ

ನಿಮ್ಮ ಪತ್ನಿಯರು ಮತ್ತು ನಿಮ್ಮ ಮಕ್ಕಳು ದೇವನು ಅವರನ್ನು ನಿಮಗೆ ದಯಪಾಲಿಸಿರುವುದರಿಂದ ನಿಮ್ಮವರಾಗಿದ್ದಾರೆ. ಅವರೊಂದಿಗೂ ನೀವು ನಿಮ್ಮಿಚ್ಛೆಯಂತೆ ನಡೆಯುವಂತಿಲ್ಲ. ನಿಮ್ಮೊಡೆಯನ ಇಚ್ಛೆ ಯಂತೆಯೇ ನಡೆಯಬೇಕು. ಅದಕ್ಕೆ ವಿರುದ್ಧವಾಗಿ ನಡೆದರೆ ನೀವು ಅಕ್ರಮಿಗಳೆನಿಸಿಕೊಳ್ಳುವಿರಿ. ಇನ್ನೊಬ್ಬನ ಭೂಮಿಯನ್ನು ಕಬಳಿಸುವವನನ್ನು ನೀವು ವಿಶ್ವಾಸಘಾತುಕನೆನ್ನುತ್ತೀರಿ. ಅಂತೆಯೇ ದೇವನು ದಯಪಾಲಿಸಿರುವ ವಸ್ತುಗಳನ್ನು ನಿಮ್ಮದೆಂದು ಭಾವಿಸಿ ನಿಮ್ಮಿಚ್ಛೆಯಂತೆ ಉಪಯೋಗಿಸಿದರೆ ಅಥವಾ ದೇವೇತರರ ಇಚ್ಛೆಯಂತೆ ಅದನ್ನು ಉಪಯೋಗಿಸಿದರೆ ವಿಶ್ವಾಸಘಾತುಕತನದ ಆರೋಪ ನಿಮಗೂ ಅನ್ವಯಿಸುತ್ತದೆ. ದೇವನಿಚ್ಛೆಯಂತೆ ನಡೆಯುವಾಗ ನಷ್ಟ ಸಂಭವಿಸುವುದಾದರೆ ಸಂಭವಿಸಲಿ, ಪ್ರಾಣ ಹೋಗುವುದಾದರೆ ಹೋಗಲಿ, ಕೈಕಾಲು ಮುರಿಯುವುದಾದರೆ ಮುರಿಯಲಿ, ಸಂತಾನಕ್ಕೆ ನಷ್ಟ ತಗಲುವುದಾದರೆ ತಗಲಲಿ, ಸೊತ್ತುವಿತ್ತ ನಾಶವಾಗುವುದಿದ್ದರೆ ಆಗಲಿ. ಅದಕ್ಕಾಗಿ ನೀವೇಕೆ ಚಿಂತಿಸಬೇಕು? ಸೊತ್ತಿನ ಮಾಲಕನೇ ಅದರ ನಷ್ಟವನ್ನು ಇಷ್ಟಪಡುತ್ತಿದ್ದಾನೆಂದಾದರೆ ಅವನಿಗೆ ಅದರ ಪರಮಾಧಿಕಾರವಿದೆ. ಅದಕ್ಕೆ ವ್ಯತಿರಿಕ್ತವಾಗಿ ದೇವನಿಚ್ಛೆಗೆ ವಿರುದ್ಧವಾಗಿ ನಡೆದುದರಿಂದ ನಷ್ಟ ಉಂಟಾದರೆ ಅದಕ್ಕಾಗಿ ನೀವೇ ತಪ್ಪಿತಸ್ಥರಾಗುತ್ತೀರಿ. ಏಕೆಂದರೆ ನೀವು ನಿಮಗೆ ಸೇರಿರದ ಸೊತ್ತನ್ನು ಹಾಳುಮಾಡಿದ್ದೀರಿ. ನಿಮ್ಮ ಪ್ರಾಣವು ನಿಮಗೆ ಸೇರಿದ್ದಲ್ಲ. ನಿಮ್ಮೊಡೆಯನ ಇಚ್ಛೆಯಂತೆ ಪ್ರಾಣಾರ್ಪಣೆ ಮಾಡಿದರೆ ಒಡೆಯನ ಹಕ್ಕನ್ನು ಈಡೇರಿಸಿದಂತಾಗುತ್ತದೆ. ದೇವನಿಗೆ ವಿರುದ್ಧವಾದ ಕೆಲಸಕ್ಕಾಗಿ ಪ್ರಾಣಾರ್ಪಣೆ ಮಾಡುವುದೂ ವಿಶ್ವಾಸಘಾತುಕತನವಾಗಿದೆ.

ಇಸ್ಲಾಮ್ ಸ್ವೀಕಾರ ಅಲ್ಲಾಹನಿಗೆ ಮಾಡುವ ಉಪಕಾರವಲ್ಲ

ಎರಡನೆಯದಾಗಿ ನಿಮ್ಮೊಡೆಯನು ನಿಮಗೆ ದಯಪಾಲಿಸಿರುವ ವಸ್ತುವನ್ನು ಅವನ ಮಾರ್ಗದಲ್ಲೇ ವಿನಿಯೋಗಿಸುವ ಮೂಲಕ ನೀವು ಒಡೆಯನಿಗಾಗಲಿ, ಇತರರಿಗಾಗಲಿ ಉಪಕಾರ ಮಾಡಿದಂತಾಗುವುದಿಲ್ಲ. ಅವನ ಮಾರ್ಗದಲ್ಲಿ ನೀವು ವೆಚ್ಚ ಮಾಡಿದರೆ, ಸೇವೆಗೈದರೆ ಅಥವಾ ಪ್ರಾಣಾರ್ಪಣೆಯನ್ನೇ ಮಾಡಿದರೆ ಅದು ನಿಮ್ಮ ಮಟ್ಟಿಗೆ ಮಹತ್ತಾದು ದಾಗಿರಬಹುದು. ಆದರೂ ನೀವು ಮಾಡಿರುವುದು ಉಪಕಾರವೆನಿಸಿಕೊಳ್ಳುವುದಿಲ್ಲ. ಹೆಚ್ಚೆಂದರೆ ದೇವನ ಮೇಲೆ ನಿಮಗಿದ್ದ ಹಕ್ಕನ್ನು ನೀವು ಈಡೇರಿಸಿದಂತಾಗುತ್ತದಷ್ಟೆ. ಇದರಲ್ಲಿ ಹೆಮ್ಮೆಯಿಂದ ಬೀಗುವಂತಹುದಾದರೂ ಏನಿದೆ? ಅದನ್ನು ಜನರು ಕೊಂಡಾಡಬೇಕು, ಅದರ ಮಹಾನತೆ ಚರ್ಚಿಸಲ್ಪಡಬೇಕು ಎಂದು ಭಾವಿಸುವಂತಹುದಾವುದೂ ಅದರಲ್ಲಿಲ್ಲ. ನೆನಪಿಡಿ, ನೈಜ ಮುಸ್ಲಿಮನು ಒಡೆಯನ ಮಾರ್ಗದಲ್ಲಿ ವೆಚ್ಚ ಮಾಡುವ ಅಥವಾ ಸೇವೆ ಮಾಡುವ ಮೂಲಕ ಖಂಡಿತ ಬೀಗುವುದಿಲ್ಲ. ಬದಲಾಗಿ ವಿನಮ್ರನಾಗುತ್ತಾನೆ. ಹೆಮ್ಮೆಪಡುವುದರಿಂದ ಸತ್ಕಾರ್ಯ ನಿರರ್ಥಕವಾಗುತ್ತದೆ. ಜನರು ಪ್ರಶಂಸಿಸಬೇಕೆಂಬ ಇರಾದೆಯಿಂದ ಯಾವುದಾದರೂ ಸತ್ಕಾರ್ಯ ಮಾಡುವವನು ದೇವನ ಬಳಿ ಸತ್ಫಲಕ್ಕೆ ಅರ್ಹನಾಗಲಾರ. ಏಕೆಂದರೆ ಅವನು ತನ್ನ ಕೆಲಸಕ್ಕೆ ಪ್ರತಿಫಲವನ್ನು ಲೋಕದಲ್ಲೇ ಬೇಡಿದನು ಮತ್ತು ಅವನಿಗದು ಇಲ್ಲೇ ದೊರೆತಂತಾಗುತ್ತದೆ.

ದೇವನಿಗೆ ನಾವು ಕೃತಜ್ಞರಾಗುವ ರೀತಿ

ಬಂಧುಗಳೇ! ನಿಮ್ಮೊಡೆಯನ ಮಹಾ ಔದಾರ್ಯವನ್ನು ನೋಡಿರಿ. ತನ್ನ ವಸ್ತುವನ್ನೇ ಅವನು ನಿಮ್ಮಿಂದ ಪಡೆದು, ನಾನು ಅದನ್ನು ನಿಮ್ಮಿಂದ ಕೊಂಡುಕೊಂಡೆ ಹಾಗೂ ಅದಕ್ಕೆ ಪ್ರತಿಫಲ ನೀಡುವೆ ಎಂದು ಹೇಳುತ್ತಾನೆ. ಎಂತಹ ನಿಸ್ಸೀಮವಾದ ಮಹಾನತೆ! ಎಂತಹ ಎಣೆಯಿಲ್ಲದ ಕಾರುಣ್ಯ!

ಪವಿತ್ರ ಕುರ್‌ಆನ್ ಸಾರುತ್ತದೆ,

إِنَّ اللَّهَ اشْتَرَىٰ مِنَ الْمُؤْمِنِينَ أَنفُسَهُمْ وَأَمْوَالَهُم بِأَنَّ لَهُمُ الْجَنَّةَ

"ವಾಸ್ತವದಲ್ಲಿ ಅಲ್ಲಾಹನು ಸತ್ಯವಿಶ್ವಾಸಿಗಳಿಂದ ಅವನ ಪ್ರಾಣಗಳನ್ನು ಮತ್ತು ಸೊತ್ತನ್ನು ಸ್ವರ್ಗದ ಬದಲಿಗೆ ಖರೀದಿಸಿದ್ದಾನೆ." (9:111)

ಇದು ಒಡೆಯನು ನಮ್ಮೊಂದಿಗೆ ವರ್ತಿಸುವ ರೀತಿ. ಇನ್ನು, ನಿಮ್ಮ ನಡವಳಿಕೆಯನ್ನೂ ಸ್ವಲ್ಪ ಗಮನಿಸಿ. ನೀವಾದರೋ ಒಡೆಯನು ನಿಮಗೆ ದಯಪಾಲಿಸಿದ ಮಾತ್ರವಲ್ಲ ಅದನ್ನು ಖರೀದಿಸಿ ಅದರ ಪ್ರತಿಫಲವನ್ನು ನೀಡಿದ ವಸ್ತುವನ್ನೇ ನೀವು ಇತರರಿಗೆ ಮಾರಾಟ ಮಾಡುತ್ತೀರಿ. ಅದೂ ಕ್ಷುಲ್ಲಕ ಬೆಲೆಗಾಗಿ. ಒಡೆಯನ ಇಚ್ಛೆಗೆ ವಿರುದ್ಧವಾಗಿ ಅವರು ನಿಮ್ಮಿಂದ ಕೆಲಸ ಸಾಧಿಸಿಕೊಳ್ಳುತ್ತಾರೆ. ಅವರೇ ಅನ್ನದಾತರೇನೋ ಎಂಬಂತೆ ನೀವವರ ಸೇವೆಗೈಯುತ್ತೀರಿ, ದೇವಧಿಕ್ಕಾರಿಗಳಿಗೆ ನೀವು ನಿಮ್ಮ ಮನಮಸ್ತಿಷ್ಕ, ಕೈಕಾಲುಗಳು ಮತ್ತು ದೇಹದ ಶಕ್ತಿಯೆಲ್ಲವನ್ನೂ ಮಾರಾಟ ಮಾಡುತ್ತೀರಿ. ಇದಕ್ಕಿಂತ ಮಿಗಿಲಾದ ಅನೀತಿ ಯಾವುದಿದೆ. ಒಮ್ಮೆ ಮಾರಲ್ಪಟ್ಟಿರುವುದನ್ನು ಪುನಃ ಮಾರುವುದು ಕಾನೂನಿನ ದೃಷ್ಟಿಯಲ್ಲೂ ನೈತಿಕತೆಯ ದೃಷ್ಟಿಯಲ್ಲೂ ಅಪರಾಧವಾಗಿದೆ. ಲೋಕದಲ್ಲಿ ಅಂತಹವರ ಮೇಲೆ ಮೋಸ ಮತ್ತು ವಂಚನೆಯ ಮೊಕದ್ದಮೆ ಹೂಡಲಾಗುತ್ತದೆ. ಆದರೆ ದೇವನ ನ್ಯಾಯಾಲಯದಲ್ಲಿ ಅದರ ವಿರುದ್ಧ ಮೊಕದ್ದಮೆ ಹೂಡಲಾಗುವುದಿಲ್ಲವೆಂದು ನೀವು ಭಾವಿಸುತ್ತೀರಾ?

○

ಪವಿತ್ರ ವಚನ ಮತ್ತು ಪೈಶಾಚಿಕ ವಚನ

ಮುಸ್ಲಿಮ್ ಸಹೋದರರೇ!

ಕಳೆದ ಪ್ರವಚನದಲ್ಲಿ ಪವಿತ್ರ ವಚನದ ಕುರಿತು ಕೆಲವು ವಿಷಯಗಳನ್ನು ನಾನ ನಿಮ್ಮೊಂದಿಗೆ ಹೇಳಿದ್ದೇನೆ, ಅದರ ಇನ್ನಷ್ಟು ವಿವರಣೆಯನ್ನು ಇಂದು ನಾನು ನಿಮ್ಮ ಮುಂದಿರಿಸುವೆ. ಏಕೆಂದರೆ ಈ ವಚನವೇ ಇಸ್ಲಾಮಿನ ಬುನಾದಿಯಾಗಿದೆ. ಅದರ ಮೂಲಕವೆ ವ್ಯಕ್ತಿ ಇಸ್ಲಾಮಿನೊಳಗೆ ಪ್ರವೇಶಿಸುತ್ತಾನೆ. ಈ ವಚನವನ್ನು ಚೆನ್ನಾಗಿ ತಿಳಿದುಕೊಳ್ಳುವ ಮತ್ತು ಜೀವನವನ್ನು ಅದರಂತೆ ರೂಪಿಸುವ ತನಕ ಯಾವ ವ್ಯಕ್ತಿಯೂ ಯಥಾರ್ಥ ಮುಸ್ಲಿಮನಾಗಲಾರ

ಅಲ್ಲಾಹನು ಪವಿತ್ರ ಕುರ್‌ಆನಿನಲ್ಲಿ ಈ ವಚನವನ್ನು ಹೀಗೆ ಪರಿಚಯಿಸಿದ್ದಾನೆ:

أَلَمْ تَرَ كَيْفَ ضَرَبَ اللَّهُ مَثَلًا كَلِمَةً طَيِّبَةً كَشَجَرَةٍ طَيِّبَةٍ أَصْلُهَا ثَابِتٌ وَ
فَرْعُهَا فِي السَّمَاءِ ﴿٢٤﴾ تُؤْتِي أُكُلَهَا كُلَّ حِينٍ بِإِذْنِ رَبِّهَا ۗ وَيَضْرِبُ اللَّهُ
الْأَمْثَالَ لِلنَّاسِ لَعَلَّهُمْ يَتَذَكَّرُونَ ﴿٢٥﴾ وَمَثَلُ كَلِمَةٍ خَبِيثَةٍ كَشَجَرَةٍ خَبِيثَةٍ اجْتُثَّتْ مِنْ
فَوْقِ الْأَرْضِ مَا لَهَا مِنْ قَرَارٍ ﴿٢٦﴾ يُثَبِّتُ اللَّهُ الَّذِينَ آمَنُوا بِالْقَوْلِ الثَّابِتِ
فِي الْحَيَاةِ الدُّنْيَا وَفِي الْآخِرَةِ ۖ وَيُضِلُّ اللَّهُ الظَّالِمِينَ ۚ وَيَفْعَلُ اللَّهُ مَا يَشَاءُ ﴿٢٧﴾

"ಅಲ್ಲಾಹನು ಪವಿತ್ರ ವಚನವನ್ನು ಯಾವುದಕ್ಕೆ ಹೋಲಿಸಿರುತ್ತಾನೆಂದು ನೀವ ನೋಡುವುದಿಲ್ಲವೇ? ಅದರ ಉಪಮೆ ಹೀಗಿದೆ, ಒಂದು ಉತ್ತಮ ಜಾತಿಯ ಮರ, ಅದ ಬೇರುಗಳು ನೆಲದೊಳಗೆ ಆಳಕ್ಕೆ ಸ್ಥಿರವಾಗಿ ನಾಟಿವೆ. ಗೆಲ್ಲುಗಳು ಆಕಾಶಕ್ಕೆ ಮುಟ್ಟಿವೆ. ಅದು ಸದಾಕಾಲವೂ ತನ್ನ ಪ್ರಭುವಿನ ಅನುಜ್ಞೆಯಿಂದ ತನ್ನ ಫಲಗಳನ್ನು ಕೊಡುತ್ತಿದೆ. ಜನರು ಇವುಗಳಿಂದ ಪಾಠ ಕಲಿಯಲೆಂದು ಅಲ್ಲಾಹನು ಈ ಉದಾಹರಣೆಗಳನ್ನು ಕೊಡುತ್ತಾನೆ 'ಪೈಶಾಚಿಕ ವಚನ'ದ ಉಪಮೆ- ಒಂದು ಕೆಟ್ಟ ಜಾತಿಯ ಮರದಂತಿದೆ. ಅದು ಭೂಮಿಯ ಮೇಲ್ಭಾಗದಿಂದ ಕಿತ್ತೆಸೆಯಲ್ಪಡುತ್ತದೆ. ಅದಕ್ಕೆ ಸ್ಥಿರತೆಯೆಂಬುದೇ ಇಲ್ಲ. ಅಲ್ಲಾಹನು

ತ್ಯವಿಶ್ವಾಸಿಗಳಿಗೆ ಒಂದು ಸ್ಥಿರವಚನದ ಆಧಾರದಲ್ಲಿ ಇಹ-ಪರಗಳೆರಡರಲ್ಲೂ ಭದ್ರತೆ ಯುಪಾಲಿಸುತ್ತಾನೆ ಮತ್ತು ಅಕ್ರಮಿಗಳನ್ನು ಅಲ್ಲಾಹನು ದಾರಿಗೆಡಿಸುತ್ತಾನೆ. ತನಗಿಷ್ಟ ಂದಂತೆ ಮಾಡುವ ಅಧಿಕಾರ ಅಲ್ಲಾಹನಿಗಿದೆ.'' (14:24-27)

ಅರ್ಥಾತ್ ಪವಿತ್ರ ವಚನದ ಉಪಮೆಯು ಭೂಮಿಯಲ್ಲಿ ಆಳವಾಗಿ ಬೇರೂರಿದ, ಕಾಶದಲ್ಲಿ ಗೆಲ್ಲುಗಳು ಹರಡಿರುವ ಮತ್ತು ತನ್ನ ಪ್ರಭುವಿನ ಅಪ್ಪಣೆಯಂತೆ ನಿತ್ಯ ಫಲಭರಿತ ಾಗಿರುವ ಉತ್ತಮ ಜಾತಿಯ ಮರದಂತಿದೆ. ತದ್ವಿರುದ್ಧವಾಗಿ ಪೈಶಾಚಿಕ ವಚನ ಅರ್ಥಾತ್ ಟ್ಟ ವಿಶ್ವಾಸ ಮತ್ತು ಮಿಥ್ಯ ವಚನಗಳು ತಾನಾಗಿಯೇ ಹುಟ್ಟಿದ ಕೆಟ್ಟ ಜಾತಿಯ ಗಿಡದಂತಿದೆ. ದು ಭೂಮಿಯ ಮೇಲ್ಪದರದಲ್ಲಿರುತ್ತದೆ. ಮುಟ್ಟಿದ ಮಾತ್ರಕ್ಕೆ ಅದು ಮೂಲೋತ್ಪಾಟನೆ ೊಳ್ಳುತ್ತದೆ. ಏಕೆಂದರೆ ಅದರ ಬೇರುಗಳು ಆಳಕ್ಕೆ ಹೋಗಿರುವುದಿಲ್ಲ.

ಇದೊಂದು ಅನುಪಮವಾದ ಉದಾಹರಣೆ. ಈ ಬಗ್ಗೆ ಆಲೋಚಿಸುವುದರಲ್ಲಿ ನಿಮಗೆ ೊಡ್ಡ ಪಾಠವಿದೆ. ನಿಮ್ಮ ಮುಂದೆ ಎರಡೂ ವಿಧದ ವೃಕ್ಷಗಳ ಉದಾಹರಣೆ ಇದೆ. ಮಾವಿನ ರವನ್ನು ನೋಡಿ ಅದೆಷ್ಟು ದೃಢವಾಗಿ ನಿಂತಿದೆ! ಅದು ಎಷ್ಟು ಎತ್ತರಕ್ಕೇರಿದೆ! ಅದರ ಲ್ಲುಗಳೆಷ್ಟು ಹರಡಿಕೊಂಡಿವೆ! ಅದು ಎಷ್ಟು ರಸವತ್ತಾದ ಫಲಗಳನ್ನು ನೀಡುತ್ತದೆ! ಇವುಗಳನ್ನು ಡೆಯಲು ಅದಕ್ಕೆ ಹೇಗೆ ಸಾಧ್ಯವಾಯಿತು? ಏಕೆಂದರೆ ಅದರ ಬೀಜ ಉತ್ತಮ ತಳಿಯ ದ್ದಾಗಿತ್ತು. ಮರವಾಗಿ ಬೆಳೆಯುವ ಅರ್ಹತೆಯನ್ನು ಅದು ಹೊಂದಿತ್ತು. ಅದರ ಆ ಅರ್ಹತೆ ಷ್ಟು ದಿಟವಾಗಿತ್ತೆಂದರೆ ಅದು ತನ್ನ ಅರ್ಹತೆಯನ್ನು ಸಾಧಿಸಬಯಸಿದಾಗ ನೆಲ, ನೀರು, ಾಳಿ, ಬಿಸಿಲು, ರಾತ್ರಿಯ ತಂಪು ಹೀಗೆ ಎಲ್ಲವೂ ಅದರ ಹಕ್ಕನ್ನು ಒಪ್ಪಿಕೊಂಡು ಅದು ಯಸಿದ್ದನ್ನೆಲ್ಲಾ ಅದಕ್ಕೆ ನೀಡಿದವು. ಹೀಗೆ ತನ್ನ ಅರ್ಹತೆಯಿಂದಾಗಿ ಅದು ಹೆಮ್ಮರವಾಗಿ ೆಳೆಯಿತು. ಸವಿಯಾದ ಹಣ್ಣುಗಳನ್ನು ನೀಡುವ ಮೂಲಕ ಅದು ತನಗೆ ಹೆಮ್ಮರವಾಗಿ ೆಳೆಯುವ ಅರ್ಹತೆಯಿತ್ತು ಎಂಬುದನ್ನು ತೋರಿಸಿ ಕೊಟ್ಟಿತು. ಆಕಾಶ ಭೂಮಿಗಳ ಸಕಲ ಸ್ತುಗಳೂ ಅದಕ್ಕೆ ನೆರವಾದದ್ದೂ ನಿಷ್ಪ್ರಯೋಜಕವೆನಿಸಲಿಲ್ಲ. ಅವುಗಳು ಹಾಗೆ ನೆರವಾಗ ೇಕಾದ ಅಗತ್ಯವೂ ಇದೆ. ಏಕೆಂದರೆ ನೆಲ, ಜಲ ಮತ್ತು ವಾಯುವಿನಲ್ಲಿ ಮರಗಳನ್ನು ಪೋಷಿಸಿ ೆಳೆಸುವ ಸಾಮರ್ಥ್ಯ ಇರುವುದೇ ಉತ್ತಮ ತಳಿಯ ಮರಗಳಿಗೆ ನೆರವಾಗುವುದಕ್ಕಾಗಿದೆ.

ಇದಕ್ಕೆ ಪ್ರತಿಯಾಗಿ ತನ್ನಷ್ಟಕ್ಕೆ ಹುಟ್ಟುವ ಮುಳ್ಳುಕಂಟಿಗಳ ಅವಸ್ಥೆಯನ್ನು ನೋಡಿ. ದರಲ್ಲಿರುವ ಅರ್ಹತೆಯಾದರೂ ಏನು? ಚಿಕ್ಕ ಮಗುವೂ ಕಿತ್ತೆಸೆಯಬಹುದಾದ ದುರ್ಬಲ ೇರು. ಗಾಳಿಯ ಹೊಡೆತಕ್ಕೆ ಬಾಡಿ ಹೋಗಬಹುದಾದಷ್ಟು ಕ್ಷೀಣ. ಮುಟ್ಟಿದರೆ ಕೈಗೆ ಮುಳ್ಳು ಾಗುತ್ತದೆ. ಸವಿದರೆ ಅದರ ಕಹಿಯಿಂದ ನಿಮ್ಮ ಬಾಯಿ ಹಾಳು. ದಿನಂಪ್ರತಿ ಇಂತಹ ುಳ್ಳುಕಂಟಿಗಳು ಎಷ್ಟು ಹುಟ್ಟುತ್ತವೆ ಮತ್ತು ಸಾಯುತ್ತವೆಂದು ದೇವನೇ ಬಲ್ಲ. ಯಾಕೆ ವುಗಳಿಗೆ ಈ ದುಃಸ್ಥಿತಿ? ಏಕೆಂದರೆ ಅವುಗಳಲ್ಲಿ ಮಾವಿನಮರದಂತಹ ಅರ್ಹತೆ ಮತ್ತು ಕ್ತಿಯಿಲ್ಲ. ಉತ್ತಮ ತಳಿಯ ಮರ ಲಭ್ಯವಾಗದೆ ಹೋದರೆ ನೆಲ ಸುಮ್ಮನಿದ್ದು ಬೇಸತ್ತು

ಬಿಡುತ್ತದೆ. ಕೊನೆಗೆ ಇಂತಹ ಮುಳ್ಳು ಕಂಟಿಗಳು ಬೆಳೆಯಲು ಅವಕಾಶ ಕಲ್ಪಿಸುತ್ತದೆ. ಜಲವೂ ಒಂದಿನಿತು ನೆರವಾಗುತ್ತದೆ. ಗಾಳಿಯೂ ಕಿಂಚಿತ್ ಸಹಾಯ ಮಾಡುತ್ತದೆ. ಆದರೆ ಆಕಾಶ ಭೂಮಿಗಳ ಯಾವ ವಸ್ತುವೂ ಅದರ ಹಕ್ಕನ್ನು ಸಮ್ಮತಿಸುವುದಿಲ್ಲ. ಆದ್ದರಿಂದ ಭೂಮಿ ಅದರ ಬೇರುಗಳನ್ನು ಆಳಕ್ಕೆ ಇಳಿಯಗೊಡುವುದಿಲ್ಲ. ನೀರು ಮನಃಪೂರ್ವಕ ಅದಕ್ಕೆ ಪೌಷ್ಟಿಕಾಂಶ ನೀಡುವುದಿಲ್ಲ. ಗಾಳಿ ಸ್ವಚ್ಛಂದವಾಗಿ ಅವುಗಳನ್ನು ಬೆಳೆಯಲು ಬಿಡುವುದಿಲ್ಲ. ಆದರೂ ಇಷ್ಟು ಶಕ್ತಿಯ ಆಧಾರದಲ್ಲೇ ಈ ಪೈಶಾಚಿಕ ಗಿಡಗಳು ಮುಳ್ಳಿನಿಂದಾವೃತವಾಗಿ ಕಹಿಯಾಗಿ, ವಿಷಯುಕ್ತವಾಗಿ ಬೆಳೆಯುತ್ತವೆ. ಇದರಿಂದ ಆಕಾಶ-ಭೂಮಿಗಳಲ್ಲಿರುವ ಶಕ್ತಿ ಇಂತಹ ಗಿಡಗಳನ್ನು ಬೆಳೆಸುವುದಕ್ಕಾಗಿ ಇರುವುದಲ್ಲವೆಂದು ವ್ಯಕ್ತವಾಗುತ್ತದೆ. ಅವುಗಳಿಗೆ ಸಿಗುವ ಅಲ್ಪ ಜೀವನಾವಧಿಯೇ ಬಹಳವಾಯಿತು.

ಈ ಎರಡು ಉದಾಹರಣೆಗಳನ್ನು ಮುಂದಿಟ್ಟುಕೊಂಡು ಪವಿತ್ರ ವಚನ ಮತ್ತು ಪೈಶಾಚಿಕ ವಚನಗಳಲ್ಲಿರುವ ವ್ಯತ್ಯಾಸದ ಬಗ್ಗೆ ಆಲೋಚಿಸಿ.

ಪವಿತ್ರ ವಚನವೆಂದರೇನು?

ಪವಿತ್ರ ವಚನವೆಂದರೇನು? ಅದೊಂದು ಸತ್ಯ ನುಡಿ. ಲೋಕದಲ್ಲಿ ಅದಕ್ಕೆ ಸಮಾನವಾದ ಸತ್ಯ ನುಡಿ ಬೇರಾವುದೂ ಇರಲಾರದು. ಸಮಸ್ತ ಲೋಕಕ್ಕೆ ಇರುವುದು ಏಕೈಕ ದೇವ. ಇದಕ್ಕೆ ಆಕಾಶ-ಭೂಮಿಗಳ ಸಕಲ ವಸ್ತುಗಳೂ ಸಾಕ್ಷ್ಯ ಹೇಳುತ್ತಿವೆ. ಈ ಮನುಷ್ಯರು, ಈ ಪ್ರಾಣಿಗಳು ಈ ಮರಗಳು, ಈ ಶಿಲೆಗಳು, ಈ ಮರಳ ರಾಶಿ, ಹರಿಯುತ್ತಿರುವ ಈ ನದಿಗಳು ಪ್ರಜ್ವಲಿಸುತ್ತಿರುವ ಈ ಸೂರ್ಯ ಮತ್ತು ನಾಲ್ದೆಸೆಯಲ್ಲೂ ಹರಡಿರುವ ವಸ್ತುಗಳ ಪೈಕಿ ಅಲ್ಲಾಹೇತರರು ಸೃಷ್ಟಿಸಿದ್ದು ಯಾವುದಿದೆ? ಅಲ್ಲಾಹನ ಹೊರತು ಇತರರ ಕೃಪಾಶ್ರಯದಲ್ಲಿ ಬದುಕುಳಿದಿರುವುದು ಯಾವುದಿದೆ? ಯಾವುದನ್ನು ಅಲ್ಲಾಹನ ಹೊರತು ಇತರರು ನಾಶಪಡಿಸಲು ಸಾಧ್ಯ? ಈ ಮಹಾನ್ ವಿಶ್ವವನ್ನು ಅಲ್ಲಾಹನೇ ಸೃಷ್ಟಿಸಿದ್ದಾನೆ. ಅಲ್ಲಾಹನ ಕೃಪೆಯಲ್ಲೇ ಅದು ನೆಲೆನಿಂತಿದೆ. ಅಲ್ಲಾಹನೇ ಅದರ ಒಡೆಯ ಮತ್ತು ಆಜ್ಞಾಧೀಶನಾಗಿದ್ದಾನೆ. "ಈ ಜಗತ್ತಿನಲ್ಲಿ ಏಕನಾದ ಅಲ್ಲಾಹನ ಹೊರತು ಬೇರಾರಿಗೂ ದೇವತ್ವವಿಲ್ಲ" ಎಂದು ನೀವು ಹೇಳುವಾಗ ಆಕಾಶ ಭೂಮಿಗಳಲ್ಲಿರುವ ಎಲ್ಲ ವಸ್ತುಗಳೂ ನಿನ್ನ ಮಾತು ಸತ್ಯ, ನಾವೂ ಅದನ್ನು ದೃಢೀಕರಿಸುತ್ತೇವೆ ಎಂದು ಸಾರಿ ಹೇಳುತ್ತವೆ. ನೀವು ಅವನ ಮುಂದೆ ಶಿರ ಬಾಗುವಾಗ ನಿಸರ್ಗದ ಸಕಲ ವಸ್ತುಗಳೂ ನಿಮ್ಮ ಜತೆ ಶಿರಬಾಗುತ್ತವೆ. ಏಕೆಂದರೆ ಆ ಎಲ್ಲಾ ವಸ್ತುಗಳು ಅವನ ದಾಸ್ಯ-ಆರಾಧನೆಯನ್ನೇ ಮಾಡುತ್ತಿವೆ. ನೀವು ಅವನ ಆದೇಶ ಪಾಲನೆ ಮಾಡಿದರೆ ಆಕಾಶ-ಭೂಮಿಗಳ ಪ್ರತಿಯೊಂದು ವಸ್ತುವೂ ನಿಮಗೆ ನೆರವಾಗುತ್ತವೆ. ಏಕೆಂದರೆ ಎಲ್ಲವೂ ಆ ದೇವನ ಆಜ್ಞಾಪಾಲನೆ ಮಾಡುತ್ತಿವೆ ಅವನ ಮಾರ್ಗದಲ್ಲಿ ನಡೆಯುವಾಗ ನೀವು ಏಕಾಂಗಿಯಾಗಿರಲಾರಿರಿ. ನಿಸರ್ಗದ ಅಸಂಖ್ಯ ಸೃಷ್ಟಿಜಾಲಗಳೂ ನಿಮ್ಮ ಜತೆಗಿರುವುದು. ಏಕೆಂದರೆ ಆಕಾಶದಲ್ಲಿ ಸೂರ್ಯನಿಂದಾದಿಯಾಗಿ ಭೂಮಿಯ ಕಣಕಣವೂ ಅವನ ಮಾರ್ಗದಲ್ಲೇ ನಡೆಯುತ್ತಿವೆ. ಅವನ ಮೇಲೆ ಭರವಸೆ

ಇರಿಸುವಾಗ ನೀವು ಅಲ್ಪ ಶಕ್ತಿಯ ಮೇಲೆ ಭರವಸೆ ಇಟ್ಟಂತಾಗುವುದಿಲ್ಲ. ಬದಲಾಗಿ ಆಕಾಶ ಭೂಮಿಗಳ ಸಕಲ ಸಂಪತ್ತಿನ ಒಡೆಯನಾದ ಆ ಮಹಾಶಕ್ತಿಯ ಮೇಲೆ ಭರವಸೆ ಇಟ್ಟಂತಾಗುತ್ತದೆ. ಈ ವಸ್ತುಸ್ಥಿತಿಯನ್ನು ಗಮನಿಸಿದರೆ ಪವಿತ್ರ ವಚನದ ಮೇಲೆ ವಿಶ್ವಾಸವಿರಿಸಿ ತನ್ನ ಜೀವನವನ್ನು ಅದಕ್ಕೆ ಬದ್ಧಗೊಳಿಸಿದರೆ ಆಕಾಶ-ಭೂಮಿಗಳ ಸಕಲ ವಸ್ತುಗಳೂ ನಿಮಗೆ ನೆರವಾಗುತ್ತದೆಂದು ತಿಳಿದು ಬರುತ್ತದೆ. ಲೋಕದಿಂದ ಪರಲೋಕದ ತನಕ ಅಂತಹವರು ಉನ್ನತಿಗೆ ಏರುತ್ತಲೇ ಇರುವರು. ಒಂದು ಕ್ಷಣದ ಮಟ್ಟಿಗೂ ಅವರು ಪರಾಜಯ ಹೊಂದಲಾರರು. ಇದನ್ನೇ ಅಲ್ಲಾಹನು, ಈ ವಚನವು ಭೂಮಿಯಲ್ಲಿ ಭದ್ರವಾಗಿ ಬೇರೂರಿರುವ, ಕೊಂಬೆ-ರೆಂಬೆಗಳು ಆಕಾಶದಲ್ಲಿ ಹರಡಿರುವ ಮತ್ತು ಪ್ರತಿ ಘಳಿಗೆಯಲ್ಲೂ ದೇವಾಜ್ಞೆಯಂತೆ ವೃದ್ಧಿಸುತ್ತಲೇ ಹೋಗುತ್ತಿರುವ ವೃಕ್ಷಕ್ಕೆ ಸಮಾನ ಎಂದು ಹೇಳಿದ್ದಾನೆ.

ಪೈಶಾಚಿಕ ವಚನವೆಂದರೇನು?

ಇದಕ್ಕೆ ಪ್ರತಿಯಾಗಿ ಪೈಶಾಚಿಕ ವಚನವನ್ನು ನೋಡಿ. ಪೈಶಾಚಿಕ ವಚನವೆಂದರೆ ಈ ಲೋಕಕ್ಕೆ ಯಾರೂ ದೇವನಿಲ್ಲ ಅಥವಾ ಅಲ್ಲಾಹನ ಹೊರತು ಇತರ ದೇವರುಗಳೂ ಇದ್ದಾರೆ ಎಂದಾಗಿದೆ. ಸ್ವಲ್ಪ ಆಲೋಚಿಸಿ ನೋಡಿ. ಇದಕ್ಕಿಂತ ಮಿಗಿಲಾದ ಸುಳ್ಳು ಮತ್ತು ನಿರಾಧಾರ ಮಾತು ಬೇರೆ ಇರಲು ಸಾಧ್ಯವೇ? ಆಕಾಶ-ಭೂಮಿಗಳ ಯಾವ ವಸ್ತು ಅದರ ಪರವಾಗಿ ಸಾಕ್ಷ್ಯ ಹೇಳುತ್ತದೆ. ನಾಸ್ತಿಕ ದೇವನಿಲ್ಲವೆಂದು ಹೇಳುತ್ತಾನೆ. ಆಕಾಶ-ಭೂಮಿಗಳ ಪ್ರತಿಯೊಂದು ವಸ್ತುವೂ ನೀನು ಸುಳ್ಳುಗಾರ. ನಮ್ಮ-ನಿಮ್ಮೆಲ್ಲರನ್ನು ದೇವನೇ ಸೃಷ್ಟಿಸಿದ್ದಾನೆ. ಆ ದೇವನೇ ನಿನಗೆ ನಾಲಗೆಯನ್ನು ದಯಪಾಲಿಸಿದ್ದಾನೆ. ಅದರ ಮೂಲಕ ನಿನಗೆ ಈ ಸುಳ್ಳನ್ನು ನುಡಿಯಲು ಸಾಧ್ಯವಾಗುತ್ತಿದೆ ಎಂದು ಹೇಳುತ್ತದೆ. ದೇವತ್ವದಲ್ಲಿ ಅಲ್ಲಾಹನಿಗೆ ಸಹಭಾಗಿಗಳಿದ್ದಾರೆ ಎಂದು ಬಹುದೇವವಿಶ್ವಾಸಿಗಳು ಹೇಳುತ್ತಾರೆ. ಅನ್ನದಾತರು ಇತರರೂ ಇದ್ದಾರೆ, ಮಾಲಕರು ಇತರರೂ ಇದ್ದಾರೆ, ಇತರರೂ ಸುದೈವ-ದುರ್ದೈವಗಳನ್ನುಂಟು ಮಾಡುತ್ತಾರೆ, ಲಾಭ-ನಷ್ಟಗಳನ್ನುಂಟು ಮಾಡುವ ಸಾಮರ್ಥ್ಯ ಇತರರಲ್ಲೂ ಇದೆ. ಇತರರೂ ಪ್ರಾರ್ಥನೆಗಳನ್ನು ಆಲಿಸುತ್ತಾರೆ ಮತ್ತು ಇಷ್ಟಾರ್ಥಗಳನ್ನು ಈಡೇರಿಸುತ್ತಾರೆ, ಭಯಪಡಲು ಮತ್ತು ಭರವಸೆ ಇರಿಸಲು ಅರ್ಹರಾದವರು ಇತರರೂ ಇದ್ದಾರೆ-ಇತರರ ಆದೇಶಗಳೂ ಪಾಲಿಸಲ್ಪಡುತ್ತದೆ, ದೇವೇತರರ ಆಜ್ಞೆ ಮತ್ತು ಕಾನೂನುಗಳೂ ಪಾಲನಾರ್ಹವಾಗಿದೆ ಎಂದು ಅವನು ಭಾವಿಸುತ್ತಾನೆ, ಇದಕ್ಕುತ್ತರವಾಗಿ ಆಕಾಶ-ಭೂಮಿಗಳ ಪ್ರತಿಯೊಂದು ವಸ್ತುವೂ ಅವನು ಮಹಾ ಸುಳ್ಳುಗಾರನೆನ್ನುತ್ತವೆ. ನೀನು ಹೇಳುತ್ತಿರುವ ಪ್ರತಿಯೊಂದೂ ಸತ್ಯಕ್ಕೆ ವಿರುದ್ಧವಾದುದೆನ್ನುತ್ತವೆ. ಹಾಗಾದರೆ, ಈ ವಚನವನ್ನು ಅಂಗೀಕರಿಸಿ ಅದರಂತೆ ಜೀವನ ಸಾಗಿಸುವವನು ಇಹ-ಪರಗಳಲ್ಲಿ ಸಮೃದ್ಧಿ ಸಾಧಿಸಲು ಹೇಗೆ ಸಾಧ್ಯವಾಗುತ್ತದೆಂದು ನೀವೇ ಆಲೋಚಿಸಿ. ಅಲ್ಲಾಹನು ತನ್ನ ಕರುಣೆಯಿಂದಾಗಿ ಅಂತಹವರಿಗೊಂದು ಅವಕಾಶ ನೀಡಿದ್ದಾನೆ. ಅವರಿಗೆ ಜೀವನಾಧಾರವನ್ನು ಕೊಡುವ ವಾಗ್ದಾನವಿತ್ತಿದ್ದಾನೆ. ಆದ್ದರಿಂದ ಆಕಾಶ-ಭೂಮಿಗಳಲ್ಲಿರುವ ಶಕ್ತಿಗಳು ಮುಳ್ಳುಕಂಟಿ ಮತ್ತು ಸ್ವಯಂ ಹುಟ್ಟಿ

ಕೊಳ್ಳುವ ಗಿಡಗಳನ್ನು ಪೋಷಿಸುವಂತೆ ಅವರ ಪೋಷಣೆಯನ್ನೂ ಮಾಡುತ್ತದೆ. ಆದರೆ ನಿಸರ್ಗದ ಯಾವ ವಸ್ತುವೂ ತನ್ನ ಕರ್ತವ್ಯವೆಂದು ಬಗೆದು ಅದಕ್ಕೆ ನೆರವಾಗುವುದಿಲ್ಲ. ತನ್ನ ಸಮಸ್ತ ಶಕ್ತಿಯೊಂದಿಗೆ ಅದಕ್ಕೆ ಸಹಾಯ ಒದಗಿಸುವುದಿಲ್ಲ. ಅವರ ಉಪಮೆ ಹಿಂದೆ ಪ್ರಸ್ತಾಪಿಸಲಾದ ಮುಳ್ಳುಕಂಟಿಗಳಂತೆಯೇ ಇರುವುದು.

ಫಲಿತಾಂಶದ ವ್ಯತ್ಯಾಸ

ಇವೆರಡರ ಪ್ರತಿಫಲದಲ್ಲೂ ಇಂತಹುದೇ ಅಂತರವಿದೆ. ಪವಿತ್ರ ವಚನವು ವೃದ್ಧಿಸಿದಾಗ ಅದರಿಂದ ಸುಮಧುರವಾದ, ಫಲಪ್ರದವಾದ ಪ್ರತಿಫಲ ಲಭಿಸುವುದು. ಅದರಿಂದ ಲೋಕದಲ್ಲಿ ಶಾಂತಿ ನೆಲೆಸುವುದು, ಒಳಿತು, ಸತ್ಯ ಮತ್ತು ನ್ಯಾಯಕ್ಕೆ ಜಯ ಲಭಿಸುವುದು. ದೇವನ ಸೃಷ್ಟಿಗಳು ಅದರಿಂದ ಪ್ರಯೋಜನ ಪಡೆಯುವರು. ಆದರೆ ಪೈಶಾಚಿಕ ವಚನದ ಪೋಷಣೆಯಾದಷ್ಟೇ ಅದರಿಂದ ಮುಳ್ಳಿನಿಂದಾವೃತವಾದ ಕೊಂಬೆಗಳು ಹೊರ ಬರುವುದು. ಕಹಿ ಫಲಗಳಷ್ಟೇ ಅದರಲ್ಲಿ ಮೂಡುವುದು. ಅದರ ನರನಾಡಿಗಳಲ್ಲೆಲ್ಲ ವಿಷವೇ ತುಂಬಿರುವುದು.

ನೀವೇ ನೋಡಿ. ಜಗತ್ತಿನಲ್ಲಿ ಸತ್ಯನಿಷೇಧ, ಬಹುದೇವಾರಾಧನೆ, ನಾಸ್ತಿಕತೆ ಹೆಚ್ಚಾಗಿರುವ ಕಡೆಗಳಲ್ಲಿ ಏನಾಗುತ್ತಿದೆ? ಮನುಷ್ಯನನ್ನು ಮನುಷ್ಯ ಕಿತ್ತು ತಿನ್ನಲು ಪ್ರಯತ್ನಿಸುತ್ತಿದ್ದಾನೆ. ಜನವಾಸ ಪ್ರದೇಶಗಳನ್ನು ನಾಶಪಡಿಸುವ ಸಿದ್ಧತೆ ನಡೆಯುತ್ತಿದೆ. ವಿಷಾನಿಲ ತಯಾರಿಸಲಾಗುತ್ತಿದೆ. ಒಂದು ಜನಾಂಗ ಇನ್ನೊಂದನ್ನು ನಿರ್ನಾಮಗೊಳಿಸುವ ತವಕದಲ್ಲಿದೆ. ಪ್ರಬಲ ಜನಾಂಗಗಳು ದುರ್ಬಲರನ್ನು ತನ್ನ ಗುಲಾಮರನ್ನಾಗಿ ಮಾಡುತ್ತವೆ. ಅವನ ಪಾಲಿನ ಆಹಾರವನ್ನು ತಾನು ಕಿತ್ತು ತಿನ್ನಬೇಕೆಂಬುದೇ ಅದರ ಉದ್ದೇಶ. ದುರ್ಬಲರನ್ನು ಸೇನೆ, ಪೋಲೀಸು, ಸೆರೆಮನೆ ಮತ್ತು ನೇಣುಗಂಬದ ಭೀತಿ ಹುಟ್ಟಿಸಿ ತೆಪ್ಪಗಿರಲು ಮತ್ತು ಪ್ರಬಲರ ಶೋಷಣೆಯನ್ನು ಸಹಿಸಿಕೊಂಡಿರಲು ನಿರ್ಬಂಧಿಸಲಾಗುತ್ತದೆ. ಅನಂತರ ಆ ಜನಾಂಗಗಳ ಆಂತರಿಕ ಪರಿಸ್ಥಿತಿಯನ್ನೊಮ್ಮೆ ಗಮನಿಸಿ-ಅವರ ಚಾರಿತ್ರ್ಯ ಪಿಶಾಚಿಯೂ ನಾಚಿಕೆ ಪಡುವಷ್ಟು ಕೆಳಮಟ್ಟದಲ್ಲಿದೆ. ಪ್ರಾಣಿಗಳೂ ಮಾಡದಂತಹ ಕೆಲಸವನ್ನು ಮಾನವ ಮಾಡುತ್ತಿದ್ದಾನೆ. ಮಕ್ಕಳು ತಮ್ಮ ಆಡಂಬರದ ಜೀವನಕ್ಕೆ ಅಡ್ಡಿಯುಂಟುಮಾಡುತ್ತಾರೆಂಬ ಕಾರಣದಿಂದ ತಾಯಂದಿರು ಸ್ವಕರಗಳಿಂದಲೇ ತಮ್ಮ ಮಕ್ಕಳನ್ನು ಕೊಲ್ಲುತ್ತಿದ್ದಾರೆ. ಪತಿಯಂದಿರು ಇತರರ ಪತ್ನಿಯರು ತಮ್ಮ ತೆವಲ ತೆಕ್ಕೆಗೆ ಬರಲೆಂದು ತಮ್ಮ ಪತ್ನಿಯರನ್ನು ಇತರರ ತೆವಲ ತೆಕ್ಕೆಗೆ ಕೊಟ್ಟು ಬಿಡುತ್ತಾರೆ. ನಗ್ನರ ಕ್ಲಬ್‌ಗಳನ್ನು ರಚಿಸಲಾಗುತ್ತದೆ. ಅಲ್ಲಿ ಸ್ತ್ರೀ-ಪುರುಷರು ಜಾನುವಾರುಗಳಂತೆ ಪರಸ್ಪರರ ಮುಂದೆ ಸುಳಿದಾಡುತ್ತಾರೆ. ಇವರು ತಮ್ಮ ಸೇವೆಗಾಗಿಯೇ ಹುಟ್ಟಿದವರೆಂಬ ರೀತಿಯಲ್ಲಿ ಮಾಲಕರು ದುರ್ಬಲರಿಂದ ಗುಲಾಮಗಿರಿ ಮಾಡಿಸುತ್ತಾರೆ. ಒಟ್ಟಿನಲ್ಲಿ ಪೈಶಾಚಿಕ ವಚನದ ಗಿಡ ಎಲ್ಲೇ ಹುಟ್ಟಿದರೂ ಮುಳ್ಳಿನಿಂದ ಕೂಡಿರುತ್ತದೆ. ಅದರಲ್ಲಿರುವ ಫಲಗಳು ಕಹಿ ಮತ್ತು ವಿಷಯುಕ್ತವಾಗಿರುತ್ತದೆ.

ಈ ಎರಡೂ ಉದಾಹರಣೆಗಳನ್ನು ಮುಂದಿಟ್ಟು ನಂತರ ಅಲ್ಲಾಹನು ಹೀಗೆನ್ನುತ್ತಾನೆ,

يُثَبِّتُ اللّٰهُ الَّذِيْنَ اٰمَنُوْا بِالْقَوْلِ الثَّابِتِ فِى الْحَيٰوةِ الدُّنْيَا وَفِى الْاٰخِرَةِ ۚ وَيُضِلُّ اللّٰهُ الظّٰلِمِيْنَ ۙ

"ಅಲ್ಲಾಹ್ ಸತ್ಯವಿಶ್ವಾಸಿಗಳಿಗೆ ಒಂದು ಸ್ಥಿರ ವಚನದ ಆಧಾರದಲ್ಲಿ ಇಹ-ಪರಗಳೆರಡರಲ್ಲೂ ಭದ್ರತೆ ದಯಪಾಲಿಸುತ್ತಾನೆ ಮತ್ತು ಅಕ್ರಮಿಗಳನ್ನು ಅಲ್ಲಾಹ್ ದಾರಿಗೆಡಿಸುತ್ತಾನೆ." (14:27)

ಅರ್ಥಾತ್ ಪವಿತ್ರ ವಚನದ ಮೇಲೆ ವಿಶ್ವಾಸವಿರಿಸುವವರಿಗೆ ಅಲ್ಲಾಹ್ ಸ್ಥಿರ ವಚನದ ಮೂಲಕ ಇಹ-ಪರಗಳೆರಡರಲ್ಲೂ ಸ್ಥಿರತೆ ಮತ್ತು ನೆಲೆಯನ್ನು ದಯಪಾಲಿಸುತ್ತಾನೆ. ಅದಕ್ಕೆ ಪ್ರತಿಯಾಗಿ ಪೈಶಾಚಿಕ ವಚನವನ್ನು ನಂಬುವ ಅಕ್ರಮಿಗಳನ್ನು ಅಲ್ಲಾಹನು ಅವರ ಎಲ್ಲ ಕೆಲಸಗಳಲ್ಲಿ ದಾರಿಗೆಡಿಸುವನು. ಇಹ-ಪರಗಳಲ್ಲಿ ಸತ್ಫಲ ನೀಡುವಂತಹ ಯಾವ ಕೆಲಸವನ್ನೂ ಅವರು ಮಾಡಲಾರರು.

ವಚನ ಪಠಿಸುವವರು ನಿಂದ್ಯರೇಕೆ?

ಬಂಧುಗಳೇ! ಪವಿತ್ರ ವಚನ ಮತ್ತು ಪೈಶಾಚಿಕ ವಚನದ ವ್ಯತ್ಯಾಸವನ್ನೂ ಅವುಗಳ ಪರಿಣಾಮವನ್ನೂ ನೀವು ಕೇಳಿದಿರಿ. ನಾವೂ ಪವಿತ್ರ ವಚನವನ್ನು ನಂಬುವವರು. ಆದರೆ ನಾವೇಕೆ ಅಭಿವೃದ್ಧಿ ಸಾಧಿಸುವುದಿಲ್ಲ? ಸತ್ಯನಿಷೇಧಿಗಳಾದರೋ ಪೈಶಾಚಿಕ ವಚನವನ್ನು ನಂಬುವವರಾಗಿದ್ದಾರೆ. ಅವರೇಕೆ ಅಭಿವೃದ್ಧಿ ಸಾಧಿಸುತ್ತಾರೆ? ಎಂದು ನೀವು ಖಂಡಿತಾ ಪ್ರಶ್ನಿಸಬಹುದು.

ಅದಕ್ಕೆ ಉತ್ತರಿಸುವ ಜವಾಬ್ದಾರಿ ನನ್ನದು, ಆದರೆ ಒಂದು ಶರತ್ತಿದೆ. ಆ ಉತ್ತರದಿಂದ ನೀವು ಕುಪಿತರಾಗುವ ಬದಲು, "ಈ ಉತ್ತರ ಸರಿಯೋ ತಪ್ಪೋ" ಎಂದು ನಿಮ್ಮ ಮನಸ್ಸನ್ನೇ ಕೇಳಿ ನೋಡಬೇಕು.

ಮೊದಲನೆಯದಾಗಿ ಪವಿತ್ರ ವಚನವನ್ನು ನಂಬಿಯೂ ನಾವು ಅಭಿವೃದ್ಧಿ ಸಾಧಿಸುತ್ತಿಲ್ಲ ಎಂಬ ನಿಮ್ಮ ಮಾತೇ ತಪ್ಪು. ಪವಿತ್ರ ವಚನವನ್ನು ನಂಬುವುದೆಂದರೆ ಬಾಯಿಯ ಮೂಲಕ ಅದನ್ನು ಪಠಿಸುವುದೆಂದಲ್ಲ. ಅದನ್ನು ನಂಬುವುದೆಂದರೆ ಮನಃಪೂರ್ವಕವಾಗಿ ಅದರ ಮೇಲೆ ವಿಶ್ವಾಸವಿಡುವುದಾಗಿದೆ. ಅನಂತರ ಅದಕ್ಕೆ ವಿರುದ್ಧವಾದ ಯಾವ ವಿಶ್ವಾಸವೂ ನಿಮ್ಮ ಮನದಲ್ಲಿರಬಾರದು. ಅದಕ್ಕೆ ವ್ಯತಿರಿಕ್ತವಾದ ಯಾವ ಕೆಲಸವನ್ನೂ ನೀವು ಮಾಡಬಾರದು. ಬಂಧುಗಳೇ! ದೇವನಾಣೆಗೂ ನಿಮ್ಮ ಅವಸ್ಥೆ ಹೀಗಿದೆಯೇ? ಸತ್ಯನಿಷೇಧ ಮತ್ತು ಬಹುದೇವಾರಾಧನೆಗೆ ಕೊಂಡೊಯ್ಯುವ ಪವಿತ್ರ ವಚನಕ್ಕೆ ವಿರುದ್ಧವಾದ ನೂರಾರು ವಿಚಾರಗಳು ನಿಮ್ಮಲ್ಲಿ ಹರಡಿಲ್ಲವೇ? ಮುಸ್ಲಿಮರ ಶಿರಗಳು ದೇವೇತರರ ಮುಂದೆ ಬಾಗುತ್ತಿಲ್ಲವೇ? ಮುಸ್ಲಿಮರು

ಅನ್ಯರನ್ನು ಭಯಪಡುತ್ತಿಲ್ಲವೇ? ದೇವನ ಕಾನೂನನ್ನು ಬಿಟ್ಟು ಇತರರ ಶಾಸನವನ್ನು ಸಸಂತೋಷ ಪಾಲಿಸುತ್ತಿಲ್ಲವೇ? ಇತರರ ಸಹಾಯದ ಭರವಸೆ ಇರಿಸುತ್ತಿಲ್ಲವೇ? ಇತರರನ್ನು ಅನ್ನದಾತರೆಂದು ಭಾವಿಸುತ್ತಿಲ್ಲವೇ? ತಮ್ಮನ್ನು ಮುಸ್ಲಿಮರೆಂದು ಹೇಳಿಕೊಳ್ಳುತ್ತಿರುವವರು ನ್ಯಾಯಾಲಯಕ್ಕೆ ಹೋಗಿ, "ನಾವು ಶರೀಅತ್ ನಿಯಮವನ್ನು ನಂಬುವುದಿಲ್ಲ, ರೀತಿ-ರಿವಾಜುಗಳನ್ನು ಮಾತ್ರವೇ ನಂಬುತ್ತೇವೆ" ಎಂದು ಹೇಳುವುದಿಲ್ಲವೇ? ಲೌಕಿಕ ಪ್ರಯೋಜನಕ್ಕಾಗಿ ದೇವನ ಯಾವುದೇ ನಿಯಮವನ್ನು ಉಲ್ಲಂಘಿಸಲು ಸ್ವಲ್ಪವೂ ಹಿಂಜರಿಯದಂತಹ ವ್ಯಕ್ತಿಗಳು ನಿಮ್ಮಲ್ಲಿಲ್ಲವೇ? ಸತ್ಯನಿಷೇಧಿಗಳ ಕ್ರೋಧಕ್ಕೆ ಹೆದರುವ ಮತ್ತು ದೇವ ಕ್ರೋಧವನ್ನು ನಿರ್ಲಕ್ಷಿಸಿದಂತಹ ವ್ಯಕ್ತಿಗಳು ನಿಮ್ಮಲ್ಲಿಲ್ಲವೇ? ದೇವಧಿಕ್ಕಾರಿಗಳ ಒಲವು ಗಳಿಸಲಿಕ್ಕಾಗಿ ಯಾವುದನ್ನು ಮಾಡಲಿಕ್ಕೂ ಸಿದ್ಧರಾಗುವ, ಆದರೆ ದೇವನ ಒಲವು ಗಳಿಸಲಿಕ್ಕಾಗಿ ಏನನ್ನೂ ಮಾಡದ ವ್ಯಕ್ತಿಗಳು ನಿಮ್ಮಲ್ಲಿಲ್ಲವೇ? ಸತ್ಯನಿಷೇಧಿಗಳ ಆಡಳಿತವನ್ನು ಆಡಳಿತವೆಂದು ನಂಬುವ, ದೇವನ ಆಡಳಿತದ ಬಗ್ಗೆ ಅಂತಹುದೊಂದು ಇದೆಯೋ ಎಂಬ ನೆನಪಾದರೂ ಇಲ್ಲದವರಿಲ್ಲವೇ? ನಿಜ ಹೇಳಿ! ಇದು ಸತ್ಯ ಸಂಗತಿಯಲ್ಲವೇ? ಸತ್ಯವೆಂದಾದರೆ "ನಾವು ಪವಿತ್ರ ವಚನವನ್ನು ಪಠಿಸುವವರಾಗಿದ್ದೂ ಅಭಿವೃದ್ಧಿ ಸಾಧಿಸುತ್ತಿಲ್ಲ"ವೆಂದು ಯಾವ ಮುಖ ಹೊತ್ತು ಕೊಂಡು ಹೇಳುತ್ತೀರಿ. ಮೊದಲು ಪ್ರಾಮಾಣಿಕ ಹೃದಯದಿಂದ ವಿಶ್ವಾಸ ಸ್ವೀಕರಿಸಿ, ಅನಂತರ ಅದರ ಪ್ರಕಾರ ಜೀವನ ನಡೆಸಿ, ಆಗಲೂ ಭೂಮಿಯಲ್ಲಿ ಆಳವಾಗಿ ಬೇರೂರಿರುವ ಮತ್ತು ಆಗಸದೆತ್ತರಕ್ಕೆ ಹರಡಿರುವ ವೃಕ್ಷ ಹುಟ್ಟದೇ ಹೋದರೆ ನೀವು, "ಅಲ್ಲಾಹನು ಹೇಳಿರುವುದು ಸುಳ್ಳು, ಅದೊಂದು ಮಿಥ್ಯ ವಾಗ್ದಾನ" ಎಂದು ಭಾವಿಸಬಹುದು. (ಅಲ್ಲಾಹನು ರಕ್ಷಿಸಲಿ)

ಪೈಶಾಚಿಕ ವಚನ ಪಠಿಸುವವರು ಪುರೋಗಮಿಸುತ್ತಿದ್ದಾರೆಯೇ?

ಹಾಗೆಯೇ ಪೈಶಾಚಿಕ ವಚನವನ್ನು ನಂಬುವವರು ಜಗತ್ತಿನಲ್ಲಿ ಅಭಿವೃದ್ಧಿ ಸಾಧಿಸುತ್ತಿದ್ದಾರೆ ಎಂದು ಹೇಳುವುದೂ ಸರಿಯಲ್ಲ. ಪೈಶಾಚಿಕ ವಚನವನ್ನು ನಂಬುವವರು ಹಿಂದೆಯೂ ಅಭಿವೃದ್ಧಿ ಸಾಧಿಸಿಲ್ಲ. ಇಂದೂ ಸಾಧಿಸುತ್ತಿಲ್ಲ. ಸಂಪತ್ತಿನ ಆಧಿಕ್ಯ, ಐಶಾರಾಮದ ಸಾಧನಗಳು ಮತ್ತು ಬಾಹ್ಯ ಆಡಂಬರಗಳನ್ನು ಕಂಡು ನೀವು ಅವರು ಅಭಿವೃದ್ಧಿ ಸಾಧಿಸುತ್ತಿದ್ದಾರೆ ಎಂದು ಭಾವಿಸುತ್ತೀರಿ. ಆದರೆ ಅವರಿಗೆಷ್ಟು ನೆಮ್ಮದಿ ಪ್ರಾಪ್ತವಾಗಿದೆ ಎಂದು ಅವರ ಮನಸ್ಸನ್ನು ಕೇಳಿ ನೋಡಿ. ಅವರು ಭೋಗವಿಲಾಸದ ಸಾಧನಗಳನ್ನು ಹೊತ್ತುಕೊಂಡಿದ್ದಾರೆ, ಆದರೆ ಅವರ ಹೃದಯದಲ್ಲಿ ಅಗ್ನಿಜ್ವಾಲೆಗಳು ಏಳುತ್ತಿವೆ. ಅದು ಅವರನ್ನು ಎಂದೂ ನೆಮ್ಮದಿಯಿಂದಿರಲು ಬಿಡುವುದಿಲ್ಲ. ದೇವನ ನಿಯಮಗಳ ಉಲ್ಲಂಘನೆಯಿಂದಾಗಿ ಅವರ ಮನೆಗಳು ನರಕಸದೃಶವಾಗಿವೆ. ಯುರೋಪ್ ಅಮೇರಿಕಗಳಲ್ಲಿ ಆತ್ಮಹತ್ಯೆಯ ಪ್ರಮಾಣ ಎಷ್ಟು ಹೆಚ್ಚಿದೆ! ವಿವಾಹ ವಿಚ್ಛೇದನಗಳು ಹೇಗೆ ವೃದ್ಧಿಸಿವೆ! ಸಂತಾನಹರಣ

ಹೇಗೆ ವ್ಯಾಪಕವಾಗಿದೆ! ಎಂಬುದನ್ನು ಪತ್ರಿಕೆಗಳನ್ನು ಓದಿ ತಿಳಿಯಿರಿ. ಪೈಶಾಚಿಕ ರೋಗಗಳು ಲಕ್ಷಗಟ್ಟಲೆ ಜನರ ಜೀವನವನ್ನು ಹಾಳು ಮಾಡಿದೆ. ಆಹಾರಕ್ಕಾಗಿ ಯಾವ ರೀತಿ ವಿಭಿನ್ನ ವರ್ಗಗಳು ಕಚ್ಚಾಡುತ್ತಿವೆ. ದ್ವೇಷ ಮತ್ತು ಅಸೂಯೆ ಯಾವ ರೀತಿ ಮಾನವಕುಲವನ್ನು ಕಚ್ಚಾಡುವಂತೆ ಮಾಡಿದೆ. ವಿಲಾಸಪ್ರಿಯತೆಯಿಂದ ಜೀವನ ಎಷ್ಟು ಕಠಿಣವಾಗಿ ಬಿಟ್ಟಿದೆ. ಜನರು ದೂರದಿಂದ ಕಂಡು ಸ್ವರ್ಗವೆಂದು ಕನಸು ಕಾಣುವ ಬೃಹತ್ ನಗರಗಳಲ್ಲಿ ಅದೆಷ್ಟು ಮಂದಿ ಸಂಕಷ್ಟದ ಜೀವನ ನಡೆಸುತ್ತಿದ್ದಾರೆ. ಇದನ್ನೇ ನೀವು ಅಭಿವೃದ್ಧಿಯೆನ್ನುತ್ತೀರಾ? ನೀವು ಇಂತಹುದೇ ಸ್ವರ್ಗಕ್ಕಾಗಿ ತವಕಿಸುತ್ತಿದ್ದೀರಾ?

ಬಂಧುಗಳೇ! ದೇವವಾಣಿ ಎಂದೂ ಸುಳ್ಳಾಗಲಾರದೆಂದು ನೆನಪಿಡಿ. ಪವಿತ್ರ ವಚನದ ವಿನಾ ಬೇರಾವ ವಚನದ ಮೂಲಕವೂ ಮಾನವ, ಲೋಕದ ಸಂತೃಪ್ತಿ ಮತ್ತು ಪರಲೋಕದ ಜಯ ತನ್ನದಾಗಿಸಿಕೊಳ್ಳಲಾರ. ನೀವು ಯಾವ ಕಡೆಗೆ ದೃಷ್ಟಿ ಹರಿಸಿದರೂ ಇದಕ್ಕೆ ವ್ಯತಿರಿಕ್ತವಾದುದು ನಿಮಗೆಲ್ಲೂ ಕಾಣಸಿಗಲಾರದು.

○

ಪವಿತ್ರ ವಚನದ ಮೇಲೆ ವಿಶ್ವಾಸವಿರಿಸುವುದರ ಉದ್ದೇಶ

ಮುಸ್ಲಿಮ್ ಸಹೋದರರೇ!

ಇದಕ್ಕೆ ಮೊದಲು ಎರಡು ಪ್ರವಚನಗಳಲ್ಲಿ ಪವಿತ್ರ ವಚನದ ತಾತ್ಪರ್ಯವನ್ನು ವಿವರಿಸಿದ್ದೇನೆ. ಇಂದು ನಾನು ಈ ವಚನದ ಮೇಲೆ ವಿಶ್ವಾಸವಿಡುವುದರಿಂದಾಗುವ ಪ್ರಯೋಜನ ಮತ್ತು ಅದರ ಅಗತ್ಯದ ಕುರಿತು ಚರ್ಚಿಸಬೇಕೆಂದಿದ್ದೇನೆ.

ಪ್ರತಿಯೊಂದು ಕೆಲಸಕ್ಕೂ ಉದ್ದೇಶವಿದೆ

ಮಾನವ ಪ್ರತಿಯೊಂದು ಕೆಲಸವನ್ನೂ ಯಾವುದಾದರೊಂದು ಉದ್ದೇಶ ಅಥವಾ ಪ್ರಯೋಜನಕ್ಕಾಗಿಯೇ ಮಾಡುತ್ತಾನೆಂದು ನಿಮಗೆ ತಿಳಿದಿದೆ. ಉದ್ದೇಶರಹಿತ, ನಿಷ್ಪ್ರಯೋಜಕ ಕೆಲಸವನ್ನು ಯಾರೂ ಮಾಡುವುದಿಲ್ಲ. ನೀವು ನೀರು ಕುಡಿಯುವುದೇಕೆ? ಬಾಯಾರಿಕೆ ತಣಿಯಬೇಕೆಂಬ ಕಾರಣಕ್ಕಾಗಿ! ನೀರು ಕುಡಿದ ನಂತರವೂ ನಿಮ್ಮ ಸ್ಥಿತಿ ಮೊದಲಿನಂತೆಯೇ ಇದ್ದರೆ ನೀವು ನೀರು ಕುಡಿಯುವುದೇ ಬೇಡ. ಏಕೆಂದರೆ ಅದು ನಿಷ್ಪ್ರಯೋಜಕ. ನೀವು ಆಹಾರ ಸೇವನೆ ಮಾಡುವುದೇಕೆ? ಆಹಾರ ಸೇವನೆ ಮಾಡುವ ಅಥವಾ ಮಾಡದಿರುವುದರ ಪರಿಣಾಮ ಒಂದೇ ಆಗಿದ್ದರೆ ಅದೊಂದು ನಿಷ್ಪ್ರಯೋಜಕ ಕೆಲಸವೆಂದೇ ನೀವು ಹೇಳುವಿರಿ. ರೋಗದ ವೇಳೆ ನೀವು ಔಷಧಿ ಸೇವಿಸುವುದೇಕೆ? ರೋಗ ನಿವಾರಣೆಯಾಗಿ ಆರೋಗ್ಯ ಪ್ರಾಪ್ತವಾಗಲಿಕ್ಕಾಗಿ! ಔಷಧಿ ಸೇವನೆ ಮಾಡಿದ ನಂತರವೂ ರೋಗಿಯ ಸ್ಥಿತಿ ಮೊದಲಿನಂತೆಯೇ ಇದ್ದರೆ ಇಂತಹ ಔಷಧಿ ಕುಡಿಯುವುದು ನಿರರ್ಥಕವೆಂದು ನೀವು ಹೇಳುವಿರಿ. ಬೇಸಾಯಕ್ಕಾಗಿ ನೀವು ಇಷ್ಟು ಪ್ರಯತ್ನ ಮಾಡುವುದೇಕೆ? ಭೂಮಿಯಿಂದ ಧಾನ್ಯ, ಹಣ್ಣುಹಂಪಲು ಮತ್ತು ತರಕಾರಿ ಉತ್ಪಾದನೆಯಾಗಲೆಂದು! ಬೀಜ ಬಿತ್ತಿದ ಬಳಿಕವೂ ಮೊಳಕೆಯೊಡೆಯದೇ ಇದ್ದರೆ ನೀವು ಉತ್ತು ಬಿತ್ತು ನೀರು ಹಾಯಿಸಿ ತ್ರಾಸಪಡುವ ಅಗತ್ಯವೇ ಇರಲಿಲ್ಲ. ಒಟ್ಟಿನಲ್ಲಿ ನಿಮ್ಮ ಪ್ರತಿಯೊಂದು ಕೆಲಸಕ್ಕೂ ನಿರ್ದಿಷ್ಟ ಉದ್ದೇಶ ಇದ್ದೇ ಇರುತ್ತದೆ. ಉದ್ದೇಶ ಸಾಧಿತವಾದರೆ ಕೆಲಸ ಆಗಿ ಬಿಟ್ಟಿತು ಎಂದು ನೀವು ಹೇಳುತ್ತೀರಿ. ಉದ್ದೇಶ ಸಾಧಿತವಾಗದೇ ಹೋದರೆ ಕೆಲಸ ಕೆಟ್ಟಿತು ಎನ್ನುತ್ತೀರಿ.

ಪವಿತ್ರ ವಚನವನ್ನು ಪಠಿಸುವುದರ ಉದ್ದೇಶ

ಈ ವಿಷಯವನ್ನು ಮನನ ಮಾಡಿದ ನಂತರ ನನ್ನ ಒಂದೊಂದೇ ಪ್ರಶ್ನೆಗೆ ಉತ್ತರ ಕೊಡುತ್ತಾ ಹೋಗಿ. ನೀವು ಪವಿತ್ರ ವಚನವನ್ನೇಕೆ ಪಠಿಸುತ್ತೀರಿ ಎಂಬುದು ಮೊಟ್ಟ ಮೊದಲ ಪ್ರಶ್ನೆ. ಅದಕ್ಕೆ ನೀವು ಈ ವಚನವನ್ನು ಪಠಿಸುವ ಮೂಲಕ ಸತ್ಯವಿಶ್ವಾಸಿ ಮತ್ತು ಸತ್ಯನಿಷೇಧಿಯಲ್ಲಿ ಅಂತರ ಉಂಟು ಮಾಡುವುದು ಅದರ ಉದ್ದೇಶ ಎಂದೇ ಉತ್ತರಿಸುವಿರಿ. ಹಾಗೆ ವ್ಯತ್ಯಾಸ ಉಂಟಾಗುವುದೆಂದರೇನು? ಎಂದು ನಾನು ಪ್ರಶ್ನಿಸುತ್ತೇನೆ. ಸತ್ಯನಿಷೇಧಿಗಿರುವ ಎರಡು ಕಣ್ಣಿಗೆ ಪ್ರತಿಯಾಗಿ ಮುಸ್ಲಿಮನಿಗೆ ನಾಲ್ಕು ಕಣ್ಣುಗಳಾಗಬೇಕೆಂದು ಇದರ ಅರ್ಥವೇ? ಅಥವಾ ಸತ್ಯನಿಷೇಧಿಗಿರುವ ಒಂದು ತಲೆಗೆ ಪ್ರತಿಯಾಗಿ ಮುಸ್ಲಿಮನಿಗೆ ಎರಡು ತಲೆಯಾಗ ಬೇಕೆಂದರ್ಥವೇ? ಅದರ ಅರ್ಥ ಹಾಗಲ್ಲವೆಂದು ನೀವು ಹೇಳುವಿರಿ. ವ್ಯತ್ಯಾಸ ಉಂಟಾಗು ವುದೆಂದರೆ ಸತ್ಯನಿಷೇಧಿಯ ಮತ್ತು ಸತ್ಯವಿಶ್ವಾಸಿಯ ಪರಿಣಾಮದಲ್ಲಿ ಅಂತರ ಏರ್ಪಡಬೇಕು. ಸತ್ಯನಿಷೇಧಿಯು ಪರಲೋಕದಲ್ಲಿ ದೇವನ ಅನುಗ್ರಹದಿಂದ ವಂಚಿತನಾಗಿ ಪರಾಜಿತನಾಗುವನು. ಮುಸ್ಲಿಮನು ದೇವನ ಸಂಪ್ರೀತಿಯನ್ನು ಗಳಿಸುವನು ಮತ್ತು ಪರಲೋಕದಲ್ಲಿ ವಿಜಯಿಯಾ ಗುವನು ಎಂದು ನೀವು ಹೇಳುವಿರಿ.

ಪರಲೋಕದ ಜಯಾಪಜಯ

ನೀವು ಕೊಟ್ಟ ಉತ್ತರ ಬಹಳ ಸಮರ್ಪಕವಾಗಿದೆ ಎಂದು ನಾನು ಹೇಳುವೆ. ಆದರೆ ಪರಲೋಕವೆಂದರೇನು? ಪರಲೋಕದ ಜಯಾಪಜಯಗಳೆಂದರೇನು? ಈ ಮಾತನ್ನು ತಿಳಿದುಕೊಳ್ಳುವ ತನಕ ನಾನು ಮುಂದುವರಿಯಲಾರೆ.

ಈ ಪ್ರಶ್ನೆಯ ಉತ್ತರವನ್ನು ನೀವು ಕೊಡಬೇಕಾಗಿಲ್ಲ. ಅದರ ಉತ್ತರವನ್ನು ಮೊದಲೇ ಕೊಡಲಾಗಿದೆ. "ಇಹಲೋಕವು ಪರಲೋಕದ ಹೊಲವಾಗಿದೆ" ಎಂದು ಪ್ರವಾದಿವರ್ಯರು(ಸ) ಹೇಳಿದ್ದಾರೆ. ಅಂದರೆ ಇಹಲೋಕ ಮತ್ತು ಪರಲೋಕವೆಂಬುದು ಪರಸ್ಪರ ಭಿನ್ನವಲ್ಲ. ಅವೆರಡೂ ಒಂದೇ ಸರಣಿಗೆ ಸೇರಿದ್ದಾಗಿದೆ. ಅದರ ಆರಂಭ ಇಹಲೋಕವಾದರೆ ಕೊನೆ ಪರಲೋಕವಾಗಿದೆ. ಅವೆರಡರಲ್ಲಿ ಹೊಲ ಮತ್ತು ಬೆಳೆಯ ನಡುವೆ ಇರುವಂತಹ ಸಂಬಂಧವಿದೆ. ನೀವು ಭೂಮಿಯಲ್ಲಿ ಉಳುಮೆ ಮಾಡುತ್ತೀರಿ. ಅನಂತರ ಬೀಜಾಂಕುರ ಮಾಡುತ್ತೀರಿ. ತದನಂತರ ಸಿದ್ಧವಾಗುವ ಬೆಳೆಯನ್ನು ಕೊಯ್ದು ವರ್ಷವಿಡೀ ಆರಾಮವಾಗಿ ಕುಳಿತು ತಿನ್ನುತ್ತೀರಿ. ನೀವು ಗೋಧಿ ನೆಟ್ಟರೆ ಗೋಧಿಯೇ ಬೆಳೆಯುವುದು. ಮುಳ್ಳುಕಂಟಿಗಳನ್ನು ನೆಟ್ಟರೆ ಅದೇ ಬೆಳೆಯುವುದು, ಏನನ್ನೂ ನೆಡದಿದ್ದರೆ ಯಾವುದೂ ಬೆಳೆಯಲಾರದು. ಹೊಲ ಉಳುವ, ಬಿತ್ತನೆ ನಡೆಸುವ, ನೀರು ಹರಿಸುವ ಮತ್ತು ಕಾವಲು ನಡೆಸುವ ಸಂದರ್ಭದಲ್ಲಿ ನಿಮ್ಮಿಂದ ಆಗಿರ ಬಹುದಾದ ಪ್ರಮಾದಗಳ ಪರಿಣಾಮ ಬೆಳೆ ತೆಗೆಯುವ ಸಂದರ್ಭದಲ್ಲಿ ನಿಮಗೆ ತಿಳಿದು ಬರುವುದು. ಪ್ರಸ್ತುತ ಕೆಲಸಗಳನ್ನೆಲ್ಲಾ ನೀವು ಚೆನ್ನಾಗಿ ನಿರ್ವಹಿಸಿದ್ದರೆ ಅದರ ಪ್ರಯೋಜನವನ್ನೂ ಬೆಳೆ ತೆಗೆಯುವ ಸಂದರ್ಭದಲ್ಲಿ ನೀವು ಕಾಣುವಿರಿ.

ಇಹಲೋಕ ಮತ್ತು ಪರಲೋಕದ ಸ್ಥಿತಿಯೂ ಹೀಗೆಯೇ ಇರುತ್ತದೆ. ಇಹಲೋಕ ಒಂದು ಹೊಲವಾಗಿದೆ. ಈ ಹೊಲದ ಬಳಿ ಮನುಷ್ಯನನ್ನು ಸ್ವಪ್ರಯತ್ನದಿಂದ ಬೆಳೆ ಸಿದ್ಧಪಡಿಸಲಿಕ್ಕಾಗಿ ಕಳುಹಿಸಲಾಗಿದೆ. ಹುಟ್ಟಿನಿಂದ ಸಾವಿನ ತನಕ ಅವನಿಗೆ ಅವಕಾಶ ಕಲ್ಪಿಸಲಾಗಿದೆ. ಈ ಅವಧಿಯಲ್ಲಿ ಮಾನವ ಎಂತಹ ಬೆಳೆಯನ್ನು ಸಿದ್ಧಪಡಿಸುತ್ತಾನೋ ಅಂತಹ ಬೆಳೆಯನ್ನೇ ಮರಣೋತ್ತರ ಜೀವನದಲ್ಲಿ ಅವನು ಕೊಯ್ಯುವನು. ಆ ಬೆಳೆಯ ಆಧಾರದಲ್ಲೇ ಅವನು ಪರಲೋಕದಲ್ಲಿ ಜೀವನ ಸಾಗಿಸುವನು. ಒಬ್ಬನು ಜೀವನ ಪರ್ಯಂತ ಇಹಲೋಕದ ಹೊಲದಲ್ಲಿ ಉತ್ತಮ ಫಲಗಳ ಬೀಜ ಬಿತ್ತಿದ್ದರೆ, ಅದಕ್ಕೆ ಧಾರಾಳ ನೀರು ಹಾಯಿಸಿದ್ದರೆ, ಅವುಗಳನ್ನು ಚೆನ್ನಾಗಿ ಕಾವಲು ನಡೆಸಿದ್ದರೆ ಪರಲೋಕ ಜೀವನಕ್ಕೆ ಹೆಜ್ಜೆಯಿರಿಸುವಾಗ ಅವನು ತನ್ನ ಪರಿಶ್ರಮದ ಫಲವನ್ನು ಸಸ್ಯಶ್ಯಾಮಲ ತೋಟದ ರೂಪದಲ್ಲಿ ಪಡೆಯುವನು. ಆಗ ಅವನಿಗೆ ತನ್ನ ಆ ಎರಡನೇ ಹಂತದ ಜೀವನದಲ್ಲಿ ಯಾವ ಪರಿಶ್ರಮವನ್ನೂ ಪಡಬೇಕಾಗಿಲ್ಲ. ಲೋಕದಲ್ಲಿ ಜೀವನ ಪರ್ಯಂತ ಪ್ರಯತ್ನಿಸಿ ಅವನು ಸಿದ್ಧಪಡಿಸಿದ್ದ ತೋಟದ ಫಲಗಳ ಮೂಲಕ ಅವನು ನೆಮ್ಮದಿಯ ಬದುಕು ಸಾಗಿಸುವನು. ಅದರ ಹೆಸರೇ ಸ್ವರ್ಗ. ಪರಲೋಕದಲ್ಲಿ ವಿಜಯಿಯಾಗುವುದರ ಅರ್ಥ ಇದುವೇ ಆಗಿದೆ.

ಇದಕ್ಕೆ ಪ್ರತಿಯಾಗಿ ಈ ಲೋಕದಲ್ಲಿ ಮುಳ್ಳುಕಂಟಿಗಳನ್ನೂ ಕಹಿಫಲಗಳ ಬೀಜಗಳನ್ನೂ ಬಿತ್ತುತ್ತಿದ್ದರೆ ಅವನಿಗೆ ಪರಲೋಕ ಜೀವನದಲ್ಲಿ ಆ ಫಲಗಳ ಬೆಳೆಯೇ ಸಿದ್ಧವಾಗಿರುವುದು. ತನ್ನ ಈ ಮೂರ್ಖತನವನ್ನು ಸರಿಪಡಿಸಲು ಮತ್ತು ಕೆಟ್ಟ ಬೆಳೆಯನ್ನು ಹೊತ್ತಿಸಿ ಪುನಃ ಉತ್ತಮ ಬೆಳೆಯನ್ನು ಸಿದ್ಧಪಡಿಸಲು ಅವನಿಗಲ್ಲಿ ಅವಕಾಶ ಕಲ್ಪಿಸಲಾಗುವುದಿಲ್ಲ. ಪರಲೋಕದ ತನ್ನ ಸಂಪೂರ್ಣ ಜೀವನವನ್ನು ಅವನು ಈ ಲೋಕದಲ್ಲಿ ತಾನು ಸಿದ್ಧಪಡಿಸಿದ ಬೆಳೆಯ ಆಧಾರದಲ್ಲೇ ಕಳೆಯಬೇಕಾಗುವುದು. ಅವನು ನೆಟ್ಟಿದ್ದ ಮುಳ್ಳಿನ ಹಾಸಿಗೆಯಲ್ಲೇ ಅವನು ಮಲಗಬೇಕಾಗುವುದು. ಅವನು ಬೆಳೆಸಿದ್ದ ಕಹಿ ಮತ್ತು ವಿಷಯುಕ್ತ ಫಲಗಳನ್ನೇ ಅಲ್ಲಿ ತಿನ್ನಬೇಕಾಗುವುದು. ಪರಲೋಕದಲ್ಲಿ ಪರಾಜಯ ಹೊಂದುವುದರ ಅರ್ಥ ಇದುವೇ ಆಗಿದೆ.

ನಾನು ಪರಲೋಕಕ್ಕೆ ಕೊಟ್ಟಿರುವ ಈ ವಿವರಣೆಯನ್ನು ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ವಚನಗಳು ದೃಢೀಕರಿಸುತ್ತವೆ. ಇದರಿಂದ ಪರಲೋಕ ಜೀವನದಲ್ಲಿ ಮಾನವ ಜಯಾಪಜಯಗಳನ್ನು ಎದುರಿಸುವುದು, ಒಳ್ಳೆಯ ಅಥವಾ ಕೆಟ್ಟ ಪರಿಣಾಮಗಳನ್ನು ಪಡೆಯುವುದು ಇಹಲೋಕದ ಜೀವನದಲ್ಲಿ ಅವನ ಜ್ಞಾನ ಮತ್ತು ಕರ್ಮ ಸರಿ ಅಥವಾ ತಪ್ಪಾಗಿರುವುದನ್ನೇ ಆಧರಿಸಿದೆ ಎಂದು ವ್ಯಕ್ತವಾಗುತ್ತದೆ.

ಸತ್ಯನಿಷೇಧಿ ಮತ್ತು ಮುಸ್ಲಿಮನ ಪರಿಣಾಮದಲ್ಲಿ ಅಂತರವೇಕೆ?

ಈ ವಿಷಯವನ್ನು ಮನನ ಮಾಡಿದರೆ ಸತ್ಯನಿಷೇಧಿ ಮತ್ತು ಮುಸ್ಲಿಮರ ಅಂತಿಮ ಗತಿಯಲ್ಲಿ ಅಂತರ ಉಂಟಾಗುವುದು ವಿನಾ ಕಾರಣವಲ್ಲವೆಂದು ನಿಮಗೆ ಅರ್ಥವಾಗುತ್ತದೆ. ಅಂತಿಮ ಗತಿಯಲ್ಲಾಗುವ ವ್ಯತ್ಯಾಸಕ್ಕೆ ಕಾರಣ ಆರಂಭದಲ್ಲಾಗುವ ವ್ಯತ್ಯಾಸವೇ ಆಗಿದೆ.

ಇಹಲೋಕದಲ್ಲಿ ಸತ್ಯನಿಷೇಧಿ ಮತ್ತು ಮುಸ್ಲಿಮನ ಜ್ಞಾನ ಮತ್ತು ಕರ್ಮದಲ್ಲಿ ವ್ಯತ್ಯಾಸ ವಿಲ್ಲದಿದ್ದರೆ ಪರಲೋಕದಲ್ಲೂ ಸತ್ಯನಿಷೇಧಿ ಮತ್ತು ಮುಸ್ಲಿಮರ ನಡುವೆ ಅಂತರವಿರಲು ಸಾಧ್ಯವಿಲ್ಲ. ಇಹಲೋಕದಲ್ಲಿ ಒಬ್ಬನ ಜ್ಞಾನ ಮತ್ತು ಕರ್ಮ ಸತ್ಯನಿಷೇಧಿಯಂತೆಯೇ ಇದ್ದು ಪರಲೋಕದಲ್ಲಿ ಮಾತ್ರ ಅವನು ಸತ್ಯನಿಷೇಧಿಗೆದುರಾಗುವ ಪರಿಣಾಮದಿಂದ ಮುಕ್ತನಾಗುವುದು ಎಂದೂ ಸಾಧ್ಯವಾಗಲಾರದು.

ಜ್ಞಾನ ಮತ್ತು ಕರ್ಮದ ದುರಸ್ತಿ

ಈಗ ಪುನಃ ಪವಿತ್ರ ವಚನವನ್ನು ಪಠಿಸುವುದರ ಉದ್ದೇಶವೇನು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಮುಸ್ಲಿಮನ ಅಂತಿಮ ಪರಿಣಾಮದಲ್ಲೂ ಸತ್ಯನಿಷೇಧಿಯ ಅಂತಿಮ ಪರಿಣಾಮದಲ್ಲೂ ವ್ಯತ್ಯಾಸ ಉಂಟಾಗಬೇಕೆಂಬುದೇ ಇದರ ಉದ್ದೇಶವೆಂದು ನೀವು ಈ ಮೊದಲು ಉತ್ತರಿಸಿದ್ದೀರಿ. ಅಂತಿಮ ಪರಿಣಾಮ ಮತ್ತು ಪರಲೋಕದ ವಿವರಣೆಯನ್ನು ಕೇಳಿದ ನಂತರ ನೀವು ನಿಮ್ಮ ಉತ್ತರದ ಬಗ್ಗೆ ಮತ್ತೊಮ್ಮೆ ಆಲೋಚಿಸಬೇಕಾಗಿದೆ. "ಪವಿತ್ರ ವಚನದ ಉದ್ದೇಶ ಮನುಷ್ಯನ ಜ್ಞಾನ ಮತ್ತು ಕರ್ಮವನ್ನು ಸರಿಪಡಿಸುವುದು ಮತ್ತು ಆ ಮೂಲಕ ಪರಲೋಕದ ಅಂತಿಮ ಪರಿಣಾಮವನ್ನು ಸರಿಪಡಿಸುವುದು" ಎಂದು ನೀವೀಗ ಹೇಳುವಿರಿ. ಪರಲೋಕದಲ್ಲಿ ಫಲ ಪಡೆಯಲಿಕ್ಕಾಗಿ ಇಹಲೋಕದಲ್ಲಿ ತೋಟಗಾರಿಕೆ ಮಾಡುವುದನ್ನು ಈ ವಚನ ಕಲಿಸುತ್ತದೆ. ಮನುಷ್ಯನು ಆ ವಚನವನ್ನೇ ನಂಬದೇ ಹೋದರೆ ಅವನಿಗೆ ತೋಟಗಾರಿಕೆಯ ವಿಧಾನವೇ ತಿಳಿಯಲಾರದು. ಹಾಗಿರುವಾಗ ಅವನು ತೋಟಗಾರಿಕೆ ಮಾಡುವುದು ಮತ್ತು ಪರಲೋಕದಲ್ಲಿ ಅದರಿಂದ ಫಲ ಪಡೆಯುವುದು ಹೇಗೆ? ಮತ್ತೊಬ್ಬ ಆ ವಚನವನ್ನು ನಾಲಗೆಯಿಂದ ಉಚ್ಚರಿಸುತ್ತಾನೆ. ಆದರೆ ಅವನ ಜ್ಞಾನ ಅದನ್ನು ಉಚ್ಚರಿಸದವನಂತೆಯೇ ಇರುತ್ತದೆ. ಅವನ ಕರ್ಮವೂ ಸತ್ಯನಿಷೇಧಿಯಂತೆಯೇ ಇರುತ್ತದೆ. ಅವನ ಬಗ್ಗೆ "ಹಾಗೆ ಆ ವಚನವನ್ನು ಉಚ್ಚರಿಸುವುದರಿಂದೇನೂ ಪ್ರಯೋಜನವಿಲ್ಲ"ವೆಂಬ ವಿಷಯ ನಿಮ್ಮ ಬುದ್ಧಿಗೇ ನಿಲುಕುತ್ತದೆ. ಅಂತಹವನ ಅಂತಿಮ ಪರಿಣಾಮ, ಸತ್ಯನಿಷೇಧಿಗಿಂತ ಭಿನ್ನವಾಗಿರಲು ಯಾವ ಕಾರಣವೂ ಇಲ್ಲ. ಕೇವಲ ನಾಲಗೆಯಿಂದ ವಚನವನ್ನು ಪಠಿಸುವ ಮೂಲಕ ಅವನು ದೇವನಿಗೆ ಉಪಕಾರ ಮಾಡಿದಂತಾಗುವುದಿಲ್ಲ. ತೋಟಗಾರಿಕೆಯ ವಿಧಾನವನ್ನೂ ಅವನು ತಿಳಿಯಲಿಲ್ಲ. ತೋಟಗಾರಿಕೆ ಮಾಡಲೂ ಇಲ್ಲ. ಜೀವನ ಪರ್ಯಂತ ಮುಳ್ಳುಕಂಟಿಗಳನ್ನೇ ನೆಡುತ್ತಿದ್ದ ಅವನಿಗೆ ಪರಲೋಕದಲ್ಲಿ ಫಲಭರಿತವಾದ ತೊನೆದಾಡುವ ತೋಟ ಹೇಗೆ ಸಿಕ್ಕೀತು? ಒಂದು ಕೆಲಸವನ್ನು ಮಾಡುವ ಮತ್ತು ಮಾಡದಿರುವುದರ ಪರಿಣಾಮ ಒಂದೇ ಆಗಿದ್ದರೆ ಅಂತಹ ಕೆಲಸವನ್ನು ಮಾಡುವುದು ನಿರರ್ಥಕ. ಔಷಧಿ ಕುಡಿದ ನಂತರವೂ ರೋಗಿಯ ಸ್ಥಿತಿ ಮೊದಲಿನಂತೆಯೇ ಇದ್ದರೆ ಆ ಔಷಧಿ, ಔಷಧಿಯೆನಿಸಿಕೊಳ್ಳಲಾರದು. ಹಾಗೆಯೇ ಪವಿತ್ರ ವಚನವನ್ನು ಪಠಿಸಿದ ನಂತರವೂ ವ್ಯಕ್ತಿಯ ಜ್ಞಾನ ಮತ್ತು ಕರ್ಮ, ಅದನ್ನು ಪಠಿಸದವನಂತೆಯೇ ಇದ್ದರೆ ಹಾಗೆ ಆ ವಚನವನ್ನು ಪಠಿಸುವುದು ನಿರರ್ಥಕ. ಲೋಕದಲ್ಲಿ ಸತ್ಯನಿಷೇಧಿ

ಮತ್ತು ಮುಸ್ಲಿಮನ ಜೀವನದಲ್ಲಿ ವ್ಯತ್ಯಾಸ ಉಂಟಾಗದೆ ಹೋದರೆ ಪರಲೋಕದಲ್ಲಿ ವ್ಯತ್ಯಾಸ ಉಂಟಾಗುವುದಾದರೂ ಹೇಗೆ?

ಪವಿತ್ರ ವಚನ ಏನನ್ನು ಕಲಿಸುತ್ತದೆ?

ಹಾಗಾದರೆ ಪವಿತ್ರ ವಚನವು ಮನುಷ್ಯನಿಗೆ ಕಲಿಸುವಂತಹ ಆ ಜ್ಞಾನ ಯಾವುದು? ಮತ್ತು ಆ ಜ್ಞಾನವನ್ನು ಸಂಪಾದಿಸಿದ ನಂತರ ಮುಸ್ಲಿಮನ ಮತ್ತು ಸತ್ಯನಿಷೇಧಿಯ ಕರ್ಮದಲ್ಲಿ ಎಂತಹ ವ್ಯತ್ಯಾಸ ತಲೆದೋರುತ್ತದೆ ಎಂಬ ಪ್ರಶ್ನೆ ಉದ್ಭವಿಸುತ್ತದೆ.

1. ಅಲ್ಲಾಹನ ದಾಸ್ಯ

ಮೊದಲನೆಯದಾಗಿ ಈ ವಚನದಿಂದ ನಿಮಗೆ ತಿಳಿದು ಬರುವುದೇನೆಂದರೆ ನೀವು ಅಲ್ಲಾಹನ ದಾಸರು ಮಾತ್ರವೇ ಆಗಿದ್ದೀರಿ. ನೀವು ಮತ್ತಾರ ದಾಸರೂ ಅಲ್ಲ. ಈ ವಿಷಯ ತಿಳಿದಾಕ್ಷಣ ನೀವು ಯಾರ ದಾಸರಾಗಿದ್ದೀರೋ ಅವನಿಚ್ಛೆಯಂತೆಯೇ ನಡೆಯಬೇಕೆಂದೂ ನಿಮಗೆ ತಿಳಿಯುವುದು. ಏಕೆಂದರೆ ಅವನ ಇಚ್ಛೆಗೆ ವಿರುದ್ಧವಾಗಿ ನಡೆದರೆ ಅವನ ವಿರುದ್ಧ ಬಂಡೆದ್ದಂತಾಗುವುದು.

2. ಪ್ರವಾದಿವರ್ಯರ(ಸ) ಅನುಸರಣೆ

ಮುಹಮ್ಮದ್(ಸ) ಅಲ್ಲಾಹನ ಪ್ರವಾದಿ ಎಂಬುದು ಈ ವಚನದ ಮೂಲಕ ಪ್ರಾಪ್ತವಾಗುವ ಇನ್ನೊಂದು ಜ್ಞಾನವಾಗಿದೆ. ಈ ಜ್ಞಾನ ಪ್ರಾಪ್ತವಾದ ತಕ್ಷಣ ಇನ್ನೊಂದು ವಿಷಯವೂ ನಿಮಗೆ ತಿಳಿದು ಬರುವುದು. ಅದೇನೆಂದರೆ ಅಲ್ಲಾಹನ ಪ್ರವಾದಿಯು ಲೋಕದ ಹೊಲದಲ್ಲಿ ಮುಳ್ಳುಕಂಟಿ ಮತ್ತು ವಿಷಯುಕ್ತ ಫಲಗಳ ಬದಲು ಸವಿಯಾದ ಫಲಪುಷ್ಪಗಳಿಂದಾವೃತವಾದ ತೋಟ ಸಿದ್ಧಪಡಿಸುವುದನ್ನು ಕಲಿಸಿದರು. ಈ ವಿಧಾನವನ್ನು ಅನುಸರಿಸಿದರೆ ಪರಲೋಕದಲ್ಲಿ ನಿಮಗೂ ಉತ್ತಮ ಫಲಗಳು ದೊರೆಯುವುದು. ಇದಕ್ಕೆ ವ್ಯತಿರಿಕ್ತವಾಗಿ ನಡೆದರೆ ಲೋಕದಲ್ಲೂ ನೀವು ಮುಳ್ಳುಕಂಟಿಗಳನ್ನೇ ನೆಡುವಿರಿ ಮತ್ತು ಪರಲೋಕದಲ್ಲೂ ಅದನ್ನೇ ಪಡೆಯುವಿರಿ.

ಜ್ಞಾನಕ್ಕೆ ಪೂರಕವಾದ ಕರ್ಮ

ಈ ಜ್ಞಾನ ಪ್ರಾಪ್ತವಾದ ನಂತರ ಸಹಜವಾಗಿಯೇ ನಿಮ್ಮ ಕರ್ಮವೂ ಅದರಂತೆಯೇ ಇರಬೇಕಾಗಿದೆ. ಮರಣ ನಿಶ್ಚಿತ, ಮರಣಾನಂತರ ಮತ್ತೊಂದು ಜೀವನವೂ ಇದೆ. ಆ ಜೀವನದಲ್ಲಿ ನೀವು ಐಹಿಕ ಜೀವನದಲ್ಲಿ ಸಿದ್ಧಪಡಿಸಿದ ಫಲಗಳ ಆಸರೆಯಲ್ಲೇ ಬದುಕಬೇಕಾಗಿದೆ. ಇದರ ಬಗ್ಗೆ ನಿಮಗೆ ವಿಶ್ವಾಸವಿದ್ದರೆ ಪ್ರವಾದಿವರ್ಯರು(ಸ) ತೋರಿಸಿದ

ಮಾರ್ಗವನ್ನು ಬಿಟ್ಟು ಅನ್ಯ ಮಾರ್ಗ ಅನುಸರಿಸಲು ಸಾಧ್ಯವೇ ಇಲ್ಲ. ಲೋಕದಲ್ಲಿ ನೀವು ಬೇಸಾಯ ಮಾಡುವುದೇಕೆ? ಏಕೆಂದರೆ ಬೇಸಾಯ ಮಾಡದಿದ್ದರೆ ಧಾನ್ಯ ಬೆಳೆಯುವುದಿಲ್ಲ, ಧಾನ್ಯ ಬೆಳೆಯದಿದ್ದರೆ ನೀವು ಹಸಿವೆಯಿಂದ ಸಾಯುವಿರಿ ಎಂದು ನಿಮಗೆ ವಿಶ್ವಾಸವಿದೆ. ಬೇಸಾಯದ ಹೊರತಾಗಿಯೂ ಧಾನ್ಯ ಉತ್ಪಾದನೆ ಮಾಡಲು ಸಾಧ್ಯ ಅಥವಾ ಧಾನ್ಯವಿಲ್ಲದೆಯೂ ನೀವು ಹಸಿವೆಯಿಂದ ಮುಕ್ತರಾಗಬಹುದೆಂದು ನಿಮಗೆ ವಿಶ್ವಾಸವಿದ್ದರೆ ನೀವು ಸರ್ವಥಾ ಬೇಸಾಯಕ್ಕಾಗಿ ಕಷ್ಟ ಪಡುತ್ತಿರಲಿಲ್ಲ.

ನಿಮ್ಮ ಪರಿಸ್ಥಿತಿಯ ಬಗ್ಗೆಯೂ ಇದನ್ನೇ ಕಲ್ಪಿಸಿಕೊಳ್ಳಿ. ಒಬ್ಬನು ನಾನು ದೇವನನ್ನು ಒಡೆಯನೆಂದೂ ಪ್ರವಾದಿವರ್ಯರನ್ನು(ಸ) ಸಂದೇಶವಾಹಕರೆಂದೂ ಪರಲೋಕವಿದೆಯೆಂದೂ ಬಾಯಿಮಾತಿನಲ್ಲಿ ಹೇಳುತ್ತಾನೆ. ಆದರೆ ಅವನ ಕರ್ಮ ಪವಿತ್ರ ಕುರ್‌ಆನಿನ ಬೋಧನೆ ಮತ್ತು ಪ್ರವಾದಿವರ್ಯರ(ಸ) ಚರ್ಯೆಗೆ ವಿರುದ್ಧವಾಗಿರುತ್ತದೆ. ಅಂತಹವರ ಬಗ್ಗೆ ಅವರ ವಿಶ್ವಾಸ ದುರ್ಬಲವಾಗಿದೆ ಎಂದು ಭಾವಿಸಿಕೊಳ್ಳಿ. ಏಕೆಂದರೆ ತನ್ನ ಹೊಲದಲ್ಲಿ ಬೇಸಾಯ ಮಾಡದಿರುವುದರ ಕೆಟ್ಟ ಪರಿಣಾಮದ ಬಗ್ಗೆ ಖಾತ್ರಿ ಇರುವಂತೆ ಪರಲೋಕದ ಫಲವನ್ನು ಸಿದ್ಧಪಡಿಸದೇ ಇರುವುದರ ಕೆಟ್ಟ ಪರಿಣಾಮದ ಬಗ್ಗೆಯೂ ವಿಶ್ವಾಸವಿದ್ದರೆ ಅವನೆಂದೂ ಅದರಿಂದ ಅಲಕ್ಷ್ಯನಾಗಿರಲಾರ. ಯಾರೂ ಬೇಕಂತಲೇ ತನಗಾಗಿ ಮುಳ್ಳುಕಂಟಿಗಳನ್ನು ನೆಡುವುದಿಲ್ಲ. ತಾನು ನೆಡುತ್ತಿರುವ ಬೀಜಗಳಿಂದ ಮುಳ್ಳುಕಂಟಿಗಳು ಹೊರಬರಲಿವೆ ಮತ್ತು ಅದು ತನಗೇ ಬಾಧಕವಾಗುತ್ತದೆ ಎಂದು ತಿಳಿಯದವನು ಮಾತ್ರ ಹಾಗೆ ಮಾಡುತ್ತಾನೆ. ಪ್ರಜ್ಞಾಪೂರ್ವಕ ನೀವು ಬೆಂಕಿಯ ಕೆಂಡವನ್ನು ಕೈಯಲ್ಲೆತ್ತಿಕೊಳ್ಳುವುದಿಲ್ಲ. ಏಕೆಂದರೆ ಅದು ಸುಡುತ್ತದೆ ಎಂದು ನಿಮಗೆ ವಿಶ್ವಾಸವಿದೆ. ಆದರೆ ಒಂದು ಮಗು ಬೆಂಕಿಗೂ ಕೈ ಹಾಕಿ ಬಿಡುತ್ತದೆ. ಏಕೆಂದರೆ ಅದರ ಪರಿಣಾಮವೇನಾಗುತ್ತದೆಂದು ಅದಕ್ಕೆ ತಿಳಿದಿರುವುದಿಲ್ಲ.

❖ ❖ ❖

ಅಧ್ಯಾಯ -2

ಇಸ್ಲಾಮ್

○

- ಮುಸ್ಲಿಮ್ ಎಂದರೆ ಯಾರು?
- ಈಮಾನ್(ಸತ್ಯ ವಿಶ್ವಾಸ)ನ ಒರೆಗಲ್ಲು
- ಇಸ್ಲಾಮಿನ ನೈಜ ಮಾನದಂಡ
- ದೇವಾನುಸರಣೆ ಏಕೆ?
- ದೀನ್ ಮತ್ತು ಶರೀಅತ್ (ಧರ್ಮ ಮತ್ತು ಧರ್ಮಶಾಸ್ತ್ರ)

○

ಮುಸ್ಲಿಮ್ ಎಂದರೆ ಯಾರು?

ಮುಸ್ಲಿಮ್ ಸಹೋದರರೇ,

ನಾನಿಂದು ಮುಸ್ಲಿಮನ ಗುಣವಿಶೇಷತೆಗಳೇನೆಂಬುದನ್ನು ನಿಮ್ಮ ಮುಂದಿರಿಸುವೆನು. ಅರ್ಥಾತ್ ಮುಸ್ಲಿಮನಾಗಲು ಬೇಕಾದ ಕನಿಷ್ಠತಮ ಶರತ್ತುಗಳೇನು ಮತ್ತು ಒಬ್ಬನು ಮುಸ್ಲಿಮನೆಂದೆನಿಸಿಕೊಳ್ಳಲು ಅರ್ಹನಾಗಬೇಕಾದರೆ ಕಡಿಮೆಪಕ್ಷ ಏನಾಗಿರಬೇಕು ಎಂಬುದನ್ನು ವಿವರಿಸುವೆನು.

ಕುಫ್ರ್ ಮತ್ತು ಇಸ್ಲಾಮ್ ಎಂದರೇನು?

ಇದನ್ನು ತಿಳಿಯಬೇಕಾದರೆ ಮೊತ್ತಮೊದಲು 'ಕುಫ್ರ್' ಮತ್ತು 'ಇಸ್ಲಾಮ್' ಎಂದರೇನೆಂಬುದನ್ನು ತಿಳಿದುಕೊಳ್ಳಬೇಕಾಗಿದೆ. 'ಕುಫ್ರ್' ಎಂದರೆ ದೇವಾಜ್ಞಾಪಾಲನೆಯ ನಿರಾಕರಣೆ; ಇಸ್ಲಾಮ್ ಎಂದರೆ ದೇವಾಜ್ಞೆಯ ಪಾಲನೆ ಹಾಗೂ ದೇವಾದೇಶಗಳಿಗೆ ವಿರೋಧ ವಾಗಿರುವ ಯಾವುದೇ ಪದ್ಧತಿ, ಕಾನೂನು ಅಥವಾ ಆಜ್ಞೆಗಳ ನಿರಾಕರಣೆ. 'ಇಸ್ಲಾಮ್' ಮತ್ತು 'ಕುಫ್ರ್'ಗಳ ಈ ವ್ಯತ್ಯಾಸವನ್ನು ಪವಿತ್ರ ಕುರ್‌ಆನಿನಲ್ಲಿ ಸುಸ್ಪಷ್ಟವಾಗಿ ವಿವರಿಸಲಾಗಿದೆ.

وَمَنْ لَّمْ يَحْكُمْ بِمَآ اَنْزَلَ اللّٰهُ فَاُولٰٓئِكَ هُمُ الْكٰفِرُوْنَ ﴿٤٤﴾

"ಅಲ್ಲಾಹನು ಅವತೀರ್ಣಗೊಳಿಸಿದ ಕಾನೂನಿನ ಪ್ರಕಾರ ತೀರ್ಮಾನ ಮಾಡದವರೇ ಸತ್ಯನಿಷೇಧಿಗಳು." (ಅಲ್ ಮಾಇದ: 44)

ಇಲ್ಲಿ 'ತೀರ್ಮಾನ' ಎಂದರೆ ನ್ಯಾಯಾಲಯಕ್ಕೆ ಬಂದ ವ್ಯಾಜ್ಯಗಳನ್ನು ಮಾತ್ರ ದೇವಗ್ರಂಥದ ಪ್ರಕಾರ ತೀರ್ಮಾನ ಮಾಡಬೇಕೆಂದಲ್ಲ. ಅದು ಪ್ರತಿಯೊಬ್ಬನೂ ಜೀವನದ ಪ್ರತಿಯೊಂದು ವಿಷಯದಲ್ಲಿಯೂ ಪ್ರತಿಕ್ಷಣದಲ್ಲಿಯೂ ಮಾಡುವ ತೀರ್ಮಾನ. ಒಂದು ಕೆಲಸವನ್ನು ಮಾಡ ಬಹುದೋ - ಮಾಡಬಾರದೋ? ಒಂದು ಮಾತನ್ನು ಹೀಗೆ ಹೇಳಬೇಕೋ ಆ ರೀತಿ ಹೇಳಬೇಕೋ? ಒಂದು ವ್ಯವಹಾರದಲ್ಲಿ ಈ ರೀತಿ ನಡೆಯಬೇಕೋ - ಆ ರೀತಿ ನಡೆಯಬೇಕೋ? ಎಂಬಿತ್ಯಾದಿ ಪ್ರಶ್ನೆಗಳು ಪ್ರತಿಯೊಬ್ಬನ ಮುಂದೆಯೂ ಆಗಾಗ ಬರುತ್ತಿರುತ್ತವೆ. ಎಲ್ಲಾ ಸಂದರ್ಭಗಳಲ್ಲೂ ಒಂದು ರೀತಿಯನ್ನು ದೇವಗ್ರಂಥ ಹಾಗೂ ಪ್ರವಾದಿವರ್ಯರ(ಸ) ಸುನ್ನತ್ (ಪ್ರವಾದಿಚರ್ಯೆ) ತೋರಿಸುತ್ತವೆ. ಇನ್ನೊಂದು ರೀತಿಯನ್ನು

ಮಾನವನ ಚಿತ್ತಾಕಾಂಕ್ಷೆ, ಅಥವಾ ಹಿರಿಯರ ಸಂಪ್ರದಾಯ ಅಥವಾ ಮಾನವ ನಿರ್ಮಿತ ನಿಯಮಗಳು ತೋರಿಸುತ್ತವೆ. ಅಲ್ಲಾಹನು ತೋರಿಸಿದ ರೀತಿಯನ್ನು ಬಿಟ್ಟು ಬೇರಾವುದಾದರೂ ರೀತಿಯಿಂದ ಕಾರ್ಯವೆಸಗುವ ನಿರ್ಧಾರ ಮಾಡುವಾತ ನಿಜಕ್ಕೂ ಕುಫ್ರ್‌ನ ಮಾರ್ಗವನ್ನು ಅನುಸರಿಸುತ್ತಾನೆ. ತನ್ನ ಬಾಳಿನುದ್ದಕ್ಕೂ ಈ ನಿಲುಮೆಯನ್ನೇ ಅನುಸರಿಸಿದಾತನು ಸಂಪೂರ್ಣ-'ಕಾಫಿರ್' ಆಗಿರುತ್ತಾನೆ. ಕೆಲವು ವಿಷಯಗಳಲ್ಲಿ ಅಲ್ಲಾಹನ ಮಾರ್ಗದರ್ಶನವನ್ನು ಒಪ್ಪಿಕೊಂಡು ಇನ್ನು ಕೆಲವು ವಿಷಯಗಳಲ್ಲಿ ತನ್ನ ಚಿತ್ತಾಕಾಂಕ್ಷೆಗಳಿಗೂ ಹಿರಿಯರ ಸಂಪ್ರದಾಯಗಳಿಗೂ ಮಾನವ ನಿರ್ಮಿತ ನಿಯಮಗಳಿಗೂ ಮಹತ್ವ ಕೊಡುವಾತನು ಎಷ್ಟಂಶ ಅಲ್ಲಾಹನ ಆಜ್ಞೆಗಳಿಗೆ ದ್ರೋಹವೆಸಗುವನೋ ಅಷ್ಟಂಶ 'ಕುಫ್ರ್'ನಲ್ಲಿ ಸಿಲುಕುತ್ತಾನೆ. ಕೆಲವರು ಅರ್ಧ ಕಾಫಿರ್; ಕೆಲವರು ಕಾಲಂಶ ಕಾಫಿರ್; ಇನ್ನು ಕೆಲವರು ಹತ್ತರಲ್ಲೊಂದಂಶ ಕಾಫಿರ್; ಮತ್ತೆ ಕೆಲವರು ಇಪ್ಪತ್ತರಲ್ಲೊಂದಂಶ ಕಾಫಿರ್ - ಹೀಗೆ ಎಷ್ಟಂಶ ದೇವಾಜ್ಞೆಯ ಉಲ್ಲಂಘನೆ ಮಾಡುವನೋ ಅಷ್ಟೇ ಅಂಶ 'ಕುಫ್ರ್' ಅವನಲ್ಲಿರುತ್ತದೆ.

ಮನುಷ್ಯನು ಕೇವಲ ಅಲ್ಲಾಹನ ದಾಸನಾಗಿರಬೇಕು. ಆತನು ತನ್ನ ಚಿತ್ತಾಕಾಂಕ್ಷೆಗಳ ದಾಸನಲ್ಲ; ಪೂರ್ವಜರ ದಾಸನೂ ಅಲ್ಲ; ಕುಲ-ಗೋತ್ರಗಳ ದಾಸನೂ ಅಲ್ಲ; ಮೌಲ್ವಿ ಮತ್ತು ಪೀರ್ ಸಾಹೇಬರ ದಾಸನೂ ಅಲ್ಲ; ಜಮೀನ್ದಾರ, ತಹಸೀಲ್ದಾರ ಅಥವಾ ಮೆಜಿಸ್ಟ್ರೇಟರ ದಾಸನೂ ಅಲ್ಲ. ದೇವನ ಹೊರತು ಇನ್ನಾರ ದಾಸನೂ ಅಲ್ಲ. 'ಇಸ್ಲಾಮ್' ಎಂದರೆ ಇದರ ಹೊರತು ಬೇರೇನೂ ಅಲ್ಲ. ಪವಿತ್ರ ಕುರ್‌ಆನಿನಲ್ಲಿ ಹೀಗಿದೆ:

قُلْ يَٰٓأَهْلَ ٱلْكِتَٰبِ تَعَالَوْا۟ إِلَىٰ كَلِمَةٍ سَوَآءٍۭ بَيْنَنَا وَبَيْنَكُمْ أَلَّا نَعْبُدَ إِلَّا ٱللَّهَ
وَلَا نُشْرِكَ بِهِۦ شَيْـًٔا وَلَا يَتَّخِذَ بَعْضُنَا بَعْضًا أَرْبَابًا مِّن دُونِ ٱللَّهِ ۚ فَإِن تَوَلَّوْا۟ فَقُولُوا۟
ٱشْهَدُوا۟ بِأَنَّا مُسْلِمُونَ ﴿٦٤﴾

"ಓ ಪೈಗಂಬರರೇ, ಹೇಳಿರಿ: ಓ ಗ್ರಂಥದವರೇ, ನಿಮ್ಮ ಮತ್ತು ನಮ್ಮೊಳಗೆ ಸಮಾನವಾಗಿರುವ ವಿಷಯಗಳ ಕಡೆಗೆ ಬನ್ನಿರಿ- ಅದೆಂದರೆ ನಾವು ಅಲ್ಲಾಹನ ಹೊರತು ಇತರ ಯಾರ ದಾಸ್ಯ-ಆರಾಧನೆಯನ್ನೂ ಮಾಡದಿರೋಣ. ಅವನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡದಿರೋಣ ಮತ್ತು ನಮ್ಮ ಪೈಕಿ ಯಾರೂ ಅಲ್ಲಾಹನ ಹೊರತು ಇತರ ಯಾರನ್ನೂ ತನ್ನ ಪ್ರಭುವಾಗಿರಿಸದಿರೋಣ. ಈ ಕರೆಯನ್ನು ಸ್ವೀಕರಿಸಲು ಅವರು ಹಿಂಜರಿದರೆ, ನಾವಂತು ಮುಸ್ಲಿಮರು (ಕೇವಲ ಅಲ್ಲಾಹನ ದಾಸ್ಯ-ಆರಾಧನೆ ಮತ್ತು ದಾಸ್ಯ-ಅನುಸರಣೆ ಮಾಡುವವರು) ಎಂದು ಸ್ಪಷ್ಟವಾಗಿ ಹೇಳಿ ಬಿಡಿರಿ." (ಆಲಿ ಇಮ್‌ರಾನ್: 64)

أَفَغَيْرَ دِينِ اللَّهِ يَبْغُونَ وَلَهُ أَسْلَمَ مَن فِي السَّمَاوَاتِ وَالْأَرْضِ طَوْعًا وَكَرْهًا وَإِلَيْهِ يُرْجَعُونَ ﴿٨٣﴾

"ಇವರೇನು ಅಲ್ಲಾಹನ ಅನುಸರಣಾ ನೀತಿಯನ್ನು (ಧರ್ಮ) ತ್ಯಜಿಸಿ ಬೇರೆ ಯಾವುದಾದರೂ ರೀತಿಯನ್ನನುಸರಿಸಲು ಇಷ್ಟಪಡುತ್ತಾರೆಯೇ? ವಸ್ತುತಃ ಆಕಾಶಗಳ ಮತ್ತು ಭೂಮಿಯ ಸಕಲ ವಸ್ತುಗಳೂ ಬಯಸಿಯೋ ಬಯಸದೆಯೋ ಅಲ್ಲಾಹನ ಆಜ್ಞಾಪಾಲಕ(ಮುಸ್ಲಿಮ್‌ಗಳಾಗಿ)ಗಳಾಗಿಯೇ ಇವೆ ಮತ್ತು ಸರ್ವರಿಗೂ ಅವನ ಕಡೆಗೇ ಮರಳಲಿಕ್ಕಿದೆ."

(ಆಲಿ ಇಮ್‌ರಾನ್: 83)

ವಸ್ತುತಃ ಎರಡೂ ಸೂಕ್ತಗಳಲ್ಲಿ ಸಹಜವಾಗಿ ದೀನ್ (ಧರ್ಮ) ಎಂದರೆ ದೇವಾನುಸರಣೆ ಮತ್ತು ದೇವಾಜ್ಞಾಪಾಲನೆಯಾಗಿದೆ ಎಂಬ ಒಂದೇ ವಿಷಯವನ್ನು ವಿವರಿಸಲಾಗಿದೆ. ದೇವಾರಾಧನೆ ಎಂದರೆ ಐದು ಹೊತ್ತು ಅವನ ಮುಂದೆ ಸಾಷ್ಟಾಂಗವೆರಗುವುದು ಮಾತ್ರವಲ್ಲ, ಅದರ ಅರ್ಥವು ಹಗಲು-ರಾತ್ರಿಗಳಲ್ಲಿ ಪ್ರತಿ ಕ್ಷಣದಲ್ಲೂ ಅವನ ಆಜ್ಞೆಗಳನ್ನು ಅನುಸರಿಸುವುದು, ಅವನು ವಿರೋಧಿಸಿದವುಗಳಿಂದ ತಡೆದಿರುವುದು ಮತ್ತು ಅವನು ನೀಡಿದ ಆಜ್ಞೆಗಳ ಪ್ರಕಾರ ಕಾರ್ಯ ನಿರ್ವಹಿಸುವುದು ಎಂದಾಗಿದೆ. ಯಾವ ವಿಷಯದಲ್ಲಾದರೂ ಅಲ್ಲಾಹನ ಅಪ್ಪಣೆ ಏನಿದೆ ಎಂದು ನೋಡಿರಿ. ಯಾವುದೇ ವಿಷಯದಲ್ಲಿ ನಿಮ್ಮ ಮನಸ್ಸು ಏನನ್ನುತ್ತದೆ, ಬುದ್ಧಿ ಏನನ್ನುತ್ತದೆ, ಹಿರಿಯರು ಏನು ಮಾಡಿದ್ದರು, ಕುಟುಂಬದವರೂ ನೆಂಟರಿಷ್ಟರೂ ಹೇಗೆ ನಡೆದಿದ್ದರು, ಮೌಲ್ವಿ ಮತ್ತು ಪೀರ್ ಸಾಹೇಬರು ಏನಪ್ಪಣೆ ನೀಡಿದ್ದಾರೆ ಅಥವಾ ಆ ವ್ಯಕ್ತಿಯ ಅಪ್ಪಣೆ ಅಥವಾ ಇಚ್ಛೆ ಏನು ಎಂಬಿತ್ಯಾದಿ ನೋಡಬೇಡಿರಿ. ನೀವು ದೇವಾಜ್ಞೆಯನ್ನು ಬಿಟ್ಟು ಯಾರ ಅಪ್ಪಣೆಯನ್ನು ಪಾಲಿಸಿದರೂ ನೀವು ದೇವನೊಂದಿಗೆ ಅವನನ್ನು ಭಾಗೀದಾರನನ್ನಾಗಿ ಮಾಡಿದಂತಾಗುತ್ತದೆ; ದೇವನಿಗೆ ಮಾತ್ರ ಕೊಡಬೇಕಾದ ಸ್ಥಾನವನ್ನು ಅವನಿಗೆ ಕೊಟ್ಟಂತಾಗುತ್ತದೆ. ಆಜ್ಞೆ ಕೊಡುವಾತನು ಅಲ್ಲಾಹ್ ಮಾತ್ರ. ನಿಮ್ಮನ್ನು ಸೃಷ್ಟಿಸಿದಾತನೂ ನಿಮ್ಮ ಜೀವನಾಧಾರಕನೂ ಆಗಿರುವಾತನೇ ನಿಮ್ಮ ಆರಾಧನೆಗೆ ಅರ್ಹನು. ಭೂಮಿ-ಆಕಾಶಗಳ ಪ್ರತಿಯೊಂದು ವಸ್ತುವು ಅವನ ದಾಸ್ಯ-ಅನುಸರಣೆಯನ್ನೇ ಮಾಡುತ್ತಿವೆ. ಯಾವ ಕಲ್ಲೂ ಇನ್ನೊಂದು ಕಲ್ಲನ್ನು ಆರಾಧಿಸುವುದಿಲ್ಲ. ಯಾವ ಮರವೂ ಇನ್ನೊಂದು ಮರದ ದಾಸ್ಯ-ಅನುಸರಣೆಯನ್ನು ಮಾಡುವುದಿಲ್ಲ. ಯಾವ ಪ್ರಾಣಿಯೂ ಇನ್ನೊಂದು ಪ್ರಾಣಿಯನ್ನು ಪೂಜಿಸುವುದಿಲ್ಲ. ಹೀಗಿರುವಾಗ ನೀವು ಕಲ್ಲು, ಮರ, ಪ್ರಾಣಿಗಳಿಗಿಂತಲೂ ಕೀಳಾಗಿ ಬಿಟ್ಟಿರಾ? ಪ್ರಾಣಿ, ಮರ ಮತ್ತು ಕಲ್ಲುಗಳು ಕೇವಲ ದೇವಾರಾಧನೆಯನ್ನೇ ಮಾಡುತ್ತಿರುವಾಗ ನೀವು ದೇವನನ್ನು ಬಿಟ್ಟು ಅನ್ಯರ ಆರಾಧನೆ ಮಾಡುವಿರಾದರೆ ಪ್ರಾಣಿ, ಮರ, ಕಲ್ಲುಗಳಿಗಿಂತಲೂ ನೀವು ನಿಷ್ಪ್ರಯೋಜಕರಾಗಿ ಬಿಟ್ಟಿರಾ? ಕುರ್‌ಆನಿನ ಪ್ರಸ್ತುತ ಎರಡೂ ಸೂಕ್ತಗಳಲ್ಲಿ ಪ್ರತಿಪಾದಿಸಿದ ವಿಷಯ ಇದೇ ಆಗಿದೆ.

ಪಥಭ್ರಷ್ಟತೆಯ ಮೂರು ದಾರಿಗಳು

ಈಗ ನಾನು, ಕುಫ್ರ್ ಮತ್ತು ಮಾರ್ಗಭ್ರಷ್ಟತೆ ಎಲ್ಲಿಂದ ಹುಟ್ಟಿ ಬರುತ್ತವೆ ಎಂಬುದನ್ನು ಹೇಳಬಯಸುತ್ತೇನೆ. ಆ ನತದೃಷ್ಟ ಅನಿಷ್ಟಗಳು ಮೂರು ದಾರಿಗಳಿಂದ ಬರುತ್ತವೆಂದು ಪವಿತ್ರ ಕುರ್‌ಆನ್ ತೋರಿಸಿ ಕೊಡುತ್ತದೆ-

1. ಮನುಷ್ಯನ ಸ್ವಂತ ಚಿತ್ತಾಕಾಂಕ್ಷೆ

وَمَنْ اَضَلُّ مِمَّنِ اتَّبَعَ هَوٰىهُ بِغَيْرِ هُدًى مِّنَ اللّٰهِ ؕ

اِنَّ اللّٰهَ لَا يَهْدِى الْقَوْمَ الظّٰلِمِيْنَ ﴿۵۰﴾

"ಅಲ್ಲಾಹನ ಮಾರ್ಗದರ್ಶನದ ಹೊರತು ಕೇವಲ ತನ್ನ ಸ್ವೇಚ್ಛೆಗಳನ್ನು ಅನುಸರಿಸುವವನಿಗಿಂತ ಹೆಚ್ಚು ದಾರಿಗೆಟ್ಟವನು ಇನ್ನಾರಿರಬಹುದು? ಅಲ್ಲಾಹ್ ಇಂತಹ ಅಕ್ರಮಿಗಳಿಗೆ ಎಷ್ಟು ಮಾತ್ರಕ್ಕೂ ಸನ್ಮಾರ್ಗದರ್ಶನ ನೀಡುವುದಿಲ್ಲ."

(ಅಲ್ ಕಸಸ್: 50)

ಮಾನವನನ್ನು ಅತ್ಯಧಿಕವಾಗಿ ಸನ್ಮಾರ್ಗ ಭ್ರಷ್ಟನನ್ನಾಗಿ ಮಾಡುವುದು ಅವನ ಸ್ವಂತ ಚಿತ್ತಾಕಾಂಕ್ಷೆಗಳು. ತನ್ನ ಇಚ್ಛೆಗಳ ದಾಸನಾದವನಿಗೆ ದೇವನ ದಾಸನಾಗಿರಲು ಸಾಧ್ಯವಿಲ್ಲ. ಅವನಂತೂ ತನಗೆ ಹಣವೆಲ್ಲಿಂದ ಸಿಗುತ್ತದೆ, ಗೌರವ ಮತ್ತು ಕೀರ್ತಿ ಎಲ್ಲಿಂದ ಲಭಿಸುತ್ತದೆ? ಸವಿಯೂ ರಸಿಕತೆಯೂ ಅನಾಯಾಸ ಸುಖ ಸೌಕರ್ಯಗಳೂ ಯಾವುದರಿಂದ ಲಭ್ಯವಾಗುತ್ತವೆ ಎಂಬುದನ್ನು ಮಾತ್ರ ನೋಡುತ್ತಲಿದ್ದು, ಯಾವ ಕಾರ್ಯಗಳಿಂದ ಅವು ಸಿಗುವುವೋ ಅವುಗಳನ್ನು ಮಾತ್ರ ಕೈಗೊಳ್ಳುವನು. ಅವುಗಳನ್ನು ಅಲ್ಲಾಹನು ವಿರೋಧಿಸಿದ್ದರೂ ಸರಿಯೆ. ಅವು ಸಿಗಲಾರದ ಕಾರ್ಯಗಳನ್ನು ಎಂದೂ ಕೈಗೊಳ್ಳಲಾರ; ಅವುಗಳನ್ನು ಮಾಡಲೇಬೇಕೆಂಬ ದೇವಾದೇಶಗಳಿದ್ದರೂ ಸರಿಯೆ - ಇಂಥವನು ಮಹಾಮಹಿಮನಾದ ಅಲ್ಲಾಹನನ್ನು ದೇವನೆಂದೆಣಿಸಲಿಲ್ಲ. ಅವನ ಆಶೆ ಆಕಾಂಕ್ಷೆಗಳೇ ಅವನಿಗೆ ದೇವರಾಗಿ ಬಿಟ್ಟುವು. ಅಂಥವನಿಗೆ ಸನ್ಮಾರ್ಗ ದರ್ಶನವಾಗುವುದಾದರೂ ಹೇಗೆ? ಇದನ್ನೇ ಕುರ್‌ಆನಿನಲ್ಲಿ ಇನ್ನೊಂದೆಡೆ ಹೀಗೆ ವಿವರಿಸಲಾಗಿದೆ:

اَرَءَيْتَ مَنِ اتَّخَذَ اِلٰهَهٗ هَوٰىهُ ؕ اَفَاَنْتَ تَكُوْنُ عَلَيْهِ

وَكِيْلًا ﴿۴۳﴾ اَمْ تَحْسَبُ اَنَّ اَكْثَرَهُمْ يَسْمَعُوْنَ اَوْ يَعْقِلُوْنَ ؕ اِنْ هُمْ

اِلَّا كَالْاَنْعَامِ بَلْ هُمْ اَضَلُّ سَبِيْلًا ﴿۴۴﴾

"ತನ್ನ ಚಿತ್ತಾಕಾಂಕ್ಷೆಯನ್ನು ತನ್ನ ದೇವನಾಗಿ ಮಾಡಿಕೊಂಡಿರುವಾತನ ಸ್ಥಿತಿಯ ಬಗ್ಗೆ ನೀವೆಂದಾದರೂ ವಿವೇಚಿಸಿದಿರಾ? ನೀವು ಇಂತಹವರನ್ನು ಸರಿ ದಾರಿಗೆ ತರುವ ಹೊಣೆಯನ್ನು ವಹಿಸಿಕೊಳ್ಳ ಬಲ್ಲಿರಾ? ಇವರಲ್ಲಿ ಹೆಚ್ಚಿನವರು ಆಲಿಸುತ್ತಾರೆಂದೂ ಗ್ರಹಿಸುತ್ತಾರೆಂದೂ ಭಾವಿಸುತ್ತೀರಾ? ಇವರಂತು ಪ್ರಾಣಿಗಳಂತಿದ್ದಾರೆ. ಅಷ್ಟೇ ಅಲ್ಲ ಅದಕ್ಕಿಂತಲೂ ನಿಕೃಷ್ಟರು."

(ಅಲ್ ಫುರ್ಕಾನ್: 43-44)

ಚಿತ್ತಾಕಾಂಕ್ಷೆಗಳ ದಾಸರು ಮೃಗಗಳಿಗಿಂತಲೂ ಕೀಳ್ಮಟ್ಟದವರೆಂಬುದರಲ್ಲಿ ಸಂಶಯ ವಿಲ್ಲ. ಯಾವ ಪ್ರಾಣಿಯೂ ದೇವನಿಂದ ನಿರೂಪಿಸಲ್ಪಟ್ಟ ಮೇರೆಯನ್ನು ಮೀರಿ ನಡೆಯುವುದಿಲ್ಲ. ಪ್ರತಿಯೊಂದು ಪ್ರಾಣಿಯೂ ತನಗಾಗಿ ನಿಶ್ಚಯಿಸಲ್ಪಟ್ಟ ಆಹಾರವನ್ನೇ ತಿನ್ನುತ್ತದೆ; ನಿಶ್ಚಯಿಸ ಲ್ಪಟ್ಟಷ್ಟನ್ನೇ ತಿನ್ನುತ್ತದೆ. ಯಾವ ಪ್ರಾಣಿಯನ್ನು ಎಷ್ಟು ಕೆಲಸ ಮಾಡಲಿಕ್ಕಾಗಿ ನಿಶ್ಚಯಿಸ ಲಾಗಿದೆಯೋ ಅದು ಅಷ್ಟನ್ನೇ ಮಾಡುತ್ತದೆ. ಆದರೆ ಮನುಷ್ಯನೆಂಬ ಪ್ರಾಣಿಯು ತನ್ನ ಚಿತ್ತಾಕಾಂಕ್ಷೆಗಳ ದಾಸನಾಗಿ ಬಿಟ್ಟಾಗ ಮಾಡುವ ಕೃತ್ಯಗಳಿಂದ ಶೈತಾನನೂ ಅಭಯ ಪಡೆಯ ಬೇಕಾಗುತ್ತದೆ. ಇದು ಪಥಭ್ರಷ್ಟತೆಯುಂಟಾಗುವ ಪ್ರಥಮ ಮಾರ್ಗದ ವಿವರಣೆಯಾಯಿತು.

2. ಹಿರಿಯರ ಅಂಧಾನುಕರಣೆ

ಹಿರಿಯರ ಕೆಲವು ಕಟ್ಟುಕಟ್ಟಳೆಗಳು, ವಿಚಾರಗಳು ಮತ್ತು ನಂಬಿಕೆಗಳು ಒಂದು ವಿಶಿಷ್ಟ ರೂಪದಿಂದ ನಡೆದು ಬಂದಿದ್ದು ಜನರು ಅವುಗಳಿಗೆ ಅಧೀನರಾಗಿ ಬಿಡುವುದಾಗಿದೆ. ಅವುಗಳನ್ನು ದೇವಾದೇಶಗಳಿಗಿಂತಲೂ ಮಿಗಿಲಾಗಿ ಅಪ್ಪಿಕೊಳ್ಳುವುದು, ಆ ಭಾವನೆಗಳಿಗೆದುರಾಗಿ ಅವರ ಮುಂದೆ ದೇವಾಜ್ಞೆಗಳನ್ನಿರಿಸಿದಾಗ 'ನಾವು ನಮ್ಮ ಹಿರಿಯರ ಹಾಗೂ ನಮ್ಮ ಕುಟುಂಬದವರ ಸಂಪ್ರದಾಯಗಳಂತೆಯೇ ನಡೆಯುವೆವು' ಎನ್ನುವುದು. ಈ ರೋಗಕ್ಕೆ ಬಲಿಯಾದವನು ದೇವನ ದಾಸನಾಗುವುದು ಹೇಗೆ? ಅವನ ಹಿರಿಯರು ಮತ್ತು ಕುಟುಂಬದವರೇ ಅವನ ದೇವರು. ಹೀಗಿರುವಾಗ ತಾನು ಮುಸ್ಲಿಮನೆಂದು ವಾದಿಸುವ ಹಕ್ಕು ಅವನಿಗೆಲ್ಲಿಂದ ಬಂತು? ಪವಿತ್ರ ಕುರ್‌ಆನಿನಲ್ಲಿ ಈ ಬಗ್ಗೆ ಎಚ್ಚರಿಕೆ ಕೊಡಲಾಗಿದೆ-

وَإِذَا قِيلَ لَهُمُ اتَّبِعُوا مَا أَنْزَلَ اللَّهُ قَالُوا بَلْ نَتَّبِعُ مَا أَلْفَيْنَا عَلَيْهِ آبَاءَنَا ۗ
أَوَلَوْ كَانَ آبَاؤُهُمْ لَا يَعْقِلُونَ شَيْئًا وَلَا يَهْتَدُونَ ﴿١٧٠﴾

"ಅಲ್ಲಾಹನು ಅವತೀರ್ಣಗೊಳಿಸಿದ ನಿರ್ದೇಶಗಳನ್ನು ಅನುಸರಿಸಿರೆಂದು ಅವರೊಡನೆ ಹೇಳಲಾದಾಗ, 'ನಾವು ನಮ್ಮ ಪೂರ್ವಿಕರು ಯಾವ ಕ್ರಮವನ್ನು ಅನುಸರಿಸುತ್ತಿದ್ದುದನ್ನು ಕಂಡಿದ್ದೇವೋ ಅದನ್ನೇ ಅನುಸರಿಸುವೆವು' ಎನ್ನುತ್ತಾರೆ. ಸರಿ, ಅವರ ಪೂರ್ವಿಕರು ತಮ್ಮ ಬುದ್ಧಿ ಶಕ್ತಿಯನ್ನೇನೂ ಉಪಯೋಗಿಸದೆ ಸತ್ಯ ಮಾರ್ಗದಿಂದ ವಂಚಿತರಾಗಿದ್ದರೆ ಆಗಲೂ ಇವರು ಅವರನ್ನನುಸರಿಸುತ್ತಲೇ ಇರುವರೇ?" (ಅಲ್ ಬಕರಃ : 170)

ಇನ್ನೊಂದು ಕಡೆ ಹೀಗೆ ಹೇಳಲಾಗಿದೆ-

وَإِذَا قِيلَ لَهُمْ تَعَالَوْا إِلَىٰ مَا أَنزَلَ اللَّهُ وَإِلَى الرَّسُولِ قَالُوا حَسْبُنَا مَا
وَجَدْنَا عَلَيْهِ آبَاءَنَا ۚ أَوَلَوْ كَانَ آبَاؤُهُمْ لَا يَعْلَمُونَ شَيْئًا وَلَا يَهْتَدُونَ ﴿١٠٤﴾
يَا أَيُّهَا الَّذِينَ آمَنُوا عَلَيْكُمْ أَنفُسَكُمْ ۖ لَا يَضُرُّكُم مَّن ضَلَّ إِذَا اهْتَدَيْتُمْ ۚ إِلَى
اللَّهِ مَرْجِعُكُمْ جَمِيعًا فَيُنَبِّئُكُم بِمَا كُنتُمْ تَعْمَلُونَ ﴿١٠٥﴾

"ಅಲ್ಲಾಹನು ಅವತೀರ್ಣಗೊಳಿಸಿದ ಶಾಸನದ ಕಡೆಗೂ ಆತನ ಸಂದೇಶವಾಹಕರ ಕಡೆಗೂ ಬನ್ನಿರಿ, ಎಂದು ಅವರೊಡನೆ ಹೇಳಿದಾಗ ಅವರು, 'ನಾವು ನಮ್ಮ ಪೂರ್ವಿಕರನ್ನು ಯಾವ ಮಾರ್ಗದಲ್ಲಿ ಕಂಡಿದ್ದೇವೋ ಅದೇ ನಮಗೆ ಸಾಕು' ಎಂದು ಹೇಳುತ್ತಾರೆ. ಪೂರ್ವಿಕರು ಏನೂ ಅರಿತಿರದಿದ್ದರೂ ಮತ್ತು ಅವರಿಗೆ ಸನ್ಮಾರ್ಗದ ಅರಿವೇ ಇಲ್ಲದಿದ್ದರೂ ಇವರು ಅವರನ್ನೇ ಅನುಸರಿಸುತ್ತಲಿರುವರೇ?- ಓ ಸತ್ಯವಿಶ್ವಾಸಿಗಳೇ! ನೀವು ನಿಮ್ಮ ಬಗ್ಗೆ ಚಿಂತಿಸಿ ಕೊಳ್ಳಿರಿ. ನೀವು ಸ್ವತಃ ಸತ್ಪಥದಲ್ಲಿದ್ದರೆ ಇತರರ ಪಥಭ್ರಷ್ಟತೆಯಿಂದ ನಿಮಗೇನೂ ಕೇಡುಂಟಾಗದು. ನಿಮಗೆಲ್ಲರಿಗೂ ಅಲ್ಲಾಹನ ಕಡೆಗೆ ಮರಳಿ ಸಾಗಲಿಕ್ಕಿದೆ. ನೀವೇನು ಮಾಡುತ್ತಿದ್ದಿರೆಂದು ಆಗ ಅವನು ನಿಮಗೆ ತೋರಿಸಿಕೊಡುವನು."

(ಅಲ್ ಮಾಇದಃ: 104-105)

ಎಲ್ಲ ಕಾಲಗಳ ಮೂಢರು ಸಿಲುಕಿ ಬಿದ್ದಂತಹ ಪಥಭ್ರಷ್ಟತೆಯಿದು. ಪೂರ್ವಿಕರ ಅಂಧಾನುಕರಣೆಯು ಎಲ್ಲಾ ಕಾಲದ ಜನರನ್ನೂ ಪ್ರವಾದಿಗಳು ಸಾರಿದ ದಿವ್ಯಸಂದೇಶ ಸ್ವೀಕರಿಸದಂತೆ ತಡೆಯಿತು. ಹಝ್ರತ್ ಮೂಸಾರವರು(ಅ) ಅಲ್ಲಾಹನ ಧರ್ಮದ ಕಡೆಗೆ ಕರೆ ನೀಡಿದಾಗಲೂ ಜನರು ಹೀಗೆಂದಿದ್ದರು-

أَجِئْتَنَا لِتَلْفِتَنَا عَمَّا وَجَدْنَا عَلَيْهِ آبَاءَنَا وَتَكُونَ لَكُمَا الْكِبْرِيَاءُ
فِي الْأَرْضِ وَمَا نَحْنُ لَكُمَا بِمُؤْمِنِينَ ﴿٧٨﴾

"ನಾವು ನಮ್ಮ ಪೂರ್ವಿಕರನ್ನು ಕಂಡಿದ್ದ ಪದ್ಧತಿಯಿಂದ ನಮ್ಮನ್ನು ತಿರುಗಿಸಲಿಕ್ಕಾಗಿಯೂ ಭೂಮಿಯಲ್ಲಿ ನಿಮ್ಮಿಬ್ಬರ ಹಿರಿಮೆ ಸಂಸ್ಥಾಪಿಸಲಿಕ್ಕಾಗಿಯೂ ನೀನು ಬಂದಿರುವೆಯಾ? ನಾವು ನಿಮ್ಮ ಮಾತನ್ನು ಸ್ವೀಕರಿಸುವವರಲ್ಲ."

(ಯೂನುಸ್: 78)

ಹಝ್ರತ್ ಇಬ್‌ರಾಹೀಮ್‌ರವರು(ಅ) ತಮ್ಮ ಗೋತ್ರದವರನ್ನು ಬಹುದೇವಾರಾಧನೆ ಯಿಂದ ತಡೆದಾಗ ಅವರೂ ಹೀಗೆಂದಿದ್ದರು-

وَجَدْنَآ ءَابَآءَنَا لَهَا عَٰبِدِينَ ﴿٥٣﴾

"ನಮ್ಮ ಪೂರ್ವಜರು ಇವುಗಳನ್ನು ಪೂಜಿಸುತ್ತಿರುವುದನ್ನು ನಾವು ಕಂಡಿದ್ದೇವೆ."

(ಅಲ್ ಅಂಬಿಯಾ: 53)

ಇದೇ ರೀತಿಯಲ್ಲಿ ಪ್ರತಿಯೋರ್ವ ಪ್ರವಾದಿಯ ಕರೆಗೆ ವಿರೋಧವಾಗಿ ಜನರು ಇದೇ ವಾದವನ್ನು ಮಂಡಿಸುತ್ತಾ "ನೀನು ಹೇಳುತ್ತಿರುವುದು ನಮ್ಮ ಪೂರ್ವಿಕರ ಸಂಪ್ರದಾಯಕ್ಕೆ ವಿರೋಧವಾಗಿದೆ. ಆದುದರಿಂದ ನಾವು ಅದನ್ನು ಸ್ವೀಕರಿಸಲಾರೆವು" ಎನ್ನುತ್ತಿದ್ದರು.

ಪವಿತ್ರ ಕುರ್‌ಆನಿನಲ್ಲಿ ಹೀಗೆನ್ನಲಾಗಿದೆ:

وَكَذَٰلِكَ مَآ أَرْسَلْنَا مِن قَبْلِكَ فِى قَرْيَةٍ مِّن نَّذِيرٍ إِلَّا قَالَ مُتْرَفُوهَآ إِنَّا وَجَدْنَآ ءَابَآءَنَا عَلَىٰٓ أُمَّةٍ وَإِنَّا عَلَىٰٓ ءَاثَٰرِهِم مُّقْتَدُونَ ﴿٢٣﴾ قَٰلَ أَوَلَوْ جِئْتُكُم بِأَهْدَىٰ مِمَّا وَجَدتُّمْ عَلَيْهِ ءَابَآءَكُمْ ۖ قَالُوٓا۟ إِنَّا بِمَآ أُرْسِلْتُم بِهِۦ كَٰفِرُونَ ﴿٢٤﴾ فَٱنتَقَمْنَا مِنْهُمْ ۖ فَٱنظُرْ كَيْفَ كَانَ عَٰقِبَةُ ٱلْمُكَذِّبِينَ ﴿٢٥﴾

"ನಾವು ಎಚ್ಚರಿಕೆ ನೀಡುವವರನ್ನು ಕಳುಹಿಸಿದ ಪ್ರತಿಯೊಂದು ನಾಡಿನಲ್ಲೂ ಅದರ ಅನುಕೂಲಸ್ಥ ಜನರು, "ನಮ್ಮ ಪೂರ್ವಜರು ಒಂದು ಪದ್ಧತಿಯಲ್ಲಿದ್ದುದಾಗಿ ನಾವು ಕಂಡಿದ್ದೇವೆ ಮತ್ತು ನಾವು ಅವರ ಹೆಜ್ಜೆ ಗುರುತುಗಳನ್ನೇ ಅನುಸರಿಸುತ್ತೇವೆ" ಎಂದೇ ಹೇಳಿದ್ದರು. ಪ್ರತಿಯೊಬ್ಬ ಪ್ರವಾದಿಯೂ ಅವರೊಡನೆ, "ನೀವು ನಿಮ್ಮ ಪೂರ್ವಿಕರನ್ನು ಕಂಡಿದ್ದ ಆ ಮಾರ್ಗಕ್ಕಿಂತ ಹೆಚ್ಚು ಸರಿಯಾದ ಮಾರ್ಗವನ್ನು ನಾನು ನಿಮಗೆ ತೋರಿಸಿ ಕೊಟ್ಟರೆ ಆಗಲೂ ನೀವು ಅದೇ ಮಾರ್ಗದಲ್ಲಿ ನಡೆಯುವಿರಾ?" ಎಂದು ಕೇಳಿದರು. ಅವರು ಎಲ್ಲ ಪ್ರವಾದಿಗಳಿಗೂ "ನೀವು ಯಾವ ಧರ್ಮದೆಡೆಗೆ ಆಹ್ವಾನಿಸಲು ಕಳುಹಿಸಲ್ಪಟ್ಟಿರುವಿರೋ ನಾವು ಅದನ್ನು ನಿರಾಕರಿಸುವವರಾಗಿದ್ದೇವೆ" ಎಂಬ ಉತ್ತರವನ್ನೇ ಕೊಟ್ಟರು. ಕೊನೆಗೆ ನಾವು ಅವರನ್ನು ಶಿಕ್ಷಿಸಿದೆವು ಮತ್ತು ಸುಳ್ಳಾಗಿಸುವವರ ಗತಿ ಏನಾಯಿತೆಂಬುದನ್ನು ನೋಡಿಕೊಳ್ಳಿರಿ."

(ಅಝ್ಝುಖ್‌ರುಫ್: 23-25)

ಇಷ್ಟೆಲ್ಲಾ ಹೇಳಿಯಾದ ಬಳಿಕ ಅಲ್ಲಾಹನು ಹೀಗೆನ್ನುತ್ತಾನೆ, "ನೀವು ನಿಮ್ಮ ಪೂರ್ವಿಕರನ್ನೇ ಅನುಸರಿಸುತ್ತಲಿರಿ. ಇಲ್ಲವೇ ನಮ್ಮನ್ನು ಮಾತ್ರ ಅನುಸರಿಸಿರಿ. ಇವೆರಡೂ ಏಕ ಕಾಲದಲ್ಲಿ ಆಗಲಾರವು. ಮುಸ್ಲಿಮರಾಗ ಬಯಸುವಿರಾದರೆ ಎಲ್ಲವನ್ನೂ ಬಿಟ್ಟು ನಾವು ತೋರಿಸಿ ಕೊಟ್ಟುದನ್ನು ಒಪ್ಪಿಕೊಳ್ಳಿರಿ."

وَإِذَا قِيلَ لَهُمُ اتَّبِعُوا مَا أَنزَلَ اللَّهُ قَالُوا بَلْ نَتَّبِعُ مَا وَجَدْنَا
عَلَيْهِ آبَاءَنَا ۚ أَوَلَوْ كَانَ الشَّيْطَانُ يَدْعُوهُمْ إِلَىٰ عَذَابِ السَّعِيرِ ﴿٢١﴾
وَمَن يُسْلِمْ وَجْهَهُ إِلَى اللَّهِ وَهُوَ مُحْسِنٌ فَقَدِ اسْتَمْسَكَ بِالْعُرْوَةِ
الْوُثْقَىٰ ۗ وَإِلَى اللَّهِ عَاقِبَةُ الْأُمُورِ ﴿٢٢﴾ وَمَن كَفَرَ فَلَا يَحْزُنكَ كُفْرُهُ ۚ إِلَيْنَا
مَرْجِعُهُمْ فَنُنَبِّئُهُم بِمَا عَمِلُوا ۚ إِنَّ اللَّهَ عَلِيمٌ بِذَاتِ الصُّدُورِ ﴿٢٣﴾

"ಅಲ್ಲಾಹನು ಅವತೀರ್ಣಗೊಳಿಸಿರುವುದನ್ನು ಅನುಸರಿಸಿರೆಂದು ಅವರೊಡನೆ ಹೇಳಲಾದಾಗ ಅವರು- "ನಾವು ನಮ್ಮ ಪೂರ್ವಜರನ್ನು ಯಾವುದರಲ್ಲಿ ಕಂಡಿದ್ದೇವೋ ಅದನ್ನೇ ಅನುಸರಿಸುವೆವು" ಎನ್ನುತ್ತಾರೆ. ಶೈತಾನನು ಅವರನ್ನು ಧಗಧಗಿಸುವ ಅಗ್ನಿಯ ಕಡೆಗೇ ಕರೆಯುತ್ತಿದ್ದರೂ ಇವರು ಅವರನ್ನೇ ಅನುಸರಿಸುವರೇ? ತನ್ನನ್ನು ಅಲ್ಲಾಹನಿಗೆ ಅರ್ಪಿಸಿಕೊಂಡು ಕಾರ್ಯತಃ ಸತ್ಕರ್ಮಿಯೂ ಆದವನು ವಾಸ್ತವದಲ್ಲಿ ಭರವಸೆಗೆ ಯೋಗ್ಯವಾದ ಒಂದು ಆಧಾರವನ್ನು ಬಿಗಿ ಹಿಡಿದುಕೊಂಡನು. ಸಕಲ ವಿಷಯಗಳ ಅಂತಿಮ ತೀರ್ಮಾನವು ಅಲ್ಲಾಹನ ಕೈಯಲ್ಲೇ ಇದೆ. ಸತ್ಯವನ್ನು ನಿಷೇಧಿಸುವವನ ನಿಷೇಧವು ನಿಮ್ಮನ್ನು ವ್ಯಥೆಗೀಡು ಮಾಡದಿರಲಿ. ಅವರಿಗೆ ಮರಳಿ ಬರಬೇಕಾದುದಂತೂ ನಮ್ಮ ಕಡೆಗೇ ಆಗಿದೆ. ಅನಂತರ ಅವರು ಏನೆಲ್ಲ ಮಾಡಿ ಬಂದಿರುವರೆಂದು ನಾವು ಅವರಿಗೆ ತೋರಿಸುವೆವು. ನಿಶ್ಚಯವಾಗಿಯೂ ಅಲ್ಲಾಹನು ಹೃದಯಗಳೊಳಗೆ ಅವಿತಿರುವ ರಹಸ್ಯಗಳನ್ನೂ ತಿಳಿದಿರುತ್ತಾನೆ." (ಲುಕ್ಮಾನ್: 21-23)

ಇದು ಪಥಭ್ರಷ್ಟತೆ ಬರುವ ದ್ವಿತೀಯ ಹಾದಿಯಾಗಿತ್ತು. ಇನ್ನು ಅದರ ಮೂರನೆಯ ದಾರಿಯನ್ನು ಕುರ್‌ಆನ್ ಈ ರೀತಿ ತೋರಿಸುತ್ತದೆ:

3. ಅಲ್ಲಾಹೇತರರ ಅನುಸರಣೆ

ಮಾನವನು ದೇವಾಜ್ಞೆಯನ್ನು ತ್ಯಜಿಸಿ ಅನ್ಯರ ಅಪ್ಪಣೆಗಳಂತೆ ನಡೆಯಲು ಹೊರಟಾಗ ಹೀಗೂ ಯೋಚಿಸುತ್ತಾನೆ- 'ಆತ ಬಹುದೊಡ್ಡ ಜನ. ಅವನ ಮಾತು ಪರಿಪಕ್ವದ್ದಾಗಿರಬೇಕು' ಅಥವಾ ಆ ಮಹಾತ್ಮರು ತನ್ನ ಶಾಪದಿಂದ ನನ್ನನ್ನು ನಾಶ ಮಾಡಿ ಬಿಡುವರು, ಇಲ್ಲವೇ ನನ್ನನ್ನು ತನ್ನೊಂದಿಗೆ ಸ್ವರ್ಗಕ್ಕೆ ಕರೆದೊಯ್ಯುವರು. ಆದುದರಿಂದ ಅವರು ಹೇಳಿದುದನ್ನೆಲ್ಲಾ ಸರಿಯೆಂದೇ ಒಪ್ಪಿಕೊಳ್ಳಬೇಕು, ಅಥವಾ ಆ ಜನಾಂಗವು ತುಂಬಾ ಅಭಿವೃದ್ಧಿ ಹೊಂದುತ್ತಿದೆ, 'ನಾವೂ ಅವರನ್ನೇ ಅನುಸರಿಸಬೇಕು' ಎಂದು ಮುಂತಾಗಿ ಯೋಚಿಸುತ್ತಿರುವವನಿಗೆ ದೇವನ ಮಾರ್ಗವು ಮುಚ್ಚಿ ಹೋಗುತ್ತದೆ-

وَإِنْ تُطِعْ أَكْثَرَ مَنْ فِي الْأَرْضِ يُضِلُّوكَ عَنْ سَبِيلِ اللَّهِ ۚ إِنْ يَتَّبِعُونَ
إِلَّا الظَّنَّ وَإِنْ هُمْ إِلَّا يَخْرُصُونَ ﴿١١٦﴾

"ಓ ಪೈಗಂಬರರೇ, ನೀವು ಭೂ ನಿವಾಸಿಗಳಲ್ಲಿ ಹೆಚ್ಚಿನವರ ಹೇಳಿಕೆಯಂತೆ ನಡೆದರೆ ಅವರು ನಿಮ್ಮನ್ನು ಅಲ್ಲಾಹನ ಮಾರ್ಗ ದಿಂದ ತಪ್ಪಿಸಿ ಬಿಡುವರು. ಅವರಂತು ಕೇವಲ ಗುಮಾನಿ ಯನ್ನನುಸರಿಸಿ ಊಹಾಪೋಹೆಗಳ ಪ್ರಕಾರ ವರ್ತಿಸುತ್ತಾರೆ." (ಅಲ್ ಅನ್‌ಆಮ್: 116)

ಅರ್ಥಾತ್, ಮಾನವನು ಒಬ್ಬನೇ ದೇವನನ್ನು ಆಶ್ರಯಿಸಿ ಕೊಂಡಾಗ ಮಾತ್ರ ಆತನು ನೇರಮಾರ್ಗದಲ್ಲಿರುತ್ತಾನೆ. ನೂರಾರು, ಸಾವಿರಾರು ದೇವರುಗಳನ್ನು ನಿರ್ಮಿಸಿಕೊಂಡು ಒಮ್ಮೆ ಈ ದೇವನ ಆದೇಶಗಳಂತೆಯೂ ಇನ್ನೊಮ್ಮೆ ಆ ದೇವನ ಅಪ್ಪಣೆಯಂತೆಯೂ ನಡೆಯುವಾತನು ನೇರ ಮಾರ್ಗವನ್ನು ಪಡೆಯುವುದು ಹೇಗೆ?

ಒಟ್ಟಿನಲ್ಲಿ ಪಥಭ್ರಷ್ಟತೆಗೆ ಮೂರು ಮಹತ್ತಾದ ಕಾರಣಗಳಿವೆ ಎಂದಾಯಿತು- i) ಸ್ವಂತ ಚಿತ್ತಾಕಾಂಕ್ಷೆಗಳ ಆರಾಧನೆ. ii) ಹಿರಿಯರ ಹಾಗೂ ಕುಟುಂಬ ಮತ್ತು ಗೋತ್ರಗಳ ಪದ್ಧತಿಗಳ ಆರಾಧನೆ. iii) ಲೋಕಾರಾಧನೆ- ಇದರಲ್ಲಿ ಧನಿಕರು, ಅಧಿಕಾರಿಗಳು, ಕಪಟ ಪುರೋಹಿತರು, ಪಥಭ್ರಷ್ಟ ಜನಾಂಗಗಳು ಇತ್ಯಾದಿ ಸೇರಿಕೊಂಡಿದ್ದಾರೆ.

ಇವು ದೇವತ್ವವನ್ನು ಆಕ್ರಮಿಸಿಕೊಂಡಿರುವ ಮೂರು ದೊಡ್ಡ ವಿಗ್ರಹಗಳಾಗಿವೆ. ಮುಸ್ಲಿಮನಾಗ ಬಯಸುವಾತನು ಅವುಗಳನ್ನು ಒಡೆಯಬೇಕಾಗುವುದು. ಆಗ ಮಾತ್ರ ಆತನು ಯಥಾರ್ಥ ಮುಸ್ಲಿಮನಾಗುವನು. ಈ ಮೂರು ವಿಗ್ರಹಗಳನ್ನು ತನ್ನ ಹೃದಯದೊಳಗೆ ಸ್ಥಾಪಿಸಿಕೊಂಡಿರುವಾತನು ಅಲ್ಲಾಹನ ದಾಸನಾಗಿರುವುದು ಸಾಧ್ಯವಿಲ್ಲ. ಅವನು ದಿನಕ್ಕೆ ಐವತ್ತು ಬಾರಿ ನಮಾಝ್ ಮಾಡುತ್ತಾ ತೋರಿಕೆಯ ಉಪವಾಸ ವ್ರತಾದಿಗಳನ್ನಾಚರಿಸುತ್ತಾ ಮುಸ್ಲಿಮನಂತೆ ವೇಷಭೂಷಣಗಳನ್ನಿರಿಸಿಕೊಳ್ಳುತ್ತಾ ತಾನೊಬ್ಬ ಅಪ್ಪಟ ಮುಸ್ಲಿಮನೆಂದು ಕೊಳ್ಳುತ್ತಾ ಜನರನ್ನೂ ಸ್ವತಃ ತನ್ನನ್ನೂ ವಂಚಿಸುತ್ತಿರಬಹುದು, ಆದರೆ ಅಲ್ಲಾಹನನ್ನು ವಂಚಿಸಲಾರ.

ಪಂಜಾಬಿ ಮುಸ್ಲಿಮರ ಸ್ಥಿತಿಗತಿ

ಸಹೋದರರೇ,

ಇಂದು ನಾನು ನಿಮ್ಮ ಮುಂದೆ ವಿವರಿಸಿದ ಮೂರು ತರದ ವಿಗ್ರಹಗಳ ಆರಾಧನೆಯು ಶುದ್ಧ ಶಿರ್ಕ್ (ಮಿಥ್ಯಾರಾಧನೆ) ಆಗಿದೆ. ನೀವು ಶಿಲಾಮೂರ್ತಿಗಳನ್ನು ಒಡೆದಿರಿ. ಇಟ್ಟಿಗೆ ಗಾರೆಗಳಿಂದ ನಿರ್ಮಾಣವಾದ ವಿಗ್ರಹಾಲಯಗಳನ್ನು ಕೆಡವಿದಿರಿ. ಆದರೆ ನಿಮ್ಮ ಹೃದಯದೊಳಗೆ ನಿರ್ಮಾಣ ವಾಗಿರುವ ವಿಗ್ರಹಾಲಯಗಳನ್ನು ಅಲಕ್ಷಿಸಿದಿರಿ. ಮುಸ್ಲಿಮನಾಗಲು ಅಗತ್ಯವಾದ ಪ್ರಪ್ರಥಮ ಶರತ್ತು ಈ ವಿಗ್ರಹಗಳನ್ನು ಒಡೆಯುವುದಾಗಿದೆ. ಭಾರತದಲ್ಲಿ ಮಾತ್ರವಲ್ಲ ಇಡೀ ಜಗತ್ತಿನಲ್ಲಿ

ಮುಸ್ಲಿಮರು ಈ ಮೂರು ವಿಗ್ರಹಗಳ ಆರಾಧನೆಯಿಂದಾಗಿಯೇ ಕಷ್ಟನಷ್ಟಗಳನ್ನು ಅನುಭವಿಸುತ್ತಿದ್ದಾರೆಂಬುದನ್ನು ಒಪ್ಪಿಕೊಳ್ಳಬೇಕಾಗಿದೆ. ಅವರ ಅಧೋಗತಿ, ದುರ್ದೆಸೆ ಹಾಗೂ ವಿನಾಶದ ಮೂಲವು ಈಗ ತಾನೇ ನೀವು ಕೇಳಿರುವ ಈ ಮೂರು ವಿಷಯಗಳೇ ಆಗಿವೆ. ಈ ಜಗತ್ತಿನಲ್ಲಿ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿದ್ದಾರೆ. ಆದರೆ ಅವರಿಗೆ ಅಧಿಕಾರ ಗೌರವಾದಿಗಳು ಸಿಗುವುದು ಬಹಳ ಅಪರೂಪ. ಈ ದೇಶದಲ್ಲಿಯೂ ನಿಮ್ಮ ಸಂಖ್ಯೆ ಸಾಕಷ್ಟಿದೆ. ಆದರೆ ಇಲ್ಲಿ ನಿಮಗೆ ಏನೂ ಬೆಲೆ ಇಲ್ಲ. ನಿಮಗಿಂತ ಕಡಿಮೆ ಸಂಖ್ಯೆಯಲ್ಲಿರುವ ಕೆಲವು ಜನಾಂಗಗಳ ಸ್ಥಾನಮಾನಗಳು ನಿಮಗಿಂತ ಎಷ್ಟೋ ಹೆಚ್ಚಿದೆ. ಇದಕ್ಕೆ ಕಾರಣವೇನೆಂದು ನೀವು ಎಂದಾದರೂ ಯೋಚಿಸಿದ್ದೀರಾ? ಇದಕ್ಕೆ ಕಾರಣವಿಷ್ಟೇ. ಚಿತ್ತಾಕಾಂಕ್ಷೆಗಳ ಆರಾಧನೆ, ಹಿರಿಯರ ಸಂಪ್ರದಾಯಗಳ ಆರಾಧನೆ ಮತ್ತು ನಿಮ್ಮಂತಹ ಮಾನವರ ಆರಾಧನೆಗಳು ನಿಮ್ಮ ಶಕ್ತಿಯನ್ನು ಒಳಗಿಂದೊಳಗೆ ಟೊಳ್ಳಾಗಿಸಿವೆ.

ಜಾತಿ ಪದ್ಧತಿ

ನಿಮ್ಮಲ್ಲಿ ರಜಪೂತರು, ಮೊಗಲರು, ಜಾಟರು, ಅಫಘಾನರು ಮೊದಲಾದ ಅನೇಕ ಜನಾಂಗದವರಿದ್ದಾರೆ. ಇಸ್ಲಾಮ್ ಈ ಎಲ್ಲ ಜನಾಂಗಗಳು ಒಂದೇ ಜನಾಂಗವಾಗಿ, ಪರಸ್ಪರ ಸೋದರರಾಗಿ, ಇಟ್ಟಿಗೆಗಳಿಂದ ಜೋಡಿಸಲಾದ ಒಂದೇ ಗೋಡೆಯಂತೆ ಬಾಳಲು ಹೇಳಿತ್ತು. ಆದರೆ ನೀವು ಈಗಲೂ ಹಳೆಯ ಅಜ್ಞಾನ ಕಾಲದ ಭೇದಭಾವಗಳನ್ನು ಕಟ್ಟಿಕೊಂಡು ಕುಳಿತಿದ್ದೀರಿ. ಇಲ್ಲಿ ಮುಸ್ಲಿಮೇತರರಲ್ಲಿ ವಿವಿಧ ಗೋತ್ರಗಳಲ್ಲಿರುವಂತೆ ನಿಮ್ಮಲ್ಲೂ ಇವೆ. ನಿಮ್ಮೊಳಗೆ ಪರಸ್ಪರ ಮುಸ್ಲಿಮರಂತೆ ವಿವಾಹ ಸಂಬಂಧಗಳಾಗುವುದಿಲ್ಲ. ಪರಸ್ಪರ ಸಹೋದರ ಭಾವನೆಯಿಲ್ಲ. ನೀವು ಬಾಯಿಮಾತಿಗೆ ಒಬ್ಬರನ್ನೊಬ್ಬರು ಮುಸ್ಲಿಮ್ ಸಹೋದರನೆಂದು ಕೊಳ್ಳುತ್ತೀರಿ. ಆದರೆ ನಿಜವಾಗಿ ನಿಮ್ಮಲ್ಲಿ ಇಸ್ಲಾಮಿಗಿಂತ ಮುಂಚೆ ಇದ್ದ ಭೇದಭಾವಗಳೇ ನೆಲೆಸಿವೆ. ಈ ಭೇದಭಾವಗಳು ನಿಮ್ಮನ್ನು ಭದ್ರ ಗೋಡೆಯಂತಾಗಲು ಬಿಡಲಿಲ್ಲ. ನಿಮ್ಮ ಪ್ರತಿಯೊಂದು ಇಟ್ಟಿಗೆಯೂ ಬೇರೆ ಬೇರೆಯಾಗಿದೆ. ಒಂದಾಗಿ ಏಳಲಿಕ್ಕೂ ಒಗ್ಗಟ್ಟಾಗಿ ವಿಪತ್ತುಗಳನ್ನು ಎದುರಿಸಲಿಕ್ಕೂ ನಿಮ್ಮಿಂದಾಗುವುದಿಲ್ಲ. ಈ ಭೇದಭಾವಗಳನ್ನು ಇಸ್ಲಾಮ್ ನೀಡಿರುವ ಶಿಕ್ಷಣದ ಪ್ರಕಾರ ಮುರಿಯಿರಿ; ಪರಸ್ಪರ ಒಂದಾಗಿರಿ ಎಂದಾಗ ನೀವೇನನ್ನುತ್ತೀರಿ? ನಮ್ಮ ಪೂರ್ವಿಕರಿಂದ ನಡೆದು ಬಂದಿರುವ ಸಂಪ್ರದಾಯಗಳನ್ನು ನಮ್ಮಿಂದ ಮುರಿಯಲಾಗದೆಂಬುದೇ ನಿಮ್ಮ ಉತ್ತರ. ಇದಕ್ಕೆ ಅಲ್ಲಾಹನ ಕಡೆಯಿಂದ ಸಿಗುವ ಪ್ರತ್ಯುತ್ತರವೇನು? 'ಬೇಡ ನೀವು ಆ ಸಂಪ್ರದಾಯಗಳನ್ನು ಮುರಿಯಬೇಡಿರಿ. ಅಜ್ಞಾನ ಕಾಲದ ಪದ್ಧತಿಗಳ ಅನುಕರಣೆಯನ್ನು ತ್ಯಜಿಸಬೇಡಿರಿ. ನಾವೂ ನಿಮ್ಮನ್ನು ಭಿನ್ನಭಿನ್ನವಾಗಿ ಒಡೆಯುವೆವು. ನೀವು ಅತ್ಯಧಿಕ ಸಂಖ್ಯೆಯಲ್ಲಿದ್ದರೂ ನಿಮ್ಮನ್ನು ನಿಂದ್ಯರನ್ನಾಗಿ ಮಾಡಿ ತೋರಿಸುವೆವು' ಎಂದಾಗಿದೆ.

ಆಸ್ತಿ ಹಕ್ಕು ವಂಚನೆ

ನಿಮ್ಮ ಸೊತ್ತಿನಲ್ಲಿ ಗಂಡು ಮಕ್ಕಳಿಗೂ ಹೆಣ್ಣು ಮಕ್ಕಳಿಗೂ ಪಾಲಿದೆಯೆಂದು ಅಲ್ಲಾಹನು ಆದೇಶಿಸಿದ್ದನು. ಅದಕ್ಕೆ ನಿಮ್ಮ ಉತ್ತರವೇನು? ನಮ್ಮ ಪೂರ್ವಜರ ಪದ್ಧತಿ ಪ್ರಕಾರ

ಹುಡುಗರಿಗೂ ಹುಡುಗಿಯರಿಗೂ ಪಾಲಿಲ್ಲ. ನಾವು ಅಲ್ಲಾಹನ ಕಾನೂನಿನ ಬದಲಿಗೆ ಪೂರ್ವಿಕರ ಕಾನೂನನ್ನು ಪಾಲಿಸುತ್ತೇವೆಂದು ಹೇಳುತ್ತೀರಿ. ಇಸ್ಲಾಮ್ ಎಂದರೆ ಇದುವೇ? ನಿಮ್ಮೊಡನೆ 'ಹಿರಿಯರ ಕಾನೂನು ಕಾಯಿದೆಗಳನ್ನು ಮುರಿಯಿರಿ' ಎಂದಾಗ ನಿಮ್ಮ ಪೈಕಿ ಪ್ರತಿಯೊಬ್ಬನೂ 'ಎಲ್ಲರೂ ಮುರಿದರೆ ನಾನೂ ಮುರಿಯುತ್ತೇನೆ. ಅಲ್ಲವಾದರೆ ಇತರರು ಹೆಣ್ಣು ಮಕ್ಕಳಿಗೆ ಪಾಲು ಕೊಡದೆ ನಾನು ಮಾತ್ರ ಕೊಟ್ಟರೆ ನನ್ನ ಸಂಪತ್ತು ಇತರರಿಗಂತೂ ಹೋಗುವುದು; ಆದರೆ ಇತರರ ಸೊತ್ತು ನನ್ನ ಮನೆಗೆ ಬರಲಾರದು' ಎನ್ನುತ್ತೀರಿ, ಈ ಉತ್ತರದ ಅರ್ಥವೇನಾಗುತ್ತದೆಂದು ಯೋಚಿಸಿರಿ. 'ಬೇರೆಯವರು ಅನುಸರಿಸಿದರೆ ನಾವು ಅನುಸರಿಸುತ್ತೇವೆ' ಎಂಬ ಶರತ್ತಿನೊಂದಿಗೆ ದೇವಾದೇಶಗಳನ್ನು ಪಾಲಿಸುವಿರಾ? ಹಾಗಿದ್ದರೆ 'ಇತರರು ವ್ಯಭಿಚಾರ ಮಾಡಿದರೆ ನಾನೂ ಮಾಡುವೆ' ಎಂದೂ ಬೇರೆಯವರು ಕಳ್ಳತನ ಮಾಡಿದರೆ ನಾನೂ ಕದಿಯುವೆ' ಎಂದೂ ಹೇಳಿದಂತಾಗುವುದು. ಹೀಗಾದರೆ 'ಬೇರೆಯವರು ಎಲ್ಲಾ ಪಾಪಕೃತ್ಯವನ್ನು ಸಂಪೂರ್ಣವಾಗಿ ತೊರೆಯುವ ತನಕ ನಾನೂ ಪಾಪ ಕೃತ್ಯಗಳನ್ನು ಮಾಡುತ್ತಲೇ ಇರುವೆನು' ಎಂದಂತಾಗುತ್ತದೆ. ವಸ್ತುಸ್ಥಿತಿಯೇನೆಂದರೆ ಈ ವಿಷಯಗಳಲ್ಲಿ ಮೂರು ವಿಗ್ರಹಗಳ ಆರಾಧನೆ ನಡೆಯುತ್ತಿದೆ. ಚಿತ್ತಾಕಾಂಕ್ಷೆಗಳ ಆರಾಧನೆಯೂ ಇದೆ. ಪೂರ್ವಿಕರ ಸಂಪ್ರದಾಯಗಳ ಆರಾಧನೆಯೂ ಇದೆ. ಬಹುದೇವಾರಾಧಕ ಜನಾಂಗಗಳ ಆರಾಧನೆಯೂ ಇದೆ. ಈ ಮೂರರೊಂದಿಗೆ 'ನಾವು ಮುಸ್ಲಿಮರು' ಎಂದು ಹೇಳಿಕೊಳ್ಳುವುದೂ ಇದೆ.

ಇವು ಕೇವಲ ಎರಡು ದೃಷ್ಟಾಂತಗಳಲ್ಲ. ಚೆನ್ನಾಗಿ ಕಣ್ತೆರೆದು ನೋಡಿದರೆ ಇಂತಹ ಅನೇಕಾನೇಕ ವ್ಯಾಧಿಗಳು ನಿಮ್ಮಲ್ಲಿ ಹರಡಿರುವುದನ್ನು ಕಾಣಬಹುದು. ಅವುಗಳ ಪೈಕಿ ಕೆಲವೆಡೆ ಒಂದು ವಿಗ್ರಹದ ಆರಾಧನೆಯನ್ನೂ ಇನ್ನು ಕೆಲವೆಡೆ ಎರಡು ವಿಗ್ರಹಗಳು ಮತ್ತು ಕೆಲವೆಡೆ ಮೂರು ವಿಗ್ರಹಗಳ ಆರಾಧನೆಯನ್ನೂ ಕಾಣುವಿರಿ. ಈ ವಿಗ್ರಹಗಳ ಆರಾಧನೆಯೊಂದಿಗೆ 'ನಾವು ಮುಸ್ಲಿಮರು' ಎಂದೂ ಹೇಳಿಕೊಳ್ಳುತ್ತಿರುವಾಗ ಅಲ್ಲಾಹನು ಮುಸ್ಲಿಮರಿಗೆ ವಾಗ್ದಾನವಿತ್ತ ಅನುಗ್ರಹಗಳನ್ನು ನೀವು ನಿರೀಕ್ಷಿಸುವುದಾದರೂ ಹೇಗೆ?

○

ಈಮಾನ್(ಸತ್ಯವಿಶ್ವಾಸ)ನ ಒರೆಗಲ್ಲು

ಮುಸ್ಲಿಮ್ ಸಹೋದರರೇ,

ಕುರ್‌ಆನಿನ ಪ್ರಕಾರ ಪಥಭ್ರಷ್ಟತೆ ಬರುವ ಮೂರು ದಾರಿಗಳಿವೆ ಎಂದು ಹಿಂದಿನ ಉಪನ್ಯಾಸದಲ್ಲಿ ಹೇಳಿದ್ದೆ. ಒಂದನೆಯದು- ಅಲ್ಲಾಹನ ಆಜ್ಞೆಗಳನ್ನು ತ್ಯಜಿಸಿ ಸ್ವಂತ ಚಿತ್ತಾಕಾಂಕ್ಷೆಗಳ ದಾಸನಾಗಿರುವುದು. ಎರಡನೆಯದು- ದೈವಿಕ ಶಾಸನಗಳಿಗೆ ವಿರೋಧವಾಗಿ ತನ್ನ ಗೋತ್ರ ಹಾಗೂ ಪೂರ್ವಿಕರ ಸಂಪ್ರದಾಯಗಳಿಗೆ ಮಹತ್ವ ಕೊಡುವುದು. ಮೂರನೆಯದು- ಅಲ್ಲಾಹ್ ಮತ್ತು ಪ್ರವಾದಿಯವರು ತೋರಿಸಿ ಕೊಟ್ಟ ಪದ್ಧತಿಯನ್ನು ನಿರ್ಲಕ್ಷಿಸಿ ಮಾನವರನ್ನು ಅನುಸರಿಸುವುದು. ಅದು ತನ್ನ ಜನಾಂಗದ ದೊಡ್ಡ ವ್ಯಕ್ತಿಗಳಾಗಲಿ, ಇತರ ಜನಾಂಗದವರಾಗಲಿ.

ಮುಸ್ಲಿಮನ ನೈಜ ಪರಿಚಯ

ಈ ಮೂರು ತರದ ವ್ಯಾಧಿಗಳಿಗೆ ಬಲಿಯಾಗದವನೇ ಯಥಾರ್ಥ 'ಮುಸ್ಲಿಮ್.' ಮುಸ್ಲಿಮನೆಂದರೆ ಅಲ್ಲಾಹನ ಹೊರತು ಇತರ ಯಾರ ದಾಸನೂ ಆಗಿರದವನು ಹಾಗೂ ಪ್ರವಾದಿವರ್ಯರ(ಸ) ಹೊರತು ಬೇರೆ ಯಾರನ್ನೂ ಅನುಸರಿಸದವನು. ಅಲ್ಲಾಹ್ ಮತ್ತು ಪ್ರವಾದಿಯ ಬೋಧನೆಯೇ ಪರಮ ಸತ್ಯವೆಂದು ದೃಢವಾಗಿ ನಂಬಿರುವವನೇ ಮುಸ್ಲಿಮ್. ಇದಕ್ಕೆ ವಿರೋಧವಾಗಿರುವುದೆಲ್ಲಾ ಮಿಥ್ಯವೆಂದೂ ಮಾನವನ ಇಹ-ಪರಗಳ ಶ್ರೇಯಸ್ಸಿಗಾಗಿ ಬೇಕಾದುದೆಲ್ಲವೂ ಅಲ್ಲಾಹ್ ಮತ್ತು ರಸೂಲರ ಶಿಕ್ಷಣದಲ್ಲಿದೆಯೆಂದೂ ಸಂಪೂರ್ಣ ವಿಶ್ವಾಸವನ್ನಿರಿಸಿದಾತನು- ಜೀವನದ ಪ್ರತಿಯೊಂದು ವ್ಯವಹಾರದಲ್ಲಿಯೂ ಅಲ್ಲಾಹ್ ಮತ್ತು ರಸೂಲರ ನಿರ್ದೇಶನಗಳೇನಿವೆ ಎಂದು ಮಾತ್ರ ನೋಡುವನು. ಅವುಗಳನ್ನು ತಿಳಿದುಕೊಂಡೊಡನೆ ಅವುಗಳ ಮುಂದೆ ತಲೆಬಾಗುವನು. ಇದರಲ್ಲಿ ಅವನ ಚಿತ್ತಾಕಾಂಕ್ಷೆಗಳು ಎಷ್ಟೇ ಕಳವಳಿಸಲಿ; ಅವನ ಗೋತ್ರದವರು ಎಷ್ಟು ಬೇಕಾದರೂ ದೂಷಿಸಲಿ ಅಥವಾ ವಿರೋಧಿಸಲಿ; ಆತನು ಅವುಗಳ ಪೈಕಿ ಯಾವುದನ್ನೂ ಲೆಕ್ಕಿಸಲಾರನು. ಏಕೆಂದರೆ ಆತನನ್ನು ವಿರೋಧಿಸುವವನಿಗೆ 'ನಾನು ಅಲ್ಲಾಹನ ದಾಸನು; ನಿಮ್ಮ ದಾಸನಲ್ಲ. ನಾನು ರಸೂಲರ(ಸ) ಮೇಲೆ ಈಮಾನ್ ಇರಿಸಿದ್ದೇನೆ. ನಿಮ್ಮ ಮೇಲೆ ಅಲ್ಲ' ಎಂಬ ಉತ್ತರವನ್ನೇ ಕೊಡುವನು.

ಕಾಪಟ್ಯದ ಲಕ್ಷಣಗಳು

1. ದೇಹೇಚ್ಛೆಯ ಗುಲಾಮನಾಗುವುದು

ಇದಕ್ಕೆ ವ್ಯತಿರಿಕ್ತವಾಗಿ ಒಬ್ಬನು 'ಅಲ್ಲಾಹ್ ಮತ್ತು ರಸೂಲರ ಆದೇಶಗಳು ಹೇಗಿದ್ದರೂ ನಾನು ಅದನ್ನೊಪ್ಪುವುದಿಲ್ಲ. ನನಗೆ ಅದರಲ್ಲಿ ಹಾನಿಯಿದೆ ಎಂದು ತೋರುತ್ತದೆ. ಆದುದರಿಂದ ನಾನು ಅವುಗಳನ್ನು ಬಿಟ್ಟು ನನ್ನ ಸ್ವಂತ ಇಚ್ಛೆಯಂತೆ ನಡೆಯುವೆನು' ಎಂದು ಹೇಳಿದರೆ ಅಂಥವನ ಹೃದಯದಲ್ಲಿ ಈಮಾನ್ ಇರಲಾರದು. ಅವನು ಮೂಮಿನ್ (ಸತ್ಯ ವಿಶ್ವಾಸಿ) ಖಂಡಿತ ಅಲ್ಲ. ಅವನು ಬಾಯಿಯಿಂದ ತಾನು ಅಲ್ಲಾಹನ ದಾಸನೂ ರಸೂಲರ ಅನುಯಾಯಿಯೂ ಆಗಿರುತ್ತೇನೆಂದು ಹೇಳಿದರೂ ಅವನು ತನ್ನ ಚಿತ್ತಾಕಾಂಕ್ಷೆಗಳ ದಾಸನೂ ತನ್ನ ಅಭಿಪ್ರಾಯಗಳ ಅನುಯಾಯಿಯೂ ಆಗಿರುವ ಮುನಾಫಿಕ್ (ಕಪಟವಿಶ್ವಾಸಿ) ಆಗಿರುತ್ತಾನೆ.

2. ಸಾಂಪ್ರದಾಯಿಕತೆಗೆ ಕಟ್ಟು ಬೀಳುವುದು

ಇದೇ ರೀತಿಯಲ್ಲಿ ಇನ್ನೊಬ್ಬನು 'ಅಲ್ಲಾಹ್ ಮತ್ತು ರಸೂಲರ ಆದೇಶಗಳು ಹೇಗೆ ಬೇಕಾದರೂ ಇರಲಿ. ನಾನು ಮಾಡುವ ಕೆಲಸವು ಹಿರಿಯರಿಂದಲೇ ನಡೆದು ಬಂದಿದೆ. ಅದನ್ನು ನಾನು ಹೇಗೆ ಬಿಡಲಿ? ಅದು ನನ್ನ ಮನೆತನದ ರೂಢಿ ಅದನ್ನು ಮುರಿಯುವುದೆಂತು?' ಎಂಬಿತ್ಯಾದಿ ಹೇಳಿದರೆ ಅವನೂ ಮುನಾಫಿಕರಲ್ಲಿ ಗಣಿಸಲ್ಪಡುವನು. ಅವನು ನಮಾಝ್‌ಗಳನ್ನು ಮಾಡುತ್ತಾ ಅವನ ಹಣೆಯಲ್ಲಿ ದಡ್ಡು ಕಟ್ಟಿರಲಿ, ತೋರಿಕೆಗೆ ಅವನು ಧಾರ್ಮಿಕ ವೇಷಭೂಷಣಗಳನ್ನೇ ಧರಿಸಿರಲಿ. ಏಕೆಂದರೆ ನಿಜವಾಗಿ ದೀನ್ (ಧರ್ಮವು) ಅವನ ಹೃದಯದಲ್ಲಿ ಇಳಿಯಲೇ ಇಲ್ಲ. ದೀನ್ ಎಂಬುದು ರುಕೂಅ್ (ಬಾಗುವಿಕೆ), ಸುಜೂದ್ (ಸಾಷ್ಟಾಂಗ ವೆರಗುವಿಕೆ), ಉಪವಾಸ ಮತ್ತು ಹಜ್ಜ್ ಯಾತ್ರೆಗಳಲ್ಲ. ಅದು ಅವನ ರೂಪ ಮತ್ತು ವೇಷಭೂಷಣಗಳಲ್ಲೂ ಇರುವುದಿಲ್ಲ. ವಾಸ್ತವದಲ್ಲಿ ಅಲ್ಲಾಹ್ ಮತ್ತು ರಸೂಲರ ಅನುಸರಣೆಯನ್ನೇ 'ದೀನ್' ಎನ್ನುತ್ತಾರೆ. ತನ್ನ ವ್ಯವಹಾರಗಳಲ್ಲಿ ಅಲ್ಲಾಹ್ ಮತ್ತು ರಸೂಲರ ಆಜ್ಞಾಪಾಲನೆ ಯನ್ನು ನಿರಾಕರಿಸಿದವನ ಹೃದಯದಲ್ಲಿ ದೀನ್ ಇರುವುದಿಲ್ಲ. ಅವನ ನಮಾಝ್, ಉಪವಾಸ ಮತ್ತು ಧಾರ್ಮಿಕ ವೇಷಭೂಷಣಾದಿಗಳೆಲ್ಲವೂ ಕೇವಲ ವಂಚನೆಯಾಗಿದೆ.

3. ಇತರ ಜನಾಂಗಗಳ ಅನುಕರಣೆ

ಅದೇ ರೀತಿಯಲ್ಲಿ ಮತ್ತೊಬ್ಬನು ದೇವಗ್ರಂಥ ಮತ್ತು ಪ್ರವಾದಿವರ್ಯರ(ಸ) ಮಾರ್ಗದರ್ಶನವನ್ನು ಕಡೆಗಣಿಸಿ, 'ಈ ವಿಷಯವು ಪಾಶ್ಚಾತ್ಯರಲ್ಲಿ ಜನಪ್ರಿಯವಾಗಿರುವ ಕಾರಣ ಅದನ್ನು ಅನುಸರಿಸಬೇಕು. ಅದನ್ನು ಸ್ವೀಕರಿಸಿ ಆ ಜನಾಂಗವು ತುಂಬಾ ಪ್ರಗತಿ ಸಾಧಿಸಿದೆ. ಆ ವಿಷಯವನ್ನು ಆ ದೊಡ್ಡ ವ್ಯಕ್ತಿ ಹೇಳುತ್ತಿರುವುದರಿಂದ ಅದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ...' ಎಂಬಿತ್ಯಾದಿ ಹೇಳುತ್ತಿದ್ದರೆ ಅಂಥವನ ಈಮಾನ್ ಕೂಡಾ ಸಂಶಯಾಸ್ಪದವಾಗಿದೆ. ಈ

ವಿಷಯಗಳಿಗೂ ಈಮಾನಿಗೂ ಸಂಬಂಧವಿಲ್ಲ. ಮುಸ್ಲಿಮರಾಗಲು ಮತ್ತು ಮುಸ್ಲಿಮರಾಗಿಯೇ ಇರಲು ಬಯಸುವಿರಾದರೆ ಅಲ್ಲಾಹ್ ಮತ್ತು ಪ್ರವಾದಿಯವರ(ಸ) ಆದೇಶಗಳಿಗೆ ಹೊರತಾಗಿರುವುದನ್ನೆಲ್ಲ ಕಿತ್ತೊಗೆಯಿರಿ. ಇಲ್ಲವೆಂದಾದರೆ 'ನಾವು ಮುಸ್ಲಿಮರು' ಎನ್ನುವ ನಿಮ್ಮ ವಾದವೇ ಸರಿಯಲ್ಲ. ನಾವು ಅಲ್ಲಾಹ್ ಮತ್ತು ರಸೂಲರನ್ನು ನಂಬಿದ್ದೇವೆಂದು ಬಾಯಿಯಿಂದ ಹೇಳಿಕೊಳ್ಳುತ್ತಾ ಜೀವನದ-ವ್ಯವಹಾರಗಳಲ್ಲಿ ಇತರರ ಅಭಿಪ್ರಾಯಕ್ಕೆ ಎದುರಾಗಿರುವ, ಅಲ್ಲಾಹನ ಮತ್ತು ಪ್ರವಾದಿಯವರ(ಸ) ಅಭಿಪ್ರಾಯಗಳನ್ನು ರದ್ದು ಪಡಿಸುತ್ತಾ ಹೋದರೆ ಅದಕ್ಕೆ ಈಮಾನ್ ಎಂದಾಗಲಿ ಇಸ್ಲಾಮ್ ಎಂದಾಗಲಿ ಹೇಳಲಾಗದು. ಅದು ಮುನಾಫಿಕತ್(ಕಪಟ ವಿಶ್ವಾಸ) ಆಗಿದೆ.

ಪವಿತ್ರ ಕುರ್‌ಆನಿನ 18ನೆಯ ಕಾಂಡದಲ್ಲಿ ಅಲ್ಲಾಹನು ಸ್ಪಷ್ಟವಾಗಿ ಹೀಗೆ ನುಡಿದಿರುವನು:

لَقَدْ أَنزَلْنَا آيَاتٍ مُّبَيِّنَاتٍ ۚ وَاللَّهُ يَهْدِي مَن يَشَاءُ إِلَىٰ صِرَاطٍ مُّسْتَقِيمٍ ﴿٤٦﴾
وَيَقُولُونَ آمَنَّا بِاللَّهِ وَبِالرَّسُولِ وَأَطَعْنَا ثُمَّ يَتَوَلَّىٰ فَرِيقٌ مِّنْهُم مِّن بَعْدِ ذَٰلِكَ ۚ
وَمَا أُولَٰئِكَ بِالْمُؤْمِنِينَ ﴿٤٧﴾ وَإِذَا دُعُوا إِلَى اللَّهِ وَرَسُولِهِ لِيَحْكُمَ بَيْنَهُمْ
إِذَا فَرِيقٌ مِّنْهُم مُّعْرِضُونَ ﴿٤٨﴾ وَإِن يَكُن لَّهُمُ الْحَقُّ يَأْتُوا إِلَيْهِ
مُذْعِنِينَ ﴿٤٩﴾ أَفِي قُلُوبِهِم مَّرَضٌ أَمِ ارْتَابُوا أَمْ يَخَافُونَ أَن يَحِيفَ
اللَّهُ عَلَيْهِمْ وَرَسُولُهُ ۚ بَلْ أُولَٰئِكَ هُمُ الظَّالِمُونَ ﴿٥٠﴾ إِنَّمَا كَانَ قَوْلَ
الْمُؤْمِنِينَ إِذَا دُعُوا إِلَى اللَّهِ وَرَسُولِهِ لِيَحْكُمَ بَيْنَهُمْ أَن يَقُولُوا سَمِعْنَا
وَأَطَعْنَا ۚ وَأُولَٰئِكَ هُمُ الْمُفْلِحُونَ ﴿٥١﴾ وَمَن يُطِعِ اللَّهَ وَرَسُولَهُ وَيَخْشَ
اللَّهَ وَيَتَّقْهِ فَأُولَٰئِكَ هُمُ الْفَائِزُونَ ﴿٥٢﴾

"ನಾವು ಸುವ್ಯಕ್ತ ವಾಸ್ತವಿಕತೆಯುನ್ನು ತಿಳಿಸುವಂತಹ ಸೂಕ್ತಗಳನ್ನು ಅವತೀರ್ಣ ಗೊಳಿಸಿದ್ದೇವೆ. ಮುಂದೆ ನೇರ ಮಾರ್ಗದ ಕಡೆಗೆ ಅಲ್ಲಾಹನೇ ತಾನಿಚ್ಛಿಸಿದವರಿಗೆ ಮಾರ್ಗದರ್ಶನ ಮಾಡುತ್ತಾನೆ. ನಾವು ಅಲ್ಲಾಹ್ ಮತ್ತು ಸಂದೇಶವಾಹಕರ ಮೇಲೆ ವಿಶ್ವಾಸ ವಿರಿಸಿದೆವೆಂದೂ ನಾವು ಅನುಸರಣೆಯುನ್ನು ಸ್ವೀಕರಿಸಿದ್ದೇವೆಂದೂ ಅವರು ಹೇಳುತ್ತಾರೆ. ಆದರೆ ಅನಂತರ

ಅವರಲ್ಲೊಂದು ವಿಭಾಗವು (ಅನುಸರಣೆಯಿಂದ) ವಿಮುಖವಾಗಿ ಬಿಡುತ್ತದೆ. ಇಂತಹವರು ಖಂಡಿತ ಸತ್ಯವಿಶ್ವಾಸಿಗಳಲ್ಲ. ಅವರ ನಡುವಿನ ವ್ಯಾಜ್ಯಗಳನ್ನು ಇತ್ಯರ್ಥಪಡಿಸಲಿಕ್ಕಾಗಿ ಅವರನ್ನು ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಕಡೆಗೆ ಕರೆಯಲಾದಾಗ ಅವರಲ್ಲೊಂದು ವಿಭಾಗವು ಹಿಂಜರಿಯುತ್ತದೆ. ಆದರೆ ಸತ್ಯವು ಅವರ ಪರವಾಗಿದ್ದರೆ ಅತ್ಯಂತ ವಿಧೇಯರಾಗಿ ರಸೂಲರ ಬಳಿಗೆ ಬಂದು ಬಿಡುತ್ತಾರೆ. ಇವರ ಹೃದಯಗಳಿಗೆ (ಕಪಟವಿಶ್ವಾಸದ) ರೋಗ ತಗಲಿದೆಯೇ? ಅಥವಾ ಇವರು ಸಂಶಯಗ್ರಸ್ತರಾಗಿರುವರೇ? ಅಥವಾ ಅವರಿಗೆ ಅಲ್ಲಾಹ್ ಮತ್ತು ರಸೂಲರು ಅವರ ಮೇಲೆ ಅನ್ಯಾಯ ಮಾಡುವರೆಂಬ ಭಯವಿದೆಯೇ? ವಾಸ್ತವದಲ್ಲಿ ಅಕ್ರಮಿಗಳಂತೂ ಅವರೇ ಆಗಿರುತ್ತಾರೆ. ಅವರ ಮೊಕದ್ದಮೆಯ ಬಗ್ಗೆ ತೀರ್ಪು ನೀಡುವಂತಾಗಲು ಅವರನ್ನು ಅಲ್ಲಾಹ್ ಮತ್ತು ರಸೂಲರ ಕಡೆಗೆ ಕರೆಯಲಾದಾಗ, ನಾವು ಆಲಿಸಿದೆವು ಮತ್ತು ಅನುಸರಿಸಿದೆವು ಎಂದು ಹೇಳುವುದೇ ಸತ್ಯವಿಶ್ವಾಸಿಗಳ ಕರ್ತವ್ಯವಾಗಿರುತ್ತದೆ. ಇಂತಹವರೇ ಯಶಸ್ವಿಗಳಾಗುವವರು. ಅಲ್ಲಾಹ್ ಮತ್ತು ರಸೂಲರ ಆಜ್ಞಾಪಾಲನೆ ಮಾಡುವವರು ಅಲ್ಲಾಹನನ್ನು ಭಯಪಡುವವರು ಮತ್ತು ಅವನ ಆಜ್ಞೋಲ್ಲಂಘನೆಯಿಂದ ದೂರವಿರುವವರೇ ವಿಜಯಿಗಳು.''

(ಅನ್ನೂರ್: 46-52)

ಈ ಸೂಕ್ತಗಳಲ್ಲಿ ವಿವರಿಸಲಾಗಿರುವ ಈಮಾನಿನ ನಿರೂಪಣೆಯನ್ನು ನೋಡಿರಿ. ಈಮಾನ್ ಎಂದರೆ ತನ್ನನ್ನು ತಾನೇ ಅಲ್ಲಾಹನ ಮತ್ತು ಸಂದೇಶವಾಹಕರ ಆದೇಶಗಳಿಗೆ ಅರ್ಪಿಸುವುದು. ಅಲ್ಲಿಂದ ಸಿಗುವ ಆಜ್ಞೆಗಳನ್ನು ಒಪ್ಪಿಕೊಳ್ಳುವುದು. ತನ್ನ ಚಿತ್ತಾಕಾಂಕ್ಷೆಗಳನ್ನಾಗಲೀ ಕುಟುಂಬದವರ ಮಾತನ್ನಾಗಲೀ, ಇತರ ಯಾರ ಮಾತನ್ನೇ ಆಗಲೀ ಕೇಳದಿರುವುದು. ಈ ಗುಣಗಳನ್ನು ಹೊಂದಿರುವವನು ನಿಜವಾದ ಮೂಮಿನ್ (ಸತ್ಯವಿಶ್ವಾಸಿ) ಮತ್ತು ಮುಸ್ಲಿಮ್ (ಆಜ್ಞಾಪಾಲಕ) ಆಗಿದ್ದಾನೆ. ಅವುಗಳಿಂದ ವಿರಹಿತನಾದವನು ಮುನಾಫಿಕ್‌ಗೆ ಸಮಾನನಾಗಿರುವನು.

ಅಲ್ಲಾಹನ ಅನುಸರಣೆಯ ಕೆಲವು ಉದಾಹರಣೆಗಳು

ಮದ್ಯವರ್ಜ್ಯನೆ

ಅರಬ್ ದೇಶದಲ್ಲಿ ಮದ್ಯಪಾನ ಯಾವ ಮಟ್ಟದಲ್ಲಿತ್ತೆಂಬುದನ್ನು ನೀವು ಕೇಳಿರಬಹುದು. ಸ್ತ್ರೀಯರು, ಪುರುಷರು, ಯುವಕರು ಮತ್ತು ಮುದುಕರೆನ್ನದೆ ಎಲ್ಲರೂ ಮದ್ಯಪಾನಿಗಳಾಗಿದ್ದರು. ಮದ್ಯವೆಂದರೆ ಅವರಿಗೆ ಪ್ರಾಣ. ಅದರ ಪ್ರಶಂಸೆಯಲ್ಲಿ ಕಾವ್ಯಗಳನ್ನು ರಚಿಸಿ ಹಾಡುತ್ತಿದ್ದರು. ಅದಕ್ಕಾಗಿ ಪ್ರಾಣ ತೆರಲೂ ಸಿದ್ಧರಿದ್ದರು. ಮದ್ಯಪಾನದ ದುಶ್ಚಟವು ತಗಲಿ ಹೋದ ಮೇಲೆ ಅದನ್ನು ಬಿಟ್ಟು ಬಿಡುವುದು ಎಷ್ಟು ಪ್ರಯಾಸಕರವೆಂಬುದು ನಿಮಗೆ ತಿಳಿದಿದೆ. ಕುಡುಕನು ಪ್ರಾಣವನ್ನಾದರೂ ಬಿಡಲು ಸಿದ್ಧನಾಗುತ್ತಾನೆ. ಆದರೆ ಮದ್ಯವನ್ನು ಬಿಡಲು ಒಪ್ಪುವುದಿಲ್ಲ. ಮದ್ಯ ಸಿಗದಾಗ ಕುಡುಕನ ಪರಿಸ್ಥಿತಿ ರೋಗಿಗಿಂತಲೂ ಕಡೆಯಾಗುತ್ತದೆ. ಆದರೆ ಪವಿತ್ರ ಕುರ್‌ಆನಿನಲ್ಲಿ ಮದ್ಯಪಾನ ನಿಷೇಧಾಜ್ಞೆಯು ಬಂದ ಕೂಡಲೇ ಏನಾಯಿತೆಂಬುದನ್ನು

ಕೇಳಿದ್ದೀರಾ? ಮದ್ಯಕ್ಕಾಗಿ ಪ್ರಾಣ ಬಿಡುತ್ತಿದ್ದ ಅದೇ ಅರಬರು ಈ ಆಜ್ಞೆಯನ್ನು ಕೇಳಿದ ಆ ಕ್ಷಣದಲ್ಲೇ ತಮ್ಮ ಸ್ವಂತ ಕೈಗಳಿಂದ ಮದ್ಯದ ಮಡಕೆಗಳನ್ನು ಒಡೆದು ಹಾಕಿದರು. ಮದೀನಾ ಪಟ್ಟಣದ ಚರಂಡಿಗಳಲ್ಲಿ ಮದ್ಯವು ಮಳೆ ನೀರಿನಂತೆ ಹರಿಯಿತು. ಒಂದು ಕೂಟದಲ್ಲಿ ಕೆಲವರು ಮದ್ಯಪಾನ ಮಾಡುತ್ತಿದ್ದರು. ಪ್ರವಾದಿಯವರ(ಸ) ದೂತರ ಬಾಯಿಯಿಂದ 'ಮದ್ಯಪಾನ ನಿಷೇಧಿಸಲಾಗಿದೆ' ಎಂಬ ಘೋಷಣೆಯನ್ನು ಕೇಳಿದಾಕ್ಷಣ ಕುಡಿಯುತ್ತಿರುವವರ ಕೈಗಳು ಅಲ್ಲೇ ತಡೆದವು. ತುಟಿಗೆ ತಾಗಿಸಿದ್ದ ಲೋಟೆಗಳು ಸರಿದು ಹೋದವು. ಬಾಯಿಯೊಳಗಿದ್ದ ಮದ್ಯದ ಗುಟುಕನ್ನು ಉಗುಳಿ ಬಿಡಲಾಯಿತು. ಒಂದು ಹನಿಯನ್ನೂ ಗಂಟಲಿಗಿಳಿಸಲಿಲ್ಲ. ಇದುವೇ ಈಮಾನಿನ (ಸತ್ಯವಿಶ್ವಾಸದ) ಪ್ರಭಾವ. ಇದನ್ನೇ ಅಲ್ಲಾಹ್ ಮತ್ತು ಪ್ರವಾದಿಯವರ(ಸ) ಅನುಸರಣೆ ಎನ್ನುವುದು.

ತಪ್ಪೊಪ್ಪಿಗೆ

ಇಸ್ಲಾಮಿನಲ್ಲಿ ವ್ಯಭಿಚಾರಕ್ಕೆ ಎಷ್ಟು ಕಠಿಣ ಶಿಕ್ಷೆ ಇದೆಯೆಂಬುದು ನಿಮಗೆ ಗೊತ್ತಿದೆ. ನಗ್ನ ಬೆನ್ನ ಮೇಲೆ ನೂರು ಕೊರಡೆ ಏಟುಗಳು! ಅದನ್ನು ಎಣಿಸುವಾಗಲೇ ಮೈ ಜುಮ್ಮೆನ್ನುತ್ತದೆ. ವ್ಯಭಿಚಾರಿಗಳು ವಿವಾಹಿತರಾದರೆ ಅವರನ್ನು ಬಹಿರಂಗವಾಗಿ ಕಲ್ಲು ಹೊಡೆದು ಕೊಲ್ಲ ಲಾಗುತ್ತದೆ. ಇಂತಹ ಶಿಕ್ಷೆಯ ಹೆಸರು ಕೇಳಿಯೇ ಮನುಷ್ಯನಿಗೆ ಕಂಪನವುಂಟಾಗುತ್ತದೆ. ಆದರೆ ಮನದೊಳಗೆ ಸತ್ಯವಿಶ್ವಾಸ ಇದ್ದವರ ಪರಿಸ್ಥಿತಿಯನ್ನು ಬಲ್ಲಿರಾ? ಒಬ್ಬ ವ್ಯಕ್ತಿಯಿಂದ ಪ್ರಮಾದವಶಾತ್ ವ್ಯಭಿಚಾರದ ಅಪರಾಧ ಸಂಭವಿಸಿ ಹೋಯಿತು. ಸಾಕ್ಷಿ ಯಾರೂ ಇರಲಿಲ್ಲ. ಅವನನ್ನು ನ್ಯಾಯಾಲಯಕ್ಕೆ ಹಿಡಿದೊಯ್ಯುವವರೂ ಇರಲಿಲ್ಲ. ಪೊಲೀಸರಿಗೆ ದೂರು ಕೊಡುವವರೂ ಇರಲಿಲ್ಲ. ಆದರೆ ಹೃದಯದಲ್ಲಿ ಈಮಾನ್ ಮಾತ್ರ ಬಲಿಷ್ಠವಾಗಿತ್ತು. ಅದು ಹೀಗೆ ಚುಚ್ಚಿ ಹೇಳಿತು: 'ಎಲವೋ, ನೀನು ದೇವಾಜ್ಞೆಗೆ ವಿರುದ್ಧವಾಗಿ ನಿನ್ನ ದೇಹೇಚ್ಛೆಯನ್ನು ಪೂರ್ತಿಗೊಳಿಸಿದೆ. ಅದಕ್ಕಾಗಿ ದೇವನೇ ವಿಧಿಸಿರುವ ಶಿಕ್ಷೆ ಅನುಭವಿಸಲು ಈಗ ಸಿದ್ಧನಾಗು.' ಈ ಅಂತಃಪ್ರೇರಣೆಯಿಂದ ಆ ವ್ಯಕ್ತಿಯು ಪ್ರವಾದಿ ಮುಹಮ್ಮದ್‌ರವರ(ಸ) ಮುಂದೆ ಹಾಜರಾಗಿ, 'ಓ ಸಂದೇಶವಾಹಕರೇ, ನಾನು ವ್ಯಭಿಚಾರವೆಸಗಿ ಬಿಟ್ಟೆ. ನನಗೆ ಶಿಕ್ಷೆ ವಿಧಿಸಿ' ಎಂದನು. ಆಗ ಪ್ರವಾದಿಯವರು(ಸ) ಮುಖ ತಿರುಗಿಸಿಬಿಟ್ಟರು. ಆತನು ಆ ಕಡೆ ಬಂದು ನಿಂತನು. ಪ್ರವಾದಿಯವರು(ಸ) ಪುನಃ ಬೇರೆ ಕಡೆಗೆ ಮುಖ ತಿರುಗಿಸಿಕೊಂಡರು. ಆತನು ಮತ್ತೂ ಅವರ ಮುಂದೆ ಬಂದು ತನ್ನ ಅಪರಾಧವನ್ನು ಸ್ಪಷ್ಟೀಕರಿಸುತ್ತಾ ಅದರ ಶಿಕ್ಷೆಗಾಗಿ ಬೇಡುತ್ತಿದ್ದನು. ಇದಾಗಿದೆ ಈಮಾನ್. ಒಬ್ಬನ ಹೃದಯದಲ್ಲಿ ಈಮಾನ್ ಬೇರೂರಿ ಬಿಟ್ಟರೆ ಅಂಥವನಿಗೆ ನಗ್ನ ಬೆನ್ನ ಮೇಲೆ ಕೊರಡೆ ಏಟು ತಿನ್ನುವುದು ಮಾತ್ರವಲ್ಲ ಕಲ್ಲೇಟಿನಿಂದ ಕೊಲ್ಲಲ್ಪಡುವುದು ಕೂಡಾ ಸುಲಭ. ಆದರೆ ಪಾಪಿಯಾಗಿ ಅಲ್ಲಾಹನ ಮುಂದೆ ನಿಲ್ಲುವುದು ಮಾತ್ರ ಅತ್ಯಂತ ಕಷ್ಟ ಆಗಿ ಬಿಡುತ್ತದೆ.

ಸಂಬಂಧ ಕಡಿಯುವುದು

ಈ ಲೋಕದಲ್ಲಿ ಮನುಷ್ಯನಿಗೆ ತನ್ನ ಬಂಧು ಬಳಗದವರೂ ತುಂಬಾ ಆಪ್ತರಾಗಿರುತ್ತಾರೆ ಎಂಬುದು ನಿಮಗೆ ತಿಳಿದಿದೆ. ಮುಖ್ಯವಾಗಿ ತಂದೆ, ಸಹೋದರ, ಪುತ್ರರಿಗಾಗಿ ಯಾವ ಕಷ್ಟವನ್ನಾದರೂ ಸಹಿಸುವಷ್ಟು ಪ್ರೀತಿ ಇರುತ್ತದೆ. 'ಬದ್ರ್' ಮತ್ತು 'ಉಹುದ್' ಯುದ್ಧಗಳಲ್ಲಿ ಯಾರು ಯಾರ ವಿರುದ್ಧ ಹೋರಾಡಲು ಹೋದರೆಂದು ಕೊಂಚ ಯೋಚಿಸಿರಿ. ತಂದೆ ಮುಸ್ಲಿಮ್ ಸೈನ್ಯದಲ್ಲಿದ್ದರೆ ಮಗ ಸತ್ಯನಿಷೇಧಿಗಳ ಸೈನ್ಯದಲ್ಲಿದ್ದನು ಅಥವಾ ಮಗ ಈ ಕಡೆ ಇದ್ದರೆ ತಂದೆ ಆ ಕಡೆ ಇದ್ದರು. ಒಬ್ಬ ಸಹೋದರ ಇಲ್ಲಿದ್ದರೆ ಇನ್ನೊಬ್ಬ ಸಹೋದರ ಅಲ್ಲಿದ್ದನು. ಅತ್ಯಂತ ನಿಕಟ ಬಂಧುಗಳು ಕೂಡಾ ಒಬ್ಬರನ್ನೊಬ್ಬರು ಪರಸ್ಪರ ಎದುರಿಸುತ್ತಾ ಪರಿಚಯವೇ ಇಲ್ಲದವರಂತೆ ಹೋರಾಡಿದರು. ಈ ಆವೇಶವು ಹೊನ್ನು ಮಣ್ಣಿಗಾಗಿರಲಿಲ್ಲ. ಅವರೊಳಗೆ ವೈಯಕ್ತಿಕ ದ್ವೇಷವೂ ಇರಲಿಲ್ಲ. ಅವರು ಅಲ್ಲಾಹ್ ಮತ್ತು ಪ್ರವಾದಿಯವರಿಗಾಗಿ(ಸ) ಅರ್ಥಾತ್ ಸತ್ಯಕ್ಕಾಗಿ ತಮ್ಮ ತಂದೆ, ಸಹೋದರ, ಸಂತಾನ ತ್ಯಾಗ ಮಾಡಿ ತಮ್ಮ ರಕ್ತ ಸಂಬಂಧಿಗಳೊಂದಿಗೆ ಹೋರಾಡತಕ್ಕ ಸಾಮರ್ಥ್ಯವನ್ನು ಹೊಂದಿದ್ದರು.

ಪರಂಪರಾಗತ ರೀತಿ ರಿವಾಜುಗಳಿಂದ ಪಶ್ಚಾತ್ತಾಪಪಟ್ಟು ಮರಳುವುದು

ಅರಬ್ ದೇಶದಲ್ಲಿ ಪೂರ್ವ ಕಾಲದಿಂದಲೇ ನಡೆದು ಬಂದಿದ್ದ ಅನೇಕ ಸಂಪ್ರದಾಯಗಳ ಪೈಕಿ ಹೆಚ್ಚಿನಂಶ ಎಲ್ಲವನ್ನೂ ಇಸ್ಲಾಮ್ ತೊಡೆದು ಹಾಕಿತ್ತೆಂಬುದನ್ನು ನೀವು ಬಲ್ಲಿರಿ. ಅತ್ಯಂತ ದೊಡ್ಡ ಸಂಪ್ರದಾಯವಾದ ವಿಗ್ರಹಾರಾಧನೆಯು ನೂರಾರು ವರ್ಷಗಳಿಂದ ನಡೆದು ಬಂದಿತ್ತು. ಇಸ್ಲಾಮ್ ಆ ವಿಗ್ರಹಗಳನ್ನು ತ್ಯಜಿಸಬೇಕೆಂದಿತ್ತು. ಸರ್ವ ಸಾಮಾನ್ಯವಾಗಿ ಆಚರಣೆಯಲ್ಲಿದ್ದ ಮದ್ಯಪಾನ, ವ್ಯಭಿಚಾರ, ಜೂಜಾಟ, ಕಳ್ಳತನ, ಸುಲಿಗೆ, ದರೋಡೆಗಳನ್ನು ಇಸ್ಲಾಮ್ ಬಿಟ್ಟು ಬಿಡಲು ಹೇಳಿತು. ಅರಬ್ ದೇಶದಲ್ಲಿ ಸ್ತ್ರೀಯರು ಸ್ವಚ್ಛಂದವಾಗಿ ಅಲೆದಾಡುತ್ತಿದ್ದರು. ಇಸ್ಲಾಮ್ ಅವರಿಗೆ ಪರ್ದಾ ಧರಿಸಲು ಹೇಳಿತು. ಅರಬರು ಸ್ತ್ರೀಯರಿಗೆ ಪಿತ್ರಾರ್ಜಿತ ಸೊತ್ತಿನಲ್ಲಿ ಪಾಲು ಕೊಡುತ್ತಿರಲಿಲ್ಲ. ಇಸ್ಲಾಮ್ ಅವರಿಗೂ ಪಾಲಿದೆ ಎಂದಿತು. ದತ್ತುಪುತ್ರನನ್ನು ಸ್ವಂತ ಮಗನಂತೆ ಕಾಣಲಾಗುತ್ತಿತ್ತು. ಇಸ್ಲಾಮ್, 'ಅವರು ನಿಮ್ಮ ಸ್ವಂತ ಮಕ್ಕಳಂತಲ್ಲ; ದತ್ತು ಪುತ್ರನು ತನ್ನ ಪತ್ನಿಯನ್ನು ಬಿಟ್ಟಗಲಿದರೆ ಅವಳೊಂದಿಗೆ ನಿಮ್ಮ ವಿವಾಹವು ಹಲಾಲ್ (ಧರ್ಮಸಮ್ಮತ) ಆಗಿದೆ' ಎಂದು ಹೇಳಿತು. ಹೀಗೆ ಇಸ್ಲಾಮ್ ಧರ್ಮವು ತೊಡೆದು ಹಾಕಬೇಕೆಂದು ಹೇಳದ ಯಾವ ಆಚಾರ ಸಂಪ್ರದಾಯವೂ ಇರಲಿಲ್ಲ. ಈ ವಿಷಯಗಳಲ್ಲಿ ಅಲ್ಲಾಹ್ ಮತ್ತು ಪ್ರವಾದಿಯವರ(ಸ) ಮೇಲೆ ವಿಶ್ವಾಸವಿರಿಸಿದವರ ವ್ಯವಹಾರ ಹೇಗಿತ್ತೆಂಬುದು ನಿಮಗೆ ಗೊತ್ತೇ? ಶತಮಾನಗಳಿಂದ ಅವರೂ ಅವರ ಪೂರ್ವಿಕರೂ ಸಾಷ್ಟಾಂಗವೆರಗುತ್ತಲೂ ಕಾಣಿಕೆಗಳನ್ನು ಅರ್ಪಿಸುತ್ತಲೂ ಇದ್ದ ಆ ವಿಗ್ರಹಗಳನ್ನು ಸತ್ಯವಿಶ್ವಾಸಿಗಳು ತಮ್ಮ ಸ್ವಂತ ಕೈಗಳಿಂದಲೇ ಒಡೆದು ಹಾಕಿದರು. ತಂತಮ್ಮ ಗೋತ್ರಗಳು ಆಚರಿಸಿಕೊಂಡು ಬರುತ್ತಿದ್ದ

ಸಂಪ್ರದಾಯಗಳನ್ನು ಅವರು ಒಮ್ಮೆಲೆ ತೊಡೆದು ಹಾಕಿದರು. ಹಿಂದೆ ಪರಮ ಪಾವನವೆಂದು ನಂಬಿಕೊಂಡಿದ್ದ ಅನೇಕ ಆಚಾರಗಳನ್ನೂ ದೇವಾದೇಶ ಲಭಿಸಿದ ಕೂಡಲೇ ಕಾಲಡಿಗೆ ಹಾಕಿದರು. ಅಷ್ಟರ ತನಕ ಅಸಹ್ಯವೆಂದು ತಿಳಿದುಕೊಂಡಿದ್ದ ಅನೇಕ ವಿಷಯಗಳನ್ನು ದೇವಾದೇಶ ದೊರೆತೊಡನೆ ಹಲಾಲ್(ಅವರ್ಜ್ಯ) ಎಂದು ಭಾವಿಸ ತೊಡಗಿದರು. ಶತಮಾನಗಳಿಂದ ಪರಿಶುದ್ಧವೆಂದು ಗಣಿಸಲ್ಪಡುತ್ತಿದ್ದವುಗಳು ಒಮ್ಮೆಲೇ ಅಶುದ್ಧವಾದವು. ಸತ್ಯನಿಷೇಧ ಸಮಾಜದಲ್ಲಿ ರೋಚಕ ಹಾಗೂ ಲಾಭದಾಯಕವಾಗಿದ್ದ ವಿಷಯಗಳನ್ನೆಲ್ಲಾ ದೇವಾದೇಶಗಳು ಬಂದೊಡನೆ ಬಿಟ್ಟು ಬಿಟ್ಟರು. ಆಚರಿಸಲು ಪ್ರಯಾಸಕರವಾದ ಇಸ್ಲಾಮಿನ ಅನೇಕ ವಿಷಯ ಗಳು ಆತ್ಮ ಸಂತೋಷದಿಂದ ಸ್ವೀಕರಿಸಲ್ಪಟ್ಟವು. ಇದುವೇ ಈಮಾನ್; ಇದನ್ನೇ ಇಸ್ಲಾಮ್ ಎನ್ನುತ್ತಾರೆ. ಅಂದಿನ ಅರಬರು ಅದರಲ್ಲಿ ನಮಗೆ ನಷ್ಟವಿರುವುದರಿಂದ ನಾವು ಅದನ್ನು ಒಪ್ಪುವುದಿಲ್ಲ. ಅದರಲ್ಲಿ ನಮಗೆ ಲಾಭವಿರುವುದರಿಂದ ಅದನ್ನು ನಾವು ಬಿಡಲಾರೆವು. ಆ ಕಾರ್ಯವನ್ನು ನಾವು ಮಾಡಿಯೇ ತೀರುವೆವು. ಏಕೆಂದರೆ ಅದು ನಮ್ಮ ಪೂರ್ವಿಕರಿಂದಲೇ ನಡೆದು ಬಂದಿದೆ. ರೋಮನರ ಆ ಆಚಾರಗಳನ್ನು ನಾವು ಮೆಚ್ಚುತ್ತೇವೆ. ಇರಾನಿಯರ ಈ ಸಂಪ್ರದಾಯವು ನಮಗೆ ಇಷ್ಟ... ಎಂಬಿತ್ಯಾದಿ ಹೇಳುತ್ತಾ, ಇಸ್ಲಾಮಿನ ಒಂದೊಂದೇ ನಿಯಮಗಳಿಗೆ ಆಕ್ಷೇಪಗಳನ್ನು ಒಡ್ಡುತ್ತಿದ್ದರೆ ಇಂದು ಜಗತ್ತಿನಲ್ಲಿ ಒಬ್ಬ ಮುಸ್ಲಿಮನೂ ಇರುತ್ತಿರಲಿಲ್ಲ.

ಅಲ್ಲಾಹನ ಸಂಪ್ರೀತಿಯ ದಾರಿ

ಸಹೋದರರೇ, ಪವಿತ್ರ ಕುರ್‌ಆನಿನಲ್ಲಿ

لَن تَنَالُوا الْبِرَّ حَتَّىٰ تُنفِقُوا مِمَّا تُحِبُّونَ

"ನೀವು ನಿಮಗೆ ಬಹಳ ಪ್ರಿಯವಾಗಿರುವ ವಸ್ತುಗಳನ್ನು (ಅಲ್ಲಾಹನ ಮಾರ್ಗದಲ್ಲಿ) ವ್ಯಯಿಸುವ ತನಕವೂ ಪುಣ್ಯ ಮಟ್ಟವನ್ನು ತಲಪಲಾರಿರಿ." (ಆಲಿ ಇಮ್‌ರಾನ್: 92)

ಈ ಸೂಕ್ತವು ಇಸ್ಲಾಮ್ ಮತ್ತು ಈಮಾನಿನ ಜೀವಾಳವಾಗಿದೆ. ನಿಮಗೆ ಅತ್ಯಂತ ಪ್ರಿಯವಾದ ವಸ್ತುವನ್ನು ಅಲ್ಲಾಹನಿಗಾಗಿ ಅರ್ಪಿಸಿ ಬಿಡುವುದು ಇಸ್ಲಾಮಿನ ಉತ್ತುಂಗತೆ ಯಾಗಿದೆ. ಜೀವನದ ಎಲ್ಲಾ ಆಗು ಹೋಗುಗಳಲ್ಲಿಯೂ ದೇವಾದೇಶವು ಒಂದು ಕಡೆ ಕರೆದರೆ ನಮ್ಮ ಚಿತ್ತಾಕಾಂಕ್ಷೆಗಳು ಇನ್ನೊಂದು ದಿಕ್ಕಿಗೆ ಎಳೆಯುತ್ತವೆ. ಅಲ್ಲಾಹನು ಒಂದು ಆದೇಶವನ್ನಿತ್ತರೆ ದೇಹೇಚ್ಛೆಯು 'ಅದು ಕಷ್ಟ ಅಥವಾ ಅದರಲ್ಲಿ ನಷ್ಟ ಇದೆ' ಎನ್ನುತ್ತದೆ. ಅಲ್ಲಾಹನು ಯಾವುದನ್ನಾದರೂ ನಿಷೇಧಿಸಿದಾಗ ದೇಹೇಚ್ಛೆಯು, 'ಇದಂತೂ ಬಹಳ ರೋಚಕವೂ ಲಾಭದಾಯಕವೂ ಆಗಿರುತ್ತದಲ್ಲಾ!' ಎನ್ನುತ್ತದೆ. ಒಂದು ದಿಕ್ಕಿನಲ್ಲಿ ಅಲ್ಲಾಹನ ಸಂಪ್ರೀತಿ ಇದ್ದರೆ ಅದರ ಇನ್ನೊಂದು ದಿಕ್ಕಿನಲ್ಲಿ ಒಂದು ಲೋಕವೇ ಇದೆ. ಅಂತೂ ಜೀವನದ ಹೆಜ್ಜೆ ಹೆಜ್ಜೆಯಲ್ಲಿಯೂ ಮಾನವನಿಗೆ ಎರಡು ಕವಲು ದಾರಿಗಳು ಕಾಣಸಿಗುತ್ತವೆ. ಒಂದು

ಇಸ್ಲಾಮಿನ ದಾರಿ, ಇನ್ನೊಂದು ಸತ್ಯನಿಷೇಧ ಹಾಗೂ ಕಪಟವಿಶ್ವಾಸದ ದಾರಿ. ಲೌಕಿಕವಾದ ಪ್ರತಿಯೊಂದನ್ನೂ ಆಚೆಗೆ ತಳ್ಳಿ ಅಲ್ಲಾಹನ ಆಜ್ಞೆಯ ಮುಂದೆ ಬಾಗಿದವನು ಇಸ್ಲಾಮಿನ ಮಾರ್ಗವನ್ನು ಹೊಂದಿದನು. ದೇವಾಜ್ಞೆಯನ್ನು ಬಿಟ್ಟು ತನ್ನ ಮನದಿಚ್ಛೆ ಅಥವಾ ಲೋಕೇಚ್ಛೆಯನ್ನು ನೆರವೇರಿಸಿದಾತನು 'ಕುಫ್ರ್'(ಸತ್ಯನಿಷೇಧ) ಅಥವಾ 'ನಿಫಾಕ್'ನ (ಕಪಟವಿಶ್ವಾಸ) ದಾರಿ ಹಿಡಿದನು.

ಇಂದಿನ ಮುಸ್ಲಿಮರು

ಇಂದು ಜನರು ಆಚರಿಸಲು ಸುಲಭವೆಂದು ತೋರುವ ಇಸ್ಲಾಮಿನ ಸಂಪ್ರದಾಯಗಳನ್ನು ಬಹಳ ಸಂತೋಷದಿಂದ ಸ್ವೀಕರಿಸಿಕೊಳ್ಳುತ್ತಾರೆ. ಆದರೆ ಕುಫ್ರ್ ಮತ್ತು ಇಸ್ಲಾಮಿನ ಹೋರಾಟ ನಡೆಯುವಲ್ಲಿ ತಮ್ಮ ದಿಕ್ಕನ್ನು ಬದಲಾಯಿಸಿಕೊಳ್ಳುತ್ತಾರೆ. ಇಸ್ಲಾಮಿನ ಅಗ್ರಗಣ್ಯ ಪ್ರತಿಪಾದಕರಲ್ಲಿಯೂ ಈ ಕೊರತೆ ಇದೆ. ಅವರು ಇಸ್ಲಾಮ್! ಇಸ್ಲಾಮ್! ಎಂದು ಬಹಳಷ್ಟು ಕೂಗಾಡಿಕೊಳ್ಳುತ್ತಾರೆ. ಇಸ್ಲಾಮಿನ ಪ್ರಶಂಸೆ ಮಾಡುತ್ತಾ ಅವರ ನಾಲಗೆಯು ಒಣಗಿ ಹೋಗುತ್ತದೆ. ಅದಕ್ಕಾಗಿ ಕೆಲವು ತೋರಿಕೆಯ ಕೆಲಸಗಳನ್ನೂ ಮಾಡುತ್ತಾರೆ. ಆದರೆ, ಅವರೊಡನೆ 'ನೀವು ಹೊಗಳುತ್ತಿರುವ ಇಸ್ಲಾಮಿನ ಕಾನೂನನ್ನು ಸ್ವತಃ ನಿಮ್ಮ ಮೇಲೆ ಜಾರಿಗೊಳಿಸಿರಿ' ಎಂದಾಗ, ಅವರು 'ಅದರಲ್ಲಿ ಈ ಕಷ್ಟವಿದೆ-ಆ ತೊಡಕಿದೆ- ಸದ್ಯ ಹಾಗೆಯೇ ಇರಲಿ...' ಎಂದು ಬಿಡುತ್ತಾರೆ. ಅವರ ಮಾತಿನ ಪ್ರಕಾರ ಇಸ್ಲಾಮ್ ಎಂಬುದು ಒಂದು ಸುಂದರ ಆಟಿಕೆಯಾಗಿದ್ದು ಅದನ್ನು ಮೇಲು ಹಲಗೆಯಲ್ಲಿಟ್ಟು ದೂರ ನಿಂತು ಅದರ ಪ್ರಶಂಸೆ ಮಾಡಿದರೆ ಸಾಕು. ಆದರೆ ಸ್ವತಃ ತಮ್ಮ ಮೇಲೆ, ತಮ್ಮ ಮನೆಯವರ ಮೇಲೆ, ತಮ್ಮ ಆಪ್ತೇಷ್ಟರ ಮೇಲೆ, ತಮ್ಮ ಸಮಸ್ತ ವ್ಯವಹಾರಗಳಲ್ಲಿ ಅದನ್ನು ಒಂದು ಕಾನೂನಿನಂತೆ ಬಳಸುವ ಗೋಜಿಗೆ ಅವರು ಹೋಗುವುದಿಲ್ಲ. ಇದು ಇಂದಿನ ನಮ್ಮ ಧಾರ್ಮಿಕ ಮುಖಂಡರ ಸ್ಥಿತಿ. ಇನ್ನು ಪ್ರಾಪಂಚಿಕ ವ್ಯಕ್ತಿಗಳ ಕುರಿತು ಹೇಳುವುದೇ ಬೇಡ. ಇದರ ಪರಿಣಾಮವಾಗಿ ನಮಾಝ್, ಉಪವಾಸ, ಕುರ್‌ಆನ್ ಪಠಣ; ಮತ್ತಿತರ ಧರ್ಮ ಕಾರ್ಯಗಳಲ್ಲಿ ಹಿಂದೆ ಇದ್ದಂತಹ ಪ್ರಭಾವವು ಈಗ ಗೋಚರಿಸುವುದಿಲ್ಲ. ಏಕೆಂದರೆ ಜೀವವೇ ಇಲ್ಲದ ಮೇಲೆ ಕೇವಲ ಪಾರ್ಥಿವ ಶರೀರವು ಏನು ಪವಾಡ ತೋರಿಸಬಲ್ಲದು?

○

ಇಸ್ಲಾಮಿನ ನೈಜ ಮಾನದಂಡ

ಬಂಧುಗಳೇ,

ಅಲ್ಲಾಹನು ತನ್ನ ಪವಿತ್ರ ಗ್ರಂಥದಲ್ಲಿ ಹೀಗೆ ಹೇಳಿರುತ್ತಾನೆ:

قُلْ إِنَّ صَلَاتِي وَنُسُكِي وَمَحْيَايَ وَمَمَاتِي لِلَّهِ رَبِّ الْعَالَمِينَ ﴿١٦٢﴾
لَا شَرِيكَ لَهُ ۖ وَبِذَٰلِكَ أُمِرْتُ وَأَنَا أَوَّلُ الْمُسْلِمِينَ ﴿١٦٣﴾

"ಹೇಳಿರಿ- ನನ್ನ ನಮಾಝ್, ನನ್ನ ಸರ್ವ ಉಪಾಸನಾವಿಧಿಗಳು, ನನ್ನ ಜೀವನ ಮತ್ತು ನನ್ನ ಮರಣ ಎಲ್ಲವೂ ಯಾವ ಸಹಭಾಗಿಯೂ ಇಲ್ಲದ ಸರ್ವಲೋಕಪಾಲಕನಿಗಾಗಿದೆ. ಇದನ್ನೇ ನನಗೆ ಆದೇಶಿಸಲಾಗಿದೆ. ನಾನು ಆಜ್ಞಾನುಸರಣೆಯೊಂದಿಗೆ ಶಿರಬಾಗುವವರಲ್ಲಿ ಸರ್ವಪ್ರಥಮನಾಗಿರುತ್ತೇನೆ." (ಅಲ್ ಅನ್‌ಆಮ್: 162-163)

ಈ ಸೂಕ್ತದ ವಿವರಣೆಯನ್ನು ಪ್ರವಾದಿವರ್ಯರ(ಸ) ಈ ವಚನವು ನೀಡುತ್ತದೆ:

مَنْ أَحَبَّ لِلَّهِ وَأَبْغَضَ لِلَّهِ وَأَعْطَى لِلَّهِ وَمَنَعَ لِلَّهِ فَقَدِ اسْتَكْمَلَ الْإِيمَانَ.

"ಯಾರು ಅಲ್ಲಾಹನಿಗಾಗಿ ಪ್ರೀತಿಸಿದನೋ, ಅಲ್ಲಾಹನಿಗಾಗಿ ದ್ವೇಷಿಸಿದನೋ, ಅಲ್ಲಾಹನಿಗಾಗಿ ನೀಡಿದನೋ, ಅಲ್ಲಾಹನಿಗಾಗಿ ತಡೆದನೋ ಅವನು ತನ್ನ ಈಮಾನನ್ನು ಪರಿಪೂರ್ಣಗೊಳಿಸಿಕೊಂಡನು. ಅರ್ಥಾತ್ ಸಂಪೂರ್ಣ ಸತ್ಯವಿಶ್ವಾಸಿಯಾದನು."

ಮಾನವನು ತನ್ನ ಆರಾಧನೆಯನ್ನೂ ತನ್ನ ಜೀವನ ಮತ್ತು ಮರಣವನ್ನೂ ಕೇವಲ ಅಲ್ಲಾಹನಿಗಾಗಿ ಕಾದಿರಿಸಿಕೊಳ್ಳಬೇಕೆಂದೂ ಅಲ್ಲಾಹನ ಹೊರತು ಇನ್ನಾರನ್ನೂ ಸಹಭಾಗಿಯನ್ನಾಗಿ ಮಾಡಬಾರದೆಂದೂ ನಾನು ಓದಿದ ಸೂಕ್ತದ ಇಂಗಿತವೆಂದು ತಿಳಿದು ಬರುತ್ತದೆ. ಅರ್ಥಾತ್ ಆರಾಧನೆಗಳಾಗಲಿ ಜೀವನ-ಮರಣಗಳಾಗಲಿ ಅಲ್ಲಾಹನ ಹೊರತು ಇನ್ನಾರಿಗೂ ಆಗಿರಬಾರದು.

ಇದರ ವಿವರಣೆಯನ್ನು ಪ್ರವಾದಿಯವರ(ಸ) ಮಾತಿನಲ್ಲಿ ನಾನೀಗ ಹೇಳಿರುವ ಪ್ರಕಾರ ಮಾನವನ ಪ್ರೇಮ, ದ್ವೇಷ, ಜೀವನದ ವ್ಯವಹಾರ, ಲೇವಾದೇವಿ ಎಲ್ಲವೂ ಕೇವಲ

ಅಲ್ಲಾಹನಿಗಾಗಿರಬೇಕೆಂಬುದು ಈಮಾನಿನ ಬೇಡಿಕೆಯಾಗಿದೆ. ಇದರ ವಿನಾ ಉನ್ನತ ಸ್ಥಾನಗಳಿಗೆ ತಲಪುವುದಂತಿರಲಿ ಈಮಾನಿನ ಪರಿಪೂರ್ಣತೆಯೇ ಆಗದು. ಈ ಬಗ್ಗೆ ಎಷ್ಟು ಕೊರತೆಯಿರುವುದೋ ಮಾನವನ ಈಮಾನಿನಲ್ಲಿ ಅಷ್ಟೇ ಕುಂದುಂಟಾಗಿರುವುದು. ಹೀಗೆ ಮಾನವನು ಸರ್ವ ಸಂಪೂರ್ಣ ಅಲ್ಲಾಹನಿಗಾಗಿ ಬಿಟ್ಟಾಗ ಮಾತ್ರ ಅವನ ಈಮಾನ್ ಪರಿಪೂರ್ಣವಾಗುವುದು.

ಕಾನೂನುಪರ ಮತ್ತು ನೈಜ ಇಸ್ಲಾಮ್‌ನ ವ್ಯತ್ಯಾಸ

ಕಾನೂನುಪರ ಇಸ್ಲಾಮ್

ಕೆಲವರ ಅಭಿಪ್ರಾಯದಲ್ಲಿ ಇವೆಲ್ಲಾ ಕೇವಲ ಆಧ್ಯಾತ್ಮಿಕ ಉನ್ನತಿಯ ದ್ವಾರ ತೆರೆಯಲಿಕ್ಕಾಗಿವೆ; ಈಮಾನ್ ಮತ್ತು ಇಸ್ಲಾಮಿನ ಬಗ್ಗೆ ಮಾನವರಲ್ಲಿ ಈ ಸ್ಥಿತಿ ಉಂಟಾಗಬೇಕೆಂಬ ಶರತ್ತೇನೂ ಇಲ್ಲ. ಅಂದರೆ ಈ ಸ್ಥಿತಿಯ ಹೊರತೂ ಮಾನವನು ಮೂಮಿನ್ ಮತ್ತು ಮುಸ್ಲಿಮ್ ಆಗಬಲ್ಲನೆಂಬುದು ಅವರ ವಾದ. ಆದರೆ ಇದೊಂದು ತಪ್ಪುಧಾರಣೆ. ಇದಕ್ಕೆ ಕಾರಣವೇನೆಂದರೆ-ಜನರು ಸಾಮಾನ್ಯವಾಗಿ ಕರ್ಮಶಾಸ್ತ್ರ ಪರವಾದ ಇಸ್ಲಾಮ್‌ನಲ್ಲೂ ಅಲ್ಲಾಹನ ಬಳಿ ಸಿಂಧುವಾಗಿರುವ ನೈಜ ಇಸ್ಲಾಮಿನಲ್ಲೂ ವ್ಯತ್ಯಾಸ ತೋರುವುದಿಲ್ಲ.

ಕಾನೂನುಪರ ಮತ್ತು ಕರ್ಮಶಾಸ್ತ್ರ ಪರ ಇಸ್ಲಾಮಿನಲ್ಲಿ ಮಾನವನ ಆಂತರಿಕ ಸ್ಥಿತಿಯನ್ನು ನೋಡಲಾಗುವುದಿಲ್ಲ. ಅದನ್ನು ನೋಡಲು ಸಾಧ್ಯವೂ ಇಲ್ಲ. ಕೇವಲ ಅವನ ಬಾಯ್ದೆರೆ ಕರಾರನ್ನೂ ಅದನ್ನು ಅನುಮೋದಿಸಲು ಅಗತ್ಯವಾದ ಕುರುಹುಗಳನ್ನೂ ಅವನು ಪ್ರಕಟಗೊಳಿಸಿದರೆ ಸಾಕು. ಒಬ್ಬನು ತನ್ನ ಬಾಯಿಯಿಂದ ಅಲ್ಲಾಹ್, ಸಂದೇಶವಾಹಕ, ಕುರ್‌ಆನ್, ಪರಲೋಕವೇ ಮೊದಲಾದ ವಿಶ್ವಾಸಕ್ಕೆ ಸಂಬಂಧಿಸಿದ ವಿಷಯಗಳನ್ನು ಸ್ವೀಕರಿಸುತ್ತೇನೆಂದು ಹೇಳಿ ಅದಕ್ಕೆ ಬೇಕಾದ ಶರತ್ತುಗಳನ್ನು ಪೂರ್ತಿಗೊಳಿಸಿಬಿಟ್ಟರೆ ಅವನನ್ನು ಇಸ್ಲಾಮಿನ ಪರಿಧಿಯೊಳಗೆ ಸೇರಿಸಿಕೊಳ್ಳಲಾಗುತ್ತದೆ. ಅವನನ್ನು ಮುಸ್ಲಿಮನೆಂದು ಬಗೆದೇ ಅವನೊಂದಿಗೆ ಎಲ್ಲ ವ್ಯವಹಾರಗಳನ್ನೂ ಇರಿಸಿಕೊಳ್ಳಲಾಗುತ್ತದೆ. ಆದರೆ ಇದು ಕೇವಲ ಭೌತಿಕ ಲೋಕಕ್ಕೆ ಸಂಬಂಧಿಸಿದ್ದು, ಲೌಕಿಕ ನೆಲೆಯಲ್ಲಿ ಮುಸ್ಲಿಮ್ ಸಮಾಜ ನಿರ್ಮಾಣಕ್ಕೆ ಬೇಕಾಗುವ ಕಾನೂನಿನ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಆಧಾರವನ್ನು ಇದು ಒದಗಿಸುತ್ತದೆ. ಇಂತಹ ಪ್ರಮಾಣ ವಚನದೊಂದಿಗೆ ಮುಸ್ಲಿಮ್ ಸಮಾಜದೊಳಗೆ ಪ್ರವೇಶ ಪಡೆದ ಎಲ್ಲರನ್ನೂ ಮುಸ್ಲಿಮರೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಅವರನ್ನು ಕಾಫಿರರೆನ್ನಲಾಗದು. ಅವರಿಗೆ ಪರಸ್ಪರ ಧರ್ಮಶಾಸ್ತ್ರಪರ, ಕಾನೂನುಪರ, ನೈತಿಕ ಮತ್ತು ಸಾಮಾಜಿಕ ಹಕ್ಕುಗಳು ಸಿಗುತ್ತವೆ. ಅವರೊಂದಿಗೆ ವಿವಾಹ ಸಂಬಂಧಗಳು ನಡೆಯುತ್ತವೆ. ಪಿತ್ರಾರ್ಜಿತ ಸೊತ್ತು ವಿತರಣೆಯಾಗುತ್ತದೆ. ಇನ್ನಿತರ ನಾಗರಿಕ ಸಂಬಂಧಗಳೂ ಉಂಟಾಗುತ್ತವೆ.

ನೈಜ ಇಸ್ಲಾಮ್

ಆದರೆ ಪರಲೋಕದಲ್ಲಿ ಮಾನವನ ಮುಕ್ತಿಗೆ ಅಲ್ಲಿ ಅವನು ಮುಸ್ಲಿಮನೆಂದು ಪರಿಗಣಿಸಲ್ಪಡುವುದಕ್ಕೆ ಮತ್ತು ಅಲ್ಲಾಹನ ಗೌರವಾನ್ವಿತ ದಾಸರಲ್ಲಿ ಅವನು ಗಣಿಸಲ್ಪಡು ವುದಕ್ಕೆ ಈ ಬಾಹ್ಯ ಹೇಳಿಕೆ ಸಾಲದು. ಅಲ್ಲಿಗೆ ಬೇಕಾಗಿರುವುದು, ಮಾನವನ ಮನಃಪೂರ್ವಕ ಒಪ್ಪಿಗೆ, ಮನಸಾ ಒಲವು ಮತ್ತು ಆತ್ಮ ಸಂತೃಪ್ತಿಯೊಂದಿಗೆ ತನ್ನನ್ನು ಸಂಪೂರ್ಣವಾಗಿ ಅಲ್ಲಾಹನಿಗೆ ಸಮರ್ಪಿಸುವುದಾಗಿದೆ. ಲೋಕದಲ್ಲಿ ಮಾಡಲಾಗುವ ಬಾಯ್ದೆರೆ ಪ್ರಮಾಣವಚನ ನ್ಯಾಯಾಧೀಶರಿಗಾಗಿ, ಜನಸಾಮಾನ್ಯರಿಗಾಗಿ ಮತ್ತು ಮುಸ್ಲಿಮರಿಗಾಗಿರುತ್ತದೆ. ಏಕೆಂದರೆ ಇವರೆಲ್ಲರೂ ಬಾಹ್ಯವನ್ನು ಮಾತ್ರ ಕಾಣಬಲ್ಲರು. ಆದರೆ ಅಲ್ಲಾಹನು ಮಾನವನ ಅಂತರಂಗವನ್ನೂ ಹೃದಯವನ್ನೂ ಕಾಣುತ್ತಾನೆ ಮತ್ತು ಅವನ ಈಮಾನನ್ನು ಅಳೆಯುತ್ತಾನೆ. ಅವನ ಬಳಿ ಮಾನವನ ಜೀವನ, ಮರಣ, ನಿಷ್ಠೆ, ಅನುಸರಣೆ, ಆರಾಧನೆ ಮತ್ತು ಅವನ ಸಂಪೂರ್ಣ ಜೀವನ ವೃತ್ತಾಂತಗಳು ಅಲ್ಲಾಹನಿಗಾಗಿದ್ದುವೋ ಅಥವಾ ಇನ್ನಾರಿಗಾದರೂ ಆಗಿದ್ದುವೋ ಎಂಬ ನೆಲೆಯಲ್ಲಿ ಪರೀಕ್ಷಿಸಿ ನೋಡಲಾಗುವುದು. ಇವೆಲ್ಲ ಅಲ್ಲಾಹನಿಗಾಗಿದ್ದುವು ಎಂದಾದರೆ ಅವನನ್ನು ಮುಸ್ಲಿಮ್ ಮತ್ತು ಮೂಮಿನ್ ಎಂದು ಪರಿಗಣಿಸಲಾಗುವುದು. ಇವೆಲ್ಲ ಅನ್ಯರಿಗಾಗಿ ದ್ದುವೆಂದಾದರೆ ಅವನು ಮುಸ್ಲಿಮನೂ ಆಗಲಾರ ಮೂಮಿನನೂ ಆಗಲಾರ. ಈ ದೃಷ್ಟಿಯಿಂದ ನೋಡುವಾಗ ಅವನಲ್ಲಿ ಯಾವ ಮಟ್ಟದ ದೋಷವಿರುವುದೋ ಅವನ ಇಸ್ಲಾಮ್ ಮತ್ತು ಈಮಾನ್‌ನಲ್ಲೂ ಅಷ್ಟೇ ದೋಷವಿರುವುದು. ಇಹದಲ್ಲಿ ಅವನು ಎಷ್ಟು ದೊಡ್ಡ ನಿಷ್ಠಾವಂತ ಮುಸ್ಲಿಮನೆಂದು ಗಣಿಸಲ್ಪಡುತ್ತಿದ್ದರೂ ಅವನಿಗೆ ಎಷ್ಟು ಉನ್ನತ ಸ್ಥಾನಮಾನಗಳು ಪ್ರಾಪ್ತ ವಾಗಿದ್ದರೂ ಸರಿಯೆ, ಅಲ್ಲಾಹನು ನೋಡುವುದು ಅವನು ನಿಮಗೆ ನೀಡಿರುವುದನ್ನೆಲ್ಲ ನೀವು ಅವನ ಮಾರ್ಗದಲ್ಲಿ ತೊಡಗಿಸಿರುತ್ತೀರೋ ಇಲ್ಲವೋ ಎಂಬುದನ್ನು ಮಾತ್ರ. ನೀವು ಹಾಗೆ ಮಾಡಿದ್ದರೆ ದಾಸ್ಯ- ಆರಾಧನೆಯ ಋಣವನ್ನು ತೀರಿಸಿದ ನಿಷ್ಠಾವಂತರಿಗೆ ನೀಡಲಾಗುವ ಹಕ್ಕುಗಳನ್ನೆಲ್ಲ ನಿಮಗೂ ಕೊಡಲಾಗುವುದು. ಒಂದು ವೇಳೆ ನೀವು ಯಾರನ್ನಾದರೂ ಅಲ್ಲಾಹನ ದಾಸ್ಯ- ಆರಾಧನೆಯಿಂದ ಹೊರತು ಪಡಿಸಿದರೆ ನೀವು ಮುಸ್ಲಿಮರೆಂಬ ಅರ್ಥಾತ್ ನೀವು ನಿಮ್ಮನ್ನು ಸಂಪೂರ್ಣವಾಗಿ ಅಲ್ಲಾಹನಿಗೆ ಸಮರ್ಪಿಸುತ್ತೀರೆಂಬ ನಿಮ್ಮ ಹೇಳಿಕೆಯು ಸುಳ್ಳು. ಇದರಿಂದ ಜನರು ಮೋಸ ಹೋಗಬಹುದು. ಮುಸ್ಲಿಮ್ ಸಮಾಜವೂ ಮೋಸ ಹೋಗಿ ನಿಮ್ಮನ್ನು ತನ್ನಲ್ಲಿ ಸೇರಿಸಿದ ಫಲವಾಗಿ ಇಹಲೋಕದಲ್ಲಿ ಮುಸ್ಲಿಮನಿಗೆ ಸಿಗತಕ್ಕ ಎಲ್ಲ ಹಕ್ಕುಗಳು ನಿಮಗೂ ಸಿಗಬಹುದು. ಆದರೆ ಇದರಿಂದ ಅಲ್ಲಾಹನು ನಿಮ್ಮನ್ನು ತನ್ನ ನಿಷ್ಠಾವಂತರಲ್ಲಿ ಸೇರಿಸುವಂತಹ ಮೋಸಕ್ಕೆ ಹೋಗಲಾರನು.

ಮೇಲೆ ವಿವರಿಸಿದ ಬಾಹ್ಯ ಇಸ್ಲಾಮ್ ಮತ್ತು ನೈಜ ಇಸ್ಲಾಮ್‌ಗಳ ಬಗ್ಗೆ ನಾವು ಚೆನ್ನಾಗಿ ವಿವೇಚಿಸಿದರೆ ಅದರ ಪರಿಣಾಮಗಳು ಪರಲೋಕದಲ್ಲಿ ಮಾತ್ರವಲ್ಲ ಸ್ವಲ್ಪ ಮಟ್ಟಿಗೆ ಇಹಲೋಕ ದಲ್ಲಿಯೂ ಭಿನ್ನವಾಗಿಯೇ ಇರುವುದನ್ನು ನೀವು ಕಾಣಬಹುದು. ಈ ಜಗತ್ತಿನಲ್ಲಿದ್ದ ಮತ್ತು ಇಂದು ಇರುವ ಮುಸ್ಲಿಮರನ್ನು ಎರಡು ವಿಧಗಳಾಗಿ ವಿಂಗಡಿಸಬಹುದು.

ಮುಸ್ಲಿಮರ ಎರಡು ವಿಧಗಳು

ಆಂಶಿಕ ಮುಸ್ಲಿಮ್

ಒಂದು ವಿಧದ ಮುಸ್ಲಿಮರು ಅಲ್ಲಾಹ್ ಮತ್ತು ಅವನ ಸಂದೇಶವಾಹಕರನ್ನು ಒಪ್ಪಿಕೊಂಡು ಇಸ್ಲಾಮನ್ನು ಒಂದು ಮತವೆಂದು ಸ್ವೀಕರಿಸಿಕೊಂಡರೂ ತಮ್ಮ ಪೂರ್ಣ ಜೀವನದ ಬದಲು ಅದನ್ನು ಜೀವನದ ಒಂದು ಭಾಗಕ್ಕೆ ಸೀಮಿತಗೊಳಿಸಿಕೊಂಡವರು. ಈ ಭಾಗದ ಮಟ್ಟಿಗೆ ಅವರಿಗೆ ಇಸ್ಲಾಮಿನ ಮೇಲೆ ನಿಷ್ಠೆಯೂ ಅದರ ವಿಧಿ ಕರ್ಮಗಳ ಆಚರಣೆಯೂ ಇರುತ್ತದೆ. ತಸ್ಬೀಹ್ (ಜಪಮಾಲೆ), ಮುಸಲ್ಲಾ(ತಿವಾಸಿ)ಗಳೂ ಇರುತ್ತವೆ. ಸ್ತುತಿ ಸ್ತೋತ್ರಗಳೂ ಇರುತ್ತವೆ. ಅನ್ನ ಪಾನಾದಿಗಳಲ್ಲಿ ಮತ್ತು ಕೆಲವು ಸಾಮಾಜಿಕ ವ್ಯವಹಾರಗಳಲ್ಲಿ ನಿಯಮ ನಿಷ್ಠೆಗಳಿರುತ್ತವೆ. ಒಟ್ಟಿನಲ್ಲಿ ಮತಾಚಾರ ಎನ್ನಲಾಗುವ ಎಲ್ಲವೂ ಇರುತ್ತವೆ. ಆದರೆ ಈ ಭಾಗದ ಹೊರತು ಅವರ ಜೀವನದ ಉಳಿದ ಎಲ್ಲ ಭಾಗಗಳಲ್ಲೂ ಅವರಲ್ಲಿ ಮುಸ್ಲಿಮ್ ಎಂಬ ನೆಲೆ ಇರುವುದಿಲ್ಲ. ಅವರ ಪ್ರೀತಿಯು ಅವರ ಚಿತ್ತ, ಸ್ವಾರ್ಥ ಮತ್ತು ಸ್ವಲಾಭಕ್ಕಾಗಿ ಅಥವಾ ಇನ್ನಾವುದೇ ಕಾರಣಕ್ಕಾಗಿ ಇರುತ್ತದೆ. ಅವರ ದ್ವೇಷವೂ, ಹೋರಾಟವೂ ಇದೇ ತರದ ಲೌಕಿಕ ವಿಷಯಗಳಿಗಾಗಿ ಅಥವಾ ಇಂದ್ರಿಯಾಸಕ್ತಿಗಳಿಗಾಗಿರುತ್ತದೆ. ಅವರ ವ್ಯಾಪಾರ, ಲೇವಾದೇವಿ, ವ್ಯವಹಾರ ಸಂಬಂಧಗಳು, ಅವರ ಮಕ್ಕಳು ಮರಿಗಳು, ಕುಟುಂಬ, ಸಮಾಜ ಮತ್ತು ಇತರರೊಂದಿಗೆ ಅವರ ಸಂಬಂಧಗಳೆಲ್ಲವೂ ಹೆಚ್ಚಿನಂಶ ಧರ್ಮ ರಹಿತವಾಗಿದ್ದು ಲೌಕಿಕ ನೆಲೆಯನ್ನವಲಂಬಿಸಿರುತ್ತದೆ. ಅವರು ವಿಶಿಷ್ಟ ನೆಲೆಯಲ್ಲಿ ಜಮೀನ್ದಾರ, ಆಳರಸ, ವ್ಯಾಪಾರಿ, ಸಿಪಾಯಿ, ಕಾರ್ಮಿಕ ಎಂಬಿತ್ಯಾದಿಯಾಗಿದ್ದು ಅವರಿಗೂ ಮುಸ್ಲಿಮ್ ಎಂಬ ನೆಲೆಗೂ ಏನೂ ಸಂಬಂಧವಿರುವುದಿಲ್ಲ. ಇಂಥವರು ಒಟ್ಟುಗೂಡಿ ಸಾಮೂಹಿಕವಾಗಿ ರೂಪಿಸುವ ನಾಗರಿಕ, ಶೈಕ್ಷಣಿಕ, ರಾಜಕೀಯವೇ ಮೊದಲಾದ ಸಂಸ್ಥೆಗಳಲ್ಲಿ ಆಂಶಿಕವಾಗಿ ಮುಸ್ಲಿಮರೆಂಬ ನೆಲೆಯಲ್ಲಿ ಅವರ ಪ್ರಭಾವ ಮತ್ತು ಸಂಬಂಧ ಇರಬಹುದು. ಆದರೆ ವಾಸ್ತವದಲ್ಲಿ ಇಸ್ಲಾಮಿನೊಂದಿಗೆ ಅವುಗಳಿಗೆ ಸಂಬಂಧವೇ ಇರುವುದಿಲ್ಲ.

ಪರಿಪೂರ್ಣ ಮುಸ್ಲಿಮ್

ಇನ್ನೊಂದು ವಿಧದ ಮುಸ್ಲಿಮರು ತಮ್ಮ ಸಂಪೂರ್ಣ ವ್ಯಕ್ತಿತ್ವವನ್ನೂ ಅಸ್ತಿತ್ವವನ್ನೂ ಪೂರ್ಣವಾಗಿ ಇಸ್ಲಾಮಿಗೆ ಬಿಟ್ಟು ಕೊಟ್ಟವರು. ಅವರ ಎಲ್ಲ ಸ್ಥಿತಿಗಳೂ ಮುಸ್ಲಿಮ್ ಎಂಬ ನೆಲೆಯಲ್ಲಿ ಲೀನಗೊಂಡಿರುತ್ತವೆ. ಅವರು ತಂದೆಯಾಗಿದ್ದರೂ ಪತಿ ಅಥವಾ ಪತ್ನಿಯಾಗಿದ್ದರೂ ಅವರ ಸ್ಥಿತಿ ಮುಸ್ಲಿಮ್ ಆಗಿರುವುದು. ಅವರು ವರ್ತಕ, ಜಮೀನ್ದಾರ, ಕಾರ್ಮಿಕ, ನೌಕರ, ಉದ್ಯೋಗಿ ಏನೇ ಆಗಿದ್ದರೂ ಮುಸ್ಲಿಮ್ ಆಗಿರುವರು. ಅವರ ಭಾವನೆ ಮತ್ತು ಆಕಾಂಕ್ಷೆಗಳು, ಸಿದ್ಧಾಂತ, ವಿಚಾರ ಮತ್ತು ಅಭಿಪ್ರಾಯಗಳು, ದ್ವೇಷ ಮತ್ತು ಒಲವುಗಳು, ಹಿತ ಮತ್ತು ಅಹಿತಗಳು ಎಲ್ಲವೂ ಇಸ್ಲಾಮಿಗೆ ಅಧೀನವಾಗಿರುತ್ತವೆ. ಅವರ ಮನ

ಮಸ್ತಿಷ್ಕಗಳು, ದೃಷ್ಟಿ ಮತ್ತು ಶ್ರವಣಗಳು, ಹೊಟ್ಟೆ ಮತ್ತು ಗುಪ್ತಾಂಗಗಳು, ಕೈ, ಕಾಲು, ದೇಹ ಹಾಗೂ ಜೀವವು ಇಸ್ಲಾಮಿನ ಹತೋಟಿಯಲ್ಲಿರುವುದು. ಅವರ ಪ್ರೀತಿಯಾಗಲಿ, ದ್ವೇಷವಾಗಲಿ ಇಸ್ಲಾಮ್‌ನಿಂದ ಮುಕ್ತವಾಗಿರುವುದಿಲ್ಲ. ಅವರ ಭೇಟಿಯೂ ಹೋರಾಟವೂ ಇಸ್ಲಾಮಿಗಾಗಿರುತ್ತದೆ. ಅವರು ಯಾರಿಗಾದರೂ ಕೊಡುವುದಿದ್ದರೆ ಅದು ಇಸ್ಲಾಮ್ ಆಜ್ಞಾಪಿಸಿರುವುದರಿಂದ, ಯಾರಿಗಾದರೂ ತಡೆ ಹಿಡಿಯುವುದಿದ್ದರೆ ಇಸ್ಲಾಮ್‌ನ ಆದೇಶ ಹಾಗೆ ಇರುವುದರಿಂದ ಮಾತ್ರ. ಅವರ ಈ ಕರ್ಮ ವಿಧಾನವು ವೈಯಕ್ತಿಕ ಜೀವನಕ್ಕೆ ಮಾತ್ರ ಸೀಮಿತವಾಗಿರುವುದಲ್ಲ, ಅವರ ಸಾಮೂಹಿಕ ಜೀವನವೂ ಸಾದ್ಯಂತ ಇಸ್ಲಾಮಿನ ತಳಹದಿಯ ಮೇಲೆಯೇ ನಿಂತಿರುತ್ತದೆ. ಒಂದು ಸಂಘಟನೆಯ ನೆಲೆಯಲ್ಲಿಯೂ ಅವರ ಅಸ್ತಿತ್ವವು ಕೇವಲ ಇಸ್ಲಾಮಿಗಾಗಿಂೀ ಇದ್ದು ಅವರ ಸಾಮೂಹಿಕ ವ್ಯವಹಾರವು ಸಂಪೂರ್ಣವಾಗಿ ಇಸ್ಲಾಮಿನ ತತ್ವಗಳಿಗೆ ಬದ್ಧವಾಗಿರುತ್ತದೆ.

ಅಲ್ಲಾಹನು ಬಯಸುವ ಮುಸ್ಲಿಮ್

ಈ ಎರಡೂ ವಿಧದ ಮುಸ್ಲಿಮರು ಕಾನೂನು ಪ್ರಕಾರ ಒಂದೇ ಸಮುದಾಯಕ್ಕೆ ಸೇರಿದವರಾದರೂ, ಮುಸ್ಲಿಮ್ ಎಂಬ ಹೆಸರು ಇಬ್ಬರಿಗೂ ಅನ್ವಯಿಸಿದರೂ ವಾಸ್ತವದಲ್ಲಿ ಅವರು ಪರಸ್ಪರ ಭಿನ್ನರಾಗಿರುತ್ತಾರೆ. ಇಸ್ಲಾಮಿನ ಇತಿಹಾಸದಲ್ಲಿ ಮೊದಲನೇ ವಿಧದ ಮುಸ್ಲಿಮರಿಂದ ಹೇಳತಕ್ಕ ಅಥವಾ ಅಭಿಮಾನ ಪಡಲರ್ಹವಾದ ಯಾವುದೇ ಮಹತ್ಕಾರ್ಯ ನಡೆದುದಿಲ್ಲ. ವಾಸ್ತವದಲ್ಲಿ ಅವರು ಜಾಗತಿಕ ಇತಿಹಾಸದಲ್ಲಿ ಇಸ್ಲಾಮಿನ ಮುದ್ರೆಯೊತ್ತುವಂತಹ ಕಾರ್ಯವೇನೂ ಮಾಡಿಲ್ಲ. ಇಂತಹ ಮುಸ್ಲಿಮರ ಹೊರೆಯನ್ನು ಭೂಮಿಯೂ ಕೂಡಾ ಯಾವ ಕಾಲದಲ್ಲಿಯೂ ಅನುಲಕ್ಷಿಸಲಿಲ್ಲ. ಇಂಥವರಿಂದಾಗಿಯೇ ಇಸ್ಲಾಮಿಗೆ ಅವನತಿ ಬಂದಿತು. ಮುಸ್ಲಿಮ್ ಸಮಾಜದಲ್ಲಿ ಇಂತಹವರ ಸಂಖ್ಯೆ ಹೆಚ್ಚಿರುವುದರಿಂದಾಗಿಯೇ ಜಗತ್ತಿನ ಆಡಳಿತ ವ್ಯವಸ್ಥೆಯ ಕಡಿವಾಣವು ಸತ್ಯನಿಷೇಧಿಗಳ ವಶಕ್ಕೆ ಹೋಗಿ ಮುಸ್ಲಿಮರು ಅವರ ಅಧೀನದಲ್ಲಿದ್ದುಕೊಂಡು ಒಂದು ಸೀಮಿತ ಮತ ಸ್ವಾತಂತ್ರ್ಯದಲ್ಲೇ ತೃಪ್ತರಾಗಬೇಕಾಯಿತು. ಅಲ್ಲಾಹನಿಗೆ ಇಂತಹ ಮುಸ್ಲಿಮರ ಅಗತ್ಯವೇ ಇರಲಿಲ್ಲ. ಅವನು ಈ ಜಗತ್ತಿಗೆ ಪ್ರವಾದಿಗಳನ್ನೂ ಗ್ರಂಥಗಳನ್ನೂ ಇಂತಹ ಮುಸ್ಲಿಮರನ್ನು ಸೃಷ್ಟಿಸಲಿಕ್ಕಾಗಿ ಕಳುಹಿಸಿರಲಿಲ್ಲ. ಇಂತಹ ಮುಸ್ಲಿಮರು ಈ ಲೋಕದಲ್ಲಿ ಇಲ್ಲದೆ ಹೋದರೆ ಬಹಳ ಕೊರತೆಯಾದೀತೆಂಬ ಕಾರಣದಿಂದ ಅಲ್ಲಾಹನು ವಹ್ಯ್(ದಿವ್ಯವಾಣಿ) ಮತ್ತು ಪ್ರವಾದಿತ್ವದ ಸರಣಿಯನ್ನು ಕಳುಹಿಸುವ ಅಗತ್ಯ ಮನಗಂಡುದಲ್ಲ. ವಾಸ್ತವದಲ್ಲಿ ಪ್ರವಾದಿಗಳನ್ನೂ ಗ್ರಂಥಗಳನ್ನೂ ಕಳಿಸಿ ತನ್ಮೂಲಕ ಸಿದ್ಧಗೊಳಿಸಲ್ಪಟ್ಟ ಹಾಗೂ ಇಸ್ಲಾಮಿ ದೃಷ್ಟಿಕೋನದಿಂದ ಯಾವುದೇ ಮಹತ್ಕಾರ್ಯವೆಸಗಿದ ಹಾಗೂ ಅಂತಹ ಕಾರ್ಯಗಳನ್ನು ಸಾಧಿಸತಕ್ಕ ಈ ಎರಡನೆಯ ಮುಸ್ಲಿಮರು ಮಾತ್ರ ಅಲ್ಲಾಹನಿಗೆ ಬೇಕಾದವರು.

ನೈಜ ಅನುಸರಣೆ ಉತ್ಥಾನದ ಹೇತುವಾಗಿದೆ

ಇದು ಇಸ್ಲಾಮಿಗೆ ಮಾತ್ರ ಸೀಮಿತವಾದ ವಿಷಯವಲ್ಲ. ಯಾವತ್ತೂ ತತ್ವ ಸಿದ್ಧಾಂತಗಳ ಉತ್ಥಾನ ಕಾರ್ಯವು ಆ ತತ್ವ ಸಿದ್ಧಾಂತಗಳನ್ನು ನಮ್ಮ ಜೀವನದ ಒಂದು ಚಿಕ್ಕ ಭಾಗಕ್ಕೆ ಸೀಮಿತಗೊಳಿಸಿಕೊಂಡವರಿಂದಲೂ ತಮ್ಮ ಜೀವನ ಮರಣಗಳನ್ನು ಅದಕ್ಕೆ ಹೊರತಾದ ಇತರ ವಿಷಯಗಳಿಗಾಗಿರಿಸಿ ಕೊಂಡವರಿಂದಲೂ ನಡೆದಿಲ್ಲ. ಒಂದು ಸಿದ್ಧಾಂತವನ್ನು ನಂಬಿ ಅದಕ್ಕೆ ನಿಷ್ಠರಾಗಿಕೊಂಡು ತಮ್ಮ ಸಂಪೂರ್ಣ ಅಸ್ತಿತ್ವವನ್ನು ಅದರಲ್ಲಿ ಲೀನಗೊಳಿಸಿಕೊಂಡ ಹಾಗೂ ತಮ್ಮ ಪ್ರಾಣವನ್ನೂ ಸಂತಾನವನ್ನೂ ಸಹ ಅದರ ಮುಂದೆ ತೃಣ ಸಮಾನವಾಗಿ ಕಾಣುವವರು ಮಾತ್ರ ಅದರ ನೈಜ ಅನುಯಾಯಿಗಳಾಗಿರುವುದನ್ನು ಇಂದೂ ನಾವು ಕಾಣಬಹುದು. ಲೋಕದ ಪ್ರತಿಯೊಂದು ತತ್ವ ಸಿದ್ಧಾಂತವೂ ಇಂತಹ ಅನುಯಾಯಿಗಳನ್ನೇ ಬಯಸುತ್ತದೆ. ಇಂತಹ ಅನುಯಾಯಿಗಳಿಂದ ಮಾತ್ರ ಯಾವುದಾದರೊಂದು ಸಿದ್ಧಾಂತದ ಉತ್ಥಾನವಾಗಲು ಸಾಧ್ಯವಿದೆ.

ಅಲ್ಲಾಹನ ಹಕ್ಕನ್ನು ಈಡೇರಿಸುವವನೇ ಪ್ರಾಮಾಣಿಕ ಮುಸ್ಲಿಮ್

ಆದರೆ ಇಸ್ಲಾಮ್ ಮತ್ತು ಇತರ ಸಿದ್ಧಾಂತಗಳಲ್ಲಿ ಇರುವ ವ್ಯತ್ಯಾಸವೇನೆಂದರೆ ಇತರ ಸಿದ್ಧಾಂತಗಳು ಮಾನವರಿಂದ ಇಂತಹ ಆತ್ಮಾರ್ಪಣೆ, ಅನುರಾಗ ಮತ್ತು ನಿಷ್ಠೆಯನ್ನು ಬೇಡುವ ಹಕ್ಕನ್ನು ಹೊಂದಿರುವುದಿಲ್ಲ. ಅದು ಮಾನವರೊಡನೆ ಅವುಗಳ ಅನುಚಿತ ಬೇಡಿಕೆಯಾಗಿದೆ. ಆದರೆ ಇಸ್ಲಾಮ್ ಮಾನವರಲ್ಲಿ ಇಂತಹ ಬೇಡಿಕೆಯನ್ನು ಇಡುವ ನೈಜ ಹಕ್ಕನ್ನು ಹೊಂದಿದೆ. ಇತರ ಸಿದ್ಧಾಂತಗಳು ಮಾನವನಿಂದ ಯಾವ ವಿಷಯಗಳಿಗಾಗಿ ತಮ್ಮ ಹಾಗೂ ತಮ್ಮ ಜೀವನ ಮತ್ತು ಸಂಪೂರ್ಣ ಅಸ್ತಿತ್ವದ ತ್ಯಾಗಗಳನ್ನು ಬಯಸುತ್ತದೋ ಅವುಗಳ ಪೈಕಿ ಯಾವುದೂ ಇಂತಹ ತ್ಯಾಗ ಬಲಿದಾನಗಳನ್ನು ಮಾಡುವಷ್ಟು ದೊಡ್ಡದಲ್ಲ. ಅದರ ಬಾಧ್ಯತೆಯೂ ಮಾನವನಿಗಿಲ್ಲ. ಆದರೆ ಯಾವ ದೇವನಿಗಾಗಿ ಇಸ್ಲಾಮ್ ಮಾನವರಿಂದ ತ್ಯಾಗ ಬಲಿದಾನ ಗಳನ್ನು ಬಯಸುತ್ತದೋ ಅವನು ವಾಸ್ತವದಲ್ಲಿ ಇಂತಹ ತ್ಯಾಗ ಬಲಿದಾನಗಳನ್ನು ಕೇಳುವ ಹಕ್ಕುಳ್ಳವನಾಗಿರುತ್ತಾನೆ. ಭೂಮಿ-ಆಕಾಶಗಳಲ್ಲಿ ಇರುವುದೆಲ್ಲವೂ ಅಲ್ಲಾಹನದೇ. ಸ್ವತಃ ಮಾನವನೂ ಅಲ್ಲಾಹನವನೇ. ಮಾನವನ ವಶದಲ್ಲಿರುವ ಎಲ್ಲವೂ ಅಲ್ಲಾಹನದೇ. ಮಾನವನು ತನ್ನ ಕೆಲಸಗಳಿಗಾಗಿ ಬಳಸುವ ವಸ್ತುಗಳೆಲ್ಲವೂ ಅಲ್ಲಾಹನವು. ಆದುದರಿಂದ ಅಲ್ಲಾಹನದಾಗಿರುವ ಸರ್ವವೂ ಅಲ್ಲಾಹನಿಗೆ ಆಗಿರಬೇಕಾದುದು ನ್ಯಾಯೋಚಿತವೂ ಬುದ್ಧಿಪೂರ್ವಕವೂ ಆಗಿದೆ. ಇತರರಿಗಾಗಿ ಅಥವಾ ಸ್ವಲಾಭಕ್ಕಾಗಿ ತಮ್ಮ ಇಂದ್ರಿಯಾಸಕ್ತಿಗಳನ್ನು ಒಂದು ವೇಳೆ ತ್ಯಾಗ ಮಾಡಿದರೂ ಅದು ಅಲ್ಲಾಹನ ಅನುಮತಿಯ ಪ್ರಕಾರವಿಲ್ಲದಿದ್ದರೆ ಅದೊಂದು ವಂಚನೆಯಾಗಿರುತ್ತದೆ. ಅಲ್ಲಾಹನಿಗಾಗಿ ಮಾಡುವ ತ್ಯಾಗವು ವಾಸ್ತವದಲ್ಲಿ ಹಕ್ಕಿನ ಸಂದಾಯವಾಗಿರುತ್ತದೆ.

ವಾಸ್ತವಿಕತೆಯು ಹೀಗಿರುತ್ತಾ ತಮ್ಮ ಮಿಥ್ಯ ತತ್ವ ಸಿದ್ಧಾಂತಗಳಿಗಾಗಿ ಹಾಗೂ ಸ್ವೇಚ್ಛಾರಾಧ್ಯರಿಗಾಗಿ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡುತ್ತ ಮಾನವ ಇತಿಹಾಸದಲ್ಲಿಯೇ ಅಪೂರ್ವ ಸ್ಥೈರ್ಯವನ್ನು ತೋರಿಸುತ್ತಿರುವವರ ಜೀವನದಲ್ಲಿ ಮುಸ್ಲಿಮರಿಗೆ ದೊಡ್ಡ ಪಾಠವಿದೆ. ಮಿಥ್ಯ ಮಾರ್ಗದಲ್ಲಿ ತೋರಿಸುತ್ತಿರುವಂತಹ ಅನುರಕ್ತಿ ಮತ್ತು ಅರ್ಪಣಾಭಾವಗಳ ಸಾವಿರದಲ್ಲೊಂದಂಶವೂ ಸತ್ಯಮಾರ್ಗದಲ್ಲಿ ಕಂಡು ಬರುತ್ತಿಲ್ಲವೆಂದಾದರೆ ಇದೆಂತಹ ಸೋಜಿಗ!

ಆತ್ಮಾವಲೋಕನ

ಮೇಲೆ ಉಲ್ಲೇಖಿಸಿದ ಸೂಕ್ತ ಮತ್ತು ಹದೀಸ್‌ನಲ್ಲಿ ವಿವರಿಸಲಾಗಿರುವ ಈಮಾನ್ ಮತ್ತು ಇಸ್ಲಾಮಿನ ಈ ಒರೆಗಲ್ಲಿನಲ್ಲಿ ನಾವೆಲ್ಲರೂ ನಮ್ಮನ್ನು ನಾವೇ ತೀಡಿ ಅದರ ಬೆಳಕಿನಲ್ಲಿ ನಮ್ಮನ್ನು ಪರೀಕ್ಷಿಸಿ ನೋಡಬೇಕು. ನೀವು ಇಸ್ಲಾಮನ್ನು ಸ್ವೀಕರಿಸಿದ್ದೀರೆಂದೂ ಈಮಾನನ್ನಿರಿಸಿಕೊಂಡಿದ್ದೀರೆಂದೂ ಹೇಳುತ್ತಿರುವುದಾದರೆ ನಿಮ್ಮ ಜೀವನ-ಮರಣಗಳು ಅಲ್ಲಾಹನಿಗಾಗಿವೆಯೇ ಎಂಬುದನ್ನು ನೋಡಿರಿ. ನೀವು ಅವನಿಗಾಗಿ ಬದುಕುತ್ತಿರುವಿರಾ? ನಿಮ್ಮ ಮನ ಮಸ್ತಿಷ್ಕಗಳ ಸಕಲ ಅರ್ಹತೆಗಳಿಗೂ ನಿಮ್ಮ ದೇಹ ಮತ್ತು ಪ್ರಾಣಗಳಲ್ಲಿರುವ ಸಕಲ ಶಕ್ತಿ ಸಾಮರ್ಥ್ಯಗಳೂ ನಿಮಗೊದಗಿದ ಕಾಲಾವಕಾಶಗಳೂ ನಿಮ್ಮ ಪರಿಶ್ರಮಗಳೂ ಅಲ್ಲಾಹನು ತನ್ನ ಮುಸ್ಲಿಮ್ ಸಮುದಾಯದಿಂದ ಪಡೆಯಲಿಚ್ಛಿಸಿರುವ ಕಾರ್ಯಗಳನ್ನು ಪೂರೈಸುವಲ್ಲಿಯೇ ವ್ಯಯವಾಗು ತ್ತಿವೆಯೇ? ನೀವು ನಿಮ್ಮ ದಾಸ್ಯ- ಆರಾಧನೆ ಮತ್ತು ದಾಸ್ಯ- ಅನುಸರಣೆಗಳನ್ನು ಕೇವಲ ಅಲ್ಲಾಹನಿಗಾಗಿ ಕಾಯ್ದಿರಿಸಿಕೊಂಡಿರುತ್ತೀರಾ? ನಿಮ್ಮ ಜೀವನವು ಇಂದ್ರಿಯಾರಾಧನೆ, ಮನೆತನ, ಬಂಧುಗಳು, ಸಮಾಜ ಮತ್ತು ಸರಕಾರದ ಆರಾಧನೆಗಳಿಂದ ಸಂಪೂರ್ಣವಾಗಿ ಮುಕ್ತವಾಗಿದೆಯೇ? ನೀವು ನಿಮ್ಮ ಒಲವು-ತಿರಸ್ಕಾರಗಳನ್ನು ಸಂಪೂರ್ಣವಾಗಿ ದೇವ ಸಂಪ್ರೀತಿಗೆ ಅಧೀನವಾಗಿರಿಸಿ ಕೊಂಡಿರುವಿರಾ? ನೀವು ಯಾರನ್ನಾದರೂ ಪ್ರೀತಿಸುತ್ತಿದ್ದರೆ ನಿಜವಾಗಿಯೂ ಅಲ್ಲಾಹನಿಗಾಗಿ ಪ್ರೀತಿಸುತ್ತಿರುವಿರಾ? ನೀವು ತಿರಸ್ಕರಿಸುತ್ತಿದ್ದರೆ ಅಲ್ಲಾಹನಿಗಾಗಿ ತಿರಸ್ಕರಿಸುತ್ತಿರುವಿರಾ? ಈ ಪ್ರೀತಿ ಮತ್ತು ತಿರಸ್ಕಾರಗಳಲ್ಲಿ ನಿಮ್ಮ ಇಂದ್ರಿಯಾಸಕ್ತಿಗಳ ಪಾಲೇನಾದರೂ ಇಲ್ಲವಷ್ಟೆ! ಅದೇ ರೀತಿಯಲ್ಲಿ ನೀವು ಕೊಡುವುದೂ ತಡೆಯುವುದೂ ದೇವನಿಗಾಗಿಯೇ ಆಗಿರುವುದೇ? ನಿಮ್ಮ ಹೊಟ್ಟೆಗೆ, ಇಂದ್ರಿಯಗಳಿಗೆ ಹಾಗೂ ಲೋಕದ ಇನ್ನಾರಿಗಾದರೂ ಕೊಡುವುದು ಅಲ್ಲಾಹನು ಅವರ ಹಕ್ಕನ್ನು ನಿಶ್ಚಯಿಸಿದುದರಿಂದಾಗಿದ್ದು ಹಾಗೆ ಕೊಡುವುದು ಅಲ್ಲಾಹನ ಸಂಪ್ರೀತಿಗಾಗಿ ಮಾತ್ರ ಆಗಿರುತ್ತದೆಯೇ? ಅದರಂತೆಯೇ ನೀವು ತಡೆಹಿಡಿಯುವುದೆಲ್ಲವೂ ದೇವನು ತಡೆಯಾಜ್ಞೆ ನೀಡಿದ ಕಾರಣದಿಂದಾಗಿದ್ದು ಹಾಗೆ ತಡೆಹಿಡಿಯುವುದರ ಹಿಂದೆ ದೇವ ಸಂಪ್ರೀತಿ ಪ್ರಾಪ್ತಿಯ ಆಕಾಂಕ್ಷೆ ಇರುತ್ತದೆಯೇ? ನಿಮ್ಮ ಅಂತರಂಗದ ಸ್ಥಿತಿಯು ಇದಾಗಿದ್ದರೆ ಅವನು ನಿಮ್ಮ ಮೇಲೆ ತನ್ನ ಅನುಗ್ರಹಗಳನ್ನು ಪೂರ್ತಿಗೊಳಿಸಿರುತ್ತಾನೆಂಬು ದಕ್ಕಾಗಿ ಆತನಿಗೆ ಕೃತಜ್ಞತೆಯನ್ನು ಸಲ್ಲಿಸಿರಿ. ನಿಮ್ಮ ಅಂತಃ

ಕರಣದಲ್ಲಿ ಈ ಸ್ಥಿತಿಯ ಬಗ್ಗೆ ಕೊರತೆ ಕಾಣುತ್ತಿರುವಿರಾದರೆ ಇತರ ಎಲ್ಲಾ ತರದ ಚಿಂತೆಗಳನ್ನು ಬಿಟ್ಟು ಈ ಒಂದು ಕೊರತೆ ಯನ್ನೇ ನೀಗಿಸಿಕೊಳ್ಳಲು ತ್ವರೆ ಮಾಡಿರಿ. ನಿಮ್ಮ ಸಕಲ ಪ್ರಯತ್ನ ಪರಿಶ್ರಮಗಳನ್ನು ಇಲ್ಲೇ ಕೇಂದ್ರೀಕರಿಸಿರಿ. ಏಕೆಂದರೆ ಈ ದೋಷದ ನಿವಾರಣೆಯಲ್ಲೇ ನಿಮಗೆ ಇಹದಲ್ಲಿ ಸಾರ್ಥಕ್ಯ ಮತ್ತು ಪರದಲ್ಲಿ ಸದ್ಗತಿ ದೊರೆಯುತ್ತದೆ. ನೀವು ಈ ಜಗತ್ತಿನಲ್ಲಿ ಏನೆಲ್ಲ ಸಾಧಿಸಿಕೊಂಡಿದ್ದರೂ ಈ ಕೊರತೆಯಿಂದುಂಟಾದ ಹಾನಿಯನ್ನು ಅವುಗಳಿಂದ ಭರ್ತಿ ಮಾಡಿಕೊಳ್ಳಲು ಸಾಧ್ಯವಾಗ ಲಾರದು. ನೀವು ಈ ಕೊರತೆಯನ್ನು ನಿವಾರಿಸಿಕೊಂಡಿರೆಂದಾದರೆ ನಿಮಗೆ ಈ ಲೋಕದಲ್ಲಿ ಏನೂ ಸಿಗದೇ ಹೋದರೂ ನೀವು ನಷ್ಟದಲ್ಲಿರಲಾರಿರಿ.

ಈ ಒರೆಗಲ್ಲು ಇತರರನ್ನು ತಿಕ್ಕಿ ನೋಡಿ ಅವರು ಮೂಮಿನರೋ ಮುನಾಫಿಕರೋ ಮುಸ್ಲಿಮರೋ ಅಥವಾ ಕಾಫಿರರೋ ಎಂಬ ತೀರ್ಮಾನ ಮಾಡಿಕೊಳ್ಳಲಿಕ್ಕಿರುವುದಲ್ಲ. ಇದು ನೀವು ಸ್ವತಃ ನಿಮ್ಮನ್ನೇ ಪರೀಕ್ಷಿಸಿಕೊಳ್ಳಲಿಕ್ಕಿರುವುದಾಗಿದೆ. ಪರಲೋಕ ನ್ಯಾಯಾಲಯದ ಮುಂದೆ ಹಾಜರಾಗುವುದಕ್ಕಿಂತ ಮುಂಚೆಯೇ ನಿಮ್ಮಲ್ಲಿರುವ ಕೇಡನ್ನು ನೀವೇ ಕಂಡುಕೊಂಡು ಇದನ್ನು ಇಲ್ಲೇ ನಿವಾರಿಸಲು ಶ್ರಮಿಸಿರಿ. ಇಹಲೋಕದ ಮುಫ್ತಿ ಮತ್ತು ಕಾಝೀ(ನ್ಯಾಯಾಧೀಶ)ಗಳು ನಿಮ್ಮ ಬಗ್ಗೆ ಏನು ತೀರ್ಮಾನ ಮಾಡಿದ್ದಾರೆಂಬ ಚಿಂತೆ ನಿಮಗೆ ಬೇಡ. ಆ ಮಹಾ ರಾಜಾಧಿರಾಜನೂ ಪ್ರತ್ಯಕ್ಷ ಪರೋಕ್ಷಗಳ ಜ್ಞಾನಿಯೂ ಆದ ದೇವನು ನಿಮ್ಮನ್ನು ಏನೆಂದು ತಿಳಿದಿದ್ದಾನೆಂಬ ಚಿಂತೆ ಇದ್ದರೆ ಸಾಕು. ನಿಮ್ಮ ಹೆಸರು ಇಲ್ಲಿ ಮುಸ್ಲಿಮರ ದಾಖಲೆಯಲ್ಲಿ ಸೇರಿದೆಯೆಂದು ಸಮಾಧಾನ ಪಟ್ಟುಕೊಳ್ಳಬೇಡಿರಿ. ಅಲ್ಲಾಹನ ದಾಖಲೆಯಲ್ಲಿ ನಿಮ್ಮ ಹೆಸರು ಯಾರ ಪಟ್ಟಿಯಲ್ಲಿ ಸೇರಿದೆಯೆಂಬ ಚಿಂತೆ ನಿಮಗಿರಬೇಕು. ಇಡೀ ಜಗತ್ತೇ ನಿಮಗೆ ಇಸ್ಲಾಮ್ ಮತ್ತು ಈಮಾನಿನ ಸನದು ನೀಡಿದರೂ ಏನೂ ಫಲವಿಲ್ಲ. ಅಂತಿಮ ತೀರ್ಮಾನವು ಯಾರ ಕೈಯಲ್ಲಿದೆಯೋ ಆ ದೇವನ ದೃಷ್ಟಿಯಲ್ಲಿ ಮುನಾಫಿಕನ ಬದಲಿಗೆ ಮೂಮಿನ್, ಅವಿಧೇಯನ ಬದಲಿಗೆ ವಿಧೇಯ, ಕೃತಘ್ನನ ಬದಲಿಗೆ ಕೃತಜ್ಞನೆಂದು ತೀರ್ಮಾನಿಸಲ್ಪಡುವುದೇ ನಿಮ್ಮ ನಿಜವಾದ ಸಾರ್ಥಕತೆ.

O

ದೇವಾನುಸರಣೆ ಏಕೆ?

ಮುಸ್ಲಿಮ್ ಸಹೋದರರೇ,

ಅಲ್ಲಾಹ್ ಮತ್ತು ಪ್ರವಾದಿಯವರ ಅನುಸರಣೆಯನ್ನು 'ಇಸ್ಲಾಮ್' ಎಂದೂ, ಒಬ್ಬ ಮನುಷ್ಯನು ತನ್ನ ಚಿತ್ತಾಕಾಂಕ್ಷೆ, ಸಂಪ್ರದಾಯ ಮತ್ತು ಲೋಕ ರೂಢಿಗಳಂತಹ ಎಲ್ಲ ಅನುಸರಣೆಯನ್ನು ಬಿಟ್ಟು ಅಲ್ಲಾಹ್ ಮತ್ತು ಪ್ರವಾದಿಯವರ ಅನುಸರಣೆ ಮಾಡುವ ತನಕ ಮುಸ್ಲಿಮನಾಗಲು ಸಾಧ್ಯವೇ ಇಲ್ಲವೆಂದೂ ಹಿಂದಿನ ಭಾಷಣಗಳಲ್ಲಿ ಪದೇಪದೇ ವಿವರಿಸಿದ್ದೇನೆ.

ಅಲ್ಲಾಹ್ ಮತ್ತು ಆತನ ಪ್ರವಾದಿಯವರನ್ನು ಅನುಸರಿಸುವ ಬಗ್ಗೆ ಇಷ್ಟೇಕೆ ಒತ್ತಾಯ ಮಾಡಲಾಗುತ್ತಿದೆ ಎಂಬುದನ್ನು ನಾನಿಂದು ಹೇಳಬಯಸುತ್ತೇನೆ. ಅಲ್ಲಾಹನು ಈ ರೀತಿ ತನ್ನ ಪ್ರವಾದಿಯ ಅನುಸರಣೆಗೆ ಒತ್ತಾಯಿಸಬೇಕಾದರೆ ಅವನೇನು ನಮ್ಮ ದಾಸ್ಯ-ಅನುಸರಣೆಯ ಲಾಲಸಿಯೇ? (ಶಾಂತಂ ಪಾಪಂ) ಇಲ್ಲಿ ಅರಸರು ತಮ್ಮ ರಾಜ್ಯಭಾರ ನಡೆಸಲು ಬಯಸುವಂತೆ ಅಲ್ಲಾಹನೂ ತನ್ನ ರಾಜ್ಯಭಾರ ನಡೆಸಲು ಆಶಿಸುವನೇ? ಇಲ್ಲಿಯ ರಾಜರು ತಮ್ಮ ಅಪ್ಪಣೆಯಂತೆ ನಡೆಯಲು ತಮ್ಮ ಪ್ರಜೆಗಳಿಗೆ ಹೇಳುವಂತೆ ಅಲ್ಲಾಹನೂ ಹೇಳುವನೇ? ಎಂಬ ಈ ಪ್ರಶ್ನೆಗಳಿಗೆ ನಾನಿಂದು ಉತ್ತರಿಸಬೇಕೆಂದಿರುವೆನು.

ಮಾನವನ ನೈಜ ವಿಜಯ ಅಲ್ಲಾಹನ ಅನುಸರಣೆಯಲ್ಲೇ ಇದೆ

ವಾಸ್ತವದಲ್ಲಿ ದೇವನು ಮಾನವನ ಮುಂದಿಡುವ ಬೇಡಿಕೆಗಳೆಲ್ಲಾ ಮಾನವನ ಒಳಿತಿಗಾಗಿಯೂ ಪ್ರಯೋಜನಕ್ಕಾಗಿಯೂ ಆಗಿರುತ್ತದೆ. ಅವನು ಲೌಕಿಕ ರಾಜರುಗಳಂತಲ್ಲ. ಈ ರಾಜರು ತಮ್ಮ ಲಾಭಕ್ಕಾಗಿ ಜನರನ್ನು ತಮ್ಮಿಚ್ಛೆಯ ದಾಸರನ್ನಾಗಿ ಮಾಡಿಕೊಳ್ಳುತ್ತಾರೆ. ಆದರೆ ಅಲ್ಲಾಹನು ಎಲ್ಲಾ ತರದ ಲಾಭಾಪೇಕ್ಷೆಗಳಿಂದ ವಿರಹಿತನಾಗಿದ್ದಾನೆ. ಅವನಿಗೆ ನಿಮ್ಮಿಂದ ತೆರಿಗೆ ವಸೂಲು ಮಾಡಬೇಕೆಂದಿಲ್ಲ. ತನಗಾಗಿ ಮಹಲುಗಳನ್ನು ನಿರ್ಮಿಸುವ, ವಾಹನಗಳನ್ನು ಖರೀದಿಸುವ ಹಾಗೂ ನಿಮ್ಮ ಹಣದಿಂದ ತನಗೆ ಭೋಗವಿಲಾಸದ ವಸ್ತುಗಳನ್ನು ಒದಗಿಸಿಕೊಳ್ಳುವ ಅಗತ್ಯವಿಲ್ಲ. ಅವನು ಪರಮ ಪಾವನನೂ ನಿರಪೇಕ್ಷನೂ ಆಗಿರುತ್ತಾನೆ. ಜಗತ್ತಿನಲ್ಲಿರುವುದೆಲ್ಲಾ ಅವನದೇ. ಸಕಲೈಶ್ವರ್ಯಗಳ ಏಕೈಕ ಮಾಲಿಕನು ಅವನೇ. ಅವನು ನಿಮ್ಮ ಹಿತಚಿಂತಕನಾಗಿರುವುದರಿಂದ ನಿಮ್ಮ ಒಳಿತಿಗಾಗಿಯೇ ನಿಮ್ಮೊಡನೆ ಅನೇಕ ಬೇಡಿಕೆಗಳನ್ನು ಇಡುತ್ತಾನೆ. ಸರ್ವಶ್ರೇಷ್ಠ ಜೀವಿಯಾಗಿ ಸೃಷ್ಟಿಸಲ್ಪಟ್ಟ ಮಾನವನು ಶೈತಾನನ

ದಾಸನಾಗಿರುವುದನ್ನಾಗಲೀ ತನ್ನಂತಿರುವ ಇನ್ನೊಬ್ಬ ಮಾನವನ ದಾಸನಾಗಿರುವುದನ್ನಾಗಲೀ ಕೀಳ್ಮಟ್ಟದ ಇತರ ವಸ್ತುಗಳ ಅಥವಾ ಶಕ್ತಿಗಳ ದಾಸನಾಗಿರುವುದನ್ನಾಗಲೀ ಅವನು ಇಷ್ಟಪಡುವುದಿಲ್ಲ. ಈ ಲೋಕದಲ್ಲಿ ತನ್ನ ಪ್ರತಿನಿಧಿಯಾಗಿರುವ ಮಾನವನು ಅಜ್ಞಾನದ ಅಂಧಕಾರದಲ್ಲಿ ಅಲೆದಾಡುತ್ತಿರುವುದನ್ನೂ, ಕೇವಲ ಪ್ರಾಣಿಗಳಂತೆ ತಮ್ಮ ಇಚ್ಛಾಕಾಂಕ್ಷೆಗಳಿಗೆ ಅಧೀನರಾಗಿ ನಡೆಯುತ್ತಾ ವಿನಾಶ ಹೊಂದುವುದನ್ನೂ ಅವನು ಇಚ್ಛಿಸುವುದಿಲ್ಲ. ಆದುದರಿಂದ 'ನೀವು ನನ್ನನ್ನು ಅನುಸರಿಸಿರಿ. ನಾನು ನನ್ನ ಪ್ರವಾದಿಯ ಮೂಲಕ ನಿಮಗೆ ಒದಗಿಸಿದ ಜ್ಞಾನದ ಬೆಳಕಿನಲ್ಲಿ ನಡೆಯಿರಿ. ಆಗ ನಿಮಗೆ ದೇವಮಾರ್ಗ ಸಿಗುವುದು. ಅದರಲ್ಲಿ ನಡೆದಲ್ಲಿ ಇಹದಲ್ಲೂ ಪರದಲ್ಲೂ ಗೌರವಾದರಗಳನ್ನು ಪಡೆಯುವಿರಿ' ಎನ್ನುತ್ತಾನೆ.

لَآ إِكْرَاهَ فِى ٱلدِّينِ ۖ قَد تَّبَيَّنَ ٱلرُّشْدُ مِنَ ٱلْغَىِّ ۚ فَمَن يَكْفُرْ بِٱلطَّٰغُوتِ وَيُؤْمِنۢ

بِٱللَّهِ فَقَدِ ٱسْتَمْسَكَ بِٱلْعُرْوَةِ ٱلْوُثْقَىٰ لَا ٱنفِصَامَ لَهَا ۗ وَٱللَّهُ سَمِيعٌ عَلِيمٌ ﴿٢٥٦﴾

ٱللَّهُ وَلِىُّ ٱلَّذِينَ ءَامَنُوا۟ يُخْرِجُهُم مِّنَ ٱلظُّلُمَٰتِ إِلَى ٱلنُّورِ ۖ وَٱلَّذِينَ كَفَرُوٓا۟ أَوْلِيَآؤُهُمُ

ٱلطَّٰغُوتُ يُخْرِجُونَهُم مِّنَ ٱلنُّورِ إِلَى ٱلظُّلُمَٰتِ ۗ أُو۟لَٰٓئِكَ أَصْحَٰبُ ٱلنَّارِ ۖ هُمْ فِيهَا خَٰلِدُونَ ﴿٢٥٧﴾

"ಧರ್ಮದ ವಿಷಯದಲ್ಲಿ ಯಾವುದೇ ಒತ್ತಾಯ ಬಲಾತ್ಕಾರಗಳಿಲ್ಲ. ಸನ್ಮಾರ್ಗವು ದುರ್ಮಾರ್ಗದಿಂದ ಬೇರ್ಪಡಿಸಲ್ಪಟ್ಟಿದೆ. ಇನ್ನು 'ತಾಗೂತ'(ಅತಿಕ್ರಮ)ನ್ನು ನಿರಾಕರಿಸಿ ಅಲ್ಲಾಹನಲ್ಲಿ ವಿಶ್ವಾಸವಿಟ್ಟಾತನು ಎಂದೆಂದಿಗೂ ಮುರಿಯದಂತಹ ಬಲವಾದ ಆಧಾರವನ್ನು ನೆಚ್ಚಿಕೊಂಡನು. (ಅವನು ಆಶ್ರಯ ಪಡೆದ) ಅಲ್ಲಾಹನು ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ. ಅಲ್ಲಾಹನು ವಿಶ್ವಾಸಿಗಳ ರಕ್ಷಕ ಮಿತ್ರನಾಗಿರುತ್ತಾನೆ ಮತ್ತು ಅವನು ಇವರನ್ನು ಅಂಧಕಾರದಿಂದ ಹೊರತೆಗೆದು ಪ್ರಕಾಶಕ್ಕೆ ತರುತ್ತಾನೆ ಮತ್ತು ನಿರಾಕರಣೆ ಮಾರ್ಗವನ್ನನು ಸರಿಸುವವರ ರಕ್ಷಕ ಮಿತ್ರರು ಅತಿಕ್ರಮಿಗಳಾಗಿದ್ದಾರೆ. ಅವರು ಇವರನ್ನು ಪ್ರಕಾಶದಿಂದ ಅಂಧಕಾರಗಳ ಕಡೆಗೆ ಎಳೆದೊಯ್ಯುತ್ತಾರೆ. ಇವರು ನರಕಾಗ್ನಿಯವರಾಗಿದ್ದು ಸದಾ ಅಲ್ಲೇ ಇರುವರು." (ಅಲ್ ಬಕರಃ: 256-257)

ಅಲ್ಲಾಹೇತರರ ಅನುಸರಣೆ - ಪಥಭ್ರಷ್ಟತೆ

ಅಲ್ಲಾಹನ ಹೊರತು ಇತರರ ಅನುಸರಣೆಯಿಂದ ಮಾನವನು ಅಂಧಕಾರದ ಕಡೆಗೆ ಹೋಗುವುದು ಹೇಗೆಂದೂ, ಅಲ್ಲಾಹನ ಅನುಸರಣೆಯಿಂದ ಮಾತ್ರ ಪ್ರಕಾಶ ಹೊಂದುವುದು ಹೇಗೆಂದೂ ನೋಡೋಣ-

ಇಹ ಜೀವನದಲ್ಲಿ ನೀವು ಅನೇಕಾನೇಕ ಸಂಬಂಧಗಳೊಂದಿಗೆ ಬಿಗಿಯಲ್ಪಟ್ಟಿದ್ದೀರಿ. ಪ್ರಪ್ರಥಮವಾಗಿ ನಿಮ್ಮ ಸಂಬಂಧವು ನಿಮ್ಮ ಶರೀರದೊಂದಿಗಿದೆ. ನಿಮ್ಮ ಕೈ, ಕಾಲು, ಕಣ್ಣು, ಕಿವಿ, ನಾಲಗೆ, ಹೃದಯ, ಮಸ್ತಿಷ್ಕ, ಉದರ ಮೊದಲಾದವುಗಳನ್ನೆಲ್ಲಾ ನಿಮ್ಮೊಡೆಯನು ನಿಮ್ಮ ಸೇವೆಗಾಗಿ ನಿಮಗೆ ದಯಪಾಲಿಸಿರುತ್ತಾನೆ. ಅವುಗಳಿಂದ ಯಾವ ತರದ ಸೇವೆ ಮಾಡಿಸಬೇಕು. ಹೊಟ್ಟೆಗೆ ಏನನ್ನು ಕೊಡಬಹುದು, ಏನನ್ನು ಕೊಡಬಾರದು. ಕೈಗಳಿಂದ ಯಾವ ಕೆಲಸಗಳನ್ನು ಮಾಡಿಸಬಹುದು, ಯಾವುದನ್ನು ಮಾಡಿಸಬಾರದು; ಕಾಲುಗಳನ್ನು ಯಾವ ಮಾರ್ಗದಲ್ಲಿ ನಡೆಸಬಹುದು, ಎಲ್ಲಿ ನಡೆಸಬಾರದು. ಕಣ್ಣು ಕಿವಿಗಳಿಂದ ಯಾವ ತರದ ಕೆಲಸಗಳನ್ನು ಮಾಡಿಸಬಹುದು, ಯಾವುದನ್ನು ಮಾಡಿಸಬಾರದು; ನಾಲಗೆಯನ್ನು ಎಂತಹ ಮಾತುಗಳಿಗಾಗಿ ಬಳಸಬಹುದು, ಯಾವುದಕ್ಕೆ ಬಳಸಬಾರದು; ಹೃದಯದಲ್ಲಿ ಯಾವ ಭಾವನೆಯನ್ನಿರಿಸಬಹುದು, ಯಾವುದನ್ನು ಇರಿಸಬಾರದು; ಮಿದುಳಿನಲ್ಲಿ ಯಾವ ತರದ ಆಲೋಚನೆಗಳನ್ನು ಮಾಡಬಹುದು, ಎಂತಹ ಯೋಚನೆಗಳನ್ನು ಮಾಡಬಾರದು- ಎಂಬಿತ್ಯಾದಿಗಳನ್ನು ನೀವು ನಿರ್ಧರಿಸಬೇಕಾಗಿದೆ. ಈ ಸೇವಕರಿಂದ ನೀವು ಒಳ್ಳೆಯ ಕೆಲಸಗಳನ್ನೂ ಮಾಡಿಸಬಲ್ಲಿರಿ, ಕೆಟ್ಟ ಕೆಲಸಗಳನ್ನೂ ಮಾಡಿಸಬಲ್ಲಿರಿ, ಈ ಸೇವಕರು ನಿಮ್ಮನ್ನು ಶ್ರೇಷ್ಠ ಮನುಷ್ಯರನ್ನಾಗಿಯೂ ಮಾಡಬಲ್ಲರು, ಪ್ರಾಣಿಗಳಿಗಿಂತ ಕೀಳ್ಮಟ್ಟಕ್ಕೂ ಇಳಿಸಬಲ್ಲರು.

ನಿಮ್ಮ ಸಂಬಂಧವು ನಿಮ್ಮ ಮನೆಮಂದಿಯೊಂದಿಗೂ ಇದೆ- ತಂದೆ, ತಾಯಿ, ಸಹೋದರಿ, ಸಹೋದರ, ಪತ್ನಿ, ಮಕ್ಕಳು, ಮತ್ತಿತರ ಸಂಬಂಧಿಕರೊಂದಿಗೆ ಅಹೋರಾತ್ರಿ ನಿಮ್ಮ ವ್ಯವಹಾರವಿರುತ್ತದೆ; ಅವರೆಲ್ಲರೊಂದಿಗೆ ನೀವು ಹೇಗೆ ವರ್ತಿಸಬೇಕು, ನಿಮ್ಮ ಮೇಲೆ ಅವರ ಹಕ್ಕು ಬಾಧ್ಯತೆಗಳೇನು? ಅವರ ಮೇಲೆ ನಿಮ್ಮ ಹಕ್ಕು ಬಾಧ್ಯತೆಗಳೇನು? ಎಂಬುದನ್ನು ನಿರ್ಧರಿಸಿಕೊಳ್ಳಬೇಕಾಗಿದೆ. ಅವರೊಂದಿಗೆ ಸರಿಯಾಗಿ ವ್ಯವಹರಿಸಿದರೆ ಮಾತ್ರ ನಿಮಗೆ ಇಹಪರಗಳೆರಡರಲ್ಲೂ ಸುಖ, ಸಂತೋಷ, ವಿಜಯಾದಿಗಳು ಲಭಿಸುವುವು. ಅನ್ಯಥಾ ನೀವು ನಿಮ್ಮ ಇಹವನ್ನು ನರಕ ಸದೃಶವನ್ನಾಗಿ ಮಾಡಿಕೊಳ್ಳುವಿರಿ. ಮಾತ್ರವಲ್ಲ, ಪರದಲ್ಲಿಯೂ ದೇವನ ಮುಂದೆ ಕಠಿಣ ವಿಚಾರಣೆಗೊಳಗಾಗಬೇಕಾದೀತು.

ನಿಮ್ಮ ಸಂಬಂಧವು ಜಗತ್ತಿನ ಇತರ ಅನೇಕ ಜನರೊಂದಿಗೂ ಇದೆ. ಕೆಲವರು ನಿಮ್ಮ ನೆರೆಹೊರೆಯವರು; ಕೆಲವರು ಮಿತ್ರರು. ಇನ್ನು ಕೆಲವರು ನಿಮ್ಮ ಶತ್ರುಗಳು. ಅನೇಕರು ನಿಮ್ಮ ಸೇವೆ ಮಾಡುವವರು, ನೀವು ಇತರ ಅನೇಕರ ಸೇವೆ ಮಾಡುತ್ತೀರಿ. ಕೆಲವರು ನಿಮಗೆ ಕೊಡುತ್ತಾರೆ, ಇನ್ನು ಕೆಲವರಿಗೆ ನೀವು ಕೊಡುತ್ತೀರಿ. ಕೆಲವರು ನಿಮ್ಮ ಮೇಲೆ ಭರವಸೆ ಇಟ್ಟು ತಮ್ಮ ಕೆಲಸ ಕಾರ್ಯಗಳನ್ನು ನಿಮ್ಮ ವಶ ಒಪ್ಪಿಸುತ್ತಾರೆ. ಇನ್ನು ಕೆಲವರ ಮೇಲೆ ನೀವು ಭರವಸೆ ಇಟ್ಟು ನಿಮ್ಮ ಕೆಲಸ ಕಾರ್ಯಗಳನ್ನು ಅವರಿಗೆ ವಹಿಸಿಕೊಡುತ್ತೀರಿ. ಕೆಲವರು ನಿಮ್ಮ ಮೇಲಧಿಕಾರಿಗಳಾಗಿದ್ದರೆ, ಇನ್ನು ಕೆಲವರ ಅಧಿಕಾರಿ ನೀವಾಗುತ್ತೀರಿ. ಹೀಗೆ ಜನರೊಂದಿಗೆ ಹಗಲೂ ರಾತ್ರಿಯೂ ಒಂದಲ್ಲೊಂದು ವಿಧದ ವ್ಯವಹಾರಗಳು ನಡೆಯುತ್ತಲೇ ಇರುತ್ತವೆ. ನಿಮ್ಮ ವ್ಯವಹಾರವು ಅವರೊಂದಿಗೆ ಚೆನ್ನಾಗಿದ್ದರೆ ಮಾತ್ರ ನಿಮಗೆ ಜೀವನದಲ್ಲಿ ಸುಖ, ಸಂತೋಷ, ವಿಜಯ, ಗೌರವ,

ಕೀರ್ತಿಗಳು ಪ್ರಾಪ್ತವಾಗುವುವು. ಅದೇ ರೀತಿ ನೀವು ಇಲ್ಲಿ ಬೇರೆಯವರ ಹಕ್ಕನ್ನು ಕಬಳಿಸದೆ, ಇತರರ ಮೇಲೆ ಅಕ್ರಮ ನಡೆಸದೆ, ಯಾರೂ ನಿಮ್ಮ ವಿರೋಧವಾಗಿ ಅಲ್ಲಾಹನ ಬಳಿ ದೂರು ಸಲ್ಲಿಸದೆ, ನೀವು ಇತರರ ಬಾಳನ್ನು ಹಾಳುಗೆಡವಿದ ಪಾಪವು ನಿಮ್ಮ ತಲೆಯ ಮೇಲಿಲ್ಲದೆ, ಇತರರ ಮಾನ, ಧನ, ಪ್ರಾಣಗಳಿಗೆ ನೀವು ಅನ್ಯಾಯವಾಗಿ ನಷ್ಟ ಮಾಡದಿದ್ದ ಸ್ಥಿತಿಯಲ್ಲಿ ಪರಲೋಕದಲ್ಲಿ ನಿಮ್ಮೊಡೆಯನ ಮುಂದೆ ಹಾಜರಾದರೆ ಮಾತ್ರ ಅಲ್ಲಿ ನೀವು ಬಿಡುಗಡೆ ಹೊಂದುವಿರಿ. ಆದ್ದರಿಂದ ಈ ಎಲ್ಲಾ ಸಂಬಂಧಗಳನ್ನು ಸರಿಯಾಗಿಟ್ಟುಕೊಳ್ಳುವ ಬಗೆ ಹೇಗೆಂದೂ, ಅವು ಕೆಟ್ಟು ಹೋಗುವುದು ಹೇಗೆಂದೂ ನೀವು ತಿಳಿದಿರಬೇಕು.

ಈಗ ನೀವು ನಿಮ್ಮ ಸ್ವಂತ ಶರೀರದೊಂದಿಗೂ ಮನೆಯವರೊಂದಿಗೂ ಇತರರೊಂದಿಗೂ ಸರಿಯಾದ ವ್ಯವಹಾರವನ್ನಿರಿಸಿಕೊಳ್ಳಬೇಕಾದರೆ ಹೆಜ್ಜೆಹೆಜ್ಜೆಗೂ ನಿಮಗೆ ಜ್ಞಾನದ ಬೆಳಕು ಬೇಕಾಗುತ್ತದೆ. ಸರಿ ಯಾವುದು, ತಪ್ಪು ಯಾವುದು? ಸತ್ಯ ಯಾವುದು, ಮಿಥ್ಯ ಯಾವುದು? ನ್ಯಾಯ ಯಾವುದು ಅನ್ಯಾಯ ಯಾವುದು? ನಿಮ್ಮ ಮೇಲೆ ಯಾರ ಹಕ್ಕು ಎಷ್ಟಿದೆ? ನಿಜವಾದ ಲಾಭ ಯಾವುದರಲ್ಲಿದೆ? ಯಾವುದರಲ್ಲಿ ನಷ್ಟವಿದೆ? ಎಂಬಿತ್ಯಾದಿಗಳನ್ನು ಪ್ರತಿ ಕ್ಷಣಕ್ಕೂ ನೀವು ಅರಿತುಕೊಳ್ಳಬೇಕಾಗುತ್ತದೆ. ಈ ತಿಳುವಳಿಕೆಯನ್ನು ನೀವು ನಿಮ್ಮ ಚಿತ್ತದೊಂದಿಗೆ ಕೇಳಿದರೆ ಸಿಗಲಾರದು. ಏಕೆಂದರೆ ಚಿತ್ತವು ಸ್ವಯಂ ಅಜ್ಞಾನಿಯಾಗಿದ್ದು ಅದರ ಬಳಿ ಆಶೆ ಆಕಾಂಕ್ಷೆಗಳ ಹೊರತು ಬೇರೇನೂ ಇಲ್ಲ. ಅದು ನಿಮ್ಮೊಡನೆ ಮದ್ಯಪಾನ ಮಾಡಲಿಕ್ಕೂ, ವ್ಯಭಿಚಾರ ಮಾಡಲಿಕ್ಕೂ ಹೇಳಿ ಅವುಗಳಲ್ಲೇ ಆಹ್ಲಾದವಿದೆ ಎನ್ನುವುದು. ಅದು ನಿಮ್ಮೊಡನೆ ಎಲ್ಲರ ಋಣವನ್ನು ಕಬಳಿಸುವಂತೆಯೂ ಯಾರ ಋಣವನ್ನೂ ತೀರಿಸದಂತೆಯೂ ಹೇಳಿ ಇದರಲ್ಲೇ ನಿಮಗೆ ಲಾಭವಿದೆ ಎನ್ನುವುದು. ಅದು ನಿಮ್ಮೊಡನೆ ನಿಮ್ಮ ಸ್ವಾರ್ಥವನ್ನೆಲ್ಲಾ ಸಾಧಿಸುವಂತೆಯೂ ನೀವು ಇತರರ ಸಹಾಯಕ್ಕೊದಗದಂತೆಯೂ ಹೇಳಿ ಇದರಲ್ಲೇ ನಿಮಗೆ ಲಾಭವೂ ಸುಖವೂ ಇದೆ ಎನ್ನುವುದು. ಇಂತಹ ಧೂರ್ತನ ಕೈಯಲ್ಲಿ ನಿಮ್ಮನ್ನು ನೀವೇ ಕೊಟ್ಟಲ್ಲಿ ಅದು ನಿಮ್ಮನ್ನು ಪಾತಾಳಕ್ಕೆ ತಳ್ಳುವುದು. ಇದರ ಫಲವಾಗಿ ನೀವು ಮಹಾ ಸ್ವಾರ್ಥಿಯೂ, ನೀಚರೂ, ದುಷ್ಟರೂ, ದುರಾಚಾರಿಯೂ ಆಗುವಿರಿ. ಅದರಿಂದ ನಿಮ್ಮ ಇಹಪರಗಳೆರಡೂ ಕೆಟ್ಟು ಹೋಗುವುದು.

ಇನ್ನೊಂದು ವಿಧವೇನೆಂದರೆ ನಿಮ್ಮದೇ ಚಿತ್ತದೊಂದಿಗೆ ಕೇಳುವ ಬದಲು ನಿಮ್ಮಂತಹ ಇತರ ಮಾನವರನ್ನು ನಂಬಿ ನಿಮ್ಮ ಜೀವನದ ಲಗಾಮನ್ನು ಅವರ ವಶ ಬಿಟ್ಟುಕೊಟ್ಟು ಅವರಿಷ್ಟದಂತೆ ನಿಮ್ಮನ್ನು ಒಯ್ಯಲು ಬಿಡುವುದು, ಇದರಿಂದಲೂ ಅಪಾಯ ತಪ್ಪದು. ಒಬ್ಬ ಸ್ವಾರ್ಥಿಯು ನಿಮ್ಮನ್ನು ತನ್ನಿಚ್ಛೆಯ ದಾಸನನ್ನಾಗಿ ಮಾಡಬಹುದು. ಪಥಭ್ರಷ್ಟನಾದ ಓರ್ವ ಅಜ್ಞಾನಿಯು ನಿಮ್ಮನ್ನೂ ತನ್ನಂತೆಯೇ ಮಾಡಬಹುದು. ಒಬ್ಬ ದುಷ್ಟನು ತನ್ನ ಅಕ್ರಮಗಳಿಗಾಗಿ ನಿಮ್ಮನ್ನೇ ಅಸ್ತ್ರವನ್ನಾಗಿ ಮಾಡಿ ನಿಮ್ಮಿಂದ ಅಕ್ರಮ ಕಾರ್ಯಗಳನ್ನು ಮಾಡಿಸಬಹುದು. ಆದುದರಿಂದ ನಿಮಗೆ ಸರಿ-ತಪ್ಪುಗಳ ಸರಿಯಾದ ವ್ಯತ್ಯಾಸ ತಿಳಿಯತಕ್ಕ ಹಾಗೂ ಜೀವನವನ್ನೂ ಸರಿಯಾದ ದಿಕ್ಕಿನಲ್ಲಿ ನಡೆಸಬಲ್ಲ ಜ್ಞಾನ ಇಲ್ಲಿಯೂ ಸಿಗಲಾರದು.

ನೈಜ ಸನ್ಮಾರ್ಗ ಅಲ್ಲಾಹನ ವತಿಯಿಂದ ಮಾತ್ರ

ಇನ್ನು ನಿಮಗೆ ಈ ಪ್ರಕಾಶ ಲಭಿಸಬಲ್ಲ ಮೂಲ ಒಂದೇ. ಅದು ದೇವನು ಮಾತ್ರ. ಆತನು ಸರ್ವಜ್ಞನೂ ಸರ್ವ ವೀಕ್ಷಕನೂ ಆಗಿದ್ದಾನೆ. ಅವನು ಪ್ರತಿಯೊಂದು ವಸ್ತುವಿನ ಸ್ಥಿತಿಗತಿಗಳನ್ನು ಅರಿತಿರುವನು. ನಿಮಗೆ ನೈಜ ಲಾಭ ಎಲ್ಲಿದೆ, ನಷ್ಟ ಯಾವುದರಲ್ಲಿದೆ ಎಂಬುದನ್ನು ಆತನು ಮಾತ್ರ ಸ್ಪಷ್ಟವಾಗಿ ತೋರಿಸಬಲ್ಲನು. ಅಲ್ಲಾಹನು ನಿರಪೇಕ್ಷನೂ ಆಗಿದ್ದಾನೆ. ಅವನಿಗೆ ಸ್ವಾರ್ಥವೆಂಬುದಿಲ್ಲ. ನಿಮಗೆ ಮೋಸ ಮಾಡಿ ತನಗೆ ಲಾಭ ಮಾಡಿಕೊಳ್ಳಬೇಕಾದ ಅಗತ್ಯ ಅವನಿಗಿಲ್ಲ. ಆದ್ದರಿಂದ ಆ ನಿರಪೇಕ್ಷನಾದ ಮಾಲಿಕನು ನಿಮಗೆ ನಿಸ್ವಾರ್ಥ ಮಾರ್ಗದರ್ಶನವನ್ನೇ ನೀಡುವನು. ಅದರಲ್ಲಿ ನಿಮ್ಮ ಒಳಿತೇ ಇರುವುದು. ಅವನು ಮಹಾ ನ್ಯಾಯಶಾಲಿ. ಅಕ್ರಮ-ಅನ್ಯಾಯಗಳು ಅವನಲ್ಲಿಲ್ಲ. ಆದ್ದರಿಂದ ಅವನ ಆಜ್ಞೆಗಳು ಸತ್ಯದ ನೆಲೆಯಲ್ಲಾಗಿರುವುವು. ಅವನ ಆಜ್ಞೆಗೆ ಅನುಸಾರ ನಡೆಯುವುದರಿಂದ ನೀವು ನಿಮ್ಮ ಮೇಲಾಗಲಿ ಇತರರ ಮೇಲಾಗಲಿ ಅಕ್ರಮ-ಅನ್ಯಾಯ ಮಾಡುವಿರೆಂಬ ಭೀತಿಯೇ ಇರುವುದಿಲ್ಲ.

ದೈವಿಕ ಸನ್ಮಾರ್ಗದಿಂದ ಪ್ರಯೋಜನ ಪಡೆಯುವುದು ಹೇಗೆ?

ಅಲ್ಲಾಹನ ಕಡೆಯಿಂದ ಸಿಗುವ ಈ ಪ್ರಕಾಶದಿಂದ ಪ್ರಯೋಜನ ಪಡೆಯಬೇಕಾದರೆ ಎರಡು ವಿಷಯಗಳು ಅಗತ್ಯ- 1) ನೀವು ಅಲ್ಲಾಹನ ಮೇಲೆ ಹಾಗೂ ಅವನಿಂದ ಈ ಜ್ಞಾನ ಪ್ರಕಾಶವನ್ನು ನಿಮಗೆ ತರುವ ಪ್ರವಾದಿಯ ಮೇಲೆ ವಿಶ್ವಾಸವಿಡಬೇಕು. (ಅರ್ಥಾತ್ ಅಲ್ಲಾಹನ ಕಡೆಯಿಂದ ಅವನ ಪ್ರವಾದಿಯವರು ನೀಡಿದ ಬೋಧನೆಯ ಔಚಿತ್ಯವು ನಿಮಗೆ ಅರ್ಥವಾಗಲಿ, ಆಗದಿರಲಿ, ಅದು ಪರಮ ಸತ್ಯವೆಂಬ ಬಗ್ಗೆ ಅಚಂಚಲ ವಿಶ್ವಾಸವಿರಿಸಬೇಕು.) 2) ವಿಶ್ವಾಸವಿರಿಸಿದ ಬಳಿಕ ಅದನ್ನು ಅನುಸರಿಸಬೇಕು. ಏಕೆಂದರೆ ಅನುಸರಣೆಯ ಹೊರತು ಅದರ ಪರಿಣಾಮ ಸಿಗದು. ಉದಾ: ಒಬ್ಬನು ನಿಮಗೆ ವಿಷವನ್ನು ತೋರಿಸಿ ಇದನ್ನು ಸೇವಿಸಬೇಡಿರಿ ಎಂದಾಗ, ಹೌದು ನೀವು ಹೇಳುವುದು ಸರಿ ಇದು ವಿಷವೇ- ಇದನ್ನು ಸೇವಿಸಿದರೆ ನಾನು ಸಾಯುವುದು ಖಂಡಿತ ಎಂದು ಹೇಳುತ್ತಾ ನೀವು ಅದನ್ನು ಸೇವಿಸಿ ಬಿಟ್ಟರೆ ಅದರ ಪರಿಣಾಮವು ನೀವು ತಿಳಿಯದೇ ಸೇವಿಸಿಬಿಟ್ಟರೆ ಆಗುವ ಪರಿಣಾಮವೇ ಆದೀತಲ್ಲವೇ? ಈ ರೀತಿ ತಿಳಿಯುವುದರಿಂದಲೂ ಒಪ್ಪುವುದರಿಂದಲೂ ಏನು ಪ್ರಯೋಜನ? ನೀವು ವಿಶ್ವಾಸ ವಿರಿಸಿದ ಬಳಿಕ ಆ ವಿಶ್ವಾಸದಂತೆ ಅನುಸರಿಸಿದಾಗ ಮಾತ್ರ ಫಲ ದೊರಕೀತು. ಆಜ್ಞೆ ಕೇಳಿದೊಡನೆ 'ನಾನದನ್ನು ಸತ್ಯವೆಂದು ನಂಬಿಕೊಂಡೆ' ಎಂದು ಕೇವಲ ಬಾಯಿಮಾತಿನಿಂದ ಹೇಳಿದರೆ ಸಾಲದು. ಅದರಂತೆ ಕಾರ್ಯವೆಸಗಬೇಕು. ನಿಷೇಧಿಸಿದುದನ್ನು ಕೇವಲ ಬಾಯಿಮಾತಿನಿಂದ ಮಾತ್ರ ತ್ಯಜಿಸಿದೆನೆಂದು ಹೇಳಿದರೆ ಸಾಲದು, ಅದರಿಂದ ಕಾರ್ಯತಃ ದೂರವಿರಬೇಕು. ಆದುದರಿಂದಲೇ ಅಲ್ಲಾಹನು,

اَطِيْعُوا اللّٰهَ وَاَطِيْعُوا الرَّسُوْلَ

"ನನ್ನ ಮತ್ತು ನನ್ನ ಸಂದೇಶವಾಹಕನ ಅನುಸರಣೆ ಮಾಡಿರಿ" (ಅಲ್ ಮಾಇದಃ: 92) ಎಂದೂ

وَاِنْ تُطِيْعُوْهُ تَهْتَدُوْا

"ನನ್ನ ಸಂದೇಶವಾಹಕನ ಅನುಸರಣೆ ಮಾಡಿದಾಗ ಮಾತ್ರ ನೀವು ಸನ್ಮಾರ್ಗದಲ್ಲಿರುವಿರಿ" (ಅನ್ನೂರ್: 54) ಎಂದೂ,

فَلْيَحْذَرِ الَّذِيْنَ يُخَالِفُوْنَ عَنْ اَمْرِهٖٓ اَنْ تُصِيْبَهُمْ فِتْنَةٌ

"ನಮ್ಮ ಸಂದೇಶವಾಹಕರ ಆಜ್ಞೆಯನ್ನು ಉಲ್ಲಂಘಿಸುವವರು ಮಹಾ ವಿಪತ್ತಿಗೊಳಗಾಗಬೇಕಾದೀತೆಂದು ಭಯಪಡಬೇಕು" (ಅನ್ನೂರ್: 63) ಎಂದೂ ಹೇಳಿರುವನು.

ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಅನುಸರಣೆಯ ತಾತ್ಪರ್ಯ

ಬಂಧುಗಳೇ,

ನಾನು ಪದೇಪದೇ ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಅನುಸರಣೆ ಮಾಡಬೇಕೆಂದ ಮಾತ್ರಕ್ಕೆ ಬೇರೆ ಯಾರ ಮಾತನ್ನೂ ಕೇಳಲೇ ಬಾರದೆಂದಲ್ಲ. ಅದರ ಅರ್ಥ ನೀವು ಕಣ್ಮುಚ್ಚಿ ಯಾರನ್ನೂ ಅನುಸರಿಸಬಾರದೆಂದೂ, ಯಾರಾದರೂ ಏನಾದರೊಂದು ಕೆಲಸ ಮಾಡಲು ನಿಮ್ಮೊಡನೆ ಹೇಳಿದಾಗ ಅದು ಅಲ್ಲಾಹ್ ಮತ್ತು ಪ್ರವಾದಿಯವರ(ಸ) ಆದೇಶ ಗಳಿಗನುಸಾರವಾಗಿದೆಯೇ ಅಥವಾ ಅದರ ವಿರುದ್ಧವಾಗಿದೆಯೇ ಎಂದು ಮಾತ್ರ ತಿಳಿದು ಕೊಳ್ಳಬೇಕೆಂದಾಗಿದೆ. ಅವರ ಆದೇಶಗಳಿಗೆ ಅನುಸಾರವಾಗಿದೆಯೆಂದಾದರೆ ಅದನ್ನು ಅಗತ್ಯವಾಗಿ ಮಾಡಲೇಬೇಕು. ಆಗ ನೀವು ಆ ವ್ಯಕ್ತಿಯನ್ನು ಅನುಸರಿಸಿದಂತಾಗುವುದಿಲ್ಲ. ಅದು ನಿಜವಾಗಿ ಅಲ್ಲಾಹ್ ಮತ್ತು ಪ್ರವಾದಿಯವರ ಅನುಸರಣೆಯೇ ಆಗಿರುತ್ತದೆ.

ಆದರೆ ಅವನು ಅಲ್ಲಾಹ್ ಮತ್ತು ಪ್ರವಾದಿಯವರ ಆದೇಶಗಳಿಗೆ ವಿರುದ್ಧವಾದ ಕೆಲಸಗಳನ್ನು ಮಾಡಲು ಹೇಳಿದರೆ ಅವನು ಯಾರೇ ಆಗಲಿ, ಅವನ ಮಾತಿನಂತೆ ನಡೆಯಬೇಡಿರಿ. ಏಕೆಂದರೆ ಅಲ್ಲಾಹನ ಮತ್ತು ಪ್ರವಾದಿಯವರ ಆದೇಶಗಳಿಗೆ ವಿರುದ್ಧವಾದ ಯಾವ ಕಾರ್ಯವನ್ನೂ ನೀವು ಮಾಡುವುದು ಧರ್ಮಸಮ್ಮತವಲ್ಲ.

ಅಲ್ಲಾಹನು ಸ್ವತಃ ನಿಮ್ಮ ಮುಂದೆ ಬಂದು ನಿಮಗೆ ಆಜ್ಞೆ ಆದೇಶಗಳನ್ನೀಯುವ ಕ್ರಮವಿಟ್ಟುಕೊಂಡಿಲ್ಲವೆಂಬುದನ್ನು ನೀವು ತಿಳಿದಿರಬೇಕು. ತನ್ನ ಆಜ್ಞೆ ಆದೇಶಗಳನ್ನು ಆತನು ತನ್ನ ಪ್ರವಾದಿಯವರ ಮೂಲಕವೇ ನಮಗೆ ಕಳುಹಿಸಿದ್ದಾನೆ. ಪ್ರವಾದಿ ಮುಹಮ್ಮದ್(ಸ) ಅವರು ಕೂಡಾ ಸುಮಾರು ಹದಿನಾಲ್ಕು ಶತಮಾನಗಳ ಹಿಂದೆಯೇ ಕಾಲವಾಗಿದ್ದಾರೆ. ಅವರ

ಮೂಲಕ ಅಲ್ಲಾಹನು ನಮಗೆ ನೀಡಿದ ಆಜ್ಞೆ ಆದೇಶಗಳೆಲ್ಲಾ ಪವಿತ್ರ ಕುರ್‌ಆನ್ ಮತ್ತು ಹದೀಸ್‌ಗಳಲ್ಲಿವೆ. ಕುರ್‌ಆನ್ ಮತ್ತು ಹದೀಸ್‌ಗಳು ಸ್ವತಃ ಮಾತಾಡುವ, ಚಲಿಸುವ ಹಾಗೂ ಅಪ್ಪಣೆ ಕೊಡುವ ಸಾಧನಗಳಲ್ಲ. ಅವು ಬಂದು ನಮಗೆ ವಿಧಿ ನಿಷೇಧಗಳ ಅಪ್ಪಣೆ ಕೊಡಲಾರವು. ಕುರ್‌ಆನ್ ಮತ್ತು ಹದೀಸ್‌ಗಳ ಆದೇಶದ ಪ್ರಕಾರ ನಿಮ್ಮನ್ನು ನಡೆಸುವವರಂತೂ ಇತರ ಮಾನವರೇ ಆಗಿರುವರು. ಆದುದರಿಂದ ಇತರರನ್ನು ಅನುಸರಿಸದೆ ಗತ್ಯಂತರವಿಲ್ಲ. ಆದರೆ ಯಾರನ್ನೂ ಕಣ್ಮುಚ್ಚಿ ಹಿಂಬಾಲಿಸದೆ, ಅವರು ನಿಮ್ಮನ್ನು ಅಲ್ಲಾಹ್ ಮತ್ತು ಪ್ರವಾದಿಯವರ ಆದೇಶಗಳಂತೆ ನಡೆಸುತ್ತಿದ್ದಾರೆಯೇ ಎಂಬುದನ್ನು ಗಮನಿಸುತ್ತಲಿರಬೇಕಾದುದು ಅತಿ ಅಗತ್ಯ. ಅವರು ನಿಮ್ಮನ್ನು ಕುರ್‌ಆನ್ ಮತ್ತು ಹದೀಸ್‌ಗಳ ಪ್ರಕಾರ ನಡೆಸಿದರೆ ಅವರ ಅನುಸರಣೆ ನಿಮ್ಮ ಮೇಲೆ ಕಡ್ಡಾಯವಾಗಿದೆ. ಅವುಗಳಿಗೆ ವಿರುದ್ಧವಾಗಿ ನಡೆಸಿದರೆ ಅವರ ಅನುಸರಣೆ ನಿಮಗೆ ನಿಷಿದ್ಧ.

ದೀನ್ ಮತ್ತು ಶರೀಅತ್
(ಧರ್ಮ ಮತ್ತು ಧರ್ಮಶಾಸ್ತ್ರ)

ಮುಸ್ಲಿಮ್ ಬಾಂಧವರೇ!

ಧರ್ಮದ ವಿಷಯ ಮಾತನಾಡುವಾಗ ಹೆಚ್ಚಾಗಿ 'ದೀನ್' ಮತ್ತು 'ಶರೀಅತ್' (ಧರ್ಮ ಮತ್ತು ಧರ್ಮಶಾಸ್ತ್ರ) ಎಂಬ ಎರಡು ಪದಗಳನ್ನು ನೀವು ಕೇಳುತ್ತೀರಿ. ಆದರೆ 'ದೀನ್' ಎಂಬುದರ ಅರ್ಥವೇನು? 'ಶರೀಅತ್' ಎಂಬುದರ ತಾತ್ಪರ್ಯವೇನೆಂದು ಸರಿಯಾಗಿ ತಿಳಿದವರು ಅತಿ ವಿರಳ. ಅವಿದ್ಯಾವಂತರ ಮಾತಂತಿರಲಿ. ಅನೇಕ ವಿದ್ಯಾವಂತ ಮೌಲ್ವಿಗಳೂ ಈ ಎರಡು ಪದಗಳ ಸರಿಯಾದ ತಾತ್ಪರ್ಯವನ್ನೂ ಅವುಗಳೊಳಗಿನ ವ್ಯತ್ಯಾಸವನ್ನೂ ತಿಳಿದಿರುವುದಿಲ್ಲ. ಇದರ ಪರಿಣಾಮವಾಗಿ 'ದೀನ'ನ್ನು 'ಶರೀಅತ್' ಎಂದೂ 'ಶರೀಅತ'ನ್ನು 'ದೀನ್' ಎಂದೂ ಭಾವಿಸುತ್ತಾರೆ. ಇದರಿಂದ ತುಂಬಾ ಹಾನಿಯೂ ಇದೆ. ಇಂದು ನಾನು ಸರಳ ಮಾತುಗಳಲ್ಲಿ ಆ ಎರಡು ಪದಗಳ ತಾತ್ಪರ್ಯಗಳನ್ನು ವಿವರಿಸುವೆನು.

'ದೀನ್' ಎಂಬ ಪದದ ಅರ್ಥ

'ದೀನ್' ಎಂಬ ಪದಕ್ಕೆ ಅನೇಕ ಅರ್ಥಗಳಿವೆ. i) ಪ್ರತಿಷ್ಠೆ, ಒಡೆತನ, ಅಧಿಕಾರ, ಸಾಮ್ರಾಜ್ಯ, ದೊರೆತನ, ಸರ್ವಾಧಿಕಾರ. ii) ಇದಕ್ಕೆ ವ್ಯತಿರಿಕ್ತವಾದ ಇನ್ನೊಂದರ್ಥ- ಅಧೀನತೆ, ವಿಧೇಯತೆ, ದಾಸ್ಯ, ಅನುಸರಣೆ, ಗುಲಾಮತನ.. iii) ವಿಚಾರಣೆ ನಡೆಸುವುದು, ತೀರ್ಪು ನೀಡುವುದು, ಕರ್ಮಗಳ ಸತ್ಫಲ ಮತ್ತು ದುಷ್ಫಲ ಲಭಿಸುವುದು. ಪವಿತ್ರ ಕುರ್‌ಆನಿನಲ್ಲಿ 'ದೀನ್' ಎಂಬ ಪದ ಈ ಮೂರು ಅರ್ಥಗಳಲ್ಲೇ ಬಂದಿದೆ.

إِنَّ الدِّينَ عِندَ اللَّهِ الْإِسْلَامُ

"ಅಲ್ಲಾಹನ ಬಳಿ 'ದೀನ್' ಇಸ್ಲಾಮ್ ಮಾತ್ರ." (ಆಲಿ ಇಮ್‌ರಾನ್: 19) ಅಂದರೆ ಮಾನವನು ಅಲ್ಲಾಹನನ್ನು ಮಾತ್ರ ಗೌರವಾರ್ಹನೆಂದು ಒಪ್ಪಿಕೊಳ್ಳಬೇಕು. ಅವನ ಹೊರತು ಇನ್ನಾರ ಮುಂದೆಯೂ ತನ್ನ ದೈನ್ಯತೆಯನ್ನು ಪ್ರದರ್ಶಿಸಬಾರದು. ಅಲ್ಲಾಹನನ್ನು ಮಾತ್ರ ತನ್ನ ಒಡೆಯ, ಮಾಲಿಕ, ಅಧಿಪತಿ ಎಂದೆಣಿಸಬೇಕು. ಅವನ ಹೊರತು ಯಾರ ಅಧೀನನೂ ದಾಸನೂ

ವಿಧೇಯನೂ ಆಗಬಾರದು. ಅಲ್ಲಾಹನನ್ನು ಮಾತ್ರ ತನ್ನ ವಿಚಾರಣೆಗೈಯುವವ ಹಾಗೂ ಪುರಸ್ಕಾರ, ಶಿಕ್ಷೆಗಳನ್ನು ನೀಡುವವನೆಂದೂ ಭಾವಿಸಬೇಕು. ಇತರ ಯಾರ ವಿಚಾರಣೆಗೂ ಭಯಪಡಬಾರದು. ಯಾರ ಪುರಸ್ಕಾರವನ್ನೂ ಆಶಿಸಬಾರದು. ಯಾರ ಶಿಕ್ಷೆಗೂ ಭಯಪಡಬಾರದು. ಇಂತಹ ದೀನ್‌ನ (ಜೀವನ ಪದ್ಧತಿಯ) ಹೆಸರೇ 'ಇಸ್ಲಾಮ್' ಎಂದಾಗಿದೆ. ಒಂದು ವೇಳೆ ಮಾನವನು ಅಲ್ಲಾಹನ ಹೊರತು ಬೇರೆ ಯಾರನ್ನಾದರೂ ಅವನಿಗಿಂತ ಅಧಿಕ ಗೌರವಾರ್ಹ, ನೈಜ ಒಡೆಯ, ನೈಜ ಪ್ರಭು, ನಿಜವಾದ ಪುರಸ್ಕಾರ, ಶಿಕ್ಷೆಗಳನ್ನು ನೀಡುವ ವನೆಂದು ತಿಳಿದು ಅವನ ಮುಂದೆ ಬಾಗಿ ಅವನ ದಾಸ್ಯ-ಆರಾಧನೆಯನ್ನೆಸಗಿದರೆ, ಅವನ ಆಜ್ಞೆಗಳನ್ನು ಪಾಲಿಸಿದರೆ, ಅವನ ಪುರಸ್ಕಾರವನ್ನು ಬಯಸಿದರೆ, ಅವನ ಶಿಕ್ಷೆಯ ಬಗ್ಗೆ ಭೀತನಾದರೆ ಅದು ಮಿಥ್ಯ ದೀನ್ (ಅಧರ್ಮ) ಆಗುವುದು. ಅಲ್ಲಾಹನು ಇಂತಹ ದೀನನ್ನು ಎಂದಿಗೂ ಸ್ವೀಕರಿಸಲಾರನು. ಏಕೆಂದರೆ ಇದು ವಾಸ್ತವಿಕತೆಗೆ ವಿರುದ್ಧವಾಗಿದೆ. ಈ ಇಡೀ ವಿಶ್ವದಲ್ಲಿ ಅಲ್ಲಾಹನ ಹೊರತು ಬೇರೆ ಯಾರೂ ನಿಜವಾಗಿ ಗೌರವಾರ್ಹನಿಲ್ಲ. ಬೇರೆ ಯಾರ ಸರ್ವಾಧಿಕಾರ ಮತ್ತು ಸಾರ್ವಭೌಮತೆಯೂ ಇಲ್ಲ. ಮಾನವರನ್ನು ಸೃಷ್ಟಿಸಿರುವುದು ಇತರರ ದಾಸ್ಯ-ಆರಾಧನೆಗೂ ಅಲ್ಲ. ಆ ಏಕೈಕ ನೈಜ ಮಾಲಿಕನ ಹೊರತು ಪುರಸ್ಕಾರ ನೀಡುವವ ರಾಗಲಿ ಶಿಕ್ಷೆ ನೀಡುವವರಾಗಲಿ ಬೇರೆ ಯಾರೂ ಇಲ್ಲ. ಇದೇ ಮಾತನ್ನು ಪವಿತ್ರ ಕುರ್‌ಆನಿನಲ್ಲಿ ಇತರ ಕಡೆ ಹೀಗೆ ವಿವರಿಸಲಾಗಿದೆ-

وَمَنْ يَّبْتَغِ غَيْرَ الْإِسْلَامِ دِيْنًا فَلَنْ يُّقْبَلَ مِنْهُ ۚ وَهُوَ فِي الْاٰخِرَةِ مِنَ الْخٰسِرِيْنَ ﴿٨٥﴾

"ಯಾರಾದರೂ ಈ ವಿಧೇಯತೆಯ (ಇಸ್ಲಾಮ್) ಹೊರತು ಯಾವುದಾದರೂ ಇತರ ಪದ್ಧತಿಯನ್ನು ಸ್ವೀಕರಿಸಲಿಚ್ಛಿಸಿದರೆ, ಅವನ ಆ ಪದ್ಧತಿಯನ್ನು ಎಷ್ಟು ಮಾತ್ರಕ್ಕೂ ಮಾನ್ಯ ಮಾಡಲಾಗದು ಮತ್ತು ಪರಲೋಕದಲ್ಲಿ ಅವನು ವಿಫಲನೂ ಹತಾಶನೂ ಆಗಿ ತೀರುವನು."

(ಆಲಿ ಇಮ್‌ರಾನ್: 85)

ಏಕೆಂದರೆ-

وَمَآ اُمِرُوْٓا اِلَّا لِيَعْبُدُوا اللّٰهَ مُخْلِصِيْنَ لَهُ الدِّيْنَ ۙ حُنَفَآءَ وَيُقِيْمُوا الصَّلٰوةَ وَيُؤْتُوا الزَّكٰوةَ وَذٰلِكَ دِيْنُ الْقَيِّمَةِ ﴿٥﴾

"ಅವರಿಗೆ ನೀಡಲಾಗಿದ್ದ ಆದೇಶವು- ಅವರು ತಮ್ಮ ಧರ್ಮವನ್ನು ನಿಷ್ಕಳಂಕವಾಗಿ ಅಲ್ಲಾಹನಿಗೆ ಮಾತ್ರ ಮೀಸಲಾಗಿಟ್ಟು, ಏಕನಿಷ್ಠೆಯಿಂದ ಅಲ್ಲಾಹನ ದಾಸ್ಯ ಮಾಡಬೇಕು, ನಮಾಝನ್ನು ಸಂಸ್ಥಾಪಿಸಬೇಕು ಮತ್ತು ಝಕಾತನ್ನು ನೀಡಬೇಕು- ಎಂಬುವರ ಹೊರತು ಬೇರೇನೂ ಆಗಿರಲಿಲ್ಲ. ಇದುವೇ ಅತ್ಯಂತ ಸರಿಯಾದ ಧರ್ಮ." (ಅಲ್ ಬಯ್ಯಿನ: 5)

أَفَغَيْرَ دِينِ اللَّهِ يَبْغُونَ وَلَهُ أَسْلَمَ مَنْ فِي السَّمَاوَاتِ وَالْأَرْضِ طَوْعًا وَكَرْهًا وَإِلَيْهِ يُرْجَعُونَ ﴿٨٣﴾

"ಇವರೇನು ಅಲ್ಲಾಹನ ಅನುಸರಣಾ ರೀತಿಯನ್ನು (ಧರ್ಮ) ತ್ಯಜಿಸಿ ಬೇರೆ ಯಾವುದಾದರೂ ರೀತಿಯನ್ನನುಸರಿಸಲು ಇಷ್ಟ ಪಡುತ್ತಾರೆಯೇ? ವಸ್ತುತಃ ಆಕಾಶಗಳ ಮತ್ತು ಭೂಮಿಯ ಸಕಲ ವಸ್ತುಗಳೂ ಬಯಸಿಯೋ ಬಯಸದೆಯೋ ಅಲ್ಲಾಹನ ಆಜ್ಞಾಪಾಲಕಗಳಾಗಿ (ಮುಸ್ಲಿಮ್‌ಗಳಾಗಿ)ಯೇ ಇವೆ ಮತ್ತು ಸರ್ವರಿಗೂ ಅವನ ಕಡೆಗೇ ಮರಳಲಿಕ್ಕಿದೆ." (ಆಲಿ ಇಮ್‌ರಾನ್: 83)

هُوَ الَّذِي أَرْسَلَ رَسُولَهُ بِالْهُدَىٰ وَدِينِ الْحَقِّ لِيُظْهِرَهُ عَلَى الدِّينِ كُلِّهِ وَلَوْ كَرِهَ الْمُشْرِكُونَ ﴿٣٣﴾

"ತನ್ನ ರಸೂಲರನ್ನು ಸನ್ಮಾರ್ಗ ಮತ್ತು ಸತ್ಯಧರ್ಮದೊಂದಿಗೆ ಕಳುಹಿಸಿದಾತನು ಅಲ್ಲಾಹನೇ. (ಇದು) ಅದನ್ನು ಸಕಲ ಧರ್ಮಗಳ ಮೇಲೆ ಉತ್ಥಾನಗೊಳಿಸಲಿಕ್ಕಾಗಿ. ಮುಶ್ರಿಕ(ಬಹುದೇವವಿಶ್ವಾಸಿ)ರಿಗೆ ಇದು ಎಷ್ಟೇ ಅಪ್ರಿಯವಾಗಿರಲಿ." (ಅತ್ತೌಬಃ 33)

وَقَاتِلُوهُمْ حَتَّىٰ لَا تَكُونَ فِتْنَةٌ وَيَكُونَ الدِّينُ كُلُّهُ لِلَّهِ فَإِنِ انتَهَوْا فَإِنَّ اللَّهَ بِمَا يَعْمَلُونَ بَصِيرٌ ﴿٣٩﴾

"ಓ ಸತ್ಯವಿಶ್ವಾಸಿಗಳೇ, 'ಫಿತ್ನ'(ಕ್ಷೋಭೆ) ಅಳಿದು ಹೋಗುವ ವರೆಗೂ 'ಧರ್ಮ'(ದೀನ್) ಸರ್ವಸಂಪೂರ್ಣವಾಗಿ ಅಲ್ಲಾಹನಿಗಾಗಿ ಆಗುವ ವರೆಗೂ ಈ ಸತ್ಯನಿಷೇಧಿಗಳೊಡನೆ ಹೋರಾಡಿರಿ. ಹಾಗೆ ಅವರು 'ಪೀಡನ'ದಿಂದ ತಡೆದು ನಿಂತರೆ ಅವರ ಕರ್ಮಗಳನ್ನು ವೀಕ್ಷಿಸುವವನು ಅಲ್ಲಾಹನಾಗಿರುತ್ತಾನೆ." (ಅಲ್ ಅನ್‌ಫಾಲ್, 8:39)

ಮೇಲಿನ ವಿವರಣೆಗಳಿಂದ 'ದೀನ್' ಎಂಬುದರ ತಾತ್ಪರ್ಯವನ್ನು ಗ್ರಹಿಸಬಹುದು. ಅಲ್ಲಾಹನನ್ನು ಮಾತ್ರ ಒಡೆಯ, ಮಾಲಿಕ ಮತ್ತು ಸರ್ವಾಧಿಕಾರಿಯೆಂದು ಒಪ್ಪಿಕೊಳ್ಳುವುದು. ಅಲ್ಲಾಹನ ದಾಸ್ಯ-ಆರಾಧನೆ ಮತ್ತು ಉಪಾಸನೆಯನ್ನು ಮಾತ್ರ ಮಾಡುವುದು, ಅಲ್ಲಾಹನ ವಿಚಾರಣೆ ಮತ್ತು ಶಿಕ್ಷೆಯ ಬಗ್ಗೆ ಹೆದರುವುದು, ಹಾಗೂ ಅವನ ಆಸೆ ಪುರಸ್ಕಾರಗಳನ್ನು ಮಾತ್ರ ಇರಿಸುವುದು- ಇದನ್ನೇ 'ದೀನ್' ಎನ್ನುತ್ತಾರೆಂದು ನಿಮಗೆ ಮನವರಿಕೆಯಾಗಿರಬಹುದು.

ಅಲ್ಲಾಹನ ಆಜ್ಞೆಗಳುಅವನ ಗ್ರಂಥ ಮತ್ತು ಸಂದೇಶವಾಹಕರ ಮೂಲಕವೇ ಮಾನವರಿಗೆ ತಲಪುತ್ತವೆ. ಆದುದರಿಂದ ಪ್ರವಾದಿಯವರನ್ನು ಅಲ್ಲಾಹನ ಪ್ರವಾದಿ ಎಂದೂ, ಗ್ರಂಥವನ್ನು ಅಲ್ಲಾಹನ ಗ್ರಂಥವೆಂದೂ ಒಪ್ಪಿಕೊಂಡು ಅದನ್ನು ಅನುಸರಿಸುವುದೂ ದೀನ್‌ನಲ್ಲಿ ಸೇರುತ್ತದೆ. ಪವಿತ್ರ ಕುರ್‌ಆನ್ ಹೇಳುವುದನ್ನು ನೋಡಿರಿ:

يَٰبَنِيٓ ءَادَمَ إِمَّا يَأْتِيَنَّكُمْ رُسُلٌ مِّنكُمْ يَقُصُّونَ عَلَيْكُمْ ءَايَٰتِي فَمَنِ ٱتَّقَىٰ
وَأَصْلَحَ فَلَا خَوْفٌ عَلَيْهِمْ وَلَا هُمْ يَحْزَنُونَ ۝

"ಓ ಆದಮರ ಸಂತತಿಯುವರೇ, ನಮ್ಮ ವಚನಗಳನ್ನು ಹೇಳಿ ಕೊಡುತ್ತಿರುವ ಸಂದೇಶವಾಹಕರು ಸ್ವತಃ ನಿಮ್ಮ ಮಧ್ಯೆಯಿಂದಲೇ ನಿಮ್ಮ ಬಳಿಗೆ ಬಂದರೆ, ಆಜ್ಞೋಲ್ಲಂಘನೆ ಮಾಡದವನು ಹಾಗೂ ತನ್ನನ್ನು ತಾನೇ ಸಂಸ್ಕರಿಸಿಕೊಳ್ಳುವವನಿಗೆ ಯಾವುದೇ ಭಯ ಮತ್ತು ವ್ಯಥೆಯ ಸಂಭವವೇ ಇಲ್ಲವೆಂಬುದನ್ನು ಅರಿತು ಕೊಳ್ಳಿರಿ (ಎಂಬ ವಿಷಯವನ್ನು ಅಲ್ಲಾಹನು ಸೃಷ್ಟಿಯ ಆರಂಭದಲ್ಲೇ ಸ್ಪಷ್ಟವಾಗಿ ಹೇಳಿದ್ದನು.)" (ಅಲ್ ಅಅ್‌ರಾಫ್: 35)

ಇದರಿಂದ, ಅಲ್ಲಾಹನು ಪ್ರತಿಯೊಬ್ಬ ಮಾನವನಿಗೆ ನೇರವಾಗಿ ತನ್ನ ಆದೇಶಗಳನ್ನು ಕಳುಹಿಸುವುದಿಲ್ಲವೆಂದೂ ಅವುಗಳನ್ನು ತನ್ನ ಸಂದೇಶವಾಹಕರ ಮೂಲಕ ಕಳುಹಿಸುತ್ತಾನೆಂದೂ ತಿಳಿಯಿತು. ಆದುದರಿಂದ ಅಲ್ಲಾಹನನ್ನು ನೈಜ ಶಾಸನಕರ್ತನೆಂದು ಒಪ್ಪಿಕೊಳ್ಳುವಾತನು ಅವನ ಆಜ್ಞಾಪಾಲನೆಯನ್ನು ಅವನ ಸಂದೇಶವಾಹಕರ ಅನುಸರಣೆಯ ಹಾಗೂ ಅವರ ಮೂಲಕ ಬಂದ ಆಜ್ಞೆಗಳನ್ನು ಪಾಲಿಸುವ ಮೂಲಕ ಮಾತ್ರ ಮಾಡಬಲ್ಲನು. ಇದನ್ನೇ 'ದೀನ್' (ಧರ್ಮ) ಎನ್ನುವುದು.

'ಶರೀಅತ್' ಎಂದರೇನು?

ಇನ್ನು 'ಶರೀಅತ್' ಎಂದರೇನೆಂಬುದನ್ನು ಹೇಳುವೆನು: 'ಶರೀಅತ್' ಎಂದರೆ ಪದ್ಧತಿ ಅಥವಾ ದಾರಿ. ನೀವು ಅಲ್ಲಾಹನನ್ನು ನೈಜ ಶಾಸನಕರ್ತನೆಂದು ಒಪ್ಪಿಕೊಂಡು ಅವನ ದಾಸ್ಯ-ಅನುಸರಣೆಯನ್ನು ಸ್ವೀಕರಿಸಿದ ಬಳಿಕ, ಸಂದೇಶವಾಹಕರು ಪೂರ್ಣ ಅಧಿಕಾರ ಪಡೆದವರೆಂದೂ, ದಿವ್ಯ ಗ್ರಂಥವು ಆತನ ಕಡೆಯಿಂದಲೇ ಬಂದುದೆಂದೂ ಅಂಗೀಕರಿಸಿದಾಗ ನೀವು ದೀನ್‌ನಲ್ಲಿ ಸೇರಿದಿರಿ. ತರುವಾಯ ನೀವು ಯಾವ ವಿಧಾನದಲ್ಲಿ ಅಲ್ಲಾಹನ ಉಪಾಸನೆ ಮಾಡಬೇಕೋ, ಅವನ ಆಜ್ಞಾಪಾಲನೆ ಮಾಡಲಿಕ್ಕಾಗಿ ಯಾವ ಮಾರ್ಗವನ್ನು ಅನುಸರಿಸಬೇಕೋ ಅದನ್ನು 'ಶರೀಅತ್' ಎನ್ನುತ್ತಾರೆ. ಈ ವಿಧಾನ ಹಾಗೂ ಮಾರ್ಗವನ್ನು ಅಲ್ಲಾಹನು ತನ್ನ ಸಂದೇಶವಾಹಕರ ಮೂಲಕವೇ ತೋರಿಸುತ್ತಾನೆ. ನಿಮ್ಮೊಡೆಯನ ಉಪಾಸನೆ ಹೇಗೆ ಮಾಡಬೇಕು, ಶೌಚದ ಕ್ರಮ ಏನು, ಪುಣ್ಯ ಹಾಗೂ ನಿಷ್ಠೆಯ ಮಾರ್ಗ ಯಾವುದು, ಇತರರ ಹಕ್ಕು ಸಂದಾಯ ಮಾಡುವ ರೀತಿ ಹೇಗೆ, ವ್ಯವಹಾರಗಳನ್ನು ನಡೆಸುವ ಕ್ರಮ ಯಾವುದು, ಬಾಳುವೆ ಹೇಗೆ ನಡೆಸಬೇಕು ಎಂಬಿತ್ಯಾದಿ ವಿಷಯಗಳನ್ನು 'ಶರೀಅತ್' ತೋರಿಸಿಕೊಡುತ್ತದೆ. ಆದರೆ ವ್ಯತ್ಯಾಸವೇನೆಂದರೆ 'ದೀನ್' ಎಂದೆಂದೂ ಒಂದೇ ಆಗಿತ್ತು ಈಗಲೂ ಅದೇ ಆಗಿದ್ದು ಒಂದೇ ಆಗಿದೆ. ಆದರೆ 'ಶರೀಅತ್'ಗಳು ಹಲವು ಬಂದುವು, ಹಲವಾರು ನಿರಸ್ತಗೊಳಿಸಲ್ಪಟ್ಟುವು. ಇನ್ನು ಹಲವು ಬದಲಾಯಿಸಲ್ಪಟ್ಟುವು. ಅವುಗಳ ಬದಲಾವಣೆ ಯಿಂದ 'ದೀನ್' ಎಂದೂ ಬದಲಾಗಲಿಲ್ಲ. ಹಝ್ರತ್ ನೂಹ್‌ರವರ(ಅ)

ಧರ್ಮ- ಹ. ಇಬ್ರಾಹೀಮ್, ಮೂಸಾ, ಶುಐಬ್, ಸ್ವಾಲಿಹ್, ಹೂದ್(ಅ) ಅವರ ಧರ್ಮವೇ ಆಗಿತ್ತು. ಮುಹಮ್ಮದ್‌ರವರ(ಸ) ಧರ್ಮ ಕೂಡ ಅದೇ ಆಗಿದೆ. ಆದರೆ ಅವರೆಲ್ಲರ ಶರೀಅತ್‌ಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿದ್ದುವು. ನಮಾಝ್ ಮತ್ತು ಉಪವಾಸದ ವಿಧಾನಗಳು ಒಂದು ಶರೀಅತ್‌ನಲ್ಲಿ ಒಂದು ತರಹ ಇದ್ದರೆ, ಇನ್ನೊಂದರಲ್ಲಿ ಇನ್ನೊಂದು ತರಹ ಹಲಾಲ್-ಹರಾಮ್(ವಿಧಿ-ನಿಷೇಧ)ಗಳ ಆಜ್ಞೆಗಳು, ಶೌಚದ ಕ್ರಮಗಳು, ನಿಕಾಹ್, ತಲಾಕ್ ಮತ್ತು ವಾರೀಸು ಹಕ್ಕು ವಿತರಣೆಯ ನಿಯಮಗಳು ಒಂದೊಂದು ಶರೀಅತ್‌ನಲ್ಲಿ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಬೇರೆ ಬೇರೆಯಾಗಿದ್ದುವು. ಆದರೂ ನೂಹ್‌ರವರ(ಅ) ಅನುಯಾಯಿಗಳೂ ಇಬ್ರಾಹೀಮ್‌ರವರ(ಅ) ಅನುಯಾಯಿಗಳೂ ಮೂಸಾರವರ(ಅ) ಅನುಯಾಯಿಗಳೂ ಮುಸ್ಲಿಮರೇ ಆಗಿದ್ದರು. ನಾವು ಮುಸ್ಲಿಮರೇ ಆಗಿರುತ್ತೇವೆ, ಏಕೆಂದರೆ ಎಲ್ಲರ 'ದೀನ್' ಒಂದೇ ಆಗಿದೆ. 'ಶರೀಅತ್'ನ ವಿಧಿಗಳ ಮತ್ತು ಆಚಾರ ವಿಧಾನಗಳ ವ್ಯತ್ಯಾಸದಿಂದ 'ದೀನ್'ನಲ್ಲಿ ವ್ಯತ್ಯಾಸ ಉಂಟಾಗುವುದಿಲ್ಲ. 'ದೀನ್' ಎಂದೆಂದೂ ಒಂದೇ ಆಗಿರುತ್ತದೆ.

'ಶರೀಅತ್'ಗಳ ಭಿನ್ನತೆಯ ಸ್ವರೂಪಗಳು

ಈ ವ್ಯತ್ಯಾಸವನ್ನು ಒಂದು ಉದಾಹರಣೆಯಿಂದ ಗ್ರಹಿಸಬಹುದು. ಒಬ್ಬ ಯಜಮಾನನ ಬಳಿ ಅನೇಕ ನೌಕರರಿದ್ದಾರೆ. ಅವರ ಪೈಕಿ ಒಬ್ಬನು ಯಜಮಾನನನ್ನು ಯಜಮಾನನೆಂದೇ ಒಪ್ಪಿಕೊಳ್ಳುವುದಿಲ್ಲ. ಅವನ ಸೇವೆಗೆ ತಾನು ಬದ್ಧನೆಂದೇ ತಿಳಿಯುವುದಿಲ್ಲ. ಇವನು ಅವಿಧೇಯ ಮಾತ್ರವಲ್ಲ ನೌಕರರ ವರ್ಗದಿಂದಲೇ ಬಾಹಿರನಾದವನು. ಯಜಮಾನನನ್ನು ಯಜಮಾನನೆಂದು ಒಪ್ಪಿಕೊಳ್ಳುವ, ಅವನ ಆಜ್ಞಾಪಾಲನೆಯನ್ನು ತನ್ನ ಕರ್ತವ್ಯವೆಂದು ಬಗೆಯುವ ಮತ್ತು ಅವನ ಅವಿಧೇಯತೆಗೆ ಭಯಪಡುವವರೆಲ್ಲರೂ ಅವನ ನೌಕರ ವರ್ಗಕ್ಕೆ ಸೇರಿದವರಾಗಿರುತ್ತಾರೆ. ಸೇವೆ ಮಾಡುವ ವಿಧಾನಗಳು ಬೇರೆ ಬೇರೆಯಾಗಿದ್ದರೂ ಅವರೆಲ್ಲರೂ ನೌಕರರೇ ಆಗಿದ್ದಾರೆ. ಯಜಮಾನನು ಒಬ್ಬನನ್ನು ಒಂದು ತರದ ಸೇವೆಗೆ ನಿಯೋಜಿಸಿದರೆ, ಇನ್ನೊಬ್ಬನಿಂದ ಇನ್ನೊಂದು ಸೇವೆಯನ್ನು ಮಾಡಿಸುತ್ತಾನೆ. ಆಗ ಒಬ್ಬನಿಗೆ ತಾನು ಮಾತ್ರ ನೌಕರನೆಂದು ಇನ್ನೊಬ್ಬನು ನೌಕರನಲ್ಲವೆಂದು ಹೇಳುವ ಹಕ್ಕಿಲ್ಲ. ಇದೇ ರೀತಿಯಲ್ಲಿ ಯಜಮಾನನ ಅಪ್ಪಣೆಯನ್ನು ಒಬ್ಬನು ಒಂದು ರೀತಿಯಲ್ಲಿಯೂ ಇನ್ನೊಬ್ಬನು ಇನ್ನೊಂದು ರೀತಿಯಲ್ಲಿಯೂ ಅರ್ಥ ಮಾಡಿಕೊಳ್ಳುತ್ತಾರೆ. ಇಬ್ಬರೂ ತಾವು ಅರ್ಥಮಾಡಿಕೊಂಡ ಪ್ರಕಾರವೇ ಯಜಮಾನನ ಆಜ್ಞಾಪಾಲನೆಯನ್ನು ಪಾಲಿಸುತ್ತಾರೆ, ಆಗ ನೌಕರರೆಂಬ ನೆಲೆಯಲ್ಲಿ ಇಬ್ಬರೂ ಸಮಾನರೇ ಆಗುತ್ತಾರೆ. ಒಬ್ಬನು ಯಜಮಾನನ ಆಜ್ಞೆಯ ಇಂಗಿತವನ್ನು ಅರಿತು ಕೊಳ್ಳುವುದರಲ್ಲಿ ತಪ್ಪದಿರಬಹುದು, ಇನ್ನೊಬ್ಬನು ತಪ್ಪಿರಬಹುದು. ಆದರೆ ಇಬ್ಬರೂ ಆಜ್ಞಾಪಾಲನೆಯನ್ನು ಧಿಕ್ಕರಿಸದೆ ಇರುವುದರಿಂದ ಯಾರಿಗೂ ನೀನು ಅಪರಾಧಿ ಅಥವಾ ನೀನು ಯಜಮಾನನ ನೌಕರಿಯಿಂದ ವಜಾಗೊಳಿಸಲ್ಪಟ್ಟಿರುವಿ ಎಂದು ಪರಸ್ಪರ ಹೇಳುವ ಹಕ್ಕಿಲ್ಲ.

ಪ್ರಸ್ತುತ ಉದಾಹರಣೆಯಿಂದ 'ದೀನ್' ಮತ್ತು 'ಶರೀಅತ್' (ಧರ್ಮ ಮತ್ತು ಧರ್ಮಶಾಸ್ತ್ರ)ಗಳ ವ್ಯತ್ಯಾಸವನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು. ಅಲ್ಲಾಹನು ಪ್ರವಾದಿ ಮುಹಮ್ಮದ್‌ರಿಗಿಂತ(ಸ) ಮೊದಲು ಅನೇಕ ಸಂದೇಶವಾಹಕರ ಮೂಲಕ ಅನೇಕ 'ಶರೀಅತ್'(ಧರ್ಮಶಾಸ್ತ್ರ)ಗಳನ್ನು ಕಲಿಸುತ್ತಲಿದ್ದನು. ಒಬ್ಬರಿಗೆ 'ಸೇವೆ'ಗೈಯುವ ಒಂದು ವಿಧಾನವನ್ನು ತೋರಿಸಿದರೆ, ಇನ್ನೊಬ್ಬರಿಗೆ ಇನ್ನೊಂದು ವಿಧಾನವನ್ನು ತೋರಿಸ ಲಾಯಿತು. ಆ ಎಲ್ಲಾ ವಿಧಾನಗಳ ಪ್ರಕಾರ ಮಾಲಿಕನನ್ನು ಅನುಸರಿಸಿದವರೆಲ್ಲಾ (ಅವರ ಸೇವಾ ವಿಧಾನಗಳು ಭಿನ್ನ ಭಿನ್ನವಾಗಿದ್ದರೂ) ಮುಸ್ಲಿಮರೇ ಆಗಿದ್ದರು. ಕೊನೆಗೆ ಮುಹಮ್ಮದ್(ಸ) ಆಗಮಿಸಿದರು. ಆಗ ಮಾಲಿಕನು 'ನಾವು ಹಿಂದಿನ ನೀತಿ ನಿಯಮಗಳನ್ನು ನಿರಸ್ತಗೊಳಿಸಿರುವುದಾಗಿ ಘೋಷಿಸಿ ಇನ್ನು ಮುಂದೆ ತನ್ನ ಸೇವೆಗೈಯುವವರು ತನ್ನ ಈ ಸಂದೇಶವಾಹಕರು ತೋರಿಸುವ ರೀತಿಯನ್ನೇ ಅನುಸರಿಸಬೇಕೆಂದು ಆಜ್ಞಾಪಿಸಿದನು. ಇನ್ನು ಮುಂದೆ ಯಾವ ಸೇವಕನಿಗೂ ಹಿಂದಿನ ಕ್ರಮವನ್ನು ಅನುಸರಿಸುವ ಹಕ್ಕಿಲ್ಲ. ಏಕೆಂದರೆ ಇನ್ನು ಈ ಹೊಸ ನಿಯಮಗಳನ್ನು ಒಪ್ಪದೆ ಹಳೆಯ ಕ್ರಮಗಳನ್ನೇ ಅನುಸರಿಸುವಾತನು ಮಾಲಿಕನ ಆಜ್ಞೆಯನ್ನು ಪಾಲಿಸದೆ ತನ್ನಿಚ್ಛೆಯಂತೆ ನಡೆಯುವವನಾಗಿರುವುದರಿಂದ ಅವನು ನೌಕರಿಯಿಂದ ವಜಾಗೊಳಿಸಲ್ಪಡುತ್ತಾನೆ. ಅರ್ಥಾತ್ ಧಾರ್ಮಿಕ ಪಾರಿಭಾಷಿಕದಲ್ಲಿ 'ಕಾಫಿರ್' ಆಗಿ ಬಿಡುತ್ತಾನೆ.

ಕರ್ಮಶಾಸ್ತ್ರೀಯ ಭಿನ್ನತೆಯ ಸ್ವರೂಪಗಳು

ಇದು ಗತ ಪ್ರವಾದಿಗಳನ್ನು ನಂಬುವವರ ಮಾತಾಯಿತು. ಅಂತಿಮ ಪ್ರವಾದಿ ಮುಹಮ್ಮದ್‌ರವರ(ಸ) ಅನುಯಾಯಿಗಳಿಗೆ ಈ ಉದಾಹರಣೆಯ ಇನ್ನೊಂದು ಭಾಗವು ಅನ್ವಯಿಸುತ್ತದೆ. ಅಲ್ಲಾಹನು ಪ್ರವಾದಿ ಮುಹಮ್ಮದ್‌ರವರ(ಸ) ಮೂಲಕ ಕಳುಹಿಸಿದ ಶರೀಅತ್ತನ್ನು ಆತನ ಧರ್ಮಶಾಸ್ತ್ರವೆಂದು ಒಪ್ಪಿ ಅದನ್ನು ಪಾಲಿಸುವುದು ಕಡ್ಡಾಯವೆಂದು ತಿಳಿಯುವವರೆಲ್ಲರೂ ಮುಸ್ಲಿಮರಾಗಿದ್ದಾರೆ. ಆ ಧರ್ಮಶಾಸ್ತ್ರ ವಿಧಿಗಳನ್ನು ಒಬ್ಬನು ಒಂದು ವಿಧದಲ್ಲಿಯೂ ಇನ್ನೊಬ್ಬನು ಇನ್ನೊಂದು ವಿಧದಲ್ಲಿಯೂ ಅರ್ಥಮಾಡಿಕೊಂಡು ಆಚರಿಸುತ್ತಾ ಬಂದರೆ, ಅವರಿಬ್ಬರ ವಿಚಾರಗಳಲ್ಲಿ ಎಷ್ಟೇ ವ್ಯತ್ಯಾಸವಿದ್ದರೂ ಅವರ ಪೈಕಿ ಯಾರೂ ನೌಕರಿಯಿಂದ ಹೊರಗಿನವನಾಗಲಾರರು. ಏಕೆಂದರೆ, ಅವರ ಪೈಕಿ ಪ್ರತಿಯೊಬ್ಬನೂ ತಾನು ಒಡೆಯನ ಆಜ್ಞೆಯನ್ನು ಪಾಲಿಸುತ್ತಿದ್ದೇನೆಂದೇ ಭಾವಿಸುತ್ತಾನೆ. ಹೀಗಿರುವಾಗ ಒಬ್ಬ ನೌಕರನು ಇನ್ನೊಬ್ಬ ನೌಕರನ ಬಗ್ಗೆ, 'ನಾನು ನೌಕರ-ಅವನು ನೌಕರನಲ್ಲ' ಎಂದು ಹೇಳುವ ಅಧಿಕಾರ ಹೊಂದಿಲ್ಲ. ಹೆಚ್ಚೆಂದರೆ "ನಾನು ಒಡೆಯನ ಆಜ್ಞೆಯ ಸರಿಯಾದ ಇಂಗಿತ ಅರಿತಿದ್ದೇನೆ, ಅವನು ಅರಿತಿಲ್ಲ" ಎಂದಷ್ಟೇ ಹೇಳಬಹುದು. ಹಾಗಿರುವಾಗ ಆತನನ್ನು ನೌಕರಿಯಿಂದಲೇ ತೆಗೆದು ಹಾಕಲಾಗಿದೆ ಎನ್ನುವ ಅಧಿಕಾರ ಅವನಿಗೆಲ್ಲಿಂದ ಬಂತು? ಹೀಗೆ ಹೇಳುವ ಧೈರ್ಯ ತೋರುವವ ವಾಸ್ತವದಲ್ಲಿ ಯಜಮಾನನ ಸ್ಥಾನವನ್ನು ಅಕ್ರಮಿಸುತ್ತಿದ್ದಾನೆ. ಅಂದರೆ "ನೀನು ಯಜಮಾನನ ಆಜ್ಞಾಪಾಲನೆಗೆ ನಿರ್ಬಂಧಿತನಾಗಿರುವಂತೆಯೇ ನನ್ನ ಅಭಿಪ್ರಾಯದಂತೆ ನಡೆಯಲಿಕ್ಕೂ ನಿರ್ಬಂಧಿತನಾಗಿರುತ್ತಿ. ನೀನು ನನ್ನ ಅಭಿಪ್ರಾಯವನ್ನು ಒಪ್ಪದಿದ್ದರೆ ನನ್ನ ಸ್ವಂತ ಅಧಿಕಾರದಿಂದ

ನಿನ್ನನ್ನು ಯಜಮಾನನ ನೌಕರಿಯಿಂದ ವಜಾ ಗೊಳಿಸುವೆನು" ಎಂಬುದು ಅವನ ಮಾತಿನ ಅರ್ಥ. ಇದೆಂತಹ ದರ್ಪವೆಂದು ನೀವೇ ಯೋಚಿಸಿರಿ. ಆದ್ದರಿಂದಲೇ ಪ್ರವಾದಿಯವರು(ಸ) ಒಬ್ಬ "ಮುಸ್ಲಿಮನನ್ನು ವಿನಾಕಾರಣ 'ಕಾಫಿರ್' ಎಂದರೆ ಅವನ ಆ ಮಾತು ಅವನ ಕಡೆಗೇ ಮರಳುವುದು" ಎಂದಿದ್ದಾರೆ. ಏಕೆಂದರೆ ಅಲ್ಲಾಹನು ಮುಸ್ಲಿಮನನ್ನು ತನ್ನ ಆಜ್ಞೆಗಳ ದಾಸನನ್ನಾಗಿ ಮಾತ್ರ ಮಾಡಿದ್ದಾನೆ. ಆದರೆ ಈತನು ತನ್ನ ಅಭಿಪ್ರಾಯ ಮತ್ತು ಮನೋಗತಗಳ ದಾಸನಾಗಿರುವಂತೆ ಒತ್ತಾಯ ಪಡಿಸುತ್ತಾನೆ. ಅಂದರೆ "ದೇವನು ಮಾತ್ರ ನಿನ್ನ ದೇವನಲ್ಲ, ನಾನೂ ಒಬ್ಬ ಉಪ ದೇವನಾಗಿದ್ದೇನೆ. ನನ್ನ ವಿಧಿಯನ್ನು ಒಪ್ಪದಿದ್ದಲ್ಲಿ ದೇವನು ನಿನ್ನನ್ನು ತನ್ನ ದಾಸ್ಯದಿಂದ ಹೊರಗಿಟ್ಟರೂ, ಇಡದಿದ್ದರೂ ನಾನು ನನ್ನ ಅಧಿಕಾರದಿಂದ ನಿನ್ನನ್ನು ದೇವನ ದಾಸ್ಯದಿಂದ ಖಂಡಿತ ಉಚ್ಚಾಟಿಸಿ ಬಿಡುತ್ತೇನೆ" ಎನ್ನುತ್ತಾನೆ. ಇದರಿಂದ ಇತರ ಮುಸ್ಲಿಮರು ಕಾಫಿರರಾದರೂ ಆಗದಿದ್ದರೂ ಇಂತಹ ದರ್ಪದ ಮಾತುಗಳನ್ನಾಡುವವನಂತೂ ತನ್ನನ್ನು ಖಂಡಿತ 'ಕುಫ್ರ್'(ಸತ್ಯನಿಷೇಧ)ನ ಗಂಡಾಂತರಕ್ಕೆ ಸಿಲುಕಿಸಿ ಬಿಡುತ್ತಾನೆ.

ದೀನ್ ಮತ್ತು ಶರೀಅತ್(ಧರ್ಮ ಮತ್ತು ಧರ್ಮಶಾಸ್ತ್ರ)ಗಳ ಅಂತರವನ್ನು ನೀವು ಈಗಾಗಲೇ ಗ್ರಹಿಸಿರಬಹುದು. ತಾನು ಅನುಸರಿಸುತ್ತಿರುವ ಕ್ರಮವೇ ಅಲ್ಲಾಹ್ ಹಾಗೂ ಪ್ರವಾದಿಯವರು ತೋರಿಸಿದ ಕ್ರಮವೆಂದು ಒಬ್ಬನು ಭಾವಿಸಿ ಸದುದ್ದೇಶದಿಂದ ಅದರಂತೆ ನಡೆದಾಗ ಉಪಾಸನಾ ವಿಧಾನಗಳ ಅಂತರಗಳಿಂದಾಗಿ ದೀನ್‌ನಲ್ಲಿ(ಧರ್ಮ) ವ್ಯತ್ಯಾಸ ಉಂಟಾಗುವುದಿಲ್ಲವೆಂಬುದನ್ನೂ ನೀವು ತಿಳಿದು ಕೊಂಡಿರಬಹುದು.

ಧರ್ಮ ಮತ್ತು ಶರೀಅತ್‌ನಲ್ಲಿಯ ಭಿನ್ನತೆಯನ್ನು ಅರಿಯದುದರಿಂದ ಉಂಟಾಗುವ ಕೆಡುಕುಗಳು

ಇನ್ನು, ದೀನ್ ಮತ್ತು ಶರೀಅತ್‌ಗಳೊಳಗಿನ ಈ ವ್ಯತ್ಯಾಸವನ್ನು ತಿಳಿಯದೆ ಇರುವುದರಿಂದ ನಮ್ಮ ಸಮುದಾಯದಲ್ಲಿ ಎಷ್ಟು ಕೆಡುಕುಗಳುಂಟಾಗಿವೆ ಎಂಬುದನ್ನು ತಿಳಿಸಬಯಸುತ್ತೇನೆ.

ಮುಸ್ಲಿಮರು ವಿವಿಧ ರೀತಿಯಲ್ಲಿ ನಮಾಝ್ ಮಾಡುತ್ತಾರೆ. ಒಬ್ಬನು ಎದೆಯ ಮೇಲೆ ಕೈ ಕಟ್ಟಿದರೆ ಇನ್ನೊಬ್ಬನು ನಾಭಿಯ ಮೇಲೆ ಕಟ್ಟುತ್ತಾನೆ. ಒಬ್ಬನು ಇಮಾಮರ ಹಿಂದೆ ಸೂರಃ ಫಾತಿಹಾ ಓದುತ್ತಾನೆ; ಇನ್ನೊಬ್ಬನು ಓದುವುದಿಲ್ಲ. ಒಬ್ಬನು 'ಆಮೀನ್' ಎಂದು ಉಚ್ಚ ಸ್ವರದಿಂದ ಹೇಳುತ್ತಾನೆ. ಇನ್ನೊಬ್ಬನು ಮೆಲು ದನಿಯಲ್ಲಿ ಹೇಳುತ್ತಾನೆ. ಇವರಲ್ಲಿ ಪ್ರತಿಯೊಬ್ಬನೂ ತಾನು ಪ್ರವಾದಿಯವರ(ಸ) ಪದ್ಧತಿ ಪ್ರಕಾರವೇ ನಡೆಯುತ್ತಿದ್ದೇನೆಂದು ಗ್ರಹಿಸುತ್ತಾನೆ. ಆದರೆ ನಮಾಝಿನ ಕ್ರಮಗಳಲ್ಲಿ ವೈವಿಧ್ಯತೆಯ ಹೊರತಾಗಿಯೂ ಇಬ್ಬರೂ ಪ್ರವಾದಿಯವರ(ಸ) ಅನುಯಾಯಿಗಳೇ ಆಗಿರುತ್ತಾರೆ. ಆದರೆ ಶರೀಅತ್‌ನ ಈ ಸೂತ್ರಗಳನ್ನು 'ದೀನ್' ಎಂದು ತಿಳಿದುಕೊಂಡ ದುಷ್ಟರು ಈ ಪದ್ಧತಿಗಳ ವೈವಿಧ್ಯತೆಯನ್ನು ದೀನ್‌ನ (ಧರ್ಮದ) ವೈವಿಧ್ಯತೆ ಎಂದು ತಿಳಿದುಕೊಂಡು ತಂತಮ್ಮ ಪಂಗಡಗಳನ್ನು ಕಟ್ಟಿಕೊಂಡರು. ತಂತಮ್ಮ ಮಸೀದಿಗಳನ್ನು ನಿರ್ಮಿಸಿಕೊಂಡರು. ಪರಸ್ಪರ ಬೈದಾಟ-ಕಚ್ಚಾಟಗಳಲ್ಲಿ ತೊಡಗಿದರು. ಮಸೀದಿಯಿಂದ

ಹೊಡೆದಟ್ಟಿದರು; ವ್ಯಾಜ್ಯಗಳನ್ನು ಹೂಡಿದರು. ಹೀಗೆ ಪ್ರವಾದಿಯವರ(ಸ) ಸಮುದಾಯ(ಉಮ್ಮತ್)ವನ್ನು ಛಿದ್ರಛಿದ್ರಗೊಳಿಸಿಬಿಟ್ಟರು.

ಈ ಜಗಳಗಂಟಿಗಳು ಇಷ್ಟಕ್ಕೇ ಸಾಕು ಮಾಡಲಿಲ್ಲ. ಚಿಕ್ಕ ಪುಟ್ಟ ವಿಷಯಗಳಿಗಾಗಿ ಒಬ್ಬರು ಇನ್ನೊಬ್ಬರನ್ನು 'ಕಾಫಿರ್' (ಸತ್ಯನಿಷೇಧಿ) ಎಂದೂ ಫಾಸಿಕ್ (ಕರ್ಮಭ್ರಷ್ಟ) ಎಂದೂ ಪಥಭ್ರಷ್ಟರೆಂದೂ ಹೇಳತೊಡಗಿದರು. ಒಬ್ಬನಿಗೆ ಕುರ್‌ಆನ್ ಅಥವಾ ಹದೀಸ್‌ನಿಂದ ಯಾವುದಾದರೊಂದು ವಿಷಯದ ತಾತ್ಪರ್ಯ ಹೊಳೆದರೆ ಅದರಂತೆ ತಾನು ನಡೆದುಕೊಳ್ಳುವುದರಲ್ಲೇ ಸಾಕು ಮಾಡದೆ ತನ್ನ ಅಭಿಪ್ರಾಯವನ್ನು ಇತರರ ಮೇಲೂ ಹೇರ ಬಯಸುತ್ತಾನೆ. ಅವರು ಒಪ್ಪದೆ ಹೋದರೆ ಅವರನ್ನು ಧರ್ಮಬಾಹಿರರೆನ್ನಲು ಹೇಸುವುದಿಲ್ಲ.

ಮುಸ್ಲಿಮರಲ್ಲಿ ಕಂಡು ಬರುವ ಹನಫೀ, ಶಾಫಿಈ, ಅಹ್ಲೆ ಹದೀಸ್ ಮೊದಲಾದ ವಿಭಿನ್ನ ಅಭಿಮತದವರು ಕುರ್‌ಆನ್ ಮತ್ತು ಹದೀಸ್‌ಗಳನ್ನೇ ಅಂತಿಮ ಆಧಾರವೆಂದು ಒಪ್ಪಿಕೊಂಡು, ಅದರಿಂದಲೇ ತಂತಮ್ಮ ಅಭಿಪ್ರಾಯಕ್ಕೆ ತಕ್ಕಂತೆ ವಿಧಿಗಳನ್ನು ಪಡೆಯುತ್ತಾರೆ. ಒಬ್ಬನ ಅಭಿಪ್ರಾಯ ಸರಿಯಾಗಿರಬಹುದು ಇನ್ನೊಬ್ಬನದು ತಪ್ಪೂ ಆಗಿರಬಹುದು. ನಾನೂ ಒಂದು ಅಭಿಮತದಂತೆ ನಡೆಯುವವನಾಗಿರುತ್ತೇನೆ. ಅದನ್ನು ಸರಿಯೆಂದೂ ಭಾವಿಸುತ್ತೇನೆ. ನನಗೆ ಸರಿ ಕಂಡದ್ದನ್ನು ಇತರರಿಗೆ ಮನವರಿಕೆ ಮಾಡಲು, ತಪ್ಪನ್ನು ತಪ್ಪೆಂದು ಸಾಬೀತುಪಡಿಸಲು ನನ್ನ ಅಭಿಪ್ರಾಯವನ್ನು ಮೆಚ್ಚದವರೊಂದಿಗೆ ವಾದವನ್ನೂ ಮಾಡುತ್ತೇನೆ. ಆದರೆ ಒಬ್ಬನ ಅಭಿಪ್ರಾಯ ತಪ್ಪಾಗುವುದೂ ಅವನು ಧರ್ಮಬಾಹಿರನಾಗುವುದೂ ಬೇರೆ ಬೇರೆ ವಿಷಯಗಳಾಗಿವೆ. ತಂತಮ್ಮ ಅಭಿಪ್ರಾಯದ ಪ್ರಕಾರ ಶರೀಅತ್‌ನಂತೆ ನಡೆಯುವ ಹಕ್ಕು ಪ್ರತಿಯೊಬ್ಬ ಮುಸ್ಲಿಮನಿಗೂ ಇದೆ. ಹತ್ತು ಮಂದಿ ಮುಸ್ಲಿಮರು ಹತ್ತು ವಿಧವಾಗಿ ನಡೆದರೂ ಇವರು ಶರೀಅತ್ತನ್ನು ಒಪ್ಪುವ ತನಕ ಅವರೆಲ್ಲರೂ ಮುಸ್ಲಿಮರೇ ಆಗಿದ್ದು ಒಂದೇ ಸಮುದಾಯದವರಾಗಿದ್ದಾರೆ. ಅವರ ಪಂಗಡಗಳು ಬೇರೆ ಬೇರೆಯಾಗಿರಲು ಸಾಧ್ಯವೇ ಇಲ್ಲ. ಅದನ್ನು ತಿಳಿಯದವರು ಈ ಚಿಕ್ಕಪುಟ್ಟ ವಿಷಯಗಳ ಕಾರಣದಿಂದಾಗಿ ಪಕ್ಷ-ಪಂಗಡಗಳನ್ನು ಕಟ್ಟಿಕೊಂಡು ಪರಸ್ಪರ ಕಚ್ಚಾಡುತ್ತಾರೆ. ತಮ್ಮ ನಮಾಝ್‌ಗಳನ್ನೂ ಮಸೀದಿಗಳನ್ನೂ ಪ್ರತ್ಯೇಕಿಸಿಕೊಳ್ಳುತ್ತಾರೆ. ಪರಸ್ಪರ ವಿವಾಹ ಸಂಬಂಧಗಳನ್ನೂ ಒಡನಾಟಗಳನ್ನೂ ಕಡಿದುಕೊಳ್ಳುತ್ತಾರೆ. ಹೀಗೆ ತಂತಮ್ಮ ಪಂಗಡಗಳನ್ನು ಪ್ರತ್ಯೇಕ ಸಮುದಾಯಗಳೆಂಬಂತೆ ಪ್ರತ್ಯೇಕವಾಗಿ ಕಟ್ಟಿಕೊಳ್ಳುತ್ತಾರೆ.

ಗುಂಪುಗಾರಿಕೆಯ ದುಷ್ಪರಿಣಾಮಗಳು

ಈ ಗುಂಪುಗಾರಿಕೆಯಿಂದ ಮುಸ್ಲಿಮರಿಗಾದ ಹಾನಿ ಅಷ್ಟಿಷ್ಟಲ್ಲ. ಭಾರತದಲ್ಲಿ 8 ಕೋಟಿ ಮುಸ್ಲಿಮ*ರಿದ್ದಾರೆ. ಅವರೆಲ್ಲರೂ ಲೆಕ್ಕಕ್ಕೆ ಒಂದೇ ಸಮುದಾಯದವರಾಗಿದ್ದಾರೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿರುವ ಅವರು ನಿಜವಾಗಿಯೂ ಒಂದೇ ಸಮುದಾಯ ವಾಗಿರುತ್ತಿದ್ದರೆ ಮತ್ತು ಎಲ್ಲರೂ ಒಗ್ಗಟ್ಟಾಗಿ ಅಲ್ಲಾಹನ 'ಧರ್ಮದ' ಉತ್ಥಾನಕ್ಕಾಗಿ

*ಈ ಜುಮಾ ಪ್ರವಚನವು 1937-38ರ ಅವಧಿಯಲ್ಲಿ ನೀಡಲಾಗಿತ್ತು. ಈಗ ಮುಸ್ಲಿಮರ ಸಂಖ್ಯೆ 20 ಕೋಟಿಗೂ ಮಿಕ್ಕಿದೆ.

ದುಡಿದಿದ್ದರೆ ಅವರನ್ನು ಕೀಳಾಗಿ ಕಾಣಲು ಯಾರಿಗೂ ಧೈರ್ಯ ಬರುತ್ತಿರಲಿಲ್ಲ! ಆದರೆ ವಾಸ್ತವದಲ್ಲಿ ಈಗಿರುವ ಗುಂಪುಗಾರಿಕೆಗಳಿಂದಾಗಿ ಈ ಸಮುದಾಯವು ನೂರಾರು ಚೂರುಗಳಾಗಿ ಒಡೆದಿದೆ. ಇವರ ಹೃದಯಗಳು ಪರಸ್ಪರ ಸಿಡಿದು ಹೋಗಿವೆ. ಎಂತಹ ಭೀಕರ ಗಂಡಾಂತರಗಳು ಬಂದಾಗಲೂ ಅದನ್ನು ಅವರು ಒಂದಾಗಿ ಎದುರಿಸುವುದಿಲ್ಲ. ಒಬ್ಬ ಯಹೂದಿಗೆ ಕ್ರೈಸ್ತನ ಮೇಲಿರುವ ವೈರಕ್ಕಿಂತಲೂ ಹೆಚ್ಚು ವೈರವನ್ನು ಒಂದು ಪಂಗಡದ ಮುಸ್ಲಿಮನು ಇನ್ನೊಂದು ಪಂಗಡದ ಮುಸ್ಲಿಮನೊಂದಿಗಿರಿಸುತ್ತಾನೆ. ಒಂದು ಪಂಗಡದವರು ಇನ್ನೊಂದು ಪಂಗಡದವರೊಂದಿಗೆ ಹಗೆತನ ಸಾಧಿಸಲಿಕ್ಕಾಗಿ ಸತ್ಯನಿಷೇಧಿಗಳ ಬೆಂಬಲ ಪಡೆದ ದೃಷ್ಟಾಂತಗಳೂ ಇವೆ. ಹೀಗಿರುವಾಗ ಮುಸ್ಲಿಮರ ಅಧಃಪತನವನ್ನು ಕಂಡು ಆಶ್ಚರ್ಯಪಡಬೇಕಾಗಿಲ್ಲ. ಇದು ಅವರ ಸ್ವಂತ ಗಳಿಕೆಯಾಗಿದೆ. ಅದಕ್ಕಾಗಿಯೇ-

أَوْ يَلْبِسَكُمْ شِيَعًا وَّيُذِيقَ بَعْضَكُمْ بَأْسَ بَعْضٍ ۗ

"ನಿಮ್ಮನ್ನು ವಿವಿಧ ಪಕ್ಷ ಪಂಗಡಗಳಲ್ಲಿ ಒಡೆದು ನೀವು ಪರಸ್ಪರ ಹೊಡೆದಾಡಿಕೊಂಡು ನಾಶ ಹೊಂದುವಂತೆ ಮಾಡುವುದೂ ಅಲ್ಲಾಹನ ಯಾತನೆಯ ಒಂದು ವಿಧವಾಗಿದೆ" (ಅನ್‌ಆಮ್: 65) ಎಂದು ಅಲ್ಲಾಹನು ಪವಿತ್ರ ಕುರ್‌ಆನಿನಲ್ಲಿ ವಿವರಿಸಿದ ಪ್ರಕಾರ ಅವರ ಮೇಲೆ ಈ ಯಾತನೆ ಎರಗಿದೆ.

ಸಹೋದರರೇ, ಈ ಗುಂಪುಗಾರಿಕೆಯನ್ನು ಕೊನೆಗೊಳಿಸದೆ ಭಾರತದ ಮುಸ್ಲಿಮರು ಅನುಭವಿಸುತ್ತಿರುವ ಈ ಯಾತನೆಯಿಂದ ಮುಕ್ತಿ ಸಿಗಲಾರದು. ಆದ್ದರಿಂದ ನೀವು ನಿಮ್ಮ ಕಲ್ಯಾಣವನ್ನು ಬಯಸುವಿರಾದರೆ ಈ ಗುಂಪುಗಾರಿಕೆಯನ್ನು ಕೊನೆಗೊಳಿಸಿ ಪರಸ್ಪರ ಸಹೋದರತೆಯಿಂದ ಒಂದೇ ಸಮುದಾಯವಾಗಿ ಬಾಳಿರಿ. ಅಹ್ಲೆ ಹದೀಸ್, ಹನಫೀ, ಶಾಫಿಈ, ದೇವ್ ಬಂದೀ, ಬರೇಲ್ವೀ, ಶಿಯಾ, ಸುನ್ನೀ ಇತ್ಯಾದಿ ಪಕ್ಷ ಪಂಗಡಗಳಿಗೆ ಅಲ್ಲಾಹನ ಶರೀಅತ್‌ನಲ್ಲಿ ಅವಕಾಶವೇ ಇಲ್ಲ. ಅಲ್ಲಾಹನು 'ಮುಸ್ಲಿಮ್ ಸಮುದಾಯ'ವೆಂಬ ಕೇವಲ ಒಂದೇ ಸಮುದಾಯವನ್ನು ಮಾಡಿರುತ್ತಾನೆ.

❖❖❖

ಅಧ್ಯಾಯ -3

ನಮಾಝ್

○

- ಇಬಾದತ್
- ನಮಾಝ್
- ನಮಾಝ್‌ನಲ್ಲಿ ನೀವೇನನ್ನುತ್ತೀರಿ?
- ಸಂಘಟಿತ ನಮಾಝ್
- ನಮಾಝ್ ಸತ್ವಹೀನವಾದುದೇಕೆ?

○

ಇಬಾದತ್

ಮುಸ್ಲಿಮ್ ಸಹೋದರರೇ,

ಹಿಂದಿನ ಉಪನ್ಯಾಸದಲ್ಲಿ ದೀನ್ (ಧರ್ಮ) ಮತ್ತು ಶರೀಅತ್ (ಧರ್ಮಶಾಸ್ತ್ರ) ಎಂಬ ಪದಗಳ ಅರ್ಥ ವಿವರಣೆ ಮಾಡಿದ್ದೆ. ಇಂದು ನಾನು ಮುಸ್ಲಿಮರೆಲ್ಲರೂ ಸರ್ವ ಸಾಮಾನ್ಯವಾಗಿ ಬಳಸುತ್ತಿದ್ದರೂ, ಕೆಲವೇ ಮಂದಿ ಮಾತ್ರ ಅದರ ನಿಜವಾದ ಅರ್ಥವನ್ನು ತಿಳಿದಿರುವಂತಹ ಇನ್ನೊಂದು ಪದದ ಅರ್ಥ ವಿವರಣೆಯನ್ನು ನೀಡಬಯಸುವೆನು. ಅದುವೇ 'ಇಬಾದತ್' ಎಂಬ ಪದವಾಗಿದೆ.

ಅಲ್ಲಾಹನು ತನ್ನ ಪವಿತ್ರ ಕುರ್‌ಆನ್‌ನಲ್ಲಿ -

وَمَا خَلَقْتُ الْجِنَّ وَالْإِنْسَ إِلَّا لِيَعْبُدُونِ ﴿٥٦﴾

''ನಾನು ಜಿನ್ನ್ (ಯಕ್ಷ) ಮತ್ತು ಮಾನವರನ್ನು ನನ್ನ 'ಇಬಾದತ್'ಗಾಗಿ ಅಲ್ಲದೆ ಬೇರಾವ ಉದ್ದೇಶಕ್ಕಾಗಿಯೂ ಸೃಷ್ಟಿಸಲಿಲ್ಲ'' (ಅದ್ದಾರಿಯಾತ್: 56) ಎಂದಿರುತ್ತಾನೆ. ಇದರಿಂದ ನಿಮ್ಮ ಸೃಷ್ಟಿ ಹಾಗೂ ಜೀವನದ ಉದ್ದೇಶವು ಅಲ್ಲಾಹನ ಇಬಾದತ್‌ನ ಹೊರತು ಬೇರೇನೂ ಅಲ್ಲವೆಂದು ತಿಳಿಯುತ್ತದೆ. ಹೀಗಿರುವಾಗ ನೀವು ಇಬಾದತ್ ಎಂಬುದರ ಅರ್ಥ ಚೆನ್ನಾಗಿ ತಿಳಿದಿರಬೇಕಾದುದು ಎಷ್ಟೊಂದು ಅಗತ್ಯವೆಂಬುದನ್ನು ಊಹಿಸಬಹುದು. ಅದರ ಸರಿಯಾದ ಅರ್ಥ ತಿಳಿಯದೇ ಹೋದರೆ ನಿಮ್ಮನ್ನು ಸೃಷ್ಟಿಸಿದುದರ ಉದ್ದೇಶವನ್ನೇ ಪೂರ್ತಿಗೊಳಿಸಲಾರಿರಿ. ಉದ್ದೇಶ ನೆರವೇರದ ವಸ್ತು ನಿಷ್ಪ್ರಯೋಜಕವಾಗಿ ಬಿಡುತ್ತದೆ. ವೈದ್ಯನು ರೋಗವನ್ನು ಗುಣಪಡಿಸಲಾರದೆ ಹೋದಾಗ ಅವನು ಔಷಧೋಪಚಾರ ಕಾರ್ಯದಲ್ಲಿ ವಿಫಲನಾದನೆನ್ನುತ್ತೇವೆ. ಕೃಷಿಕನು ಬೆಳೆ ಬೆಳೆಸಲಾರದೆ ಹೋದಾಗ ಅವನು ಬೇಸಾಯದಲ್ಲಿ ವಿಫಲನಾದನೆನ್ನುತ್ತೇವೆ. ಅದೇ ರೀತಿಯಲ್ಲಿ ನೀವು ನಿಮ್ಮ ಜೀವನದ ನಿಜವಾದ ಉದ್ದೇಶವನ್ನು ಪೂರ್ತಿಗೊಳಿಸದೆ ಹೋದಾಗ ಇಡೀ ಜೀವನದಲ್ಲಿ ವಿಫಲರಾದಿರೆಂದೇ ಹೇಳಬೇಕಾಗುತ್ತದೆ. ಆದ್ದರಿಂದ ನೀವು 'ಇಬಾದತ್'ನ ತಾತ್ಪರ್ಯವನ್ನು ಚೆನ್ನಾಗಿ ಗ್ರಹಿಸಿ ತಿಳಿದುಕೊಳ್ಳಬೇಕೆಂದೂ ಅದನ್ನು ಹೃದಯದಲ್ಲಿ ಇರಿಸಿಕೊಳ್ಳಬೇಕೆಂದೂ ವಿನಂತಿಸುತ್ತೇನೆ. ಏಕೆಂದರೆ ನಿಮ್ಮ ಜೀವನದ ಸಾರ್ಥಕತೆ ಅಥವಾ ನಿರರ್ಥಕತೆಯು ಇದನ್ನೇ ಹೊಂದಿಕೊಂಡಿದೆ.

ಇಬಾದತ್‌ನ ಅರ್ಥ

ಇಬಾದತ್ ಎಂಬ ಪದವು 'ಅಬ್ದ್' ಎಂಬ ಅರಬಿ ಮೂಲದಿಂದ ಹೊರಟಿದೆ. 'ಅಬ್ದ್' ಎಂದರೆ ದಾಸ ಅಥವಾ ಗುಲಾಮ. ಆಗ 'ಇಬಾದತ್'ನ ಅರ್ಥ ದಾಸ್ಯ ಆರಾಧನೆ ಅಥವಾ ಗುಲಾಮಗಿರಿ ಎಂದಾಗುತ್ತದೆ. ಒಬ್ಬನು ಇನ್ನೊಬ್ಬನ ದಾಸನಾಗಿದ್ದು ಅವನ ಸೇವೆಯನ್ನು ದಾಸ್ಯಭಾವದಿಂದಲೇ ಮಾಡಿದರೆ ಹಾಗೂ ಒಡೆಯನೊಂದಿಗೆ ಹೇಗೆ ವ್ಯವಹರಿಸಬೇಕೋ ಹಾಗೆಯೇ ವ್ಯವಹರಿಸಿದರೆ ಅದನ್ನು ದಾಸ್ಯ ಅಥವಾ ಇಬಾದತ್ ಎನ್ನುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ಒಬ್ಬನು ಇನ್ನೊಬ್ಬನ ದಾಸನಾಗಿದ್ದು ಅವನಿಂದ ಸಂಬಳ ಪಡೆಯುತ್ತಿದ್ದೂ ಅವನೊಂದಿಗೆ ದಾಸನಂತೆ ವ್ಯವಹರಿಸದಿದ್ದರೆ ಅದನ್ನು ಅವಿಧೇಯತೆ ಮತ್ತು ಉದ್ಧಟತನ ಮಾತ್ರವಲ್ಲ ಕೃತಘ್ನತೆ ಎಂದೂ ಹೇಳುತ್ತಾರೆ.

ಒಡೆಯನ ಮುಂದೆ ದಾಸನಂತೆ ನಡೆಯುವ ಕ್ರಮ ಹೇಗೆಂದು ನೋಡೋಣ. ದಾಸನ ಒಂದನೇ ಕರ್ತವ್ಯವೇನೆಂದರೆ ಒಡೆಯನನ್ನು ಒಡೆಯನೆಂದು ಅಂಗೀಕರಿಸಿ ರಕ್ಷಕನೂ ಮೇಲ್ವಿಚಾರಕನೂ ಆದ ಆ ಒಡೆಯನೊಂದಿಗೆ ಪ್ರಾಮಾಣಿಕತೆಯಿಂದ ವರ್ತಿಸುವುದು ಮತ್ತು ತನ್ನ ಈ ವರ್ತನೆಗೆ ಇನ್ನಾರೂ ಅರ್ಹರಲ್ಲವೆಂದು ಭಾವಿಸುವುದು.

ಅವನ ಎರಡನೆಯ ಕರ್ತವ್ಯವೇನೆಂದರೆ ಸದಾ ಒಡೆಯನ ಆಜ್ಞಾನುಸರಣೆ ಮಾಡುವುದು, ಅವನ ಅಪ್ಪಣೆಯಂತೆ ನಡೆಯುವುದು, ಅವನಿಗೆ ಅವಿಧೇಯತೆ ತೋರಿಸದಿರುವುದು, ಅವನ ವಿರುದ್ಧ ತನ್ನ ಮನಸ್ಸಿನಲ್ಲಿ ಯಾವುದೇ ದುರಭಿಪ್ರಾಯಗಳನ್ನಿರಿಸದಿರುವುದು, ಅವನ ವಿರುದ್ಧ ಇತರರ ಮಾತಿನಂತೆ ನಡೆಯದಿರುವುದು. ದಾಸನು ಸದಾ ದಾಸನಾಗಿಯೇ ಇರುತ್ತಾನೆ, "ನಾನು ನಿಮ್ಮ ಆ ಮಾತನ್ನು ಕೇಳುವೆನು; ಈ ಮಾತನ್ನು ಕೇಳಲಾರೆ" ಅಥವಾ "ಇಷ್ಟು ಹೊತ್ತಿನ ವರೆಗೆ ನಾನು ನಿಮ್ಮ ದಾಸ; ಉಳಿದ ಸಮಯ ನಿಮ್ಮ ದಾಸ್ಯದಿಂದ ಮುಕ್ತನು" ಎಂದು ಒಡೆಯನೊಡನೆ ಹೇಳುವ ಹಕ್ಕು ದಾಸನಿಗಿಲ್ಲ.

ಅವನ ಮೂರನೆಯ ಕರ್ತವ್ಯವೇನೆಂದರೆ ಒಡೆಯನನ್ನು ಗೌರವಾದರಗಳಿಂದ ಕಾಣುವುದು, ಅವನನ್ನು ಹೇಗೆ ಸನ್ಮಾನಿಸಬೇಕೆಂಬುದನ್ನು ತಿಳಿದುಕೊಂಡು ಅದರಂತೆ ಅನುಸರಿಸುವುದು, ಅವನ ಮುಂದೆ ಉಪಾಸನೆಗಾಗಿ ಹಾಜರಾಗಬೇಕಾದ ಸಮಯವನ್ನು ತಿಳಿದುಕೊಂಡು ಕ್ಲಪ್ತ ಸಮಯದಲ್ಲಿ ತಪ್ಪದೆ ಹಾಜರಾಗುವುದು. ಹೀಗೆ ಒಡೆಯನ ಅತ್ಯಂತ ವಿಧೇಯ ದಾಸನೆಂಬುದನ್ನು ಕಾರ್ಯತಃ ತೋರಿಸಿಕೊಡುವುದು.

ಈ ಮೂರು ವಿಷಯಗಳು ಒಟ್ಟಾಗಿ ಇಬಾದತ್ ಎನಿಸುತ್ತದೆ. ಒಂದನೆಯದು ಒಡೆಯನಿಗೆ ಪ್ರಾಮಾಣಿಕನಾಗಿರುವುದು. ಎರಡನೆಯದು ಅವನ ಆಜ್ಞಾನುಸರಣೆ ಮಾಡುವುದು. ಮೂರನೆಯದು ಅವನ ಬಗ್ಗೆ ಪೂಜ್ಯಭಾವನೆ ಇರಿಸುವುದು. **''ನಾನು ಜಿನ್ನ್ ಮತ್ತು ಮಾನವರನ್ನು ನನ್ನ ಇಬಾದತ್‌ಗಾಗಿ ಅಲ್ಲದೆ ಬೇರಾವ ಉದ್ದೇಶಕ್ಕಾಗಿಯೂ ಸೃಷ್ಟಿಸಲಿಲ್ಲ''** ಎಂಬ ದೇವವಾಕ್ಯದ ತಾತ್ಪರ್ಯವೇನೆಂದರೆ ಜಿನ್ನ್ ಮತ್ತು ಮಾನವರು ಅಲ್ಲಾಹನಿಗೆ ಮಾತ್ರ ಪ್ರಾಮಾಣಿಕರಾಗಿದ್ದು ಅವನಿಗೆದುರಾಗಿ ಇತರ ಯಾರಿಗೂ ಕೃತಜ್ಞರಾಗದಿರುವುದು. ಕೇವಲ

ಅಲ್ಲಾಹನ ಆಜ್ಞಾಪಾಲನೆಯನ್ನೇ ಮಾಡುತ್ತಿದ್ದು ಅವನಿಗೆದುರಾಗಿ ಇತರ ಯಾರ ಆಜ್ಞಾಪಾಲನೆಯನ್ನೂ ಮಾಡದಿರುವುದು ಮತ್ತು ಅವನ ಮುಂದೆ ಮಾತ್ರ ಪೂಜ್ಯಭಾವದಿಂದ ತಲೆಬಾಗಿರುವುದು, ಇತರ ಯಾರ ಮುಂದೆಯೂ ಬಾಗದಿರುವುದು. ಈ ಮೂರು ವಿಷಯಗಳನ್ನೇ ಒಟ್ಟಾಗಿ 'ಇಬಾದತ್' ಎಂದು ಹೇಳಲಾಗುತ್ತದೆ. ಅಲ್ಲಾಹನು ತನ್ನ ಇಬಾದತ್‌ನ ಆಜ್ಞೆಗಳನ್ನಿತ್ತಿರುವ ಎಲ್ಲಾ ಸೂಕ್ತಗಳ ತಾತ್ಪರ್ಯವೂ ಇದೇ. ಪ್ರವಾದಿವರ್ಯರ(ಸ) ಮತ್ತು ಅವರಿಗಿಂತ ಹಿಂದೆ ಅಲ್ಲಾಹನ ಕಡೆಯಿಂದ ಬಂದ ಎಲ್ಲ ಪ್ರವಾದಿಗಳ ಶಿಕ್ಷಣದ ಸಾರವು, "ಅಲ್ಲಾಹನ ಹೊರತು ಇನ್ನಾರ ಇಬಾದತನ್ನೂ ಮಾಡಬೇಡಿರಿ" ಎಂದಾಗಿದೆ. ಅರ್ಥಾತ್ ನೀವು ಪ್ರಾಮಾಣಿಕರಾಗಿರಬೇಕಾದ ಸಾರ್ವಭೌಮನು ಒಬ್ಬನೇ; ಆ ಸಾರ್ವಭೌಮನೇ ಅಲ್ಲಾಹ್. ನೀವು ಪಾಲಿಸಬೇಕಾದ ಶಾಸನ ಒಂದೇ; ಅದು ಅಲ್ಲಾಹನ ಶಾಸನ. ನೀವು ಆರಾಧಿಸಬೇಕಾದುದು ಒಬ್ಬನನ್ನೇ; ಅವನು ಅಲ್ಲಾಹ್.

ಇಬಾದತ್‌ನ ಬಗ್ಗೆ ತಪ್ಪು ಅರ್ಥಗ್ರಹಿಕೆಯ ಪರಿಣಾಮಗಳು

ಇಬಾದತ್‌ನ ಈ ತಾತ್ಪರ್ಯವನ್ನು ಗ್ರಹಿಸಿಕೊಂಡು ನನ್ನ ಒಂದೊಂದೇ ಪ್ರಶ್ನೆಗೆ ಈಗ ಉತ್ತರಿಸಿರಿ.

ಒಬ್ಬ ನೌಕರನು ತನ್ನ ಒಡೆಯನು ಹೇಳಿದ ಕೆಲಸ ಮಾಡುವುದನ್ನು ಬಿಟ್ಟು ಯಾವಾಗಲೂ ಅವನ ಮುಂದೆ ಕೈಕಟ್ಟಿ ನಿಂತು ಲಕ್ಷೋಪಲಕ್ಷ ಬಾರಿ ಅವನ ನಾಮವನ್ನು ಜಪಿಸುತ್ತಲೇ ಇದ್ದರೆ ಆ ನೌಕರನ ಬಗ್ಗೆ ನೀವೇನೆನ್ನುವಿರಿ?

ಒಡೆಯನು ಅವನಿಗೆ ಇಂತಿಂತವರಿಗೆ ಸಲ್ಲಬೇಕಾದುದನ್ನು ಸಲ್ಲಿಸು ಹೋಗು ಎಂದು ಅಪ್ಪಣೆ ಕೊಡುತ್ತಾನೆ. ಆದರೆ ಇವನು ಅಲ್ಲೇ ನಿಂತಿರುತ್ತಾನೆ. ಒಡೆಯನು ಇವನೊಡನೆ "ಹೋಗು ಆ ಕೆಡುಕುಗಳನ್ನು ತೊಲಗಿಸು" ಎನ್ನುತ್ತಾನೆ. ಈ ಅಪ್ಪಣೆಯನ್ನು ಕೇಳಿ ಇವನು ಅಲ್ಲೇ ನಿಂತು ಅತ್ಯಂತ ಮಧುರ ಸ್ವರದಿಂದ "ಕಳ್ಳನ ಕೈ ಕತ್ತರಿಸು, ಕಳ್ಳನ ಕೈ ಕತ್ತರಿಸು" ಎಂದು ಹತ್ತಾರು ಬಾರಿ ಆವರ್ತಿಸುತ್ತಿರುತ್ತಾನೆ. ಆದರೆ ಒಮ್ಮೆಯಾದರೂ ಕಳ್ಳನ ಕೈ ಕತ್ತರಿಸುವಂತಹ ಪದ್ಧತಿಯನ್ನು ಜಾರಿಗೆ ತರುವ ಪ್ರಯತ್ನ ಕೈಗೊಳ್ಳುವುದಿಲ್ಲ. ಈ ದಾಸನು ನಿಜವಾಗಿಯೂ ತನ್ನ ಒಡೆಯನ ಆರಾಧನೆ ಮಾಡುತ್ತಿರುವನೆಂದು ಹೇಳುವಿರಾ? ನಿಮ್ಮ ನೌಕರನೊಬ್ಬ ಹೀಗೆ ವರ್ತಿಸಿದಾಗ ನೀವು ಅವನೊಡನೆ ಏನು ಹೇಳುವಿರೆಂದು ನನಗೆ ಗೊತ್ತಿದೆ. ಆದರೆ ಅಲ್ಲಾಹನ ದಾಸನೊಬ್ಬನು ಹೀಗೆ ಮಾಡಿದಾಗ ನೀವು ಅವನನ್ನು ಮಹಾ ನಿಷ್ಠಾವಂತನೆನ್ನುತ್ತೀರಿ. ಈ ಅಕ್ರಮಿಯು ಹಗಲೂ ಇರುಳೂ ಕುರ್‌ಆನಿನಲ್ಲಿ ಅಲ್ಲಾಹನ ಆಜ್ಞೆಗಳನ್ನು ಎಷ್ಟು ಬಾರಿ ಪಠಿಸುತ್ತಾನೆಂದು ಹೇಳಲಾಗದು. ಆದರೆ ಆ ಆಜ್ಞೆಗಳನ್ನು ಪಾಲಿಸಲಿಕ್ಕಾಗಿ ಅವನು ತನ್ನ ಸ್ಥಾನದಿಂದ ಕದಲಲಾರ. ಅದರ ಬದಲಿಗೆ ನಫಿಲ್‌ನ ಮೇಲೆ ನಫಿಲ್(ಐಚ್ಛಿಕ) ನಮಾಝ್‌ಗಳನ್ನು ಮಾಡುತ್ತಲೇ ಇರುತ್ತಾನೆ. ಜಪಮಾಲೆಯನ್ನು ಸಾವಿರಾರು ಸಲ ತಿರುವಿ ಅಲ್ಲಾಹನ ನಾಮವನ್ನು ಜಪಿಸುತ್ತಾನೆ. ಮಧುರ ಕಂಠದಿಂದ ಪವಿತ್ರ ಕುರ್‌ಆನನ್ನು

ಪಠಿಸುತ್ತಲೇ ಇರುತ್ತಾನೆ. ನೀವು ಅವನ ಈ ವರ್ತನೆಗಳನ್ನೆಲ್ಲಾ ಕಂಡೂ ಅವನನ್ನು ಒಬ್ಬ ನಿಷ್ಠಾವಂತ ದೇವಭಕ್ತ ನೆನ್ನುತ್ತೀರಿ. 'ಇಬಾದತ್' ಎಂಬುದರ ಸರಿಯಾದ ತಾತ್ಪರ್ಯ ತಿಳಿಯದಿರುವುದರಿಂದಲೇ ನೀವು ಈ ತರದ ತಪ್ಪು ಅಭಿಪ್ರಾಯ ತಾಳಲು ಕಾರಣವಾಯಿತು.

ಇನ್ನೊಬ್ಬ ನೌಕರನಿದ್ದಾನೆ. ಅವನು ಯಾವಾಗಲೂ ಬೇರೆಯವರ ಸೇವೆ ಮಾಡುತ್ತಾನೆ. ಇತರರ ಅಪ್ಪಣೆಗಳನ್ನು ಕೇಳಿ ಅವುಗಳನ್ನು ಪಾಲಿಸುತ್ತಾನೆ. ಇತರರ ನಿಯಮ ನಿಬಂಧನೆಗಳನ್ನೆಲ್ಲಾ ಅನುಸರಿಸುತ್ತಾನೆ. ತನ್ನ ನಿಜವಾದ ಒಡೆಯನ ಆಜ್ಞೆಗೆ ಯಾವಾಗಲೂ ವಿರೋಧವಾಗಿಯೇ ನಡೆಯುತ್ತಾನೆ. ಆದರೆ ಆತನಿಗೆ ವಂದನೆ ಸಲ್ಲಿಸಬೇಕಾದ ಹೊತ್ತಿಗೆ ಹಾಜರಾಗಿ ಅವನ ನಾಮವನ್ನು ಜಪಿಸುತ್ತಾನೆ. ನಿಮ್ಮ ನೌಕರನು ಹೀಗೆ ವರ್ತಿಸಿದರೆ ನೀವೇನು ಮಾಡುವಿರಿ? ಅವನ ವಂದನೆಯನ್ನು ಅವನ ಮುಖಕ್ಕೇ ಎಸೆದು ಬಿಡಲಾರಿರಾ? ಅವನು ಬರೀ ನಾಲಗೆಯಿಂದ ನಿಮ್ಮನ್ನು ಕರೆಯುವಾಗ, "ಎಲಾ ನೀನು ಮಹಾ ಸುಳ್ಳನೂ ಮೋಸಗಾರನೂ ಆಗಿರುತ್ತೀ ಸಂಬಳ ನನ್ನಿಂದ ಪಡೆದು ಅನ್ಯರ ಚಾಕರಿ ಮಾಡುತ್ತೀ. ಬಾಯಿಯಿಂದ ನನ್ನನ್ನು ಒಡೆಯನೆನ್ನುತ್ತೀ. ವಾಸ್ತವದಲ್ಲಿ ನನ್ನ ಹೊರತು ಇತರೆಲ್ಲರ ಸೇವೆ ಮಾಡುತ್ತೀ" ಎಂದು ಅವನೊಡನೆ ಹೇಳಲಾರಿರಾ? ಇದು ಓರ್ವ ಸಾಮಾನ್ಯ ಬುದ್ಧಿಯವನಿಗೂ ತಿಳಿಯಬಹುದಾದ ವಿಷಯ. ಆದರೆ ಅಹೋರಾತ್ರಿ ಅಲ್ಲಾಹನ ನಿಯಮ ನಿಬಂಧನೆಗಳನ್ನು ಮುರಿಯುತ್ತಾ ಸತ್ಯನಿಷೇಧಿಗಳ ಹಾಗೂ ಬಹುದೇವಾರಾಧಕರ ಆಜ್ಞಾಪಾಲನೆ ಮಾಡುತ್ತಾ ತನ್ನ ಜೀವನದ ವ್ಯವಹಾರಗಳಲ್ಲೆಲ್ಲಾ ಅಲ್ಲಾಹನ ಆಜ್ಞೆಗಳ ಪರಿವೆಯೇ ಇಲ್ಲದವರು ಮಾಡುವ ನಮಾಝ್, ಉಪವಾಸ, ಜಪ, ಕುರ್‌ಆನ್ ಪಾರಾಯಣ, ಹಜ್ಜ್ ಯಾತ್ರೆ ಮತ್ತು ಝಕಾತ್‌ಗಳನ್ನು ಅಲ್ಲಾಹನ ಇಬಾದತ್ ಎಂದು ತಿಳಿಯುವುದು ಅದೆಷ್ಟು ಆಶ್ಚರ್ಯಕರ!

ಈ ತಪ್ಪುಧಾರಣೆಯೂ ಇಬಾದತ್‌ನ ನಿಜವಾದ ತಾತ್ಪರ್ಯ ತಿಳಿಯದ ಕಾರಣ ದಿಂದಲೇ ಆಗಿದೆ.

ಬೇರೊಬ್ಬ ನೌಕರನ ಉದಾಹರಣೆಯನ್ನು ತೆಗೆದುಕೊಳ್ಳಿರಿ. ಒಡೆಯನು ತನ್ನ ನೌಕರನಿಗೆ ನಿಶ್ಚಯಿಸಿದ ಸಮವಸ್ತ್ರವನ್ನು ಸರಿಯಾದ ಅಳತೆಯೊಂದಿಗೆ ಧರಿಸುತ್ತಾನೆ. ಅವನು ಅತ್ಯಂತ ಪೂಜ್ಯಭಾವದಿಂದ ಆತನ ಪ್ರತಿಯೊಂದು ಅಪ್ಪಣೆಯನ್ನು ಕೇಳಿದೊಡನೆ ಬಾಗಿಕೊಂಡು ಅದಕ್ಕೆ 'ಸರ್ವಾತ್ಮನಾ' ಸಿದ್ಧನಿದ್ದೇನೆಂದು ಹೇಳುವಾಗ, ಅವನಿಗಿಂತ ಹೆಚ್ಚಿನ ಆಜ್ಞಾಪಾಲಕ ಇನ್ನೊಬ್ಬನಿಲ್ಲವೋ ಎಂಬಂತೆ ತೋರುತ್ತದೆ. ಆರಾಧನೆಯ ಸಮಯ ಸನ್ನಿಹಿತವಾದೊಡನೆ ಎಲ್ಲರಿಗಿಂತಲೂ ಮುಂದಾಗಿ ಬಂದುನಿಂತು ಒಡೆಯನ ನಾಮವನ್ನು ಜಪಿಸುವುದರಲ್ಲಿ ಅಗ್ರಗಣ್ಯನೆನಿಸುತ್ತಾನೆ. ಆದರೆ ಆತನೇ ಇನ್ನೊಂದೆಡೆ ಒಡೆಯನ ಶತ್ರುಗಳು ಹಾಗೂ ಬಂಡುಗಾರರ ಸೇವೆ ಮಾಡುತ್ತಿರುತ್ತಾನೆ. ಆತನ ವಿರುದ್ಧ ಒಳಸಂಚು ನಡೆಸುವುದರಲ್ಲಿ ಭಾಗೀದಾರನಾಗುತ್ತಾನೆ. ಈ ಜಗತ್ತಿನಿಂದ ಆತನ ಹೆಸರನ್ನೇ ಅಳಿಸಿಬಿಡಬೇಕೆಂಬ ಪ್ರಯತ್ನದಲ್ಲಿರುವವರಿಗೆ ತನ್ನ ಸಹಕಾರ ನೀಡುತ್ತಾನೆ. ನಿಶಾಂಧಕಾರದಲ್ಲಿ ಒಡೆಯನ ಮನೆಗೆ ಕನ್ನ ಹಾಕಿ ದಿನ ಬೆಳಗಾದೊಡನೆ ಪ್ರಾಮಾಣಿಕ ಸೇವಕನಂತೆ ಕೈಕಟ್ಟಿ ಆತನ ಸನ್ನಿಧಿಯಲ್ಲಿ

ಹಾಜರಾಗುತ್ತಾನೆ. ಇಂತಹ ಸೇವಕನ ಬಗ್ಗೆ ನೀವೇನನ್ನುವಿರಿ? ಇವನು ಮಹಾ ಕಪಟಿ, ಕೃತಘ್ನ ಮತ್ತು ಬಂಡುಗಾರನೆಂದೇ ಹೇಳುವಿರಷ್ಟೆ. ಆದರೆ ಇದೇ ತರದ ಅಲ್ಲಾಹನ ನೌಕರನನ್ನು ನೀವು ಏನೆಂದು ಕರೆಯುವಿರಿ? ಕೆಲವರನ್ನು 'ಪೀರ್ ಸಾಹೇಬ', ಇನ್ನು ಕೆಲವರನ್ನು 'ಹಝ್ರತ್ ಮೌಲಾನಾ' ಮತ್ತೆ ಕೆಲವರನ್ನು 'ಮುತ್ತಕೀ' (ಧರ್ಮನಿಷ್ಠ, ಮಹಾಭಕ್ತ) ಎಂದಿತ್ಯಾದಿ ಕರೆಯುತ್ತೀರಿ. ಅವರನ್ನು ಹೀಗೆ ಕರೆಯಲು ಕಾರಣವಿಷ್ಟೆ. ನೀವು ಅವರ ಮುಖದ ಮೇಲೆ ಪೂರ್ಣ ಅಳತೆಯಲ್ಲಿ ಬೆಳೆದಿರುವ ಗಡ್ಡವನ್ನು, ಕಾಲ ಗಂಟಿಗಿಂತ ಎರಡೆರಡಂಗುಲ ಮೇಲಕ್ಕೆ ನಿಂತಿರುವ ಇಜಾರುಗಳನ್ನು, ನಮಾಝಿನಿಂದಾಗಿ ಅವರ ಹಣೆಯಲ್ಲಿ ಮೂಡಿದ ದಡ್ಡುಗಳನ್ನು, ಅವರ ಸುದೀರ್ಘ ನಮಾಝ್‌ಗಳನ್ನು ಮತ್ತು ಅವರ ಉದ್ದುದ್ದ ಜಪಮಾಲೆಗಳನ್ನು ನೋಡಿ ಅವರನ್ನು ಮಹಾ ಧಾರ್ಮಿಕರೂ ದೇವಭಕ್ತರೂ ಆಗಿದ್ದಾರೆಂದು ತಿಳಿದುಕೊಳ್ಳುತ್ತೀರಿ. ಈ ತಪ್ಪುಧಾರಣೆಯು 'ಇಬಾದತ್' ಮತ್ತು ಧಾರ್ಮಿಕತೆಯ ತಾತ್ಪರ್ಯಗಳನ್ನು ತಪ್ಪಾಗಿ ತಿಳಿದುಕೊಂಡುದರಿಂದಲೇ ನಿಮ್ಮಲ್ಲುಂಟಾಯಿತು.

ಕೈಕಟ್ಟಿ ಕಿಬ್ಲಾಭಿಮುಖವಾಗಿ ನಿಲ್ಲುವುದು, ಮೊಣಕಾಲುಗಳನ್ನು ಹಿಡಿದು ಬಾಗುವುದು, ನೆಲದಲ್ಲಿ ಕೈಗಳನ್ನೂರಿ ಸಜ್ದಃ (ಸಾಷ್ಟಾಂಗ) ಮಾಡುವುದು, ಕೆಲವು ನಿಶ್ಚಿತ ಪದಗಳನ್ನು ಉಚ್ಚರಿಸುವುದೇ ಮೊದಲಾದ ಕೆಲವು ಚಲನೆಗಳನ್ನೇ ನೀವು ಇಬಾದತ್ ಎಂದು ತಿಳಿದು ಕೊಂಡಿದ್ದೀರಿ. ರಮಝಾನ್ ತಿಂಗಳ ಆರಂಭದ ದಿನದಿಂದ ಶವ್ವಾಲ್ ತಿಂಗಳ ಚಂದ್ರ ದರ್ಶನವಾಗುವ ತನಕ ದಿನಂಪ್ರತಿ ಮುಂಜಾವಿನಿಂದ ಸಂಜೆಯ ತನಕ ಹಸಿವು ಬಾಯಾರಿಕೆ ಗಳಿಂದ ಇರುವುದನ್ನು ನೀವು ಇಬಾದತ್ ಎಂದು ತಿಳಿಯುತ್ತೀರಿ. ಪವಿತ್ರ ಕುರ್‌ಆನಿನ ಕೆಲವು ಸೂಕ್ತಗಳನ್ನು ಬಾಯಿಯಿಂದ ಪಠಿಸಿ ಬಿಡುವುದನ್ನು ನೀವು ಇಬಾದತ್ ಎಂದು ಭಾವಿಸುತ್ತೀರಿ. ಮಕ್ಕಾ ನಗರಕ್ಕೆ ಹೋಗಿ ಪವಿತ್ರ ಕಅಬಾದ ಪ್ರದಕ್ಷಿಣೆ ಮಾಡುವುದನ್ನು ನೀವು ಇಬಾದತ್ ಎಂದೆಣಿಸುತ್ತೀರಿ. ಹೀಗೆ ಕೆಲವು ನಿರ್ದಿಷ್ಟ ವಿಧಿಕರ್ಮಗಳ ಬಾಹ್ಯರೂಪಗಳಿಗೆ ಇಬಾದತ್ ಎಂಬ ಹೆಸರನ್ನಿಟ್ಟುಕೊಂಡಿರುತ್ತೀರಿ.

ಒಬ್ಬನು ಬಾಹ್ಯ ರೂಪಗಳೊಂದಿಗೆ ಅವುಗಳನ್ನು ಮಾಡಿದಾಗ ಅವನು ಅಲ್ಲಾಹನ ಇಬಾದತ್ ನೆರವೇರಿಸಿ ಬಿಟ್ಟನೆಂದೂ, **"ಜಿನ್ನ್ ಮತ್ತು ಮಾನವರನ್ನು ನನ್ನ ಇಬಾದತ್‌ಗಾಗಿ ಅಲ್ಲದೆ ಬೇರಾವ ಉದ್ದೇಶಕ್ಕಾಗಿಯೂ ಸೃಷ್ಟಿಸಲಿಲ್ಲ"** ಎಂಬ ದೇವವಾಣಿಯಲ್ಲಿ ಹೇಳಲಾದ ಉದ್ದೇಶವನ್ನು ಪೂರ್ತಿಗೊಳಿಸಿ ಬಿಟ್ಟನೆಂದೂ, ಇನ್ನು ಅವನು ತನ್ನ ಜೀವನದಲ್ಲಿ ತನ್ನಿಚ್ಛೆಯಂತೆ ಮಾಡಲು ಸ್ವತಂತ್ರನಾಗಿದ್ದಾನೆಂದೂ ಭ್ರಮಿಸುತ್ತೀರಿ.

ಇಬಾದತ್ : ಜೀವನದ ಎಲ್ಲ ರಂಗಗಳಲ್ಲಿ ದಾಸ್ಯ-ಅನುಸರಣೆ

ಆದರೆ ಅಲ್ಲಾಹನು ಯಾವ ಇಬಾದತ್‌ಗಾಗಿ ನಿಮ್ಮನ್ನು ಸೃಷ್ಟಿಸಿ ಅದರ ಆಜ್ಞೆಯನ್ನು ಮಾಡಿದ್ದಾನೋ ಅದು ಬೇರೆಯೇ ಆಗಿದೆ. ನಿಮ್ಮ ಜೀವನದಲ್ಲಿ ಪ್ರತಿಕ್ಷಣದಲ್ಲೂ ಎಲ್ಲಾ ಅವಸ್ಥೆಗಳಲ್ಲಿಯೂ ಅಲ್ಲಾಹನ ಅಜ್ಞಾಪಾಲನೆ ಮಾಡುವುದೂ ದೈವಿಕ ಕಾನೂನಿಗೆ ಎದುರಾದ

ಎಲ್ಲ ಅನುಸರಣೆಗಳಿಂದ ಸಂಪೂರ್ಣ ವಿಮುಕ್ತರಾಗುವುದೂ ಆ ಅಪೇಕ್ಷಿತ ಇಬಾದತ್ ಆಗಿದೆ. ನಿಮ್ಮ ಪ್ರತಿಯೊಂದು ಚಲನೆಯೂ ಅಲ್ಲಾಹನು ನಿಮಗಾಗಿ ನಿಶ್ಚಯಿಸಿದ ಮೇರೆಯೊಳಗಿರಬೇಕು. ನಿಮ್ಮ ಪ್ರತಿಯೊಂದು ಕೆಲಸವೂ ಅಲ್ಲಾಹನು ನಿಮಗೆ ತೋರಿಸಿಕೊಟ್ಟ ಕ್ರಮಗಳಂತಿರಬೇಕು. ಈ ಪ್ರಕಾರ ನಡೆಸುವ ನಿಮ್ಮ ಜೀವನವು ಸರ್ವ ಸಂಪೂರ್ಣವಾಗಿ ಅಲ್ಲಾಹನ ಇಬಾದತ್ ಆಗುವುದು, ಇಂತಹ ಜೀವನದಲ್ಲಿ ನೀವು ಮಲಗುವುದು, ಏಳುವುದು, ತಿನ್ನುವುದು, ಕುಡಿಯುವುದು, ಚಲಿಸುವುದು, ಮಾತನಾಡುವುದು, ಹೆಚ್ಚೇಕೆ ನೀವು ನಿಮ್ಮ ಪತ್ನಿಯ ಜೊತೆ ಸರಸವಾಡುವುದು ಮತ್ತು ನಿಮ್ಮ ಮಗುವನ್ನು ಮುದ್ದಿಸುವುದು ಕೂಡ ಇಬಾದತ್ ಆಗಿರುತ್ತದೆ.

ನೀವು ಲೌಕಿಕವೆನ್ನುವ ಈ ಕಾರ್ಯಗಳನ್ನೆಲ್ಲಾ ಅಲ್ಲಾಹನು ನಿಶ್ಚಯಿಸಿ ಕೊಟ್ಟ ಮೇರೆಗಳನ್ನು ಪಾಲಿಸಿಕೊಂಡು ಮಾಡಿದಾಗ ಅವು ಧಾರ್ಮಿಕ ಕಾರ್ಯ ಹಾಗೂ ಇಬಾದತ್ ಆಗುವುವು. ಜೀವನದ ಪ್ರತಿ ಹೆಜ್ಜೆಗೂ ನೀವು, ಅಲ್ಲಾಹನ ದೃಷ್ಟಿಯಲ್ಲಿ ಸರಿ ಯಾವುದು, ತಪ್ಪು ಯಾವುದು, ಹಲಾಲ್(ಧರ್ಮಬದ್ಧ) ಯಾವುದು, ಹರಾಮ್(ನಿಷಿದ್ಧ) ಯಾವುದು? ಯಾವುದನ್ನು ಕಡ್ಡಾಯ ಮಾಡಲಾಗಿದೆ- ಯಾವುದರಿಂದ ತಡೆಯಲಾಗಿದೆ? ಯಾವುದರಿಂದ ಅವನು ಸಂತುಷ್ಟನಾಗುವನು- ಯಾವುದರಿಂದ ಅವನು ಕೋಪಗೊಳ್ಳುವನು? ಎಂಬಿತ್ಯಾದಿಗಳನ್ನು ಗಮನಿಸಬೇಕು. ಉದಾ: ನೀವು ಜೀವನ ನಿರ್ವಹಣೆಗಾಗಿ ಸಂಪಾದಿಸಲು ಹೊರಡುತ್ತೀರಿ. ಆಗ ನಿಷಿದ್ಧವಾದ ಸಂಪತ್ತು ಧಾರಾಳವಾಗಿ ಅತ್ಯಂತ ಸುಲಭದಲ್ಲಿ ನಿಮ್ಮ ಕೈಸೇರುವ ಅನೇಕ ಸಂದರ್ಭಗಳು ಬರಬಹುದು.

ಆದರೆ ನೀವು ಅಲ್ಲಾಹನ ಭಯದಿಂದ ಅಂತಹ ಸಂಪತ್ತಿಗೆ ಕೈಯೊಡ್ಡದೆ ಧರ್ಮಬದ್ಧವಾದುದನ್ನೇ ಗಳಿಸಿ ತಂದಾಗ, ನೀವು ಈ ಕೆಲಸಕ್ಕಾಗಿ ವ್ಯಯಿಸಿದ ಸಮಯವೆಲ್ಲಾ 'ಇಬಾದತ್' ಆಗುತ್ತದೆ. ಹೀಗೆ ಸಂಪಾದಿಸಿದ ಆಹಾರವನ್ನು ನೀವು ಸ್ವತಃ ಉಣ್ಣುತ್ತೀರಿ; ನಿಮ್ಮ ಹೆಂಡತಿ ಮಕ್ಕಳಿಗೂ ಮತ್ತು ಅಲ್ಲಾಹನು ನಿಶ್ಚಯಿಸಿದ ಇತರ ಹಕ್ಕುದಾರರಿಗೂ ಉಣಿಸುತ್ತೀರಿ. ಆಗ ಈ ಕಾರ್ಯಗಳಿಗೆಲ್ಲಾ ಪುಣ್ಯಫಲ ಪಡೆಯಲು ನೀವು ಅರ್ಹರಾದಿರಿ. ನೀವು ನಡೆಯುವಾಗ ದಾರಿಯಲ್ಲಿ ಬಿದ್ದಿರುವ ಕಲ್ಲು-ಮುಳ್ಳುಗಳನ್ನು ಕಂಡಾಗ ಅಲ್ಲಾಹನ ಇತರ ದಾಸರಿಗೆ ತೊಂದರೆಯಾಗಬಹುದೆಂದೆಣಿಸಿ ಅದನ್ನು ಎತ್ತಿ ದೂರ ಎಸೆದರೆ ಇದೂ ಇಬಾದತ್ ಎನಿಸುತ್ತದೆ.

ನೀವು ರೋಗಿಯ ಶುಶ್ರೂಷೆಗೈದರೆ, ಕುರುಡನಿಗೆ ದಾರಿಗಾಣಿಸಿದರೆ ಅಥವಾ ಕಷ್ಟದಲ್ಲಿದ್ದವರಿಗೆ ಸಹಾಯ ಮಾಡಿದರೆ ಇವೆಲ್ಲಾ ಇಬಾದತ್ ಎನಿಸುತ್ತವೆ. ನೀವು ಮಾತನಾಡುವಾಗ ಸುಳ್ಳು, ಪರದೂಷಣೆ, ನಿಂದೆ ಮತ್ತು ಇತರರ ಮನನೋಯಿಸುವ ಮಾತುಗಳಿಂದ ದೂರವಿದ್ದು ಅಲ್ಲಾಹನ ಭಯದಿಂದ ಸತ್ಯವನ್ನೇ ಆಡಿದರೆ ಆಗ ನೀವು ಕಳೆದ ಪ್ರತಿಕ್ಷಣವನ್ನು ಇಬಾದತ್‌ನಲ್ಲಿ ಕಳೆದಂತಾಗುವುದು.

ಒಟ್ಟಿನಲ್ಲಿ ನಿಮಗೆ ಬೋಧವರಿತಂದಿನಿಂದ ಕೊನೆಯುಸಿರಿನ ತನಕ ಅಲ್ಲಾಹನ ನಿಯಮ ನಿಬಂಧನೆಗಳನುಸಾರವಾಗಿ ಮತ್ತು ಅವನ ಆಜ್ಞೆಗಳಂತೆ ಜೀವನ ನಿರ್ವಹಿಸುವುದೇ ನೈಜ ಇಬಾದತ್ ಆಗಿದೆ. ಈ ಇಬಾದತ್‌ಗೆ ನಿಶ್ಚಿತ ಸಮಯವೆಂದಿಲ್ಲ. ಇದು ಸದಾ ಜರಗುತ್ತಿರ ಬೇಕಾದ ಇಬಾದತ್. ಈ ಇಬಾದತ್‌ಗೆ ನಿಶ್ಚಿತ ರೂಪವೂ ಇಲ್ಲ. ಪ್ರತಿಯೊಂದು ಕೆಲಸದಲ್ಲೂ, ಪ್ರತಿಯೊಂದು ರೂಪದಲ್ಲೂ ಅಲ್ಲಾಹನಿಗೆ ಮಾತ್ರ ಇಬಾದತ್ ಆಗಬೇಕು. ಸ್ವಲ್ಪ ಹೊತ್ತಿಗೆ ನಾನು ಅಲ್ಲಾಹನ ದಾಸನು; ಉಳಿದ ಹೊತ್ತಿಗೆ ಅಲ್ಲಾಹನ ದಾಸನಲ್ಲವೆಂದು ನೀವು ಹೇಳಲಾರಿರಷ್ಟೆ. ಅದೇ ರೀತಿಯಲ್ಲಿ ಇದು ಅಲ್ಲಾಹನ ಇಬಾದತ್‌ನ ಸಮಯವೆಂದೂ, ಉಳಿದ ಸಮಯದಲ್ಲಿ ಅಲ್ಲಾಹನ ಇಬಾದತ್ ಮಾಡಬೇಕಾಗಿಲ್ಲವೆಂದೂ ಹೇಳಲಾರಿರಿ.

ಸಹೋದರರೇ,

ಈಗ ನಿಮಗೆ ಇಬಾದತ್‌ನ ಸರಿಯಾದ ಅರ್ಥ ತಿಳಿಯಿತಷ್ಟೆ. ಜೀವನದಲ್ಲಿ ಪ್ರತಿ ಕ್ಷಣದಲ್ಲೂ, ಪ್ರತಿಯೊಂದು ಅವಸ್ಥೆಯಲ್ಲೂ ಅಲ್ಲಾಹನ ಆರಾಧನೆ, ದಾಸ್ಯ ಮತ್ತು ಅನುಸರಣೆ ಮಾಡುವುದರ ಹೆಸರೇ 'ಇಬಾದತ್' ಆಗಿದೆ. ಹಾಗಾದರೆ ನಮಾಝ್, ಉಪವಾಸ, ಹಜ್ಜ್ ಇತ್ಯಾದಿಗಳೆಲ್ಲ ಏನೆಂದು ನೀವು ಪ್ರಶ್ನಿಸುವಿರಿ. ನಿಮ್ಮ ಮೇಲೆ ಕಡ್ಡಾಯಗೊಳಿಸ ಲಾಗಿರುವ ಈ ಇಬಾದತ್‌ಗಳ ಉದ್ದೇಶವು ನಿಮ್ಮನ್ನು ಅನವರತವೂ ಎಲ್ಲಾ ಸ್ಥಿತಿಗಳಲ್ಲಿಯೂ ನೆರವೇರಿಸಬೇಕಾದ ಮಹಾ ಇಬಾದತ್‌ಗಾಗಿ ಅಣಿಗೊಳಿಸುವುದಾಗಿದೆ. ನೀವು ಅಲ್ಲಾಹನ ದಾಸರಾಗಿದ್ದು, ಅವನ ದಾಸ್ಯವನ್ನೇ ನೀವು ಸದಾ ಮಾಡುತ್ತಿರಬೇಕೆಂದು ನಮಾಝ್ ದಿನಂಪ್ರತಿ ಐದು ಬಾರಿ ನಿಮ್ಮನ್ನು ಜ್ಞಾಪಿಸುತ್ತದೆ.

ಉಪವಾಸವು ವರ್ಷಕ್ಕೊಮ್ಮೆ ನಿರಂತರ ಒಂದು ತಿಂಗಳ ತನಕ ಇದೇ ಮಹಾ ಇಬಾದತ್‌ಗಾಗಿ ತರಬೇತಿ ನೀಡುತ್ತದೆ. ಝಕಾತ್ ನಿಮ್ಮಲ್ಲಿರುವ ಹಾಗೂ ನೀವು ಗಳಿಸಿದ ಸಂಪತ್ತು ಅಲ್ಲಾಹನ ಕೊಡುಗೆಯಾಗಿದ್ದು ಅದನ್ನು ನಿಮ್ಮ ವಿಷಯಾಸಕ್ತಿಗಳಿಗಾಗಿ ಮಾತ್ರ ವಿನಿಯೋಗಿಸದೆ ಅದರ ಯಥಾರ್ಥ ಒಡೆಯನ ಹಕ್ಕನ್ನು ಸಂದಾಯ ಮಾಡಬೇಕೆಂದು ಬಾರಿ ಬಾರಿಗೂ ನಿಮ್ಮ ಗಮನವನ್ನು ಸೆಳೆಯುತ್ತದೆ. ಹಜ್ಜ್ ನಿಮ್ಮ ಹೃದಯದಲ್ಲಿ ಅಲ್ಲಾಹನ ಅಚಲ ಪ್ರೇಮವು ನೆಲಸುವಂತೆ ಮಾಡುತ್ತದೆ. ಹೃದಯದಲ್ಲಿ ಪ್ರೇಮವು ನೆಲೆಯೂರಿ ಬಿಟ್ಟರೆ ಅದರ ಪ್ರಭಾವವು ಜೀವಮಾನವಿಡೀ ಸ್ಥಿರವಾಗಿ ಉಳಿಯುತ್ತದೆ. ಈ ಎಲ್ಲಾ ಇಬಾದತ್‌ಗಳನ್ನು ನೆರವೇರಿಸಿದ ಬಳಿಕ ನಿಮ್ಮ ಸಂಪೂರ್ಣ ಜೀವನವೇ 'ಇಬಾದತ್' ಆಗುವಂತಾದರೆ ಆಗ ನಿಮ್ಮ ನಮಾಝ್, ಉಪವಾಸ, ಝಕಾತ್ ಮತ್ತು ಹಜ್ಜ್‌ಗಳು ನಿಜಾರ್ಥದಲ್ಲಿ ಆರಾಧನೆಗಳಾಗಿ ಮಾರ್ಪಡುತ್ತವೆ.

ಈ ಉದ್ದೇಶವು ನೆರವೇರದೆ ಹೋದರೆ ಕೇವಲ ರುಕೂಅ್ ಮತ್ತು ಸುಜೂದ್ ಮಾಡುವುದರಿಂದ, ಅನ್ನಪಾನೀಯಗಳನ್ನು ತೊರೆಯುವುದರಿಂದ, 'ಝಕಾತ್'ನ ಹಣ ಪಾವತಿ ಮಾಡುವುದರಿಂದ ಯಾವ ಪುರುಷಾರ್ಥವೂ ಆಗಲಾರದು. ಈ ಬಾಹ್ಯ ಆಚಾರಗಳನ್ನು ಒಂದು ಶರೀರಕ್ಕೆ ಹೋಲಿಸಬಹುದು. ಶರೀರದಲ್ಲಿ ಜೀವವಿದ್ದರೆ ಮತ್ತು ಅದು ಚಲಿಸುತ್ತಲೂ ಕೆಲಸ

ಮಾಡುತ್ತಲೂ ಇದ್ದರೆ, ಅದು ಸಜೀವ ಮನುಷ್ಯನೆನಿಸುವುದು. ಅದರಲ್ಲಿ ಜೀವವಿಲ್ಲದೆ ಹೋದರೆ ಅದೊಂದು ಶವವೆನಿಸುವುದು. ಕೈ, ಕಾಲು, ಕಣ್ಣು, ಮೂಗು ಇತ್ಯಾದಿಗಳೆಲ್ಲಾ ಶವಕ್ಕೂ ಇರುತ್ತವೆ. ಆದರೆ ಅದರಲ್ಲಿ ಜೀವವಿಲ್ಲದಿರುವುದರಿಂದ ಅದನ್ನು ದಫನ ಮಾಡುತ್ತೀರಿ. ಅದೇ ರೀತಿಯಲ್ಲಿ ನಮಾಝ್‌ನ ನಿಶ್ಚಿತ ವಿಧಿ-ಕರ್ಮಗಳು ಪೂರ್ಣವಾಗಿ ನೆರವೇರಿದಾಗಲೂ ಉಪವಾಸದ ಎಲ್ಲ ಶರತ್ತುಗಳನ್ನು ಪೂರೈಸಿದಾಗಲೂ ಅಲ್ಲಾಹನ ಭಯ, ಅವನ ಪ್ರೇಮ, ಕೃತಜ್ಞತೆ, ಅನುಸರಣೆಗಳಿಲ್ಲದೆ ಹೋದಾಗ ಅದು ಒಂದು ನಿರ್ಜೀವ ವಸ್ತುವಾಗಿ ಬಿಡುವುದು.

ಮುಂದಿನ ಉಪನ್ಯಾಸದಲ್ಲಿ ಕಡ್ಡಾಯಗೊಳಿಸಲ್ಪಟ್ಟ ಇಬಾದತ್‌ಗಳು ಮನುಷ್ಯನನ್ನು ಅಲ್ಲಾಹನ ಆ ಮಹಾ ಇಬಾದತ್‌ಗೆ ಹೇಗೆ ಅಣಿಗೊಳಿಸುತ್ತವೆ ಮತ್ತು ಅವುಗಳನ್ನು ಬೋಧವರಿತು ನೆರವೇರಿಸುವುದರ ಮೂಲಕ ಅವುಗಳ ಉದ್ದೇಶ ಪ್ರಾಪ್ತಿಗಾಗಿ ಶ್ರಮಿಸಿದಾಗ ಅವು ನಿಮ್ಮ ಜೀವನದಲ್ಲಿ ಯಾವ ರೀತಿ ಪ್ರಭಾವ ಬೀರುತ್ತವೆಂಬುದನ್ನು ವಿವರವಾಗಿ ತಿಳಿಸುವೆನು.

○

ನಮಾಝ್

ಹಿಂದಿನ ಉಪನ್ಯಾಸದಲ್ಲಿ ನಾನು ನಿಮ್ಮ ಮುಂದೆ ಜಿನ್ನ್ (ಯಕ್ಷ) ಮತ್ತು ಮಾನವರ ಸೃಷ್ಟಿಯ ಏಕಮಾತ್ರ ಉದ್ದೇಶವಾಗಿರುವ 'ಇಬಾದತ್'ನ ತಾತ್ಪರ್ಯವನ್ನು ವಿವರಿಸಿದ್ದೆ. ಇಸ್ಲಾಮಿನಲ್ಲಿ ಕಡ್ಡಾಯಗೊಳಿಸಲಾಗಿರುವ ಆರಾಧನಾ ಕರ್ಮಗಳು ಆ ಮಹತ್ತಾದ ಹಾಗೂ ಯಥಾರ್ಥವಾದ ಇಬಾದತ್‌ಗೆ ಯಾವ ರೀತಿಯಲ್ಲಿ ಮಾನವನನ್ನು ಅಣಿಗೊಳಿಸುತ್ತವೆ ಎಂಬುದನ್ನು ತೋರಿಸಿ ಕೊಡುವೆನೆಂಬ ವಾಗ್ದಾನವನ್ನೂ ಮಾಡಿದ್ದೆ. ಇವುಗಳ ಪೈಕಿ ಅತಿ ದೊಡ್ಡ ಹಾಗೂ ಪ್ರಾಮುಖ್ಯ ಆರಾಧನಾ ಕರ್ಮ ನಮಾಝ್ ಆಗಿದೆ.

ಇಬಾದತ್‌ನ ವಿಶಾಲಾರ್ಥ

'ಇಬಾದತ್' ಎಂದರೆ 'ದಾಸ್ಯ' ಎಂದು ನಿಮಗೆ ತಿಳಿದೇ ಇದೆ. ನೀವು ಅಲ್ಲಾಹನ ದಾಸರಾಗಿಯೇ ಸೃಷ್ಟಿಸಲ್ಪಟ್ಟಿರುವಾಗ ಯಾವ ಹೊತ್ತಿನಲ್ಲೂ ಯಾವ ಅವಸ್ಥೆಯಲ್ಲಿಯೂ ಅವನ ದಾಸ್ಯತ್ವದಿಂದ ಹೊರಗಿರಲು ಸಾಧ್ಯವಿಲ್ಲ. ನಾನು ಇಂತಿಷ್ಟು ತಾಸುಗಳ ವರೆಗೆ ಅಲ್ಲಾಹನ ದಾಸನಾಗಿರುತ್ತೇನೆಂದೂ ಉಳಿದ ಅವಧಿಯಲ್ಲಿ ಅವನ ದಾಸನಲ್ಲವೆಂದೂ ನೀವು ಹೇಳಲಾರಿರಷ್ಟೆ. ಅದೇ ರೀತಿಯಲ್ಲಿ ನಾನು ಇಂತಿಷ್ಟು ಹೊತ್ತು ಅಲ್ಲಾಹನ ಇಬಾದತ್ ಮಾಡುವೆನೆಂದೂ, ಉಳಿದ ವೇಳೆ ಸ್ವತಂತ್ರನಾಗಿದ್ದು ನನ್ನಿಚ್ಛೆಗೆ ಬಂದಂತೆ ಮಾಡುವೆನೆಂದೂ ನೀವು ಹೇಳಲಾರಿರಿ. ನೀವಂತೂ ಹುಟ್ಟಿನಿಂದಲೇ ಅವನ ದಾಸರು. ಅವನು ನಿಮ್ಮನ್ನು ಸೃಷ್ಟಿಸಿದುದು ತನ್ನ ದಾಸ್ಯಕ್ಕಾಗಿಯೇ, ಆದ್ದರಿಂದ ನಿಮ್ಮ ಇಡೀ ಜೀವಮಾನವು ಅವನ ಇಬಾದತ್‌ನಲ್ಲೇ ಕಳೆಯಬೇಕು. ಒಂದು ಕ್ಷಣಕ್ಕಾದರೂ ಅವನ ಇಬಾದತ್‌ನಿಂದ ಅಲಕ್ಷ್ಯರಾಗಿರಲು ಸಾಧ್ಯವೇ ಇಲ್ಲ.

ಇಬಾದತ್ ಎಂದರೆ ಲೌಕಿಕ ವ್ಯವಹಾರಗಳಿಂದ ದೂರ ಸರಿದು ಒಂದು ಮೂಲೆಯಲ್ಲಿದ್ದುಕೊಂಡು ಅಲ್ಲಾಹನ ನಾಮ ಜಪಿಸುತ್ತಿರುವುದರ ಹೆಸರಲ್ಲ. ಬದಲಾಗಿ ನೀವು ಯಾವ ಕೆಲಸ ಮಾಡುವುದಿದ್ದರೂ ದೇವ ನಿರ್ಮಿತ ಕಾನೂನುಗಳಿಗನುಸಾರ ಮಾಡುತ್ತಿದ್ದರೆ ಅದು ಇಬಾದತ್ ಆಗಿರುವುದೆಂದು ನಾನು ನಿಮಗೆ ತಿಳಿಸಿರುತ್ತೇನೆ. ನಿಮ್ಮ ದೈನಂದಿನ ಚಟುವಟಿಕೆಗಳೆಲ್ಲವೂ ಅಲ್ಲಾಹನ ಕಾನೂನಿಗೆ ಅಧೀನವಾಗಿರಬೇಕು. ನೀವು ಮನೆಯಲ್ಲಿರುವಾಗ ನಿಮ್ಮ ಪತ್ನಿ-ಮಕ್ಕಳು, ಸಹೋದರ-ಸಹೋದರಿಯರು ಮತ್ತಿತರ ಸಂಬಂಧಿಕರೊಂದಿಗೆ

ಅಲ್ಲಾಹನ ಆಜ್ಞೆಗಳಿಗನುಸಾರ ವ್ಯವಹರಿಸಬೇಕು. ನೀವು ನಿಮ್ಮ ಗೆಳೆಯರೊಂದಿಗೆ ನಕ್ಕು ನಲಿದಾಡುತ್ತಿರುವಾಗಲೂ ನಾವು ಅಲ್ಲಾಹನ ದಾಸ್ಯದಿಂದ ಹೊರತಾಗಿಲ್ಲವೆಂಬುದನ್ನು ನೆನಪಿಟ್ಟಿರಬೇಕು. ನೀವು ಸಂಪಾದನೆ ಮಾಡಹೊರಟಾಗಲೂ, ಜನರೊಂದಿಗೆ ವ್ಯಾಪಾರ ವ್ಯವಹಾರ ಮಾಡುತ್ತಿರುವಾಗಲೂ, ನಿಮ್ಮ ಮಾತು ಕೃತಿಗಳಲ್ಲಿ ಅಲ್ಲಾಹನ ವಿಧಿ ನಿಯಮ ಗಳನ್ನು ಪಾಲಿಸಬೇಕು. ಅಲ್ಲಾಹನು ನಿಶ್ಚಯಿಸಿದ ಮೇರೆಯನ್ನು ಎಂದೂ ಮೀರಬಾರದು.

ನೀವು ರಾತ್ರೆಯ ಅಂಧಕಾರದಲ್ಲಿ ಯಾವುದಾದರೂ ಪಾಪ ಕೃತ್ಯವನ್ನು ಯಾರಿಗೂ ಕಾಣದಂತೆ ಮಾಡಬಲ್ಲಿರಾದರೂ ಅಲ್ಲಾಹನು ನಿಮ್ಮನ್ನು ಸದಾ ವೀಕ್ಷಿಸುತ್ತಿರುವನೆಂಬುದು ನಿಮಗೆ ನೆನಪಿರಬೇಕು. ಆಗ ನಿಮಗೆ ಅಲ್ಲಾಹನ ಭಯದ ಹೊರತು ಬೇರೆ ಯಾರ ಭಯವೂ ಇರಬಾರದು. ನೀವು ಏಕಾಂಗಿಯಾಗಿ ಯಾವುದಾದರೊಂದು ನಿರ್ಜನ ಪ್ರದೇಶದಲ್ಲಿ ಸಾಗುತ್ತಿರುವಾಗ ಪೊಲೀಸರಾಗಲಿ ಇನ್ನಿತರ ವೀಕ್ಷಕರಾಗಲಿ ಇಲ್ಲದ ಸ್ಥಿತಿಯಲ್ಲಿ ಯಾವುದೇ ಅಪರಾಧ ಮಾಡಬಹುದಾದ ಸಂದರ್ಭ ಪ್ರಾಪ್ತವಾದರೂ ಅಲ್ಲಾಹನ ಭಯದಿಂದಾಗಿ ನೀವು ಆ ದುಷ್ಕೃತ್ಯದಿಂದ ಹಿಂಜರಿಯಬೇಕು. ಸುಳ್ಳು, ವಂಚನೆ, ಅಕ್ರಮಗಳ ಮೂಲಕ ಹೇರಳ ಲಾಭಗಳಿಸಬಹುದಾದ ಸಂದರ್ಭ ಒದಗಿ ಬಂದು ಅದರಿಂದ ಯಾರೂ ನಿಮ್ಮನ್ನು ತಡೆಯು ವವರಿಲ್ಲವೆಂದು ತಿಳಿದಿರುವಾಗಲೂ ಅಲ್ಲಾಹನು ಮೆಚ್ಚಲಾರನೆಂದು ಹೆದರಿ ಆ ಲಾಭವನ್ನು ಬಿಟ್ಟು ಬಿಡಬೇಕು. ಸತ್ಯ-ಪ್ರಾಮಾಣಿಕತೆಗಳಂತೆ ನಡೆದಾಗ ನಿಮಗೆ ಭಾರೀ ಕಷ್ಟನಷ್ಟಗಳುಂಟಾ ದಾಗಲೂ, ಅಲ್ಲಾಹನ ಮೆಚ್ಚುಗೆ ಪ್ರಾಪ್ತವಾಗುವುದೆಂಬ ಏಕ ಮಾತ್ರ ಭರವಸೆಯಿಂದ ಅವುಗಳನ್ನು ಸಹಿಸಲು ಸಿದ್ಧರಾಗಬೇಕು. ಇದುವೇ ಇಬಾದತ್.

ಲೋಕ ವ್ಯವಹಾರಗಳನ್ನು ಬಿಟ್ಟು ಎಲ್ಲಾದರೊಂದು ಮೂಲೆಯಲ್ಲಿ ಕುಳಿತು ಜಪಮಣಿಗಳನ್ನು ತಿರುವುತ್ತಿರುವುದು ಇಬಾದತ್ ಅಲ್ಲ. ಬದಲಾಗಿ ಲೌಕಿಕ ವ್ಯವಹಾರಗಳಲ್ಲಿ ತಲ್ಲೀನರಾಗಿದ್ದುಕೊಂಡು ಆತನ ಆಜ್ಞೆಗಳನ್ನು ಪಾಲಿಸುವುದೇ ಇಬಾದತ್ ಆಗಿದೆ. ನಾಲಗೆಯಿಂದ 'ಅಲ್ಲಾಹ್, ಅಲ್ಲಾಹ್' ಎಂದು ಜಪಿಸುವುದನ್ನು ಅಲ್ಲಾಹನ 'ದಿಕ್ರ್' (ಜಪ ಅಥವಾ ಸ್ಮರಣೆ) ಎಂದು ಹೇಳುವುದಿಲ್ಲ. ಲೌಕಿಕ ಜಂಜಾಟಗಳಲ್ಲಿ ಸಿಲುಕಿಕೊಂಡು ಆ ಗೊಂದಲಗಳ ನಡುವೆಯೂ ಅಲ್ಲಾಹನನ್ನು ಸ್ಮರಿಸುವುದು ಆತನ ದಿಕ್ರ್ ಆಗಿದೆ. ಅಲ್ಲಾಹನನ್ನು ಮರೆತು ಬಿಡಬಹುದಾದಂತಹ ಕಾರ್ಯಕಲಾಪಗಳಲ್ಲಿ ನಿರತರಾಗಿದ್ದೂ ಆತನನ್ನು ಮರೆಯದಿರುವುದು, ಐಹಿಕ ಜೀವನದಲ್ಲಿ ಅಲ್ಲಾಹನ ಕಾನೂನು ಗಳನ್ನು ಮುರಿಯುವ ಅನೇಕಾನೇಕ ಸಂದರ್ಭಗಳು ದೊಡ್ಡ ದೊಡ್ಡ ಲಾಭಗಳ ಲಾಲಸೆಯನ್ನು ಅಥವಾ ನಷ್ಟಗಳ ಭೀತಿಯನ್ನು ತೋರಿಸುತ್ತಾ ಎದುರಾದಾಗಲೂ ಅಲ್ಲಾಹನನ್ನು ಸ್ಮರಿಸಿ ಅವನ ಕಾನೂನುಗಳನ್ನು ಪಾಲಿಸುವುದು. ಇದನ್ನೇ ನಿಜವಾದ ದೇವಧ್ಯಾನ ಮತ್ತು ಇದನ್ನೇ ಆರಾಧ್ಯನ ದಿಕ್ರ್ (ಸ್ಮರಣೆ) ಎನ್ನುವುದು.

ಕುರ್‌ಆನ್‌ನಲ್ಲಿ-

فَإِذَا قُضِيَتِ الصَّلَوٰةُ فَانتَشِرُوا فِي الْأَرْضِ وَابْتَغُوا مِن فَضْلِ اللَّهِ وَاذْكُرُوا اللَّهَ كَثِيرًا لَّعَلَّكُمْ تُفْلِحُونَ ⑩

"ನಮಾಝ್ ಮುಗಿದ ಬಳಿಕ ಭೂಮಿಯ ಮೇಲೆ ಚದುರಿ ಬಿಡಿರಿ ಮತ್ತು ಅಲ್ಲಾಹನ ಅನುಗ್ರಹವನ್ನರಸಿರಿ. ಅಲ್ಲಾಹನನ್ನು ಅತ್ಯಧಿಕ ಸ್ಮರಿಸುತ್ತಲಿರಿ. ನಿಮಗೆ ಯಶಸ್ಸು ಪ್ರಾಪ್ತವಾಗಲೂಬಹುದು" (ಅಲ್ ಜುಮುಅ: 10) ಎಂದು ಸೂಚನೆ ನೀಡಿರುವುದು ಇಂತಹ ದಿಕ್ರ್‌ನ ಕಡೆಗೇ ಆಗಿದೆ.

ನಮಾಝ್‌ನ ಪ್ರಯೋಜನಗಳು

'ಇಬಾದತ್'ನ ಈ ಅರ್ಥವನ್ನು ಮನಸ್ಸಿನಲ್ಲಿರಿಸಿಕೊಂಡ ಬಳಿಕ ಇಷ್ಟು ದೊಡ್ಡ ಇಬಾದತನ್ನು ನೆರವೇರಿಸಲು ಏನೆಲ್ಲ ಬೇಕು ಮತ್ತು ನಮಾಝ್ ಅವುಗಳನ್ನೆಲ್ಲಾ ಮಾನವನಲ್ಲಿ ಹೇಗೆ ಉಂಟು ಮಾಡುತ್ತದೆ ಎಂಬುದನ್ನು ನೋಡಿರಿ:

ದಾಸ್ಯ ಪ್ರಜ್ಞೆ

ಮೊಟ್ಟಮೊದಲು ನೀವು ಅಲ್ಲಾಹನ ದಾಸರಾಗಿದ್ದು ಎಲ್ಲ ಕಾರ್ಯಗಳಲ್ಲೂ ಸದಾ ಅವನ ದಾಸ್ಯವನ್ನೇ ಮಾಡಬೇಕಾಗಿದೆ ಎಂಬುದನ್ನು ಪದೇಪದೇ ನಿಮ್ಮ ನೆನಪಿಗೆ ತರುವ ಅಗತ್ಯವಿದೆ. ಏಕೆಂದರೆ, ನಿಮ್ಮಲ್ಲಿ ಓರ್ವ ಶೈತಾನನು ನೆಲೆಸಿದ್ದಾನೆ. ಅವನು ನಿಮ್ಮೊಡನೆ "ನೀನು ನನ್ನ ದಾಸನಾಗಿರುತ್ತಿ" ಎಂದು ಯಾವಾಗಲೂ ಹೇಳುತ್ತಲಿರುತ್ತಾನೆ. ಇತರ ಕೋಟ್ಯಾವಧಿ ಶೈತಾನರು ಜಗತ್ತಿನಾದ್ಯಂತ ಹಬ್ಬಿಕೊಂಡಿದ್ದು, ಅವುಗಳ ಪೈಕಿ ಪ್ರತಿಯೊಬ್ಬನೂ "ನೀನು ನನ್ನ ದಾಸ" ಎಂದು ನಿಮ್ಮೊಡನೆ ಹೇಳುತ್ತಿರುತ್ತಾನೆ. ನೀನು ಯಾರ ದಾಸನೂ ಅಲ್ಲ; ನೀನು ಕೇವಲ ಅಲ್ಲಾಹನ ದಾಸನಾಗಿರುತ್ತಿ ಎಂದು ಮಾನವನಿಗೆ ದಿನಂಪ್ರತಿ ಅನೇಕ ಬಾರಿ ನೆನಪಿಸದೆ ಹೋದರೆ ಆ ಅಸಂಖ್ಯಾತ ಶೈತಾನರ ಮಾಯಾಜಾಲದಿಂದ ಪಾರಾಗುವುದು ಅಸಾಧ್ಯ. ಈ ಕಾರ್ಯವನ್ನೇ ನಮಾಝ್ ಮಾಡುತ್ತದೆ. ಮುಂಜಾನೆ ಎದ್ದ ಕೂಡಲೇ ಎಲ್ಲಾ ಕೆಲಸ ಕಾರ್ಯಗಳಿಗಿಂತ ಮೊದಲು ಅದು ಇದನ್ನೇ ನಿಮ್ಮ ನೆನಪಿಗೆ ತರುತ್ತದೆ. ಅನಂತರ ಹಗಲಲ್ಲಿ ನೀವು ನಿಮ್ಮ ಕಾರ್ಯ ಕಲಾಪಗಳಲ್ಲಿ ನಿರತರಾಗುತ್ತೀರಿ. ಆಗ ಪುನಃ ಮೂರು ಬಾರಿ ನಮಾಝ್ ಈ ಸ್ಮರಣೆಯನ್ನು ಜಾಗೃತಗೊಳಿಸುತ್ತದೆ. ರಾತ್ರಿ ಮಲಗುವುದಕ್ಕೆ ಮುಂಚೆ ಕೊನೆಯದಾಗಿ ಅದನ್ನೇ ಪುನರಾವರ್ತಿಸಲಾಗುತ್ತದೆ. ಇದು ನಮಾಝ್‌ನಿಂದ ಸಿಗುವ ಒಂದನೆಯ ಲಾಭ. ಈ ಕಾರಣದಿಂದಾಗಿಯೇ ಕುರ್‌ಆನಿನಲ್ಲಿ ನಮಾಝುನ್ನು 'ದಿಕ್ರ್' ಎಂದು ಕರೆಯಲಾಗಿದೆ. ಇದು ಅಲ್ಲಾಹನ ಸ್ಮರಣೆ ಎಂದರ್ಥ.

ಕರ್ತವ್ಯ ಪಾಲನೆ

ಜೀವನದ ಪ್ರತಿಯೊಂದು ಹೆಜ್ಜೆಯಲ್ಲೂ ನಿಮಗೆ ಅಲ್ಲಾಹನ ಆಜ್ಞಾಪಾಲನೆ ಮಾಡ ಬೇಕಾಗಿದೆ. ಇದಕ್ಕಾಗಿ ನಿಮ್ಮಲ್ಲಿ ಕರ್ತವ್ಯ ಪ್ರಜ್ಞೆಯ ಗುಣ ಬೆಳೆಯಬೇಕಾಗಿದೆ. ನಿಷ್ಠೆಯಿಂದ ಕರ್ತವ್ಯಪಾಲನೆ ಮಾಡುವ ಅಭ್ಯಾಸವೂ ಆಗಬೇಕಾಗಿದೆ. 'ಕರ್ತವ್ಯ'ವೆಂದರೇನೆಂದೇ ಅರಿಯ ದಾತನು ಆಜ್ಞಾಪಾಲನೆಯನ್ನೆಂದೂ ಮಾಡಲಾರ. ಕರ್ತವ್ಯಪ್ರಜ್ಞೆ ಆದರೂ ಅವನ ತರಬೇತಿಯು ಅದನ್ನು ನೆರವೇರಿಸಲು ಸಿದ್ಧನಾಗುವ ರೀತಿಯಲ್ಲಿ ಅಪಕ್ವ ಹಾಗೂ ದೋಷಯುಕ್ತ ರೀತಿಯಲ್ಲಿ ಆಗಿದ್ದರೆ ದಿನದ 24 ತಾಸುಗಳುದ್ದಕ್ಕೂ ಅವನಿಗೆ ಒಪ್ಪಿಸಲಾಗುವ ಸಾವಿರಾರು ಕರ್ತವ್ಯಗಳನ್ನು ನಿಷ್ಠೆಯಿಂದ ನೆರವೇರಿಸುವನೆಂದು ನಿರೀಕ್ಷಿಸಲಿಕ್ಕೂ ಆಗದು.

ಅನುಸರಣೆಯ ತರಬೇತಿ

ಸೈನ್ಯ ಹಾಗೂ ಆರಕ್ಷಕ(ಪೊಲೀಸ್) ದಳಗಳಲ್ಲಿ ದುಡಿದವರಿಗೆ ಆ ನೌಕರಿಗಳಲ್ಲಿ ಕರ್ತವ್ಯಪ್ರಜ್ಞೆ ಹಾಗೂ ಕರ್ತವ್ಯ ನಿರ್ವಹಣೆಯ ತರಬೇತಿಯನ್ನು ಕೊಡುವ ರೀತಿ ಹೇಗೆಂಬುದು ತಿಳಿದಿರುತ್ತದೆ. ರಾತ್ರಿ ಹಗಲುಗಳಲ್ಲಿ ಅನೇಕಾನೇಕ ಸಲ ಕಹಳೆ ಊದಿ ಸಿಪಾಯಿಗಳಿಗೆ ಹಾಜರಿ ಕೊಡಲು ಅಪ್ಪಣೆ ಕೊಡಲಾಗುತ್ತದೆ. ಅವರಿಂದ ಕವಾಯಿತು ಮಾಡಿಸಲಾಗುತ್ತದೆ. ಇದನ್ನು ಆಜ್ಞಾಪಾಲನೆಯ ಅಭ್ಯಾಸ ಮಾಡುವ ಉದ್ದೇಶದಿಂದ ಮಾಡಲಾಗುತ್ತದೆ. ಒಬ್ಬನು ಕಹಳೆಯ ಧ್ವನಿ ಕೇಳಿಯೂ ಮನೆಯೊಳಗೇ ಕುಳಿತಿದ್ದರೆ ಅಥವಾ ಕವಾಯತಿನ ಅಣತಿಯಂತೆ ಚಲಿಸದಿರು ವಷ್ಟು ಸೋಮಾರಿಯಾಗಿದ್ದರೆ ಅಂತಹವನನ್ನು ನಿಷ್ಪ್ರಯೋಜಕನೆಂದು ತಿಳಿದು ನೌಕರಿಯಿಂದ ಉಚ್ಚಾಟಿಸಲಾಗುತ್ತದೆ. ಅದೇ ರೀತಿ ನಮಾಝ್ ಕೂಡಾ ದಿನಕ್ಕೈದಾವರ್ತಿ ಕಹಳೆ ಬಾರಿಸುವ ಮೂಲಕ ಅದನ್ನು ಕೇಳಿದ ಅಲ್ಲಾಹನ ಸೈನಿಕರು ಎಲ್ಲಾ ದಿಕ್ಕುಗಳಿಂದಲೂ ಧಾವಿಸಿ ಬರು ವಂತೆಯೂ ತಾವು ಅಲ್ಲಾಹನ ಆಜ್ಞಾಪಾಲನೆ ಮಾಡಲು ಸದಾ ಸಿದ್ಧವೆಂದು ಸಾಬೀತು ಪಡಿಸುವಂತೆಯೂ ಮಾಡುತ್ತದೆ. ಈ ನಾದವನ್ನು ಕೇಳಿಯೂ ತನ್ನ ಸ್ಥಾನವನ್ನು ಬಿಟ್ಟು ಕದಲದ ಮುಸ್ಲಿಮನು ತನ್ನ ಕರ್ತವ್ಯವನ್ನೇ ಅರಿತಿರುವುದಿಲ್ಲ ಅಥವಾ ಅರಿತಿದ್ದರೂ ಅಲ್ಲಾಹನ ಸೈನ್ಯ ದಲ್ಲಿರಲು ಅಯೋಗ್ಯನಾಗಿರುವಷ್ಟು ನೀಚನಾಗಿರುತ್ತಾನೆ.

ಇದೇ ಕಾರಣಕ್ಕಾಗಿ ಪ್ರವಾದಿವರ್ಯರು(ಸ), "ಅದಾನ್ (ನಮಾಝ್‌ನ ಕರೆ) ಕೇಳಿಯೂ ಮನೆಗಳಿಂದ ಹೊರಡದವರ ಮನೆಗಳನ್ನು ಸುಟ್ಟು ಬಿಡಬೇಕೆಂದು ನನಗನಿಸುತ್ತದೆ" ಎಂದು ಹೇಳಿದ್ದರು. ಆದ್ದರಿಂದಲೇ ಹದೀಸ್‌ನಲ್ಲಿ ನಮಾಝನ್ನು, ಕುಫ್ರ್ ಮತ್ತು ಇಸ್ಲಾಮನ್ನು ಅಳೆಯುವ ಮಾನದಂಡವೆನ್ನಲಾಗಿದೆ. ಪ್ರವಾದಿವರ್ಯರ(ಸ) ಹಾಗೂ ಸಹಾಬಿಗಳ ಕಾಲದಲ್ಲಿ ಸಾಮೂಹಿಕ ನಮಾಝ್‌ಗಾಗಿ ಹಾಜರಾಗದವರನ್ನು ಮುಸ್ಲಿಮನೆಂದೇ ಪರಿಗಣಿಸುತ್ತಿರಲಿಲ್ಲ. ತಮ್ಮನ್ನು ಇತರರು ಮುಸ್ಲಿಮರೆಂದೇ ತಿಳಿದುಕೊಳ್ಳಬೇಕೆಂದು ಬಯಸುತ್ತಿದ್ದ ಮುನಾಫಿಕರು (ಕಪಟವಿಶ್ವಾಸಿಗಳು) ಕೂಡಾ ಸಾಮೂಹಿಕ ನಮಾಝ್‌ನಲ್ಲಿ ಬಂದು ಸೇರಲು ನಿರ್ಬಂಧಿತ ರಾಗಿದ್ದರು. ಆದುದರಿಂದಲೇ ಕುರ್‌ಆನಿನಲ್ಲಿ -

وَاِذَا قَامُوْٓا اِلَى الصَّلٰوةِ قَامُوْا كُسَالٰى

"ಮುನಾಫಿಕರು ನಮಾಝ್ ಮಾಡುವುದಿಲ್ಲ" ಎಂದು ಹೇಳದೆ "ಅವರು ನಿರ್ವಾಹವಿಲ್ಲದೆ ಅರೆಮನಸ್ಸಿನಿಂದ ನಮಾಝ್‌ಗಾಗಿ ಎದ್ದು ಬರುತ್ತಾರೆ" (ಅನ್ನಿಸಾ: 142) ಎಂದು ಹೇಳಲಾಗಿದೆ.

ನಮಾಝ್ ಮಾಡದವರನ್ನು ಮುಸ್ಲಿಮನೆಂದು ತಿಳಿಯಲು ಇಸ್ಲಾಮಿನಲ್ಲಿ ಅವಕಾಶವೇ ಇಲ್ಲವೆಂದು ಇದರಿಂದ ತಿಳಿದು ಬರುತ್ತಿದೆ. ಏಕೆಂದರೆ ಇಸ್ಲಾಮ್ ಕೇವಲ ವಿಶ್ವಾಸಕ್ಕೆ ಸಂಬಂಧಿ ಸಿದ ವಿಷಯವಲ್ಲ; ಆಚಾರಕ್ಕೂ ಸಂಬಂಧಿಸಿದ ವಿಷಯವಾಗಿದೆ. ನಮಾಝ್ ಜೀವನದ ಪ್ರತಿ ಕ್ಷಣದಲ್ಲೂ ಓರ್ವ ಮುಸ್ಲಿಮನಿಗೆ ಇಸ್ಲಾಮಿನ ನಿಯಮಗಳನ್ನು ಅನುಸರಿಸಲಿಕ್ಕೂ ಕುಫ್ರ್ (ಅಧರ್ಮ) ಮತ್ತು ಫಿಸ್ಕ್‌ನ (ಕರ್ಮಭ್ರಷ್ಟತೆ) ವಿರುದ್ಧ ಹೋರಾಟ ನಡೆಸಲಿಕ್ಕೂ ಸಹಕರಿಸುವ ಕ್ರಿಯೆಯಾಗಿದೆ. ಇಂತಹ ಕ್ರಿಯಾತ್ಮಕ ಜೀವನ ಮಾಡಬೇಕಾದರೆ ಮುಸ್ಲಿಮನು ಅಲ್ಲಾಹನ ಆಜ್ಞಾಪಾಲನೆ ಮಾಡಲು ಅನವರತವೂ ಸಜ್ಜಾಗಿರಬೇಕಾಗುತ್ತದೆ. ಇಂತಹ ಆಸಕ್ತಿ ಇಲ್ಲದಾತನು ಇಸ್ಲಾಮಿಗೆ ನಿಷ್ಪ್ರಯೋಜಕ. ಆದುದರಿಂದಲೇ ನಮಾಝನ್ನು ದಿನಕ್ಕೆ ಐದು ಬಾರಿ ಕಡ್ಡಾಯಗೊಳಿಸುವ ಮೂಲಕ ಮುಸ್ಲಿಮರೆನಿಸುವವರು ನಿಜವಾದ ಮುಸ್ಲಿಮರಾಗಿರುತ್ತಾರೋ, ನಿಜಕ್ಕೂ ಈ ಕರ್ಮ ಜೀವನದಲ್ಲಿ ಅಲ್ಲಾಹನ ಆಜ್ಞಾನುಸರಣೆಗೆ ಅಣಿಯಾಗಿರುವರೋ ಎಂದು ಪರೀಕ್ಷಿಸಲಾಗುತ್ತದೆ. ಅವರು ದೈವಿಕ ಕವಾಯತಿಗಾಗಿ ನೀಡಲಾದ ಆಹ್ವಾನವನ್ನು ಕೇಳಿ ಕದಲದಿದ್ದರೆ ಅವರು ಇಸ್ಲಾಮಿನ ಕ್ರಿಯಾತ್ಮಕ ಜೀವನಕ್ಕೆ ಸಿದ್ಧರಿಲ್ಲವೆಂಬುದು ಖಾತ್ರಿಯಾಗಿ ತಿಳಿಯುತ್ತದೆ. ಆ ಬಳಿಕ ಅಲ್ಲಾಹನನ್ನೂ ಪ್ರವಾದಿಯನ್ನೂ ನಂಬುವುದು ಕೇವಲ ಅರ್ಥಹೀನವಾಗುತ್ತದೆ. ಆದುದರಿಂದಲೇ ಕುರ್‌ಆನಿನಲ್ಲಿ

وَاِنَّهَا لَكَبِيْرَةٌ اِلَّا عَلَى الْخٰشِعِيْنَ ﴿٤٥﴾

"ಅಲ್ಲಾಹನ ದಾಸ್ಯ ಹಾಗೂ ಅನುಸರಣೆಗೆ ಸಿದ್ಧರಿಲ್ಲದವರಿಗೆ ಮಾತ್ರ ನಮಾಝ್ ಒಂದು ತ್ರಾಸದಾಯಕ ಕಾರ್ಯ" (ಅಲ್ ಬಕರಃ 45) ಎಂದು ಹೇಳಲಾಗಿದೆ. ನಮಾಝನ್ನು ತ್ರಾಸದಾಯಕವೆಂದು ಭಾವಿಸುವವನು ತಾನು ಅಲ್ಲಾಹನ ಆಜ್ಞಾಪಾಲನೆಗೆ ಸಿದ್ಧನಿಲ್ಲವೆಂಬುದನ್ನು ಸಾಬೀತು ಪಡಿಸುತ್ತಾನೆ.

ದೇವಭಯ ಉಂಟು ಮಾಡುವುದು

ಮೂರನೆಯದಾಗಿ ಹೃದಯದಲ್ಲಿ ದೇವಭಯ ಸದಾ ಜಾಗೃತವಾಗಿ ಉಳಿದಿರಬೇಕು. ಅಲ್ಲಾಹನು ತನ್ನನ್ನು ಎಲ್ಲಿದ್ದರೂ ಸದಾ ವೀಕ್ಷಿಸುತ್ತಿರುವನು ಮತ್ತು ತನ್ನ ಪ್ರತಿಯೊಂದು ಕೃತ್ಯದ ಅರಿವೂ ಆತನಿಗಿದೆಯೆಂಬ ದೃಢ ವಿಶ್ವಾಸ ಒಬ್ಬ ಮುಸ್ಲಿಮನಲ್ಲಿ ಮೂಡುವವರೆಗೆ ಆತನಿಗೆ ಇಸ್ಲಾಮಿನಂತೆ ನಡೆಯಲು ಸಾಧ್ಯವೇ ಇಲ್ಲ. ಗಾಢಾಂಧಕಾರದಲ್ಲೂ ಆತನು ನೋಡುತ್ತಿರುವನು ಮತ್ತು ಏಕಾಂತದಲ್ಲೂ ತನ್ನೊಂದಿಗಿರುವನೆಂಬ ಹಾಗೂ ಜಗತ್ತಿನಿಂದ

ಅಡಗಿರಲು ಸಾಧ್ಯವಾದರೂ ಅಲ್ಲಾಹನಿಂದ ಅಡಗಿರಲು ಸಾಧ್ಯವಿಲ್ಲ ಮತ್ತು ಜಗತ್ತಿನ ಶಿಕ್ಷೆಗಳಿಂದ ಹೇಗಾದರೂ ತಪ್ಪಿಸಿಕೊಳ್ಳಬಹುದಾದರೂ ಅಲ್ಲಾಹನ ಶಿಕ್ಷೆಯಿಂದ ಯಾವ ರೀತಿಯಿಂದಲೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೆಂಬ ಈ ನಿಶ್ಚಲ ವಿಶ್ವಾಸವೇ ಮಾನವನನ್ನು ದೇವಾಜ್ಞೆಯ ಉಲ್ಲಂಘನೆಯಿಂದ ತಡೆಯುತ್ತದೆ. ಈ ದೃಢ ವಿಶ್ವಾಸದ ಬಲದಿಂದಲೇ ಮಾನವನು ತನ್ನ ಜೀವನದ ವ್ಯವಹಾರಗಳಲ್ಲಿ ಅಲ್ಲಾಹನು ನಿಶ್ಚಯಿಸಿರುವ ಹಲಾಲ್-ಹರಾಮ್ (ವಿಧಿ-ನಿಷೇಧ)ಗಳ ಮೇರೆಗಳನ್ನು ಪಾಲಿಸಲು ನಿರ್ಬಂಧಿತನಾಗುತ್ತಾನೆ. ಈ ವಿಶ್ವಾಸ ದುರ್ಬಲ ವಾದರೆ ಮುಸ್ಲಿಮನು ನಿಜಾರ್ಥದಲ್ಲಿ ಮುಸ್ಲಿಮನಂತೆ ಎಂದಿಗೂ ಜೀವನ ನಡೆಸುವಂತಿಲ್ಲ. ಈ ವಿಶ್ವಾಸವನ್ನು ಹೃದಯದಲ್ಲಿ ಆಗಾಗ ದೃಢಗೊಳಿಸುತ್ತಿರಲೆಂದೇ ಅಲ್ಲಾಹನು ನಮಾಝನ್ನು ದಿನಕ್ಕೆ ಐದು ಬಾರಿ ಕಡ್ಡಾಯಗೊಳಿಸಿರುತ್ತಾನೆ.

إِنَّ الصَّلٰوةَ تَنْهٰى عَنِ الْفَحْشَآءِ وَالْمُنْكَرِ ؕ

"ನಿಶ್ಚಯವಾಗಿಯೂ ನಮಾಝ್ ಅಶ್ಲೀಲ ಹಾಗೂ ದುಷ್ಕೃತ್ಯಗಳಿಂದ ತಡೆಯುತ್ತದೆ" (ಅಲ್ ಅಂಕಬೂತ್: 45) ಎಂಬ ಕುರ್‌ಆನ್ ವಾಕ್ಯದಿಂದ ಇದನ್ನು ಕಡ್ಡಾಯಗೊಳಿಸಿರುವ ಉದ್ದೇಶವನ್ನು ಊಹಿಸ ಬಲ್ಲಿರಿ. ಉದಾ:- ನೀವು ನಿರ್ಮಲವಾಗಿ ವುಝೂ ಮಾಡಿ ನಮಾಝ್‌ಗೆ ಬರುತ್ತೀರಿ. ನೀವು ಕೊಳಕಾಗಿದ್ದರೆ, ಸ್ನಾನ ಮಾಡದೆ ಬಂದರೆ ಅಥವಾ ಹೊಲಸು ಬಟ್ಟೆಗಳನ್ನು ಧರಿಸಿಕೊಂಡು ಬಂದರೆ ಅಥವಾ ವುಝೂ ಇಲ್ಲದಿದ್ದಾಗಲೂ ನೀವು ವುಝೂ ಮಾಡಿ ಬಂದೆನೆಂದು ಹೇಳಿದರೆ ಈ ಲೋಕದಲ್ಲಿ ನಿಮ್ಮನ್ನು ತಡೆಯುವವರಾರು? ಆದರೆ ನೀವು ಹಾಗೆ ಮಾಡುವುದಿಲ್ಲ. ಏಕೆಂದರೆ ಈ ಪಾಪ ಕಾರ್ಯಗಳನ್ನು ಅಲ್ಲಾಹನ ಅರಿವಿಗೆ ಬಾರದಂತೆ ಮಾಡಲಾಗದೆಂಬ ದೃಢ ವಿಶ್ವಾಸ ನಿಮಗಿದೆ. ಅಂತೆಯೇ ನಮಾಝ್‌ನಲ್ಲಿ ಮೆಲುದನಿಯಲ್ಲಿ ಪಠಿಸಬೇಕಾದುದನ್ನು ನೀವು ಪಠಿಸದೇ ಇದ್ದರೆ ಯಾರಿಗೂ ತಿಳಿಯಲಾರದು. ಆದರೆ ನೀವು ಹಾಗೆ ಮಾಡುವುದಿಲ್ಲ. ಏಕೆಂದರೆ ಅಲ್ಲಾಹನು ಸರ್ವವನ್ನೂ ಆಲಿಸುತ್ತಿದ್ದಾನೆ ಹಾಗೂ ಅವನು ನಿಮ್ಮ ಜೀವನಾಡಿ ಗಿಂತಲೂ ನಿಕಟನಾಗಿದ್ದಾನೆಂಬ ವಿಶ್ವಾಸ ನಿಮಗಿದೆ. ಅಂತೆಯೇ ನೀವು ಕಾಡಿನಲ್ಲೂ ನಮಾಝ್ ಮಾಡುತ್ತೀರಿ. ರಾತ್ರಿಯ ಅಂಧಕಾರದಲ್ಲೂ ನಮಾಝ್ ಮಾಡುತ್ತೀರಿ. ಮನೆಯಲ್ಲಿ ಒಬ್ಬಂಟಿಗ ರಾಗಿದ್ದಾಗ ನಮಾಝ್ ಮಾಡದಿದ್ದರೆ ಅದನ್ನು ಯಾರೂ ತಿಳಿಯಲಾರರು ಎಂದು ತಿಳಿದಿರು ವಾಗಲೂ ನೀವು ನಮಾಝ್ ಮಾಡುತ್ತೀರಿ. ಇದೇಕೆ?

ಏಕೆಂದರೆ ನೀವು ಮರೆಯಲ್ಲೂ ಅಲ್ಲಾಹನ ಆಜ್ಞೋಲ್ಲಂಘನೆ ಮಾಡಲು ಭಯಪಡುತ್ತೀರಿ. ಅಲ್ಲಾಹನಿಂದ ಯಾವ ಅಪರಾಧವನ್ನೂ ಅಡಗಿಸಿಡಲು ಸಾಧ್ಯವಿಲ್ಲವೆಂಬ ಅಚಲ ವಿಶ್ವಾಸ ನಿಮಗಿದೆ. ಈ ಎಲ್ಲಾ ವಿವರಣೆಗಳಿಂದ, ನಮಾಝ್ ಯಾವ ರೀತಿಯಲ್ಲಿ ಅಲ್ಲಾಹನ ಭಯವನ್ನೂ, ಅವನು ಪ್ರತ್ಯಕ್ಷ-ಪರೋಕ್ಷಗಳ ಜ್ಞಾನಿಯಾಗಿರುವನೆಂಬ ವಿಶ್ವಾಸವನ್ನೂ ಮಾನವನ ಹೃದಯದಲ್ಲಿ ಉಂಟುಮಾಡುತ್ತದೆ ಮತ್ತು ಅದನ್ನು ನವೀಕರಿಸುತ್ತಿರುತ್ತದೆ ಎಂಬುದನ್ನು ನೀವು ಊಹಿಸಬಲ್ಲಿರಿ. ಈ ಭಯ-ವಿಶ್ವಾಸಗಳು

ಪುನರ್ನವೀಕರಣಗೊಳ್ಳುತ್ತಾ ಹೋಗದಿದ್ದರೆ ದಿನದ 24 ತಾಸುಗಳಲ್ಲೂ ನಿರಂತರ ವಾಗಿ ನೀವು ಅಲ್ಲಾಹನ ದಾಸ್ಯ ನಿರ್ವಹಿಸುವುದಾದರೂ ಹೇಗೆ? ನಿಮ್ಮ ಹೃದಯವು ಇದರಿಂದ ವಿರಹಿತವಾಗಿ ಬಿಟ್ಟರೆ ಈ ಲೋಕದಲ್ಲಿ ರಾತ್ರಿ ಹಗಲೆನ್ನದೆ ನಡೆಯುತ್ತಿರುವ ಸಹಸ್ರಾರು ವ್ಯವಹಾರಗಳಲ್ಲಿ ಅಲ್ಲಾಹನನ್ನು ಭಯಪಟ್ಟು ಸತ್ಕಾರ್ಯಗಳಲ್ಲೇ ಸ್ಥಿರವಾಗಿರಲಿಕ್ಕೆ ಮತ್ತು ದುಷ್ಕರ್ಮಗಳಿಂದ ದೂರವಿರಲಿಕ್ಕೆ ಹೇಗೆ ಸಾಧ್ಯವಾದೀತು?

ದೈವಿಕ ಕಾನೂನಿನ ತಿಳುವಳಿಕೆ

ಅಲ್ಲಾಹನ ದಾಸ್ಯ ನಿರ್ವಹಣೆಗೆ ಅಗತ್ಯವಾಗಿ ಬೇಕಾದ ನಾಲ್ಕನೆಯ ವಿಷಯವು- ನೀವು ಅವನ ಶಾಸನಗಳನ್ನು ಅರಿತಿರಬೇಕೆಂಬುದಾಗಿದೆ. ನಿಮಗೆ ಅಲ್ಲಾಹನ ಕಾನೂನುಗಳ ಅರಿವೇ ಇಲ್ಲದೆ ಹೋದರೆ ನೀವು ಅವುಗಳಂತೆ ನಡೆಯುವುದಾದರೂ ಹೇಗೆ? ಅಲ್ಲಾಹನ ಕಾನೂನು ಗಳನ್ನು ತಿಳಿಸುವ ಕಾರ್ಯವನ್ನು ನಮಾಝ್ ನೆರವೇರಿಸುತ್ತದೆ. ದಿನಂಪ್ರತಿ ಅಲ್ಲಾಹನ ಆಜ್ಞೆಗಳ ಅರಿವುಂಟಾಗಲಿಕ್ಕಾಗಿಯೇ ನಮಾಝ್‌ನಲ್ಲಿ ಕುರ್‌ಆನ್ ಪಠಿಸಲಾಗುತ್ತದೆ. ಶುಕ್ರವಾರದ 'ಖುತ್‌ಬಾ'ಗಳು ನಿಮಗೆ ಇಸ್ಲಾಮಿನ ಪರಿಜ್ಞಾನ ಉಂಟು ಮಾಡುವುದಕ್ಕಾಗಿದೆ. ಸಾಮೂಹಿಕ ನಮಾಝ್ ಮತ್ತು ಜುಮಾ ನಮಾಝ್‌ಗಳ ಮೂಲಕ ವಿದ್ಯಾವಂತರಿಗೂ ಅವಿದ್ಯಾವಂತ ರಿಗೂ ಪದೇಪದೇ ಒಂದೆಡೆ ಕಲೆತು ಅಲ್ಲಾಹನ ಆದೇಶಗಳನ್ನು ಅರಿಯುವ ಸಂದರ್ಭ ಸಿಗುತ್ತದೆ. ಹೀಗಿದ್ದೂ ನೀವು ನಮಾಝ್‌ನಲ್ಲಿ ಪಠಿಸುತ್ತಿರುವುದೇನೆಂದು ತಿಳಿದುಕೊಳ್ಳಲು ಪ್ರಯತ್ನಿಸದಿರುವುದು ದೌರ್ಭಾಗ್ಯ. ನಿಮಗೆ ಕೇಳಿಸಲಾಗುವ 'ಜುಮಾ ಖುತ್‌ಬಾ'ಗಳಲ್ಲಿ ಇಸ್ಲಾಮಿನ ಯಾವ ಜ್ಞಾನವೂ ದೊರೆಯುವುದಿಲ್ಲ. ಸಾಮೂಹಿಕ ನಮಾಝ್‌ಗಳಿಗೆ ಹಾಜರಾಗಿ ನಿಮ್ಮ ವಿದ್ಯಾವಂತರು ಅವಿದ್ಯಾವಂತ ಸಹೋದರರಿಗೆ ಏನನ್ನೂ ಕಲಿಸಿಕೊಡುವುದಿಲ್ಲ. ಅವಿದ್ಯಾ ವಂತರು ವಿದ್ಯಾವಂತರಿಂದ ಕೇಳಿ ತಿಳಿದುಕೊಳ್ಳುವುದಿಲ್ಲ. ನಮಾಝ್ ನಿಮಗೆ ಈ ಎಲ್ಲ ಪ್ರಯೋಜನಗಳನ್ನು ಗಳಿಸಿಕೊಳ್ಳುವ ಅವಕಾಶ ಒದಗಿಸಿಕೊಡುತ್ತದೆ. ನೀವೇ ಆ ಪ್ರಯೋಜನ ಗಳನ್ನು ಗಳಿಸದೆ ಹೋದರೆ ಅದರಲ್ಲಿ ನಮಾಝ್‌ನ ತಪ್ಪೇನು?

ಸಂಘಟನಾತ್ಮಕ ತರಬೇತಿ

ಐದನೆಯದಾಗಿ ಪ್ರತಿಯೋರ್ವ ಮುಸ್ಲಿಮನು ಜೀವನದ ಈ ಹೋರಾಟದಲ್ಲಿ ಒಬ್ಬಂಟಿಗನಾಗಿರಬಾರದು. ಎಲ್ಲಾ ಮುಸ್ಲಿಮರೂ ಒಟ್ಟಾಗಿ ಒಂದು ಶಕ್ತಿಯುತ ಸಮುದಾಯವಾಗಿದ್ದು ಕೊಂಡು ಅಲ್ಲಾಹನ ದಾಸ್ಯ ನಿರ್ವಹಣೆಗೆ ಅರ್ಥಾತ್ ಅವನ ಆಜ್ಞಾಪಾಲನೆ ಮಾಡಲು, ಅವನ ಕಾನೂನಿನಂತೆ ಕಾರ್ಯವೆಸಗಲು ಮತ್ತು ಅದನ್ನು ಜಗತ್ತಿನಲ್ಲಿ ಜಾರಿಗೊಳಿಸಲು ಪರಸ್ಪರ ಸಹಕರಿಸಬೇಕು. ಈ ಐಹಿಕ ಜೀವನದಲ್ಲಿ ಒಂದು ಕಡೆ ಮುಸ್ಲಿಮರು (ಅಲ್ಲಾಹನ ಆಜ್ಞಾ ಪಾಲಕ ದಾಸರು) ಇದ್ದಾರೆ. ಇನ್ನೊಂದು ಕಡೆ ಅಲ್ಲಾಹನ ಬಂಡುಕೋರ ದಾಸರಿದ್ದಾರೆ. ಇವರ ನಡುವೆ ರಾತ್ರಿ ಹಗಲೆನ್ನದೆ ಆಜ್ಞಾಪಾಲನೆ ಮತ್ತು ಆಜ್ಞೋಲ್ಲಂಘನೆಗಳ

ಹೋರಾಟ ನಡೆಯುತ್ತಲಿರುವ ಸಂಗತಿ ನಿಮಗೆ ಗೊತ್ತೇ ಇದೆ. ಬಂಡುಕೋರರು ಅಲ್ಲಾಹನ ಆಜ್ಞೆಗಳನ್ನು ಮುರಿಯುತ್ತಿದ್ದಾರೆ ಮತ್ತು ಪೈಶಾಚಿಕ ಕಾನೂನುಗಳನ್ನು ಜಾರಿಗೊಳಿಸುತ್ತಾರೆ. ಇದರ ವಿರುದ್ಧ ಮುಸ್ಲಿಮರು ಒಬ್ಬೊಬ್ಬರಾಗಿ ಹೋರಾಡಿದರೆ ಜಯಗಳಿಸಲಾರರು. ಅದಕ್ಕಾಗಿ ಅಲ್ಲಾಹನ ಆಜ್ಞಾಪಾಲಕ ದಾಸರು ಒಂದು ಸಂಘಟಿತ ಶಕ್ತಿಯಾಗಿ ಬಂಡಾಯವನ್ನೆದುರಿಸಿ ಅಲ್ಲಾಹನ ಕಾನೂನುಗಳನ್ನು ಜಾರಿಗೊಳಿಸಬೇಕು. ಇಂತಹ ಶಕ್ತಿಯನ್ನು ಇತರೆಲ್ಲ ಸಾಧನಗಳಿಗಿಂತ ಹೆಚ್ಚಾಗಿ ನಮಾಝ್ ಉಂಟುಮಾಡುತ್ತದೆ. ಐದು ಹೊತ್ತಿನ ಜಮಾಅತ್, ಜುಮಾದ ದೊಡ್ಡ ಕೂಟಗಳು ಇವೆಲ್ಲಾ ಒಟ್ಟುಗೂಡಿ ಮುಸ್ಲಿಮರನ್ನು ಒಂದು ಭದ್ರ ಗೋಡೆಯಂತೆ ಮಾಡಿ ಅವರನ್ನು ದೈನಂದಿನ ಜೀವನದಲ್ಲಿ ಪರಸ್ಪರ ಸಹಾಯಕರನ್ನಾಗಿ ಮಾಡಲು ಅಗತ್ಯವಾದ ಭಾವನಾತ್ಮಕ ಮತ್ತು ಕ್ರಿಯಾತ್ಮಕ ಐಕ್ಯವನ್ನುಂಟು ಮಾಡುತ್ತವೆ.

O

ನಮಾಝ್‌ನಲ್ಲಿ ನೀವೇನನ್ನುತ್ತೀರಿ?

ನಮಾಝ್ ಮಾನವನನ್ನು ಹೇಗೆ ಅಲ್ಲಾಹನ ಇಬಾದತ್ ಅರ್ಥಾತ್ ದಾಸ್ಯ ಮತ್ತು ಅನುಸರಣೆಗೆ ಅಣಿಗೊಳಿಸುತ್ತದೆ ಎಂಬುದನ್ನು ಹಿಂದಿನ ಉಪನ್ಯಾಸದಲ್ಲಿ ತಿಳಿಸಿದ್ದೇನೆ. ನಮಾಝನ್ನು 'ಫರ್ಝ್' (ಕಡ್ಡಾಯ) ಮತ್ತು ದೇವಾಜ್ಞೆಯೆಂದಷ್ಟೇ ತಿಳಿದುಕೊಂಡು ಕ್ರಮಬದ್ಧವಾಗಿ ನೆರವೇರಿಸುತ್ತಿರುವವನು ನಮಾಝ್‌ನ ದುಆ(ಪ್ರಾರ್ಥನೆ)ಗಳ ಅರ್ಥ ತಿಳಿಯದೆ ಹೋದರೂ ಅವನಲ್ಲಿ ದೇವಭಯ, ಅವನು ಪ್ರತ್ಯಕ್ಷದರ್ಶಿಯಾಗಿರುವನೆಂಬ ಹಾಗೂ ಅವನ ನ್ಯಾಯಾಲಯದ ಮುಂದೆ ಅದೊಂದು ದಿನ ಹಾಜರಾಗಬೇಕೆಂಬ ವಿಶ್ವಾಸವು ಮನಸ್ಸಿನಲ್ಲಿ ಹೇಗೆ ಹಸಿರಾಗಿಯೇ ಉಳಿಯುತ್ತದೆ? ತಾನು ಅಲ್ಲಾಹನ ಹೊರತು ಇತರ ಯಾರ ದಾಸನೂ ಅಲ್ಲ, ಅಲ್ಲಾಹನು ಮಾತ್ರ ತನ್ನ ನಿಜವಾದ ಪ್ರಭು ಮತ್ತು ಅಧಿಕಾರಿ ಎಂಬ ವಿಶ್ವಾಸವು ಹೇಗೆ ನೆಲೆಸಿರುತ್ತದೆ. ಅವನಲ್ಲಿ ಕರ್ತವ್ಯ ಪ್ರಜ್ಞೆ ಮತ್ತು ಆಜ್ಞಾಪಾಲನೆಯ ಆಸಕ್ತಿ ಹೇಗೆ ಉಂಟಾಗುತ್ತದೆ ಮತ್ತು ಮಾನವನ ಇಡೀ ಜೀವಮಾನವನ್ನು ಅಲ್ಲಾಹನ ಇಬಾದತನ್ನಾಗಿ ಮಾಡಲು ಅಗತ್ಯವಾದ ಗುಣವಿಶೇಷತೆಗಳು ಹೇಗೆ ಅವನಲ್ಲಿ ಸ್ವಯಂ ಉಂಟಾಗಲಾರಂಭ ವಾಗುತ್ತವೆ ಎಂಬೀ ವಿಷಯಗಳು ನಿಮಗೆ ತಿಳಿದಂತಾಯಿತು.

ಮಾನವನು ಅದೇ ನಮಾಝನ್ನು ಅರ್ಥವರಿತು ಮಾಡುತ್ತಲಿದ್ದರೆ, ನಮಾಝ್ ಮಾಡುತ್ತಿರುವಾಗ ತಾನೇನು ಹೇಳುತ್ತಿದ್ದೇನೆಂದು ಅರಿತುಕೊಂಡಿದ್ದರೆ ಅವನ ಯೋಚನೆಗಳ ಮತ್ತು ಅವನ ಗುಣನಡತೆಗಳ ಮೇಲೆ ಎಷ್ಟು ದೊಡ್ಡ ಪರಿಣಾಮಗಳುಂಟಾಗುತ್ತವೆ. ಅವನ ವಿಶ್ವಾಸ ಶಕ್ತಿ ಹೇಗೆ ವರ್ಧಿಸುತ್ತಾ ಹೋಗುತ್ತದೆ. ಅವನ ಜೀವನದಲ್ಲಿ ಎಂತಹ ಮಹತ್ವದ ಪರಿವರ್ತನೆಯುಂಟಾಗುವುದು ಎಂಬುದನ್ನು ಈಗ ಹೇಳಬಯಸುತ್ತೇನೆ-

ಅದಾನ್ ಮತ್ತು ಅದರ ಪ್ರಭಾವ

ಮೊತ್ತಮೊದಲು ಅದಾನ್‌ನ (ನಮಾಝ್‌ನ ಕರೆ) ವಿಷಯ ತೆಗೆದುಕೊಳ್ಳಿರಿ. ದಿನದಲ್ಲಿ ಐದು ಬಾರಿ ನಿಮ್ಮನ್ನು ಹೀಗೆ ಕರೆಯಲಾಗುತ್ತದೆ:

اَللّٰهُ اَكْبَرُ اَللّٰهُ اَكْبَرُ

"ಅಲ್ಲಾಹು ಅಕ್ಬರ್ ಅಲ್ಲಾಹು ಅಕ್ಬರ್" (ಅಲ್ಲಾಹ್ ಅತ್ಯಂತ ಮಹಾನನು, ಅಲ್ಲಾಹ್ ಅತ್ಯಂತ ಮಹಾನನು)

اَشْهَدُ اَنْ لَّآ اِلٰهَ اِلَّا اللّٰهُ

"ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹ್" (ಅಲ್ಲಾಹನ ಹೊರತು ಆರಾಧನೆಗೆ ಅರ್ಹರು ಯಾರೂ ಇಲ್ಲ ಎಂದು ನಾನು ಸಾಕ್ಷ್ಯ ನುಡಿಯುತ್ತೇನೆ.)

اَشْهَدُ اَنَّ مُحَمَّدًا رَّسُوْلُ اللّٰهِ

"ಅಶ್‌ಹದು ಅನ್ನ ಮುಹಮ್ಮದರ್ರಸೂಲುಲ್ಲಾಹ್" (ಮುಹಮ್ಮದ್‌ರವರು(ಸ) ಅಲ್ಲಾಹನ ಸಂದೇಶ ವಾಹಕರಾಗಿರುತ್ತಾರೆಂದು ನಾನು ಸಾಕ್ಷ್ಯ ಹೇಳುತ್ತೇನೆ)

حَيَّ عَلَى الصَّلوٰةِ

"ಹಯ್ಯ ಅಲಸ್ಸಲಾಃ" (ಬನ್ನಿರಿ ನಮಾಝ್‌ಗೆ)

حَيَّ عَلَى الْفَلَاحِ

"ಹಯ್ಯ ಅಲಲ್ ಫಲಾಹ್" (ಬನ್ನಿರಿ ವಿಜಯದ ಕಡೆಗೆ)

اَللّٰهُ اَكْبَرُ اَللّٰهُ اَكْبَرُ

"ಅಲ್ಲಾಹು ಅಕ್ಬರ್ ಅಲ್ಲಾಹು ಅಕ್ಬರ್" (ಅಲ್ಲಾಹನು ಅತ್ಯಂತ ಮಹಾನನು, ಅಲ್ಲಾಹನು ಅತ್ಯಂತ ಮಹಾನನು,)

لَآ اِلٰهَ اِلَّا اللّٰهُ

"ಲಾ ಇಲಾಹ ಇಲ್ಲಲ್ಲಾಹ್" (ಅಲ್ಲಾಹನ ಹೊರತು ಯಾರೂ ಆರಾಧ್ಯರಿಲ್ಲ.)

ನೋಡಿ ಇದೆಂತಹ ಕರೆ! ಈ ಭೂಮಂಡಲದಲ್ಲಿ ತಾವೇ ದೇವರೆಂದು ಹೇಳುವವರೆಲ್ಲಾ ಸುಳ್ಳರು. ಭೂಮಿ-ಆಕಾಶಗಳಲ್ಲೆಲ್ಲಾ ಸರ್ವ ಮಹಾನತೆ ಪಡೆದಿರುವಾತನು ಒಬ್ಬನೇ. ಅವನೇ ಆರಾಧ್ಯನು. ಬನ್ನಿರಿ, ಅವನನ್ನೇ ಆರಾಧಿಸಿರಿ. ಅವನ ಆರಾಧನೆಯಲ್ಲೇ ನಿಮ್ಮ ಇಹ-ಪರಗಳ ಒಳಿತಿದೆ. ಈ ಕರೆಯನ್ನು ಕೇಳಿ ಕದಲದವರಿರುವರೆ? ಹೃದಯದಲ್ಲಿ ಈಮಾನುಳ್ಳವನು ಇಷ್ಟು ದೊಡ್ಡ ಸಾಕ್ಷ್ಯ ಹಾಗೂ ಇಂತಹ ಮಹೋನ್ನತ ಕರೆಯನ್ನು ಕೇಳಿಯೂ ತನ್ನೊಡೆಯನ ಮುಂದೆ ತಲೆಬಾಗಲು ಧಾವಿಸದೆ ಇರುವನೇ?

ವುಝೂ

ಈ ಕರೆಯನ್ನು ಕೇಳಿದೊಡನೆ ನೀವು ಎದ್ದು ಮೊತ್ತಮೊದಲು ನಿಮ್ಮನ್ನೇ ಪರೀಕ್ಷಿಸುತ್ತೀರಿ. ನಿಮ್ಮ ಶರೀರ ಶುದ್ಧವಾಗಿದೆಯೇ, ನಿಮ್ಮ ಬಟ್ಟೆಬರೆ ಶುದ್ಧವಾಗಿದೆಯೇ, ನಿಮಗೆ ವುಝೂ

ಇದೆಯೇ ಎಂಬುದನ್ನು ನೋಡುತ್ತೀರಿ. ಉಭಯಲೋಕಗಳ ಸಾರ್ವಭೌಮ ಪ್ರಭುವಿನ ಮುಂದೆ ಹಾಜರಿಕೊಡುವುದು ಲೋಕದ ಇತರ ವಿಷಯಗಳಂತಲ್ಲ. ಇತರ ಕೆಲಸ ಕಾರ್ಯಗಳನ್ನು ಹೇಗೆ ಬೇಕಾದರೂ ಮಾಡಬಹುದು. ಆದರೆ ಇಲ್ಲಿ ಶರೀರ, ಬಟ್ಟೆಬರೆಗಳು ಶುದ್ಧವಾಗುವುದರ ಜೊತೆ ಇನ್ನಷ್ಟು ಶುದ್ಧೀಕರಣಗೊಳ್ಳದೆ- (ಅಂದರೆ ವುಝೂ ಮಾಡದೆ) ಹಾಜರಿಕೊಡುವುದು ಅಸಭ್ಯ ವರ್ತನೆಯಾಗಿದೆ ಎಂಬೀ ಭಾವನೆಯೊಂದಿಗೆ ಮೊದಲು ನೀವು ಶುದ್ಧರಾಗಿರುವ ಬಗ್ಗೆ ಸಂತೃಪ್ತರಾಗುತ್ತೀರಿ. ತರುವಾಯ ವುಝೂ ಮಾಡುತ್ತೀರಿ. ಈ ವುಝೂ ಮಾಡುವಾಗ ನಿಮ್ಮ ಅಂಗಾಂಗಗಳನ್ನು ತೊಳೆಯುವುದರ ಜೊತೆಗೆ ನೀವು ಅಲ್ಲಾಹನ ದಿಕ್ರ್ (ಸ್ಮರಣೆ) ಮಾಡುತ್ತಲಿದ್ದರೆ ಮತ್ತು ವುಝೂ ಮಾಡಿ ಆದ ಬಳಿಕ ಪ್ರವಾದಿಯವರು(ಸ) ಕಲಿಸಿದ ಪ್ರಾರ್ಥನೆಯನ್ನು ಮಾಡಿದರೆ, ಕೇವಲ ನಿಮ್ಮ ಅಂಗಾಂಗಗಳು ಶುದ್ಧವಾಗುವುದಲ್ಲ; ಅದರೊಂದಿಗೆ ನಿಮ್ಮ ಹೃದಯವನ್ನೂ ತೊಳೆದಂತಾಗುವುದು. ಆ ಪ್ರಾರ್ಥನೆ ಹೀಗಿದೆ:

أَشْهَدُ أَنْ لَّآ إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ
مُحَمَّدًا عَبْدُهٗ وَرَسُوْلُهٗ، اَللّٰهُمَّ اجْعَلْنِىْ مِنَ التَّوَّابِيْنَ
وَاجْعَلْنِىْ مِنَ الْمُتَطَهِّرِيْنَ۔

"ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹು ವಹ್ದಹೂ ಲಾ ಶರೀಕಲಹೂ ವ ಅಶ್‌ಹದು ಅನ್ನಮುಹಮ್ಮದನ್ ಅಬ್ದುಹೂ ವರಸೂಲುಹೂ ಅಲ್ಲಾಹುಮ್ಮಜ್‌ಅಲ್ನೀ ಮಿನತ್ತವ್ವಾಬೀನ ವಜ್‌ಅಲ್ನೀ ಮಿನಲ್ ಮುತತಹ್ಹಿರೀನ್."

(ಏಕೈಕ ಅಲ್ಲಾಹನ ಹೊರತು ಬೇರಾರೂ ಆರಾಧ್ಯರಿಲ್ಲವೆಂದೂ ಮುಹಮ್ಮದ್(ಸ) ಅಲ್ಲಾಹನ ದಾಸರೂ ಸಂದೇಶವಾಹಕರೂ ಆಗಿರುವರೆಂದೂ ನಾನು ಸಾಕ್ಷ್ಯ ಹೇಳುತ್ತೇನೆ. ದೇವಾ, ನನ್ನನ್ನು ತೌಬಾ ಮಾಡುವವರಲ್ಲಿ [ಪಶ್ಚಾತ್ತಾಪ ಪಟ್ಟು ಮರಳುವವರಲ್ಲಿ] ಸೇರಿಸು ಮತ್ತು ನನ್ನನ್ನು ಪರಿಶುದ್ಧರಾಗುವವನಾಗಿ ಮಾಡು.)

ನಿಯ್ಯತ್(ಸಂಕಲ್ಪ)

ಅನಂತರ ನೀವು ನಮಾಝ್‌ಗೆ ನಿಲ್ಲುತ್ತೀರಿ. ಕಿಬ್ಲದತ್ತ ನಿಮ್ಮ ಮುಖವಿದೆ. ನಿರ್ಮಲರಾಗಿ ಸರ್ವಲೋಕಗಳ ಪ್ರಭುವಿನ ಆಸ್ಥಾನದಲ್ಲಿ ಹಾಜರಾಗಿ ಮೊತ್ತಮೊದಲು ನೀವು ಉಚ್ಚರಿಸುವ ಮಾತು ಅಲ್ಲಾಹು ಅಕ್ಬರ್ (ಅಲ್ಲಾಹ್ ಮಹಾನನು) ಎಂದಾಗಿದೆ. ಇಷ್ಟು ದೊಡ್ಡ ಸತ್ಯವನ್ನು ಉಚ್ಚರಿಸಿ ಎಲ್ಲಾ ತರದ ಲೌಕಿಕ ವ್ಯವಹಾರಗಳನ್ನು ಕೈಬಿಟ್ಟಿರುವಿರೋ ಎಂಬಂತೆ ನೀವು ನಿಮ್ಮ ಎರಡೂ ಹಸ್ತಗಳನ್ನು ಕಿವಿಯ ತನಕ ಎತ್ತುತ್ತೀರಿ ಮತ್ತು ನಿಮ್ಮ ಪ್ರಭುವಿನ ಮುಂದೆ ವಿನೀತರಾಗಿ ಕೈಕಟ್ಟಿ ನಿಲ್ಲುತ್ತೀರಿ. ಆ ಬಳಿಕ ಈ ರೀತಿ ಬಿನ್ನವಿಸುತ್ತೀರಿ:

ಸ್ತುತಿಸ್ತೋತ್ರ

سُبْحٰنَكَ اللّٰهُمَّ وَبِحَمْدِكَ وَتَبَارَكَ اسْمُكَ وَتَعَالٰى جَدُّكَ
وَلَا اِلٰهَ غَيْرُكَ۔

"ಸುಬ್‌ಹಾನಕಲ್ಲಾಹುಮ್ಮ ವ ಬಿಹಮ್ದಿಕ, ವತಬಾರಕಸ್ಮುಕ, ವತಆಲಾ ಜದ್ದುಕ, ವಲಾ ಇಲಾಹ ಗೈರುಕ."

(ಓ ಅಲ್ಲಾಹ್, ನಾನು ನಿನ್ನ ಪರಿಶುದ್ಧತೆಯನ್ನು ನಿನ್ನ ಕೀರ್ತನೆಯೊಂದಿಗೆ ಘೋಷಿಸುತ್ತೇನೆ. ನಿನ್ನ ನಾಮವು ಮಂಗಲದಾಯಕವಾಗಿದೆ. ನಿನ್ನ ಪೂಜ್ಯತೆಯು ಅತ್ಯುನ್ನತವಾಗಿದೆ ಮತ್ತು ನಿನ್ನ ಹೊರತು ಪೂಜಾರ್ಹರಾರೂ ಇಲ್ಲ.)

ಅಭಯ ಯಾಚನೆ

اَعُوْذُ بِاللّٰهِ مِنَ الشَّيْطٰنِ الرَّجِيْمِ

"ಅಊದು ಬಿಲ್ಲಾಹಿ ಮಿನ ಶ್ಶೈತಾನಿರ್‍ರಜೀಮ್."

(ಶಪಿಸಲ್ಪಟ್ಟ ಶೈತಾನನ ದ್ರೋಹ ಹಾಗೂ ದುಷ್ಟತನದಿಂದ ನಾನು ಅಲ್ಲಾಹನ ಅಭಯ ಯಾಚಿಸುತ್ತೇನೆ.)

ಅಲ್ಲಾಹನ ನಾಮವನ್ನುಚ್ಚರಿಸುವುದು

بِسْمِ اللّٰهِ الرَّحْمٰنِ الرَّحِيْمِ ○

"ಬಿಸ್ಮಿಲ್ಲಾಹಿರ್‍ರಹ್ಮಾನಿರ್‍ರಹೀಮ್." (ಪರಮ ದಯಾಳುವೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ)

ದೇವಸ್ತುತಿ

اَلْحَمْدُ لِلّٰهِ رَبِّ الْعٰلَمِيْنَ ۝٢

"ಅಲ್‌ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್." (ಸರ್ವಸ್ತೋತ್ರಗಳೂ ಸರ್ವ ಲೋಕಗಳ ಪ್ರಭುವಾದ ಅಲ್ಲಾಹನಿಗೆ.)

اَلرَّحۡمٰنِ الرَّحِيۡمِۙ ﴿۳﴾

''ಅರ್ರಹ್ಮಾನಿರ್ರಹೀಮ್.'' (ಪರಮ ದಯಾಳುವೂ ಕರುಣಾನಿಧಿಯೂ ಆಗಿರುತ್ತಾನೆ.)

مٰلِكِ يَوۡمِ الدِّيۡنِؕ ﴿۴﴾

''ಮಾಲಿಕಿ ಯೌಮಿದ್ದೀನ್.'' (ನಿರ್ಣಾಯಕ ದಿನದ ಅಧಿಪತಿಯಾಗಿರುತ್ತಾನೆ.)

ಅಂದು ಕರ್ಮಗಳ ವಿಚಾರಣೆಯಾಗಿ ತೀರ್ಪು ನೀಡಲಾಗುವುದು ಮತ್ತು ಪ್ರತಿಯೋರ್ವನಿಗೆ ಅವನವನ ಕರ್ಮಫಲ ಸಿಗುವುದು.

اِيَّاكَ نَعۡبُدُ وَاِيَّاكَ نَسۡتَعِيۡنُؕ ﴿۵﴾

''ಇಯ್ಯಾಕ ನಅ್‌ಬುದು ವಇಯ್ಯಾಕ ನಸ್ತಈನ್.'' (ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನಿಂದ ಮಾತ್ರ ಸಹಾಯ ಯಾಚಿಸುತ್ತೇವೆ.)

اِهۡدِنَا الصِّرَاطَ الۡمُسۡتَقِيۡمَۙ ﴿۶﴾

''ಇಹ್ದಿನಸ್ಸಿರಾತಲ್ ಮುಸ್ತಕೀಮ್.'' (ನಮಗೆ ಸನ್ಮಾರ್ಗವನ್ನು ತೋರಿಸು.)

صِرَاطَ الَّذِيۡنَ اَنۡعَمۡتَ عَلَيۡهِمۡ ۙ

''ಸಿರಾತಲ್ಲದೀನ ಅನ್‌ಅಮ್ತ ಅಲೈಹಿಮ್.'' (ನಿನ್ನ ಅನುಗ್ರಹಕ್ಕೆ ಪಾತ್ರರಾದವರ ಮಾರ್ಗ.)

غَيۡرِ الۡمَغۡضُوۡبِ عَلَيۡهِمۡ وَلَا الضَّآلِّيۡنَ ﴿۷﴾

''ಗೈರಿಲ್ ಮಗ್‌ದೂಬಿ ಅಲೈಹಿಮ್ ವಲದ್ದಾಲ್ಲೀನ್.'' (ನಿನ್ನ ಕ್ರೋಧಕ್ಕೆ ಪಾತ್ರರಾದವರ ಮಾರ್ಗವಲ್ಲ, ಪಥಭ್ರಷ್ಟರ ಮಾರ್ಗವೂ ಅಲ್ಲ.) ಆಮೀನ್-ದೇವಾ, ತಥಾಸ್ತು. ಒಡೆಯಾ, ನಮ್ಮ ಪ್ರಾರ್ಥನೆಯನ್ನು ಸ್ವೀಕರಿಸು.

ಅನಂತರ ನೀವು ಕುರ್‌ಆನಿನ ಕೆಲವು ಸೂಕ್ತಗಳನ್ನು ಪಠಿಸುತ್ತೀರಿ. ಅವುಗಳಲ್ಲಿ ಪ್ರತಿಯೊಂದರಲ್ಲಿಯೂ ಅಮೃತ ತುಂಬಿದೆ, ಉಪದೇಶವಿದೆ, ಬೋಧನೆ ಇದೆ, ಪಾಠವಿದೆ. ನೀವು ಸೂರಃ ಫಾತಿಹಾದಲ್ಲಿ ಬೇಡಿದ ಸನ್ಮಾರ್ಗದ ಕಡೆಗೆ ಮಾರ್ಗದರ್ಶನ ಮಾಡಲಾಗಿದೆ.

ಪವಿತ್ರ ಕುರ್‌ಆನಿನ ಕೆಲವು ಅಧ್ಯಾಯಗಳು

ಅಲ್‌ಅಸ್ರ್

وَالْعَصْرِ ۝١ إِنَّ الْإِنسَانَ لَفِي خُسْرٍ ۝٢

"ವಲ್ ಅಸ್ರಿ ಇನ್ನಲ್ ಇನ್ಸಾನ ಲಫೀ ಖುಸ್ರ್." (ಕಾಲದಾಣೆ! ನಿಜವಾಗಿಯೂ ಮನುಷ್ಯನು ಮಹಾ ನಷ್ಟದಲ್ಲಿದ್ದಾನೆ.)

إِلَّا الَّذِينَ آمَنُوا وَعَمِلُوا الصَّالِحَاتِ

"ಇಲ್ಲಲ್ಲದೀನ ಆಮನೂ ವಅಮಿಲು ಸ್ಸಾಲಿಹಾತಿ" (ಸತ್ಯವಿಶ್ವಾಸ ಸ್ವೀಕರಿಸಿದ, ಸತ್ಕರ್ಮ ಮಾಡುತ್ತಿದ್ದ ಮತ್ತು)

وَتَوَاصَوْا بِالْحَقِّ وَتَوَاصَوْا بِالصَّبْرِ ۝٣

"ವತವಾಸೌ ಬಿಲ್‌ಹಕ್ಕಿ ವತವಾಸೌ ಬಿಸ್ಸಬ್ರ್." (ಪರಸ್ಪರ ಸತ್ಯ ಹಾಗೂ ಸಹನೆಯನ್ನು ಉಪದೇಶಿಸುತ್ತಿದ್ದವರ ಹೊರತು.)

ವಿನಾಶ ಹಾಗೂ ಭಗ್ನತೆಯಿಂದ ಪಾರಾಗಬೇಕಾದರೆ ವಿಶ್ವಾಸವಿರಿಸಬೇಕು. ಸತ್ಕರ್ಮಗಳನ್ನು ತಾನೇ ಮಾಡುತ್ತಿದ್ದರೆ ಸಾಲದು, ಧರ್ಮದಲ್ಲಿ ಸ್ಥಿರವಾಗಿರುವ ಹಾಗೂ ಇತರರನ್ನು ಸ್ಥಿರವಾಗಿಸುವಂತೆ ಸಹಾಯಕವಾಗಬಲ್ಲ ಸತ್ಯವಿಶ್ವಾಸಿಗಳ ಒಂದು ಸಮುದಾಯವೂ ಇರಬೇಕು.

ಅಲ್ ಮಾಊನ್

أَرَأَيْتَ الَّذِي يُكَذِّبُ بِالدِّينِ ۝١

"ಅರಐತಲ್ಲದೀ ಯುಕದ್ದಿಬು ಬಿದ್ದೀನ್." (ಪರಲೋಕದ ಕರ್ಮಫಲಗಳನ್ನು ನಿರಾಕರಿಸುವವನ್ನು ನೀವು ಕಂಡಿರಾ.)

فَذَٰلِكَ الَّذِي يَدُعُّ الْيَتِيمَ ۝٢

"ಫದಾಲಿಕಲ್ಲದೀ ಯದುಅ್‌ಉಲ್ ಯತೀಮ್." (ಅವನೇ ತಾನೆ ಅನಾಥನನ್ನು ದೂರ ದಬ್ಬುವವನು)

وَلَا يَحُضُّ عَلَىٰ طَعَامِ الْمِسْكِينِ ③

"ವಲಾ ಯಹುದ್ದು ಅಲಾ ತಆಮಿಲ್ ಮಿಸ್‌ಕೀನ್." (ದೀನ ದಲಿತರಿಗೆ ತಾನು ಉಣಿಸುವುದಂತಿರಲಿ. ಬಡ ಜನರಿಗೆ ಉಣಿಸಿರಿ ಎಂದು ಇತರರೊಡನೆ ಹೇಳುವುದನ್ನೂ ಇಷ್ಟಪಡುವುದಿಲ್ಲ.)

فَوَيْلٌ لِّلْمُصَلِّينَ ④ الَّذِينَ هُمْ عَنْ صَلَاتِهِمْ سَاهُونَ ⑤ الَّذِينَ
هُمْ يُرَاءُونَ ⑥ وَيَمْنَعُونَ الْمَاعُونَ ⑦

"ಫವೈಲುಲ್ಲಿಲ್ ಮುಸಲ್ಲೀನಲ್ಲದೀನಹುಮ್ ಅನ್‌ಸಲಾತಿಹಿಮ್ ಸಾಹೂನ್. ಅಲ್ಲದೀನಹುಮ್ ಯುರಾಊನ ವಯಮ್ನ ಊನಲ್ ಮಾಊನ್." [ನಿರ್ಣಾಯಕ ದಿನದ ಮೇಲೆ ವಿಶ್ವಾಸವಿರಿಸದ ಕಾರಣ] (ನಮಾಝ್‌ನ ಬಗ್ಗೆ ಅಸಡ್ಡೆ ತೋರುವ ನಮಾಝಿಗಳಿಗೆ [ನಮಾಝ್ ಮಾಡುವವರಿಗೆ] ವಿನಾಶವಿದೆ. ಅವರು ನಮಾಝ್ ಮಾಡುವುದಾದರೂ ಕೇವಲ ತೋರಿಕೆಗಾಗಿ. ಮತ್ತು ಅಗತ್ಯವುಳ್ಳವರಿಗೆ ಸಾಮಾನ್ಯ ಅವಶ್ಯಕ ವಸ್ತುಗಳನ್ನು ಕೊಡುವುದಕ್ಕೂ ಹಿಂಜರಿಯುತ್ತಾರೆ.)

ಪರಲೋಕದ ವಿಶ್ವಾಸವು ಇಸ್ಲಾಮಿನ ಜೀವಾಳವಾಗಿದ್ದು ಅದರ ಹೊರತು ದೇವಮಾರ್ಗದಲ್ಲಿ ನಡೆಯಲು ಸಾಧ್ಯವೇ ಇಲ್ಲವೆಂದು ಇದರಿಂದ ತಿಳಿಯುತ್ತದೆ.

ಅಲ್ ಹುಮಝಃ

وَيْلٌ لِّكُلِّ هُمَزَةٍ لُّمَزَةٍ ①

"ವೈಲುಲ್ಲಿಕುಲ್ಲಿಹುಮಝತಿಲ್ಲುಮಝಃ." ([ಎದುರೆದುರೇ] ಜನರನ್ನು ಮೂದಲಿಸುವ ಮತ್ತು [ಬೆನ್ನ ಹಿಂದೆ] ದೂಷಿಸುವ ಅಭ್ಯಾಸವಿರುವ ಪ್ರತಿಯೊಬ್ಬನಿಗೂ ವಿನಾಶವಿದೆ.)

الَّذِي جَمَعَ مَالًا وَعَدَّدَهُ ②

"ಅಲ್ಲದೀ ಜಮಅಮಾಲಂವ್ವಅದ್ದದಃ." (ಅವನು ಸಂಪತ್ತನ್ನು ಸಂಗ್ರಹಿಸಿದನು ಮತ್ತು ಅದನ್ನು ಎಣಿಸಿ ಎಣಿಸಿ ಇಟ್ಟನು.)

يَحْسَبُ أَنَّ مَالَهُ أَخْلَدَهُ ③

"ಯಹ್ಸಬು ಅನ್ನಮಾಲಹೂ ಅಖ್‌ಲದಃ." (ಅವನ ಸಂಪತ್ತು ಶಾಶ್ವತವಾಗಿ ಅವನ ಬಳಿಯಲ್ಲೇ ಇರುವುದೆಂದು ಅವನು ಭಾವಿಸುತ್ತಾನೆ.)

كَلَّا لَيُنۢبَذَنَّ فِي ٱلْحُطَمَةِ ④

"ಕಲ್ಲಾಲಯುಂಬದನ್ನ ಫಿಲ್‌ಹುತಮಃ." (ಖಂಡಿತ ಇಲ್ಲ, ಒಂದು ದಿನ ಅವನು ಸಾಯುವನು ಮತ್ತೆ ಹುತಮಃವನ್ನು ಸೇರುವನು.)

وَمَآ أَدْرَىٰكَ مَا ٱلْحُطَمَةُ ⑤

"ವಮಾ ಅದ್‌ರಾಕ ಮಲ್‌ಹುತಮಃ." (ಹುತಮಃ ಏನಾಗಿರುತ್ತದೆಂದು ನಿನಗೇನು ಗೊತ್ತು?)

نَارُ ٱللَّهِ ٱلْمُوقَدَةُ ⑥ ٱلَّتِى تَطَّلِعُ عَلَى ٱلْأَفْـِٔدَةِ ⑦

"ನಾರುಲ್ಲಾಹಿಲ್ ಮೂಕದತುಲ್ಲತೀ ತತ್ತಲಿಉ ಅಲಲ್ ಅಫ್ ಇದಃ." (ಅಲ್ಲಾಹನಿಂದ ಉರಿಸಲ್ಪಟ್ಟ ಅಗ್ನಿಯದು. ಅದರ ಜ್ವಾಲೆಗಳು ಹೃದಯವನ್ನಾವರಿಸುತ್ತವೆ.)

إِنَّهَا عَلَيْهِم مُّؤْصَدَةٌ ⑧ فِى عَمَدٍ مُّمَدَّدَةٍۭ ⑨

"ಇನ್ನಹಾ ಅಲೈಹಿಮ್ ಮುಲ್‌ಸದತುನ್ ಫೀ ಅಮದಿಮ್ಮುಮದ್ದದಃ." (ಅವು ಅತ್ಯಂತ ಎತ್ತರವಾದ ಸ್ತಂಭಗಳಂತಿರುವ ಜ್ವಾಲೆಗಳ ರೂಪದಲ್ಲಿ ಅವರನ್ನು ಆವರಿಸಿ ಕೊಳ್ಳುವುವು.)

ಹೀಗೆ ನೀವು ನಮಾಝಿನಲ್ಲಿ ಎಷ್ಟು ಅಧ್ಯಾಯಗಳನ್ನು ಅಥವಾ ಸೂಕ್ತಗಳನ್ನು ಪಠಿಸುತ್ತೀರೋ ಅವು ನಿಮಗೆ ಒಂದಲ್ಲೊಂದು ಅತ್ಯುತ್ತಮ ಉಪದೇಶ ಅಥವಾ ಮಾರ್ಗದರ್ಶನವನ್ನೀಯುತ್ತವೆ. ನೀವು ಇಹದಲ್ಲಿ ಪಾಲಿಸಬೇಕಾದ ಆಜ್ಞೆಗಳಾವುವೆಂದು ನಿಮಗೆ ತೋರಿಸಿ ಕೊಡುತ್ತವೆ.

ರುಕೂಅ್

ಈ ಆದೇಶಗಳನ್ನು ಪಠಿಸಿದ ಬಳಿಕ ನೀವು "ಅಲ್ಲಾಹು ಅಕ್ಬರ್" ಎನ್ನುತ್ತಾ ರುಕೂಅ್ (ಬಾಗುವುದು) ಮಾಡುತ್ತೀರಿ. ಮೊಣಕಾಲುಗಳ ಮೇಲೆ ಕೈಗಳನ್ನಿರಿಸಿ ನಿಮ್ಮ ಒಡೆಯನೆದುರು ಬಾಗುತ್ತೀರಿ; ಮತ್ತು سُبْحَانَ رَبِّيَ الْعَظِيْمُ "ಸುಬ್‌ಹಾನ ರಬ್ಬಿಯಲ್ ಅಝೀಮ್" (ಪೂಜ್ಯನಾದ ನನ್ನ ರಕ್ಷಕನು ಪರಿಶುದ್ಧನಾಗಿರುತ್ತಾನೆ) ಎಂದು ಹೇಳುತ್ತೀರಿ. ಅನಂತರ ನೆಟ್ಟಗೆ ನಿಂತು سَمِعَ اللّٰهُ لِمَنْ حَمِدَهٗ "ಸಮಿಅಲ್ಲಾಹು ಲಿಮನ್ ಹಮಿದಃ" (ಅಲ್ಲಾಹನ ಸ್ತುತಿಗೈದವನ ಮಾತನ್ನು ಅಲ್ಲಾಹನು ಆಲಿಸಿದನು) ಎನ್ನುತ್ತೀರಿ.

ಸುಜೂದ್

ಆ ಬಳಿಕ "ಅಲ್ಲಾಹು ಅಕ್ಬರ್" ಎನ್ನುತ್ತಾ ಸುಜೂದ್(ಸಾಷ್ಟಾಂಗ)ನಲ್ಲಿ ಎರಗಿ

سُبْحٰنَ رَبِّيَ الْاَعْلٰى

"ಸುಬ್‌ಹಾನರಬ್ಬಿಯಲ್ ಅಅ್‌ಲಾ" (ಅತ್ಯುನ್ನತನೂ ಅತ್ಯಂತ ಶ್ರೇಷ್ಠನೂ ಆದ ನನ್ನ ರಕ್ಷಕನು ಪಾವನನಾಗಿರುತ್ತಾನೆ) ಎಂದು ಹೇಳುತ್ತೀರಿ.

ಅನಂತರ "ಅಲ್ಲಾಹು ಅಕ್ಬರ್" ಎನ್ನುತ್ತಾ ತಲೆ ಎತ್ತಿ ಭಕ್ತಿಭಾವದಿಂದ ಕುಳಿತುಕೊಂಡು ಈ ದುಆ(ಪ್ರಾರ್ಥನೆ) ಮಾಡುತ್ತೀರಿ:

ಅತ್ತಹಿಯ್ಯಾತು

اَلتَّحِيَّاتُ لِلّٰهِ وَالصَّلَوَاتُ وَالطَّيِّبَاتُ، اَلسَّلَامُ عَلَيْكَ
اَيُّهَاالنَّبِيُّ وَرَحْمَةُ اللّٰهِ وَبَرَكَاتُهٗ، اَلسَّلَامُ عَلَيْنَا وَعَلٰى
عِبَادِ اللّٰهِ الصَّالِحِيْنَ، اَشْهَدُ اَنْ لَّآ اِلٰهَ اِلَّا اللّٰهُ وَاَشْهَدُ
اَنَّ مُحَمَّدًا عَبْدُهٗ وَرَسُوْلُهٗ.

"ಅತ್ತಹಿಯ್ಯಾತುಲಿಲ್ಲಾಹಿ ವಸ್ಸಲವಾತು ವತ್ತಯ್ಯಿಬಾತು ಅಸ್ಸಲಾಮು ಅಲೈಕ ಅಯ್ಯುಹನ್ನಬಿಯ್ಯು ವ ರಹ್ಮತುಲ್ಲಾಹಿ ವಬರಕಾತುಹೂ ಅಸ್ಸಲಾಮು ಅಲೈನಾ ವಅಲಾ ಇಬಾದಿಲ್ಲಾಹಿಸ್ಸಾಲಿಹೀನ್. ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹು ವ ಅಶ್‌ಹದು ಅನ್ನಮುಹಮ್ಮದನ್ ಅಬ್‌ದುಹೂ ವರಸೂಲುಹೂ."

(ನಮ್ಮ ಎಲ್ಲಾ ವಂದನೆಗಳು, ಎಲ್ಲಾ ನಮಾಝ್‌ಗಳು ಮತ್ತು ಎಲ್ಲಾ ಪಾವಿತ್ರ್ಯಗಳು ಅಲ್ಲಾಹನಿಗೇ ಆಗಿವೆ. ಓ ಪ್ರವಾದಿಯವರೇ ನಿಮ್ಮ ಮೇಲೆ ಶಾಂತಿ, ಕರುಣೆ ಮತ್ತು ಸಮೃದ್ಧಿ ಉಂಟಾಗಲಿ. ನಮ್ಮ ಮೇಲೂ ಅಲ್ಲಾಹನ ಎಲ್ಲಾ ಸದ್ಭಕ್ತರ [ಸಜ್ಜನದಾಸರ] ಮೇಲೆ ಶಾಂತಿ ಇರಲಿ. ಅಲ್ಲಾಹನ ಹೊರತು ಯಾವ ಆರಾಧ್ಯರೂ ಇಲ್ಲವೆಂದು ನಾನು ಸಾಕ್ಷ್ಯ ನುಡಿಯುತ್ತೇನೆ. ಮುಹಮ್ಮದ್(ಸ) ಅಲ್ಲಾಹನ ದಾಸರೂ ಪ್ರವಾದಿಯೂ ಆಗಿರುತ್ತಾರೆಂದೂ ನಾನು ಸಾಕ್ಷ್ಯ ನುಡಿಯುತ್ತೇನೆ.)

ಈ ಸಾಕ್ಷ್ಯ ಹೇಳುವಾಗ ನೀವು ಬಲತೋಳ ಬೆರಳನ್ನೆತ್ತುತ್ತೀರಿ. ಇದು ನಮಾಝ್‌ನಲ್ಲಿ ನಿಮ್ಮ ಮೂಲ ವಿಶ್ವಾಸದ ಈ ಘೋಷಣೆಯನ್ನು ಬಾಯಿಯಿಂದ ಹೇಳುವಾಗ ಅದರ ಮೇಲೆ ಇನ್ನಷ್ಟು ಒತ್ತು ನೀಡಲಿಕ್ಕಾಗಿದೆ. ಇದಾದ ಬಳಿಕ ನೀವು 'ದರೂದ್' ಪಠಿಸುತ್ತೀರಿ-

ಸ್ವಸ್ತಿವಚನ

اللّٰهُمَّ صَلِّ عَلٰى سَيِّدِنَا وَمَوْلَانَا مُحَمَّدٍ وَّ عَلٰىٓ اٰلِ
مَحَمَّدٍ كَمَا صَلَّيْتَ عَلٰىٓ اِبْرٰهِيْمَ وَعَلٰىٓ اٰلِ اِبْرَاهِيْمَ اِنَّكَ
حَمِيْدٌ مَّجِيْدٌ۔ اَللّٰهُمَّ بَارِكْ عَلٰى سَيِّدِنَا وَمَوْلَانَا مُحَمَّدٍ
وَّ عَلٰىٓ اٰلِ مُحَمَّدٍ كَمَا بَارَكْتَ عَلٰىٓ اِبْرَاهِيْمَ وَعَلٰىٓ اٰلِ
اِبْرَاهِيْمَ اِنَّكَ حَمِيْدٌ مَّجِيْدٌ۔

"ಅಲ್ಲಾಹುಮ್ಮ ಸಲ್ಲಿ ಅಲಾ ಸಯ್ಯಿದಿನಾ ವಮೌಲಾನಾ ಮುಹಮ್ಮದಿಂವ್ವ ಅಲಾಆಲಿ ಮುಹಮ್ಮದಿನ್ ಕಮಾ ಸಲ್ಲೈತ ಅಲಾ ಇಬ್‌ರಾಹೀಮ ವಅಲಾ ಆಲಿ ಇಬ್‌ರಾಹೀಮ ಇನ್ನಕ ಹಮೀದುಮ್ಮಜೀದ್. ಅಲ್ಲಾಹುಮ್ಮ ಬಾರಿಕ್ ಅಲಾ ಸಯ್ಯಿದಿನಾ ವ ಮೌಲಾನಾ ಮುಹಮ್ಮದಿನ್ ವಅಲಾ ಆಲಿ ಮುಹಮ್ಮದಿನ್ ಕಮಾ ಬಾರಕ್‌ತ ಅಲಾ ಇಬ್‌ರಾಹೀಮ ವಅಲಾ ಆಲಿ ಇಬ್‌ರಾಹೀಮ ಇನ್ನಕ ಹಮೀದುಮ್ಮಜೀದ್."

(ಓ ಅಲ್ಲಾಹ್, ನೀನು ಇಬ್ರಾಹೀಮ್(ಅ) ಮತ್ತು ಅವರ ಸಂತಾನದ ಮೇಲೆ ಕೃಪೆದೋರಿದಂತೆಯೇ ನಮ್ಮ ನೇತಾರರೂ ಮಾರ್ಗದರ್ಶಕರೂ ಆದ ಮುಹಮ್ಮದ್‌ರ(ಸ) ಮೇಲೆ ಮತ್ತು ಅವರ ವಂಶದ ಮೇಲೆ ಕೃಪೆದೋರು. ಓ ಅಲ್ಲಾಹ್, ನೀನು ಇಬ್ರಾಹೀಮ್ ಮತ್ತು ಅವರ ಸಂತಾನದ ಮೇಲೆ ಸಮೃದ್ಧಿಯನ್ನಿಳಿಸಿದಂತೆಯೇ ನಮ್ಮ ಸರದಾರರೂ ಮಾರ್ಗದರ್ಶಕರೂ ಆದ ಮುಹಮ್ಮದ್‌ರ(ಸ) ಮೇಲೆ ಮತ್ತು ಅವರ ವಂಶದ ಮೇಲೆ ಸಮೃದ್ಧಿಯನ್ನಿಳಿಸು. ನಿಶ್ಚಯವಾಗಿಯೂ ನೀನು ಅತ್ಯಂತ ಸ್ತುತ್ಯರ್ಹನೂ ಪೂಜ್ಯನೂ ಆಗಿರುತ್ತೀಯೆ.)

ಈ ದರೂದ್ ಪಠಣದ ಬಳಿಕ ನೀವು ಅಲ್ಲಾಹನೊಡನೆ ಹೀಗೆ ಯಾಚಿಸುತ್ತೀರಿ-

ಪ್ರಾರ್ಥನೆ

اَللّٰهُمَّ اِنِّىٓ اَعُوْذُبِكَ مِنْ عَذَابِ جَهَنَّمَ، وَاَعُوْذُبِكَ مِنْ
عَذَابِ الْقَبْرِوَاَعُوْذُبِكَ مِنْ فِتْنَةِ الْمَسِيْحِ الدَّجَّالِ
وَاَعُوْذُبِكَ مِنْ فِتْنَةِ الْمَحْيَا وَالْمَمَاتِ وَاَعُوْذُبِكَ مِنَ
الْمَأْثَمِ وَالْمَغْرَمِ۔

"ಅಲ್ಲಾಹುಮ್ಮ ಇನ್ನೀ ಅಊದು ಬಿಕ ಮಿನ್ ಅದಾಬಿ ಜಹನ್ನಮ ವ ಅಊದು ಬಿಕ ಮಿನ್ ಅದಾಬಿಲ್ ಕಬ್‌ರಿ ವ ಅಊದು ಬಿಕ ಮಿನ್ ಫಿತ್‌ನತಿಲ್ ಮಸೀಹಿದ್ದಜ್ಜಾಲ್ ವಅಊದು ಬಿಕ ಮಿನ್ ಫಿತ್‌ನತಿಲ್ ಮಹ್‌ಯಾ ವಲ್ ಮಮಾತಿ ವ ಅಊದುಬಿಕ ಮಿನಲ್ ಮಅ್‌ಸಿಮಿ ವಲ್ ಮಗ್ರಿಮ್"

(ದೇವಾ, ನಾನು ಜಹನ್ನಮ್‌ನ (ನರಕ) ಯಾತನೆಯಿಂದ ನಿನ್ನ ಅಭಯ ಬೇಡುತ್ತೇನೆ. ಸಮಗ್ರ ಭೂಮಂಡಲದಲ್ಲಿ ಹಬ್ಬಿ ಜನರನ್ನು ಪಥಭ್ರಷ್ಟರನ್ನಾಗಿ ಮಾಡುವ ದಜ್ಜಾಲನ ಕೀಟಲೆಯಿಂದ ನಿನ್ನ ಅಭಯ ಬೇಡುತ್ತೇನೆ. ಜೀವನ ಮರಣಗಳ ಅನಿಷ್ಟಗಳಿಂದ ನಿನ್ನ ಅಭಯ ಬೇಡುತ್ತೇನೆ. ದುಷ್ಕರ್ಮಗಳ ಜವಾಬ್ದಾರಿ ಮತ್ತು ಋಣಭಾರದಿಂದಲೂ ನಿನ್ನ ಅಭಯ ಬೇಡುತ್ತೇನೆ.)

ಈ ದುಆ(ಪ್ರಾರ್ಥನೆ)ದೊಂದಿಗೆ ನಿಮ್ಮ ನಮಾಝ್ ಪೂರ್ಣಗೊಂಡಿತು. ಇನ್ನು ನೀವು ನಿಮ್ಮ ಒಡೆಯನ ಆಸ್ಥಾನದಿಂದ ಮರಳುತ್ತೀರಿ. ಆಗ ಪ್ರಪ್ರಥಮವಾಗಿ ಮಾಡುವುದೇನು?

ಸಲಾಮ್ ಹೇಳುವುದು

اَلسَّلَامُ عَلَيْكُمْ وَرَحْمَةُ اللّٰهِ "ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಃ" ಎನ್ನುತ್ತಾ ಬಲಕ್ಕೂ ಎಡಕ್ಕೂ ಮುಖ ತಿರುಗಿಸಿ ನೆರೆದವರಿಗೆ ಹಾಗೂ ಜಗತ್ತಿನ ಸಕಲ ವಸ್ತುಗಳಿಗೆ ಶಾಂತಿ ಮತ್ತು ಕರುಣೆಯನ್ನು ಬಯಸುತ್ತೀರಿ. ಅಂದರೆ ಅಲ್ಲಾಹನ ಆಸ್ಥಾನದಿಂದ ಮರಳುವಾಗ ಇಡೀ ಜಗತ್ತಿಗಾಗಿ ತಂದ ಶುಭ ಸಂದೇಶವಿದು.

ನಸುಕಿನಲ್ಲೇ ಎದ್ದು, ಲೌಕಿಕ ಕೆಲಸ-ಕಾರ್ಯಗಳನ್ನು ಆರಂಭಿಸುವುದಕ್ಕೆ ಮುಂಚೆ ನೀವು ಮಾಡುವ ನಮಾಝ್ ಇದುವೇ ಆಗಿದೆ. ಅನಂತರ ಕೆಲವು ತಾಸುಗಳ ತನಕ ನಾನಾ ಕೆಲಸ ಗಳಲ್ಲಿ ನಿರತರಾಗಿ, ಮಧ್ಯಾಹ್ನದ ವೇಳೆ ದೇವ ಸನ್ನಿಧಿಯಲ್ಲಿ ಹಾಜರಾಗಿ ಪುನಃ ಇದೇ ನಮಾಝ್ ಮಾಡುತ್ತೀರಿ. ಇದಾದ ಕೆಲವು ತಾಸುಗಳ ಬಳಿಕ ಸಂಜೆ ಇದೇ ನಮಾಝ್ ಮಾಡುತ್ತೀರಿ ಮತ್ತೂ ಕೆಲವು ತಾಸುಗಳ ಬಳಿಕ ಸೂರ್ಯಾಸ್ತಮಾನವಾದ ಕೂಡಲೇ ಇದೇ ನಮಾಝನ್ನು ಪುನರಾವರ್ತಿಸುತ್ತೀರಿ. ಆ ಬಳಿಕ ಲೌಕಿಕ ಕೆಲಸಗಳಿಂದ ಮುಕ್ತರಾಗಿ, ಮಲಗುವುದಕ್ಕೆ ಮುಂಚೆ ಕೊನೆಯ ಬಾರಿ ನಿಮ್ಮ ಒಡೆಯನ ಮುಂದೆ ಹಾಜರಿಕೊಡುತ್ತೀರಿ. ಈ ನಮಾಝ್ 'ವಿತ್‌ರ್' ನಮಾಝ್‌ನೊಂದಿಗೆ ಕೊನೆಗೊಳ್ಳುತ್ತದೆ. ಅದರ ಮೂರನೆಯ ರಕಅತ್‌ನಲ್ಲಿ ನೀವು ನಿಮ್ಮ ಒಡೆಯನೊಂದಿಗೆ ಒಂದು ಮಹತ್ತಾದ ಕರಾರನ್ನು ಮಾಡುತ್ತೀರಿ. ಇದನ್ನು 'ದುಆಯೆ ಕುನೂತ್' ಎನ್ನುತ್ತಾರೆ. 'ಕುನೂತ್' ಎಂದರೆ ಅಲ್ಲಾಹನ ಮುಂದೆ ತನ್ನ ದೈನ್ಯತೆ, ವಿನೀತಭಾವ, ಅನುಸರಣೆ ಮತ್ತು ಆರಾಧನೆಗಳ ಕರಾರು.

ನೀವು ಈ ಕರಾರನ್ನು ಯಾವ ಶಬ್ದಗಳಲ್ಲಿ ಮಾಡುತ್ತೀರೆಂಬುದನ್ನು ಗಮನಿಸಿರಿ:

ಕುನೂತ್‌ನ ಪ್ರಾರ್ಥನೆ

اَللّٰهُمَّ اِنَّا نَسْتَعِيْنُكَ وَنَسْتَهْدِيْكَ وَنَسْتَغْفِرُكَ وَنُؤْمِنُ بِكَ وَنَتَوَكَّلُ عَلَيْكَ وَنُثْنِيْ عَلَيْكَ الْخَيْرَ كُلَّهٗ. نَشْكُرُكَ وَلَا نَكْفُرُكَ وَنَخْلَعُ وَنَتْرُكُ مَنْ يَّفْجُرُكَ اَللّٰهُمَّ اِيَّاكَ نَعْبُدُ وَلَكَ نُصَلِّيْ وَنَسْجُدُ وَاِلَيْكَ نَسْعٰى وَنَحْفِدُ، نَرْجُوْا رَحْمَتَكَ وَنَخْشٰى عَذَابَكَ اِنَّ عَذَابَكَ بِالْكُفَّارِ مُلْحِقٌ.

"ಅಲ್ಲಾಹುಮ್ಮ ಇನ್ನಾನಸ್ತ ಈನುಕ, ವನಸ್ತಹ್‌ದಿಯುಕ ವ ನಸ್ತಗ್ಫಿರುಕ, ವ ನುಅ್‌ಮಿನುಬಿಕ, ವ ನತವಕ್ಕಲು ಅಲೈಕ, ವ ನುಸ್ನೀ ಅಲೈಕಲ್ ಖೈರ ಕುಲ್ಲಹು. ವನಶ್ಕುರುಕ ವಲಾ ನಕ್‌ಫುರುಕ ವನಖ್‌ಲಉ ವನತ್‌ರುಕು ಮಂಯ್ಯಫ್‌ಜುರುಕ. ಅಲ್ಲಾಹುಮ್ಮ ಇಯ್ಯಾಕ ನಅ್‌ಬುದು ವ ಲಕ ನುಸಲ್ಲೀ ವನಸ್ಜುದು ವ ಇಲೈಕ ನಸ್‌ಆ ವನಹ್‌ಫಿದು. ನರ್‌ಜೂ ರಹ್‌ಮತಕ ವನಖ್ ಶಾ ಅದಾಬಕ ಇನ್ನ ಅದಾಬಕ ಬಿಲ್ ಕುಫ್ಫಾರಿ ಮುಲ್‌ಹಿಕ್."

(ದೇವಾ, ನಾವು ನಿನ್ನಿಂದಲೇ ಸಹಾಯ ಬೇಡುತ್ತೇವೆ. ನಿನ್ನೊಡನೆಯೇ ಪಾಪಗಳಿಗೆ ಕ್ಷಮೆ ಯಾಚಿಸುತ್ತೇವೆ. ನಿನ್ನ ಮೇಲೆಯೇ ವಿಶ್ವಾಸವಿರಿಸುತ್ತೇವೆ. ನಿನ್ನ ಮೇಲೆ ಭರವಸೆ ಇಡುತ್ತೇವೆ. ಸರ್ವಸ್ತುತಿಯನ್ನು ನಿನಗಾಗಿ ಮೀಸಲಿಡುತ್ತೇವೆ. ನಾವು ನಿನಗೆ ಕೃತಜ್ಞತೆ ಸಲ್ಲಿಸುತ್ತೇವೆ; ಕೃತಘ್ನರಾಗುವುದಿಲ್ಲ. ನಿನ್ನ ಆಜ್ಞೋಲಂಘಕರ ಸ್ನೇಹ ಬಿಟ್ಟು ಬಿಡುತ್ತೇವೆ. ಅವರೊಂದಿಗೆ ಯಾವ ಸಂಬಂಧವನ್ನೂ ಇರಿಸುವುದಿಲ್ಲ. ದೇವಾ, ನಾವು ನಿನ್ನನ್ನೇ ಆರಾಧಿಸುತ್ತೇವೆ. ನಿನಗಾಗಿಯೇ ನಮಾಝ್ ಮಾಡುತ್ತೇವೆ ಮತ್ತು ಸಾಷ್ಟಾಂಗ ಮಾಡುತ್ತೇವೆ. ನಮ್ಮ ಸರ್ವ ಪ್ರಯತ್ನ ಪರಿಶ್ರಮಗಳು ನಿನ್ನ ಸಂಪ್ರೀತಿಗಾಗಿಯೇ ಇವೆ. ನಾವು ನಿನ್ನ ಕರುಣೆಯನ್ನೇ ಬಯಸುತ್ತೇವೆ. ನಿನ್ನ ಯಾತನೆಯನ್ನು ಭಯಪಡುತ್ತೇವೆ. ನಿಶ್ಚಯವಾಗಿಯೂ ನಿನ್ನ ಯಾತನೆಯು ಕಾಫಿರ್ [ಸತ್ಯನಿಷೇಧಿ]ಗಳ ಮೇಲೆರಗುವುದು.)

ನಮಾಝ್ ಮತ್ತು ಚಾರಿತ್ರ್ಯ ನಿರ್ಮಾಣ

ಬಂಧುಗಳೇ!

ಸ್ವಲ್ಪ ಆಲೋಚಿಸಿರಿ, ದಿನಕ್ಕೆ ಐದು ಬಾರಿ ಈ ಅದಾನ್ ಕರೆಯನ್ನು ಕೇಳಿ, ಎಷ್ಟೊಂದು ಮಹತ್ತಾದ ವಿಷಯದ ಸಾಕ್ಷ್ಯ ನೀಡಲಾಗುತ್ತದೆಂದು ಅರಿಯುವ ಮತ್ತು ಪ್ರತಿಸಲವೂ ಈ ಕರೆಯನ್ನು ಕೇಳಿದೊಡನೆ ತನ್ನ ಎಲ್ಲಾ ಕೆಲಸಗಳನ್ನು ಬದಿಗಿರಿಸಿ ತನ್ನ ಮತ್ತು ಇಡೀ ವಿಶ್ವದ ಒಡೆಯನೆಂದು ನಂಬಿದ ಆ ಪರಮ ಪಾವನನ ಆಸ್ಥಾನದ ಕಡೆಗೆ ಧಾವಿಸುವ ಮತ್ತು ಪ್ರತಿ ನಮಾಝ್‌ಗಿಂತ

ಮುಂಚೆ ಶರೀರ ಮತ್ತು ಮನಸ್ಸನ್ನು ವುಝೂ ಮೂಲಕ ಶುದ್ಧಗೊಳಿಸುವ ಹಾಗೂ ನಾನೀಗ ವಿವರಿಸಿರುವ ಎಲ್ಲಾ ಮಾತುಗಳನ್ನು ಅರ್ಥವರಿತು ಹಾಗೂ ಬೋಧ ಸಹಿತ ನಮಾಝ್‌ನಲ್ಲಿ ಆಗಾಗ ಹೇಳುವ ಒಬ್ಬನಲ್ಲಿ ದೇವ ಭಯವುಂಟಾಗದಿರುವುದಾದರೂ ಹೇಗೆ? ಅಂಥವನಿಗೆ ದೇವಾದೇಶಗಳನ್ನು ಉಲ್ಲಂಘಿಸಿ ನಡೆಯಲು ನಾಚಿಕೆಯಾಗದೇ? ಪಾಪಕಾರ್ಯ ಹಾಗೂ ದುರಾಚಾರಗಳ ಕಳಂಕದೊಂದಿಗೆ ಪದೇಪದೇ ಅಲ್ಲಾಹನ ಮುಂದೆ ಹಾಜರಾಗುವಾಗ ಅವನ ಆತ್ಮವು ನಡುಗಲಾರದೆ? ಒಬ್ಬನು ನಮಾಝ್‌ನಲ್ಲಿ ದೇವದಾಸ್ಯದ ಮತ್ತು ಅನುಸರಣೆಯ ಪ್ರತಿಜ್ಞೆ ಮಾಡಿ, ಅವನು ನಿರ್ಣಾಯಕ ದಿನದ ಅಧಿಪತಿ ಎಂಬುದನ್ನು ಅಂಗೀಕರಿಸಿ ತನ್ನ ಕೆಲಸ ಕಾರ್ಯಗಳ ಕಡೆಗೆ ಮರಳಿ ಬಂದಾಗ ಸುಳ್ಳು, ಮೋಸ, ವಂಚನೆ, ಲಂಚ ಮತ್ತು ಬಡ್ಡಿಯ ವ್ಯವಹಾರ, ಜನರಿಗೆ ಕೀಟಲೆ ಕೊಡುವುದು ಮತ್ತು ಅಶ್ಲೀಲ, ಅನಾಚಾರ, ನಿರ್ಲಜ್ಜೆಯ ಕಾರ್ಯಗಳೇ ಮೊದಲಾದ ಎಲ್ಲಾ ದುಷ್ಕೃತ್ಯಗಳ ಹೊರೆಯನ್ನು ಹೊತ್ತುಕೊಂಡು ಅಲ್ಲಾಹನ ಸನ್ನಿಧಿಗೆ ಹೋಗಿ ಆ ಪ್ರತಿಜ್ಞಾ ವಾಕ್ಯಗಳನ್ನು ಪುನಃ ಉಚ್ಚರಿಸಲು ಅವನಿಗೆ ಧೈರ್ಯ ಬರುವುದಾದರೂ ಹೇಗೆ? ನೀವು ಚೆನ್ನಾಗಿ ಬೋಧವರಿತು, "ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ, ನಿನ್ನಿಂದ ಮಾತ್ರ ಸಹಾಯ ಬೇಡುತ್ತೇವೆ," ಎಂದು ಮೂವತ್ತಾರು ಸ್ಥಲ ಅಲ್ಲಾಹನೊಂದಿಗೆ ಪ್ರತಿಜ್ಞೆ ಮಾಡಿ ಆ ಬಳಿಕ, ದೇವೇತರರ ಆರಾಧನೆ ಮಾಡುವುದೂ ಸಹಾಯಕ್ಕಾಗಿ ಇತರರ ಮುಂದೆ ಕೈ ಚಾಚುವುದೂ ಹೇಗೆ ಸಾಧ್ಯ? ನೀವು ಮಾಡಿದ ಪ್ರತಿಜ್ಞೆಯನ್ನು ಒಮ್ಮೆಯಾದರೂ ಮುರಿದರೆ ಎರಡನೆಯ ಸಲ ದೇವನ ಆಸ್ಥಾನದಲ್ಲಿ ಹಾಜರಾಗಲು ನಿಮ್ಮ ಆತ್ಮಸಾಕ್ಷಿ ಒಪ್ಪದು: ನಿಮಗೆ ನಾಚಿಕೆಯಾಗುವುದು; ನಿಮ್ಮ ಮನಃಸ್ಸಾಕ್ಷಿ ನಿಮ್ಮನ್ನು ಶಪಿಸುವುದು. ಹೀಗಿರುವಾಗ ಜೀವಮಾನವಿಡೀ ದಿನಂಪ್ರತಿ ಐದೈದು ಬಾರಿ ನಮಾಝ್ ಮಾಡಿಯೂ ನಿಮ್ಮ ಆಚಾರಗಳು ಶುದ್ಧಿಯಾಗದಿರಲು, ನಿಮ್ಮ ಚಾರಿತ್ರ್ಯದಲ್ಲಿ ಸುಧಾರಣೆಯಾಗದಿರಲು, ಮತ್ತೆ ನಿಮ್ಮ ಜೀವನದಲ್ಲಿ ಉತ್ತಮ ಬದಲಾವಣೆಯಾಗದಿರಲು ಸಾಧ್ಯವೇ? ಇದಕ್ಕಾಗಿಯೇ ಅಲ್ಲಾಹನು ನಮಾಝ್‌ನ ವಿಶೇಷತೆಯನ್ನು, "ನಿಶ್ಚಯವಾಗಿಯೂ ನಮಾಝ್ ಮಾನವನನ್ನು ನಿರ್ಲಜ್ಜೆ ಮತ್ತು ದುಷ್ಕೃತ್ಯಗಳಿಂದ ತಡೆಯುತ್ತದೆ" ಎಂದು ವರ್ಣಿಸಿರುತ್ತಾನೆ. ಆದರೆ ಇಷ್ಟೊಂದು ಮಹತ್ತಾದ ಪಳಗಿಸುವ ಸಾಧನದಿಂದಲೂ ಒಬ್ಬನ ಚಾರಿತ್ರ್ಯ ನಿರ್ಮಾಣವಾಗದಿದ್ದರೆ ಅದು ಅವನ ಹುಟ್ಟುಗುಣವೇ ಹೊರತು ನಮಾಝ್‌ನ ದೋಷವಲ್ಲ. ಕೊಳೆಯನ್ನು ದೂರಗೊಳಿಸುವುದು ನೀರು ಮತ್ತು ಸಾಬೂನುಗಳ ಗುಣ. ಆದರೆ ಇದ್ದಲಿನ ಕರಿಬಣ್ಣವನ್ನು ಹೋಗಲಾಡಿಸಲು ಅವುಗಳಿಂದಾಗದಿದ್ದರೆ ಅದು ನೀರು ಮತ್ತು ಸಾಬೂನಿನ ದೋಷವಲ್ಲ. ಇದ್ದಲಿನ ಕರಿಬಣ್ಣವೇ ಇದಕ್ಕೆ ಕಾರಣ.

ಸಹೋದರರೇ, ನಿಮ್ಮ ನಮಾಝ್‌ಗಳಲ್ಲಿ ಒಂದು ದೊಡ್ಡ ಕೊರತೆ ಇದೆ. ನೀವು ನಮಾಝ್‌ನಲ್ಲಿ ಹೇಳುವುದೆಲ್ಲವನ್ನು ಅರ್ಥವರಿತು ಹೇಳುವುದಿಲ್ಲ. ನೀವು ಒಂದಿಷ್ಟು ಸಮಯ ವನ್ನು ವಿನಿಯೋಗಿಸಿದರೆ ಆ ಎಲ್ಲಾ ದುಆ(ಪ್ರಾರ್ಥನೆ)ಗಳ ಅರ್ಥವನ್ನು ನಿಮ್ಮ ಮಾತೃಭಾಷೆಯಲ್ಲಿ ಕಲಿತುಕೊಳ್ಳಬಹುದು. ಇದರಿಂದ ಅವುಗಳ ಅರ್ಥವನ್ನು ಗ್ರಹಿಸಲು ಸಾಧ್ಯವಾಗುವುದು.

○

ಸಂಘಟಿತ ನಮಾಝ್

ಬಂಧುಗಳೇ,

ನಾನು ಹಿಂದಿನ ಉಪನ್ಯಾಸದಲ್ಲಿ ನಮಾಝ್‌ನ ಪ್ರಯೋಜನಗಳನ್ನು ಮಾತ್ರ ವಿವರಿಸಿದ್ದೆ. ಆ ವಿವರಣೆಯಿಂದ ಅದು ಎಷ್ಟು ಮಹತ್ತರವಾಗಿದೆ ಮತ್ತು ಅದು ಮಾನವನಲ್ಲಿ ದಾಸ್ಯದ ಪರಿಪೂರ್ಣತೆಯನ್ನು ಮತ್ತು ಋಣ ಸಂದಾಯದ ಯೋಗ್ಯತೆಯನ್ನು ಹೇಗೆ ಉಂಟು ಮಾಡುತ್ತದೆಂದು ನಿಮಗೆ ಮನವರಿಕೆಯಾಗಿರಬಹುದು. ಈಗ ಸಾಮೂಹಿಕವಾಗಿ ಮಾಡುವ ನಮಾಝ್‌ನ ಪ್ರಯೋಜನಗಳನ್ನು ತಿಳಿಸುವೆನು. ಅಲ್ಲಾಹನು ತನ್ನ ಕೃಪೆಯಿಂದ ಒಂದೇ ವಸ್ತುವಿನಲ್ಲಿ ಅನೇಕ ಅನುಗ್ರಹಗಳನ್ನು ನಮಗೆ ಹೇಗೆ ಪ್ರದಾನ ಮಾಡಿರುವನೆಂಬುದು ಆಗ ತಿಳಿಯಬಹುದು. ಒಂದನೆಯದಾಗಿ ಕೇವಲ ನಮಾಝ್‌ನ ಪ್ರಯೋಜನವೇನೂ ಕಡಿಮೆಯಿರಲಿಲ್ಲ. ಅದರೊಂದಿಗೆ ಅದನ್ನು ಸಾಮೂಹಿಕವಾಗಿ ಮಾಡಬೇಕೆಂದು ವಿಧಿಸಿ ಅದರ ಪ್ರಯೋಜನವನ್ನು ಇಮ್ಮಡಿಗೊಳಿಸಲಾಗಿದೆ ಮತ್ತು ಅದರಲ್ಲಿ ಮಾನವನನ್ನು ಸಂಪೂರ್ಣ ಪರಿವರ್ತಿಸ ಬಲ್ಲಂತಹ ವಿಶಿಷ್ಟ ಶಕ್ತಿ ಸಾಮರ್ಥ್ಯಗಳನ್ನು ಇರಿಸಲಾಗಿದೆ.

ನಮಾಝ್ ಯಾವೆಲ್ಲ ಗುಣವಿಶೇಷತೆಗಳನ್ನು ಬೆಳೆಸುತ್ತದೆ?

ಜೀವನದ ಪ್ರತಿಕ್ಷಣದಲ್ಲೂ ತನ್ನನ್ನು ದೇವನ ದಾಸನೆಂದು ತಿಳಿಯುವುದು, ಅತ್ಯಂತ ವಿಧೇಯ ದಾಸನಂತೆ ಒಡೆಯನಿಗೆ ಅಧೀನನಾಗಿರುವುದು ಮತ್ತು ಅವನ ಆಜ್ಞಾಪಾಲನೆಗೆ ಸದಾ ಸಿದ್ಧನಾಗಿರುವುದು - ಇದುವೇ ನಿಜವಾದ 'ಇಬಾದತ್' ಆಗಿದೆಯೆಂದೂ, ನಮಾಝ್ ಮಾನವನನ್ನು ಈ ಇಬಾದತ್‌ಗಾಗಿಯೇ ಸಿದ್ಧಗೊಳಿಸುತ್ತದೆಂದೂ ಮೊದಲೇ ಹೇಳಿದ್ದೆ. ಈ ಇಬಾದತ್ ನಿರ್ವಹಣೆಗೆ ಮಾನವನಲ್ಲಿರಬೇಕಾದ ಗುಣ ವೈಶಿಷ್ಟ್ಯಗಳನ್ನು ಅದು ಉಂಟು ಮಾಡುತ್ತದೆಂದೂ ಹೇಳಿದ್ದೆ. ದಾಸ್ಯ ಪ್ರಜ್ಞೆಯ ಜೊತೆಗೆ ಅಲ್ಲಾಹ್, ಅವನ ಪ್ರವಾದಿ ಮತ್ತು ಅವನ ಗ್ರಂಥಗಳ ಮೇಲೆ ಈಮಾನ್ (ವಿಶ್ವಾಸ), ಪರಲೋಕದ ಮೇಲೆ ದೃಢನಂಬಿಕೆ, ದೇವಭಯ, ಅವನನ್ನು ಪರೋಕ್ಷಜ್ಞಾನಿ ಮತ್ತು ಸದಾ ನಮ್ಮ ಹತ್ತಿರವಿದ್ದಾನೆಂದು ಭಾವಿಸುವುದು. ದೇವಾಜ್ಞೆಗಳ ಅರಿವು ಇತ್ಯಾದಿ ಮಾನವನನ್ನು ನೈಜ ದೇವದಾಸನನ್ನಾಗಿ ಮಾಡಲು ಅತ್ಯವಶ್ಯವಾಗಿ ಬೇಕಾದ ಗುಣವಿಶೇಷಗಳನ್ನೆಲ್ಲಾ ನಮಾಝ್ ಅವನಲ್ಲಿ ಉಂಟುಮಾಡುತ್ತದೆ.

ಒಬ್ಬಂಟಿಗನಾಗಿರುವುದರಿಂದ ಸಂಪೂರ್ಣ ದಾಸ್ಯತನ ಸಾಧ್ಯವಿಲ್ಲ

ಆದರೆ ನೀವು ಚೆನ್ನಾಗಿ ಯೋಚಿಸಿದಾಗ, ಮಾನವನು ತಾನೆಷ್ಟು ಪರಿಪೂರ್ಣನೆನಿಸಿದರೂ ಇತರರು ಅವನೊಂದಿಗೆ ಸಹಕರಿಸದಿದ್ದರೆ ಅವನಿಗೆ ದೇವಾರಾಧನೆಯ ಪೂರ್ಣ ಋಣವನ್ನು ತೀರಿಸಲಾಗದು ಎಂದು ತಿಳಿದು ಬರುವುದು. ರಾತ್ರಿ-ಹಗಲು ಅವನ ಸಹವಾಸದಲ್ಲಿರುವ ಹಾಗೂ ಅವನೊಂದಿಗೆ ವ್ಯವಹಾರ ನಡೆಸುತ್ತಿರುವ ಅನೇಕಾನೇಕ ಜನರು ದೇವಾನುಸರಣಾ ಕಾರ್ಯದಲ್ಲಿ ಸಹಕರಿಸದೆ ಹೋದರೆ, ಅವನೊಬ್ಬನಿಗೆ ಮಾತ್ರ ದೇವಾಜ್ಞೆಗಳನ್ನೆಲ್ಲಾ ಪಾಲಿಸಲಾಗದು. ಮಾನವನು ಒಬ್ಬಂಟಿಗನಾಗಿ ಸೃಷ್ಟಿಸಲ್ಪಟ್ಟವನಲ್ಲ. ಅವನಿಗೆ ಒಬ್ಬಂಟಿಗನಾಗಿ ಕೆಲಸ ಮಾಡಲೂ ಸಾಧ್ಯವಿಲ್ಲ. ಅವನ ಇಡೀ ಜೀವಮಾನವು ತನ್ನ ಬಂಧು ಬಳಗ, ಮಿತ್ರರು, ನೆರೆಹೊರೆಯವರು ಮತ್ತಿತರ ಜನರೊಂದಿಗೆ ಅಸಂಖ್ಯಾತ ವ್ಯಾವಹಾರಿಕ ಸಂಬಂಧಗಳಿಂದ ಬಿಗಿಯಲ್ಪಟ್ಟಿದೆ. ಅಲ್ಲಾಹನ ಆಜ್ಞೆಗಳು ಈ ಎಲ್ಲಾ ಸಂಬಂಧಗಳ ದುರಸ್ತಿಗಾಗಿರುವುದೇ ವಿನಾ ಬರೇ ಒಬ್ಬ ವ್ಯಕ್ತಿಗಾಗಿ ಅಲ್ಲ. ಇವರೆಲ್ಲರೂ ಅಲ್ಲಾಹನ ಆಜ್ಞಾಪಾಲನೆಯಲ್ಲಿ ಪರಸ್ಪರ ಸಹಾಯ ಸಹಕಾರಗಳನ್ನು ನೀಡಿದರೆ, ಎಲ್ಲರೂ ಆಜ್ಞಾಪಾಲಕರಾಗಬಹುದು. ಆದರೆ ಅವರು ಆಜ್ಞೋಲ್ಲಂಘನೆ ಮಾಡಲುದ್ಯುಕ್ತರಾದರೆ ಅಥವಾ ಅವರ ಸಂಬಂಧಗಳು ಅಲ್ಲಾಹನ ಆದೇಶಗಳಿಗನುಸಾರ ಪರಸ್ಪರ ಸಹಕರಿಸದಂತಿದ್ದರೆ, ಕೇವಲ ಒಬ್ಬ ವ್ಯಕ್ತಿಗೆ ಅವನ ಜೀವಮಾನವಿಡೀ ಅಲ್ಲಾಹನ ಆಜ್ಞಾವಿಧಿಗಳಂತೆ ಸರಿಯಾಗಿ ನಡೆಯಲು ಸಾಧ್ಯವಾಗದು.

ಒಬ್ಬಂಟಿಗನಾಗಿ ಶೈತಾನನ ವಿರುದ್ಧ ಹೋರಾಡುವುದೂ ಅಸಾಧ್ಯ

ಇದರೊಂದಿಗೆ ನೀವು ಕುರ್‌ಆನನ್ನು ಚೆನ್ನಾಗಿ ಲಕ್ಷ್ಯವಿರಿಸಿ ಪಠಿಸಿದರೆ, ನೀವು ಮಾತ್ರ ಅಲ್ಲಾಹನ ಆಜ್ಞಾಪಾಲಕ ದಾಸರಾಗಿದ್ದರೆ ಸಾಲದು; ಇತರರನ್ನು ಅಲ್ಲಾಹನ ಆಜ್ಞಾಪಾಲಕರನ್ನಾಗಿ ಮಾಡಬೇಕೆಂಬ ವಿಧಿಯೂ ಅದರಲ್ಲಿರುವುದನ್ನು ಕಾಣುವಿರಿ. ಆ ಪ್ರಕಾರ ನೀವು ಅಲ್ಲಾಹನ ಕಾನೂನನ್ನು ಜಗತ್ತಿನಾದ್ಯಂತ ಪ್ರಚಾರಮಾಡಿ ಜಾರಿಗೊಳಿಸಬೇಕು ಮತ್ತು ಶೈತಾನನ ವಿಧಿ ನಿಯಮಗಳು ಎಲ್ಲೆಲ್ಲಾ ಜಾರಿಯಲ್ಲಿವೆಯೋ ಅಲ್ಲಿಂದ ಅವುಗಳನ್ನು ನಿರ್ಮೂಲನಗೊಳಿಸಿ ಅವುಗಳ ಸ್ಥಾನದಲ್ಲಿ ಅಲ್ಲಾಹನ ವಿಧಿನಿಯಮಗಳ ಅಧಿಕಾರವನ್ನು ಸ್ಥಾಪಿಸಬೇಕೆಂದು ತಿಳಿಯುವಿರಿ. ನಿಮ್ಮ ಮೇಲೆ ಅಲ್ಲಾಹನು ವಿಧಿಸಿರುವ ಈ ಮಹತ್ತಾದ ಸೇವೆಯನ್ನು ಕೇವಲ ಒಬ್ಬ ಮುಸ್ಲಿಮನು ನೆರವೇರಿಸಲಾರನು. ಕೋಟ್ಯಾಂತರ ಮುಸ್ಲಿಮರು ಸಂಘಟಿತರಾಗಿ ಪರಸ್ಪರ ಸಹಾಯ ಸಹಕಾರಗಳಿಂದ ಆ ಉದ್ದೇಶಕ್ಕಾಗಿ ಹೋರಾಡ ಬೇಕಾದುದು ಅಗತ್ಯ.

ಆಜ್ಞಾನುಸರಣೆ ಅಗತ್ಯ

ಇನ್ನಷ್ಟು ಆಳವಾಗಿ ಅವಲೋಕಿಸಿದಾಗ, ಇಷ್ಟೊಂದು ಮಹೋನ್ನತ ಉದ್ದೇಶ ಸಾಧನೆಗಾಗಿ ಮುಸ್ಲಿಮರು ಒಟ್ಟಾದರೆ ಮಾತ್ರ ಸಾಲದು. ಅವರ ಈ ಒಗ್ಗೂಡಿಕೆಯು ನೈಜ ಬುನಾದಿಯಲ್ಲಿರ ಬೇಕೆಂದೂ ನಿಮಗೆ ಸ್ಪಷ್ಟವಾಗುವುದು. ಅರ್ಥಾತ್ ಮುಸ್ಲಿಮರ ಸಂಘಟನೆಯಲ್ಲಿ ಪರಸ್ಪರ

ಸಂಬಂಧಗಳು ದೋಷರಹಿತವಾಗಿರಬೇಕು. ಅವರಲ್ಲಿ ಪರಿಪೂರ್ಣ ಐಕ್ಯ ಇರಬೇಕು. ಅವರು ಒಬ್ಬ ನಾಯಕನನ್ನನುಸರಿಸಬೇಕು. ಅವನ ಅಪ್ಪಣೆ(Command)ಯಂತೆ ಚಲಿಸುವ ಅಭ್ಯಾಸ ಅವರಲ್ಲುಂಟಾಗಬೇಕು? ನಾಯಕನ ಅಪ್ಪಣೆಯನ್ನು ಹೇಗೆ ಪಾಲಿಸಬೇಕು? ಎಲ್ಲಿಯವರೆಗೆ ಪಾಲಿಸಬೇಕು? ಆಜ್ಞೋಲ್ಲಂಘನೆ ಮಾಡಬಹುದಾದ ಸಂದರ್ಭ ಯಾವುದು? ಎಂಬುದನ್ನು ಅವರು ತಿಳಿದಿರಬೇಕು.

ಸಂಘಟಿತ ನಮಾಝ್‌ನ ಪ್ರಯೋಜನಗಳು

ಈ ಎಲ್ಲಾ ವಿಷಯಗಳನ್ನು ಮುಂದಿಟ್ಟುಕೊಂಡು ಸಾಮೂಹಿಕ ನಮಾಝ್ ಇದನ್ನೆಲ್ಲಾ ಹೇಗೆ ಮಾಡುತ್ತದೆಂಬುದನ್ನು ನೋಡಿರಿ-

ಒಂದೇ ಕರೆಗೆ ಒಟ್ಟುಗೂಡುವುದು

ಅದಾನ್ ಕೇಳಿದೊಡನೆ ತಂತಮ್ಮ ಕೆಲಸ ಕಾರ್ಯಗಳನ್ನೆಲ್ಲಾ ಬಿಟ್ಟು ಮಸೀದಿಗೆ ಬರಬೇಕೆಂಬ ಆದೇಶವಿದೆ. ಈ ಕರೆಯನ್ನು ಕೇಳಿ ಎಲ್ಲಾ ದಿಕ್ಕುಗಳಿಂದಲೂ ಮುಸ್ಲಿಮರು ಒಂದು ಕೇಂದ್ರ ಸ್ಥಾನದಲ್ಲಿ ಬಂದು ಸೇರುವಾಗ ಸೈನಿಕರಲ್ಲುಂಟಾಗುವಂತಹ ಮಾನಸಿಕ ಸ್ಥಿತಿಯೇ ಅವರಲ್ಲುಂಟಾಗುತ್ತದೆ. ಕಹಳೆಯ ನಾದ ಕೇಳಿದೊಡನೆ ಸೈನಿಕರು ಎಲ್ಲಿದ್ದರೂ, ನಮ್ಮ ದಂಡನಾಯಕನು ನಮ್ಮನ್ನು ಕರೆಯುತ್ತಿದ್ದಾನೆಂದು ತಿಳಿಯುತ್ತಾರೆ. ಈ ಕರೆಯಿಂದ ಎಲ್ಲರ ಹೃದಯದಲ್ಲೂ ಒಂದೇ ರೀತಿಯ ಭಾವನೆಯುಂಟಾಗುತ್ತದೆ. ಅರ್ಥಾತ್ ದಂಡ ನಾಯಕನ ಆಜ್ಞೆಯನ್ನು ಪಾಲಿಸುವ ಭಾವನೆ. ಈ ಭಾವನೆಗನುಸಾರ ಎಲ್ಲರೂ ಒಂದೇ ಕೆಲಸವನ್ನು ಮಾಡುತ್ತಾರೆ. ಅಂದರೆ- ಆ ಧ್ವನಿ ಕೇಳಿ ಎಲ್ಲಾ ದಿಕ್ಕುಗಳಿಂದಲೂ ಧಾವಿಸಿ ಬಂದು ಒಂದೆಡೆ ಸೇರುತ್ತಾರೆ. ಸೈನ್ಯದಲ್ಲಿ ಈ ಕ್ರಮವನ್ನು ಯಾಕೆ ಇಡಲಾಗಿದೆ? ಏಕೆಂದರೆ ಪ್ರತಿಯೊಬ್ಬ ಸೈನಿಕನಿಗೆ ಬೇರೆ ಬೇರೆಯಾಗಿ ಆಜ್ಞೆಯನ್ನು ಕೇಳುವ ಮತ್ತು ಅನುಸರಿಸುವ ಅಭ್ಯಾಸವಾಗಬೇಕು. ಇಂತಹ ಎಲ್ಲಾ ವಿಧೇಯ ಸಿಪಾಯಿಗಳು ಒಟ್ಟು ಸೇರಿ ಒಂದು ದಳವಾಗಿ ದಂಡನಾಯಕನ ಆಜ್ಞೆಯ ಪ್ರಕಾರ ಏಕಕಾಲದಲ್ಲಿ ಒಂದೇ ಕಡೆ ಸೇರಬೇಕು ಮತ್ತು ಶತ್ರು ಸೈನಿಕರೊಂದಿಗೆ ಹೋರಾಡುವ ಸಂದರ್ಭ ಬಂದಾಗ ಇಡೀ ಸೈನ್ಯವು ಒಂದೇ ಕರೆಗೆ ಒಂದೇ ಉದ್ದೇಶಕ್ಕಾಗಿ ಒಟ್ಟಾಗಿ ಕಾರ್ಯವೆಸಗಲು ಸಾಧ್ಯವಾಗಬೇಕು. ಸಿಪಾಯಿಗಳೆಲ್ಲಾ ತಂತಮ್ಮ ಸ್ಥಾನದಲ್ಲಿ ಪರಾಕ್ರಮಿಗಳಾಗಿದ್ದರೂ ಹೋರಾಟಕ್ಕೆ ಕರೆ ಕೊಟ್ಟಾಗ ಬಂದು ಹೋರಾಡದೆ, ಪ್ರತಿಯೊಬ್ಬನೂ ತನಗಿಷ್ಟ ಬಂದಲ್ಲಿಗೆ ಸಾಗಿಬಿಡಬಾರದು ಎಂಬ ಉದ್ದೇಶದಿಂದಾಗಿರುತ್ತದೆ. ಒಂದು ಸೈನ್ಯದ ಅವಸ್ಥೆ ಇದಕ್ಕಿಂತ ವ್ಯತಿರಿಕ್ತವಾದರೆ ಅದರಲ್ಲಿ ಸಾವಿರಾರು ಸಿಪಾಯಿಗಳಿದ್ದರೂ ಶತ್ರು ಸೈನ್ಯದ ಸಣ್ಣ ಒಂದು ತುಕಡಿಯು ಒಬ್ಬೊಬ್ಬನನ್ನೇ ಹಿಡಿದು ಮುಗಿಸಿ ಬಿಡಬಲ್ಲದು. ಇದೇ ಸಿದ್ಧಾಂತದ ಪ್ರಕಾರ ಎಲ್ಲಾ ಮುಸ್ಲಿಮರೂ ಒಟ್ಟು ಸೇರಿ ಒಂದು ಸೇನೆಯಂತಾಗಲು ಪ್ರತಿಯೊಬ್ಬ ಮುಸ್ಲಿಮನೂ ಅದಾನ್‌ನ ಧ್ವನಿ ಕೇಳಿದೊಡನೆ ಎಲ್ಲಾ ಕಾರ್ಯಕಲಾಪಗಳನ್ನು ಅಲ್ಲೇ ಬಿಟ್ಟು

ಸಮೀಪದ ಮಸೀದಿಗೆ ತೆರಳಬೇಕೆಂಬ ನಿಯಮವನ್ನಿರಿಸಲಾಗಿದೆ. ಒಟ್ಟುಗೂಡುವ ಈ ಅಭ್ಯಾಸವನ್ನು ಅವರಿಗೆ ದಿನಕ್ಕೆ ಐದಾವರ್ತಿ ಮಾಡಿಸಲಾಗುತ್ತದೆ. ಏಕೆಂದರೆ ಜಗತ್ತಿನ ಇತರೆಲ್ಲಾ ಸೇನೆಗಳಿಗಿಂತ ಮಹತ್ತರವಾದ ಕರ್ತವ್ಯವನ್ನು ಈ ದೈವಿಕ ಸೇನೆಗೆ ನಿರ್ವಹಿಸಲಿಕ್ಕಿದೆ. ಇತರ ಸೇನೆಗಳಿಗೆ ಎಂದಾದರೊಮ್ಮೆ ಎಲ್ಲಾದರೊಂದು ಕಡೆ ಯುದ್ಧ ಮಾಡುವ ಸಂದರ್ಭ ಬರುತ್ತದಷ್ಟೆ. ಅದಕ್ಕಾಗಿ ಇಷ್ಟೆಲ್ಲಾ ಸೈನಿಕ ತರಬೇತಿಯನ್ನು ಮಾಡಿಸಲಾಗುತ್ತದೆ. ಆದರೆ ಈ ದೈವಿಕ ಸೇನೆಗೆ ಪ್ರತಿಕ್ಷಣದಲ್ಲೂ ಪೈಶಾಚಿಕ ಶಕ್ತಿಗಳೊಂದಿಗೆ ಹೋರಾಡಲಿಕ್ಕಿದೆ. ತನ್ನ ದಂಡನಾಯಕನ ಆಜ್ಞಾಪಾಲನೆಯನ್ನು ಸದಾ ಮಾಡುತ್ತಲೇ ಇರಬೇಕಾಗಿದೆ. ಹಾಗಿರುವಾಗ ದಿನಂಪ್ರತಿ ಕೇವಲ ಐದು ಬಾರಿ ಕಹಳೆ ಮೊಳಗಿದೊಡನೆ ಸೇನಾ ಠಾಣ್ಯದಲ್ಲಿ ಅರ್ಥಾತ್ ಮಸೀದಿಯಲ್ಲಿ ಒಟ್ಟು ಸೇರಬೇಕೆಂಬ ಆಜ್ಞೆ ನೀಡುವ ಮೂಲಕ ಅವರ ಮೇಲೆ ರಿಯಾಯಿತಿಯನ್ನೇ ತೋರಿಸಲಾಗಿದೆ.

ಉದ್ದೇಶಪೂರ್ವಕ ಜಮಾವಣೆ

ಇದಿಷ್ಟು ಕೇವಲ ಅದಾನಿನ ಪ್ರಯೋಜನವಾಯಿತು. ನೀವೀಗ ಮಸೀದಿಯಲ್ಲಿ ಬಂದು ಸೇರುತ್ತೀರಿ. ಈ ಸಮ್ಮಿಲನದಲ್ಲಿಯೂ ಅನೇಕ ಪ್ರಯೋಜಗಳಿವೆ. ಇಲ್ಲಿ ನೀವು ಒಟ್ಟು ಸೇರಿ ಒಬ್ಬರನ್ನೊಬ್ಬರು ಕಂಡು ಪರಿಚಯ ಮಾಡಿಕೊಳ್ಳುತ್ತೀರಿ. ಒಬ್ಬರನ್ನೊಬ್ಬರು ತಿಳಿದು ಕೊಳ್ಳುತ್ತೀರಿ. ಹೀಗೆ ಕಾಣುವುದು, ಪರಿಚಯ ಮಾಡಿಕೊಳ್ಳುವುದು ಮತ್ತು ತಿಳಿದು ಕೊಳ್ಳುವುದು ಯಾವ ನೆಲೆಯಲ್ಲಿ? ನೀವೆಲ್ಲರೂ ಏಕದೇವನ ದಾಸರು, ಒಂದೇ ಪ್ರವಾದಿಯ ಅನುಯಾಯಿಗಳು, ಒಂದೇ ಗ್ರಂಥವನ್ನು ಮಾನ್ಯ ಮಾಡುವವರು ಎಂಬ ನೆಲೆಯಲ್ಲಾಗಿರುತ್ತದೆ. ನಿಮ್ಮೆಲ್ಲರ ಜೀವನದ ಗುರಿ ಒಂದೇ. ಈ ಗುರಿಯನ್ನು ಸಾಧಿಸಲಿಕ್ಕಾಗಿಯೇ ನೀವೆಲ್ಲರೂ ಇಲ್ಲಿ ಸೇರಿದ್ದೀರಿ. ಇಲ್ಲಿಂದ ಹಿಂದಿರುಗಿ ಹೋಗಿಯೂ ಇದೇ ಗುರಿಯನ್ನು ಸಾಧಿಸಬೇಕಾಗಿದೆ. ಈ ತರದ ಪರಿಚಯ, ಇಂತಹ ತಿಳುವಳಿಕೆಗಳು ನಿಮ್ಮಲ್ಲಿ ಒಂದೇ ಕೂಟ, ಒಂದೇ ಗುಂಪು, ಒಂದೇ ಪಂಗಡ, ಒಂದೇ ಸೈನ್ಯದ ಸಿಪಾಯಿಗಳು ಮತ್ತು ಪರಸ್ಪರ ಸಹೋದರರೆಂಬ ಸದ್ಭಾವನೆಯನ್ನುಂಟು ಮಾಡುತ್ತದೆ. ಇಹದಲ್ಲಿ ನಿಮ್ಮ ಧ್ಯೇಯೋದ್ದೇಶ ಗಳು, ನಿಮ್ಮ ಲಾಭ ನಷ್ಟಗಳು ಎಲ್ಲವೂ ಸಮಾನವಾಗಿದೆ. ನಿಮ್ಮೆಲ್ಲರ ಬಾಳುವೆಗಳು ಪರಸ್ಪರ ಹೆಣೆಯಲ್ಪಟ್ಟಿವೆ.

ಪರಸ್ಪರ ಹಿತಚಿಂತನೆ

ನೀವು ಒಬ್ಬರನ್ನೊಬ್ಬರು ನೋಡುವಾಗ ಕಣ್ತೆರೆದೇ ನೋಡುತ್ತೀರಷ್ಟೇ. ಈ ನೋಟವೂ ಒಬ್ಬ ಶತ್ರು ಇನ್ನೊಬ್ಬ ಶತ್ರುವನ್ನು ನೋಡುವ ದೃಷ್ಟಿಯಿಂದಾಗಿರಲಿಕ್ಕಿಲ್ಲ. ಒಬ್ಬ ಮಿತ್ರನು ಇನ್ನೊಬ್ಬ ಮಿತ್ರನನ್ನು ಮತ್ತು ಒಬ್ಬ ಸಹೋದರನು ಇನ್ನೊಬ್ಬ ಸಹೋದರನನ್ನು ನೋಡಿದಂತಾಗಿರುವುದು. ಈ ದೃಷ್ಟಿಯಿಂದ ನೀವು ನೋಡುವಾಗ ಒಬ್ಬ ಸಹೋದರನು ಹರಕು ಬಟ್ಟೆಗಳೊಂದಿಗೆ, ಇನ್ನೊಬ್ಬನು ಖಿನ್ನ ವದನನಾಗಿ, ಮತ್ತೊಬ್ಬನು ಹಸಿದವನಾಗಿ ತೋರಬಹುದು.

ಇವರೊಂದಿಗೆ ಅಂಗಹೀನರು, ಕುಂಟರು, ಮೂಕರು, ಹೆಳವರು ಮತ್ತು ಕುರುಡರೇ ಮೊದಲಾದ ಜನರನ್ನು ಕಂಡು ನಿಮ್ಮ ಹೃದಯದಲ್ಲಿ ಅವರ ಬಗ್ಗೆ ಸಹಾನುಭೂತಿ ಯುಂಟಾಗುವುದು. ನಿಮ್ಮಲ್ಲಿರುವ ಸ್ಥಿತಿವಂತರು ಬಡವರ ಮತ್ತು ನಿರ್ಗತಿಕರ ಮೇಲೆ ಕೃಪೆ ತೋರುವರು. ಬಡಜನರಿಗೂ ಧನಿಕರನ್ನು ಕಂಡಾಗ ತಮ್ಮ ಸ್ಥಿತಿಗತಿಗಳನ್ನು ಅವರ ಮುಂದಿಡಲು ಸಂಕೋಚವಾಗಲಾರದು. ಒಬ್ಬಾತನು ಅನಾರೋಗ್ಯದಲ್ಲಿ ಅಥವಾ ಬೇರಾವುದೋ ಗಂಡಾಂತರದಲ್ಲಿ ಸಿಲುಕಿದ ಕಾರಣ ಮಸೀದಿಗೆ ಬರಲಿಲ್ಲವೆಂಬ ಸುದ್ದಿ ಕೇಳಿದೊಡನೆ ಅವನ ದರ್ಶನಕ್ಕಾಗಿ ಹೋಗಬೇಕೆಂಬ ಯೋಚನೆ ನಿಮಗುಂಟಾಗುವುದು. ಯಾರಾದರೂ ಮರಣ ಹೊಂದಿದ ಸುದ್ದಿ ತಿಳಿದಾಗ ಎಲ್ಲರೂ ಒಟ್ಟಾಗಿ ಅವನ ಜನಾಝಾ ನಮಾಝ್ (ಮರಣೋತ್ತರ ನಮಾಝ್) ನೆರವೇರಿಸುವಿರಿ ಮತ್ತು ಅವನ ಬಂಧುಗಳ ಶೋಕದಲ್ಲಿ ಭಾಗಿಗಳಾಗುವಿರಿ. ಈ ವಿಷಯಗಳೆಲ್ಲ ಪರಸ್ಪರ ಪ್ರೇಮೋದ್ಭವ ಹಾಗೂ ಸಹಾಯ ಸಹಕಾರಗಳ ಸಾಧನಗಳಾಗಿವೆ.

ಪವಿತ್ರ ಉದ್ದೇಶಕ್ಕಾಗಿ ಒಟ್ಟು ಸೇರುವುದು

ಇನ್ನಷ್ಟು ಗಮನಿಸಿದರೆ ನೀವೆಲ್ಲ ಇಲ್ಲಿ ಒಂದು ಪವಿತ್ರ ಜಾಗದಲ್ಲಿ ಮತ್ತು ಪವಿತ್ರ ಉದ್ದೇಶಕ್ಕಾಗಿ ಒಟ್ಟು ಸೇರಿದ್ದೀರಿ. ಇದೇನೂ ಕಳ್ಳರ, ಕುಡುಕರ ಮತ್ತು ಜೂಜಾಡುವವರ ಸಮ್ಮೇಳನವಲ್ಲ. ಆದ್ದರಿಂದ ಇಲ್ಲಿ ಸೇರಿದವರ ಅಂತರಂಗಗಳು ಕೊಳಕಾಗಿರಲು ಸಾಧ್ಯವಿಲ್ಲ. ಇದು ಅಲ್ಲಾಹನ ದಾಸರ ಸಮ್ಮೇಳನ. ಎಲ್ಲರೂ ಅಲ್ಲಾಹನ ಆರಾಧನೆಗಾಗಿ ಮತ್ತು ದೇವಗೃಹದಲ್ಲಿ ದೇವನ ದಾಸ್ಯದ ಕರಾರು ಮಾಡಲಿಕ್ಕಾಗಿ ಬಂದಿರುತ್ತಾರೆ. ಇಂತಹ ಸಂದರ್ಭಗಳಲ್ಲಿ ಒಂದನೆಯದಾಗಿ ಓರ್ವ ಸತ್ಯವಿಶ್ವಾಸಿಯಲ್ಲಿ ತನ್ನ ಪಾಪಗಳಿಗಾಗಿ ಪಶ್ಚಾತ್ತಾಪ ಪಡಬೇಕೆಂಬ ಭಾವನೆಯುಂಟಾಗುವುದು. ಆದರೆ ಆತನು ತನ್ನ ಬಂಧುವೋರ್ವನ ಮೇಲೆ ಏನಾದರೂ ಅತಿಕ್ರಮವೆಸಗಿದ್ದರೆ ಮತ್ತು ಆತನೂ ಮಸೀದಿಯಲ್ಲಿದ್ದರೆ, ಅತಿಕ್ರಮಿಗೆ ತನ್ನ ಮನಸ್ಸಿನೊಳಗೇ ಪಶ್ಚಾತ್ತಾಪಪಡಲು ಅವರಿಬ್ಬರ ಮುಖಾಮುಖಿಯೇ ಸಾಕಾಗಬಹುದು. ಮುಸ್ಲಿಮರಲ್ಲಿ ಪರಸ್ಪರ ಸದುಪದೇಶ ನೀಡುವ ಆಸಕ್ತಿ ಮತ್ತು ಅದರೊಂದಿಗೆ ಪ್ರೇಮ ಹಾಗೂ ಸಹಾನುಭೂತಿಯಿಂದ ಪರಸ್ಪರ ಸಂಸ್ಕರಿಸುವ ರೀತಿಯೂ ತಿಳಿದಿದ್ದರೆ, ಈ ಸಮ್ಮೇಳನವು ಇನ್ನಷ್ಟು ಫಲಪ್ರದವೂ ಮಂಗಳದಾಯಕವೂ ಆಗುವುದೆಂಬುದರಲ್ಲಿ ಸಂದೇಹವಿಲ್ಲ. ಹೀಗೆ ಎಲ್ಲಾ ಮುಸ್ಲಿಮರೂ ಒಟ್ಟಾಗಿ ಪರಸ್ಪರ ದೋಷಗಳನ್ನು ನಿವಾರಿಸಿಕೊಂಡರೆ, ಕುಂದುಕೊರತೆಗಳನ್ನು ನೀಗಿಸಿಕೊಂಡರೆ, ಕ್ರಮೇಣ ಇಡೀ ಸಮುದಾಯವೇ ಸಜ್ಜನರ ಮತ್ತು ಚಾರಿತ್ರ್ಯವಂತರ ಸಮುದಾಯವಾಗಿ ಮಾರ್ಪಡುವುದು.

ಸಹೋದರತೆ

ಇವು ಕೇವಲ ಮಸೀದಿಯಲ್ಲಿ ಒಟ್ಟು ಸೇರುವುದರಿಂದಾಗುವ ಪ್ರಯೋಜನಗಳಾಗಿವೆ. ಇನ್ನು ಒಟ್ಟಾಗಿ ನಮಾಝ್ ಮಾಡುವುದರಲ್ಲಿ ಏನೆಲ್ಲ ಪ್ರಯೋಜನಗಳಿವೆಯೆಂಬುದನ್ನು ನೋಡಿರಿ. ನೀವೆಲ್ಲರೂ ಒಂದೇ ಸಾಲಿನಲ್ಲಿ ಒಬ್ಬರಿಗೊಬ್ಬರು ಸರಿಸಮಾನರಾಗಿ ನಿಲ್ಲುತ್ತೀರಿ.

ನಿಮ್ಮಲ್ಲಿ ಉಚ್ಚ-ನೀಚ, ಮೇಲ್ಜಾತಿಯವ-ಕೀಳ್ಜಾತಿಯವ ಎಂಬ ಭೇದಭಾವವಿಲ್ಲ. ಅಲ್ಲಾಹನ ಆಸ್ಥಾನದಲ್ಲಿ ಎಲ್ಲರೂ ಒಂದೇ ಮಟ್ಟದವರು. ಒಬ್ಬನ ಮೈ ಇನ್ನೊಬ್ಬನಿಗೆ ತಗಲುವುದರಿಂದ ಮಲಿನವಾಗುವುದಿಲ್ಲ. ಎಲ್ಲರೂ ನಿರ್ಮಲರೇ, ಏಕೆಂದರೆ ಎಲ್ಲರೂ ಮನುಷ್ಯರು; ಏಕದೇವನ ದಾಸರು; ಒಂದೇ ಧರ್ಮದ ಅನುಯಾಯಿಗಳು. ನಿಮ್ಮೊಳಗೆ ಕುಲ, ಗೋತ್ರ, ದೇಶ, ಭಾಷೆಗಳ ಅಂತರವೂ ಇಲ್ಲ. ನಿಮ್ಮಲ್ಲಿ ಒಬ್ಬನು ಸಯ್ಯದ್, ಇನ್ನೊಬ್ಬ ಪಠಾಣ, ಬೇರೊಬ್ಬ ರಜಪೂತ, ಮಗದೊಬ್ಬ ಜಾಟನಿರಬಹುದು. ಒಬ್ಬನು ಒಂದು ದೇಶದವನಾಗಿದ್ದರೆ ಇನ್ನೊಬ್ಬನು ಇನ್ನೊಂದು ದೇಶದವನಾಗಿರಬಹುದು. ಒಬ್ಬನ ಭಾಷೆ ಒಂದಾದರೆ ಇನ್ನೊಬ್ಬನ ಭಾಷೆ ಬೇರೆಯಾಗಿರಬಹುದು. ಹೀಗಿದ್ದರೂ ನೀವು ಒಂದೇ ಸಾಲಿನಲ್ಲಿ ನಿಂತು ಆರಾಧಿಸುತ್ತೀರಿ. ಅಂದರೆ, ಎಲ್ಲರೂ ಒಂದೇ ಜನಾಂಗವಾಗಿದ್ದೀರಿ. ಈ ಕುಲ, ಗೋತ್ರ, ಜಾತಿ ಜನಾಂಗಗಳ ಭೇದಭಾವಗಳೆಲ್ಲಾ ಮಿಥ್ಯ. ದೇವಾರಾಧನೆ ಮತ್ತು ದಾಸ್ಯದ ಸಂಬಂಧವೇ ನೈಜ ಹಾಗೂ ನಿಮ್ಮೊಳಗಿರುವ ಅತಿ ಮಹತ್ವದ ಸಂಬಂಧವಾಗಿದೆ. ಈ ವಿಷಯದಲ್ಲಿ ನೀವೆಲ್ಲರೂ ಒಂದಾಗಿರುವಾಗ ಇತರ ವಿಷಯಗಳಲ್ಲಿ ಏಕೆ ಭಿನ್ನರಾಗಬೇಕು?

ಚಲನೆಯಲ್ಲಿ ಏಕತೆ

ನೀವು ಭುಜಕ್ಕೆ ಭುಜ ತಾಗಿಸಿ ಸಾಲುಕಟ್ಟಿ ನಿಂತಿರುವಾಗ, ಒಂದು ಸೈನ್ಯವು ತನ್ನ ಆಳರಸನ ಮುಂದೆ ಸೇವೆಗೆ ಸಜ್ಜಾಗಿ ನಿಂತಂತೆ ತೋರುತ್ತದೆ. ಸಾಲಾಗಿ ನಿಲ್ಲುವುದರಿಂದಲೂ, ಒಟ್ಟಾಗಿ ಕ್ರಿಯಾಶೀಲರಾಗಿರುವುದರಿಂದಲೂ ನಿಮ್ಮಲ್ಲಿ ಐಕ್ಯ ಭಾವನೆಯುಂಟಾಗುತ್ತದೆ. ಈ ಮೂಲಕ, ದೇವರಾಧನೆಯ ಕಾರ್ಯದಲ್ಲಿ ಎಲ್ಲರ ಕೈಗಳೂ ಒಮ್ಮೆಲೆ ಮೇಲೇರಬೇಕು. ಎಲ್ಲರ ಕಾಲುಗಳು ಒಂದಾಗಿ ಚಲಿಸಬೇಕು ಎಂಬಂತೆ ಅಭ್ಯಾಸ ಮಾಡಿಸಲಾಗುತ್ತದೆ. ಆಗ ನೀವು ಹತ್ತಿಪ್ಪತ್ತಲ್ಲ ನೂರಾರು ಅಥವಾ ಸಾವಿರಾರು ಸಂಖ್ಯೆಯಲ್ಲಿದ್ದರೂ ಒಂದೇ ಆಗಿರುವಂತೆ ತೋರುತ್ತದೆ.

ಪ್ರಾರ್ಥನೆಗಳು

ಈ ಜಮಾಅತ್ (ಸಂಘಟನೆ) ಮಾಡಿ ಸಾಲುಕಟ್ಟಿ ನಿಂತ ಬಳಿಕ ನೀವು ಏನು ಮಾಡುತ್ತೀರಿ? ನಿಮ್ಮೊಡೆಯನೊಡನೆ ಒಕ್ಕೊರಲಿನಿಂದ

إِيَّاكَ نَعْبُدُ وَإِيَّاكَ نَسْتَعِينُ ۝

"ಇಯ್ಯಾಕ ನಅ್‌ಬುದು ವ ಇಯ್ಯಾಕ ನಸ್ತಈನ್." (ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಮತ್ತು ನಿನ್ನೊಡನೆ ಮಾತ್ರ ಸಹಾಯ ಯಾಚಿಸುತ್ತೇವೆ)

اِهْدِنَا الصِّرَاطَ الْمُسْتَقِيْمَ ۝

"ಇಹ್ದಿನಸ್ಸಿರಾತಲ್ ಮುಸ್ತಕೀಮ್." (ನಮ್ಮನ್ನು ನೇರ ಮಾರ್ಗದಲ್ಲಿ ನಡೆಸು.)

رَبَّنَا لَكَ الْحَمْدُ۔

"ರಬ್ಬನಾಲಕಲ್ ಹಮ್ದ್" (ಓ ನಮ್ಮ ಪ್ರಭು, ಎಲ್ಲಾ ಸ್ತೋತ್ರಗಳೂ ನಿನಗಾಗಿಯೇ ಇವೆ.)

اَلسَّلَامُ عَلَيْنَا وَعَلٰى عِبَادِ اللّٰهِ الصَّالِحِيْنَ۔

"ಅಸ್ಸಲಾಮು ಅಲೈನಾ ವಅಲಾ ಇಬಾದಿಲ್ಲಾಹಿಸ್ಸಾಲಿಹೀನ್" (ನಮ್ಮ ಮೇಲೂ ಎಲ್ಲಾ ಸಜ್ಜನ ದಾಸರ ಮೇಲೂ ಶಾಂತಿ ಇರಲಿ) ಎಂದು ಮುಂತಾಗಿ ಬಿನ್ನವಿಸಿಕೊಳ್ಳುತ್ತೀರಿ.

ಅನಂತರ ನಮಾಝ್ ಮುಗಿಸಿ ನೀವು

اَلسَّلَامُ عَلَيْكُمْ وَرَحْمَةُ اللّٰهِ۔

"ಅಸ್ಸಲಾಮು ಅಲೈಕುಮ್ ವರಹ್‌ಮತುಲ್ಲಾ" ಎನ್ನುತ್ತಾ ಎಲ್ಲರಿಗಾಗಿ ಶಾಂತಿ ಹಾಗೂ ಅನುಗ್ರಹಗಳನ್ನು ಬೇಡುತ್ತೀರಿ.

ಈ ರೀತಿ ನೀವೆಲ್ಲರೂ ಪರಸ್ಪರ ಹಿತಚಿಂತಕರು ಮತ್ತು ಎಲ್ಲರೂ ಒಟ್ಟಾಗಿ ಏಕೈಕನಾದ ಒಡೆಯನೊಡನೆ ಎಲ್ಲರ ಒಳಿತಿಗಾಗಿ ಪ್ರಾರ್ಥಿಸುವವರು ಎಂದು ತೋರಿಸುತ್ತೀರಿ. ನಿಮ್ಮ ಪೈಕಿ ಯಾರೂ ಎಲ್ಲವನ್ನೂ ತನಗಾಗಿ ಮಾತ್ರ ಬೇಡುವುದಿಲ್ಲ. ಎಲ್ಲರ ಮೇಲೆ ಅಲ್ಲಾಹನ ಅನುಗ್ರಹವಿರಲಿ, ಎಲ್ಲರಿಗೂ ಒಂದೇ ನೇರ ಮಾರ್ಗದಲ್ಲಿ ನಡೆಯುವ ತೌಫೀಕ್ (ಅನುಗ್ರಹ) ಒದಗಲಿ, ಎಲ್ಲರೂ ದೇವನ ರಕ್ಷಣೆಯಲ್ಲಿ ಸೇರಲಿ ಎಂದೇ ಪ್ರತಿಯೊಬ್ಬನೂ ಪ್ರಾರ್ಥಿಸುತ್ತಾನೆ. ಹೀಗೆ ಈ ನಮಾಝ್ ನಿಮ್ಮ ಹೃದಯಗಳನ್ನು ಜೋಡಿಸುತ್ತದೆ. ನಿಮ್ಮ ಭಾವನೆಗಳಲ್ಲಿ ಏಕತೆಯನ್ನುಂಟು ಮಾಡುತ್ತದೆ ಮತ್ತು ಹಿತಚಿಂತನೆಯ ಸಂಬಂಧವನ್ನು ಮೂಡಿಸುತ್ತದೆ.

ನಾಯಕನಿಲ್ಲದೆ ಸಾಮೂಹಿಕತೆಯಿಲ್ಲ

ನೀವೆಂದೂ ಸಾಮೂಹಿಕ ನಮಾಝನ್ನು ಇಮಾಮ್ (ನಾಯಕ) ಇಲ್ಲದೆ ಮಾಡುವುದಿಲ್ಲ. ಇಬ್ಬರೇ ಇದ್ದರೂ ನಮಾಝ್ ಮಾಡುವಾಗ ಒಬ್ಬನು ಇಮಾಮನಾಗುವನು, ಇನ್ನೊಬ್ಬನು ಮುಕ್ತದೀ (ಅನುಗತ). ಜಮಾಅತ್ (ಸಾಮೂಹಿಕ ನಮಾಝ್) ನಡೆಯುತ್ತಿರುವಾಗ ಪ್ರತ್ಯೇಕವಾಗಿ ನಮಾಝ್ ಮಾಡುವುದು ನಿಷಿದ್ಧ. ಅಂತಹ ನಮಾಝ್ ಸಿಂಧುವೇ ಅಲ್ಲ. ನಮಾಝ್‌ಗೆ ಬಂದವರೆಲ್ಲಾ ಅದೇ ಇಮಾಮರ ಹಿಂದೆ ಜಮಾಅತಿನಲ್ಲಿ ಸೇರಬೇಕು. ಈ ನಿಯಮವು ನಮಾಝ್ ಮಾಡುವವರಿಗಾಗಿ ಮಾತ್ರ ಇರುವುದಲ್ಲ. ಮುಸ್ಲಿಮರಾಗಿ ಬಾಳಬೇಕೆಂದು ಬಯಸುವಿರಾದರೆ ಈ ರೀತಿ ಜಮಾಅತ್ (ಸಂಘಟಿತ) ಆಗಿರಿ ಎಂಬ ಪಾಠವೂ ಇದರಲ್ಲಿದೆ. ಇಮಾಮ್ (ನಾಯಕ) ಇಲ್ಲದೆ ಹೋದಲ್ಲಿ ನಿಮ್ಮ ಜಮಾಅತೇ ಆಗದು. ಜಮಾಅತ್ ರೂಪುಗೊಂಡ ಬಳಿಕ ನೀವು ಹೊರಗಿರುವುದೆಂದರೆ ನಿಮ್ಮ ಜೀವನವು ಒಬ್ಬ ಮುಸ್ಲಿಮನ ಜೀವನವಾಗಿಲ್ಲ ಎಂದಾಗುವುದು.

ನಾಯಕತ್ವದ ರೂಪಗಳು ಮತ್ತು ವಾಸ್ತವಿಕತೆ

ಇದು ಇಷ್ಟಕ್ಕೇ ಮುಗಿಯುವುದಿಲ್ಲ. ಇಮಾಮ್ ಮತ್ತು ಮುಕ್ತದೀಗಳ ಮಧ್ಯೆಯೂ ಕೆಲವು ಸಂಬಂಧಗಳನ್ನು ಸ್ಥಾಪಿಸಲಾಗಿದೆ. ಈ ಚಿಕ್ಕ ಮಸೀದಿಯ ಹೊರಗಿರುವ ಭೂಮಿಯೆಂಬ ವಿಶಾಲವಾದ ಮಸೀದಿಯಲ್ಲಿ ನಿಮ್ಮ ಇಮಾಮನ (ನಾಯಕ) ನೆಲೆ ಏನು? ಅವನ ಕರ್ತವ್ಯಗಳೇನು? ಅವನ ಬಾಧ್ಯತೆಗಳೇನು? ನೀವು ಅವನನ್ನು ಹೇಗೆ ಮತ್ತು ಯಾವ ವಿಷಯಗಳಲ್ಲಿ ಅನುಸರಿಸಬೇಕು? ಅವನ ಆಜ್ಞೋಲ್ಲಂಘನೆ ಮಾಡಬೇಕಾದ ಸಂದರ್ಭಗಳಾವುವು? ಅವನು ತಪ್ಪು ಮಾಡಿದರೆ ಏನು ಮಾಡಬೇಕು; ತಪ್ಪು ಮಾಡಿದರೂ ನೀವು ಎಷ್ಟರವರೆಗೆ ಅವನನ್ನು ಅನುಸರಿಸಬೇಕು? ಅವನನ್ನು ಯಾವ ಸಂದರ್ಭಗಳಲ್ಲಿ ಎಚ್ಚರಿಸಬಹುದು? ಅವನ ತಪ್ಪನ್ನು ತಿದ್ದಿಕೊಳ್ಳಬೇಕೆಂದು ಅವನೊಡನೆ ಹೇಳಬೇಕಾದ ಸಂದರ್ಭಗಳಾವುವು? ಯಾವ ಸಂದರ್ಭದಲ್ಲಿ ಅವನನ್ನು ಇಮಾಮತ್‌ನಿಂದ (ನಾಯಕತ್ವ) ಉಚ್ಚಾಟಿಸಬಹುದು? ಎಂಬಿತ್ಯಾದಿ ವಿಷಯಗಳ ಮೂಲಕ ಪ್ರತಿಯೊಂದು ಮಸೀದಿಯಲ್ಲಿ ದಿನಕ್ಕೆ ಐದಾವರ್ತಿ ಸಣ್ಣಮಟ್ಟದಲ್ಲಿ ಒಂದು ದೊಡ್ಡ ಸಾಮ್ರಾಜ್ಯವನ್ನೇ ನಡೆಸುವ ಅಭ್ಯಾಸ ಮಾಡಿಸಲಾಗುತ್ತದೆ.

ನಾಯಕತ್ವದ ಶರತ್ತುಗಳು

1. ದೇವಭಕ್ತ ಮತ್ತು ಧರ್ಮನಿಷ್ಠೆ

ಇಲ್ಲಿ ಇವುಗಳ ಕೂಲಂಕಷ ವಿವರಣೆಯನ್ನು ನೀಡಲು ಅವಕಾಶವಿಲ್ಲ. ಆದರೂ ಕೆಲವು ವಿಷಯಗಳನ್ನು ಮಾತ್ರ ಸ್ಥೂಲವಾಗಿ ವಿವರಿಸುವೆನು. ಮುತ್ತಕೀ (ನಿಷ್ಠಾವಂತ), ಆದಷ್ಟು ಹೆಚ್ಚು ಧರ್ಮಜ್ಞಾನವುಳ್ಳ, ಕುರ್‌ಆನನ್ನು ಚೆನ್ನಾಗಿ ಬಲ್ಲ ಹಾಗೂ ಪ್ರಬುದ್ಧನಾದವನನ್ನೇ ಇಮಾಮ್ (ನಾಯಕ) ಆಗಿ ಮಾಡಬೇಕೆಂಬ ವಿಧಿ ಇದೆ. ಹದೀಸಿನಲ್ಲಿ ಈ ಪೈಕಿ ಯಾವ ಗುಣ ವಿಶೇಷತೆಯು ಯಾವುದಕ್ಕಿಂತ ಮೇಲಾಗಿರಬೇಕೆಂದು ಕ್ರಮಪ್ರಕಾರವಾಗಿ ತೋರಿಸಲಾಗಿದೆ. ರಾಷ್ಟ್ರದ ನಾಯಕನನ್ನು ಆಯ್ಕೆ ಮಾಡುವಾಗ ಯಾವಯಾವ ವಿಷಯಗಳನ್ನು ಗಮನಿಸಬೇಕೆಂಬ ಶಿಕ್ಷಣವನ್ನು ಇಲ್ಲಿಂದಲೇ ಕೊಡಲಾಗಿದೆ.

2. ಬಹುಸಂಖ್ಯಾತರ ಪ್ರತಿನಿಧಿ

ಜಮಾಅತಿನ ಬಹುಸಂಖ್ಯಾತರು ಮೆಚ್ಚದಂತಹ ವ್ಯಕ್ತಿಯನ್ನು ಇಮಾಮ್ ಆಗಿ ನಿಶ್ಚಯಿಸಬಾರದೆಂಬ ವಿಧಿ ಇದೆ. ಕೆಲವರಾದರೂ ವಿರೋಧಿಗಳಿಲ್ಲದ ಯಾರಾದರೂ ಇದ್ದಾರೆಯೇ? ಆದರೆ ಒಂದು ಜಮಾಅತ್‌ನ ಅಧಿಕಾಂಶ ಜನರಿಂದ ತಿರಸ್ಕೃತವಾದವನನ್ನು 'ಇಮಾಮ್'ನ ಸ್ಥಾನಕ್ಕೆ ನಿಯುಕ್ತಗೊಳಿಸಬಾರದು. ಈ ನಿಯಮದಲ್ಲಿ ಪುನಃ ರಾಷ್ಟ್ರದ ನಾಯಕನ ಆಯ್ಕೆಯ ಒಂದು ವಿಧಾನವನ್ನು ತೋರಿಸಲಾಗಿದೆ.

3. ಮುಕ್ತದಿ(ಅನುಯಾಯಿ)ಗಳ ಹಿತಚಿಂತಕ

ಇಮಾಮ್ ಆಗಿ ನೇಮಿಸಲ್ಪಟ್ಟಾತನು ಜಮಾಅತ್‌ನಲ್ಲಿರುವ ಅತ್ಯಂತ ದುರ್ಬಲರಿಗೂ ತೊಂದರೆಯಾಗದ ರೀತಿಯಲ್ಲಿ ನಮಾಝ್ ನೆರವೇರಿಸಬೇಕೆಂಬ ನಿಯಮವಿದೆ. ತರುಣರನ್ನು, ಗಟ್ಟಿಮುಟ್ಟಾಗಿದ್ದವರನ್ನು, ಆರೋಗ್ಯವಂತರನ್ನು ಮತ್ತು ಸಾಕಷ್ಟು ಬಿಡುವಿರುವವರನ್ನು ಮಾತ್ರ ಗಮನಿಸಿ, ದೀರ್ಘ ಕಿರಾಅತ್ (ಕುರ್‌ಆನ್ ಪಠಣ), ಉದ್ದುದ್ದ ರುಕೂಅ್ ಮತ್ತು ಸುಜೂದ್‌ಗಳನ್ನು ಮಾಡಬಾರದು. ಬದಲಾಗಿ ಜಮಾಅತಿನಲ್ಲಿರುವ ವೃದ್ಧರನ್ನು, ದುರ್ಬಲರನ್ನು, ರೋಗಿಗಳನ್ನು ಮತ್ತು ನಮಾಝ್ ಮುಗಿಸಿ ಬೇಗನೆ ತಂತಮ್ಮ ಕೆಲಸ ಕಾರ್ಯಗಳಿಗೆ ಹೋಗ ಬಯಸುವವರನ್ನು ಗಮನಿಸಬೇಕು. ಪ್ರವಾದಿವರ್ಯರು(ಸ) ನಮಾಝ್ ಮಾಡಿಸುತ್ತಿರುವಾಗ ಮಗು ಅಳುವ ಸ್ವರ ಕೇಳಿದೊಡನೆ ಅದರ ತಾಯಿ ಜಮಾಅತ್‌ನಲ್ಲಿ ಸೇರಿದ್ದರೆ, ಆಕೆಗೆ ತೊಂದರೆಯಾಗಬಾರದೆಂದು ನಮಾಝನ್ನು ಸಂಕ್ಷಿಪ್ತಗೊಳಿಸುವ ಮೂಲಕ ಪ್ರೇಮಮಯ ಹಾಗೂ ದಾಕ್ಷಿಣ್ಯಮಯ ಮಾದರಿಯನ್ನು ಮುಂದಿರಿಸಿದ್ದಾರೆ. ಒಬ್ಬ ಜನನಾಯಕನಾಗಿ ಆಯ್ಕೆಗೊಂಡಾಗ ಅವನ ಕಾರ್ಯವಿಧಾನ ಹೇಗಿರಬೇಕೆಂಬುದನ್ನು ಇದು ತೋರಿಸುತ್ತದೆ.

4. ಅಸಮರ್ಥನಾದರೆ ಸ್ಥಾನ ತೆರವುಗೊಳಿಸಬೇಕು

ನಮಾಝ್ ಮಾಡಿಸುತ್ತಿರುವಾಗ ಇಮಾಮನಿಗೆ ತೊಂದರೆಯೇನಾದರೂ ಉಂಟಾಗಿ ಆತ ನಮಾಝ್ ನೆರವೇರಿಸುವ ಸ್ಥಿತಿಯಲ್ಲಿಲ್ಲದಿದ್ದರೆ, ಕೂಡಲೇ ತನ್ನ ಸ್ಥಾನದಿಂದ ಸರಿದು, ಆ ಸ್ಥಾನದಲ್ಲಿ ತನ್ನ ಹಿಂದೆ ನಿಂತಿರುವ ಒಬ್ಬನನ್ನು ನಿಲ್ಲಿಸಬೇಕೆಂಬ ನಿಯಮವಿದೆ. ರಾಷ್ಟ್ರನಾಯಕನ ಕರ್ತವ್ಯವೂ ಇದುವೇ ಆಗಿದೆಯೆಂದು ತಿಳಿಯುತ್ತದೆ. ತಾನು ನಾಯಕನಾಗಿರಲು ಅನರ್ಹನೆಂದು ಕಂಡುಕೊಂಡ ಮರುಕ್ಷಣದಲ್ಲೇ ತಾನಾಗಿ ತನ್ನ ಸ್ಥಾನವನ್ನು ತ್ಯಜಿಸಿ, ಯೋಗ್ಯನಾದ ಇನ್ನೊಬ್ಬನಿಗಾಗಿ ಸ್ಥಾನವನ್ನು ತೆರವುಗೊಳಿಸಬೇಕು. ಈ ವಿಷಯದಲ್ಲಿ ಯಾವುದೇ ನಾಚಿಕೆಯಾಗಲೀ, ಸ್ವಾರ್ಥವಾಗಲೀ ಇರಬಾರದು.

5. ನಾಯಕನ ಸಂಪೂರ್ಣ ಅನುಸರಣೆ

ಮುಕ್ತದೀಗಳು ಇಮಾಮನ ಚಲನೆಯನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕೆಂಬ ನಿಯಮವಿದೆ. ಅವನ ಚಲನೆಗಿಂತ ಮುಂದಾಗಿ ಚಲಿಸುವುದನ್ನು ನಿಷೇಧಿಸಲಾಗಿದೆ. ಇಮಾಮರಿಗಿಂತ ಮುಂಚೆ ರುಕೂಅ್ ಅಥವಾ ಸುಜೂದ್ ಮಾಡುವವನು ಕತ್ತೆಯ ರೂಪದಲ್ಲಿ ಎಬ್ಬಿಸಲ್ಪಡುವನೆಂದು ಹದೀಸಿನಲ್ಲಿ ಬಂದಿದೆ. ಇಲ್ಲಿ ಜನಸಾಮಾನ್ಯರು ತಮ್ಮ ನಾಯಕನನ್ನು ಹೇಗೆ ಅನುಸರಿಸಬೇಕೆಂದು ಕಲಿಸಲಾಗುತ್ತಿದೆ.

6. ತಪ್ಪಿದರೆ ಎಚ್ಚರಿಸುವುದು

ಇಮಾಮನಿಂದ ತಪ್ಪುಗಳು ಸಂಭವಿಸಿ ಹೋದರೆ, (ಉದಾ:-ಕುಳಿತುಕೊಳ್ಳಬೇಕಾದಲ್ಲಿ ನಿಂತುಬಿಟ್ಟರೆ, ಅಥವಾ ನಿಲ್ಲಬೇಕಾದಲ್ಲಿ ಕುಳಿತುಬಿಟ್ಟರೆ) ಕೂಡಲೇ 'ಸುಬ್‌ಹಾನಲ್ಲಾಹ್' ಎಂದು

ಹೇಳಿ ಅವನನ್ನು ಎಚ್ಚರಿಸಬೇಕೆಂಬ ನಿಯಮವಿದೆ. 'ಸುಬ್‌ಹಾನಲ್ಲಾಹ್' ಎಂಬುದರ ಅರ್ಥ 'ಅಲ್ಲಾಹನು ಪರಿಶುದ್ಧನು' ಎಂದಾಗಿದೆ. ಇಮಾಮನ ತಪ್ಪಿಗಾಗಿ 'ಸುಬ್‌ಹಾನಲ್ಲಾಹ್' ಎಂದು ಹೇಳುವುದರ ಅರ್ಥ ದೋಷರಹಿತನಾದವನು ಅಲ್ಲಾಹನು ಮಾತ್ರ, ನೀವು ಮಾನವರಾಗಿದ್ದೀರಿ, ನಿಮ್ಮಿಂದ ತಪ್ಪುಗಳು ಸಂಭವಿಸುವುದರಲ್ಲಿ ಆಶ್ಚರ್ಯವಿಲ್ಲ ಎಂದಾಗಿದೆ. ಇದು ಇಮಾಮನನ್ನು ಎಚ್ಚರಿಸುವ ಕ್ರಮ. ಹೀಗೆ ಎಚ್ಚರಿಕೆ ಕೊಟ್ಟಾಗ ಇಮಾಮನು ನಾಚಿಕೆ ಪಡದೆ ಅಥವಾ ಸಂಕೋಚ ಪಡದೆ ತನ್ನ ತಪ್ಪನ್ನು ತಿದ್ದಿಕೊಳ್ಳಬೇಕು. ಆದರೆ, ಎಚ್ಚರಿಕೆ ಸಿಕ್ಕಿದಾಗಲೂ ತನ್ನ ತಪ್ಪೇನೂ ಇಲ್ಲವೆಂದು ಇಮಾಮನಿಗೆ ಖಾತ್ರಿ ಇದ್ದರೆ, ತನ್ನ ಮನಸ್ಸಿನ ದೃಢತೆಯಂತೆ ಮುಂದುವರಿಯ ಬಹುದು. ಇಂತಹ ಸಂದರ್ಭಗಳಲ್ಲಿ ಮುಕ್ತದೀಗಳು ಇಮಾಮನ ಈ ವರ್ತನೆಯು ತಪ್ಪೆಂದು ತಿಳಿದಾಗಲೂ ಅವನನ್ನು ಅನುಸರಿಸಬೇಕು. ನಮಾಝ್ ಮುಗಿದ ಬಳಿಕ ಇಮಾಮನಿಗೆ ಅವನ ತಪ್ಪನ್ನು ಮನವರಿಕೆ ಮಾಡಿ ನಮಾಝನ್ನು ಪುನರಾವರ್ತಿಸುವಂತೆ ಕೇಳಿಕೊಳ್ಳಬಹುದು.

7. ಪಾಪ ಕಾರ್ಯದಲ್ಲಿ ಅನುಸರಣೆಯಿಲ್ಲ

ಇಮಾಮನೊಂದಿಗೆ ಜಮಾಅತಿನ ಈ ವ್ಯವಹಾರವು ಚಿಕ್ಕ ಪುಟ್ಟ ತಪ್ಪುಗಳಲ್ಲಿ ಮಾತ್ರ ಸರಿಯೆನಿಸುವುದು. ಇಮಾಮನು ಪ್ರವಾದಿಯವರ(ಸ) ಸುನ್ನತ್ (ಚರ್ಯೆ)ಗೆ ವಿರುದ್ಧವಾಗಿ ನಮಾಝ್‌ನ ಕ್ರಮವನ್ನೇ ಬದಲಾಯಿಸಿ ಬಿಟ್ಟರೆ ಅಥವಾ ಈ ನಮಾಝ್‌ನಲ್ಲಿ ಬೇಕು ಬೇಕೆಂದೇ 'ಕುರ್‌ಆನ್' ತಪ್ಪಾಗಿ ಪಠಿಸಿದರೆ ಅಥವಾ ನಮಾಝ್ ಮಾಡುತ್ತಿರುವಾಗ ಕುಫ್ರ್, ಶಿರ್ಕ್ ಅಥವಾ ಸುಸ್ಪಷ್ಟವಾದ ಪಾಪ ಕಾರ್ಯಗಳನ್ನೆಸಗಿದರೆ ಮುಕ್ತದೀಗಳು ಆಗಲೇ ನಮಾಝನ್ನು ಮುರಿದು ಆ ಇಮಾಮನಿಂದ ಅಗಲುವುದು ಕಡ್ಡಾಯವಾಗಿದೆ. ಇವೆಲ್ಲಾ ನೀವು ನಿಮ್ಮ ರಾಷ್ಟ್ರೀಯ ಜೀವನದಲ್ಲಿ ನಿಮ್ಮ ನಾಯಕನೊಂದಿಗೆ ಹೇಗೆ ವರ್ತಿಸಬೇಕೆಂಬುದನ್ನು ಕಲಿಸುವ ಮಾರ್ಗದರ್ಶನಗಳಾಗಿವೆ.

ಮುಸ್ಲಿಮ್ ಬಾಂಧವರೇ,

ನಾನು ವಿವರಿಸಿದ ಸಾಮೂಹಿಕ ನಮಾಝ್‌ನ ಪ್ರಯೋಜನಗಳಿಂದ, ಅಲ್ಲಾಹನು ದಿನಕ್ಕೆ ಐದಾವರ್ತಿ ಕೇವಲ ಕೆಲವೇ ನಿಮಿಷಗಳಲ್ಲಿ ಮಾಡಿ ಮುಗಿಸುವ ಈ ಒಂದು ಇಬಾದತ್‌ನಲ್ಲಿ ಉಭಯಲೋಕಗಳ ಸರ್ವ ವಿಧದ ಅನುಗ್ರಹಗಳನ್ನು ನಿಮಗಾಗಿ ಹೇಗೆ ಶೇಖರಿಸಿಟ್ಟಿರುವನು, ಕೇವಲ ಇದೊಂದು ವಸ್ತು 'ನಮಾಝ್' ನಿಮಗೆ ಹೇಗೆ ಎಲ್ಲ ಒಳಿತುಗಳನ್ನು ನೀಡುತ್ತದೆ ಮತ್ತು ಇದು ನಿಮ್ಮನ್ನು ಅಲ್ಲಾಹನ ದಾಸ್ಯಕ್ಕೆ ಹಾಗೂ ಈ ಲೋಕದ ಆಧಿಪತ್ಯ ವಹಿಸಲು ಹೇಗೆ ಸಿದ್ಧಪಡಿಸುತ್ತದೆ ಎಂಬುದು ನಿಮಗೆ ಮನವರಿಕೆಯಾಗಿರಬಹುದು. ಈಗ ನೀವು, ನಮಾಝ್ ಇಷ್ಟೊಂದು ಮಹತ್ವದ ವಸ್ತುವಾಗಿದ್ದರೆ ಅದರ ಪ್ರಯೋಜನ ನಮಗೇಕೆ ಈಗ ಲಭ್ಯವಾಗುತ್ತಿಲ್ಲವೆಂದು ಖಂಡಿತ ಪ್ರಶ್ನಿಸುವಿರಿ. ಇದರ ಉತ್ತರವನ್ನು ಅಲ್ಲಾಹನಿಚ್ಛಿಸಿದರೆ ಮುಂದಿನ ಉಪನ್ಯಾಸದಲ್ಲಿ ಕೊಡುವೆನು.

ನಮಾಝ್ ಸತ್ವಹೀನವಾದುದೇಕೆ?

ಮುಸ್ಲಿಮ್ ಬಾಂಧವರೇ,

ಹಿಂದಿನ ಅನೇಕ ಉಪನ್ಯಾಸಗಳಲ್ಲಿ ವಿವರಿಸಿದಂತೆ ನಮಾಝ್‌ನಲ್ಲಿ ಇಷ್ಟೆಲ್ಲಾ ಪ್ರಯೋಜನಗಳಿದ್ದರೂ ಅವೆಲ್ಲಾ ಈಗೇಕೆ ಲಭ್ಯವಾಗುತ್ತಿಲ್ಲ? ನೀವು ನಮಾಝ್ ಮಾಡುತ್ತೀರಿ. ಆದರೂ ನಿಮ್ಮ ಜೀವನದಲ್ಲಿ ಸುಧಾರಣೆಯಾಗುತ್ತಿಲ್ಲವೇಕೆ? ನಿಮ್ಮ ಚಾರಿತ್ರ್ಯ ಉತ್ತಮವಾಗುವುದಿಲ್ಲವೇಕೆ? ನೀವು ಪ್ರಬಲ ದೈವಿಕ ಸೇನೆಯಂತಾಗಿರುವುದಿಲ್ಲವೇಕೆ? ಸತ್ಯನಿಷೇಧಿಗಳು ನಿಮ್ಮ ಮೇಲೆ ಪ್ರಾಬಲ್ಯ ಹೊಂದಿರುವುದು ಹೇಗೆ? ನೀವು ಜಗತ್ತಿನಲ್ಲಿ ಮರ್ದಿತರೂ ಹತಭಾಗಿಗಳೂ ಆಗಿರಲು ಕಾರಣವೇನು ಎಂಬಿತ್ಯಾದಿಗಳನ್ನು ಇಂದಿನ ಉಪನ್ಯಾಸದಲ್ಲಿ ವಿವರಿಸುವೆನು.

ಈ ಪ್ರಶ್ನೆಗೆ ಸಂಕ್ಷೇಪವಾಗಿ ಉತ್ತರಿಸುವುದಿದ್ದರೆ, ನೀವು ನಮಾಝ್ ಮಾಡುವುದೇ ಇಲ್ಲ ಅಥವಾ ಮಾಡಿದರೂ ಅಲ್ಲಾಹ್ ಮತ್ತು ಪ್ರವಾದಿಯವರು(ಸ) ಕಲಿಸಿದ ರೀತಿಯಲ್ಲಿ ಮಾಡುವುದಿಲ್ಲ. ಆದುದರಿಂದ ನಿಮ್ಮ ನಮಾಝ್‌ನಿಂದ ಓರ್ವ ಸತ್ಯವಿಶ್ವಾಸಿಯನ್ನು ಅತ್ಯುನ್ನತ ಮಟ್ಟಕ್ಕೆ ಏರಿಸಬಲ್ಲಂತಹ ಪ್ರಯೋಜನಗಳನ್ನು ನಿರೀಕ್ಷಿಸುವಂತಿಲ್ಲ. ಆದರೆ ಈ ಸಂಕ್ಷಿಪ್ತ ಉತ್ತರದಿಂದ ನಿಮಗೆ ಸಮಾಧಾನವಾಗಲಾರದೆಂಬುದನ್ನು ನಾನು ಬಲ್ಲೆ. ಆದುದರಿಂದ ಸ್ವಲ್ಪ ವಿವರವಾಗಿ ನಿಮಗೆ ಹೇಳುವೆನು-

ಒಂದು ಉದಾಹರಣೆ: ಗಡಿಯಾರ

ನೀವೊಂದು ಗಡಿಯಾರವನ್ನು ತೆಗೆದು ನೋಡಿರಿ. ಅದರೊಳಗೆ ಅನೇಕ ಯಂತ್ರ ಭಾಗಗಳು ಜೋಡಿಸಲ್ಪಟ್ಟಿರುವುದನ್ನು ಕಾಣಬಹುದು. ಅದಕ್ಕೆ ಕೀ ಕೊಟ್ಟಾಗ ಆ ಎಲ್ಲಾ ಯಂತ್ರ ಭಾಗಗಳು ತಂತಮ್ಮ ಕೆಲಸ ಮಾಡಲಾರಂಭಿಸುತ್ತವೆ. ಅವುಗಳ ಚಲನೆಯೊಂದಿಗೆ ಗಡಿಯಾರದ ಹೊರಮುಖದಲ್ಲಿ ಅದರ ಪರಿಣಾಮ ಗೋಚರಿಸುತ್ತದೆ. ಅಂದರೆ ಗಡಿಯಾರದ ಎರಡೂ ಮುಳ್ಳುಗಳು ಚಲಿಸುತ್ತಾ ಒಂದೊಂದು ಸೆಕೆಂಡು ಮತ್ತು ಒಂದೊಂದು ನಿಮಿಷವನ್ನು ತೋರಿಸಲಾರಂಭಿಸುತ್ತವೆ. ಈಗ ಸ್ವಲ್ಪ ಗಮನಹರಿಸಿರಿ. ಗಡಿಯಾರವನ್ನು ತಯಾರಿಸುವ ಉದ್ದೇಶವು ಸರಿಯಾದ ಸಮಯವನ್ನು ತೋರಿಸಲಿಕ್ಕಾಗಿದೆ. ಈ ಉದ್ದೇಶಕ್ಕಾಗಿಯೇ ಗಡಿಯಾರದಲ್ಲಿ ಸಮಯವನ್ನು ತೋರಿಸಲಿಕ್ಕೆ ಅಗತ್ಯವಾದ ಯಂತ್ರ ಭಾಗಗಳನ್ನು ಕ್ರಮಬದ್ಧವಾಗಿ ಜೋಡಿಸಲಾಗಿದೆ. ಅದರೊಂದಿಗೆ ಅವು ತಂತಮ್ಮ ಕೆಲಸವನ್ನು ನಿಲ್ಲಿಸಿ ಬಿಡದಂತೆ ಮತ್ತು

ಸ್ವಲ್ಪ ಅವಧಿಯ ನಂತರ ಪುನಃ ಚಲಿಸುವಂತೆ ಮಾಡಲು ಕೀ ಕೊಡುವ ಕ್ರಮವನ್ನು ನಿಶ್ಚಯಿಸಲಾಗಿದೆ. ಹೀಗೆ ಎಲ್ಲಾ ಯಂತ್ರ ಭಾಗಗಳನ್ನು ಕ್ರಮ ಬದ್ಧವಾಗಿ ಜೋಡಿಸಿ, ಕೀ ಕೊಟ್ಟಾಗ ಈ ಗಡಿಯಾರವು ತನ್ನ ನಿರ್ಮಾಣದ ಉದ್ದೇಶವನ್ನು ನೆರವೇರಿಸಲು ಸಮರ್ಥವಾಯಿತು. ನೀವು ಕೀ ಕೊಡದಿದ್ದರೆ ಅದು ಸಮಯ ತೋರಿಸದು. ಕೀ ಕೊಟ್ಟರೂ ಸರಿಯಾದ ಕ್ರಮದಂತೆ ಕೊಡದಿದ್ದರೆ, ಅದು ನಿಂತು ಹೋಗುವುದು. ಒಂದು ವೇಳೆ ಚಲಿಸಿದರೂ ಸರಿಯಾದ ಸಮಯವನ್ನು ತೋರಿಸಲಾರದು. ನೀವು ಅದರ ಕೆಲವು ಯಂತ್ರ ಭಾಗಗಳನ್ನು ಕಳಚಿ, ಅನಂತರ ಕೀ ಕೊಟ್ಟರೆ ಅದರಿಂದೇನೂ ಫಲ ಸಿಗದು.

ನೀವು ಅದರ ಕೆಲವು ಯಂತ್ರ ಭಾಗಗಳನ್ನು ತೆಗೆದು ಅವುಗಳ ಸ್ಥಾನದಲ್ಲಿ ಹೊಲಿಗೆ ಯಂತ್ರದ ಬಿಡಿಭಾಗಗಳನ್ನು ಜೋಡಿಸಿ ಮತ್ತೆ ಕೀ ಕೊಟ್ಟರೆ ಅದು ಸಮಯವನ್ನು ತೋರಿಸಲಾರದು. ಮಾತ್ರವಲ್ಲ ಅದು ಬಟ್ಟೆಯನ್ನೂ ಹೊಲಿಯಲಾರದು. ಗಡಿಯಾರದ ಯಂತ್ರ ಭಾಗಗಳನ್ನೆಲ್ಲಾ ಬಿಡಿಸಿ, ಎಲ್ಲವನ್ನೂ ಅದರೊಳಗೇ ಇಟ್ಟು, ಕೀ ಕೊಟ್ಟರೂ ಅದರ ಯಾವ ಭಾಗವೂ ಕೆಲಸ ಮಾಡದು. ತೋರಿಕೆಗೆ ಗಡಿಯಾರದ ಎಲ್ಲಾ ಯಂತ್ರ ಭಾಗಗಳು ಅದರೊಳಗಿದ್ದರೂ ಅದರಿಂದ ಅದರ ನಿರ್ಮಾಣದ ಉದ್ದೇಶ ಪೂರ್ತಿಯಾಗದು. ಅವುಗಳು ಒಂದುಗೂಡಿ ಕೆಲಸ ಮಾಡಲು ಬೇಕಾದ ವ್ಯವಸ್ಥೆಯನ್ನೂ, ಪರಸ್ಪರ ಸಂಪರ್ಕವನ್ನೂ ನೀವು ಮುರಿದುಬಿಟ್ಟಿರುವುದರಿಂದ ಅವು ಒಟ್ಟಾಗಿ ಕೆಲಸ ಮಾಡಲಾರವು. ಇಂತಹ ಸ್ಥಿತಿಯಲ್ಲಿ ಗಡಿಯಾರದ ಅಸ್ತಿತ್ವ ಮತ್ತು ಕೀ ಕೊಡುವ ಕ್ರಿಯೆ ಎರಡೂ ವ್ಯರ್ಥ. ಆದರೆ ದೂರದಿಂದ ನೋಡುವಾತನು ಅದನ್ನು ಗಡಿಯಾರವಲ್ಲವೆಂದಾಗಲಿ ಅದಕ್ಕೆ ಕೀ ಕೊಡುವುದಿಲ್ಲವೆಂದಾಗಲಿ ಹೇಳಲಾರ. ಅದರ ರೂಪವೂ ಗಡಿಯಾರದಂತೆಯೇ ಇದ್ದು ಅದರಿಂದ ಪಡೆಯಬಹುದಾದ ಪ್ರಯೋಜನವನ್ನು ನೀವು ಪಡೆಯುತ್ತೀರೆಂದೇ ಆತ ಭಾವಿಸುವನು. ಹಾಗೆಯೇ ನೀವು ಕೀ ಕೊಡುವುದನ್ನು ದೂರದಿಂದ ನೋಡುವಾತನು ನಿಜವಾಗಿಯೂ ನೀವು ಕೀ ಕೊಡುತ್ತಿರುವಿರೆಂದೂ ಅದರ ಸೂಕ್ತ ಪರಿಣಾಮ ಪ್ರಕಟವಾಗಲೇಬೇಕೆಂದೂ ನಿರೀಕ್ಷಿಸುವನು. ಆದರೆ ಅದು ಕೇವಲ ದೂರದಿಂದ ನೋಡಲಿಕ್ಕಿರುವ ಗಡಿಯಾರವಾಗಿದ್ದು ಯಥಾರ್ಥದಲ್ಲಿ ಅದರಲ್ಲಿ ಗಡಿಯಾರತನವೇನೂ ಉಳಿದಿಲ್ಲದಿರುವಾಗ ಆತನ ನಿರೀಕ್ಷೆ ಸರಿಯಾಗುವುದು ಹೇಗೆ?

ಮುಸ್ಲಿಮ್ ಸಮುದಾಯದ ಉದ್ದೇಶ

ಈ ಉದಾಹರಣೆಯಿಂದ ನೀವು ಸಂಪೂರ್ಣ ವಿಷಯವನ್ನು ಗ್ರಹಿಸಿ ಕೊಂಡಿರಬಹುದು. ಇಸ್ಲಾಮನ್ನು, ಅದೇ ಗಡಿಯಾರದೊಂದಿಗೆ ಹೋಲಿಸಿ. ಸರಿಯಾದ ಸಮಯವನ್ನು ತೋರಿಸುವುದು ಗಡಿಯಾರದ ಉದ್ದೇಶವಾಗಿರುವಂತೆಯೇ ಇಸ್ಲಾಮಿನ ಉದ್ದೇಶವು ಭೂಮಿಯಲ್ಲಿ ದೇವನ ಪ್ರತಿನಿಧಿಗಳಾಗಿ, ಜನರಿಗೆ ದೇವನ ಸಾಕ್ಷಿಗಳಾಗಿ ಸ್ವತಃ ದೇವಾದೇಶಗಳಂತೆ ನಡೆಯುವುದು ಮತ್ತು ಇತರರನ್ನು ದೇವಾಜ್ಞೆಗಳಿಗೆ ವಿಧೇಯರನ್ನಾಗಿ ಮಾಡುವುದಾಗಿದೆ. ಈ ಉದ್ದೇಶವನ್ನು ಕುರ್‌ಆನಿನಲ್ಲಿ ಸುಸ್ಪಷ್ಟವಾಗಿ ವಿವರಿಸಲಾಗಿದೆ -

كُنْتُمْ خَيْرَ أُمَّةٍ أُخْرِجَتْ لِلنَّاسِ تَأْمُرُونَ بِالْمَعْرُوفِ

وَتَنْهَوْنَ عَنِ الْمُنْكَرِ وَتُؤْمِنُونَ بِاللَّهِ

"ಮಾನವರ ಸನ್ಮಾರ್ಗದರ್ಶನ ಮತ್ತು ಸಂಸ್ಕಾರಗಳಿಗಾಗಿ ನಿಯೋಗಿಸಲಾಗಿರುವ ಅತ್ಯುತ್ತಮ ಜನಕೂಟವು ನಿಮ್ಮದಾಗಿರುತ್ತದೆ. ನೀವು ಒಳಿತಿನ ಆದೇಶವನ್ನೀಯುತ್ತೀರಿ, ಪಾಪ ಕಾರ್ಯಗಳಿಂದ ತಡೆಯುತ್ತೀರಿ ಮತ್ತು ಅಲ್ಲಾಹನ ಮೇಲೆ ವಿಶ್ವಾಸವಿಡುತ್ತೀರಿ." (3:110)

وَكَذَٰلِكَ جَعَلْنَاكُمْ أُمَّةً وَسَطًا لِتَكُونُوا شُهَدَاءَ عَلَى النَّاسِ وَيَكُونَ الرَّسُولُ عَلَيْكُمْ شَهِيدًا

"ಮತ್ತು ಇದೇ ರೀತಿ ನೀವು ಜಗತ್ತಿನ ಮಾನವರ ಬಗ್ಗೆ ಸಾಕ್ಷಿಯಾಗಿರಲಿಕ್ಕೂ ಸಂದೇಶವಾಹಕರು ನಿಮ್ಮ ಬಗ್ಗೆ ಸಾಕ್ಷಿಯಾಗಿರಲಿಕ್ಕೂ ನಾವು ನಿಮ್ಮನ್ನು ಒಂದು ಸುಮಧ್ಯ ಸಮುದಾಯವನ್ನಾಗಿ ಮಾಡಿದ್ದೇವೆ." (2:143)

وَعَدَ اللَّهُ الَّذِينَ آمَنُوا مِنْكُمْ وَعَمِلُوا الصَّالِحَاتِ لَيَسْتَخْلِفَنَّهُمْ

فِي الْأَرْضِ كَمَا اسْتَخْلَفَ الَّذِينَ مِنْ قَبْلِهِمْ

"ನಿಮ್ಮ ಪೈಕಿ ಸತ್ಯವಿಶ್ವಾಸವಿರಿಸಿ ಸತ್ಕರ್ಮವೆಸಗಿದವರೊಡನೆ, ಅಲ್ಲಾಹನು ಅವರಿಗಿಂತ ಮುಂಚಿನವರನ್ನು ಭೂಮಿಯಲ್ಲಿ ಪ್ರತಿನಿಧಿಗಳಾಗಿ ಮಾಡಿದಂತೆಯೇ ಅವರನ್ನು ಮಾಡುವನೆಂದು ವಾಗ್ದಾನ ಮಾಡಿರುವನು." (24:55)

وَقَاتِلُوهُمْ حَتَّىٰ لَا تَكُونَ فِتْنَةٌ وَيَكُونَ الدِّينُ كُلُّهُ لِلَّهِ

"ಓ ಸತ್ಯವಿಶ್ವಾಸಿಗಳೇ, ಫಿತ್ನ (ಕ್ಷೋಭೆ) ಅಳಿದು ಹೋಗುವ ವರೆಗೂ ದೀನ್ (ಧರ್ಮ) ಸರ್ವ ಸಂಪೂರ್ಣವಾಗಿ ಅಲ್ಲಾಹನಿಗಾಗಿ ಆಗುವ ವರೆಗೂ ಈ ಸತ್ಯನಿಷೇಧಿಗಳೊಡನೆ ಹೋರಾಡಿರಿ." (8:39)

ಇಸ್ಲಾಮಿನ ಆದೇಶಗಳು ಗಡಿಯಾರದ ಬಿಡಿಭಾಗಗಳಂತೆ ಪರಸ್ಪರ ಜೋಡಿಸಲ್ಪಟ್ಟಿದೆ

ಈ ಉದ್ದೇಶ ಸಾಧನೆಗಾಗಿ ಗಡಿಯಾರದ ಯಂತ್ರ ಭಾಗಗಳಂತೆಯೇ ಇಸ್ಲಾಮಿನಲ್ಲಿಯೂ ಅದರ ಉದ್ದೇಶ ಸಾಧನೆಗಾಗಿ ಅಗತ್ಯವಾದ ಮತ್ತು ತಕ್ಕುದಾದ ಬಿಡಿ ಭಾಗಗಳಿವೆ. ವಿಶ್ವಾಸ

ಮತ್ತು ನೈತಿಕ ನಿಯಮಗಳು, ವ್ಯವಹಾರದ ನಿಬಂಧನೆಗಳು, ಅಲ್ಲಾಹನ ಹಕ್ಕುಗಳು, ಜನರ ಹಕ್ಕುಗಳು, ತನ್ನ ಸ್ವಂತ ಹಕ್ಕುಗಳು, ನಿಮಗೆ ಸಂಬಂಧಿಸಿದ ಇತರ ಎಲ್ಲಾ ವಸ್ತುಗಳ ಹಕ್ಕುಗಳು, ಸಂಪಾದನೆಯ ವಿಧಾನ, ಖರ್ಚು ಮಾಡುವ ರೀತಿ, ಯುದ್ಧದ ನಿಯಮಗಳು, ಒಪ್ಪಂದದ ಕಾಯಿದೆ, ಆಡಳಿತ ನಿಯಮಗಳು ಹಾಗೂ ಇಸ್ಲಾಮೀ ರಾಷ್ಟ್ರವನ್ನು ಅನುಸರಿಸುವ ವಿಧಾನ- ಇವೆಲ್ಲಾ ಇಸ್ಲಾಮಿನ ಯಂತ್ರ ಭಾಗಗಳಾಗಿವೆ. ಅವುಗಳನ್ನೆಲ್ಲಾ ಗಡಿಯಾರದ ಯಂತ್ರ ಭಾಗಗಳಂತೆಯೇ ಪರಸ್ಪರ ಜೋಡಿಸಲಾಗಿದೆ. ಆ ಮೂಲಕ ಸರಿಯಾದ ಸಮಯ ತೋರಿಸಲು ಎಲ್ಲ ಯಂತ್ರ ಭಾಗಗಳೂ ಒಟ್ಟಾಗಿ ಚಲಿಸುವಂತೆ ಮತ್ತು ಪ್ರತಿಯೊಂದು ಯಂತ್ರ ಭಾಗವು ತನಗೆ ವಹಿಸಿಕೊಟ್ಟ ನಿಶ್ಚಿತ ಕೆಲಸವನ್ನು ಮಾಡುವಂತೆ ವ್ಯವಸ್ಥೆ ಮಾಡಲಾಗಿದೆ. ಅದಕ್ಕೆ ಕೀ ಕೊಟ್ಟೊಡನೆ ಪ್ರತಿಯೊಂದು ಭಾಗವೂ ಇನ್ನೊಂದರೊಂದಿಗೆ ಸೇರಿ ಚಲಿಸಲಾರಂಭಿಸುತ್ತದೆ. ಇವೆಲ್ಲವುಗಳ ಚಲನೆಯಿಂದ ಇಸ್ಲಾಮಿನ ಉತ್ಥಾನ ಮತ್ತು ಜಗತ್ತಿನಲ್ಲಿ ದೇವಾದೇಶಗಳ ಪ್ರಸಾರವೂ ಕೂಡ ಗಡಿಯಾರದ ಚಲನೆಯು ಅದರ ಹೊರ ಮುಖದಲ್ಲಿ ಗೋಚರಿಸುವಂತೆ ಸರಾಗವಾಗಿ ಅಭಿವ್ಯಕ್ತವಾಗುತ್ತದೆ. ಗಡಿಯಾರದ ಯಂತ್ರ ಭಾಗಗಳನ್ನು ಪರಸ್ಪರ ಬಿಗಿಯಲು ಕೆಲವು ಮೊಳೆಗಳನ್ನೂ, ಸ್ಕ್ರೂಗಳನ್ನೂ ಬಳಸಲಾಗುತ್ತದೆ. ಅದೇ ರೀತಿಯಲ್ಲಿ ಇಸ್ಲಾಮಿನ ಎಲ್ಲಾ ಯಂತ್ರ ಭಾಗಗಳನ್ನು ಜೋಡಿಸಿ ಕ್ರಮಪಡಿಸಲಿಕ್ಕಾಗಿ ಸಂಘಟನಾ ವ್ಯವಸ್ಥೆಯನ್ನು ನಿಶ್ಚಯಿಸಲಾಗಿದೆ. ಅಂದರೆ ಮುಸ್ಲಿಮರಲ್ಲಿ ಧಾರ್ಮಿಕ ಜ್ಞಾನವುಳ್ಳ ಹಾಗೂ ನಿಷ್ಠಾವಂತನಾದ ನಾಯಕನಿರಬೇಕು ಮತ್ತು ಜಮಾಅತ್ (ಸಮುದಾಯ) ವೈಚಾರಿಕವಾಗಿ ಅವನಿಗೆ ಸಹಕಾರ ನೀಡುವಂತಾಗ ಬೇಕು. ಜಮಾಅತ್‌ನ ಅವಯವಗಳು ಅವನನ್ನು ಅನುಸರಿಸುವಂತಾಗಬೇಕು. ಇವರೆಲ್ಲರ ಬಲದಿಂದ ಅವನು ಇಸ್ಲಾಮಿನ ಶಾಸನಗಳನ್ನು ಜಾರಿಗೊಳಿಸುವಂತಾಗಬೇಕು. ಅವುಗಳ ಉಲ್ಲಂಘನೆಯಿಂದ ಜನರನ್ನು ತಡೆಯುವಂತಾಗಬೇಕು. ಹೀಗೆ ಎಲ್ಲಾ ಅಂಗಭಾಗಗಳು ಕ್ರಮ ಬದ್ಧವಾಗಿ ಒಂದುಗೂಡಿದಾಗ ಅವುಗಳಿಗೆ ಚಲನೆ ಕೊಡಲು ಮತ್ತು ಅದು ನಿರಂತರ ನಡೆಯಲು ಕೀ ಕೊಡಬೇಕಾಗುತ್ತದೆ. ಈ ಕೀ ಕೊಡುವ ಕ್ರಮವೇ ದಿನಕ್ಕೈದಾವರ್ತಿ ಮಾಡುವ ನಮಾಝ್. ಇನ್ನು ಆ ಗಡಿಯಾರವನ್ನು ಒರೆಸಿ ಶುಚಿಗೊಳಿಸ ಬೇಕಾಗುತ್ತದೆ. ಆ ನಿರ್ಮಲೀಕರಣವೇ ವರ್ಷ ಕ್ಕೊಮ್ಮೆ ಒಂದು ತಿಂಗಳ ತನಕ ಆಚರಿಸಲ್ಪಡುವ ಉಪವಾಸ ವ್ರತ. ಆ ಗಡಿಯಾರಕ್ಕೆ ಎಣ್ಣೆ ಬಿಡಬೇಕಾಗುತ್ತದೆ. ವರ್ಷಕ್ಕೊಮ್ಮೆ ಅದರ ಯಂತ್ರ ಭಾಗಗಳಿಗೆ ಬಿಡುವ ಎಣ್ಣೆಯೇ ಝಕಾತ್ (ಕಡ್ಡಾಯ ದಾನ). ಈ ಎಣ್ಣೆಯು ಹೊರಗಿನಿಂದ ಬರುವುದಿಲ್ಲ. ಅದೇ ಗಡಿಯಾರದ ಕೆಲವು ಯಂತ್ರ ಭಾಗಗಳು ಈ ಎಣ್ಣೆಯನ್ನು ತಯಾರಿಸಿ ಒಣ ಭಾಗಗಳಿಗೆ ಸವರಿ ಅವು ಸುಲಭವಾಗಿ ಚಲಿಸುವಂತೆ ಮಾಡುತ್ತವೆ. ಒಮ್ಮೊಮ್ಮೆ ಅದರ ಯಂತ್ರ ಭಾಗಗಳನ್ನೆಲ್ಲಾ ಬಿಚ್ಚಿ ಪುನಃ ಜೋಡಿಸ ಬೇಕಾಗುತ್ತದೆ. ಈ ಪುನರ್ ಜೋಡಣೆಯು ಕನಿಷ್ಠ ಪಕ್ಷ ಜೀವಮಾನದಲ್ಲೊಮ್ಮೆ ಮಾಡಲೇ ಬೇಕಾದ 'ಹಜ್ಜ್' ಆಗಿದೆ. ಇದನ್ನು ಒಂದಕ್ಕಿಂತ ಹೆಚ್ಚು ಬಾರಿ ಮಾಡಿದರೂ ಒಳ್ಳೆಯದೇ.

ವಿಭಿನ್ನ ಬಿಡಿ ಭಾಗಗಳನ್ನು ಜೋಡಿಸುವುದು ಹಿತಕರವಲ್ಲ

ಕೀ ಕೊಡುವ, ಶುಚಿಮಾಡುವ, ಎಣ್ಣೆಬಿಡುವ ಮತ್ತು ಬಿಚ್ಚಿ ಪುನಃ ಜೋಡಿಸುವ ಕಾರ್ಯಗಳೆಲ್ಲಾ ಫಲಕಾರಿಯಾಗಬೇಕಾದರೆ ಗಡಿಯಾರದ ಚೌಕಟ್ಟಿನೊಳಗೆ ಅದರದೇ ಆದ ಎಲ್ಲ ಯಂತ್ರಭಾಗಗಳು ಇರಬೇಕು. ಅವು ಅದರ ತಯಾರಕನು ಆರಂಭದಲ್ಲಿ ಜೋಡಿಸಿದ್ದ ಕ್ರಮದಲ್ಲೇ ಜೋಡಿಸಲ್ಪಟ್ಟಿದ್ದು, ಕೀ ಕೊಟ್ಟೊಡನೆ ಚಲಿಸಲಾರಂಭಿಸಿ ಅದರ ಪರಿಣಾಮವನ್ನು ತೋರಿಸತಕ್ಕ ಸ್ಥಿತಿಯಲ್ಲಿರಬೇಕು. ಆದರೆ ಇಲ್ಲಿನ ಪರಿಸ್ಥಿತಿ ಬೇರೆಯೇ ಆಗಿಬಿಟ್ಟಿದೆ. ಒಂದನೆಯದಾಗಿ, ಆ ಯಂತ್ರಭಾಗಗಳನ್ನು ಪರಸ್ಪರ ಜೋಡಿಸತಕ್ಕ ಜಮಾಅತ್ (ಸಂಘಟನಾ) ವ್ಯವಸ್ಥೆಯೇ ಇಲ್ಲವಾಗಿದೆ. ತತ್ಪರಿಣಾಮವಾಗಿ ಎಲ್ಲಾ ಸಂಪರ್ಕಗಳೂ ಸಡಿಲವಾಗಿ ಯಂತ್ರ ಭಾಗಗಳೆಲ್ಲಾ ಕಳಚಿ ಬಿದ್ದಿವೆ. ಈಗ ಪ್ರತಿಯೊಬ್ಬನೂ ತನ್ನಿಚ್ಛೆಯಂತೆ ವರ್ತಿಸುತ್ತಾನೆ. ಯಾರೂ ಅವನನ್ನು ಕೇಳುವವರಿಲ್ಲ. ಪ್ರತಿಯೊಬ್ಬನೂ ಸ್ವೇಚ್ಛಾಚಾರಿಯಾಗಿದ್ದಾನೆ. ಅವನಿಗೆ ಇಷ್ಟ ಬಂದರೆ ಇಸ್ಲಾಮನ್ನು ಅನುಸರಿಸುತ್ತಾನೆ, ಇಲ್ಲವಾದರೆ ಇಲ್ಲ. ಇಷ್ಟರಿಂದಲೂ ನಿಮಗೆ ತೃಪ್ತಿಯಾಗಲಿಲ್ಲ. ಆ ಯಂತ್ರದ ಅನೇಕ ಭಾಗಗಳನ್ನು ಅವುಗಳ ಸ್ಥಾನದಿಂದ ಕಿತ್ತು, ಆ ಸ್ಥಾನದಲ್ಲಿ ಪ್ರತಿಯೊಬ್ಬನೂ ತನಗಿಷ್ಟ ಬಂದ ಬೇರೆ ಯಂತ್ರಗಳ ಬಿಡಿಭಾಗಗಳನ್ನು ತಂದು ಜೋಡಿಸಿದನು. ಒಬ್ಬನು ಸಿಂಗರ್ ಮೆಶೀನ್‌ನ ಬಿಡಿಭಾಗಗಳನ್ನು ತಂದನು. ಇನ್ನೊಬ್ಬನಿಗೆ ಗ್ರ್ಯಂಡರ್‌ನ ಬಿಡಿಭಾಗಗಳು ಯೋಗ್ಯವಾಗಿ ಕಂಡುದರಿಂದ ಅವುಗಳನ್ನು ತಂದನು. ಬೇರೊಬ್ಬನಿಗೆ ವಾಹನಗಳ ಬಿಡಿಭಾಗಗಳು ಇಷ್ಟವಾಗಿ ಕಂಡವು. ಹೀಗೆ ಒಬ್ಬೊಬ್ಬನು ಒಂದೊಂದನ್ನು ತಂದು ಆ ಗಡಿಯಾರದ ಯಂತ್ರಕ್ಕೆ ಜೋಡಿಸಿ ಬಿಟ್ಟನು. ಈಗ ನೀವು ಮುಸ್ಲಿಮರೆಂದು ವಾದಿಸುತ್ತೀರಿ. ಆದರೆ ಬ್ಯಾಂಕುಗಳಲ್ಲಿ ಬಡ್ಡಿಯ ವ್ಯವಹಾರಗಳನ್ನು ಮಾಡುತ್ತೀರಿ. ವಿಮಾ ಕಂಪೆನಿಗಳಲ್ಲಿ ಜೀವಕ್ಕೆ ವಿಮೆಗಳನ್ನು ಮಾಡಿಸಿಕೊಂಡಿದ್ದೀರಿ. ಧರ್ಮಬಾಹಿರವಾದ ನ್ಯಾಯಾಲಯಗಳಲ್ಲಿ ಸುಳ್ಳು ವ್ಯಾಜ್ಯಗಳನ್ನು ವ್ಯವಹರಿಸುತ್ತಿದ್ದೀರಿ. ಮಿಥ್ಯವಾದಿಗಳ ಸೇವೆಯನ್ನು ಪ್ರಾಮಾಣಿಕತೆ ಯಿಂದ ಮಾಡುತ್ತಿದ್ದೀರಿ. ಪುತ್ರಿಯರನ್ನು, ಸಹೋದರಿಯರನ್ನು ಮತ್ತು ಪತ್ನಿಯರನ್ನು 'ಮೇಡಮ್'ಗಳನ್ನಾಗಿ ಪರಿವರ್ತಿಸಿ ಮೆರೆಸುತ್ತಲೂ ಇದ್ದೀರಿ. ಮಕ್ಕಳಿಗೆ ಭೌತಿಕ ಶಿಕ್ಷಣ ಕೊಡಲಾಗುತ್ತದೆ. ಗಾಂಧೀಜಿಯವರ ಅನುಕರಣೆಯೂ ನಡೆಯುತ್ತಿದೆ. ಲೆನಿನ್‌ನ ಗುಣಗಾನ ವನ್ನೂ ಮಾಡಲಾಗುತ್ತದೆ. ಒಟ್ಟಿನಲ್ಲಿ ನಮ್ಮ ಮುಸ್ಲಿಮ್ ಬಂಧುಗಳು ಈ ಗಡಿಯಾರದ ಚೌಕಟ್ಟಿನೊಳಗೆ ತಂದು ತುಂಬದಿರುವ ಯಾವ ಇಸ್ಲಾಮೇತರ ವಸ್ತುವೂ ಇಲ್ಲ.

ಅನಿರೀಕ್ಷಿತ ಪರಿಣಾಮ

ಈ ಎಲ್ಲಾ ಅವಾಂತರಗಳನ್ನೆಸಗಿಯೂ ಕೀ ಕೊಡುವಾಗ ಗಡಿಯಾರ ಚಲಿಸಬೇಕೆಂದೂ ಅದರ ರಚನೆಯ ಉದ್ದೇಶವನ್ನು ಅದು ಈಡೇರಿಸಬೇಕೆಂದೂ ಇದಕ್ಕೆ ನಿಶ್ಚಯಿಸಲಾದ ಶುಚಿಮಾಡುವ, ಎಣ್ಣೆಬಿಡುವ, ಬಿಚ್ಚಿ ಪುನಃ ಜೋಡಿಸುವ ಕಾರ್ಯಗಳಿಂದ ನಿಶ್ಚಿತ ಫಲ

ಸಿಗಬೇಕೆಂದೂ ನೀವು ಬಯಸುತ್ತೀರಿ. ಆದರೆ ನೀವು ಸ್ವಲ್ಪ ಯೋಚಿಸಿದರೆ, ಜೀವಮಾನವಿಡೀ ಅದಕ್ಕೆ ಕೀ ಕೊಟ್ಟರೂ ಶುಚಿ ಮಾಡಿದರೂ, ಎಣ್ಣೆ ಬಿಟ್ಟರೂ ಯಾವ ಪರಿಣಾಮವೂ ಉಂಟಾಗದೆಂಬುದನ್ನು ಅತಿ ಸುಲಭವಾಗಿ ತಿಳಿದುಕೊಳ್ಳಬಲ್ಲಿರಿ. ನೀವು ಆ ಗಡಿಯಾರಕ್ಕೆ ತಂದೊಡ್ಡಿದ ದುರವಸ್ಥೆಯನ್ನು ಗಮನಿಸಿದರೆ, ನೀವು ಹೊರಗಿನಿಂದ ತಂದು ಬಿಗಿದ ಅನ್ಯ ಯಂತ್ರ ಭಾಗಗಳನ್ನು ಆರಂಭದಲ್ಲಿ ತಂದು ಇರಿಸಿದ್ದ ಕ್ರಮದಲ್ಲೇ ಜೋಡಿಸಿ ಬಿಗಿಯದೆ ಇದ್ದರೆ ಈ ಹಿಂದೆ ಅದರಿಂದ ಸಿಗುತ್ತಿದ್ದ ಪ್ರಯೋಜನಗಳು ಈಗ ಸಿಗಬಹುದೆಂದು ನಿರೀಕ್ಷಿಸಬೇಡಿರಿ.

ಆರಾಧನಾ ಕರ್ಮಗಳು ಪರಿಣಾಮಕಾರಿಯಾಗದಿರಲು ಮೂಲ ಕಾರಣ

ನಿಮ್ಮ ನಮಾಝ್, ಉಪವಾಸ, ಝಕಾತ್ ಮತ್ತು ಹಜ್ಜ್ ಕರ್ಮಗಳು ಪರಿಣಾಮಕಾರಿ ಯಾಗದಿರಲು ಇದೇ ಕಾರಣವೆಂಬುದನ್ನು ನೀವು ಚೆನ್ನಾಗಿ ತಿಳಿದುಕೊಳ್ಳಿರಿ. ಒಂದನೆಯದಾಗಿ ನಿಮ್ಮಲ್ಲಿ ನಮಾಝ್ ಮಾಡುವವರು, ಉಪವಾಸವಿಡುವವರು, ಝಕಾತ್ ಕೊಡುವವರು ಮತ್ತು ಹಜ್ಜ್ ಕರ್ಮ ನೆರವೇರಿಸುವವರು ಎಷ್ಟು ಮಂದಿ ಇದ್ದಾರೆ? ಜಮಾಅತ್ (ಸಂಘಟನೆ) ಶಿಥಿಲ ವಾಗಿರುವ ಕಾರಣ ಪ್ರತಿಯೊಬ್ಬನೂ ಸ್ವೇಚ್ಛಾಚಾರಿಯಾಗಿದ್ದಾನೆ. ಈ ಕಡ್ಡಾಯ ವಿಧಿಗಳನ್ನು ನೆರವೇರಿಸಿದರೂ, ನೆರವೇರಿಸದಿದ್ದರೂ ಯಾರೂ ಕೇಳುವವರಿಲ್ಲ. ಇನ್ನು ಅವುಗಳನ್ನು ಯಾರು ನೆರವೇರಿಸುತ್ತಾರೋ ಅವರ ಅವಸ್ಥೆಯೇನು? ನಮಾಝ್‌ನಲ್ಲಿ ಜಮಾಅತ್‌ನ ಪಾಲನೆ ಇಲ್ಲ. ಎಲ್ಲಾದರೂ ಜಮಾಅತ್ ವ್ಯವಸ್ಥೆ ಇದ್ದರೂ ಲೋಕದಲ್ಲಿ ಬೇರಾವ ಕೆಲಸಕ್ಕೂ ಬಾರದಂತಹ ವ್ಯಕ್ತಿಗಳನ್ನು ಇಮಾಮತ್ (ನಾಯಕತ್ವ)ಗಾಗಿ ಆಯ್ಕೆ ಮಾಡಲಾಗುತ್ತದೆ. ನಿಮ್ಮನ್ನು ದೇವ ಪ್ರತಿನಿಧಿಯನ್ನಾಗಿಯೂ ದೇವಭಟರನ್ನಾಗಿಯೂ ಮಾಡತಕ್ಕ ನಮಾಝ್‌ನ ಇಮಾಮತ್‌ನ ಸ್ಥಾನಕ್ಕೆ ಮಸೀದಿಯ ಸೊತ್ತನ್ನು ಕಬಳಿಸುವ, ಧಾರ್ಮಿಕ ವಿಧಿಗಳನ್ನು ಸಂಪಾದನೆಯ ಸಾಧನ ವನ್ನಾಗಿ ಮಾಡಿಕೊಳ್ಳುವ ತಿಳಿಗೇಡಿ ಅಶಿಕ್ಷಿತರನ್ನು, ಪುಕ್ಕರನ್ನು ಹಾಗೂ ಚಾರಿತ್ರ್ಯ ಹೀನರನ್ನು ನೇಮಿಸುತ್ತೀರಿ. ಇದೇ ರೀತಿಯಲ್ಲಿ ಉಪವಾಸ, ಝಕಾತ್ ಮತ್ತು ಹಜ್ಜ್ ಕರ್ಮಗಳ ಅವಸ್ಥೆಯೂ ಚಿಂತಾಜನಕವಾಗಿದೆ. ಪರಿಸ್ಥಿತಿ ಇಷ್ಟು ಹದಗೆಟ್ಟಿದ್ದರೂ ಈಗಲೂ ತಮ್ಮ ಕರ್ತವ್ಯವನ್ನು ಚೆನ್ನಾಗಿ ನೆರವೇರಿಸುವ ಮುಸ್ಲಿಮರು ಖಂಡಿತ ಇದ್ದಾರೆಂದು ನೀವು ಹೇಳಬಹುದು. ಆದರೆ, ನಾನು ಈ ಹಿಂದೆ ಹೇಳಿದ್ದೇನೆ. ಗಡಿಯಾರದ ಯಂತ್ರಭಾಗಗಳನ್ನು ಬೇರ್ಪಡಿಸಿ ಅದರಲ್ಲಿ ಹೊರಗಿನ ಅನೇಕ ಭಾಗಗಳನ್ನು ಜೋಡಿಸಿರುವಾಗ ನೀವು ಕೀ ಕೊಟ್ಟರೂ, ಕೊಡದಿದ್ದರೂ, ಶುಚಿ ಮಾಡಿದರೂ ಮಾಡದಿದ್ದರೂ ಎಣ್ಣೆ ಬಿಟ್ಟರೂ ಬಿಡದಿದ್ದರೂ ಪ್ರಯೋಜನವಿಲ್ಲ; ನಿಮ್ಮ ಈ ಗಡಿಯಾರವು ದೂರದಿಂದ ಗಡಿಯಾರದಂತೆ

ತೋರುತ್ತದೆ. ದೂರದಿಂದ ನೋಡುವಾತನು ಇದನ್ನು ಇಸ್ಲಾಮ್ ಎಂದೂ ನಿಮ್ಮನ್ನು ಮುಸ್ಲಿಮರೆಂದೂ ಹೇಳುತ್ತಾರೆ. ನೀವು ಈ ಗಡಿಯಾರಕ್ಕೆ ಕೀ ಕೊಡುವಾಗಲೂ ಶುಚಿ ಮಾಡುವಾಗಲೂ, ದೂರದಿಂದ ನೋಡುವಾತನು ನೀವು ನಿಜವಾಗಿ ಕೀ ಕೊಟ್ಟು ಶುಚಿ ಮಾಡುತ್ತೀರೆಂದೇ ಭಾವಿಸುತ್ತಾನೆ. ಈ ನಮಾಝ್ ನೈಜ ನಮಾಝ್ ಅಲ್ಲವೆಂದು ಯಾರೂ ಹೇಳುವುದಿಲ್ಲ. ಆದರೆ ಈ ತೋರಿಕೆಯ ಚೌಕಟ್ಟಿನೊಳಗೆ ಏನೆಲ್ಲಾ ಅವಾಂತರ ನಡೆದಿದೆ ಎಂಬುದು ನೋಡುವವರಿಗೇನು ಗೊತ್ತು?

ನಮ್ಮ ಕಳವಳಕಾರಿ ಸ್ಥಿತಿ

ಮುಸ್ಲಿಮ್ ಬಂಧುಗಳೇ, ನಿಮ್ಮ ಧಾರ್ಮಿಕ ಆಚಾರಗಳೆಲ್ಲಾ ಏಕೆ ನಿಷ್ಫಲವಾಗುತ್ತವೆ? ನೀವು ನಮಾಝ್ ಮತ್ತು ಉಪವಾಸ ಕರ್ಮಗಳನ್ನು ನಿರ್ವಹಿಸಿಯೂ ದೇವ ಸೈನಿಕರಾಗುವ ಬದಲು ಮಿಥ್ಯವಾದಿಗಳ ಕಪಿ ಮುಷ್ಟಿಗೆ ಸಿಲುಕಲು, ಪ್ರತಿಯೊಬ್ಬ ಅಕ್ರಮಿಯ ಮರ್ದನಕ್ಕೆ ಬಲಿಯಾಗಲು, ನಿಜವಾದ ಕಾರಣವೇನೆಂಬುದನ್ನು ತೋರಿಸಿದ್ದೇನೆ. ಆದರೆ, ನೀವು ಬೇಸರಗೊಳ್ಳದಿದ್ದರೆ, ನಿಮಗೆ ಇದಕ್ಕಿಂತಲೂ ಅಧಿಕ ದುಃಖದಾಯಕ ವೃತ್ತಾಂತವನ್ನು ತಿಳಿಸುವೆನು. ನಿಮಗೆ ಈ ದುರ್ಗತಿಯ ಬಗ್ಗೆ ವ್ಯಥೆ ಮತ್ತು ಅರಿವು ಇರುವುದು ನಿಜ. ಆದರೆ, ನಿಮ್ಮ ಪೈಕಿ 1000ದಲ್ಲಿ 999ಕ್ಕಿಂತಲೂ ಅಧಿಕ ಮಂದಿ ಈ ದುರವಸ್ಥೆಯನ್ನು ಬದಲಿಸಲಿಕ್ಕೆ ಬೇಕಾದ ಸೂಕ್ತ ಕ್ರಮ ಕೈಗೊಳ್ಳಲು ಸಿದ್ಧರಿಲ್ಲ. ಇಸ್ಲಾಮ್ ಎಂಬ ಈ ಗಡಿಯಾರದೊಳಗಿನ ಮೂಲ ಯಂತ್ರ ಭಾಗಗಳ ಬದಲು ಪ್ರತಿಯೊಬ್ಬನು ತನಗಿಷ್ಟ ಬಂದ ಪ್ರಕಾರ ಜೋಡಿಸಿದ ಇತರ ಯಂತ್ರಭಾಗಗಳನ್ನು ಕಿತ್ತು ಅದನ್ನು ಮೂಲ ರೂಪದಲ್ಲಿ ಇದ್ದಂತೆ ಪುನಃ ಜೋಡಿಸು ವುದನ್ನು ಅವರಿಗೆ ಸಹಿಸಲಾಗುವುದಿಲ್ಲ. ಏಕೆಂದರೆ, ಹೊರಗಿನಿಂದ ತಂದ ಇತರ ಯಂತ್ರ ಭಾಗಗಳನ್ನು ಕೀಳುವಾಗ, ಅವರ ಮೆಚ್ಚುಗೆಯ ವಸ್ತುಗಳೂ ಕೀಳಲ್ಪಡುತ್ತವೆ. ಇತರರ ಮೆಚ್ಚುಗೆಯ ವಸ್ತುಗಳನ್ನು ಕೀಳುವುದು ಮತ್ತು ನೀವು ತಂದು ಜೋಡಿಸಿದ ವಸ್ತುಗಳನ್ನು ಹಾಗೇ ಬಿಡುವುದು ಸರಿಯಲ್ಲ ತಾನೆ. ಅದೇ ರೀತಿ ಅವುಗಳನ್ನು ಮೊದಲಿನಂತೆ ಬಿಗಿದಾಗ ಎಲ್ಲರೂ ಬಿಗಿಯಲ್ಪಡುತ್ತಾರೆ. ಆದರೆ ನಿಮ್ಮನ್ನು ಬಿಗಿಯ ಬಾರದೆಂದರೆ ಅದೂ ಅಸಾಧ್ಯ. ನೀವು ಬಿಗಿಯಲ್ಪಟ್ಟರೆ, ಎಲ್ಲರೂ ಬಿಗಿಯಲ್ಪಡುತ್ತಾರೆ. ಇದನ್ನು ಆತ್ಮ ಸಂತೋಷದಿಂದ ಸಹಿಸಿ ಕೊಳ್ಳುವುದು ಅತ್ಯಂತ ಪ್ರಯಾಸಕರ. ಆದ್ದರಿಂದ ಈ ಗಡಿಯಾರವು ಯಥಾವತ್ತಾಗಿ ಗೋಡೆಯ ಅಲಂಕಾರ ವಸ್ತುವಾಗಿಯೇ ಇರಲಿ; ದೂರದ ಜನರನ್ನು ಕರೆತಂದು ಅದರ ದರ್ಶನ ಮಾಡಿಸಿ ಅದರಲ್ಲಿರುವ ಪವಾಡಗಳನ್ನು ತೋರಿಸಿದರಾಯಿತೆಂದು ಅವರು ಭಾವಿಸುತ್ತಾರೆ. ಈ ಗಡಿಯಾರ

ವನ್ನು ಇನ್ನಷ್ಟು ಗೌರವಿಸುವವರು ಅದು ಇರುವ ಸ್ಥಿತಿಯಲ್ಲೇ ಕೀ ಕೊಟ್ಟು ಶುಚಿ ಮಾಡಿದರೆ ಸಾಕೆಂದು ಭಾವಿಸುತ್ತಾರೆ. ಆದರೆ ಇದರ ನಿಜವಾದ ಯಂತ್ರ ಭಾಗಗಳನ್ನು ಜೋಡಿಸುವುದು ಮತ್ತು ಹೊರಗಿನಿಂದ ತಂದು ಜೋಡಿಸಿದ ಯಂತ್ರಭಾಗಗಳನ್ನು ಕಿತ್ತೊಗೆಯುವುದು ಅಗತ್ಯ. ವೆಂದು ಅವರು ಮನಗಾಣದಿರುವುದು ಅತ್ಯಂತ ಖೇದಕರ!

ನಿಮ್ಮೊಂದಿಗೆ ನಾನೂ ತಲೆದೂಗುತ್ತಿದ್ದೆ. ಆದರೇನು ಮಾಡಲಿ? ನನಗೆ ತಿಳಿದಿರುವುದರ ವಿರುದ್ಧ ಹೇಳಲಾರೆ. ನೀವು ಈ ದುರವಸ್ಥೆಯಲ್ಲಿ ಐದು ಹೊತ್ತುಗಳ ಕಡ್ಡಾಯ ನಮಾಝ್ ಗಳೊಂದಿಗೆ ತಹಜ್ಜುದ್ (ರಾತ್ರೆ ನಿದ್ದೆಯಿಂದೆದ್ದು ಮಾಡುವ ಐಚ್ಛಿಕ ನಮಾಝ್) ಇಶ್ರಾಕ್ (ಸೂರ್ಯೋದಯವಾದ ಸ್ವಲ್ಪ ಹೊತ್ತಿನ ನಂತರ ಮಾಡುವ ಐಚ್ಛಿಕ ನಮಾಝ್) ಚಾಷ್ತ್ (ಮಧ್ಯಾಹ್ನಕ್ಕೆ ಮುಂಚೆ ಮಾಡುವ ಐಚ್ಛಿಕ ನಮಾಝ್- ದುಹಾ)ಗಳನ್ನು ಮಾಡಿದರೂ, ದಿನಂಪ್ರತಿ ಐದು ತಾಸುಗಳ ತನಕ ಕುರ್‌ಆನ್ ಪಾರಾಯಣಗೈದರೂ, ರಮಝಾನ್‌ನ ಹೊರತು ಇತರ ಹನ್ನೊಂದು ತಿಂಗಳುಗಳಲ್ಲಿ ಐದುವರೆ ತಿಂಗಳುಗಳ ಅಧಿಕ ಉಪವಾಸ ವ್ರತವನ್ನಾಚರಿಸಿದರೂ ಏನೂ ಪ್ರಯೋಜನವಿಲ್ಲ. ಗಡಿಯಾರದೊಳಗೆ ಅದರದೇ ಆದ ಯಂತ್ರ ಭಾಗಗಳನ್ನು ಇರಿಸಿ ಜೋಡಿಸಿದರೆ, ಸ್ವಲ್ಪ ಕೀ ಕೊಟ್ಟರೂ ಅಲ್ಪ ಶುಚಿ ಮಾಡಿದರೂ ಒಂದಿಷ್ಟು ಎಣ್ಣೆ ಬಿಟ್ಟರೂ ಪ್ರಯೋಜನ ಸಿಗಬಹುದು. ಇಲ್ಲವಾದರೆ ಜೀವಮಾನವಿಡೀ ಕೀ ಕೊಡುತ್ತಲಿದ್ದರೂ ಗಡಿಯಾರ ನಡೆಯಲಾರದು.

وَمَا عَلَيْنَا إِلَّا الْبَلَاغُ

❖❖❖

ಅಧ್ಯಾಯ -4

ಉಪವಾಸ ವ್ರತ

○

- ಉಪವಾಸ ವ್ರತ
  - ಉಪವಾಸ ವ್ರತ ನೈಜ ಉದ್ದೇಶ

○

ಉಪವಾಸ ವ್ರತ

ಎಲ್ಲಾ ಸಮುದಾಯಗಳ ಮೇಲೆ ಉಪವಾಸ ವ್ರತ ಕಡ್ಡಾಯಗೊಳಿಸಲಾಗಿತ್ತು

ಮುಸ್ಲಿಮ್ ಬಂಧುಗಳೇ,

ಅಲ್ಲಾಹನು ನಿಮ್ಮ ಮೇಲೆ ಕಡ್ಡಾಯಗೊಳಿಸಿದ ಇನ್ನೊಂದು ಇಬಾದತ್ 'ಉಪವಾಸ ವ್ರತ'ವಾಗಿದೆ. ಮುಂಜಾವಿನಿಂದ ಸಂಜೆಯ ತನಕ ಆಹಾರ, ಪಾನೀಯ, ಸಂಭೋಗಾದಿಗಳ ವರ್ಜನೆಗೆ ಉಪವಾಸ ವ್ರತವೆನ್ನುತ್ತಾರೆ. ನಮಾಝ್‌ನಂತೆಯೇ ಈ ಇಬಾದತ್ ಕೂಡಾ ಆದಿಯಿಂದಲೇ ಎಲ್ಲಾ ಪ್ರವಾದಿಗಳ ಧರ್ಮಶಾಸ್ತ್ರಗಳಲ್ಲಿ ಕಡ್ಡಾಯಗೊಳಿಸಲಾಗಿದೆ. ಹಝ್ರತ್ ಮುಹಮ್ಮದ್‌ರವರ(ಸ) ಸಮುದಾಯದವರಾಗಿರುವ ನಾವು ಉಪವಾಸ ವ್ರತವನ್ನಾಚರಿಸುವಂತೆಯೇ ಗತ ಪ್ರವಾದಿಗಳ ಸಮುದಾಯಗಳೂ ಆಚರಿಸುತ್ತಿದ್ದುವು. ಆದರೆ ಉಪವಾಸ ವ್ರತದ ವಿಧಿ ವಿಧಾನಗಳು, ಉಪವಾಸದ ದಿನಗಳು ಮತ್ತು ಅದರ ಕಾಲ ಇತ್ಯಾದಿ ವಿಷಯಗಳಲ್ಲಿ ಧರ್ಮಶಾಸ್ತ್ರಗಳಲ್ಲಿ ವ್ಯತ್ಯಾಸಗಳಿರುತ್ತಿದ್ದುವು. ಜನರು ಇದರಲ್ಲಿ ಹಲವಾರು ವಿಷಯಗಳನ್ನು ತಮ್ಮ ಕಡೆಯಿಂದ ಸೇರಿಸಿ ಅದರ ರೂಪುಗೆಡಿಸಿ ಬಿಟ್ಟಿದ್ದರು. ಆದರೆ ಇಂದಿಗೂ ಇತರ ಮತಗಳಲ್ಲಿ ಉಪವಾಸ ವ್ರತ ಯಾವುದಾದರೊಂದು ರೂಪದಲ್ಲಿರುವುದನ್ನು ನಾವು ಕಾಣುತ್ತೇವೆ. ಪವಿತ್ರ ಕುರ್‌ಆನಿನಲ್ಲಿ -

يَٰٓأَيُّهَا ٱلَّذِينَ ءَامَنُوا۟ كُتِبَ عَلَيْكُمُ ٱلصِّيَامُ كَمَا كُتِبَ عَلَى ٱلَّذِينَ
مِن قَبْلِكُمْ

"ಓ ಸತ್ಯವಿಶ್ವಾಸಿಗಳೇ, ಗತ ಪ್ರವಾದಿಗಳ ಅನುಯಾಯಿಗಳಿಗೆ ಕಡ್ಡಾಯಗೊಳಿಸಿದ್ದಂತೆಯೇ ನಿಮ್ಮ ಮೇಲೂ ಉಪವಾಸ ವ್ರತವನ್ನು ಕಡ್ಡಾಯಗೊಳಿಸಲಾಗಿದೆ" (2: 183) ಎಂಬ ಆದೇಶವಿದೆ. ಅಲ್ಲಾಹನ ವತಿಯಿಂದ ಬಂದ ಧರ್ಮಶಾಸ್ತ್ರಗಳು ಯಾವ ಕಾಲದಲ್ಲೂ ಉಪವಾಸದ ಇಬಾದತ್‌ನಿಂದ ಬರಿದಾಗಿರಲಿಲ್ಲವೆಂದು ಇದರಿಂದ ವ್ಯಕ್ತವಾಗುತ್ತದೆ.

ಉಪವಾಸ ವ್ರತವನ್ನು ಯಾಕೆ ಕಡ್ಡಾಯಗೊಳಿಸಲಾಯಿತು?

ಜೀವನೋದ್ದೇಶ- ಪ್ರಭುವಿನ ದಾಸ್ಯ-ಅನುಸರಣೆ

ಅಲ್ಲಾಹನು ಉಪವಾಸವೆಂಬ ಇಬಾದತನ್ನು ಎಲ್ಲಾ ಕಾಲಗಳಲ್ಲೂ ಕಡ್ಡಾಯ ಗೊಳಿಸಿರಲು ಕಾರಣವೇನಿರಬಹುದೆಂಬುದರ ಬಗ್ಗೆ ಊಹಿಸಿರಿ.

ಮಾನವನ ಸಂಪೂರ್ಣ ಜೀವನವನ್ನು ಅಲ್ಲಾಹನ ಇಬಾದತನ್ನಾಗಿ ಪರಿವರ್ತಿಸುವುದೇ ಇಸ್ಲಾಮ್‌ನ ನಿಜವಾದ ಉದ್ದೇಶವೆಂದು ಹಿಂದೆ ಅನೇಕ ಸಲ ವಿವರಿಸಿರುತ್ತೇನೆ. ಮಾನವನು 'ಅಬ್ದ್' ಅರ್ಥಾತ್ ದಾಸನಾಗಿ ಜನಿಸಿದ್ದಾನೆ. ದಾಸ್ಯ ಅಥವಾ ಆರಾಧನೆಯೇ ಅವನ ಸಹಜ ಪ್ರಕೃತಿ. ಆದುದರಿಂದ ಇಬಾದತ್ ಅರ್ಥಾತ್ ವಿಚಾರ-ಆಚಾರಗಳಲ್ಲಿ ಒಂದು ಘಳಿಗೆಯ ಮಟ್ಟಿಗಾದರೂ ಅವನು ದಾಸ್ಯ ಮುಕ್ತನಾಗಿರಬಾರದು. ಅವನು ತನ್ನ ಜೀವನದ ಎಲ್ಲಾ ವ್ಯವಹಾರ ಗಳಲ್ಲೂ, ಅಲ್ಲಾಹನ ಮೆಚ್ಚುಗೆ ಮತ್ತು ಸಂಪ್ರೀತಿ ಯಾವುದರಲ್ಲಿದೆ ಹಾಗೂ ಅವನ ಕ್ರೋಧ ಮತ್ತು ಅಪ್ರಸನ್ನತೆ ಯಾವುದರಲ್ಲಿದೆ ಎಂಬುದನ್ನು ನೋಡುತ್ತಿರಬೇಕು. ಆ ಬಳಿಕ ಅವನ ಮೆಚ್ಚುಗೆಯ ಕಡೆಗೆ ಸಾಗಬೇಕು. ಅವನ ಅಪ್ರಸನ್ನತೆ ಹಾಗೂ ಕ್ರೋಧವಿರುವ ಕಾರ್ಯಗಳಿಂದ, ಉರಿಯುವ ಕೆಂಡಗಳಿಂದ ದೂರ ಸರಿಯುವಂತೆ, ಸರಿಯಬೇಕು. ಅಲ್ಲಾಹನು ಮೆಚ್ಚುವ ಪದ್ಧತಿಯಂತೆ ನಡೆಯಬೇಕು ಮತ್ತು ಅವನು ಮೆಚ್ಚದ ಪದ್ಧತಿಯಿಂದ ದೂರವಿರಬೇಕು. ಒಬ್ಬನ ಇಡೀ ಜೀವನವು ಈ ವರ್ಣವನ್ನು ಹೊಂದಿದಾಗ ಅವನು-

وَمَا خَلَقْتُ الْجِنَّ وَالْإِنسَ إِلَّا لِيَعْبُدُونِ ۝

"ನಾನು ಯಕ್ಷಗಳನ್ನೂ ಮನುಷ್ಯರನ್ನೂ ಸೃಷ್ಟಿಸಿರುವುದು ನನ್ನ ದಾಸ್ಯ ಮತ್ತು ಆರಾಧನೆ ಗಾಗಿಯೇ ಹೊರತು ಬೇರಾವುದೇ ಕಾರ್ಯಕ್ಕಾಗಿ ಅಲ್ಲ" ಎಂಬ ತನ್ನೊಡೆಯನ ಉದ್ದೇಶವನ್ನು ಪೂರ್ತಿಗೊಳಿಸಿದನೆಂದೂ ತಿಳಿದುಕೊಳ್ಳಿರಿ.

ಆರಾಧನಾ ಕರ್ಮಗಳು- ದಾಸ್ಯ-ಅನುಸರಣೆಯ ತರಬೇತಿ

ನಮಾಝ್, ಉಪವಾಸ ವ್ರತ, ಹಜ್ಜ್ ಯಾತ್ರೆ ಮತ್ತು ಝಕಾತ್‌ಗಳ ಹೆಸರಲ್ಲಿ ನಮ್ಮ ಮೇಲೆ ಕಡ್ಡಾಯಗೊಳಿಸಲಾಗಿರುವ ಇಬಾದತ್‌ಗಳ ನಿಜವಾದ ಉದ್ದೇಶವು ಆ ಮಹಾ ಇಬಾದತ್‌ಗಾಗಿ ಅಣಿಗೊಳಿಸುವುದೆಂಬುದನ್ನು ವಿವರಿಸಿರುತ್ತೇನೆ. ನೀವು ದಿನಕ್ಕೈದಾವರ್ತಿ ನಮಾಝ್‌ನಲ್ಲಿ ರುಕೂಅ್ ಮತ್ತು ಸುಜೂದ್ ಮಾಡಿಕೊಂಡಾಗ, ರಮಝಾನ್ ತಿಂಗಳಿಡೀ ಮುಂಜಾವಿನಿಂದ ಸಂಜೆಯ ತನಕ ಹಸಿವು ದಾಹಗಳನ್ನು ಸಹಿಸಿಕೊಂಡಾಗ, ಧನಿಕರಾಗಿದ್ದರೆ ವರ್ಷದಲ್ಲೊಮ್ಮೆ ಝಕಾತ್ ಕೊಟ್ಟಾಗ ಮತ್ತು ಜೀವಮಾನದಲ್ಲೊಂದು ಸಲ ಹಜ್ಜ್ ಯಾತ್ರೆಯನ್ನು ಕೈಗೊಂಡಾಗ ನಿಮ್ಮ ಮೇಲೆ ಇರುವ ಅಲ್ಲಾಹನ ಹಕ್ಕು ತೀರಿತೆಂದೂ, ಇನ್ನು ನೀವು ನಿಮ್ಮಿಚ್ಛೆಯಂತೆ ನಡೆಯಲು ಸ್ವತಂತ್ರರೆಂದೂ ಅವುಗಳನ್ನು ನಿಮಗೆ ಕಡ್ಡಾಯ

ಗೊಳಿಸಲಾಗಿಲ್ಲ. ಅವುಗಳ ಮೂಲಕ ಮಾನವನ ತರಬೇತಿಯಾಗಬೇಕು ಮತ್ತು ಅವನ ಇಡೀ ಜೀವನವೇ ಅಲ್ಲಾಹನ ಇಬಾದತ್ ಆಗಿ ಮಾರ್ಪಡಬೇಕೆಂದು ಈ ಇಬಾದತ್‌ಗಳನ್ನು ಕಡ್ಡಾಯಗೊಳಿಸಲಾಗಿದೆ. ಈ ಉದ್ದೇಶವನ್ನು ಮುಂದಿರಿಸಿಕೊಂಡು ಉಪವಾಸ ವ್ರತವು ಮಾನವನನ್ನು ಆ ಮಹಾ ಇಬಾದತ್‌ಗಾಗಿ ಹೇಗೆ ಅಣಿಗೊಳಿಸುತ್ತದೆಂಬುದನ್ನು ನೋಡೋಣ-

ಉಪವಾಸ ಒಂದು ಪ್ರಾಯೋಗಿಕ ಆರಾಧನಾ ಕರ್ಮ

ಉಪವಾಸದ ಹೊರತು ಇತರ ಎಲ್ಲಾ ತರದ ಇಬಾದತ್‌ಗಳು ಯಾವುದಾದರೊಂದು ರೀತಿಯ ಬಾಹ್ಯ ಆಚಾರಗಳೊಂದಿಗೆ ನೆರವೇರಿಸಲ್ಪಡುತ್ತವೆ.

ಉದಾ:- ನಮಾಝ್‌ನಲ್ಲಿ ಒಬ್ಬನು ನಿಲ್ಲುವುದನ್ನು, ಕೂರುವುದನ್ನು, ಬಾಗುವುದನ್ನು ಮತ್ತು ಸಾಷ್ಟಾಂಗವೆರಗುವುದನ್ನು ಇತರರು ಕಾಣುತ್ತಾರೆ. ಹಜ್ಜ್ ಯಾತ್ರೆಯಲ್ಲಿ ಒಂದು ದೀರ್ಘ ಪ್ರಯಾಣ ಕೈಗೊಳ್ಳಲಾಗುತ್ತದೆ. ಈ ಪ್ರಯಾಣವು ಸಾವಿರಾರು ಅಥವಾ ಲಕ್ಷಾವಧಿ ಜನರೊಂದಿಗೆ ಸಾಗುತ್ತದೆ. ಝಕಾತನ್ನು ಕನಿಷ್ಠಪಕ್ಷ ಒಬ್ಬನು ಕೊಡುತ್ತಾನೆ, ಇನ್ನೊಬ್ಬನು ಪಡೆಯುತ್ತಾನೆ. ಈ ಎಲ್ಲಾ ಇಬಾದತ್‌ಗಳ ಸ್ಥಿತಿ ರಹಸ್ಯವಾಗಿರಲು ಸಾಧ್ಯವೇ ಇಲ್ಲ. ನೀವು ಅವುಗಳನ್ನು ಮಾಡಿದರೂ ಇತರರಿಗೆ ತಿಳಿಯುತ್ತದೆ. ಮಾಡದಿದ್ದಾಗಲೂ ಜನರ ತಿಳುವಳಿಕೆಗೆ ಬರುತ್ತದೆ. ಇದಕ್ಕೆ ತೀರಾ ವ್ಯತಿರಿಕ್ತವಾಗಿ, ಉಪವಾಸವೆಂಬ ಇಬಾದತ್‌ನ ಸ್ಥಿತಿಯ ನಿಜವಾದ ಅರಿವು ದೇವನಿಗೆ ಮತ್ತು ದಾಸನಿಗೆ ಹೊರತು ಇನ್ನೊಬ್ಬನಿಗೆ ಆಗುವುದಿಲ್ಲ. ಒಬ್ಬನು ಎಲ್ಲರೆದುರು ಸಹ್ರೀ(ಉಪವಾಸ ಮಾಡುವುದರ ಮುಂಚೆ ಮಾಡುವ ಭೋಜನ) ಉಂಡು, ಇಫ್ತಾರ್ (ಪಾರಣೆ)ವರೆಗೆ ಪ್ರತ್ಯಕ್ಷವಾಗಿ ಏನನ್ನೂ ತಿನ್ನದೆ, ಕುಡಿಯದೆ, ಮರೆಯಲ್ಲಿ ನೀರು ಕುಡಿದರೆ ಅಥವಾ ಅಡಗಿಕೊಂಡು ಉಂಡರೆ ಅದು ಅಲ್ಲಾಹನ ಹೊರತು ಬೇರಾರಿಗೂ ತಿಳಿಯದು. ಎಲ್ಲರೂ ಅವನನ್ನು ಉಪವಾಸಿಗನೆಂದೇ ಭಾವಿಸುವರು. ಆದರೆ ಅವನಿಗೆ ಉಪವಾಸವಿಲ್ಲದಿರಬಹುದು.

ಉಪವಾಸ ವ್ರತ - ಸತ್ಯವಿಶ್ವಾಸದ ದೃಢತೆಯ ಸಂಕೇತ

ಉಪವಾಸದ ಈ ನೆಲೆಯನ್ನು ಗಮನದಲ್ಲಿಟ್ಟುಕೊಂಡು, ನಿಜವಾಗಿಯೂ ಒಬ್ಬನು ಉಪವಾಸವಿದ್ದು ಮರೆಯಲ್ಲಿ ತಿನ್ನದೆ, ಕುಡಿಯದೆ, ಸುಡು ಬೇಸಗೆ ದಿನಗಳಲ್ಲಿ ಬಾಯಾರಿ ಗಂಟಲ ಪಸೆ ಆರಿ ಹೋದರೂ ನೀರಿನ ಒಂದು ತೊಟ್ಟನ್ನಾದರೂ ಗಂಟಲಿಗಿಳಿಸದೆ, ಹಸಿವೆಯಿಂದ ಬಳಲಿ ಬೆಂಡಾದರೂ ತಿನ್ನುವ ಇಚ್ಛೆಯನ್ನೇ ಮಾಡದೆ ಇದ್ದರೆ ಅವನಿಗೆ ಅಲ್ಲಾಹನು ಪರೋಕ್ಷಜ್ಞಾನಿ ಆಗಿದ್ದಾನೆ ಎಂಬ ಬಗ್ಗೆ ಎಷ್ಟೊಂದು ಅಚಲ ವಿಶ್ವಾಸವಿದೆ ಎಂಬುದನ್ನು ಊಹಿಸಿರಿ. ಅವನ ವರ್ತನೆಯು ಇಡೀ ಜಗತ್ತಿನಿಂದ ಅಡಗಿದರೂ ಅಲ್ಲಾಹನಿಂದ ಅಡಗಿರಲಾರದೆಂಬುದನ್ನು ಅವನು ಎಷ್ಟು ದೃಢವಾಗಿ ನಂಬಿದ್ದಾನೆ. ಎಂತಹ ಕಠಿಣ ಪರಿಸ್ಥಿತಿ ಬಂದರೂ ಕೇವಲ ಅಲ್ಲಾಹನಿಗೆ ಭಯಪಟ್ಟು ಉಪವಾಸ ಮುರಿದು ಹೋಗಬಹುದಾದ ಯಾವ ಕಾರ್ಯವನ್ನೂ ಮಾಡದಿರಬೇಕಾದರೆ ಅವನಲ್ಲಿ ಅದೆಷ್ಟು ಉನ್ನತ ಮಟ್ಟದ ದೇವ ಭಯವಿರಬೇಕು? ಒಂದು ತಿಂಗಳಲ್ಲಿ ಕನಿಷ್ಠ ಪಕ್ಷ

360 ಘಂಟೆಗಳ ಕಾಲ ಉಪವಾಸವಿದ್ದು, ಈ ಅವಧಿಯಲ್ಲಿ ಒಂದು ಕ್ಷಣಕ್ಕಾದರೂ ಅವನ ಹೃದಯದಲ್ಲಿ ಪರಲೋಕದ ಬಗ್ಗೆ ಚಾಂಚಲ್ಯ ಮತ್ತು ಸಂಶಯವಿಲ್ಲದಿರಬೇಕಾದರೆ ಅವನಿಗೆ ಪರಲೋಕದ ಮೇಲೆ ಅದೆಂತಹ ದೃಢ ವಿಶ್ವಾಸವಿರಬೇಕು! ಆಖಿರತ್ (ಪರಲೋಕ) ಎಂಬುದು ಇದೆಯೇ ಅಲ್ಲಿ ರಕ್ಷೆ-ಶಿಕ್ಷೆಗಳು ಇವೆಯೇ ಎಂಬ ಬಗ್ಗೆ ಅವನಿಗೆ ಸ್ವಲ್ಪವಾದರೂ ಸಂದೇಹವಿರುತ್ತಿದ್ದರೆ, ಅವನು ಖಂಡಿತ ಉಪವಾಸ ಪೂರ್ತಿಗೊಳಿಸುತ್ತಿರಲಿಲ್ಲ. ಸಂಶಯವುಂಟಾದ ಬಳಿಕ ಮನುಷ್ಯನಿಗೆ ದೇವಾಜ್ಞೆಯಂತೆ ಏನನ್ನೂ ತಿನ್ನಬಾರದು, ಕುಡಿಯಬಾರದು ಎಂಬ ವಿಚಾರದಲ್ಲಿ ಸ್ಥಿರವಾಗಿ ನಿಲ್ಲಲು ಎಂದಿಗೂ ಸಾಧ್ಯವಿಲ್ಲ.

ಒಂದು ತಿಂಗಳ ನಿರಂತರ ತರಬೇತಿ

ಹೀಗೆ ಅಲ್ಲಾಹನು ಪ್ರತೀ ವರ್ಷವೂ ಸಂಪೂರ್ಣ ಒಂದು ತಿಂಗಳ ವರೆಗೆ ಮುಸ್ಲಿಮರ ವಿಶ್ವಾಸವನ್ನು ನಿರಂತರ ಪರೀಕ್ಷೆಗೊಳಪಡಿಸುತ್ತಾನೆ. ಈ ಪರೀಕ್ಷೆಯಲ್ಲಿ ಅವನು ಯಾವ ಮಟ್ಟದ ಸಫಲತೆಯನ್ನು ಪಡೆಯುತ್ತಾ ಬರುತ್ತಾನೋ ಅದೇ ಮಟ್ಟದಲ್ಲಿ ಅವನ ವಿಶ್ವಾಸ ಬಲಗೊಳ್ಳುತ್ತಾ ಬರುತ್ತದೆ. ಹೀಗೆ ಇದು ಪರೀಕ್ಷೆಯ ಪರೀಕ್ಷೆ ಮತ್ತು ತರಬೇತಿಯ ತರಬೇತಿ ಯಾಗಿರುತ್ತದೆ. ನೀವು ಯಾರಲ್ಲಾದರೂ ಒಂದು ಅಮಾನತನ್ನಿರಿಸಲು ಬಯಸಿದಾಗ ಮೊದಲು ಅವನ ಪ್ರಾಮಾಣಿಕತೆಯನ್ನು ಪರೀಕ್ಷಿಸಿಕೊಳ್ಳುತ್ತೀರಿ. ಅವನು ತಕ್ಕನಲ್ಲವೆಂದು ಕಂಡಾಗ ಅವನ ವಶಕ್ಕೆ ಅಮಾನತನ್ನು ಕೊಡುತ್ತೀರಿ. ಆಗ ಅವನಲ್ಲಿ ಅದನ್ನು ವಹಿಸುವ ಸಾಮರ್ಥ್ಯ ಹೆಚ್ಚುತ್ತದೆ. ಅವನು ಇನ್ನಷ್ಟು ಪ್ರಾಮಾಣಿಕನಾಗುತ್ತಾ ಹೋಗುತ್ತಾನೆ. ಇದೇ ರೀತಿಯಲ್ಲಿ ಅಲ್ಲಾಹನೂ ನಿರಂತರ ಒಂದು ತಿಂಗಳ ತನಕ ಪ್ರತಿದಿನ ಹನ್ನೆರಡರಿಂದ ಹದಿನಾಲ್ಕು ಗಂಟೆಗಳ ತನಕ ನಿಮ್ಮ ವಿಶ್ವಾಸದ ಕಠಿಣ ರೀತಿಯ ಪರೀಕ್ಷೆ ನಡೆಸುತ್ತಾನೆ. ನೀವು ಆ ಪರೀಕ್ಷೆ ಯಲ್ಲಿ ಉತ್ತೀರ್ಣರಾದಾಗ ನಿಮ್ಮಲ್ಲಿ ಅಲ್ಲಾಹನನ್ನು ಭಯಪಟ್ಟು, ಪಾಪಕಾರ್ಯಗಳಿಂದ ದೂರವಿರುವ ಶಕ್ತಿ ಇನ್ನಷ್ಟು ವೃದ್ಧಿಸುತ್ತದೆ. ಅಲ್ಲಾಹನನ್ನು ಪರೋಕ್ಷ ಜ್ಞಾನಿಯೆಂದು ತಿಳಿದು, ರಹಸ್ಯವಾಗಿಯೂ ಅವನ ಕಾನೂನುಗಳನ್ನು ಮುರಿಯಲಾರಿರಿ. ನಿಮ್ಮ ಎಲ್ಲಾ ರಹಸ್ಯಗಳೂ ಬಯಲಾಗುವ ಯಾವುದೇ ರಿಯಾಯಿತಿಯಿಲ್ಲದೆ ಒಳಿತಿಗೆ ಪುರಸ್ಕಾರ ಮತ್ತು ಕೆಡುಕಿಗೆ ಶಿಕ್ಷೆ ಸಿಗಲಿರುವ ಕಿಯಾಮತ್‌ನ (ನಿರ್ಣಾಯಕ ದಿನ) ನೆನಪನ್ನು ಸದಾ ಇರಿಸಿಕೊಳ್ಳುವಿರಿ. ಪವಿತ್ರ ಕುರ್‌ಆನ್ ಈ ರೀತಿ ವಿವರಿಸುತ್ತದೆ-

يَٰٓأَيُّهَا ٱلَّذِينَ ءَامَنُوا۟ كُتِبَ عَلَيْكُمُ ٱلصِّيَامُ كَمَا كُتِبَ عَلَى ٱلَّذِينَ

مِن قَبْلِكُمْ لَعَلَّكُمْ تَتَّقُونَ ﴿١٨٣﴾

"ಓ ಸತ್ಯವಿಶ್ವಾಸಿಗಳೇ, ಗತ ಪ್ರವಾದಿಗಳ ಅನುಯಾಯಿಗಳಿಗೆ ಕಡ್ಡಾಯಗೊಳಿಸಿದ್ದಂತೆಯೇ ನಿಮ್ಮ ಮೇಲೂ ಉಪವಾಸ ವ್ರತವನ್ನು ಕಡ್ಡಾಯಗೊಳಿಸಲಾಗಿದೆ. ಇದರಿಂದ ನಿಮ್ಮಲ್ಲಿ ಧರ್ಮನಿಷ್ಠೆಯ ಗುಣವಿಶೇಷವುಂಟಾಗುವುದೆಂದು ಆಶಿಸಲಾಗಿದೆ." (ಅಲ್ ಬಕರಃ 183)

ಅನುಸರಣೆಯ ಸುದೀರ್ಘ ಅಭ್ಯಾಸ

ಉಪವಾಸ ವ್ರತದಲ್ಲಿ ಇನ್ನೊಂದು ವೈಶಿಷ್ಟ್ಯವೂ ಇದೆ. ಅದು ಒಂದು ದೀರ್ಘ ಕಾಲದ ವರೆಗೆ ಶರೀಅತ್‌ನ (ಧರ್ಮಶಾಸ್ತ್ರ) ಅನುಸರಣೆಯನ್ನು ನಿರಂತರವಾಗಿ ಮಾಡಿಸುತ್ತದೆ. ನಮಾಝ್‌ನ ಅವಧಿ ಕೆಲವು ನಿಮಿಷಗಳಿಗಿಂತ ಹೆಚ್ಚಿರುವುದಿಲ್ಲ. 'ಝಕಾತ್' ಸಲ್ಲಿಸುವ ಕಾಲವೂ ವರ್ಷದಲ್ಲಿ ಒಮ್ಮೆ ಮಾತ್ರ ಬರುತ್ತದೆ. 'ಹಜ್ಜ್'ನಲ್ಲೇನೋ ಒಂದು ದೀರ್ಘಕಾಲ ವ್ಯಯ ವಾಗುತ್ತದೆ. ಆದರೆ ಅದು ಜೀವಮಾನದಲ್ಲಿ ಒಮ್ಮೆ ಮಾತ್ರ ಬರುತ್ತದೆ. ಅದೂ ಎಲ್ಲರಿಗಲ್ಲ. ಇವೆಲ್ಲವುಗಳಿಗೆ ವ್ಯತಿರಿಕ್ತವಾಗಿ ಉಪವಾಸವು ಪ್ರತಿ ವರ್ಷವೂ ಒಂದು ತಿಂಗಳ ವರೆಗೆ ರಾತ್ರಿ ಹಗಲು ಇಸ್ಲಾಮೀ ಧರ್ಮಶಾಸ್ತ್ರವನ್ನು ಅನುಸರಿಸುವ ಅಭ್ಯಾಸ ಮಾಡಿಸುತ್ತದೆ. ಪ್ರಭಾತಕ್ಕಿಂತ ಸಾಕಷ್ಟು ಮೊದಲೇ ಸಹ್ರೀಗಾಗಿ ಏಳಬೇಕು. ನಿಶ್ಚಿತ ಸಮಯ ಬಂದೊಡನೆ ಅನ್ನಪಾನೀಯಗಳನ್ನು ನಿಲ್ಲಿಸಬೇಕು. ಹಗಲಿಡೀ ಈ ಕೆಲಸಗಳನ್ನು ಮಾಡಬಹುದು. ಆ ಕೆಲಸಗಳನ್ನು ಮಾಡಬಾರದು. ಸಂಜೆ ಇಷ್ಟು ಹೊತ್ತಿಗೆ ಸರಿಯಾಗಿ ಇಫ್ತಾರ್ (ಉಪವಾಸ ಬಿಡುವುದು) ಮಾಡಬೇಕು. ತರುವಾಯ ಊಟ ಮಾಡಿ ಕೊಂಚ ವಿಶ್ರಮಿಸಬೇಕು. ಆ ಬಳಿಕ ತರಾವೀಹ್ ನಮಾಝ್‌ಗೆ ಹೋಗಬೇಕು. ಹೀಗೆ ವರ್ಷಂಪ್ರತಿ ನಿರಂತರ ಒಂದು ತಿಂಗಳ ವರೆಗೆ ಮುಂಜಾವಿ ನಿಂದ ಸಂಜೆಯ ತನಕ ಮತ್ತು ಸಂಜೆಯಿಂದ ಮುಂಜಾವಿನ ತನಕ ಒಬ್ಬ ಮುಸ್ಲಿಮನನ್ನು ನಿರಂತರವಾಗಿ ಸೈನಿಕನಂತೆ ಶಿಸ್ತು ಮತ್ತು ನಿಯಮ ಪಾಲನೆಯಲ್ಲಿ ಬಿಗಿದಿರಿಸಲಾಗುತ್ತದೆ. ಈ ಒಂದು ತಿಂಗಳಲ್ಲಿ ಪಡೆದ ತರಬೇತಿಯ ಪ್ರಭಾವವು ಅನಂತರದ ಹನ್ನೊಂದು ತಿಂಗಳುಗಳಲ್ಲಿ ಪ್ರಕಟವಾಗುವಂತೆ ಮತ್ತು ಈ ಅವಧಿಯಲ್ಲೇನಾದರೂ ಕುಂದು ಕೊರತೆಗಳು ತಲೆದೋರಿದರೆ, ಮರು ವರ್ಷದ ತರಬೇತಿಯಲ್ಲಿ ನೀಗಿಸುವಂತೆ ಅವನನ್ನು ಬಿಟ್ಟುಬಿಡಲಾಗುತ್ತದೆ.

ತರಬೇತಿಗಾಗಿ ಸೂಕ್ತ ಸಾಮೂಹಿಕ ವಾತಾವರಣ

ಈ ರೀತಿಯ ತರಬೇತಿಗೆ ಒಬ್ಬೊಬ್ಬನನ್ನೇ ಆಯ್ದುಕೊಳ್ಳುವುದು ಸರಿಯಾಗಲಾರದು. ಸೈನಿಕರಿಗೂ ವೈಯಕ್ತಿಕವಾಗಿ ಬೇರೆಬೇರೆ ಕವಾಯಿತು ಮಾಡಿಸಲಾಗುವುದಿಲ್ಲ. ಇಡೀ ಸೈನ್ಯವು ಸಾಮೂಹಿಕವಾಗಿ ಒಮ್ಮೆಲೇ ಕವಾಯಿತು ಮಾಡುವುದನ್ನು ನೀವು ಕಂಡಿರಬಹುದು. ಒಂದೇ ಕಹಳೆಯ ಧ್ವನಿಗೆ ಅವರೆಲ್ಲರೂ ಎದ್ದು ಆ ಧ್ವನಿಗನುಸಾರ ಕೆಲಸ ಮಾಡಬೇಕಾಗುತ್ತದೆ. ಇದು, ಸೈನಿಕರಿಗೆ ಸಾಮೂಹಿಕವಾಗಿ ಒಗ್ಗಟ್ಟಿನಿಂದ ಹೋರಾಡುವ ಅಭ್ಯಾಸವಾಗಬೇಕು, ತರಬೇತಿಯಲ್ಲಿ ಅವರು ಪರಸ್ಪರ ಸಹಾಯಕರಾಗಬೇಕು, ಅರ್ಥಾತ್ ಒಬ್ಬನ ತರಬೇತಿಯಲ್ಲೇನಾದರೂ ಕೊರತೆಯುಂಟಾದರೆ, ಅದನ್ನು ಇನ್ನೊಬ್ಬನೂ, ಅವನ ಕೊರತೆಯನ್ನು ಮತ್ತೊಬ್ಬನೂ ನೀಗಿಸಿ ಕೊಳ್ಳಬೇಕು ಎಂಬ ಕಾರಣಕ್ಕಾಗಿರುತ್ತದೆ. ಇದೇ ಪ್ರಕಾರ ಇಸ್ಲಾಮಿನಲ್ಲಿಯೂ ರಮಝಾನ್ ತಿಂಗಳನ್ನು ಉಪವಾಸವೆಂಬ ಆರಾಧನೆಗಾಗಿ ಆಯ್ಕೆ ಮಾಡಿಕೊಂಡು ಏಕಕಾಲದಲ್ಲಿ ಎಲ್ಲರೂ ಒಟ್ಟಾಗಿ ಉಪವಾಸವಿರಬೇಕೆಂದು ಮುಸ್ಲಿಮರಿಗೆ ಆದೇಶಿಸಲಾಗಿದೆ. ಈ ಆದೇಶವು ವೈಯಕ್ತಿಕ ಇಬಾದತನ್ನು ಸಾಮೂಹಿಕ ಇಬಾದತ್ ಆಗಿ ಮಾಡಿದೆ. ಒಂದು ಎಂಬ ಸಂಖ್ಯೆಯನ್ನು ಲಕ್ಷದಿಂದ

ಗುಣಿಸಿದಾಗ ಒಂದು ಲಕ್ಷವೆಂಬ ಅತಿ ದೊಡ್ಡ ಗುಣಲಬ್ಧವೊದಗುವಂತೆಯೇ ಒಬ್ಬೊಬ್ಬನಾಗಿ ಉಪವಾಸ ಆಚರಿಸುವುದರಿಂದ ಲಭಿಸುವ ನೈತಿಕ ಹಾಗೂ ಆಧ್ಯಾತ್ಮಿಕ ಪ್ರಯೋಜನಗಳು ಲಕ್ಷಾವಧಿ ಮತ್ತು ಕೋಟ್ಯಾವಧಿ ಜನರು ಒಟ್ಟಿಗೆ ಆಚರಿಸುವಾಗ ಲಕ್ಷಾವಧಿ ಮತ್ತು ಕೋಟ್ಯಾವಧಿಪಟ್ಟು ವೃದ್ಧಿಸುತ್ತದೆ. ರಮಝಾನ್ ತಿಂಗಳು ಇಡೀ ವಾತಾವರಣದಲ್ಲಿ ಒಳಿತು ಮತ್ತು ಧರ್ಮನಿಷ್ಠೆಯ ಸ್ಫೂರ್ತಿ ತುಂಬಿ ತುಳುಕುತ್ತದೆ. ಇಡೀ ಸಮುದಾಯದಲ್ಲಿ ಧರ್ಮನಿಷ್ಠೆಯ ಹೊಲವು ಹಚ್ಚ ಹಸಿರಾಗುತ್ತದೆ. ಪ್ರತಿಯೊಬ್ಬನೂ ಪಾಪಗಳಿಂದ ಪಾರಾಗಲು ಶ್ರಮಿಸುತ್ತಾನೆ. ಅವನಲ್ಲೇನಾದರೂ ದೋಷಗಳುಂಟಾದರೆ, ಅವನಂತೆಯೇ ಉಪವಾಸದಿಂದಿರುವ ಇತರ ಸಹೋದರರು ಅದನ್ನು ತಿದ್ದಿಕೊಳ್ಳಲು ಅವನಿಗೆ ಸಹಕಾರಿಗಳಾಗುತ್ತಾರೆ. ಪ್ರತಿಯೊಬ್ಬನೂ ಉಪವಾಸವಿದ್ದುಕೊಂಡು ಪಾಪ ಕಾರ್ಯವನ್ನೆಸಗಲು ನಾಚಿಕೆಪಡುತ್ತಾನೆ. ಏನಾದರೊಂದು ಸತ್ಕಾರ್ಯ ಮಾಡೋಣವೆಂಬ ಆಸಕ್ತಿ ಎಲ್ಲರಲ್ಲೂ ತಾನಾಗಿಯೇ ಉದ್ಭವಿಸುತ್ತದೆ. ಬಡವನಿಗೆ ಉಣಿಸಬೇಕು, ಗತಿಹೀನನಿಗೆ ಉಡಿಸಬೇಕು, ಕಷ್ಟದಲ್ಲಿದ್ದವರಿಗೆ ಸಹಾಯ ಮಾಡಬೇಕು, ಎಲ್ಲಾದರೂ ಸತ್ಕಾರ್ಯಗಳಾಗುತ್ತಿದ್ದರೆ ಅವುಗಳಲ್ಲಿ ಪಾಲುಗೊಳ್ಳಬೇಕು, ಎಲ್ಲಾದರೂ ಬಹಿರಂಗವಾಗಿ ಕೆಡುಕು ನಡೆಯುತ್ತಿದ್ದರೆ ಅವುಗಳನ್ನು ತಡೆಯಬೇಕು ಎಂದು ಭಾವಿಸಿ, ಅದರಂತೆ ಕಾರ್ಯೋನ್ಮುಖರಾದಾಗ ಸದಾಚಾರ ಮತ್ತು ಧರ್ಮನಿಷ್ಠೆಯ ಒಂದು ಸಾರ್ವತ್ರಿಕ ವಾತಾವರಣವೇ ನಿರ್ಮಾಣವಾಗುತ್ತದೆ. ಪ್ರತಿಯೊಂದು ಧಾನ್ಯವೂ ತನಗೆ ಅನುಕೂಲಕರ ವಾತಾವರಣ ಸಿಕ್ಕಿದಾಗ ಫಲಿಸಿ, ಎಲ್ಲೆಲ್ಲೂ ಆವರಿಸುವಂತೆಯೇ ಒಳಿತುಗಳು ಫಲ ಕೊಡುವ ಈ ಸುಗ್ಗಿಯ ಕಾಲದಲ್ಲಿ ಅವು ಎಲ್ಲೆಲ್ಲೋ ಹಬ್ಬಿಕೊಂಡಿರುತ್ತದೆ. ಆದುದರಿಂದಲೇ ಒಂದು ಹದೀಸಿನಲ್ಲಿ ಪ್ರವಾದಿಯವರು(ಸ)-

كُلُّ عَمَلِ ابْنِ اٰدَمَ يُضَاعَفُ الْحَسَنَةُ بِعَشْرِ اَمْثَالِهَا اِلٰى
سَبْعِ مِائَةِ ضِعْفٍ قَالَ اللّٰهُ تَعَالٰى اِلَّا الصَّوْمُ فَاِنَّهُ لِيْ
وَاَنَا اَجْزِيْ بِهٖ۔

"ಮಾನವನ ಪ್ರತಿಯೊಂದು ಕರ್ಮವೂ ತನ್ನ ಬಳಿ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ವೃದ್ಧಿಯಾಗುತ್ತದೆ. ಒಂದೊಂದು ಪುಣ್ಯಕಾರ್ಯವು ಹತ್ತರಿಂದ ಏಳ್ನೂರು ಪಟ್ಟು ವರೆಗೆ ವೃದ್ಧಿಸುತ್ತದೆ. ಆದರೆ, ಉಪವಾಸವು ಇದರಿಂದ ಹೊರತಾಗಿದೆ. ಅದು ನನಗಾಗಿ ಮಾತ್ರ ಆಚರಿಸಲ್ಪಡುವುದರಿಂದ ನಾನು ಇಚ್ಛಿಸಿದಷ್ಟು ಪ್ರತಿಫಲವನ್ನು ಅದಕ್ಕಾಗಿ ನೀಡುವೆನು ಎಂದು ಅಲ್ಲಾಹ್ ಹೇಳಿರುತ್ತಾನೆ" ಎಂದಿರುವರು.

ಈ ಹದೀಸ್‌ನಿಂದ ತಿಳಿದು ಬರುವುದೇನೆಂದರೆ ಒಬ್ಬ ಸತ್ಕರ್ಮಿಯ ಸಂಕಲ್ಪ ಮತ್ತು ಪರಿಣಾಮಗಳ ಪ್ರಮಾಣಕ್ಕನುಸಾರ ಎಲ್ಲಾ ಕರ್ಮಗಳು ವೃದ್ಧಿಸುತ್ತವೆ ಮತ್ತು ಅವುಗಳ ವೃದ್ಧಿಗೆ ಒಂದು ಮೇರೆಯಿದೆ. ಆದರೆ ಉಪವಾಸದ ಕರ್ಮಫಲದ ವೃದ್ಧಿಗೆ ಯಾವ ಮೇರೆಯೂ ಇಲ್ಲ. ರಮಝಾನ್ ತಿಂಗಳು ಒಳಿತು ಸಮೃದ್ಧಿಗಳ ಸುಗ್ಗಿಯ ಕಾಲ. ಈ ಕಾಲದಲ್ಲಿ ಒಬ್ಬೊಬ್ಬರಲ್ಲ;

ಲಕ್ಷಾವಧಿ, ಕೋಟ್ಯಾವಧಿ ಮುಸ್ಲಿಮರು ಈ ಸತ್ಕರ್ಮಗಳ ಉದ್ಯಾನಕ್ಕೆ ಒಟ್ಟಾಗಿ ನೀರೆರೆಯುವುದರಿಂದ ಅದು ಲೆಕ್ಕವಿಲ್ಲದಷ್ಟು ವೃದ್ಧಿಯಾಗಬಲ್ಲುದು. ಎಷ್ಟು ಪ್ರಾಮಾಣಿಕತೆಯಿಂದ ಈ ತಿಂಗಳಲ್ಲಿ ಸತ್ಕರ್ಮ ಮಾಡುವಿರೋ, ಅದರ ಸಮೃದ್ಧಿಯಿಂದ ನೀವೂ ಪ್ರಯೋಜನ ಪಡೆದು ಇತರ ಬಂಧುಗಳಿಗೂ ಅದರ ಪ್ರಯೋಜನವನ್ನೊದಗಿಸುವಿರೋ ಮತ್ತು ಈ ತಿಂಗಳ ಪ್ರಭಾವವನ್ನು ಉಳಿದ ಹನ್ನೊಂದು ತಿಂಗಳುಗಳಲ್ಲಿ ಎಷ್ಟು ಹೆಚ್ಚು ಉಳಿಸಿ ಕೊಳ್ಳುವಿರೋ ಅಷ್ಟೇ ಹೆಚ್ಚಾಗಿ ಇದು ಫಲದಾಯಕವಾಗುವುದು. ಇದರ ಅಭಿವೃದ್ಧಿಗೆ ಮಿತಿಯೆಂಬುದೇ ಇಲ್ಲ. ನೀವು ನಿಮ್ಮ ಕರ್ಮಗಳಿಂದ ಅದನ್ನು ಸೀಮಿತಗೊಳಿಸಿದರೆ ಅದು ನಿಮ್ಮದೇ ಅಪರಾಧವಾಗಿರುವುದು.

ಇಬಾದತ್‌ಗಳ ಸತ್ಪರಿಣಾಮ ಈಗ ಎಲ್ಲಿದೆ?

ಉಪವಾಸದ ಪ್ರಭಾವ ಮತ್ತು ಅದರ ಸತ್ಪರಿಣಾಮಗಳ ಈ ವಿವರಣೆಯನ್ನು ಕೇಳಿ, "ಇವೆಲ್ಲಾ ಈಗ ಎಲ್ಲಿದೆ? ನಾವು ಉಪವಾಸ ವ್ರತವನ್ನೂ ಆಚರಿಸುತ್ತಿದ್ದೇವೆ. ನಮಾಝನ್ನೂ ಮಾಡುತ್ತಿದ್ದೇವೆ. ಆದರೆ ನೀವು ವಿವರಿಸಿದ ಪರಿಣಾಮಗಳೇಕೆ ಗೋಚರಿಸುವುದಿಲ್ಲ" ಎಂದು ನಿಮ್ಮಲ್ಲಿ ಪ್ರತಿಯೋರ್ವನೂ ಪ್ರಶ್ನಿಸಬಹುದು. ಅದರ ಕಾರಣವನ್ನು ನಾನು ಮೊದಲೇ ವಿವರಿಸಿದ್ದೇನೆ. ಇಸ್ಲಾಮಿನ ಯಂತ್ರ ಭಾಗಗಳನ್ನು ಪ್ರತ್ಯೇಕಿಸಿ, ಅವುಗಳ ಸ್ಥಾನದಲ್ಲಿ ಇತರ ಅನೇಕ ಬಿಡಿ ಭಾಗಗಳನ್ನು ಸೇರಿಸಿದ ಬಳಿಕ, ಪೂರ್ಣರೂಪದಲ್ಲಿದ್ದಾಗ ಪ್ರಕಟವಾಗುವಂತಹ ಸತ್ಪರಿಣಾಮಗಳನ್ನು ನೀವು ನಿರೀಕ್ಷಿಸುವಂತಿಲ್ಲ. ಎರಡನೆಯದಾಗಿ, ಇಬಾದತ್‌ನ ಬಗ್ಗೆ ನಿಮ್ಮ ದೃಷ್ಟಿಕೋನವೇ ಬದಲಾಗಿ ಬಿಟ್ಟಿದೆ. ನೀವೀಗ ಮುಂಜಾವಿನಿಂದ ಸಂಜೆಯ ತನಕ ತಿನ್ನದೆ, ಕುಡಿಯದೆ ಇರುವುದನ್ನು ಇಬಾದತ್ ಎಂದೂ ಅವುಗಳನ್ನು ಮಾಡಿಬಿಟ್ಟರೆ ನಿಮ್ಮ ಇಬಾದತ್ ಪೂರ್ತಿಗೊಂಡಿತೆಂದೂ ಭಾವಿಸುತ್ತೀರಿ. ಇದೇ ರೀತಿಯಲ್ಲಿ ಇತರ ಇಬಾದತ್‌ಗಳ ಬಾಹ್ಯರೂಪಗಳನ್ನು ಮಾತ್ರ ನೀವು ಇಬಾದತ್ ಎಂದು ಭಾವಿಸಿದ್ದೀರಿ. ನಿಮ್ಮ ಆಚಾರಗಳಲ್ಲಿರಬೇಕಾದ ಇಬಾದತ್‌ನ ನೈಜ ಸ್ಫೂರ್ತಿಯಿಂದ ನಿಮ್ಮಲ್ಲಿ ಶೇಕಡಾ 99ಕ್ಕಿಂತ ಅಧಿಕ ಮಂದಿ ಬೋಧ ರಹಿತರಾಗಿದ್ದಾರೆ. ಆದ್ದರಿಂದಲೇ ಈ ಇಬಾದತ್‌ಗಳು ನಿಮಗೆ ಪೂರ್ಣ ಪ್ರಯೋಜನ ನೀಡುವುದಿಲ್ಲ. ಏಕೆಂದರೆ ಇಸ್ಲಾಮ್‌ನಲ್ಲಿ ಎಲ್ಲವೂ ಸಂಕಲ್ಪ, ಜ್ಞಾನ ಮತ್ತು ವಿವೇಕವನ್ನು ಅವಲಂಬಿಸಿರುತ್ತದೆ.

ಅಲ್ಲಾಹನಿಚ್ಛಿಸಿದರೆ ಮುಂದಿನ ಉಪನ್ಯಾಸದಲ್ಲಿ ಈ ವಿಷಯವನ್ನೇ ವಿವರಿಸುವೆನು.

○

ಉಪವಾಸ ವ್ರತದ ನೈಜ ಉದ್ದೇಶ

ಪ್ರತಿಯೊಂದು ಕಾರ್ಯಕ್ಕೆ ಒಂದು ಉದ್ದೇಶವಿರುತ್ತದೆ

ಮುಸ್ಲಿಮ್ ಬಾಂಧವರೇ,

ಮಾನವನು ಮಾಡುವ ಪ್ರತಿಯೊಂದು ಕಾರ್ಯದಲ್ಲಿ ಅನಿವಾರ್ಯವಾಗಿ ಎರಡು ವಿಷಯಗಳಿರುತ್ತದೆ. ಒಂದು ಆ ಕಾರ್ಯದ ಉದ್ದೇಶ ಇನ್ನೊಂದು ಆ ಉದ್ದೇಶ ಪ್ರಾಪ್ತಿಗಾಗಿ ಅನುಸರಿಸುವ ಕಾರ್ಯ ವಿಧಾನ. ಉದಾ: 'ಊಟ ಮಾಡುವ ಕ್ರಿಯೆಯನ್ನು' ತೆಗೆದು ಕೊಳ್ಳೋಣ. ಜೀವಂತವಾಗಿರುವುದು ಮತ್ತು ದೇಹಕ್ಕೆ ಶಕ್ತಿಗಳಿಸುವುದು ಊಟ ಮಾಡುವುದರ ಉದ್ದೇಶ. ಈ ಉದ್ದೇಶ ಪ್ರಾಪ್ತಿಗಾಗಿ ನೀವು ಕೈಯಲ್ಲಿ ಆಹಾರದ ತುತ್ತನ್ನು ಮಾಡಿ ಬಾಯೊಳಗೆ ಇಡುತ್ತೀರಿ ಮತ್ತು ಹಲ್ಲುಗಳಿಂದ ಜಗಿದು, ಗಂಟಲಿನೊಳಗೆ ಇಳಿಸುತ್ತೀರಿ. ಆ ಉದ್ದೇಶ ಪ್ರಾಪ್ತಿಗೆ ಸೂಕ್ತವಾದ ಕಾರ್ಯರೂಪ ಇದೇ ಆಗಿರುವುದರಿಂದ ಈ ಕ್ರಮವನ್ನನುಸರಿಸುತ್ತೀರಿ. ಇಲ್ಲಿ ಉಣ್ಣುವ ಉದ್ದೇಶ ಮುಖ್ಯವಾಗಿದೆಯೇ ಹೊರತು ಉಣ್ಣುವ ಕಾರ್ಯ ವಿಧಾನವಲ್ಲ ಎಂಬುದನ್ನು ನೀವು ಬಲ್ಲಿರಿ. ಒಬ್ಬನು ಮರದ ಪುಡಿ, ಬೂದಿ ಅಥವಾ ಮಣ್ಣಿನ ತುತ್ತನ್ನು ಬಾಯೊಳಗಿಟ್ಟು, ಹಲ್ಲುಗಳಿಂದ ಜಗಿದು, ಗಂಟಲಿನಿಂದ ಕೆಳಗಿಳಿಸಿದರೆ, ಅವನ ಕುರಿತು ನೀವೇನನ್ನುವಿರಿ? ಅವನ ತಲೆ ಕೆಟ್ಟಿದೆ ಎಂದೇ ಹೇಳುವಿರಷ್ಟೆ- ಏಕೆಂದರೆ, ಆ ಮೂರ್ಖನು ಉಣ್ಣುವ ಉದ್ದೇಶವನ್ನು ಅರಿಯುವುದಿಲ್ಲ. ಅವನು ಉಣ್ಣುವ ಈ ನಾಲ್ಕು ತೋರಿಕೆಯ ಕಾರ್ಯಗಳನ್ನು ನೆರವೇರಿಸಿ ಬಿಡುವುದನ್ನೇ 'ಉಣ್ಣುವುದು' ಎಂಬ ಭ್ರಮೆಯಲ್ಲಿ ಸಿಲುಕಿದ್ದಾನೆ. ಇದೇ ರೀತಿಯಲ್ಲಿ ಊಟ ಮಾಡಿದೊಡನೆ ಗಂಟಲಿನೊಳಗೆ ಬೆರಳು ಹಾಕಿ ತಿಂದುದನ್ನೆಲ್ಲಾ ವಾಂತಿ ಮಾಡುತ್ತಾ ತಾನು ದಿನೇದಿನೇ ಕೃಶನೂ ದುರ್ಬಲನೂ ಆಗುತ್ತ ಹೋಗುತ್ತಿರುವೆನೆಂದೂ ಊಟದಿಂದ ಲಭಿಸುತ್ತದೆನ್ನಲಾಗುವ ಪ್ರಯೋಜನವೇನೂ ತನಗೆ ಸಿಗುತ್ತಿಲ್ಲವೆಂದೂ ದೂರುವಾತನನ್ನು ನೀವು ಹುಚ್ಚನೆನ್ನುವಿರಿ. ಈ ಮೂರ್ಖನು ತನ್ನ ಕ್ಷೀಣತೆಯ ಅಪವಾದವನ್ನು ಊಟದ ಮೇಲೆ ಹೊರಿಸುತ್ತಾನೆ. ವಾಸ್ತವದಲ್ಲಿ ಮೂರ್ಖತನ ಅವನಿಂದಲೇ ಆಗಿದೆ. ಅವನು ತನ್ನ ಮೌಢ್ಯದಿಂದಾಗಿ ಉಣ್ಣುವ ಕೆಲವು ಬಾಹ್ಯಕ್ರಿಯೆಗಳನ್ನು ಮಾತ್ರ ಮಾಡಿಬಿಟ್ಟರೆ ಬದುಕುವ ಶಕ್ತಿ ಬರುವುದೆಂದು ಭಾವಿಸಿಕೊಂಡಿದ್ದಾನೆ. ಆದುದರಿಂದ ಅವನು, "ಇನ್ನೇಕೆ ನಾನು ನನ್ನ ಜಠರದಲ್ಲಿ ಅನ್ನದ ಹೊರೆಯನ್ನಿರಿಸಿಕೊಳ್ಳಬೇಕು? ಹೊಟ್ಟೆಯನ್ನು ಹಗುರ ಮಾಡಿಕೊಳ್ಳಲಿಕ್ಕಾಗಿ ಅದನ್ನೇಕೆ ಹೊರಗೆ ಹಾಕಿಕೊಳ್ಳಬಾರದು? ನಾನಂತೂ ಉಣ್ಣುವ ಕ್ರಿಯೆಗಳನ್ನು ಮಾಡಿರುತ್ತೇನೆ" ಎಂದು ಭಾವಿಸಿದನು. ಈ ಮೂಢ ಭಾವನೆಯನ್ನಿಟ್ಟು ಅದರಂತೆ ನಡೆದರೆ ಅದರ ಶಿಕ್ಷೆಯನ್ನೂ ಅವನೇ ಅನುಭವಿಸಬೇಕಷ್ಟೆ- ಆಹಾರವು ಜಠರದೊಳಗೆ ಹೋಗಿ,

ಜೀರ್ಣವಾಗಿ ರಕ್ತಗತವಾಗಿ, ಇಡೀ ದೇಹಕ್ಕೆ ಹಬ್ಬುವ ವರೆಗೆ ತನಗೆ ಜೀವ ಶಕ್ತಿ ಬರಲಾರದೆಂದು ಅವನು ತಿಳಿದಿರಬೇಕಿತ್ತು. ಉಣ್ಣುವ ಬಾಹ್ಯ ಕ್ರಿಯೆಗಳೂ ಅಗತ್ಯ. ಈ ಕ್ರಿಯೆಗಳ ಹೊರತು ಆಹಾರವು ಜಠರವನ್ನು ಸೇರಲಾರದು. ಆದರೆ, ಈ ಬಾಹ್ಯ ಕ್ರಿಯೆಗಳಿಂದ ಮಾತ್ರ ಕೆಲಸ ಸಾಗದು. ಈ ಕ್ರಿಯೆಗಳನ್ನು ಮಾಡಿಬಿಟ್ಟೊಡನೆ ಮನುಷ್ಯನ ರಕ್ತನಾಳಗಳಲ್ಲಿ ರಕ್ತಸಂಚಾರ ವಾಗ ತೊಡಗಬೇಕಾದರೆ ಅದೇನೂ ಪವಾಡವಲ್ಲ. ರಕ್ತದ ಉತ್ಪತ್ತಿಗೆ ಅಲ್ಲಾಹನು ನಿಶ್ಚಯಿ ಸಿರುವ ನಿಯಮ ಪ್ರಕಾರವೇ ಅದು ಆಗುವುದು. ಈ ನಿಯಮವನ್ನು ಮುರಿದರೆ ನೀವೇ ಅಳಿಯುವಿರಿ.

ಬಾಹ್ಯರೂಪಗಳನ್ನೇ ವಾಸ್ತವವೆಂದು ತಿಳಿಯುವುದರ ದುಷ್ಪರಿಣಾಮ

ಇಷ್ಟು ವಿವರವಾಗಿ ನಿಮ್ಮ ಮುಂದಿಟ್ಟ ಈ ಉದಾಹರಣೆಯ ಬಗ್ಗೆ ನೀವು ಯೋಚಿಸಿದಾಗ ಇಂದಿನ ನಿಮ್ಮ ಇಬಾದತ್‌ಗಳು ಏಕೆ ಸತ್ವಹೀನವಾಗಿವೆಯೆಂಬುದು ನಿಮಗೆ ಮನವರಿಕೆಯಾಗ ಬಹುದು. ಹಿಂದೆ ಹಲವು ಬಾರಿ ಹೇಳಿದಂತೆ ನಮಾಝ್ ಮತ್ತು ಉಪವಾಸಗಳ ವ್ಯಕ್ತರೂಪ ಗಳನ್ನೇ ನಿಜವಾದ ಇಬಾದತ್ ಎಂದು ತಿಳಿದುಕೊಂಡು, ಅವುಗಳನ್ನು ಪೂರ್ಣವಾಗಿ ನೆರವೇರಿಸಿ ಬಿಟ್ಟವನು ಅಲ್ಲಾಹನ ಇಬಾದತ್ ಮಾಡಿಬಿಟ್ಟನೆಂದು ನೀವು ತಪ್ಪಾಗಿ ಭಾವಿಸುತ್ತೀರಿ. ಊಟ ಮಾಡುವುದಕ್ಕೆ ಸಂಬಂಧಿಸಿದಂತೆ, ತುತ್ತು ಮಾಡುವುದು, ಬಾಯೊಳಗೆ ಇಡುವುದು, ಜಗಿಯುವುದು ಮತ್ತು ನುಂಗುವುದು ಎಂಬ ಈ ನಾಲ್ಕು ಕ್ರಿಯೆಗಳನ್ನು ಒಟ್ಟಾಗಿ ಊಟವೆಂದೂ, ಅವುಗಳನ್ನು ನೆರವೇರಿಸಿದೊಡನೆ ಊಟ ಮಾಡಿಯಾಯಿತೆಂದೂ, ಈ ಕ್ರಿಯೆಗಳೊಂದಿಗೆ ಕಲ್ಲು ಮಣ್ಣನ್ನೇ ತಿಂದರೂ ಅಥವಾ ತಿಂದ ಮರುಕ್ಷಣವಲ್ಲೇ ವಾಂತಿ ಮಾಡಿಬಿಟ್ಟರೂ ಇದರಿಂದ ಊಟ ಮಾಡುವ ಉದ್ದೇಶ ಪ್ರಾಪ್ತಿಯಾಗಲೇ ಬೇಕೆಂದು ಭಾವಿಸುವವನನ್ನು ನೀವೂ ಹೋಲುತ್ತೀರಿ. ನೀವು ನಿಜವಾಗಿಯೂ ಇಂತಹ ಮೌಢ್ಯಕ್ಕೊಳಗಾಗಲಿಲ್ಲವೆಂದಾದರೆ, ಮುಂಜಾವಿನಿಂದ ಸಂಜೆಯ ತನಕವೂ ಅಲ್ಲಾಹನ ಇಬಾದತ್‌ನಲ್ಲಿ ನಿರತನಾಗಿರುವ ಉಪವಾಸಿಗನು ತನ್ನ ಇಬಾದತ್‌ನ ವೇಳೆಯಲ್ಲೇ ಸುಳ್ಳು ಹೇಳುವುದಾದರೂ ಹೇಗೆ? ಹಿಂದಾಡುವುದು ಮತ್ತು ಮಾತು ಮಾತಿಗೂ ಜಗಳಾಡುವುದು ಹೇಗೆ? ಅವನ ಬಾಯಿಯಿಂದ ಬೈಗುಳಗಳು ಹೊರಡುವುದು ಹೇಗೆ? ಅವನು ಇತರರ ಹಕ್ಕನ್ನು ಕಬಳಿಸುವುದು ಹೇಗೆ? ಹರಾಮ್ ಉಣ್ಣುವ ಮತ್ತು ಉಣಿಸುವ ಕೆಲಸಗಳನ್ನು ಮಾಡುವುದಾದರೂ ಹೇಗೆ? ಅಷ್ಟೇ ಅಲ್ಲ ಇಷ್ಟೆಲ್ಲಾ ದುಷ್ಕೃತ್ಯಗಳನ್ನೆಸಗಿಯೂ ತಾನು ದೇವಾರಾಧನೆ ಮಾಡಿದ್ದೇನೆಂದು ತಿಳಿದು ಕೊಳ್ಳುವುದು ಹೇಗೆ? ಅವನು ಬೂದಿ ಅಥವಾ ಮಣ್ಣು ತಿನ್ನುವ ಹಾಗೂ ಊಟದ ಬಾಹ್ಯ ನಾಲ್ಕು ಕ್ರಿಯೆಗಳನ್ನು ನೆರವೇರಿಸಿ ಅದನ್ನು ಊಟವೆಂದು ಭಾವಿಸುವವನಿಗೆ ಸಮಾನವಲ್ಲವೆ?

ರಮಝಾನ್ ತಿಂಗಳ ನಂತರ ಪುನಃ ಬಂಧಮುಕ್ತತೆ

ರಮಝಾನ್ ತಿಂಗಳಿಡೀ ಸುಮಾರು 360 ತಾಸುಗಳ ದೇವಾರಾಧನೆಯನ್ನು ಮುಗಿಸಿದ ಬಳಿಕ ಅದರ ಪೂರ್ಣ ಪ್ರಭಾವವು ಶವ್ವಾಲ್ ತಿಂಗಳ ಪ್ರಥಮ ದಿನದಂದೇ ಅಳಿದು ಹೋಗಲು ಕಾರಣವೇನೆಂದು ನನಗೆ ತಿಳಿಸ ಬಲ್ಲಿರಾ? ಅನ್ಯ ಸಮುದಾಯದವರು ತಮ್ಮ ಹಬ್ಬ ಹುಣ್ಣಿಮೆ

ಗಳಲ್ಲಿ ಏನೆಲ್ಲ ಮಾಡುತ್ತಾರೋ ಅದನ್ನೇ ನಿಮ್ಮ ಹಬ್ಬದ ದಿನ ನೀವೂ ಮಾಡುತ್ತೀರಿ. ನಗರಗಳಲ್ಲಂತೂ ಈದ್‌ನ (ಹಬ್ಬ) ದಿನ ವ್ಯಭಿಚಾರ, ಮದ್ಯಪಾನ, ಜೂಜಾಟಗಳಂತಹ ನೀಚ ಕಾರ್ಯಗಳು ನಡೆಯುತ್ತವೆ. ರಮಝಾನ್ ತಿಂಗಳಲ್ಲಿ ಹಗಲು ಉಪವಾಸವಿದ್ದು ರಾತ್ರಿ ಮದ್ಯಪಾನ ಮತ್ತು ವ್ಯಭಿಚಾರ ಮಾಡುವಂತಹ ದುರ್ದೈವಿಗಳನ್ನು ನಾನು ಕಂಡಿದ್ದೇನೆ. ಸುದೈವವಶಾತ್ ಮುಸ್ಲಿಮ್ ಜನಸಾಮಾನ್ಯರು ಅಷ್ಟು ಕೆಟ್ಟುಹೋಗಿಲ್ಲವಾದರೂ ರಮಝಾನ್ ಮುಗಿದೊಡನೆ ಈದ್‌ನ ಮರುದಿನ ಧರ್ಮನಿಷ್ಠೆಯ ಕುರುಹು ಎಷ್ಟು ಮಂದಿಯಲ್ಲಿ ಉಳಿದಿರುತ್ತದೆ? ಅಲ್ಲಾಹನ ಆಜ್ಞೋಲ್ಲಂಘನೆಯನ್ನು ಎಷ್ಟರ ಮಟ್ಟಿಗೆ ಬಿಡಲಾಗುತ್ತದೆ? ಸತ್ಕರ್ಮಗಳಲ್ಲಿ ಎಷ್ಟರ ಮಟ್ಟಿಗೆ ಪಾಲುಗೊಳ್ಳಲಾಗುತ್ತದೆ? ಸ್ವಾರ್ಥ ಎಷ್ಟು ಕಡಿಮೆಯಾಗುತ್ತದೆ?

ಇಬಾದತ್‌ನ ಕುರಿತು ತಪ್ಪಾದ ಕಲ್ಪನೆಯ ಪರಿಣಾಮ

ಇದಕ್ಕೆ ಕಾರಣವೇನಿರಬಹುದೆಂದು ಯೋಚಿಸಿರಿ. ವಾಸ್ತವದಲ್ಲಿ ನೀವು ಇಬಾದತ್‌ನ ಅರ್ಥ ತಾತ್ಪರ್ಯಗಳನ್ನೇ ತಪ್ಪಾಗಿ ತಿಳಿದಿರುತ್ತೀರಿ. ಮುಂಜಾವಿನಿಂದ ಸಂಜೆಯ ತನಕ ತಿನ್ನದೆ-ಕುಡಿಯದೆ ಇರುವುದನ್ನು ಉಪವಾಸ ಮತ್ತು ಇಬಾದತ್ ಎಂದು ನೀವು ಭಾವಿಸುತ್ತೀರಿ. ಆದುದರಿಂದ ಉಪವಾಸವನ್ನು ನೀವು ಸರಿಯಾಗಿ ಪಾಲಿಸುತ್ತೀರಿ. ಯಾವುದಾದರೊಂದು ವಸ್ತುವಿನ ಸೇವನೆಯಿಂದ ಉಪವಾಸ ಮುರಿದು ಹೋದೀತೆಂಬ ಸಂದೇಹವುಂಟಾದರೂ ಆದರಿಂದ ದೂರವಿರುವಷ್ಟರ ಮಟ್ಟಿಗೆ ನಿಮ್ಮಲ್ಲಿ ದೇವ ಭಯವಿರುತ್ತದೆ. ಪ್ರಾಣವೇ ಹೋಗುತ್ತದೆಂದಾದರೂ ಉಪವಾಸ ಬಿಡಲು ನೀವು ಸಿದ್ಧರಾಗುವುದಿಲ್ಲ. ಆದರೆ ಹೀಗೆ ಹಸಿವು, ಬಾಯಾರಿಕೆಯಿಂದಿರುವುದು ನಿಜವಾದ ಇಬಾದತ್ ಆಗಿರದೆ ಅದು ಇಬಾದತ್‌ನ ಸ್ವರೂಪ ಮಾತ್ರವೆಂಬುದನ್ನು ನೀವು ತಿಳಿದಿಲ್ಲ. ನಿಮ್ಮಲ್ಲಿ ದೇವಭಯ ಮತ್ತು ದೇವಪ್ರೇಮವುಂಟಾಗಬೇಕೆಂದೂ ಒಂದು ವಿಷಯದಲ್ಲಿ ಎಷ್ಟೇ ಲೌಕಿಕ ಪ್ರಯೋಜನಗಳಿದ್ದರೂ ಅದರಿಂದ ಅಲ್ಲಾಹನ ಮೆಚ್ಚುಗೆ ಲಭಿಸದೆಂದು ತಿಳಿದಾಗ ನಿಮ್ಮ ಆಕಾಂಕ್ಷೆಗಳನ್ನು ಅದುಮಿ ಅದರಿಂದ ದೂರವಿರಲು ಹಾಗೂ ಒಂದು ವಿಷಯದಲ್ಲಿ ಎಂತಹ ಅಪಾಯ-ನಷ್ಟಗಳು ಕಂಡು ಬಂದರೂ ಅದರಲ್ಲಿ ಅಲ್ಲಾಹನ ಸಂಪ್ರೀತಿಯಿದೆಯೆಂದು ತಿಳಿದಾಗ ನಿಮ್ಮ ಮನಸ್ಸನ್ನು ಬಲವಂತವಾಗಿ ನಿಯಂತ್ರಿಸಿ ಅದಕ್ಕೆ ಸಿದ್ಧಪಡಿಸಲು ಇಬಾದತ್‌ನ ಈ ಸ್ವರೂಪವನ್ನು ನಿಶ್ಚಯಿಸಲಾಗಿದೆ. ನೀವು ಉಪವಾಸದ ನೈಜ ಉದ್ದೇಶವನ್ನು ಅರಿತಿರುತ್ತಿದ್ದರೆ, ತಿಂಗಳಿಡೀ ದೇವಭಯ ಮತ್ತು ದೇವ ಪ್ರೇಮದಿಂದ ನಿಮ್ಮ ಮನಸ್ಸನ್ನು ಚಿತ್ತಾಕಾಂಕ್ಷೆಗಳಿಂದ ತಡೆದು ಅಲ್ಲಾಹನ ಮೆಚ್ಚುಗೆಯ ಪ್ರಕಾರ ನಡೆಸಿದ ಅಭ್ಯಾಸದಿಂದ ಪ್ರಯೋಜನ ಪಡೆಯುತ್ತಿದ್ದರೆ, ನಿಮ್ಮಲ್ಲಿ ಆ ಶಕ್ತಿ ಸಾಮರ್ಥ್ಯಗಳುಂಟಾಗುತ್ತಿದ್ದುವು. ಆದರೆ ನೀವು ರಮಝಾನ್ ಮುಗಿದೊಡನೆಯೇ ಈ ಸಾಧನೆಯನ್ನೂ ಇದರಿಂದ ಗಳಿಸಿಕೊಂಡ ಗುಣವಿಶೇಷಗಳನ್ನೂ ಊಟ ಮಾಡಿದೊಡನೆ ಗಂಟಲಿನೊಳಕ್ಕೆ ಕೈ ಹಾಕಿ ವಾಂತಿ ಮಾಡಿ ಬಿಡುವಂತೆಯೇ ಹೊರಗೆಸೆದು ಬಿಡುತ್ತೀರಿ. ಇಷ್ಟೇ ಅಲ್ಲ, ನಿಮ್ಮ ಪೈಕಿ ಕೆಲವರಂತೂ ಉಪವಾಸ ಬಿಟ್ಟೊಡನೆ ಇಡೀ ದಿನದ ಧರ್ಮನಿಷ್ಠೆಯನ್ನು ಉಗುಳಿ ಬಿಡುತ್ತಾರೆ. ಪರಿಸ್ಥಿತಿ ಹೀಗಿರುವಾಗ, ಉಪವಾಸದ ಬಾಹ್ಯ ರೂಪಗಳನ್ನು

ಪೂರ್ತಿಗೊಳಿಸಿದೊಡನೆ ಉಪವಾಸದಿಂದ ಸಿಗಬೇಕಾದ ಶಕ್ತಿ ಸಾಮರ್ಥ್ಯ ಸಿಗಬೇಕೆಂದರೆ, ರಮಝಾನ್ ಮತ್ತು ಅದರ ಉಪವಾಸಗಳು ಪವಾಡವೇನೂ ಅಲ್ಲ. ಆಹಾರವು ಜಠರವನ್ನು ಸೇರಿ, ಜೀರ್ಣವಾಗಿ, ರಕ್ತಗತವಾಗುವವರೆಗೆ ಶಕ್ತಿ ಒದಗದಂತೆಯೇ ಉಪವಾಸದ ನೈಜ ಉದ್ದೇಶವನ್ನರಿಯದೆ ಮತ್ತು ಅದು ನಿಮ್ಮ ಮನ ಮಸ್ತಿಷ್ಕಗಳ ಆಳಕ್ಕಿಳಿಯಲು ಹಾಗೂ ನಿಮ್ಮ ಯೋಚನೆ, ಸಂಕಲ್ಪ, ನಿರ್ಧಾರ ಮತ್ತು ಕರ್ಮಗಳ ಮೇಲೆ ಆವರಿಸಿಕೊಳ್ಳಲು ಅವಕಾಶ ಒದಗಿಸದೆ ಉಪವಾಸ ದಿಂದಲೂ ನಿಮಗೆ ಆಧ್ಯಾತ್ಮಿಕ ಬಲ ಸಿಗಲಾರದು.

ಉಪವಾಸ- ಧರ್ಮನಿಷ್ಠನಾಗುವ ಮಾರ್ಗ

ಈ ಕಾರಣದಿಂದಲೇ ಅಲ್ಲಾಹನು ಉಪವಾಸದ ಆಜ್ಞೆ ಕೊಟ್ಟ ಬಳಿಕ لَعَلَّكُمْ تَتَّقُونَ ﴿١٨٣﴾ 'ಲ ಅಲ್ಲಕುಮ್ ತತ್ತಕೂನ್' ಅರ್ಥಾತ್ 'ನೀವು ಧರ್ಮನಿಷ್ಠರಾಗ ಬಹುದೆಂದು ನಿರೀಕ್ಷಿಸಿ' ನಿಮಗೆ ಉಪವಾಸವನ್ನು ಕಡ್ಡಾಯಗೊಳಿಸಲಾಗಿದೆ ಎಂದಿರುವನು. ಈ ಸೂಕ್ತದಲ್ಲಿ ನೀವು ಖಂಡಿತವಾಗಿಯೂ ಮುತ್ತಕೀ(ಧರ್ಮನಿಷ್ಠ)ಗಳಾಗುವಿರೆನ್ನಲಿಲ್ಲ. ಏಕೆಂದರೆ ಉಪವಾಸದ ಈ ಪರಿಣಾಮವು ಮನುಷ್ಯನ ಬುದ್ಧಿವಂತಿಕೆ ಮತ್ತು ಸತ್ಸಂಕಲ್ಪಗಳನ್ನು ಅವಲಂಬಿಸಿದೆ. ಅದರ ಉದ್ದೇಶವನ್ನು ತಿಳಿದುಕೊಂಡು, ಅದರ ಸಹಾಯದಿಂದ ನೈಜ ಉದ್ದೇಶ ಪ್ರಾಪ್ತಿಗಾಗಿ ಪ್ರಯತ್ನಿಸುವಾತನು ಒಂದಿಷ್ಟಾದರೂ ಮುತ್ತಕೀ (ಧರ್ಮನಿಷ್ಠ) ಆಗುವನು. ಆದರೆ ಉದ್ದೇಶವನ್ನೇ ತಿಳಿಯದೆ ಮತ್ತು ಅದರ ಪ್ರಾಪ್ತಿಗಾಗಿ ಶ್ರಮಿಸದೆ ಇರುವಾತನಿಗೆ ಯಾವ ಪ್ರಯೋಜನವೂ ಸಿಗಲಾರದು.

ಉಪವಾಸದ ನೈಜ ಉದ್ದೇಶ

1. ಸುಳ್ಳಿನಿಂದ ಪಾರಾಗುವುದು

ಪ್ರವಾದಿಯವರು(ಸ) ವಿವಿಧ ರೀತಿಯಿಂದ ಉಪವಾಸದ ನೈಜ ಉದ್ದೇಶದ ಕಡೆಗೆ ಗಮನ ಸೆಳೆದಿದ್ದಾರೆ. ಅದನ್ನು ಕಡೆಗಣಿಸಿ ಹಸಿವು ಬಾಯಾರಿಕೆಯಿಂದ ಇರುವುದರಿಂದ ಏನೂ ಪ್ರಯೋಜನವಿಲ್ಲವೆಂದು ಹೇಳಿದ್ದಾರೆ. ಅವರು ಹೀಗೆಂದಿರುವರು:

مَنْ لَّمْ يَدَعْ قَوْلَ الزُّوْرِوَالْعَمَلَ بِهٖ فَلَيْسَ لِلّٰهِ حَاجَةٌ
فِيْ اَنْ يَّدَعَ طَعَامَهٗ وَشَرَابَهٗ۔

"ಒಬ್ಬನು ಸುಳ್ಳಾಡುವುದನ್ನೂ ಸುಳ್ಳು ವ್ಯವಹಾರ ಮಾಡುವುದನ್ನೂ ಬಿಡದಿದ್ದರೆ ಅವನು ಆಹಾರ ಪಾನೀಯಗಳನ್ನು ಬಿಡಬೇಕೆಂಬ ಅಪೇಕ್ಷೆ ಅಲ್ಲಾಹನಿಗೆ ಇಲ್ಲವೇ ಇಲ್ಲ."

ಇನ್ನೊಂದು ಹದೀಸಿನಲ್ಲಿ ಹೀಗಿದೆ:

كَمْ مِنْ صَائِمٍ لَيْسَ لَهُ مِنْ صِيَامِهِ اِلَّا الظَّمَأُ وَكَمْ مِنْ قَائِمٍ لَيْسَ لَهُ مِنْ قِيَامِهِ اِلَّا السَّهَرُ

"ಉಪವಾಸದಿಂದ ಹಸಿವು ಬಾಯಾರಿಕೆಗಳ ಹೊರತು ಇನ್ನೇನೂ ಗಳಿಸದ ಅದೆಷ್ಟೋ ಉಪವಾಸಿಗರಿದ್ದಾರೆ. ರಾತ್ರಿ ಜಾಗರಣೆಯ ಹೊರತು ಬೇರೇನೂ ಲಭಿಸದ ಅದೆಷ್ಟೋ ಆರಾಧಕರಿದ್ದಾರೆ."

ಈ ಎರಡು ಹದೀಸ್‌ಗಳ ತಾತ್ಪರ್ಯ ಸುಸ್ಪಷ್ಟವಾಗಿದೆ. ಕೇವಲ ಹಸಿವು ಮತ್ತು ಬಾಯಾರಿಕೆಯಿಂದ ಇರುವುದು ಇಬಾದತ್ ಆಗಿರದೆ ಅವು ಇಬಾದತ್‌ನ ಮಾಧ್ಯಮವಾಗಿದೆ. ದೇವ ಭಯದಿಂದಾಗಿ ಅವನ ಆಜ್ಞೋಲ್ಲಂಘನೆ ಮಾಡದಿರುವುದು, ಅವನ ಪ್ರೇಮದಿಂದಾಗಿ ಅವನ ಸಂತುಷ್ಟಿ ಇರುವ ಕಡೆಗೆ ಧಾವಿಸುವುದು ಮತ್ತು ವಿಷಯ ಲಂಪಟತನದಿಂದ ಸಾಧ್ಯವಿರುವಷ್ಟು ದೂರವಿರುವುದು ನಿಜವಾದ ಇಬಾದತ್ ಆಗಿದೆ. ಈ ಇಬಾದತ್‌ನಿಂದ ಅಲಕ್ಷ್ಯನಾಗಿರುವಾತನು ತನ್ನ ಹೊಟ್ಟೆಗೆ ವೃಥಾ ಹಸಿವು ಬಾಯಾರಿಕೆಗಳ ತ್ರಾಸ ಕೊಡುತ್ತಾನೆ. ಅವನಿಂದ 12-14 ತಾಸುಗಳ ತನಕ ಅನ್ನ-ಪಾನೀಯಗಳನ್ನು ಬಿಡಿಸಲು ಅಲ್ಲಾಹನಿಗೆ ಅಗತ್ಯವೇನಿದೆ?

2. ಸತ್ಯವಿಶ್ವಾಸ (ಈಮಾನ್) ಮತ್ತು ಆತ್ಮಾವಲೋಕನ (ಇಹ್ತಿಸಾಬ್)

ಪ್ರವಾದಿಯವರು(ಸ) ಉಪವಾಸದ ನೈಜ ಉದ್ದೇಶದ ಕಡೆಗೆ ಈ ರೀತಿ ಗಮನ ಸೆಳೆದಿದ್ದಾರೆ-

مَنْ صَامَ رَمَضَانَ اِيْمَانًا وَّاحْتِسَابًا غُفِرَلَهُ مَا تَقَدَّمَ مِنْ ذَنْبِهٖ

"'ಈಮಾನ್' (ಸತ್ಯವಿಶ್ವಾಸ) ಮತ್ತು 'ಇಹ್ತಿಸಾಬ್'(ಆತ್ಮಾವಲೋಕನ)ಗಳೊಂದಿಗೆ ಉಪವಾಸವಿರುವಾತನ ಗತ ಪಾಪಗಳೆಲ್ಲವೂ ಕ್ಷಮಿಸಲ್ಪಡುವುವು."

'ಈಮಾನ್' ಎಂದರೆ, ಅಲ್ಲಾಹನ ಬಗ್ಗೆ ಓರ್ವ ಮುಸ್ಲಿಮನಲ್ಲಿರಬೇಕಾದ ವಿಶ್ವಾಸವನ್ನು ಪೂರ್ಣ ರೀತಿಯಿಂದ ಮನಸ್ಸಿನಲ್ಲಿ ಜಾಗ್ರತವಾಗಿರಿಸುವುದು. 'ಇಹ್ತಿಸಾಬ್' ಎಂದರೆ, ಮಾನವನು ಅಲ್ಲಾಹನ ಸಂಪ್ರೀತಿಯನ್ನು ಬಯಸುವುದು, ತನ್ನ ವಿಚಾರ ಆಚಾರಗಳು ಯಾವಾಗಲೂ ಅಲ್ಲಾಹನ ಪ್ರಸನ್ನತೆಗೆ ವ್ಯತಿರಿಕ್ತವಾಗಿರದಂತೆ ನೋಡಿಕೊಳ್ಳುವುದು. ಇವೆರಡರೊಂದಿಗೆ ರಮಝಾನಿನ ಎಲ್ಲಾ ದಿನಗಳಲ್ಲಿ ಉಪವಾಸವಿರುವಾತನು ತನ್ನ ಗತ ಪಾಪಗಳಿಗೆ ಕ್ಷಮೆ ಹೊಂದುವನು. ಹೇಗೆಂದರೆ, ಅವನೆಂದಾದರೂ ದ್ರೋಹಿ ಅಥವಾ ಅವಿಧೇಯ ದಾಸನಾಗಿದ್ದರೆ, ಈಗ ಅವನು ತನ್ನ ಒಡೆಯನ ಮುಂದೆ ಸಂಪೂರ್ಣ ಶರಣಾಗತನಾಗಿರುತ್ತಾನೆ. اَلتَّائِبُ مِنَ الذَّنْبِ كَمَنْ لَا ذَنْبَ لَهُ "ಪಾಪಗಳಿಗಾಗಿ ಪಶ್ಚಾತ್ತಾಪ ಪಡುವಾತನು ಪಾಪಗಳನ್ನೇ ಮಾಡದವನಂತಿರುತ್ತಾನೆ" ಎಂದು ಹದೀಸಿನಲ್ಲಿದೆ.

3. ಕೆಡುಕಿನಿಂದ ರಕ್ಷಿಸುವ ಗುರಾಣಿ

ಇನ್ನೊಂದು ಹದೀಸಿನಲ್ಲಿ ಹೀಗಿದೆ:

اَلصِّيَامُ جُنَّةٌ وَاِذَا كَانَ يَوْمُ صَوْمِ اَحَدِكُمْ فَلَا يَرْفُثْ
وَلَا يَصْخَبْ فَاِنْ سَابَّهُ اَحَدٌ اَوْقَاتَلَهُ فَلْيَقُلْ اِنِّى امْرُءٌ صَائِمٌ۔

"ಉಪವಾಸವು ಗುರಾಣಿಯಾಗಿದೆ.(ಗುರಾಣಿಯು ಶತ್ರುವಿನ ಆಕ್ರಮಣದಿಂದ ರಕ್ಷಿಸುವಂತೆಯೇ ಉಪವಾಸವೂ ಶೈತಾನನ ಆಕ್ರಮಣದಿಂದ ರಕ್ಷಿಸುತ್ತದೆ.) ಆದ್ದರಿಂದ ಉಪವಾಸವಿರುವಾತನು (ಈ ಗುರಾಣಿಯನ್ನು ಉಪಯೋಗಿಸಿ) ಜಗಳ ಗಲಾಟೆಗಳಿಂದ ದೂರವಿರಬೇಕು. ಆತನನ್ನು ಯಾರಾದರೂ ಬಯ್ದರೆ ಅಥವಾ ಅವನೊಡನೆ ಜಗಳಕ್ಕೆ ಬಂದರೆ, ಸಹೋದರಾ, ನಾನು ಉಪವಾಸದಲ್ಲಿದ್ದೇನೆ (ನಿನ್ನಂತೆಯೇ ನಾನೂ ವರ್ತಿಸುವೆನೆಂದು ನೀನು ನಿರೀಕ್ಷಿಸಬೇಡ) ಎಂದು ತಪ್ಪಿಸಿಕೊಳ್ಳಬೇಕು."

4. ಒಳಿತಿನ ಕಾರ್ಯದಲ್ಲಿ ಆಸಕ್ತಿ

ಮಾನವನು ಉಪವಾಸದ ವೇಳೆ ಅತ್ಯಧಿಕ ಪುಣ್ಯ ಕಾರ್ಯಗಳನ್ನು ಮಾಡಬೇಕು. ಒಳಿತಿನ ಕಾರ್ಯದಲ್ಲಿ ಆಸಕ್ತಿ ಹೊಂದಿರಬೇಕು, ಮುಖ್ಯವಾಗಿ ಅವನ ಹೃದಯದಲ್ಲಿ ಅವನ ಇತರ ಬಂಧುಗಳ ಮೇಲೆ ಅತ್ಯಧಿಕ ಸಹಾನುಭೂತಿ ಉಂಟಾಗಬೇಕು ಎಂದು ಮುಂತಾಗಿ ಇತರ ಹದೀಸ್‌ಗಳಲ್ಲಿ ಬಂದಿರುತ್ತದೆ. ಏಕೆಂದರೆ, ಅವನು ಸ್ವತಃ ಹಸಿವು ಬಾಯಾರಿಕೆಗಳ ಕಷ್ಟಗಳನ್ನನುಭವಿಸುವ ಮೂಲಕ ಅಲ್ಲಾಹನ ಇತರ ದಾಸರ ಬಡತನ-ಸಂಕಷ್ಟಗಳ ಅನುಭವವನ್ನು ಚೆನ್ನಾಗಿ ಪಡೆದುಕೊಂಡಿರುತ್ತಾನೆ. ಹಝ್ರತ್ ಇಬ್ನು ಅಬ್ಬಾಸ್‌ರವರು(ರ) ಹೀಗೆ ಉಲ್ಲೇಖಿಸುತ್ತಾರೆ. "ಪ್ರವಾದಿವರ್ಯರು(ಸ) ರಮಝಾನ್ ತಿಂಗಳಲ್ಲಿ ಇತರ ದಿನಗಳಿಗಿಂತಲೂ ಅತ್ಯಧಿಕ ಕರುಣಾಳುವೂ ಪ್ರೇಮಮಯಿಯೂ ಆಗಿರುತ್ತಿದ್ದರು. ಅವರ ಮನೆ ಬಾಗಿಲಿನಿಂದ ಯಾವ ಯಾಚಕನೂ ಬರಿಗೈಯಿಂದ ಮರಳುತ್ತಿರಲಿಲ್ಲ. ಆ ತಿಂಗಳಲ್ಲಿ ಯಾವ ಕೈದಿಯೂ ಸೆರೆಯಲ್ಲಿರುತ್ತಿರಲಿಲ್ಲ."

5. ಇಫ್ತಾರ್ (ಉಪವಾಸ ಬಿಡುವುದು) ಮಾಡಿಸುವುದರ ಪ್ರತಿಫಲ

ಇನ್ನೊಂದು ಹದೀಸಿನಲ್ಲಿ ಪ್ರವಾದಿ(ಸ) ಅವರು ಹೀಗೆ ನುಡಿದಿರುತ್ತಾರೆ:

مَنْ فَطَّرَفِيْهِ صَائِمًا كَانَ لَهٗ مَغْفِرَةٌ لِذُنُوْبِهٖ وَعِتْقُ رَقَبَتِهٖ
مِنَ النَّارِ وَكَانَ لَهٗ مِثْلَ اَجْرِهٖ مِنْ غَيْرِ اَنْ يُّنْتَقَصَ مِنْ اَجْرِهٖ شَيْئٌ۔

"ರಮಝಾನಿನಲ್ಲಿ ಉಪವಾಸಿಗನೊಬ್ಬನಿಗೆ ಇಫ್ತಾರ್ (ಉಪವಾಸ ಬಿಡುವುದು) ಮಾಡಿಸಿದರೆ ಆ ಸತ್ಕಾರ್ಯವು ಅವನ ಪಾಪಗಳ ಪ್ರಾಯಶ್ಚಿತ್ತ ಹಾಗೂ ಅವನ ಕೊರಳನ್ನು ನರಕಾಗ್ನಿಯ ಶಿಕ್ಷೆಯಿಂದ ವಿಮೋಚನೆಗೊಳಿಸುವ ಸಾಧನವಾಗುವುದು. ಇಫ್ತಾರ್ ಮಾಡಿಸಿದವನಿಗೂ ಉಪವಾಸವಿದ್ದವನಿಗೆ ದೊರೆತ ಪುಣ್ಯದಷ್ಟೇ ಪುಣ್ಯ ಲಭಿಸುವುದು. ಉಪವಾಸವಿದ್ದವನ ಪುಣ್ಯದಿಂದ ಏನನ್ನೂ ಕಡಿತಗೊಳಿಸಲಾಗದು."

❖ ❖ ❖

ಅಧ್ಯಾಯ -5

ಝಕಾತ್

○

◆ ಝಕಾತ್

◆ ಝಕಾತ್‌ನ ವಾಸ್ತವಿಕತೆ

◆ ಸಾಮೂಹಿಕ ಜೀವನದಲ್ಲಿ ಝಕಾತಿನ ಸ್ಥಾನ

◆ 'ಇನ್‌ಫಾಕ್'ನ ಸಾಮಾನ್ಯ ವಿಧಿಗಳು

◆ ಝಕಾತಿನ ನಿರ್ದಿಷ್ಟ ವಿಧಿಗಳು

○

ಝಕಾತ್

ಝಕಾತ್‌ನ ಮಹತ್ವ

ಮುಸ್ಲಿಮ್ ಬಾಂಧವರೇ,

ನಮಾಝಿನ ಬಳಿಕ ಇಸ್ಲಾಮಿನ ಅತಿ ಪ್ರಮುಖ ಆಧಾರ ಸ್ತಂಭವು ಝಕಾತ್ ಆಗಿದೆ. ಸಾಮಾನ್ಯವಾಗಿ ಇಬಾದತ್(ಆರಾಧನೆ)ಗಳ ಶ್ರೇಣಿಯಲ್ಲಿ ನಮಾಝಿನೊಂದಿಗೆ ಉಪವಾಸದ ಹೆಸರೇ ಕೇಳಿ ಬರುವುದರಿಂದ ನಮಾಝಿನ ಅನಂತರದ ಸ್ಥಾನ ಉಪವಾಸಕ್ಕೆಂದೇ ಜನರು ತಿಳಿದುಕೊಂಡಿದ್ದಾರೆ. ಆದರೆ ಇಸ್ಲಾಮಿನಲ್ಲಿ ನಮಾಝಿನ ಬಳಿಕ ಝಕಾತ್‌ಗೆ ಅತಿ ಹೆಚ್ಚು ಮಹತ್ವವಿರುವುದೆಂದು ಕುರ್‌ಆನ್‌ನಿಂದ ನಮಗೆ ಸ್ಪಷ್ಟವಾಗುತ್ತದೆ. ಇವೆರಡೂ ಇಸ್ಲಾಮಿನ ಭವ್ಯ ಕಟ್ಟಡದ ಅತ್ಯಂತ ಬಲವಾದ ಆಧಾರ ಸ್ತಂಭಗಳು. ಇವುಗಳು ಸರಿದು ಹೋದರೆ ಇಸ್ಲಾಮ್ ನಿಲ್ಲಲಾರದು.

ಝಕಾತ್‌ನ ಅರ್ಥ

ಝಕಾತ್‌ನ ಅರ್ಥ, ನೈರ್ಮಲ್ಯ ಮತ್ತು ಶುದ್ಧೀಕರಣ ಎಂದಾಗಿದೆ. ತನ್ನ ಸಂಪತ್ತಿನಿಂದ ಒಂದಂಶವನ್ನು ಪ್ರತ್ಯೇಕಿಸಿ ಬಡವರಿಗೆ ಕೊಡುವುದನ್ನು 'ಝಕಾತ್' ಎನ್ನುತ್ತಾರೆ. ಏಕೆಂದರೆ ಈ ರೀತಿಯಿಂದ ಆ ಧನವೂ, ಅದರೊಂದಿಗೆ ಆ ಧನಿಕನ ಅಂತಃಕರಣವೂ ಶುದ್ಧವಾಗುತ್ತದೆ. ದೇವದತ್ತವಾದ ಧನದಿಂದ ದೇವನ ದಾಸರ ಪಾಲನ್ನು ತೆಗೆದು ಕೊಡದವನ ಧನವೂ ಅಶುದ್ಧ, ಅವನ ಅಂತಃಕರಣವೂ ಕೊಳಕು, ಏಕೆಂದರೆ ಅವನ ಅಂತಃಕರಣದಲ್ಲಿ ಕೃತಘ್ನತೆ ತುಂಬಿ ಕೊಂಡಿದೆ. ಅವನು ತನಗೆ ನಿಜವಾದ ಅಗತ್ಯಕ್ಕಿಂತ ಹೆಚ್ಚು ಸಂಪತ್ತನ್ನು ನೀಡಿ ತನ್ನ ಮೇಲೆ ಅನುಗ್ರಹ ತೋರಿದ ದೇವನ ಋಣ ಸಂದಾಯ ಮಾಡಲಿಕ್ಕೂ ಮನಸ್ಸು ನೋಯುವಷ್ಟು ಜಿಪುಣನೂ ಸ್ವಾರ್ಥಿಯೂ ಧನಾರಾಧಕನೂ ಆಗಿದ್ದಾನೆ. ಇಂಥವನು ಈ ಜಗತ್ತಿನಲ್ಲಿ ದೇವ ಸಂಪ್ರೀತಿಗಾಗಿ ಏನಾದರೂ ಸತ್ಕಾರ್ಯವನ್ನು ಮಾಡುವನೆಂದೂ ತನ್ನ ಧರ್ಮ ಮತ್ತು ವಿಶ್ವಾಸ ಗಳಿಗಾಗಿ ಏನಾದರೂ ತ್ಯಾಗ ಮಾಡುವನೆಂದೂ ನಿರೀಕ್ಷಿಸುವುದಾದರೂ ಹೇಗೆ? ಇಂಥವನ ಹೃದಯವೂ ಕೊಳಕು, ಅವನು ಸಂಗ್ರಹಿಸಿಡುವ ಹಣವೂ ಕೊಳಕು.

ಝಕಾತ್: ಒಂದು ಪರೀಕ್ಷೆ

ಅಲ್ಲಾಹನು 'ಝಕಾತ್' ಅನ್ನು ಕಡ್ಡಾಯಗೊಳಿಸುವ ಮೂಲಕ ಪ್ರತಿಯೊಬ್ಬನನ್ನೂ ಪರೀಕ್ಷೆಗೊಳಪಡಿಸಿದ್ದಾನೆ. ತನಗೆ ಬೇಕಾದುದಕ್ಕಿಂತ ಹೆಚ್ಚಿಗಿರುವ ಸಂಪತ್ತಿನಿಂದ ದೇವನ ಹಕ್ಕನ್ನು ಪ್ರತ್ಯೇಕಿಸಿ ಅದನ್ನು ಜನರ ಸಹಾಯಕ್ಕಾಗಿ ಕೊಡುವಾತನೇ ಅಲ್ಲಾಹನ ಸೇವಕ. ಅವನು ಮಾತ್ರ ಸತ್ಯವಿಶ್ವಾಸಿಗಳ ಕೂಟದವನೆಂದು ಪರಿಗಣಿಸಲ್ಪಡಲು ಅರ್ಹನಾಗಿರುತ್ತಾನೆ. ಅಲ್ಲಾಹನಿಗಾಗಿ ಇಷ್ಟು ಚಿಕ್ಕ ತ್ಯಾಗವನ್ನೂ ಸಹಿಸದ ಸಂಕುಚಿತ ಹೃದಯದವನು ಅಲ್ಲಾಹನಿಗೆ ನಿರುಪಯುಕ್ತನಾಗಿ ಬಿಡುತ್ತಾನೆ. ಅವನು ಸತ್ಯವಿಶ್ವಾಸಿಗಳ ಪಕ್ಷಕ್ಕೆ ಸೇರಲು ಅನರ್ಹ. ಅವನೊಂದು ಕೊಳೆತ ಅಂಗವಾಗಿದ್ದು ಅದನ್ನು ದೇಹದಿಂದ ಕಡಿದು ಬೇರ್ಪಡಿಸಿ ಬಿಡುವುದೇ ಸೂಕ್ತ. ಇಲ್ಲವಾದರೆ ಅದು ಇಡೀ ದೇಹವನ್ನೇ ಕೆಡಿಸಿ ಬಿಟ್ಟೀತು. ಆದುದರಿಂದಲೇ ಪ್ರವಾದಿವರ್ಯರ(ಸ) ಕಾಲಾನಂತರ ಅರಬರ ಕೆಲವು ಗೋತ್ರಗಳು ನಮಾಝ್ ಮಾಡುತ್ತಿದ್ದರೂ ಅಲ್ಲಾಹ್ ಮತ್ತು ಪ್ರವಾದಿಗಳ ಮೇಲೆ ವಿಶ್ವಾಸ ಪ್ರಕಟಿಸುತ್ತಿದ್ದರೂ ಅವರು ಝಕಾತ್ ಕೊಡುವುದನ್ನು ನಿರಾಕರಿಸಿದಾಗ ಹಝ್ರತ್ ಅಬೂಬಕರ್‌ರವರು(ರ) ಸತ್ಯನಿಷೇಧಿಗಳ ವಿರುದ್ಧ ಯುದ್ಧ ಮಾಡುವ ರೀತಿಯಲ್ಲಿಯೇ ಈ ಜನರ ವಿರುದ್ಧವೂ ಯುದ್ಧ ಮಾಡಿದರು. ಝಕಾತ್ ಇಲ್ಲದೆ ಹೋದರೆ ನಮಾಝ್, ಉಪವಾಸ ಮತ್ತು ಸತ್ಯವಿಶ್ವಾಸದ ಸಾಕ್ಷ್ಯಗಳೆಲ್ಲವೂ ನಿರರ್ಥಕ ಹಾಗೂ ಭರವಸೆಗೆ ಅಯೋಗ್ಯವಾಗಿ ಬಿಡುತ್ತವೆಂದು ಇದರಿಂದ ವ್ಯಕ್ತವಾಗುತ್ತದೆ. ಇದು ಎಲ್ಲ ಪ್ರವಾದಿಗಳ ಸಮುದಾಯಕ್ಕೆ ಕಡ್ಡಾಯವಾಗಿತ್ತು.

ಎಲ್ಲ ಪ್ರವಾದಿಗಳ ಸಮುದಾಯಗಳ ಮೇಲೂ ಝಕಾತ್ ಕಡ್ಡಾಯವಾಗಿತ್ತು

ಪ್ರಾಚೀನ ಕಾಲದಿಂದಲೂ ಎಲ್ಲ ಪ್ರವಾದಿಗಳ ಸಮುದಾಯಗಳ ಮೇಲೂ ನಮಾಝ್ ಮತ್ತು ಝಕಾತ್‌ಗಳನ್ನು ಕಡ್ಡಾಯವಾಗಿ ವಿಧಿಸಲಾಗಿತ್ತು ಮತ್ತು ಯಾವ ಪ್ರವಾದಿಯ ಕಾಲದಲ್ಲಿಯೂ ಇಸ್ಲಾಮ್ ಧರ್ಮವು ಈ ಎರಡು ವಿಧಿಗಳಿಂದ ವಿರಹಿತವಾಗಿರಲಿಲ್ಲ ಎಂದು ಪವಿತ್ರ ಕುರ್‌ಆನನ್ನು ಅಧ್ಯಯನ ಮಾಡಿದಾಗ ನಿಮಗೆ ಕಂಡುಬರುವುದು. ಕುರ್‌ಆನಿನಲ್ಲಿ ಒಂದೆಡೆ ಪ್ರವಾದಿ ಇಬ್ರಾಹೀಮ್(ಅ) ಮತ್ತು ಅವರ ಸಂತಾನ ಪರಂಪರೆಯ ಪ್ರವಾದಿಗಳನ್ನು ಪ್ರಸ್ತಾಪಿಸಿದ ಬಳಿಕ ಈ ರೀತಿ ಹೇಳಲಾಗಿದೆ:

وَجَعَلْنٰهُمْ اَىِٕمَّةً يَّهْدُوْنَ بِاَمْرِنَا وَاَوْحَيْنَآ اِلَيْهِمْ فِعْلَ الْخَيْرٰتِ
وَاِقَامَ الصَّلٰوةِ وَاِيْتَآءَ الزَّكٰوةِ وَكَانُوْا لَنَا عٰبِدِيْنَ ﴿٧٣﴾

"ನಾವು ಅವರನ್ನು ನಮ್ಮ ಅಪ್ಪಣೆಯಂತೆ ಮಾರ್ಗದರ್ಶನ ನೀಡುತ್ತಿದ್ದ ನಾಯಕರನ್ನಾಗಿ ಮಾಡಿದೆವು ಮತ್ತು ನಾವು ಅವರಿಗೆ 'ವಹ್ಯ್' ಮೂಲಕ ಸತ್ಕರ್ಮವೆಸಗುವ, ನಮಾಝ್

ಸಂಸ್ಥಾಪಿಸುವ ಮತ್ತು ಝಕಾತ್ ನೀಡುವ ಆದೇಶ ನೀಡಿದೆವು ಮತ್ತು ಅವರು ನಮ್ಮ ಉಪಾಸಕರಾಗಿದ್ದರು." (ಅಲ್ ಅಂಬಿಯಾ: 73)

ಪ್ರವಾದಿ ಇಸ್ಮಾಈಲ್‌ರ(ಅ) ಕುರಿತು ಕುರ್‌ಆನಿನಲ್ಲಿ ಹೀಗಿದೆ:

وَكَانَ يَأْمُرُ أَهْلَهُ بِالصَّلَوٰةِ وَالزَّكَوٰةِ وَكَانَ عِندَ رَبِّهِۦ مَرْضِيًّا ۝٥٥

"ಅವರು ತನ್ನ ಮನೆಯವರಿಗೆ ನಮಾಝ್ ಮತ್ತು ಝಕಾತ್‌ನ ಅಪ್ಪಣೆ ಕೊಡುತ್ತಿದ್ದರು ಮತ್ತು ತನ್ನ ಪ್ರಭುವಿನ ಬಳಿ ಓರ್ವ ಪ್ರೀತಿ ಪಾತ್ರ ವ್ಯಕ್ತಿಯಾಗಿದ್ದರು."

(ಮರ್ಯಮ್: 55)

ಹಝ್ರತ್ ಮೂಸಾರವರು(ಅ) ತಮ್ಮ ಸಮುದಾಯಕ್ಕಾಗಿ "ದೇವಾ! ನಮಗೆ ಇಹ-ಪರಗಳೆರಡರಲ್ಲೂ ವಿಜಯ ಪ್ರಧಾನ ಮಾಡು" ಎಂದು ಬೇಡಿದಾಗ ಅಲ್ಲಾಹನ ವತಿಯಿಂದ ಅದಕ್ಕೇನುತ್ತರ ಸಿಕ್ಕಿತು ಗೊತ್ತೇ?

عَذَابِىٓ أُصِيبُ بِهِۦ مَنْ أَشَآءُ ۖ وَرَحْمَتِى وَسِعَتْ كُلَّ شَىْءٍ ۚ فَسَأَكْتُبُهَا

لِلَّذِينَ يَتَّقُونَ وَيُؤْتُونَ ٱلزَّكَوٰةَ وَٱلَّذِينَ هُم بِـَٔايَـٰتِنَا يُؤْمِنُونَ ۝١٥٦

"ನಾನು ಇಷ್ಟ ಬಂದವರಿಗೆ ಶಿಕ್ಷೆ ವಿಧಿಸುತ್ತೇನೆ. ಆದರೆ ನನ್ನ ಕರುಣೆಯು ಸರ್ವವನ್ನೂ ವ್ಯಾಪಿಸಿಕೊಂಡಿದೆ. ನಾನು ಅದನ್ನು ಆಜ್ಞೋಲ್ಲಂಘನೆ ಮಾಡದ, ಝಕಾತ್ ಕೊಡುವ ಮತ್ತು ನನ್ನ ನಿದರ್ಶನಗಳ ಮೇಲೆ ವಿಶ್ವಾಸವಿರಿಸುವವರಿಗಾಗಿ ಲಿಖಿತ ಗೊಳಿಸುವೆನು."

(ಅಲ್ ಅಲ್‌ರಾಫ್: 156)

ಹಝ್ರತ್ ಮೂಸಾರವರ(ಅ) ಜನಾಂಗವು ಸಂಕುಚಿತ ಮನೋವೃತ್ತಿಯದ್ದಾಗಿತ್ತು. ಇಂದಿನ ಯಹೂದಿಯರಂತೆ ಅವರೂ ಹಣವೆಂದರೆ ಜೀವ ಬಿಡುತ್ತಿದ್ದರು. ಆದುದರಿಂದಲೇ ಅಲ್ಲಾಹನು ಇಷ್ಟು ಉನ್ನತ ಮಟ್ಟದ ಪ್ರವಾದಿಯವರ ಪ್ರಾರ್ಥನೆಗೆ ಉತ್ತರವಾಗಿ, ನಿಮ್ಮ ಸಮುದಾಯವು ಝಕಾತ್ ವಿಧಿಯನ್ನು ಪಾಲಿಸಿದರೆ ಅದಕ್ಕೆ ನನ್ನ ಕರುಣೆಯ ವಾಗ್ದಾನವಿದೆ. ಇಲ್ಲವಾದರೆ ಅದು ನನ್ನ ಕರುಣೆಯಿಂದ ವಂಚಿತವಾಗಿಯೇ ಇರುವುದು ಮತ್ತು ನನ್ನ ಶಿಕ್ಷೆಯು ಅವರನ್ನು ಆವರಿಸಿಕೊಳ್ಳುವುದು ಎಂಬುದನ್ನು ಈಗಲೇ ಚೆನ್ನಾಗಿ ತಿಳಿದುಕೊಳ್ಳಿರಿ ಎಂದು ಸ್ಪಷ್ಟಪಡಿಸಿದನು. ಮೂಸಾರವರ(ಅ) ಬಳಿಕವೂ ಬನೀ ಇಸ್ರಾಈಲರಿಗೆ ಪದೇಪದೇ ಈ ವಿಷಯದಲ್ಲಿ ಎಚ್ಚರಿಕೆ ನೀಡಲಾಗುತ್ತಿತ್ತು. ಅಲ್ಲಾಹನ ಹೊರತು ಅನ್ಯರ ಆರಾಧನೆ ಮಾಡಬಾರದು ಮತ್ತು ನಮಾಝ್, ಝಕಾತ್‌ಗಳನ್ನು ಪಾಲಿಸಬೇಕೆಂಬ ಬಗ್ಗೆ ಪದೇ ಪದೇ ಅವರಿಂದ ಕರಾರು ಪಡೆದುಕೊಳ್ಳಲಾಗುತ್ತಿತ್ತು. (ಅಲ್‌ಬಕರ:: 83) ಕೊನೆಗಂತೂ ಅವರಿಗೆ ಸ್ಪಷ್ಟ ಎಚ್ಚರಿಕೆಯನ್ನೇ ಕುರ್‌ಆನಿನಲ್ಲಿ ನೀಡಲಾಯಿತು:

وَقَالَ اللّٰهُ اِنِّيْ مَعَكُمْ ۭ لَىِٕنْ اَقَمْتُمُ الصَّلٰوةَ وَاٰتَيْتُمُ الزَّكٰوةَ وَاٰمَنْتُمْ
بِرُسُلِيْ وَعَزَّرْتُمُوْهُمْ وَاَقْرَضْتُمُ اللّٰهَ قَرْضًا حَسَنًا لَّاُكَفِّرَنَّ عَنْكُمْ سَيِّاٰتِكُمْ

"ನೀವು ನಮಾಝನ್ನು ಸ್ಥಿರಪಡಿಸಿದರೆ, ಝಕಾತ್ ನೀಡಿದರೆ, ನನ್ನ ಸಂದೇಶವಾಹಕರ ಮೇಲೆ ವಿಶ್ವಾಸವಿರಿಸಿ ಕೊಂಡು ಅವರಿಗೆ ಸಹಾಯ ಮಾಡಿದರೆ ಮತ್ತು ಅಲ್ಲಾಹನಿಗೆ ಉತ್ತಮ ಸಾಲವನ್ನು ನೀಡುತ್ತಲಿದ್ದರೆ, ನಿಶ್ಚಯವಾಗಿಯೂ ನಾನು ನಿಮ್ಮ ಕೇಡುಗಳನ್ನೆಲ್ಲ ನಿಮ್ಮಿಂದ ನೀಗಿಸುವೆನು." (ಅಲ್‌ಮಾಇದ: 12)

ಪ್ರವಾದಿ ಮುಹಮ್ಮದ್‌ರವರಿಗಿಂತ(ಸ) ಮುಂಚೆ ಬಂದ ಪ್ರವಾದಿಗಳ ಪೈಕಿ ಕೊನೆಯವರು ಹಝ್ರತ್ ಈಸಾ(ಅ) ಆಗಿದ್ದರು. ಅವರಿಗೂ ಅಲ್ಲಾಹನು ನಮಾಝ್ ಮತ್ತು ಝಕಾತ್‌ಗಳ ಆಜ್ಞೆಯನ್ನು ಒಟ್ಟೊಟ್ಟಾಗಿ ನೀಡಿದ್ದನು. ಈ ಕುರಿತು ಕುರ್‌ಆನಿನಲ್ಲಿ ಹೀಗಿದೆ:

وَّجَعَلَنِيْ مُبٰرَكًا اَيْنَ مَا كُنْتُ ۠ وَاَوْصٰنِيْ بِالصَّلٰوةِ وَالزَّكٰوةِ مَا دُمْتُ حَيًّا ۝

"ನನ್ನನ್ನು ನಾನೆಲ್ಲಿದ್ದರೂ ಅನುಗ್ರಹೀತನಾಗಿರುವಂತೆ ಮಾಡಿದನು ಮತ್ತು ನನ್ನ ಬಾಳಿನುದ್ದಕ್ಕೂ ನಮಾಝ್ ಮತ್ತು ಝಕಾತ್ ಪಾಲಿಸುತ್ತಿರಲು ಆಜ್ಞೆಯಿತ್ತನು."

(ಮರ್ಯಮ್: 31)

ಇವುಗಳನ್ನೆಲ್ಲಾ ಪರಿಶೀಲಿಸಿದಾಗ ಇಸ್ಲಾಮ್ ಧರ್ಮವು ತನ್ನ ಆರಂಭ ಕಾಲದಿಂದಲೂ, ಪ್ರತಿಯೊಬ್ಬ ಪ್ರವಾದಿಯ ಕಾಲದಲ್ಲೂ ನಮಾಝ್ ಮತ್ತು ಝಕಾತ್ ಎಂಬ ಈ ಎರಡು ಅತಿ ಪ್ರಾಮುಖ್ಯ ಆಧಾರ ಸ್ತಂಭಗಳ ಮೇಲೆ ನಿಂತಿರುತ್ತದೆಂದೂ, ಅಲ್ಲಾಹನ ಮೇಲೆ ವಿಶ್ವಾಸವಿರಿಸಿದ ಯಾವ ಸಮುದಾಯಕ್ಕೂ ಇವೆರಡರಿಂದ ವಿನಾಯಿತಿ ಇರಲಿಲ್ಲವೆಂದೂ ತಿಳಿದು ಬರುತ್ತದೆ.

ಮುಸ್ಲಿಮ್ ಸಮುದಾಯದ ಮೇಲೆ ಝಕಾತ್ ಕಡ್ಡಾಯ

ಈಗ ಪ್ರವಾದಿ ಮುಹಮ್ಮದ್‌ರವರ(ಸ) ಶರೀಅತ್ ಅಥವಾ ಧರ್ಮಶಾಸ್ತ್ರದಲ್ಲಿ ಈ ಎರಡೂ ವಿಧಿಗಳನ್ನು ಹೇಗೆ ಜೊತೆಜೊತೆಯಾಗಿ ಕಡ್ಡಾಯಗೊಳಿಸಲಾಗಿದೆಯೆಂಬುದನ್ನು ನೋಡಿರಿ. ಪವಿತ್ರ ಕುರ್‌ಆನನ್ನು ತೆರೆದೊಡನೆ ಮೊತ್ತಮೊದಲು ಕಂಡು ಬರುವ ವಾಕ್ಯಗಳನ್ನು ಗಮನಿಸಿರಿ:

ذٰلِكَ الْكِتٰبُ لَا رَيْبَ ۛ فِيْهِ ۚ هُدًى لِّلْمُتَّقِيْنَ ۝ الَّذِيْنَ يُؤْمِنُوْنَ بِالْغَيْبِ وَيُقِيْمُوْنَ
الصَّلٰوةَ وَمِمَّا رَزَقْنٰهُمْ يُنْفِقُوْنَ ۝

"ಈ ಕುರ್‌ಆನ್ ದೈವಿಕ ಗ್ರಂಥ. ಸಂದೇಹಾತೀತವಿದು. ಮುತ್ತಕೀಗಳಿಗೆ (ಧರ್ಮ

ನಿಷ್ಠರಿಗೆ) ಮಾರ್ಗದರ್ಶಿ. ಇವರು ಅಗೋಚರ ವಿಷಯಗಳ ಮೇಲೆ ವಿಶ್ವಾಸವಿರಿಸುವವರೂ ನಮಾಝನ್ನು ಸ್ಥಿರ ಪಡಿಸುವವರೂ ನಾವು ಒದಗಿಸಿದ ಜೀವನಾಧಾರವನ್ನು ದೇವ ಮಾರ್ಗ ದಲ್ಲಿ ಖರ್ಚು ಮಾಡುವವರೂ ಆಗಿರುತ್ತಾರೆ." (ಅಲ್‌ಬಕರಃ 2, 3)

ಇನ್ನೊಂದು ಕಡೆ ಹೀಗೆ ಹೇಳಲಾಗಿದೆ:

أُولَٰٓئِكَ عَلَىٰ هُدًى مِّن رَّبِّهِمْ ۖ وَأُولَٰٓئِكَ هُمُ ٱلْمُفْلِحُونَ ۝٥

"ಅಂತಹವರು ನಮ್ಮ ಪ್ರಭುವಿನ ಸನ್ಮಾರ್ಗದಲ್ಲಿದ್ದಾರೆ ಮತ್ತು ಅವರೇ ಯಶಸ್ವಿಯಾಗು ವವರು." (ಅಲ್‌ಬಕರಃ 5)

ಅರ್ಥಾತ್- ಸತ್ಯವಿಶ್ವಾಸವಿಲ್ಲದವರೂ ನಮಾಝ್ ಮತ್ತು ಝಕಾತ್‌ಗಳನ್ನು ಪಾಲಿಸ ದವರೂ ಸನ್ಮಾರ್ಗದಲ್ಲಿಲ್ಲ ಮತ್ತು ಅವರು ವಿಜಯಿಗಳಾಗಲಿಕ್ಕೂ ಸಾಧ್ಯವಿಲ್ಲ.

ಈಗ ನೀವು ಇದೇ ಅಲ್‌ಬಕರಃ ಅಧ್ಯಾಯವನ್ನು ಪಠಿಸುತ್ತಾ ಮುಂದುವರಿಯಿರಿ, ಕೆಲವೇ ಪುಟಗಳ ಬಳಿಕ ಅದರಲ್ಲಿ ಹೀಗೆ ಆದೇಶಿಸಲಾಗಿದೆ:

وَأَقِيمُوا۟ ٱلصَّلَوٰةَ وَءَاتُوا۟ ٱلزَّكَوٰةَ وَٱرْكَعُوا۟ مَعَ ٱلرَّٰكِعِينَ ۝٤٣

"ನಮಾಝನ್ನು ಸಂಸ್ಥಾಪಿಸಿರಿ, ಝಕಾತನ್ನು ಕೊಡಿರಿ ಮತ್ತು ರುಕೂಅ್ ಮಾಡುವವ ರೊಂದಿಗೆ ರುಕೂಅ್ ಮಾಡಿರಿ." (ಬಾಗುವವರ ಜೊತೆ ನೀವೂ ಬಾಗಿರಿ ಅರ್ಥಾತ್ ಸಾಮೂಹಿಕ ವಾಗಿ ನಮಾಝ್ ಮಾಡಿರಿ) (ಸೂಕ್ತ: 43)

ಇನ್ನೂ ಮುಂದುವರಿದಾಗ ಅದೇ ಅಧ್ಯಾಯದಲ್ಲಿ ನಿಮಗೆ ಈ ವಚನ ಸಿಗುವುದು:

لَّيْسَ ٱلْبِرَّ أَن تُوَلُّوا۟ وُجُوهَكُمْ قِبَلَ ٱلْمَشْرِقِ وَٱلْمَغْرِبِ وَلَٰكِنَّ ٱلْبِرَّ مَنْ ءَامَنَ
بِٱللَّهِ وَٱلْيَوْمِ ٱلْءَاخِرِ وَٱلْمَلَٰٓئِكَةِ وَٱلْكِتَٰبِ وَٱلنَّبِيِّـۧنَ وَءَاتَى ٱلْمَالَ عَلَىٰ حُبِّهِۦ ذَوِى ٱلْقُرْبَىٰ
وَٱلْيَتَٰمَىٰ وَٱلْمَسَٰكِينَ وَٱبْنَ ٱلسَّبِيلِ وَٱلسَّآئِلِينَ وَفِى ٱلرِّقَابِ وَأَقَامَ ٱلصَّلَوٰةَ
وَءَاتَى ٱلزَّكَوٰةَ وَٱلْمُوفُونَ بِعَهْدِهِمْ إِذَا عَٰهَدُوا۟ ۖ وَٱلصَّٰبِرِينَ فِى ٱلْبَأْسَآءِ وَٱلضَّرَّآءِ
وَحِينَ ٱلْبَأْسِ ۗ أُو۟لَٰٓئِكَ ٱلَّذِينَ صَدَقُوا۟ ۖ وَأُو۟لَٰٓئِكَ هُمُ ٱلْمُتَّقُونَ ۝١٧٧

"ನೀವು ನಿಮ್ಮ ಮುಖಗಳನ್ನು ಪೂರ್ವದಿಕ್ಕಿಗೆ ಅಥವಾ ಪಶ್ಚಿಮ ದಿಕ್ಕಿಗೆ ಮಾಡಿ ಕೊಳ್ಳುವುದು ಧರ್ಮಶೀಲತೆಯಲ್ಲ. ನಿಜವಾಗಿ ಒಬ್ಬನು ಅಲ್ಲಾಹನನ್ನೂ ನಿರ್ಣಾಯಕ ದಿನವನ್ನೂ ದೇವಚರರನ್ನೂ ಅಲ್ಲಾಹನು ಅವತೀರ್ಣಗೊಳಿಸಿದ ಗ್ರಂಥವನ್ನೂ ಅವನ ಸಂದೇಶ

ವಾಹಕರನ್ನೂ ಹೃತ್ಪೂರ್ವಕ ಒಪ್ಪಿಕೊಳ್ಳುವುದೂ ಅಲ್ಲಾಹನ ಸಂಪ್ರೀತಿಗಾಗಿ ತನ್ನ ಮನಮೆಚ್ಚುಗೆಯ ಸಂಪತ್ತನ್ನು ಬಂಧುಗಳಿಗೂ ಅನಾಥರಿಗೂ ನಿರ್ಗತಿಕರಿಗೂ ಪ್ರಯಾಣಿಕರಿಗೂ ಸಹಾಯಾರ್ಥಿಗಳಿಗೂ ದಾಸ್ಯವಿಮೋಚನೆಗಾಗಿಯೂ ವ್ಯಯಿಸುವುದೂ ನಮಾಝನ್ನು ಸಂಸ್ಥಾಪಿಸುವುದೂ ಝಕಾತನ್ನು (ಕಡ್ಡಾಯ ದಾನವನ್ನು) ನೀಡುವುದೂ ವಾಗ್ದಾನ ಮಾಡಿದರೆ ಪೂರೈಸುವುದೂ ಕಷ್ಟ, ಕಾರ್ಪಣ್ಯಗಳಲ್ಲಿಯೂ ಸತ್ಯಾಸತ್ಯಗಳ ಸಮರವಾಗುತ್ತಿರುವಾಗಲೂ ಸಹನೆಯಿಂದಿರುವುದೂ ಧರ್ಮಶೀಲತೆಯಾಗಿರುತ್ತದೆ. ಇವರೇ ಸತ್ಯಸಂಧರು ಮತ್ತು ಇವರೇ ಧರ್ಮನಿಷ್ಠರು." (ಸೂಕ್ತ: 177)

ಮತ್ತೂ ಮುಂದುವರಿದು ನೋಡಿರಿ ಸೂರಃ ಅಲ್‌ಮಾಇದಃದಲ್ಲಿ ಹೀಗಿದೆ:

إِنَّمَا وَلِيُّكُمُ اللَّهُ وَرَسُولُهُ وَالَّذِينَ آمَنُوا الَّذِينَ يُقِيمُونَ الصَّلَاةَ
وَيُؤْتُونَ الزَّكَاةَ وَهُمْ رَاكِعُونَ ﴿٥٥﴾ وَمَن يَتَوَلَّ اللَّهَ وَرَسُولَهُ وَالَّذِينَ
آمَنُوا فَإِنَّ حِزْبَ اللَّهِ هُمُ الْغَالِبُونَ ﴿٥٦﴾

"ನಿಮ್ಮ ಆಪ್ತ ಮಿತ್ರರು ವಾಸ್ತವದಲ್ಲಿ ಅಲ್ಲಾಹ್, ಅಲ್ಲಾಹನ ಸಂದೇಶವಾಹಕರು ಮತ್ತು ನಮಾಝನ್ನು ಸಂಸ್ಥಾಪಿಸುವ, ಝಕಾತ್ ಕೊಡುವ ಹಾಗೂ ಅಲ್ಲಾಹನ ಮುಂದೆ ಬಾಗುವ ಸತ್ಯವಿಶ್ವಾಸಿಗಳು ಮಾತ್ರ. ಅಲ್ಲಾಹನನ್ನೂ ಅವನ ಸಂದೇಶವಾಹಕನನ್ನು ಮತ್ತು ಸತ್ಯವಿಶ್ವಾಸಿಗಳನ್ನು ತನ್ನ ಆಪ್ತ ಮಿತ್ರರನ್ನಾಗಿ ಮಾಡಿಕೊಂಡವನು - ಅಲ್ಲಾಹನ ಪಕ್ಷವೇ ವಿಜಯ ಹೊಂದುವ ಪಕ್ಷವೆಂದು ಅರಿತಿರಬೇಕು." (ಸೂಕ್ತ: 55, 56)

ನಮಾಝ್ ಮತ್ತು ಝಕಾತ್: ಸತ್ಯವಿಶ್ವಾಸಿಗಳ ಲಕ್ಷಣ

ಈ ಪ್ರಮುಖ ಪವಿತ್ರ ವಚನದಲ್ಲಿ ಒಂದು ದೊಡ್ಡ ನಿಯಮವನ್ನು ವಿವರಿಸಲಾಗಿದೆ. ಮೊದಲನೆಯದಾಗಿ ನಮಾಝ್ ಮಾಡುವವರು ಮತ್ತು ಝಕಾತ್ ಕೊಡುವವರು ಮಾತ್ರ ಸತ್ಯವಿಶ್ವಾಸಿಗಳೆಂದು ಈ ಸೂಕ್ತದಿಂದ ತಿಳಿಯಿತು. ಇಸ್ಲಾಮಿನ ಈ ಎರಡು ಆಧಾರಸ್ತಂಭಗಳನ್ನು ನಿರ್ಲಕ್ಷಿಸುವವನು ತಾನು ಸತ್ಯವಿಶ್ವಾಸಿ ಎಂದು ಹೇಳಿದರೆ ಅದು ಸುಳ್ಳು. ಎರಡನೆಯದಾಗಿ ಅಲ್ಲಾಹ್, ಅವನ ಸಂದೇಶವಾಹಕ ಮತ್ತು ಸತ್ಯವಿಶ್ವಾಸಿಗಳ ಪ್ರತ್ಯೇಕವಾದ ಒಂದು ಪಕ್ಷವಿದೆ. ಎಲ್ಲಾ ಪಕ್ಷ ಪಂಗಡಗಳನ್ನು ತೊರೆದು ಈ ಪಕ್ಷಕ್ಕೆ ಸೇರಬೇಕಾದುದು ಸತ್ಯವಿಶ್ವಾಸಿಯ ಕರ್ತವ್ಯ. ತಂದೆ, ಸಹೋದರ, ಮಗ, ನೆರೆಯವ, ದೇಶಬಾಂಧವ ಅಥವಾ ಇನ್ನಾರೇ ಆಗಿರಲಿ ಅವರು ಈ ಪಕ್ಷದಿಂದ ಹೊರಗಿರುವವರಾಗಿದ್ದರೆ ಅವರನ್ನು ಅತಿಯಾಗಿ ಪ್ರೀತಿಸುವ ಮತ್ತು ಅವರನ್ನು ಬೆಂಬಲಿಸುವ ಮುಸ್ಲಿಮನು, ತನ್ನಂತಹವನಿಗೆ ಅಲ್ಲಾಹನ ಮೆಚ್ಚುಗೆ, ಪ್ರೀತಿ ಮತ್ತು ಬೆಂಬಲ ಸಿಗುವುದೆಂದು ನಿರೀಕ್ಷಿಸಬಾರದು ಎಂದು ಇದರಿಂದ ವ್ಯಕ್ತವಾಯಿತು. ಕೊನೆಯದಾಗಿ, ಸತ್ಯವಿಶ್ವಾಸಿಗಳು ಏಕಾಗ್ರಚಿತ್ತದಿಂದ ಅಲ್ಲಾಹನನ್ನು, ಸಂದೇಶವಾಹಕರನ್ನು ಮತ್ತು ಸತ್ಯವಿಶ್ವಾಸಿಗಳನ್ನು

ಮಾತ್ರ ತಮ್ಮ ಸಂರಕ್ಷಕ, ಸ್ನೇಹಿತ ಮತ್ತು ಸಂಗಾತಿಗಳನ್ನಾಗಿ ಮಾಡಿಕೊಂಡಾಗ ಅವರಿಗೆ ಔನ್ನತ್ಯ ಹಾಗೂ ವಿಜಯ ದೊರಕುವುದು ಎಂಬುದನ್ನು ಈ ವಾಕ್ಯದಿಂದ ತಿಳಿದಂತಾಯಿತು.

ಇಸ್ಲಾಮೀ ಭ್ರಾತೃತ್ವದ ಬುನಾದಿಗಳು

ಸೂರಃ ಅತ್ತೌಬಃದಲ್ಲಿ ಅಲ್ಲಾಹನು ಮುಸ್ಲಿಮರಿಗೆ ಸತ್ಯನಿಷೇಧಿಗಳ ಮತ್ತು ಬಹುದೇವ ವಿಶ್ವಾಸಿಗಳ ವಿರುದ್ಧ ಹೋರಾಡುವ ಆಜ್ಞೆ ನೀಡಿರುವನು. ಅಲ್ಲಿ ಅನೇಕ ರುಕೂಅ್‌ಗಳಲ್ಲಿ ನಿರಂತರವಾಗಿ ಯುದ್ಧದ ಕುರಿತಾಗಿಯೇ ಆಜ್ಞೆಗಳನ್ನು ನೀಡಲಾಗಿದೆ. ಇದೇ ಸರಣಿಯಲ್ಲಿ ಈ ರೀತಿ ಹೇಳಲಾಗಿದೆ:

فَإِنْ تَابُوا وَأَقَامُوا الصَّلَوٰةَ وَآتَوُا الزَّكَوٰةَ فَإِخْوَانُكُمْ فِي الدِّينِ ۗ
وَنُفَصِّلُ الْآيَاتِ لِقَوْمٍ يَعْلَمُونَ ﴿١١﴾

"ಆದರೂ ಇವರು ಪಶ್ಚಾತ್ತಾಪ ಪಟ್ಟರೆ ಮತ್ತು ನಮಾಝನ್ನು ಸಂಸ್ಥಾಪಿಸಿ ಝಕಾತ್ ಕೊಟ್ಟರೆ, ನಿಮ್ಮ ಧರ್ಮಬಾಂಧವರಾಗಿರುತ್ತಾರೆ. ತಿಳುವಳಿಕೆಯುಳ್ಳವರಿಗೆ ನಾವು ನಮ್ಮ ಆದೇಶಗಳನ್ನು ವಿವರಿಸುತ್ತೇವೆ." (ಅತ್ತೌಬಃ 11)

ಅರ್ಥಾತ್ - ಅವರು ಕೇವಲ ಕುಫ್ರ್ ಮತ್ತು ಶಿರ್ಕ್‌ಗಳಿಂದ ಪಶ್ಚಾತ್ತಾಪಪಟ್ಟು ಸತ್ಯ ವಿಶ್ವಾಸಿಗಳಾದರೆ ಮಾತ್ರ ಸಾಲದು, ಈ ಪಶ್ಚಾತ್ತಾಪ ಮತ್ತು ಸತ್ಯವಿಶ್ವಾಸ ಸ್ವೀಕಾರಗಳು ಅವರು ನಮಾಝನ್ನು ಸಂಸ್ಥಾಪಿಸಿದಾಗ ಮತ್ತು ಝಕಾತ್ ಕೊಟ್ಟಾಗ ಮಾತ್ರ ಸತ್ಯವೆಂದು ಸಾಬೀತಾಗುತ್ತವೆ. ಅವರು ತಮ್ಮ ಈ ಕ್ರಿಯೆಗಳಿಂದ ಅದನ್ನು ಸಾಬೀತುಪಡಿಸಿದರೆ ಆಗ ಅವರು ನಿಮ್ಮ ಧಾರ್ಮಿಕ ಬಂಧುಗಳು, ಇಲ್ಲವಾದರೆ ಅವರನ್ನು ನಿಮ್ಮ ಧರ್ಮ ಬಾಂಧವರೆಂದು ತಿಳಿಯಬೇಡಿರಿ ಮತ್ತು ಅವರ ವಿರುದ್ಧ ಹೋರಾಟವನ್ನು ನಿಲ್ಲಿಸಬೇಡಿರಿ.

ಇದೇ ಅಧ್ಯಾಯದಲ್ಲಿ ಇನ್ನೊಂದು ಕಡೆ ಹೀಗೆನ್ನಲಾಗಿದೆ:

وَالْمُؤْمِنُونَ وَالْمُؤْمِنَاتُ بَعْضُهُمْ أَوْلِيَاءُ بَعْضٍ ۚ يَأْمُرُونَ بِالْمَعْرُوفِ
وَيَنْهَوْنَ عَنِ الْمُنْكَرِ وَيُقِيمُونَ الصَّلَوٰةَ وَيُؤْتُونَ الزَّكَوٰةَ وَيُطِيعُونَ اللَّهَ وَرَسُولَهُ ۚ أُولَٰئِكَ
سَيَرْحَمُهُمُ اللَّهُ ۗ إِنَّ اللَّهَ عَزِيزٌ حَكِيمٌ ﴿٧١﴾

"ಸತ್ಯವಿಶ್ವಾಸಿ ಪುರುಷರು ಮತ್ತು ಸತ್ಯವಿಶ್ವಾಸಿ ಸ್ತ್ರೀಯರು ಇವರೆಲ್ಲ ಪರಸ್ಪರ ಆಪ್ತರು; ಅವರು ಒಳಿತುಗಳ ಅಪ್ಪಣೆ ಕೊಡುತ್ತಾರೆ ಮತ್ತು ಕೆಡುಕುಗಳಿಂದ ತಡೆಯುತ್ತಾರೆ. ನಮಾಝ್ ಸಂಸ್ಥಾಪಿಸುತ್ತಾರೆ, ಝಕಾತ್ ಕೊಡುತ್ತಾರೆ ಮತ್ತು ಅಲ್ಲಾಹ್ ಹಾಗೂ ಅವನ ರಸೂಲರ ಅನುಸರಣೆ ಮಾಡುತ್ತಾರೆ. ಇವರ ಮೇಲೆ ಅಲ್ಲಾಹನ ಕರುಣೆ ಅವತೀರ್ಣಗೊಂಡೇ ತೀರುವುದು. ನಿಶ್ಚಯವಾಗಿಯೂ ಅಲ್ಲಾಹ್ ಮಹಾ ಪ್ರತಾಪಿಯೂ ಯುಕ್ತಿಪೂರ್ಣನೂ ಆಗಿರುತ್ತಾನೆ."

(ಅತ್ತೌಬಃ 71)

ಕೇಳಿದಿರಾ? ಸತ್ಯವಿಶ್ವಾಸದ ಘೋಷಣೆ ಮಾಡಿಕೊಂಡ ಬಳಿಕ ಕಾರ್ಯತಃ ನಮಾಝ್ ಮತ್ತು ಝಕಾತ್‌ಗಳ ಪಾಲನೆ ಮಾಡದಾತನು ಮುಸ್ಲಿಮರ ಬಂಧುವಾಗಲು ಸಾಧ್ಯವೇ ಇಲ್ಲ. ಈಮಾನ್, ನಮಾಝ್, ಝಕಾತ್ ಇವು ಮೂರು ಸೇರಿ ಸತ್ಯವಿಶ್ವಾಸಿಗಳ ಪಕ್ಷ ರಚನೆಯಾಗುತ್ತದೆ. ಇವು ಮೂರನ್ನು ಪಾಲಿಸುವವರು ಮಾತ್ರ ಈ ದಿವ್ಯ ಪಕ್ಷದೊಳಗಿರುವರು. ಪ್ರೇಮ, ಸೌಹಾರ್ದ, ಸಹಕಾರಗಳ ಗಾಢ ಸಂಬಂಧವು ಅವರೊಳಗೆ ಸ್ಥಿರವಾಗಿರುವುದು. ಈ ಮೂರನ್ನು ಪಾಲಿಸದೆ ಕೇವಲ ನಾಮ ಮಾತ್ರಕ್ಕೆ ಮುಸ್ಲಿಮರೆನಿಸಿಕೊಂಡವರೂ ಆ ಪಕ್ಷದಿಂದ ಹೊರಗೆ ಉಳಿಯುವರು. ಅಂಥವರೊಂದಿಗೆ ಪ್ರೇಮ, ಸೌಹಾರ್ದ, ಸಹಕಾರಗಳ ಸಂಬಂಧಗಳನ್ನಿರಿಸುವುದೆಂದರೆ ನೀವು ಅಲ್ಲಾಹನ ಕಾನೂನುಗಳನ್ನು ಮುರಿದು ಅಲ್ಲಾಹನ ಪಕ್ಷವನ್ನು ಛಿದ್ರಗೊಳಿಸಿದಂತೆಯೇ ಸರಿ. ಅನಂತರ ನೀವು ಲೋಕದಲ್ಲಿ ಔನ್ನತ್ಯದಿಂದಿರಬೇಕೆಂದು ನಿರೀಕ್ಷಿಸುವುದು ಹೇಗೆ?

ಅಲ್ಲಾಹನ ನೆರವಿಗಿರುವ ಶರತ್ತುಗಳು

ಸೂರಃ ಅಲ್‌ಹಜ್ಜ್‌ನಲ್ಲಿ ಹೀಗೆ ಹೇಳಲಾಗಿದೆ:

وَلَيَنصُرَنَّ اللَّهُ مَن يَنصُرُهُ ۗ إِنَّ اللَّهَ لَقَوِيٌّ عَزِيزٌ ۝٤٠ الَّذِينَ
إِن مَّكَّنَّاهُمْ فِي الْأَرْضِ أَقَامُوا الصَّلَاةَ وَآتَوُا الزَّكَاةَ وَأَمَرُوا
بِالْمَعْرُوفِ وَنَهَوْا عَنِ الْمُنكَرِ ۗ وَلِلَّهِ عَاقِبَةُ الْأُمُورِ ۝٤١

"ಯಾರು ಅಲ್ಲಾಹನಿಗೆ ಸಹಾಯ ಮಾಡುವರೋ ಅವರಿಗೆ ಅವನು ಖಂಡಿತ ಸಹಾಯ ಮಾಡುವನು. ಅಲ್ಲಾಹನು ಮಹಾ ಶಕ್ತಿವಂತನೂ ಪ್ರಬಲನೂ ಆಗಿರುತ್ತಾನೆ. (ಇವರು ಎಂಥವರೆಂದರೆ) ನಾವು ಇವರಿಗೆ ಭೂಮಿಯಲ್ಲಿ ಅಧಿಕಾರ ಪ್ರದಾನ ಮಾಡಿದರೆ ಇವರು ನಮಾಝ್ ಸಂಸ್ಥಾಪಿಸುವರು, ಝಕಾತ್ ಕೊಡುವರು, ಒಳಿತಿನ ಆಜ್ಞೆ ಕೊಡುವರು ಮತ್ತು ಕೆಡುಕಿನಿಂದ ತಡೆಯುವರು ಮತ್ತು ಸಕಲ ವ್ಯವಹಾರಗಳ ಅಂತಿಮ ಪರಿಣಾಮವು ಅಲ್ಲಾಹನ ಕೈಯಲ್ಲಿದೆ."

(ಸೂಕ್ತ: 40, 41)

ಈ ಸೂಕ್ತದಲ್ಲಿ ಹಿಂದೆ ಬನೀ ಇಸ್ರಾಈಲರಿಗೆ ನೀಡಲಾಗಿದ್ದ ಸೂಚನೆಯನ್ನೇ ಮುಸ್ಲಿಮರಿಗೂ ನೀಡಲಾಗಿದೆ. ಅಲ್ಲಾಹನು ಬನೀ ಇಸ್ರಾಈಲರಿಗೆ ಎಂತಹ ಎಚ್ಚರಿಕೆ ಕೊಟ್ಟಿದ್ದನೆಂಬುದನ್ನು ಈಗ ತಾನೇ ನಿಮಗೆ ತಿಳಿಸಿದ್ದೇನೆ. ನೀವು ನಮಾಝ್ ಸಂಸ್ಥಾಪಿಸುವ, ಝಕಾತ್ ಕೊಡುವ ಮತ್ತು ನಮ್ಮ ಸಂದೇಶವಾಹಕರ ಸತ್ಯ ಪ್ರಚಾರ ಕಾರ್ಯದಲ್ಲಿ ಅವರಿಗೆ ಸಹಕಾರ ನೀಡುತ್ತಿರುವ ವರೆಗೂ ಅರ್ಥಾತ್- ನೀವು ನನ್ನ ಶಾಸನವನ್ನು ಈ ಲೋಕದಲ್ಲಿ ಜಾರಿಗೊಳಿಸಲಿ

ಕ್ಕಾಗಿ ಶ್ರಮಿಸುತ್ತಿರುವ ವರೆಗೂ ನಾನು ನಿಮ್ಮೊಂದಿಗಿರುವೆನು. ಆದರೆ ನೀವು ಈ ಕರ್ತವ್ಯವನ್ನು ಕೈಬಿಟ್ಟೊಡನೆ ನಾನು ನಿಮಗೆ ನೀಡುತ್ತಿರುವ ಸಹಾಯ ಹಸ್ತವನ್ನು ಹಿಂದಕ್ಕೆಳೆದುಕೊಳ್ಳುವೆನು ಎಂದು ಅವರೊಡನೆ ಸ್ಪಷ್ಟವಾಗಿ ಹೇಳಲಾಗಿದೆ. ಈಗ ಈ ಮಾತನ್ನೇ ಮುಸ್ಲಿಮರೊಡನೆಯೂ ಹೇಳಲಾಗಿದೆ. ನೀವು ಇಹಲೋಕದಲ್ಲಿ ಪ್ರಾಬಲ್ಯವನ್ನು ಹೊಂದಿ ನಮಾಝನ್ನು ಸಂಸ್ಥಾಪಿಸಿದರೆ, ಝುಕಾತ್ ಕೊಟ್ಟರೆ, ಸದಾಚಾರಗಳ ಪ್ರಸಾರಗೈದರೆ ಮತ್ತು ದುರಾಚಾರಗಳ ಉಚ್ಚಾಟನೆಗಾಗಿ ಶ್ರಮಿಸಿದರೆ ನಾನು ನಿಮ್ಮ ಸಹಾಯಕನಾಗುವೆನು. ನನ್ನ ಸಹಾಯ ಪಡೆಯುವಾತನನ್ನು ಸೋಲಿಸು ವವರು ಯಾರಿದ್ದಾರೆ? ಆದರೆ ನೀವು ಝುಕಾತನ್ನು ನಿರಾಕರಿಸಿದರೆ ಭೂಮಿಯಲ್ಲಿ ಪ್ರಾಬಲ್ಯವನ್ನು ಪಡೆದು ಸದಾಚಾರಗಳ ಬದಲಿಗೆ ದುರಾಚಾರಗಳನ್ನು ಹರಡಲು ಹಾಗೂ ದುರಾಚಾರಗಳ ಬದಲು ಸದಾಚಾರಗಳನ್ನು ನಾಶಗೊಳಿಸಲು ಹೊರಟರೆ, ನನ್ನ ಕೀರ್ತಿ ಧ್ವಜವನ್ನೇರಿಸುವ ಬದಲಿಗೆ ನಿಮ್ಮ ಕೀರ್ತಿಗಾಗಿ ಶ್ರಮಿಸಿದರೆ ಮತ್ತು ವಿವಿಧ ತೆರಿಗೆಗಳನ್ನು ವಸೂಲು ಮಾಡಿ ಈ ಭೂಮಿಯಲ್ಲಿ ನಿಮಗಾಗಿ ಸ್ವರ್ಗ ನಿರ್ಮಾಣ ಮಾಡಿಕೊಳ್ಳುವುದೇ ಭೂಮಿಯ ಆಧಿಪತ್ಯದ ಉದ್ದೇಶವೆಂದು ತಿಳಿದುಕೊಂಡರೆ ನಿಮಗೆ ನನ್ನ ಸಹಾಯ ಖಂಡಿತ ಸಿಗಲಾರದು. ಅನಂತರ ಶೈತಾನ್ ಮಾತ್ರ ನಿಮ್ಮ ಸಹಾಯಕನಾಗಲು ಉಳಿದಿರುವನು ಎಂದು ಅವರನ್ನು ಎಚ್ಚರಿಸಲಾಗಿದೆ.

ಮುಸ್ಲಿಮರಿಗೆ ಎಚ್ಚರಿಕೆ

ಅಲ್ಲಾಹು ಅಕ್ಬರ್! ಎಂತಹ ಪಾಠದಾಯಕ ಸನ್ನಿವೇಶವಿದು! ಬನೀ ಇಸ್ರಾಈಲರು ತಮಗೆ ನೀಡಲಾದ ಎಚ್ಚರಿಕೆಯನ್ನು ಕೇವಲ ಪೊಳ್ಳು ಬೆದರಿಕೆ ಎಂದು ತಿಳಿದುಕೊಂಡು ಅದಕ್ಕೆ ವಿರುದ್ಧವಾಗಿ ಕಾರ್ಯವೆಸಗಿ ತಮ್ಮ ಪರಿಣಾಮವನ್ನು ಕಂಡುಕೊಂಡರು. (ಸದ್ಯ ಅವರಿಗೆ ಒಂದು ಪರಿಮಿತ ಪ್ರಮಾಣದ ರಾಷ್ಟ್ರಾಧಿಕಾರವೇನೋ ದೊರಕಿದೆಯಾದರೂ ಅದು ಕೇವಲ ಅಮೇರಿಕಾ ಮತ್ತು ಬ್ರಿಟಿಷರ ರಾಜಕೀಯ ಕುತಂತ್ರದ ಆಧಾರದಲ್ಲಿ ಒಂದು ರಾಷ್ಟ್ರವನ್ನು ಪಡೆದ ಜನಾಂಗ ವೆಂಬಂತೆ ತೋರುತ್ತದೆ. ಯಥಾರ್ಥದಲ್ಲಿ ಅದಕ್ಕೆ ಸ್ವಂತ ಅಸ್ತಿತ್ವವೇನೂ ಇಲ್ಲ.) ಈ ಯಹೂದಿಯರು ಎಷ್ಟೋ ಕಾಲದಿಂದ ಭೂಮಿಯ ನಾನಾ ಭಾಗಗಳಲ್ಲಿ ಅಲೆದಾಡಿ ಕೊಂಡಿದ್ದರು. ಹೋದ ಹೋದಲ್ಲಿಂದೆಲ್ಲಾ ಅಟ್ಟಲ್ಪಡುತ್ತಿದ್ದರು. ಎಲ್ಲೂ ಅವರಿಗೆ ನೆಲೆಯಿರಲಿಲ್ಲ. ಕೋಟಿ ಗಟ್ಟಲೆ ರೂಪಾಯಿ ಮೌಲ್ಯದ ನಿಧಿಗಳು ಅವರಲ್ಲಿದ್ದುವು. ಅದು ಜಗತ್ತಿನಲ್ಲಿ ಅತ್ಯಂತ ಶ್ರೀಮಂತ ಜನಾಂಗವಾಗಿತ್ತು. ಆದರೆ ಈ ಅಪಾರ ಸಂಪತ್ತು ಅವರಿಗೆ ಯಾವ ಉಪಯೋಗಕ್ಕೂ ಬರಲಿಲ್ಲ. ಅವರು ನಮಾಝಿನ ಬದಲಿಗೆ ಅನಾಚಾರ ಮತ್ತು ಝುಕಾತ್‌ನ ಬದಲಿಗೆ ಶಾಪಗ್ರಸ್ತ ಬಡ್ಡಿಕೋರತನವನ್ನು ಕೈಗೊಂಡರು. ಈ ಮೂಲಕ ಅವರು ಈ ಶಾಪವನ್ನು ಸ್ವತಃ ತಮ್ಮ ಮೇಲೆ ಎರಗಿಸಿಕೊಂಡುದು ಮಾತ್ರವಲ್ಲ, ಅದನ್ನೆತ್ತಿಕೊಂಡು ಪ್ಲೇಗ್ ರೋಗಾಣುಗಳನ್ನು ಹೊಂದಿದ ಇಲಿಗಳಂತೆ ಜಗತ್ತಿನಾದ್ಯಂತ ಹಬ್ಬಿಸಿದರು. ಈಗಲೂ ಹಬ್ಬಿಸುತ್ತಿದ್ದಾರೆ. ಅನಂತರ ಇದೇ ಎಚ್ಚರಿಕೆಯನ್ನು ಮುಸ್ಲಿಮರಿಗೂ ನೀಡಲಾಯಿತು. ಆದರೆ

ಅವರೂ ಅದರ ಬಗ್ಗೆ ಕಾಳಜಿ ವಹಿಸದೆ ನಮಾಝ್ ಮತ್ತು ಝಕಾತನ್ನು ನಿರ್ಲಕ್ಷಿಸಿದರು. ಅವರು ತಮ್ಮ ದೇವದತ್ತವಾದ ಶಕ್ತಿ ಸಾಮರ್ಥ್ಯಗಳನ್ನು ಒಳಿತುಗಳ ಪ್ರಚಾರಕ್ಕಾಗಿಯೂ ಕೆಡುಕುಗಳ ಉಚ್ಚಾಟನೆಗಾಗಿಯೂ ವಿನಿಯೋಗಿಸುವುದನ್ನು ಬಿಟ್ಟುಬಿಟ್ಟರು. ಇದರ ಪರಿಣಾಮವನ್ನು ನೋಡಿರಿ. ಅವರಿಂದು ಅಧಿಕಾರ ಸ್ಥಾನದಿಂದ ತಳ್ಳಲ್ಪಟ್ಟಿದ್ದಾರೆ. ಇಡೀ ಜಗತ್ತಿನಲ್ಲಿ ಅವರು ಅಕ್ರಮಿಗಳ ಅಕ್ರಮಕ್ಕೆ ತುತ್ತಾಗಿದ್ದಾರೆ. ಜಗತ್ತಿನಲ್ಲಿ ಅತ್ಯಂತ ದುರ್ಬಲರೂ ಪರಾಜಿತರೂ ಆಗಿದ್ದಾರೆ. ಈ ರೀತಿ ಅವರು ನಮಾಝ್ ಮತ್ತು ಝಕಾತನ್ನು ತ್ಯಜಿಸಿದ ದುಷ್ಪರಿಣಾಮವನ್ನಂತೂ ಕಂಡುಕೊಂಡಂತಾಯಿತು. ಇದೀಗ ಮುಸ್ಲಿಮರನ್ನು ನಿರ್ಲಜ್ಜೆ, ಅಶ್ಲೀಲ ಮತ್ತು ದುರಾಚಾರಗಳ ಕೂಪದಲ್ಲಿ ತಳ್ಳಲು ಬಯಸುವ ಒಂದು ಪಂಗಡವು ಅವರೊಳಗಿಂದಲೇ ಉದಯಿಸಿ, "ನಿಮ್ಮ ದಾರಿದ್ರ್ಯವನ್ನು ತೊಲಗಿಸಲಿಕ್ಕಾಗಿ ಬ್ಯಾಂಕುಗಳನ್ನೂ ವಿಮಾ ಕಂಪೆನಿಗಳನ್ನೂ ಸ್ಥಾಪಿಸಿರಿ. ಬಡ್ಡಿ ವ್ಯವಹಾರವನ್ನು ಆರಂಭಿಸಿರಿ" ಎಂದು ಬೋಧಿಸುತ್ತಿದೆ. ಅವರು ಇದನ್ನನುಸರಿಸಿದರೆ ದೇವನಾಣೆಗೂ ಯಹೂದಿಯರ ಮೇಲೆರಗಿದ ದುಃಖ ದುಮ್ಮಾನಗಳು ಅವರ ಮೇಲೂ ಎರಗದಿರಲಾರದು. ಬನೀ ಇಸ್ರಾಈಲರು ಬಲಿಯಾದ ಅಲ್ಲಾಹನ ಶಾಪಕ್ಕೆ ಇವರೂ ಒಳಗಾಗುವರು.

ಝಕಾತ್ ಕೊಡದೆ ಇರುವವರ ದುರ್ಗತಿ

ಸಹೋದರರೇ, ಝಕಾತ್ ಎಂದರೇನು? ಅಲ್ಲಾಹನು ಅದರಲ್ಲಿ ಎಂತಹ ಅದ್ಭುತ ಶಕ್ತಿಯನ್ನು ತುಂಬಿದ್ದಾನೆ? ಇಂದಿನ ಮುಸ್ಲಿಮರು ತೀರಾ ಕ್ಷುಲ್ಲಕವೆಂಬಂತೆ ಕಾಣುವ ಅಲ್ಲಾಹನ ಈ ಅನುಗ್ರಹವು ಯಥಾರ್ಥದಲ್ಲಿ ತನ್ನೊಳಗೆ ಅದೆಂತಹ ಮಹಾ ಸಮೃದ್ಧಿಯನ್ನು ಹೊಂದಿದೆ ಎಂಬುದನ್ನು ಮುಂದಿನ ಉಪನ್ಯಾಸದಲ್ಲಿ ವಿವರಿಸಲಿರುವೆನು. ಇಂದಿನ ಉಪನ್ಯಾಸದಲ್ಲಿ ನಮಾಝ್ ಮತ್ತು ಝಕಾತ್‌ಗಳು ಇಸ್ಲಾಮಿನಲ್ಲಿ ಯಾವ ಸ್ಥಾನ ಪಡೆದಿವೆಯೆಂಬುದನ್ನು ತಿಳಿಸುವುದು ನನ್ನ ಉದ್ದೇಶವಾಗಿತ್ತು. ನಮಾಝ್ ಮಾಡದಿದ್ದರೂ ಝಕಾತ್ ಕೊಡದೆ ಇದ್ದರೂ ತಾವು ಮುಸ್ಲಿಮರಾಗಿಯೇ ಉಳಿದಿರುತ್ತೇವೆಂದು ಅನೇಕರು ತಿಳಿಯುತ್ತಾರೆ. ಆದರೆ ಕುರ್‌ಆನ್ ಇದನ್ನು ಸ್ಪಷ್ಟವಾಗಿ ನಿರಾಕರಿಸುತ್ತದೆ. ಮನುಷ್ಯನು ಕಲಿಮಾದ ಮೂಲಕ ಮಾಡಿದ ಘೋಷಣೆ ಸತ್ಯವೆಂದು ಸಾಬೀತು ಪಡಿಸಲಿಕ್ಕಾಗಿ ನಮಾಝ್ ಮತ್ತು ಝಕಾತ್‌ಗಳನ್ನು ಪಾಲಿಸದೆ ಹೋದರೆ ಆ ಕಲಿಮಾದ ಪಠಣವೇ ಅರ್ಥಹೀನವಾಗಿ ಬಿಡುತ್ತದೆ. ಆದುದರಿಂದಲೇ ಹಝ್ರತ್ ಅಬೂಬಕರ್‌ರವರು(ರ) ಝಕಾತ್ ಕೊಡಲು ನಿರಾಕರಿಸುವವರನ್ನು ಕಾಫಿರ್ (ಸತ್ಯನಿಷೇಧಿ) ಎಂದು ತಿಳಿದು, ನಾನು ಈಗಾಗಲೇ ವಿವರಿಸಿರುವಂತೆ ಅವರ ವಿರುದ್ಧ ಯುದ್ಧ ಸಾರಿದ್ದರು. ಅಲ್ಲಾಹ್ ಮತ್ತು ಸಂದೇಶವಾಹಕರ ಮೇಲೆ ವಿಶ್ವಾಸವನ್ನಿರಿಸಿ, ನಮಾಝ್ ಮಾಡುತ್ತಿರುವವರ ವಿರುದ್ಧ ಯುದ್ಧ ಸಾರುವುದು ಸಮಂಜಸವೇ ಎಂಬ ಬಗ್ಗೆ ಆರಂಭದಲ್ಲಿ ಮಾನ್ಯ ಸಹಾಬಿಗಳಿಗೆ ಸಂದೇಹವಿತ್ತು. ಆದರೆ ಪ್ರವಾದಿಯವರ(ಸ) ನಿಕಟವರ್ತಿಯಾಗಿದ್ದ ಹಝ್ರತ್ ಅಬೂಬಕರ್

ರವರು(ರ) ತಮ್ಮ ಅಭಿಪ್ರಾಯದಲ್ಲಿ ಅಚಲರಾಗಿ ನಿಂತು ಅವರು ಪ್ರವಾದಿಯವರ(ಸ) ಕಾಲದಲ್ಲಿ ಸಲ್ಲಿಸುತ್ತಿದ್ದ ಝಕಾತಿನಿಂದ, ಒಂಟೆಯನ್ನು ಕಟ್ಟುವ ಒಂದು ತುಂಡು ಹಗ್ಗವನ್ನಾದರೂ ಈಗ ಕೊಡಲು ನಿರಾಕರಿಸಿದರೆ ಅಂಥವರ ವಿರುದ್ಧ ದೇವನಾಣೆಗೂ ನಾನು ಖಡ್ಗವನ್ನೆತ್ತಿಯೇ ತೀರುವೆನು ಎಂದಾಗ ಅಲ್ಲಾಹನ ಅನುಗ್ರಹದಿಂದ ಎಲ್ಲಾ ಸಹಾಬಿಗಳು(ರ) ಈ ಸತ್ಯವನ್ನು ಮನಃಪೂರ್ವಕ ಅಂಗೀಕರಿಸಿದರು. ಝಕಾತ್ ಸಲ್ಲಿಸದಾತನ ವಿರುದ್ಧ ಯುದ್ಧ ಸಾರಬೇಕೆಂದು ಅವರೆಲ್ಲರೂ ಒಪ್ಪಿಕೊಂಡರು. ಝಕಾತ್ ಸಲ್ಲಿಸದಿರುವುದು ಪರಲೋಕ ವಿಶ್ವಾಸವನ್ನು ನಿರಾಕರಿಸುವ ಮುಶ್ರಿಕರ (ಬಹುದೇವ ವಿಶ್ವಾಸಿಗಳ) ಕಾರ್ಯವೆಂದು ಕುರ್‌ಆನ್ ಸ್ಪಷ್ಟೋಕ್ತಿಗಳಿಂದ ಸಾರಿ ಹೇಳುತ್ತಿದೆ:

وَوَيْلٌ لِّلْمُشْرِكِينَ ۝٦ الَّذِينَ لَا يُؤْتُونَ الزَّكَوٰةَ وَهُم بِالْآخِرَةِ هُمْ كَٰفِرُونَ ۝٧

"ಝಕಾತ್ ನೀಡದ ಮತ್ತು ಪರಲೋಕವನ್ನು ನಿರಾಕರಿಸುವ ಬಹುದೇವಾರಾಧಕರಿಗೆ ವಿನಾಶ ಕಾದಿದೆ." (ಹಾಮ್ಮೀಮ್ ಅಸ್ಸಜ್ದ: 6,7)

○

ಝಕಾತ್‌ನ ವಾಸ್ತವಿಕತೆ

ಮುಸ್ಲಿಮ್ ಬಾಂಧವರೇ!

ನಮಾಝಿನ ಬಳಿಕ ಇಸ್ಲಾಮಿನ ಅತಿದೊಡ್ಡ ಆಧಾರಸ್ತಂಭ ಝಕಾತ್ ಆಗಿದೆ. ನಮಾಝನ್ನು ನಿರಾಕರಿಸುವಾತನನ್ನು 'ಕಾಫಿರ್' ಎನ್ನುವಂತೆಯೇ ಝಕಾತನ್ನು ನಿರಾಕರಿಸುವಾತನನ್ನೂ 'ಕಾಫಿರ್' ಎಂದು ಪರಿಗಣಿಸಲಾಗುವುದು. ಮಾತ್ರವಲ್ಲ, ಅಂಥವರ ವಿರುದ್ಧ ಸಹಾಬಿಗಳು ಒಮ್ಮತದಿಂದ ಜಿಹಾದ್ ಮಾಡಿದ್ದರು ಎಂದು ಹಿಂದಿನ ಉಪನ್ಯಾಸದಲ್ಲಿ ವಿವರಿಸಿರುತ್ತೇನೆ.

ಇಂದಿನ ಉಪನ್ಯಾಸದಲ್ಲಿ ಝಕಾತ್‌ನ ವಾಸ್ತವಿಕತೆಯನ್ನು ವಿವರಿಸುತ್ತೇನೆ. ಝಕಾತ್ ಎಂದರೇನು? ಇಸ್ಲಾಮಿನಲ್ಲಿ ಅದಕ್ಕೆ ಇಷ್ಟು ಮಹತ್ವವನ್ನೇಕೆ ಕೊಡಲಾಗಿದೆ ಮತ್ತು ಅಲ್ಲಾಹನ ಮೆಚ್ಚುಗೆ ಪ್ರಾಪ್ತವಾಗುವುದು ಹೇಗೆ? ಎಂಬುದನ್ನು ತಿಳಿಸುವೆನು.

ಅಲ್ಲಾಹನ ಸಾಮಿಪ್ಯ ಗಳಿಸುವುದು ಹೇಗೆ?

ಬುದ್ಧಿ-ವಿವೇಕಗಳ ಪರೀಕ್ಷೆ

ಕೆಲವರು ಕಂಡ ಕಂಡವರೊಂದಿಗೆಲ್ಲಾ ಸ್ನೇಹ ಬೆಳೆಸಿಕೊಳ್ಳುವಷ್ಟು ಸರಳ ಸ್ವಭಾವ ದವರಿರುತ್ತಾರೆ. ತಮ್ಮ ಗೆಳೆಯರು ಗೆಳೆತನಕ್ಕೆ ಯೋಗ್ಯರೇ ಅಲ್ಲವೇ ಎಂದು ಅವರು ಪರೀಕ್ಷಿಸಿ ಕೊಳ್ಳುವುದಿಲ್ಲ. ಹೆಚ್ಚಾಗಿ ಇಂಥ'ವರು ಗೆಳೆತನದ ವಿಷಯದಲ್ಲಿ ಮೋಸಹೋಗುತ್ತಾರೆ. ಅನೇಕ ವೇಳೆ ಅವರು ನಿರಾಶರಾಗ ಬೇಕಾಗುತ್ತದೆ. ಆದರೆ ಬುದ್ಧಿವಂತರು ತಮಗೆ ಪರಿಚಯವಾಗು ವವರನ್ನು ಮುಂದಾಗಿ ಪರೀಕ್ಷಿಸಿಕೊಂಡು ಅನಂತರ ಅವರ ಪೈಕಿ ನಿಷ್ಕಪಟಿ, ನಂಬಿಗಸ್ಥ ಮತ್ತು ಪ್ರಾಮಾಣಿಕನಾದವನೊಂದಿಗೆ ಮಾತ್ರ ಗೆಳೆತನವಿರಿಸಿಕೊಂಡು ಅಯೋಗ್ಯರನ್ನು ತ್ಯಜಿಸಿ ಬಿಡುತ್ತಾರೆ.

ಅಲ್ಲಾಹ್ ಸರ್ವರಿಗಿಂತಲೂ ಅಧಿಕ ಸುಜ್ಞಾನಿಯೂ ಸುವಿವೇಕಿಯೂ ಆಗಿರುತ್ತಾನೆ. ಅವನು ಕಂಡ ಕಂಡವರನ್ನೆಲ್ಲಾ ಮಿತ್ರರನ್ನಾಗಿ ಮಾಡಿಕೊಂಡು ತನ್ನ ಪಕ್ಷದಲ್ಲಿ ಸೇರಿಸಿ, ತನ್ನ ಆಸ್ಥಾನದಲ್ಲಿ ಗೌರವದ ಹಾಗೂ ನಿಕಟ ಸ್ಥಾನಮಾನಗಳನ್ನು ನೀಡುವನೆಂದು ನಿರೀಕ್ಷಿಸುವುದು ಹೇಗೆ? ಚೆನ್ನಾಗಿ ಪರೀಕ್ಷಿಸದೆ ಗೆಳೆಯನ ಆಯ್ಕೆ ಮಾಡದಿರುವುದು ಮಾನವನ ಬುದ್ಧಿವಂತಿಕೆಯ ದ್ಯೋತಕವಾಗಿರುವಾಗ, ಸಕಲ ಸುಜ್ಞಾನ ಸುವಿವೇಕಗಳ

ಮೂಲವಾದ ಅಲ್ಲಾಹನು ಚೆನ್ನಾಗಿ ಪರೀಕ್ಷಿಸದೆ ಕಂಡಕಂಡವರಿಗೆ ತನ್ನ ಸ್ನೇಹದ ಮಹೋನ್ನತ ಸ್ಥಾನವನ್ನು ಎಂದೂ ಪ್ರಧಾನ ಮಾಡಲಾರನು, ಜಗತ್ತಿನಾದ್ಯಂತ ಹಬ್ಬಿರುವ ಕೋಟ್ಯಾವಧಿ ಜನರಲ್ಲಿ ನಾನಾ ತರದ ಸಜ್ಜನರೂ ದುರ್ಜನರೂ ಸೇರಿಕೊಂಡಿರುವಾಗ, ಇವರೆಲ್ಲರೂ ಇಹದಲ್ಲಿ ಪ್ರತಿನಿಧಿಯ ಸ್ಥಾನವನ್ನೂ ಪರದಲ್ಲಿ ಸಾನ್ನಿಧ್ಯವನ್ನೂ ಬಯಸಲು ಮತ್ತು 'ಹಿಝ್ಬುಲ್ಲಾಃ' ಅರ್ಥಾತ್ 'ಅಲ್ಲಾಹನ ಪಕ್ಷ' ಎಂಬ ದಿವ್ಯ ಪಕ್ಷಕ್ಕೆ ಸೇರಲು ಅರ್ಹರಾಗಿರಲು ಸಾಧ್ಯವೇ ಇಲ್ಲ. ಅಲ್ಲಾಹನು ಮನುಷ್ಯನನ್ನು ಪರೀಕ್ಷಿಸಲಿಕ್ಕಾಗಿ ತನ್ನ ಮಹೋನ್ನತ ಯುಕ್ತಿಯೊಂದಿಗೆ ಕೆಲವು ಪ್ರಮಾಣಗಳನ್ನೂ ಸತ್ವಪರೀಕ್ಷೆ ಗಳನ್ನೂ ನಿಶ್ಚಯಿಸಿದ್ದಾನೆ. ಅವುಗಳಲ್ಲಿ ಉತ್ತೀರ್ಣನಾದವನು ಅವನ ಪಕ್ಷದೊಳಗೆ ಸೇರಿಕೊಳ್ಳು ವಂತೆಯೂ ಅನುತ್ತೀರ್ಣನಾದವನು ಆ ಪಕ್ಷದಿಂದ ಹೊರಗುಳಿದು ತಾನು ಅದಕ್ಕೆ ಅರ್ಹನಲ್ಲ ವೆಂಬುದನ್ನು ಸ್ವತಃ ತಿಳಿದುಕೊಳ್ಳುವಂತೆಯೂ ಮಾಡಿರುತ್ತಾನೆ.

ಈ ಪ್ರಮಾಣಗಳು ಯಾವುವು? ಅಲ್ಲಾಹನು ಸ್ವಯಂ ಯುಕ್ತಿಪೂರ್ಣನಾಗಿರುವು ದರಿಂದ ಪ್ರಥಮತಃ ಮಾನವನ ಯುಕ್ತಿ ಹಾಗೂ ಬುದ್ಧಿವಂತಿಕೆಯ ಪರೀಕ್ಷೆ ನಡೆಸಲಿಚ್ಛಿಸುತ್ತಾನೆ. ಅವನಿಗೆ ಬುದ್ಧಿ-ವಿವೇಕವೇನಾದರೂ ಇದೆಯೋ ಅಥವಾ ಕೇವಲ ಮೂಢನೋ? ಎಂದು ನೋಡಲಿಚ್ಛಿಸುತ್ತಾನೆ. ಏಕೆಂದರೆ ಅಜ್ಞಾನಿಯೂ ಮೂರ್ಖನೂ ಎಂದೆಂದಿಗೂ ಬುದ್ಧಿವಂತನ ಹಾಗೂ ಯುಕ್ತಿಪೂರ್ಣನ ಗೆಳೆಯನಾಗಿರಲಾರ. ಅಲ್ಲಾಹನನ್ನು ಅವನ ನಿದರ್ಶನಗಳ ಮೂಲಕ ಗುರುತಿಸಿ, ಇವನೇ ತನ್ನ ಪ್ರಭು ಹಾಗೂ ಸೃಷ್ಟಿಕರ್ತನೆಂದೂ ಇವನ ಹೊರತು ಅನ್ಯರಾರೂ ಆರಾಧ್ಯನೂ ರಕ್ಷಕನೂ ಇಷ್ಟಾರ್ಥಗಳನ್ನು ಈಡೇರಿಸುವಾತನೂ ಸಹಾಯಕನೂ ಇಲ್ಲವೆಂದು ತಿಳಿದುಕೊಳ್ಳುವಾತನು- ದೇವವಾಣಿಯನ್ನು ಕೇಳಿದೊಡನೆ ಇದು ತನ್ನೊಡೆಯನ ವಾಣಿಯೇ ಆಗಿರುತ್ತದೆಂದೂ ಇದು ಬೇರಾರದೇ ವಾಣಿ ಆಗಿರಲು ಸಾಧ್ಯವಿಲ್ಲವೆಂದೂ ಅರಿತುಕೊಳ್ಳುವವನು- ನಿಜವಾದ ಪ್ರವಾದಿ ಮತ್ತು ಕಪಟ ಪ್ರವಾದಿಗಳನ್ನು ಅವರ ಜೀವನ, ಅವರ ನಡತೆ, ಅವರ ವ್ಯವಹಾರ, ಅವರ ಬೋಧನೆ ಮತ್ತು ಅದರ ಸಾಧನೆಗಳ ಅಂತರ ಗಳಿಂದ ಗುರುತಿಸಿ, ತಾನು ಪ್ರವಾದಿಯೆಂದು ಸಾರುತ್ತಿರುವ ಇಂತಿಂತಹ ಮಹಾತ್ಮರು ನಿಜವಾಗಿಯೂ ದೇವನ ವತಿಯಿಂದ ಸನ್ಮಾರ್ಗ ಬೋಧನೆಗಾಗಿ ಬಂದ ಪ್ರವಾದಿಯೆಂದೂ, ಇಂತಿಂತಹ ದುರಾತ್ಮನು ದಾರಿಗೆಡಿಸುವ ಮಹಾ ವಂಚಕನೆಂದೂ ತಿಳಿದುಕೊಳ್ಳುವಾತನು ಬುದ್ಧಿಯ ಪರೀಕ್ಷೆಯಲ್ಲಿ ಉತ್ತೀರ್ಣನಾಗುತ್ತಾನೆ. ಅಲ್ಲಾಹನು ಅಂಥವನನ್ನು ಜನ ಜಂಗುಳಿ ಯಿಂದ ಪ್ರತ್ಯೇಕಿಸಿ, ಆಯ್ದು ತೆಗೆದು ತನ್ನ ಪಕ್ಷದ ಆಯ್ದ ವ್ಯಕ್ತಿಗಳ ಸಾಲಲ್ಲಿ ಸೇರಿಸಿ ಕೊಳ್ಳುತ್ತಾನೆ. ಈ ಪ್ರಥಮ ಪರೀಕ್ಷೆಯಲ್ಲೇ ಅನುತ್ತೀರ್ಣರಾದವರನ್ನು ಇಷ್ಟಬಂದಲ್ಲಿ ಅಲೆದಾಡಲು ಬಿಟ್ಟು ಬಿಡಲಾಗುತ್ತದೆ.

ಚಾರಿತ್ರ್ಯ ಶಕ್ತಿಯ ಪರೀಕ್ಷೆ

ಈ ಪ್ರಥಮ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಎರಡನೆಯ ಪರೀಕ್ಷೆ

ಗೊಳಗಾಗಬೇಕಾಗುತ್ತದೆ. ಈ ಪರೀಕ್ಷೆಯಲ್ಲಿ ಅವರ ಬುದ್ಧಿಯೊಂದಿಗೆ ಚಾರಿತ್ರ್ಯದ ಪರೀಕ್ಷೆಯೂ ನಡೆಯುತ್ತದೆ. ಅವನಲ್ಲಿ ಸತ್ಯ ಮತ್ತು ಪುಣ್ಯ ಕಾರ್ಯಗಳನ್ನು ಆಯ್ಕೆ ಮಾಡಿಕೊಳ್ಳುವ ಹಾಗೂ ಅದರಂತೆ ನಡೆಯುವ ಶಕ್ತಿಯೂ, ಮಿಥ್ಯ ಮತ್ತು ಪಾಪ ಕಾರ್ಯಗಳನ್ನು ಅರಿತುಕೊಂಡು ಅವುಗಳನ್ನು ವರ್ಜಿಸುವ ಸಾಮರ್ಥ್ಯವೂ ಇದೆಯೋ ಇಲ್ಲವೋ ಎಂದು ನೋಡಲಾಗುತ್ತದೆ. ಈತನು ತನ್ನ ದೇಹೇಚ್ಛೆಗಳ, ಹಿರಿಯರ ಅಂಧಾನುಕರಣೆಯ, ಮನೆತನದ ಸಂಪ್ರದಾಯಗಳ ಮತ್ತು ಪ್ರಚಲಿತ ರೀತಿ ರಿವಾಜುಗಳ ದಾಸನಾಗಿಲ್ಲವಷ್ಟೇ? ಒಂದು ವಿಷಯವು ದೇವೇಚ್ಛೆಗೆ ವಿರುದ್ಧವಾಗಿದ್ದು ಅದು ಕೆಟ್ಟದೆಂದು ತಿಳಿದಿದ್ದೂ ಅದಕ್ಕೆ ಬಲಿಬೀಳುವಂತಹ ದೌರ್ಬಲ್ಯ ಅವನಲ್ಲಿಲ್ಲವಷ್ಟೇ? ಇನ್ನೊಂದು ವಿಷಯದ ಬಗ್ಗೆ, ಅದು ಅಲ್ಲಾಹನ ದೃಷ್ಟಿಯಲ್ಲಿ ಸತ್ಯವೂ ಆತನು ಮೆಚ್ಚುವಂತಹದ್ದೂ ಆಗಿರುತ್ತದೆಂದು ತಿಳಿದಿದ್ದೂ ಅವನು ಅದನ್ನು ತಿರಸ್ಕರಿಸ ಲಾರನಷ್ಟೇ? ಈ ಪರೀಕ್ಷೆಯಲ್ಲಿ ಸೋತವರನ್ನು ಅಲ್ಲಾಹ್ ತನ್ನ ಪಕ್ಷದಲ್ಲಿ ಸೇರಿಸಿಕೊಳ್ಳಲು ನಿರಾಕರಿಸುತ್ತಾನೆ.

فَمَنْ يَّكْفُرْ بِالطَّاغُوتِ وَيُؤْمِنْ بِاللّٰهِ فَقَدِ اسْتَمْسَكَ بِالْعُرْوَةِ الْوُثْقٰى لَا انْفِصَامَ لَهَا

"ತಾಗೂತನ್ನು (ದೇವೇತರ ಶಕ್ತಿಗಳನ್ನು) ನಿರಾಕರಿಸಿ, ಅಲ್ಲಾಹನಲ್ಲಿ ವಿಶ್ವಾಸವಿರಿಸಿ ದಾತನು ಎಂದೆಂದಿಗೂ ಮುರಿಯದಂತಹ ಬಲವಾದ ಆಧಾರವನ್ನು ಆರಿಸಿಕೊಂಡನು" (ಅಲ್‌ಬಕರಃ 256) ಎಂಬಂತಿರುವವರನ್ನು ಮಾತ್ರ ಆತನು ಆರಿಸಿ ಕೊಳ್ಳುತ್ತಾನೆ. ಅರ್ಥಾತ್- ಅಲ್ಲಾಹನ ಮಾರ್ಗದರ್ಶನದ ವಿರುದ್ಧ ಯಾವ ಮಾರ್ಗ ಅಥವಾ ಪದ್ಧತಿಯೇ ಇರಲಿ, ಅದನ್ನು ಯಾರ ಪರಿವೆಯೂ ಇಲ್ಲದೆ ಧೈರ್ಯದಿಂದ ತ್ಯಜಿಸಬೇಕು. ಇತರರು ಕೋಪಿಸಲಿ, ಸಂತೋಷ ಪಡಲಿ ಅಲ್ಲಾಹನು ತೋರಿಸಿದ ಪಥದಲ್ಲೇ ನಡೆಯಬೇಕು.

ಅನುಸರಣೆಯ ಪರೀಕ್ಷೆ

ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಮೂರನೇ ಹಂತದ ಪರೀಕ್ಷೆಗೊಳಗಾಗ ಬೇಕಾಗುತ್ತದೆ. ಈ ಹಂತದಲ್ಲಿ ದಾಸ್ಯ-ಅನುಸರಣೆ ಹಾಗೂ ವಿಧೇಯತೆಯ ಪರೀಕ್ಷೆ ನಡೆಯುತ್ತದೆ. ಅಲ್ಲಾಹನ ಕಡೆಯಿಂದ ಕರೆ ಕೊಡಲ್ಪಟ್ಟಾಗಲೆಲ್ಲಾ ನಿಮ್ಮ ಸುಖ ನಿದ್ರೆಯನ್ನು ಬಿಟ್ಟು ಹಾಜರಾಗಿರಿ. ನಿಮ್ಮ ಕೆಲಸ ಕಾರ್ಯಗಳನ್ನು ಬದಿಗಿರಿಸಿ ಬನ್ನಿರಿ. ನಿಮ್ಮ ಅಭಿರುಚಿ ಗಳನ್ನೂ ಲಾಭಗಳನ್ನೂ ಆತ್ಮಾನಂದವನ್ನೂ ವಿರಾಮವನ್ನೂ ತೊರೆದು ನಿಮ್ಮ ಮೇಲಿರುವ ಕಡ್ಡಾಯ ವಿಧಿಯನ್ನು ನೆರವೇರಿಸಿರಿ. ವಿಪರೀತ ಸೆಕೆಯಿರಲಿ, ನಡುಗಿಸುವ ಚಳಿಯಿರಲಿ, ನಿಮ್ಮನ್ನು ಕರ್ತವ್ಯ ಪಾಲನೆಗಾಗಿ ಕರೆದಾಗ ಸಕಲ ಕಷ್ಟಗಳನ್ನೂ ಸಹಿಸಲು ಸಿದ್ಧರಾಗಿ ಧಾವಿಸಿ ಬನ್ನಿರಿ. ಅಲ್ಲಾಹನು ನಿಮಗೆ ಮುಂಜಾವಿನಿಂದ ಸಂಜೆಯ ತನಕ ಹಸಿವು ದಾಹಗಳನ್ನು ಸಹಿಸಬೇಕೆಂದೂ ದೇಹೇಚ್ಛೆಗಳನ್ನು ನಿಯಂತ್ರಿಸಬೇಕೆಂದೂ ಅಪ್ಪಣೆ ಕೊಟ್ಟಾಗ ಅದನ್ನು ಸಂಪೂರ್ಣವಾಗಿ ಪಾಲಿಸಿರಿ. ಹಸಿವು ದಾಹಗಳಿಂದ ನೀವೆಷ್ಟು ಕಂಗೆಟ್ಟಿದ್ದರೂ ಸವಿಯಾದ ಭೋಜನ ಸಾಮಗ್ರಿಗಳು

ಹಾಗೂ ರುಚಿಯಾದ ಪಾನೀಯಗಳು ನಿಮ್ಮೆದುರೇ ಇದ್ದರೂ ಸರಿಯೆ. ಈ ಪರೀಕ್ಷೆಯಲ್ಲಿ ವಿಫಲರಾಗುವವರೊಡನೆಯೂ "ನಮಗೆ ನಿಮ್ಮ ಅಗತ್ಯವಿಲ್ಲ" ಎಂದು ತಿಳಿಸಿಬಿಡಲಾಗುತ್ತದೆ. ತೇರ್ಗಡೆ ಹೊಂದಿದವರನ್ನು ಮಾತ್ರ ಆಯ್ದುಕೊಳ್ಳಲಾಗುತ್ತದೆ. ಅಲ್ಲಾಹನ ವತಿಯಿಂದ ತಮಗಾಗಿ ಸಿದ್ಧಪಡಿಸಲಾಗುವ ನಿಯಮ ಮತ್ತು ಆಜ್ಞೆಗಳನ್ನು ಅಂತರಂಗದಲ್ಲೂ ಬಹಿರಂಗದಲ್ಲೂ, ಲಾಭವಿದ್ದರೂ ನಷ್ಟವುಂಟಾದರೂ, ಸುಖದಲ್ಲೂ ಕಷ್ಟದಲ್ಲೂ ಎಲ್ಲಾ ಪರಿಸ್ಥಿತಿಗಳಲ್ಲಿಯೂ ಪಾಲಿಸುವರೆಂದು ಇಂತಹವರಿಂದ ಮಾತ್ರ ನಿರೀಕ್ಷಿಸಬಹುದು.

ಆರ್ಥಿಕ ತ್ಯಾಗದ ಪರೀಕ್ಷೆ

ಇದಾದ ಬಳಿಕ ನಾಲ್ಕನೆಯದು ಸೊತ್ತು-ವಿತ್ತಗಳ ತ್ಯಾಗದ ಪರೀಕ್ಷೆ. ಮೂರನೆಯ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ತಕ್ಷಣವೇ ಅಲ್ಲಾಹನ ಸೇವೆಗೆ ಅಧಿಕೃತವಾಗಿ ಸೇರಿಸಿ ಕೊಳ್ಳಲು ಅರ್ಹರಾಗಿರುವುದಿಲ್ಲ. ಅವರಿನ್ನೂ ಸಂಕುಚಿತ ಮನಸ್ಸಿನವರೇ? ಧೃತಿಗೆಡುವವರೇ? ಹೇಡಿಗಳೇ? ತಿಳಿಗೇಡಿಗಳೇ? ಎಂದೂ ಪರೀಕ್ಷಿಸಬೇಕಾಗಿದೆ. ಅವರು ಕೇವಲ ಸ್ನೇಹಾಚಾರ ಪ್ರದರ್ಶಿಸುವುದರಲ್ಲಿ ಮಾತ್ರ ನಿಸ್ಸೀಮರಾಗಿದ್ದು, ತಮ್ಮ ಆಪ್ತನಿಗಾಗಿ ಕಿಸೆಯಿಂದೇನಾದರೂ ಖರ್ಚು ಮಾಡುವ ಪ್ರಸಂಗ ಬಂದಾಗ ಹಿಂದೆ ಸರಿಯುವಂತಹ ಜಿಪುಣರಲ್ಲವಷ್ಟೇ? ಇಂತಹ ಸ್ವಾರ್ಥಿ, ಧನಾರಾಧಕ ಮತ್ತು ಸಂಕುಚಿತ ಮನಸ್ಸಿನವರನ್ನು ಸಾಮಾನ್ಯ ಮಟ್ಟದ ವಿವೇಕ ವುಳ್ಳವನೂ ತನ್ನ ಸ್ನೇಹಿತನನ್ನಾಗಿ ಸ್ವೀಕರಿಸುವುದಿಲ್ಲ. ಒಬ್ಬ ಉದಾರಿಯಂತೂ ಇಂತಹ ಕೆಳಮಟ್ಟದವನಿಗೆ ತನ್ನ ಬಳಿ ಜಾಗ ಕೊಡಲೂ ಇಷ್ಟಪಡಲಾರ, ಹೀಗಿರುವಾಗ ಪ್ರತಿಕ್ಷಣಕ್ಕೂ ಅಗಣಿತ ಜೀವರಾಶಿಗಳ ಮೇಲೆ ಅನಂತ ಅನುಗ್ರಹಗಳ ಸುರಿಮಳೆಗರೆಯುವಂತಹ ಪೂಜ್ಯನೂ ಪರಮ ಶ್ರೇಷ್ಠನೂ ಆದ ಅಲ್ಲಾಹನು, ಅವನೇ ಕೊಟ್ಟ ಸಂಪತ್ತನ್ನು ಅವನ ಮಾರ್ಗದಲ್ಲಿ ಖರ್ಚು ಮಾಡಲು ಹಿಂಜರಿಯುವಂಥವನನ್ನು ತನ್ನ ಪ್ರೀತಿಪಾತ್ರ ಸ್ನೇಹಿತನೆಂದು ಭಾವಿಸುವುದಾದರೂ ಹೇಗೆ? ಅತ್ಯಂತ ಮಹಾ ಸುಜ್ಞಾನಿಯೂ ಯುಕ್ತಿಪೂರ್ಣನೂ ಆದ ಅಲ್ಲಾಹ್ ಕೇವಲ ಮಾತಿನ ಮಲ್ಲನೂ ನಂಬಿಕೆಗೆ ಅನರ್ಹನೂ ಆದಂಥವನನ್ನು ತನ್ನ ಪಕ್ಷಕ್ಕೆ ಸೇರಿಸಿಕೊಳ್ಳುವು ದೆಂತು? ಆದುದರಿಂದ ಈ ನಾಲ್ಕನೆಯ ಪರೀಕ್ಷೆಯಲ್ಲಿ ಅನುತ್ತೀರ್ಣನಾದವನೊಡನೆ ಅಲ್ಲಾಹನ ಪಕ್ಷದಲ್ಲಿ ನಿನಗೆ ಸ್ಥಾನವಿಲ್ಲವೆಂದೂ, ದೇವ ಪ್ರತಿನಿಧಿಗೆ ವಹಿಸಿಕೊಡುವಂತಹ ಅತಿ ಮಹತ್ವದ ಹೊಣೆಯನ್ನು ವಹಿಸುವ ಅರ್ಹತೆ ನಿನ್ನಲ್ಲಿಲ್ಲವೆಂದೂ ಅಲ್ಲಾಹನ ಮೇಲಿನ ಅಗಾಧ ಪ್ರೇಮ ಕ್ಕಾಗಿ ತನ್ನನ್ನೂ ತನ್ನ ಸಂಪತ್ತು, ಸಂತತಿ, ಕುಲ, ದೇಶವೇ ಮೊದಲಾದ ಸರ್ವಸ್ವದ ಪ್ರೇಮ ವನ್ನೂ ಬಲಿ ಕೊಡಲು ಸಿದ್ಧರಾದವರು ಮಾತ್ರ ಈ ಪಕ್ಷದಲ್ಲಿ ಸೇರಿಸಲ್ಪಡುತ್ತಾರೆಂದೂ ಖಂಡತುಂಡವಾಗಿ ಹೇಳಿ ಬಿಡಲಾಗುತ್ತದೆ.

لَن تَنَالُوا الْبِرَّ حَتَّىٰ تُنفِقُوا مِمَّا تُحِبُّونَ

"ನೀವು ನಿಮಗೆ ಬಹಳ ಪ್ರಿಯವಾಗಿರುವ ವಸ್ತುಗಳನ್ನು (ಅಲ್ಲಾಹನ ಮಾರ್ಗದಲ್ಲಿ) ವ್ಯಯಿಸುವ ತನಕವೂ ಪುಣ್ಯ ಮಟ್ಟವನ್ನು ತಲಪಲಾರಿರಿ." (ಆಲಿ ಇಮ್‌ರಾನ್: 92)

ಹಿಝ್ಬುಲ್ಲಾಹ್(ಅಲ್ಲಾಹನ ಪಕ್ಷ) ಸೇರಲು ಅಪೇಕ್ಷಿತ ಗುಣಗಳು

1. ಸಂಕುಚಿತ ಮನಸ್ಸಿನವರಾಗಿರಬಾರದು

ಈ ಪಕ್ಷದಲ್ಲಿ ಸಂಕುಚಿತ ಮನಸ್ಸಿನವರಿಗೆ ಸ್ಥಾನವಿಲ್ಲ. ಇದರಲ್ಲಿ ವಿಶಾಲ ಹೃದಯಿಗಳು ಮಾತ್ರ ಪ್ರವೇಶ ಪಡೆಯುತ್ತಾರೆ -

وَمَنْ يُّوْقَ شُحَّ نَفْسِهٖ فَاُولٰٓئِكَ هُمُ الْمُفْلِحُوْنَ ⑨

"ವಾಸ್ತವದಲ್ಲಿ ಯಾರು ತಮ್ಮ ಮನಸ್ಸಿನ ಸಂಕುಚಿತತೆಯಿಂದ ರಕ್ಷಿಸಲ್ಪಟ್ಟರೋ ಅವರೇ ವಿಜಯಿಗಳು." (ಅಲ್‌ಹಶ್ರ್: 9)

2. ಉದಾರ ಹೃದಯಿಯಾಗಿರಬೇಕು

ಒಬ್ಬನು ತನ್ನ ಮೇಲೆ ಹಗೆ ಸಾಧಿಸಿದ್ದರೂ, ತನ್ನನ್ನು ನಷ್ಟಕ್ಕೆ ಗುರಿಪಡಿಸಿದ್ದರೂ, ತನ್ನ ಮನನೋಯಿಸಿದ್ದರೂ, ಅವನಿಗೆ ಅಲ್ಲಾಹನ ಮೆಚ್ಚುಗೆಗಾಗಿ ಹೊಟ್ಟೆಗೆ ಹಿಟ್ಟನ್ನೂ ಮೈಗೆ ಬಟ್ಟೆಯನ್ನೂ ಕೊಡಲು ನಿರಾಕರಿಸದಂಥವರೂ, ಅವನ ಕಷ್ಟಕಾಲದಲ್ಲಿ ಸಹಾಯ ನೀಡಲು ಹಿಂಜರಿಯದಂತಹ ಔದಾರ್ಯವುಳ್ಳವರೂ ಇಲ್ಲಿ ಬೇಕಾಗಿದ್ದಾರೆ-

وَلَا يَأْتَلِ اُولُوا الْفَضْلِ مِنْكُمْ وَالسَّعَةِ اَنْ يُّؤْتُوْٓا اُولِى الْقُرْبٰى

وَالْمَسٰكِيْنَ وَالْمُهٰجِرِيْنَ فِيْ سَبِيْلِ اللّٰهِ ۖ وَلْيَعْفُوْا وَلْيَصْفَحُوْا ۭ اَلَا تُحِبُّوْنَ

اَنْ يَّغْفِرَ اللّٰهُ لَكُمْ ۭ وَاللّٰهُ غَفُوْرٌ رَّحِيْمٌ ㉒

"ನಿಮ್ಮಲ್ಲಿ ಅನುಗ್ರಹೀತರು ಮತ್ತು ಸಾಮರ್ಥ್ಯವುಳ್ಳವರು ತಮ್ಮ ಸಂಬಂಧಿಕರಿಗೂ ದರಿದ್ರರಿಗೂ ಅಲ್ಲಾಹನ ಮಾರ್ಗದಲ್ಲಿ ವಲಸೆ ಹೋಗುವವರಿಗೂ ಸಹಾಯ ಮಾಡಲಿಕ್ಕಿಲ್ಲ ವೆಂದು ಪ್ರತಿಜ್ಞೆ ಮಾಡಿ ಬಿಡಬಾರದು. ಅವರನ್ನು ಕ್ಷಮಿಸಿ ಬಿಡಬೇಕು ಮತ್ತು ಮನ್ನಿಸಬೇಕು. ಅಲ್ಲಾಹ್ ನಿಮ್ಮನ್ನು ಕ್ಷಮಿಸಬೇಕೆಂದು ನೀವು ಇಚ್ಛಿಸುವುದಿಲ್ಲವೇ? ಅಲ್ಲಾಹ್ ಅತ್ಯಂತ ಕ್ಷಮಾ ಶೀಲನೂ ಕರುಣಾನಿಧಿಯೂ ಆಗಿರುತ್ತಾನೆ."*

(ಅನ್ನೂರ್: 22)

---

*ಹ. ಅಬೂಬಕರ್‌ರ(ರ) ಸಂಬಂಧಿಕನೋರ್ವನು ಅವರ ಸುಪುತ್ರಿ ಹ. ಆಯಿಶಾರ(ರ) ಮೇಲೆ ಅಪವಾದ ಹೊರಿಸುವ ಸಂಚಿನಲ್ಲಿ ಪಾಲುಗೊಂಡಿದ್ದನು. ಹ. ಅಬೂಬಕರ್‌ರವರು(ರ) ಅವನ ಈ ವರ್ತನೆಯಿಂದ ಖೇದ ಮತ್ತು ಕೋಪಗೊಂಡು ಅವನಿಗೆ ನೀಡುತ್ತಿದ್ದ ಆರ್ಥಿಕ ಸಹಾಯವನ್ನು ತಡೆ ಹಿಡಿದರು: ಈ ಸೂಕ್ತ ಅವತೀರ್ಣಗೊಂಡಾಗ ಅವರ ಮೇಲೆ ಸಿಡಿಲೆರಗಿದಂತಾಯಿತು. ಅವರು "ನಾನು ಅಲ್ಲಾಹನೊಡನೆ ಕ್ಷಮೆ ಯಾಚಿಸುತ್ತೇನೆ" ಎನ್ನುತ್ತಾ ತಮ್ಮ ಮನಸ್ಸನ್ನು ನೋಯಿಸಿದ ವ್ಯಕ್ತಿಗೆ ಆರ್ಥಿಕ ನೆರವನ್ನು ಮುಂದುವರಿಸಿದರು.

3. ನಿಸ್ವಾರ್ಥಿಯಾಗಿರಬೇಕು

ಇಲ್ಲಿ ಇಂತಹ ನಿಸ್ವಾರ್ಥ ವ್ಯಕ್ತಿಗಳು ಬೇಕಾಗಿದ್ದಾರೆ:

وَيُطْعِمُوْنَ الطَّعَامَ عَلٰى حُبِّهٖ مِسْكِيْنًا وَّيَتِيْمًا وَّاَسِيْرًا ۝٨ اِنَّمَا

نُطْعِمُكُمْ لِوَجْهِ اللّٰهِ لَا نُرِيْدُ مِنْكُمْ جَزَآءً وَّلَا شُكُوْرًا ۝٩

"ಅಲ್ಲಾಹನ ಮೇಲಿನ ಪ್ರೇಮದಿಂದ ದರಿದ್ರರಿಗೂ ಅನಾಥರಿಗೂ ಸೆರೆಯಾಳುಗಳಿಗೂ ಊಟ ಕೊಡುತ್ತಾರೆ. (ಮತ್ತು ಅವರೊಡನೆ ಹೇಳುತ್ತಾರೆ) ನಾವು ನಿಮಗೆ ಕೇವಲ ಅಲ್ಲಾಹನಿಗಾಗಿ ಉಣಿಸುತ್ತಿದ್ದೇವೆ. ನಾವು ನಿಮ್ಮಿಂದ ಯಾವುದೇ ಪ್ರತಿಫಲವನ್ನಾಗಲಿ, ಕೃತಜ್ಞತೆಯನ್ನಾಗಲಿ ಬಯಸುವುದಿಲ್ಲ." (ಅದ್ದಹ್ರ್: 8,9)

4. ಶುದ್ಧ ಹೃದಯಿಯಾಗಿರಬೇಕು

ಇಲ್ಲಿ ದೇವದತ್ತವಾದ ಸಂಪತ್ತಿನಿಂದ ಉತ್ತಮವಾದುದನ್ನು ಪ್ರತ್ಯೇಕಿಸಿ, ದೇವಮಾರ್ಗದಲ್ಲಿ ಕೊಡುವಂತಹ ನಿರ್ಮಲ ಮನಸ್ಸಿನವರು ಬೇಕಾಗಿದ್ದಾರೆ -

يٰۤاَيُّهَا الَّذِيْنَ اٰمَنُوْۤا اَنْفِقُوْا مِنْ طَيِّبٰتِ مَا كَسَبْتُمْ وَمِمَّاۤ اَخْرَجْنَا لَكُمْ

مِّنَ الْاَرْضِ وَلَا تَيَمَّمُوا الْخَبِيْثَ مِنْهُ تُنْفِقُوْنَ

"ಓ ಸತ್ಯವಿಶ್ವಾಸಿಗಳೇ, ನೀವು ಸಂಪಾದಿಸಿದ ಸಂಪತ್ತಿನಿಂದ ಮತ್ತು ನಾವು ನಿಮಗಾಗಿ ಭೂಮಿಯಿಂದ ಉತ್ಪಾದಿಸಿದವುಗಳಿಂದ ಉತ್ತಮವಾದವುಗಳನ್ನು ದೇವಮಾರ್ಗದಲ್ಲಿ ಖರ್ಚು ಮಾಡಿರಿ. ಅವನ ಮಾರ್ಗದಲ್ಲಿ ಕೊಡಲು ಅತ್ಯಂತ ಕೆಟ್ಟ ವಸ್ತುವನ್ನು ಪ್ರತ್ಯೇಕಿಸಿಡಲು ಪ್ರಯತ್ನಿಸಬಾರದು." (ಅಲ್‌ಬಕರ:: 267)

5. ದಾರಿದ್ರ್ಯದಲ್ಲೂ ಖರ್ಚು ಮಾಡುವವರಾಗಿರಬೇಕು

ಅತ್ಯಂತ ದಾರಿದ್ರ್ಯ ಮತ್ತು ಕಷ್ಟದ ಸ್ಥಿತಿಯಲ್ಲಿಯೂ ತನ್ನ ಹೊಟ್ಟೆ ಕಟ್ಟಿ, ಅಲ್ಲಾಹನ ಧರ್ಮದ ಸೇವೆಗಾಗಿಯೂ ಇತರ ದೇವದಾಸರ ಸಹಾಯಕ್ಕಾಗಿಯೂ ಹಣ ಖರ್ಚು ಮಾಡಲು ಕಿಂಚಿತ್ತೂ ಹಿಂಜರಿಯದಂತಹ ಸಾಹಸಿಗಳ ಅಗತ್ಯ ಇಲ್ಲಿದೆ -

وَسَارِعُوْۤا اِلٰى مَغْفِرَةٍ مِّنْ رَّبِّكُمْ وَجَنَّةٍ عَرْضُهَا السَّمٰوٰتُ وَالْاَرْضُ اُعِدَّتْ

لِلْمُتَّقِيْنَ ۝١٣٣ الَّذِيْنَ يُنْفِقُوْنَ فِى السَّرَّآءِ وَالضَّرَّآءِ وَالْكٰظِمِيْنَ الْغَيْظَ وَالْعَافِيْنَ

عَنِ النَّاسِ ۗ وَاللّٰهُ يُحِبُّ الْمُحْسِنِيْنَ ۝١٣٤

"ನಿಮ್ಮ ಪ್ರಭುವಿನ ಕ್ಷಮೆಯ ಕಡೆಗೆ ಮತ್ತು ಭೂಮಿ-ಆಕಾಶಗಳಷ್ಟು ವಿಶಾಲವಾಗಿರುವ ಸ್ವರ್ಗದ ಕಡೆಗೆ ಧಾವಿಸಿರಿ. ಅದು ದೇವಭಯವುಳ್ಳವರಿಗಾಗಿ ಸಿದ್ಧಗೊಳಿಸಲ್ಪಟ್ಟಿರುತ್ತದೆ. ಅವರು ಸ್ಥಿತಿವಂತರಾಗಿರುವಾಗಲೂ ದುಸ್ಥಿತಿಯಲ್ಲಿರುವಾಗಲೂ ತಮ್ಮ ಸಂಪತ್ತನ್ನು ಖರ್ಚು ಮಾಡುತ್ತಾರೆ, ಕೋಪವನ್ನು ನುಂಗಿಕೊಳ್ಳುತ್ತಾರೆ ಮತ್ತು ಇತರರ ಅಪರಾಧಗಳನ್ನು ಕ್ಷಮಿಸುತ್ತಾರೆ.- ಇಂತಹ ಸಜ್ಜನರು ಅಲ್ಲಾಹನಿಗೆ ಅತ್ಯಂತ ಮೆಚ್ಚುಗೆಯವರು."

(ಆಲಿ ಇಮ್‌ರಾನ್: 133)

6. ದಾನಶೀಲರಾಗಿರಬೇಕು

ಅಲ್ಲಾಹನ ಮಾರ್ಗದಲ್ಲಿ ಏನಾದರೂ ಖರ್ಚು ಮಾಡಿದರೆ ಅದು ನಷ್ಟವಾಗಿ ಹೋಗದೆಂದೂ, ಅದರ ಅತ್ಯುತ್ತಮ ಪ್ರತಿಫಲವನ್ನು ಅಲ್ಲಾಹನು ಇಹ-ಪರಗಳೆರಡರಲ್ಲೂ ನೀಡುವನೆಂದೂ ಹೃತ್ಪೂರ್ವಕ ನಂಬಿ, ಕೇವಲ ಅಲ್ಲಾಹನ ಮೆಚ್ಚುಗೆಗಾಗಿ ಖರ್ಚು ಮಾಡುವವರೂ ಇಲ್ಲಿ ಬೇಕಾಗಿದ್ದಾರೆ. ಅವರು ತಾವು ಮಾಡಿದ ದಾನ ಧರ್ಮಗಳ ಪ್ರಚಾರ ಆಗಿದೆಯೋ ಇಲ್ಲವೋ, ಅವರ ಉಪಕಾರವನ್ನು ಜನರು ಸ್ಮರಿಸಿದ್ದಾರೋ ಇಲ್ಲವೋ ಎಂಬ ಚಿಂತೆಯನ್ನೇ ಮಾಡದ ಅಪ್ಪಟ ವಿಶ್ವಾಸಿಗಳಾಗಿರುತ್ತಾರೆ-

وَمَا تُنفِقُوا مِنْ خَيْرٍ فَلِأَنفُسِكُمْ ۚ وَمَا تُنفِقُونَ إِلَّا ابْتِغَاءَ وَجْهِ اللَّهِ ۚ وَمَا تُنفِقُوا
مِنْ خَيْرٍ يُوَفَّ إِلَيْكُمْ وَأَنتُمْ لَا تُظْلَمُونَ ﴿٢٧٢﴾

"ನೀವು ದಾನಧರ್ಮಗಳಲ್ಲಿ ಖರ್ಚು ಮಾಡುವುದೆಲ್ಲಾ ನಿಮ್ಮ ಸ್ವಂತದ ಒಳಿತಿಗಾಗಿ ಮಾತ್ರ. ಅಲ್ಲಾಹನ ಸಂಪ್ರೀತಿಯನ್ನು ಬಯಸಿಯೇ ನೀವು ಖರ್ಚು ಮಾಡುತ್ತೀರಷ್ಟೆ. ಹಾಗಿದ್ದರೆ, ನೀವು ದಾನಧರ್ಮಗಳಲ್ಲಿ ಖರ್ಚು ಮಾಡುವ ಸಂಪತ್ತಿನ ಸಂಪೂರ್ಣ ಪ್ರತಿಫಲ ನಿಮಗೆ ಕೊಡಲಾಗುವುದು. ನಿಮ್ಮ ಹಕ್ಕುಚ್ಯುತಿ ಖಂಡಿತ ಆಗಲಾರದು." (ಅಲ್‌ಬಕರಃ: 272)

7. ಎಲ್ಲ ಸ್ಥಿತಿಯಲ್ಲೂ ಅಲ್ಲಾಹನನ್ನು ಸ್ಮರಿಸುವವರಾಗಿರಬೇಕು

ಐಶ್ವರ್ಯ ಬರಲಿ-ಬಡತನದ ಬೇಗೆಯಿರಲಿ, ಸದಾ ಕಾಲ ಅಲ್ಲಾಹನನ್ನು ಮರೆಯದಂತಹ ಧೀರರೂ ವೀರರೂ ಇಲ್ಲಿ ಬೇಕಾಗಿದ್ದಾರೆ. ಅವರಿಗೆ ಸುಖದ ಸುಪ್ಪತ್ತಿಗೆಗಳಲ್ಲಿ ಆನಂದಿಸುತ್ತಿರುವಾಗಲೂ ಅಲ್ಲಾಹನ ನೆನಪಿರುತ್ತದೆ-

يَا أَيُّهَا الَّذِينَ آمَنُوا لَا تُلْهِكُمْ أَمْوَالُكُمْ وَلَا أَوْلَادُكُمْ عَن ذِكْرِ اللَّهِ ۚ
وَمَن يَفْعَلْ ذَٰلِكَ فَأُولَٰئِكَ هُمُ الْخَاسِرُونَ ﴿٩﴾

"ಸತ್ಯವಿಶ್ವಾಸಿಗಳೇ, ನಿಮ್ಮ ಸಂಪತ್ತು ಮತ್ತು ನಿಮ್ಮ ಸಂತಾನಗಳು ನಿಮ್ಮನ್ನು ಅಲ್ಲಾಹನ ಸ್ಮರಣೆಯಿಂದ ಅಲಕ್ಷ್ಯಗೊಳಿಸದಿರಲಿ. ಹೀಗೆ ಮಾಡುವವರೇ ನಷ್ಟ ಅನುಭವಿಸುವವರು."

(ಅಲ್ ಮುನಾಫಿಕೂನ್: 9)

ಇವು ಅಲ್ಲಾಹನ ಪಕ್ಷದಲ್ಲಿ ಪ್ರವೇಶ ದೊರೆಯಲು ಅನಿವಾರ್ಯವಾಗಿ ಇರಬೇಕಾದ ಗುಣವಿಶೇಷಗಳು. ಇವುಗಳ ಹೊರತು ಯಾರೂ ಅಲ್ಲಾಹನ ಗೆಳೆಯರ ಸಾಲಿಗೆ ಸೇರಲಾರರು. ವಾಸ್ತವದಲ್ಲಿ ಇವು ಮಾನವನ ಶೀಲ ಚಾರಿತ್ರ್ಯಗಳ ಪಾಲಿಗೆ ಮಾತ್ರವಲ್ಲದೆ ಅವನ ವಿಶ್ವಾಸದ ಪಾಲಿಗೂ ಕಠಿಣ ಪರೀಕ್ಷೆಯಾಗಿರುತ್ತದೆ. ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಲು ಹಿಂಜರಿಯುವವನು, ಈ ಖರ್ಚನ್ನು ತನ್ನ ಮೇಲೊಂದು ಆರ್ಥಿಕ ದಂಡ ಅಥವಾ ಜುಲ್ಮಾನೆಯೆಂದು ತಿಳಿಯುವವನು, ಅದರಿಂದ ತಪ್ಪಿಸಿಕೊಳ್ಳಲಿಕ್ಕಾಗಿ ವಿವಿಧ ನೆಪಗಳನ್ನು ಹುಡುಕುವವನು ಮತ್ತು ಒಂದು ವೇಳೆ ಏನಾದರೂ ಖರ್ಚು ಮಾಡಿದರೂ ತನಗುಂಟಾದ ಮನೋಸಂಕಟದ ಉರಿಯನ್ನು ಇತರರ ಮೇಲೆ ಉಪಕಾರ ಭಾರವನ್ನು ಹೊರಿಸಿ ನೀಗಿಸಿಕೊಳ್ಳುವವನು ಅಥವಾ ಎಲ್ಲೆಲ್ಲೂ, ತನ್ನ ದಾನ ಧರ್ಮಗಳ ಪ್ರಚಾರ ಆಗಬೇಕೆಂದು ಬಯಸುವವನು ವಾಸ್ತವದಲ್ಲಿ ಅಲ್ಲಾಹ್ ಮತ್ತು ಆಖಿರತ್‌ನ (ಪರಲೋಕ) ಮೇಲೆ ವಿಶ್ವಾಸವೇ ಇಲ್ಲದವನಾಗಿದ್ದಾನೆ. ಅವನು ತಾನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದ್ದೆಲ್ಲಾ ವ್ಯರ್ಥವಾಗಿ ಹೋಯಿತೆಂದೆಣಿಸುತ್ತಾನೆ. ಅವನಿಗೆ ತನ್ನ ಸುಖಭೋಗಗಳು, ಪ್ರಮೋದಗಳು, ತನ್ನ ಲಾಭಗಳು ಮತ್ತು ತನ್ನ ಖ್ಯಾತಿ ಅಲ್ಲಾಹನ ಮತ್ತು ಆತನ ಮೆಚ್ಚುಗೆಗಿಂತಲೂ ಅಧಿಕ ಪ್ರಿಯವಾಗಿರುತ್ತವೆ. ಇರುವುದೆಲ್ಲಾ ಈ ಜೀವನದಲ್ಲೇ-ಆದ್ದರಿಂದ ತಾನು ಏನಾದರೂ ಹಣ ಖರ್ಚು ಮಾಡಿದರೆ ಅದರ ಪ್ರತಿಫಲ ಪಡೆಯಲು ಈ ಲೋಕದಲ್ಲೇ ಜನಪ್ರಿಯತೆಯೂ ಕೀರ್ತಿಯೂ ಸಿಗಬೇಕು. ಇಲ್ಲವಾದರೆ ತನಗೆ ಹಣ ನಷ್ಟವಾಗುವುದು ಮಾತ್ರವಲ್ಲ, ಈ ಮಹಾನುಭಾವ ಇಂತಿಂತಹ ಸತ್ಕಾರ್ಯಗಳಿಗಾಗಿ ಇಂತಿಷ್ಟು ಹಣ ಖರ್ಚು ಮಾಡಿದ್ದಾರೆಂಬುದು ಯಾರಿಗೂ ತಿಳಿಯದೆ ಹೋದರೆ ಎಲ್ಲವೂ ಮಣ್ಣು ಪಾಲಾದಂತೆಯೇ ಸರಿ ಎಂಬುದೇ ಅವನ ವಿಚಾರಧಾರೆಯಾಗಿರುತ್ತದೆ. ಇಂತಹ ವ್ಯಕ್ತಿ ಅಲ್ಲಾಹನ ಯಾವ ಕೆಲಸಕ್ಕೂ ಬಾರದವನೆಂದು ಕುರ್‌ಆನಿನಲ್ಲಿ ಸ್ಪಷ್ಟವಾಗಿ ಹೇಳಿದೆ, ಇಂಥವನು ತಾನು ಸತ್ಯವಿಶ್ವಾಸಿಯೆಂದು ಹೇಳಿಕೊಳ್ಳುತ್ತಿರುವ ನೆಂದಾದರೆ ಅವನು 'ಮುನಾಫಿಕ್' (ಕಪಟವಿಶ್ವಾಸಿ) ಆಗಿದ್ದಾನೆ. ಈ ನಿಟ್ಟಿನಲ್ಲಿ ಕೆಳಗೆ ಕೊಟ್ಟಿರುವ ಸೂಕ್ತವನ್ನು ಗಮನಿಸಿರಿ.

8. ಋಣ ಹೊರಿಸುವವರಾಗಿರಬಾರದು

يَٰٓأَيُّهَا ٱلَّذِينَ ءَامَنُوا۟ لَا تُبْطِلُوا۟ صَدَقَٰتِكُم بِٱلْمَنِّ وَٱلْأَذَىٰ كَٱلَّذِى يُنفِقُ

مَالَهُۥ رِئَآءَ ٱلنَّاسِ وَلَا يُؤْمِنُ بِٱللَّهِ وَٱلْيَوْمِ ٱلْءَاخِرِ

"ಓ ಸತ್ಯವಿಶ್ವಾಸಿಗಳೇ, ತನ್ನ ಸಂಪತ್ತನ್ನು ಆಡಂಬರಕ್ಕಾಗಿ ಖರ್ಚು ಮಾಡುವವನಂತೆ ಹಾಗೂ ಅಲ್ಲಾಹ್ ಮತ್ತು ಆಖಿರತ್‌ನಲ್ಲಿ(ಪರಲೋಕ) ವಿಶ್ವಾಸವಿರಿಸದವನ ಹಾಗೆ ಉಪಕಾರ ಭಾರವಿರಿಸಿಯೂ ಮನ ನೋಯಿಸಿಯೂ ನಿಮ್ಮ ದಾನ ಧರ್ಮಗಳನ್ನು ನೀವು ನಿಷ್ಫಲಗೊಳಿಸಿ ಕೊಳ್ಳಬೇಡಿರಿ."

(ಅಲ್‌ಬಕರಃ 264)

9. ಧನ ಸಂಗ್ರಹಿಸಿಡಬಾರದು

وَالَّذِيْنَ يَكْنِزُوْنَ الذَّهَبَ وَالْفِضَّةَ وَلَا يُنْفِقُوْنَهَا فِيْ سَبِيْلِ اللّٰهِ ۙ

فَبَشِّرْهُمْ بِعَذَابٍ اَلِيْمٍ ۝

"ಚಿನ್ನವನ್ನೂ ಬೆಳ್ಳಿಯನ್ನೂ ಸಂಗ್ರಹಿಸಿಟ್ಟು ಅವುಗಳನ್ನು ದೇವ ಮಾರ್ಗದಲ್ಲಿ ಖರ್ಚು ಮಾಡದವರಿಗೆ ವೇದನಾಯುಕ್ತ ಯಾತನೆಯ ಸುವಾರ್ತೆ ನೀಡಿರಿ." (ಅತ್ತಾಬಃ 34)

10. ಅಲ್ಲಾಹನ ಮಾರ್ಗದಲ್ಲಿ ಮೈಗಳ್ಳರಾಗಿರಬಾರದು

لَا يَسْتَاْذِنُكَ الَّذِيْنَ يُؤْمِنُوْنَ بِاللّٰهِ وَالْيَوْمِ الْاٰخِرِ اَنْ يُّجَاهِدُوْا بِاَمْوَالِهِمْ

وَاَنْفُسِهِمْ ۗ وَاللّٰهُ عَلِيْمٌۢ بِالْمُتَّقِيْنَ ۝ اِنَّمَا يَسْتَاْذِنُكَ الَّذِيْنَ لَا يُؤْمِنُوْنَ بِاللّٰهِ

وَالْيَوْمِ الْاٰخِرِ وَارْتَابَتْ قُلُوْبُهُمْ فَهُمْ فِيْ رَيْبِهِمْ يَتَرَدَّدُوْنَ ۝

"ಅಲ್ಲಾಹ್ ಮತ್ತು ನಿರ್ಣಾಯಕ ದಿನದ ಮೇಲೆ ವಿಶ್ವಾಸವಿಡುವವರು ತಮಗೆ ತನು-ಧನಗಳೊಂದಿಗೆ ಹೋರಾಟ ನಡೆಸುವುದರಿಂದ ವಿನಾಯತಿ ನೀಡಬೇಕೆಂದು ಎಂದೆಂದಿಗೂ ವಿನಂತಿಸಲಾರರು. ಅಲ್ಲಾಹ್ ಧರ್ಮನಿಷ್ಠರನ್ನು ಚೆನ್ನಾಗಿ ಬಲ್ಲವನಾಗಿರುತ್ತಾನೆ. ಅಲ್ಲಾಹ್ ಮತ್ತು ಅಂತಿಮ ದಿನದ ಮೇಲೆ ವಿಶ್ವಾಸವಿರಿಸದವರು ಮಾತ್ರ ಇಂತಹ ನಿವೇದನೆಗಳನ್ನು ಮಾಡುತ್ತಾರೆ. ಅವರ ಹೃದಯಗಳಲ್ಲಿ ಸಂಶಯವಿದೆ. ಅವರು ತಮ್ಮ ಸಂಶಯಗಳಲ್ಲೇ ತಲ್ಲಣಗೊಳ್ಳುತ್ತಿದ್ದಾರೆ." (ಅತ್ತಾಬಃ 44, 45)

11. ಮನಃಪೂರ್ವಕ ಆಜ್ಞಾಪಾಲನೆ ಮಾಡುವವರಾಗಿರಬೇಕು

وَمَا مَنَعَهُمْ اَنْ تُقْبَلَ مِنْهُمْ نَفَقٰتُهُمْ اِلَّآ اَنَّهُمْ كَفَرُوْا بِاللّٰهِ وَبِرَسُوْلِهٖ

وَلَا يَاْتُوْنَ الصَّلٰوةَ اِلَّا وَهُمْ كُسَالٰى وَلَا يُنْفِقُوْنَ اِلَّا وَهُمْ كٰرِهُوْنَ ۝

"ಅವರು ಅಲ್ಲಾಹ್ ಮತ್ತು ಅವನ ರಸೂಲರನ್ನು ನಿಷೇಧಿಸಿದರು. ಅವರು ನಮಾಝಿಗೆ ಆಲಸ್ಯದೊಂದಿಗೆ ಬರುತ್ತಾರೆ. ದೇವ ಮಾರ್ಗದಲ್ಲಿ ಒಲ್ಲದ ಮನಸ್ಸಿನಿಂದ ಖರ್ಚು ಮಾಡುತ್ತಾರೆ. ಇದರ ಹೊರತು ಅವರ ಸಂಪತ್ತು ಸ್ವೀಕರಿಸದಿರಲು ಇನ್ನಾವ ಕಾರಣವೂ ಇಲ್ಲ."

(ಅತ್ತೌಬಃ: 54)

الْمُنَافِقُونَ وَالْمُنَافِقَاتُ بَعْضُهُم مِّن بَعْضٍ ۚ يَأْمُرُونَ بِالْمُنكَرِ وَيَنْهَوْنَ

عَنِ الْمَعْرُوفِ وَيَقْبِضُونَ أَيْدِيَهُمْ ۚ نَسُوا اللَّهَ فَنَسِيَهُمْ ۗ إِنَّ الْمُنَافِقِينَ هُمُ الْفَاسِقُونَ ﴿٦٧﴾

"ಕಪಟವಿಶ್ವಾಸಿ ಪುರುಷರೂ ಕಪಟವಿಶ್ವಾಸಿ ಸ್ತ್ರೀಯರೂ ಪರಸ್ಪರ ಅನ್ಯೋನ್ಯರು. ಅವರು ಕೆಡುಕಿನ ಆಜ್ಞೆ ಕೊಡುತ್ತಾರೆ, ಒಳಿತುಗಳಿಂದ ತಡೆಯುತ್ತಾರೆ ಮತ್ತು ತಮ್ಮ ಕೈಗಳನ್ನು ಸತ್ಕಾರ್ಯಗಳಿಂದ ತಡೆದಿಡುತ್ತಾರೆ. ಅವರು ಅಲ್ಲಾಹನನ್ನು ಮರೆತುಬಿಟ್ಟರು. ಆಗ ಅಲ್ಲಾಹನೂ ಅವರನ್ನು ಮರೆತುಬಿಟ್ಟನು. ನಿಶ್ಚಯವಾಗಿಯೂ ಈ ಕಪಟವಿಶ್ವಾಸಿಗಳೇ ಕರ್ಮಭ್ರಷ್ಟರು."

(ಅತ್ತೌಬಃ: 67)

12. ದೇವ ಮಾರ್ಗದ ದಾನವನ್ನು ಶಿಕ್ಷೆ ಎಂದು ಭಾವಿಸಬಾರದು

وَمِنَ الْأَعْرَابِ مَن يَتَّخِذُ مَا يُنفِقُ مَغْرَمًا

"ಅಲ್ಲಾಹನ ಮಾರ್ಗದಲ್ಲಿ ಒಂದಿಷ್ಟು ಖರ್ಚು ಮಾಡಿದರೂ ಅದನ್ನು ಬಲಾತ್ಕಾರದ ದಂಡನೆಯೆಂದು ತಿಳಿದುಕೊಳ್ಳುವವರೂ ಈ ಬದವೀ ಅರಬರಲ್ಲಿದ್ದಾರೆ."

(ಅತ್ತೌಬಃ: 98)

13. ಜಿಪುಣರಾಗಿರಬಾರದು

هَا أَنتُمْ هَٰؤُلَاءِ تُدْعَوْنَ لِتُنفِقُوا فِي سَبِيلِ اللَّهِ فَمِنكُم مَّن

يَبْخَلُ ۖ وَمَن يَبْخَلْ فَإِنَّمَا يَبْخَلُ عَن نَّفْسِهِ ۚ وَاللَّهُ الْغَنِيُّ وَأَنتُمُ

الْفُقَرَاءُ ۚ وَإِن تَتَوَلَّوْا يَسْتَبْدِلْ قَوْمًا غَيْرَكُمْ ثُمَّ لَا يَكُونُوا أَمْثَالَكُم ﴿٣٨﴾

"ನೋಡಿರಿ, ಅಲ್ಲಾಹನ ಮಾರ್ಗದಲ್ಲಿ ಸಂಪತ್ತನ್ನು ಖರ್ಚು ಮಾಡಬೇಕೆಂದು ನಿಮಗೆ ಕರೆ ನೀಡಲಾಗುತ್ತಿದೆ. ಈ ಬಗ್ಗೆ ನಿಮ್ಮಲ್ಲಿ ಕೆಲವರು ಜಿಪುಣತೆ ತೋರುತ್ತಿದ್ದಾರೆ. ಜಿಪುಣತೆ ತೋರುವಾತನು ವಾಸ್ತವದಲ್ಲಿ ತನ್ನ ಮೇಲೆ ತಾನೇ ಜಿಪುಣತೆ ತೋರುತ್ತಿದ್ದಾನೆ. ಅಲ್ಲಾಹನಂತೂ

ನಿರಪೇಕ್ಷನು. ನೀವೇ ಅವನ ಅವಲಂಬಿತರು. ನೀವು ವಿಮುಖರಾದರೆ ಅಲ್ಲಾಹನು ನಿಮ್ಮ ಸ್ಥಾನದಲ್ಲಿ ಬೇರಾವುದಾದರೂ ಜನಾಂಗವನ್ನು ತರುವನು ಮತ್ತು ಅವರು ನಿಮ್ಮಂತೆ ಇರಲಾರರು.''

(ಮುಹಮ್ಮದ್: 38)

ಮುಸ್ಲಿಮ್ ಬಾಂಧವರೇ! ಇದು ನಿಮ್ಮ ಧರ್ಮದ ಆಧಾರ ಸ್ತಂಭಗಳಲ್ಲೊಂದಾದ 'ಝಕಾತ್'ನ ವಾಸ್ತವಿಕತೆ. ಇದನ್ನು ಇಲ್ಲಿಯ ಸರಕಾರಗಳು ವಿಧಿಸುತ್ತಿರುವ ತೆರಿಗೆಯಂತಹ ಒಂದು ತೆರಿಗೆಯೆಂದು ತಿಳಿಯಬೇಡಿರಿ. ಇದು ವಾಸ್ತವದಲ್ಲಿ ಇಸ್ಲಾಮಿನ ಜೀವಾಳವಾಗಿದೆ. ಇದು ಯಥಾರ್ಥದಲ್ಲಿ ಈಮಾನಿನ ಪರೀಕ್ಷೆಯಾಗಿದೆ. ಒಬ್ಬನು ಒಂದೊಂದೇ ಪರೀಕ್ಷೆ ಎದುರಿಸುತ್ತಾ ಪ್ರಗತಿ ಹೊಂದುತ್ತಾ ಕೊನೆಗೊಂದು ಪರೀಕ್ಷೆ ಎದುರಿಸಿ ಪದವೀಧರನಾಗುವಂತೆಯೇ ಅಲ್ಲಾಹನೂ ಅನೇಕ ಪರೀಕ್ಷೆಗಳನ್ನಿಟ್ಟಿರುತ್ತಾನೆ. ಈ ಪರೀಕ್ಷೆಗಳನ್ನು ಒಂದೊಂದಾಗಿ ಎದುರಿಸಬೇಕಾಗುತ್ತದೆ. ಅವನ ಈ ನಾಲ್ಕನೆಯ ಪರೀಕ್ಷೆ ಅರ್ಥಾತ್ ಧನತ್ಯಾಗದ ಪರೀಕ್ಷೆಯಲ್ಲಿ ಉತ್ತೀರ್ಣನಾದವನು ಪೂರ್ಣ ಮುಸ್ಲಿಮನಾಗುತ್ತಾನೆ. ಇದೂ ಕೊನೆಯ ಪರೀಕ್ಷೆಯಲ್ಲ. ಮುಂದೆ ಇದಕ್ಕಿಂತಲೂ ಕಠಿಣವಾದ ಪ್ರಾಣತ್ಯಾಗದ ಪರೀಕ್ಷೆಯಿದೆ. ಅದನ್ನು ಮುಂದೆ ವಿವರಿಸಲಿರುವೆನು. ಆದರೆ ಇಸ್ಲಾಮಿನ ಗಡಿಯೊಳಗೆ ಪ್ರವೇಶಿಸಲು ಅಲ್ಲಾಹನ ಪಕ್ಷದಲ್ಲಿ ಪ್ರವೇಶ ಸಿಗಲು ನಿಶ್ಚಯಿಸಲ್ಪಟ್ಟಿರುವ ಪರೀಕ್ಷೆಗಳಲ್ಲಿ ಇದು ಕೊನೆಯದು. "ಧರ್ಮಬೋಧಕರು ಮುಸ್ಲಿಮರಿಗೆ ಹಣ ಖರ್ಚು ಮಾಡಬೇಕೆಂಬ ಉಪದೇಶವನ್ನೇನೋ ಧಾರಾಳ ಮಾಡಿದ್ದಾರೆ. ಈಗ ಮುಸ್ಲಿಮರ ಈ ದಾರಿದ್ರ್ಯಾವಸ್ಥೆಯಲ್ಲಿ ಅವರಿಗೆ ಹಣ ಸಂಪಾದಿಸುವ ಮತ್ತು ಹಣ ಸಂಗ್ರಹಿಸುವ ಉಪದೇಶ ನೀಡಲಿ" ಎಂದು ಇತ್ತೀಚೆಗೆ ಕೆಲವರು ಹೇಳತೊಡಗಿದ್ದಾರೆ. ಆದರೆ ಅವರು ಹೀಗೆ ಯಾವುದರ ಬಗ್ಗೆ ಸಿಡಿಮಿಡಿಗೊಳ್ಳುತ್ತಿರುವರೋ ಅದುವೇ ಇಸ್ಲಾಮಿನ ಜೀವಾಳವೆಂಬುದನ್ನು ಅವರು ಅರಿತಿಲ್ಲ. ಈ ಜೀವಾಳದ ಅಭಾವವೇ ಮುಸ್ಲಿಮರನ್ನು ಅಧೋಗತಿಗಿಳಿಸಿತು. ಈ ಜೀವಾಳವು ಅವರನ್ನು ಬೀಳಿಸಿದುದರಿಂದ ಅವರು ಬಿದ್ದು ಹೋದುದಲ್ಲ. ಈ ಜೀವಾಳವು ಕಳೆದು ಹೋದುದರಿಂದಲೇ ಅವರು ಬಿದ್ದು ಹೋದರು.

ಮುಂದಿನ ಉಪನ್ಯಾಸಗಳಲ್ಲಿ ಝಕಾತ್ (ಕಡ್ಡಾಯ ದಾನ) ಮತ್ತು ಸದಕಾತ್ (ಐಚ್ಛಿಕ ದಾನಗಳು) ಯಥಾರ್ಥವಾಗಿ ನಮ್ಮ ಸಾಮೂಹಿಕ ಜೀವನದ ಜೀವನಾಡಿಯಾಗಿರುವುದು ಹೇಗೆಂದೂ, ಪರಲೋಕದ ಮಾತ್ರವಲ್ಲ ಇಹಲೋಕದ ಸೌಭಾಗ್ಯಗಳೂ ಇದರಲ್ಲಿ ಹೇಗೆ ಅಡಕವಾಗಿವೆಯೆಂದೂ ವಿವರಿಸುವೆನು. (ಇನ್‌ಶಾ ಅಲ್ಲಾಹ್)

○

ಸಾಮೂಹಿಕ ಜೀವನದಲ್ಲಿ ಝಕಾತಿನ ಸ್ಥಾನ

ಮುಸ್ಲಿಮ್ ಬಾಂಧವರೇ!

ಇದಕ್ಕಿಂತ ಮುಂಚಿನ ಎರಡು ಉಪನ್ಯಾಸಗಳಲ್ಲಿ ಝಕಾತಿನ ನಿಜ ಸ್ವರೂಪವನ್ನು ವಿವರಿಸಿರುತ್ತೇನೆ. ಈಗ ಅದರ ಇನ್ನೊಂದು ಪಾರ್ಶ್ವದ ಕಡೆಗೆ ಬೆಳಕು ಬೀರುವೆನು.

ಅಲ್ಲಾಹನ ಔದಾರ್ಯ

ಕುರ್‌ಆನಿನಲ್ಲಿ ಝಕಾತ್ (ಕಡ್ಡಾಯ ದಾನ) ಮತ್ತು ಸದಕಾತ್ (ಐಚ್ಛಿಕ ದಾನ)ಗಳಿಗೆ ಅಲ್ಲಲ್ಲಿ 'ಇನ್ಫಾಕ್ ಫೀಸಬೀಲಿಲ್ಲಾಹ್' ಎಂಬ ಪದ ಉಪಯೋಗಿಸಲ್ಪಟ್ಟಿದೆ. ಅರ್ಥಾತ್ "ದೇವ ಮಾರ್ಗದಲ್ಲಿ ವ್ಯಯಿಸುವುದು." ನೀವು ದೇವ ಮಾರ್ಗದಲ್ಲಿ ವ್ಯಯಿಸುವುದೆಲ್ಲಾ ಅಲ್ಲಾಹನ ಲೆಕ್ಕದಲ್ಲಿ ಉತ್ತಮ ಸಾಲವಾಗಿರುವುದೆಂದು ಕೆಲವು ಕಡೆ ಹೇಳಲಾಗಿದೆ. ನೀವು ಅಲ್ಲಾಹನಿಗೆ ಸಾಲ ಕೊಡುತ್ತೀರಿ ಮತ್ತು ಅಲ್ಲಾಹ್ ನಿಮ್ಮ ಸಾಲಗಾರನಾಗಿ ಬಿಡುತ್ತಾನೆ ಎಂಬಂತಿದೆ ಈ ಮಾತು. ದೇವ ಮಾರ್ಗದಲ್ಲಿ ನೀವು ಏನನ್ನು ಕೊಟ್ಟರೂ ಅದು ಅಲ್ಲಾಹನ ಲೆಕ್ಕಕ್ಕಾಗಿದ್ದು ಅವನು ಅಷ್ಟನ್ನು ಮಾತ್ರ ನಿಮಗೆ ಮರಳಿಸುವುದಲ್ಲ; ಅದಕ್ಕಿಂತ ಬಹುಪಟ್ಟು ಹೆಚ್ಚು ನಿಮಗೆ ಮರಳಿಸುವನೆಂದು ಅನೇಕ ಕಡೆಗಳಲ್ಲಿ ತಿಳಿಸಲಾಗಿದೆ. ಸ್ವಲ್ಪ ಆಲೋಚಿಸಿರಿ, ಭೂಮಿ-ಆಕಾಶಗಳ ಮಾಲಿಕನು ನಿಮ್ಮ ಸಹಾಯಾಪೇಕ್ಷಕನೇ? ಅವನಂತಹ ಸರ್ವೋನ್ನತ ದಾತನಿಗೆ ನಿಮ್ಮಿಂದ ಸಾಲ ಪಡೆಯುವ ಅಗತ್ಯವಿದೆಯೇ? ಆ ರಾಜಾಧಿರಾಜ ಹಾಗೂ ಅನಂತ ಭಂಡಾರದ ಮಾಲಿಕನು ನಿಮ್ಮೊಡನೆ ತನಗಾಗಿ ಏನನ್ನಾದರೂ ಕೇಳುತ್ತಾನೆಯೇ? ಅವನ ಕೊಡುಗೆಗಳಿಂದಲೇ ನೀವು ಪೋಷಿಸಲ್ಪಡುತ್ತಿರುವಿರಿ. ಅವನು ನೀಡಿದ ಜೀವನಾಧಾರಗಳನ್ನೇ ನೀವು ಉಣ್ಣುತ್ತಿರುವಿರಿ- ನೀವು ಧನಿಕರಾಗಿರಲಿ, ಬಡವರಾಗಿರಲಿ. ನಿಮ್ಮಲ್ಲಿರುವ ಸರ್ವಸ್ವವೂ ಅವನ ಕೊಡುಗೆಯೇ. ದರಿದ್ರರಿಂದ ಕೋಟ್ಯಾಧೀಶನ ತನಕ ಪ್ರತಿಯೊಬ್ಬನೂ ಅವನ ಸಹಾಯಾಪೇಕ್ಷಕನಾಗಿರುತ್ತಾನೆ. ಅವನಾದರೋ ಯಾರ ಸಹಾಯಾಪೇಕ್ಷಕನೂ ಅಲ್ಲ. ಅವನಿಗೆ ನಿಮ್ಮಿಂದ ಸಾಲ ಪಡೆಯುವ ಮತ್ತು ನಿಮ್ಮೆದುರು ಕೈಚಾಚುವ ಅಗತ್ಯವಾದರೂ ಏನಿದೆ? ಅವನ ಮಹಾ ಔದಾರ್ಯವನ್ನು ಗಮನಿಸಿರಿ. ಅವನು ನಿಮ್ಮಿಂದ ನಿಮ್ಮ ಲಾಭಕ್ಕಾಗಿ, ನಿಮ್ಮ ಒಳಿತಿಗಾಗಿ ಮತ್ತು ನಿಮ್ಮ ಕಾರ್ಯಕ್ಕಾಗಿ ಖರ್ಚು ಮಾಡಲು ಹೇಳಿ, "ಆ ಖರ್ಚು ನನ್ನ ಮಾರ್ಗದಲ್ಲಾಗಿರುತ್ತದೆ. ಅದು ನನ್ನ ಮೇಲೆ ಸಾಲ. ನನ್ನ ಬಳಿ ಅದರ ಪ್ರತಿಫಲವಿದೆ. ನಾನು ನಿಮ್ಮ ಉಪಕಾರವನ್ನು ಸ್ಮರಿಸುತ್ತೇನೆ. ನೀವು ನಿಮ್ಮ ಸಮುದಾಯದ

ದರಿದ್ರರಿಗೂ ನಿರ್ಗತಿಕರಿಗೂ ಕೊಡಿರಿ. ಅದರ ಪ್ರತಿಫಲವನ್ನು ಆ ಬಡ ಜನರು ಎಲ್ಲಿಂದ ಕೊಟ್ಟಾರು? ಅವರ ಕಡೆಯಿಂದ ನಾನು ಕೊಡುವೆನು. ನೀವು ನಿಮ್ಮ ಬಡ ಸಂಬಂಧಿಕರಿಗೆ ಸಹಾಯ ಮಾಡಿರಿ. ಆ ಋಣಭಾರ ಅವರ ಮೇಲಿಲ್ಲ. ಅದು ನನ್ನ ಮೇಲಿದೆ. ಆ ಋಣಭಾರವನ್ನು ನಾನು ಇಳಿಸುವೆನು. ನೀವು ನಿಮ್ಮ ಅನಾಥರಿಗೂ ವಿಧವೆಯರಿಗೂ ಅಂಗಹೀನರಿಗೂ ಪ್ರಯಾಣಿಕರಿಗೂ ಕಷ್ಟ ಕಾರ್ಪಣ್ಯಗಳಿಗೊಳಗಾದ ಸಹೋದರರಿಗೂ ಕೊಟ್ಟುದೆಲ್ಲವನ್ನೂ ನನ್ನ ಲೆಕ್ಕಕ್ಕೆ ಬರೆದಿಟ್ಟು ಕೊಳ್ಳಿರಿ. ನಾನದನ್ನು ತೀರಿಸುವೆನು. ನೀವು ಆರ್ಥಿಕ ಮುಗ್ಗಟ್ಟಿಗೊಳಗಾದ ಬಂಧುಗಳಿಗೆ ಸಾಲ ಕೊಡಿರಿ. ಅವರಿಂದ ಬಡ್ಡಿ ಕೇಳಬೇಡಿರಿ. ಅವರನ್ನು ಸತಾಯಿಸಬೇಡಿರಿ. ಅವರು ಮರುಪಾವತಿ ಮಾಡಲು ಅಸಮರ್ಥರಾದರೆ ಅವರನ್ನು ಸೆರೆಮನೆಗೆ ಕಳುಹಿಸಬೇಡಿರಿ. ಅವರ ಪಾತ್ರೆಗಳನ್ನೂ ಇತರ ವಸ್ತುಗಳನ್ನೂ ಹರಾಜು ಮಾಡಿಸಬೇಡಿರಿ. ಅವರ ಮಕ್ಕಳು ಮರಿಗಳನ್ನು ಮನೆಯಿಂದ ಹೊರಕ್ಕಟ್ಟಬೇಡಿರಿ. ನೀವು ಕೊಟ್ಟ ಸಾಲ ಅವರ ಮೇಲಿಲ್ಲ ಅದು ನನ್ನ ಮೇಲಿದೆ. ಅವರು ಅಸಲನ್ನು ಪಾವತಿ ಮಾಡಿದರೆ ಅವರ ಕಡೆಯಿಂದ ಬಡ್ಡಿಯನ್ನು ನಾನು ಕೊಡುವೆನು. ಅವರು ಅಸಲನ್ನೂ ಕೊಡಲು ಅಸಮರ್ಥರಾದರೆ ನಾನು ಅಸಲು ಬಡ್ಡಿಗಳೆರಡನ್ನೂ ನಿಮಗೆ ಕೊಡುವೆನು. ಇದೇ ರೀತಿಯಲ್ಲಿ ಸಾಮೂಹಿಕ ಅಭಿವೃದ್ಧಿ ಕಾರ್ಯ ಗಳಿಗೆ ನಿಮ್ಮ ಸಹಜೀವಿಗಳ ಕಲ್ಯಾಣಕ್ಕಾಗಿ ನೀವು ಖರ್ಚು ಮಾಡುವುದರ ಫಲ ನಿಮಗೇ ಸಿಗುವುದಿದ್ದರೂ ಅದರ ಋಣಭಾರ ನನ್ನ ಮೇಲಿದೆ. ನಾನು ಚಿಕ್ಕಾಸನ್ನೂ ಇಟ್ಟುಕೊಳ್ಳದೆ ಲಾಭಸಹಿತ ಮರುಪಾವತಿ ಮಾಡುವೆನು" ಎನ್ನುತ್ತಾನೆ.

ಆ ಮಹಾ ಉದಾತ್ತನಾದ ರಾಜಾಧಿರಾಜನ ಔದಾರ್ಯವಿದು. ನಿಮ್ಮಲ್ಲಿರುವುದೆಲ್ಲಾ ಅವನ ಕೊಡುಗೆ. ನೀವು ಬೇರೆ ಯಾರಿಂದಲೂ ಏನನ್ನೂ ಪಡೆಯುವುದಿಲ್ಲ. ಎಲ್ಲವನ್ನೂ ಅವನ ಕೋಶಾಗಾರದಿಂದಲೇ ಪಡೆಯುತ್ತೀರಿ. ನೀವು ಏನು ಕೊಡುವುದಿದ್ದರೂ ಅವನಿಗಲ್ಲ. ನಿಮ್ಮ ಸ್ವಂತ ಬಂಧು ಬಳಗದವರಿಗೂ ನಿಮ್ಮ ಸೋದರರಿಗೂ ನಿಮ್ಮ ಸಮುದಾಯದ ಜನರಿಗೂ ಕೊಡುತ್ತೀರಿ ಅಥವಾ ನಿಮ್ಮದೇ ಸಾಮೂಹಿಕ ಅಭಿವೃದ್ಧಿ ಕಾರ್ಯಗಳಿಗಾಗಿ ವಿನಿಯೋಗಿಸುತ್ತೀರಿ. ಅವುಗಳ ಫಲವೂ ಕೊನೆಗೆ ನಿಮಗೇ ಸಿಗುತ್ತದೆ. ಆದರೆ ಆ ಮಹಾ ಶ್ರೇಷ್ಠ ದಾನಿಯ ಔದಾರ್ಯವನ್ನು ನೋಡಿರಿ. ನೀವು ಅವನಿಂದ ಪಡೆದು ನಿಮ್ಮವರಿಗೆ ಕೊಡುವುದನ್ನು ಅವನು, "ನೀವು ನನಗೆ ಕೊಟ್ಟಿರಿ. ನನ್ನ ಮಾರ್ಗದಲ್ಲಿ ಕೊಟ್ಟಿರಿ. ನನಗೆ ಸಾಲ ಕೊಟ್ಟಿರಿ. ನಾನು ಅದರ ಪ್ರತಿಫಲ ಕೊಡುವೆನು" ಎನ್ನುತ್ತಾನೆ. ಅಲ್ಲಾಹು ಅಕ್ಬರ್! ಇಷ್ಟು ಉನ್ನತ ಮಟ್ಟದ ಔದಾರ್ಯ ಮತ್ತು ದಾನಶೀಲತೆಯು ಆ ನಿರಪೇಕ್ಷ ಪ್ರಭುವಿನಿಂದ ಮಾತ್ರ ಅಭಿವ್ಯಕ್ತಗೊಳ್ಳಬಲ್ಲುದೇ ವಿನಾ ಮಾನವನಿಂದ ಈ ಮಟ್ಟದ ಔನ್ನತ್ಯವನ್ನು ಊಹಿಸಲಿಕ್ಕೂ ಸಾಧ್ಯವಿಲ್ಲ.

ದಾನದ ಬೋಧನೆ ಏಕೆ?

ಅಲ್ಲಾಹನು ಮಾನವನನ್ನು ಪುಣ್ಯ ಹಾಗೂ ದಾನಶೀಲತೆಯ ಸದ್ಗುಣಗಳನ್ನು ಹೊಂದುವಂತೆ ಪ್ರೇರೇಪಿಸಲಿಕ್ಕಾಗಿ ಈ ಕ್ರಮವನ್ನು ಏಕೆ ಕೈಗೊಂಡನೆಂದು ಊಹಿಸಿರಿ. ಈ ಪ್ರಶ್ನೆಯ ಬಗ್ಗೆ ಎಷ್ಟು ಹೆಚ್ಚು ಚಿಂತಿಸುವಿರೋ ಅಷ್ಟೇ ಹೆಚ್ಚಾಗಿ ಇಸ್ಲಾಮೀ ಶಿಕ್ಷಣದ ಪಾವಿತ್ರ್ಯವು

ಸ್ಪಷ್ಟವಾಗುತ್ತಾ ಬಂದು ಇಂತಹ ಅಪ್ರತಿಮ ಶಿಕ್ಷಣವು ಅಲ್ಲಾಹನ ಹೊರತು ಬೇರೆ ಯಾರ ಕಡೆಯಿಂದಲೂ ಬಂದಿರಲಿಕ್ಕೆ ಸಾಧ್ಯವಿಲ್ಲವೆಂದು ನಿಮ್ಮ ಅಂತಃಕರಣ ಸಾಕ್ಷ್ಯ ನುಡಿಯುವುದು.

ಮಾನವನ ಸ್ವಾರ್ಥ ಸ್ವಭಾವ

ಮಾನವನು ಸ್ವಭಾವತಃ ಅಕ್ರಮಿ ಮತ್ತು ಅಜ್ಞಾನಿಯಾಗಿದ್ದಾನೆ. ಅವನ ದೃಷ್ಟಿ ಸೀಮಿತ. ಹೆಚ್ಚು ದೂರದ ವರೆಗೆ ನೋಡಲು ಅವನಿಗೆ ಸಾಧ್ಯವಾಗುವುದಿಲ್ಲ. ಅವನ ಮನಸ್ಸು ಸಂಕುಚಿತ. ಹೆಚ್ಚು ಉನ್ನತ ವಿಚಾರಗಳು ಅವನ ಮನಸ್ಸಿನಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿ ಮಾತ್ರ ಹಿಡಿಸುತ್ತದೆ. ಅವನು ಸ್ವಾರ್ಥಿ. ಸ್ವತಃ ತನ್ನ ಲಾಭದ ಬಗ್ಗೆಯೂ ಯಾವುದೇ ವಿಶಾಲ ಭಾವನೆ ಅವನ ಮನಸ್ಸಿನಲ್ಲಿ ಉಂಟಾಗುವುದಿಲ್ಲ. ಅವನು ದುಡುಕು ಸ್ವಭಾವದವನು.

خُلِقَ الْإِنسَانُ مِنْ عَجَلٍ

"ಮನುಷ್ಯನು ದುಡುಕು ಸ್ವಭಾವದವನಾಗಿ ಸೃಷ್ಟಿಸಲ್ಪಟ್ಟಿದ್ದಾನೆ."

(ಅಲ್ ಅಂಬಿಯಾ: 37)

ಎಲ್ಲಾ ಕಾರ್ಯಗಳ ಫಲಿತಾಂಶವನ್ನೂ ಪ್ರಯೋಜನಗಳನ್ನೂ ಅವನು ತಕ್ಷಣವೇ ಕಾಣ ಬಯಸುತ್ತಾನೆ. ಕ್ಷಿಪ್ರವಾಗಿ ಸಿಗುವ ಮತ್ತು ಇಂದ್ರಿಯಾನುಭವಕ್ಕೆ ಬರುವ ಪ್ರಯೋಜನವನ್ನು ಮಾತ್ರ ಪ್ರಯೋಜನವೆಂದು ತಿಳಿಯುತ್ತಾನೆ. ತಡವಾಗಿ ಸಿಗುವ ಫಲಿತಾಂಶಗಳ ಕಡೆಗೆ ಅವನ ದೃಷ್ಟಿ ಎಟಕುವುದಿಲ್ಲ. ಅತ್ಯಧಿಕವಾಗಿ ಮತ್ತು ನಿರಂತರವಾಗಿ ಸಿಗಬಹುದಾದ ಲಾಭಗಳ ಕಡೆಗೆ ಅವನ ಗಮನ ಹರಿಯುವುದು ಬಹು ಪ್ರಯಾಸದಿಂದ; ಕೆಲವೊಮ್ಮೆ ಇಲ್ಲವೆಂದೇ ಹೇಳಬಹುದು. ಇದು ಮಾನವನ ಸ್ವಾಭಾವಿಕ ದೌರ್ಬಲ್ಯ. ಈ ದೌರ್ಬಲ್ಯದ ಪರಿಣಾಮವಾಗಿ ಪ್ರತಿಯೊಂದು ವಿಷಯದಲ್ಲಿಯೂ ಅವನು ತನ್ನ ಸ್ವಂತ ಲಾಭವನ್ನೇ ನೋಡುತ್ತಾನೆ. ಅದರಲ್ಲೂ ಅತ್ಯಲ್ಪ ವಾಗಿರುವ, ಕ್ಷಿಪ್ರವಾಗಿ ಸಿಗುವ ಮತ್ತು ಇಂದ್ರಿಯಾನುಭವಕ್ಕೆ ಬರುವ ಲಾಭವನ್ನು ಮಾತ್ರ. ತಾನು ಸಂಪಾದಿಸಿದುದು ಅಥವಾ ತನಗೆ ಹಿರಿಯರಿಂದ ಸಿಕ್ಕಿದುದೆಲ್ಲಾ ತನ್ನದೇ ಆಗಿದ್ದು, ಅದರಲ್ಲಿ ಬೇರಾರಿಗೂ ಪಾಲಿಲ್ಲ. ಅದು ನನ್ನ ಅವಶ್ಯಕತೆಗಳಿಗಾಗಿ, ನನ್ನ ಇಚ್ಛೆಗಳಿಗಾಗಿ, ನನ್ನ ಭೋಗಾ ಭಿಲಾಷೆಗಳಿಗಾಗಿ ವ್ಯಯವಾಗಬೇಕು. ಇಲ್ಲವೇ ಕ್ಷಿಪ್ರವಾಗಿ ಮತ್ತು ಇಂದ್ರಿಯಾನುಭವಕ್ಕೆ ಬರುವ ಲಾಭದ ರೂಪದಲ್ಲಿ ನನಗೆ ಮರಳಿ ಬರುವಂತಹ ಕಾರ್ಯಗಳಲ್ಲಿ ವ್ಯಯವಾಗಬೇಕು. ನಾನು ಹಣ ಖರ್ಚು ಮಾಡಿದರೆ ಅದರ ಪ್ರತಿಫಲ ಹಣದ ರೂಪದಲ್ಲೇ ನನಗೆ ಹಿಂದಕ್ಕೆ ಸಿಗಬೇಕು ಅಥವಾ ಅದರಿಂದ ನನ್ನ ಸುಖಭೋಗಗಳಲ್ಲಿ ವೃದ್ಧಿಯಾಗಬೇಕು; ನನಗೆ ಗೌರವ ಸಿಗಬೇಕು. ನನಗೆ ಯಾವುದಾದರೂ ಬಿರುದು ಬಾವಲಿಗಳು ಸಿಗಬೇಕು. ಉನ್ನತ ಸ್ಥಾನಮಾನಗಳು ದೊರಕಬೇಕು. ಜನರು ನನ್ನ ಮುಂದೆ ತಲೆಬಾಗಬೇಕು. ಜನರು ನನ್ನ ವಿಷಯವಾಗಿಯೇ ಮಾತಾಡುತ್ತಿರುವಂತಾಗಬೇಕು. ಇವುಗಳ ಪೈಕಿ ಯಾವುದೂ ನನಗೆ ಸಿಗಲಾರದೆಂದಾದರೆ ನಾನು ನನ್ನ ಹಣವನ್ನೇಕೆ ಕೊಡಬೇಕು? ಸಮೀಪದಲ್ಲೇ ತಬ್ಬಲಿಯು ಹಸಿವೆಯಿಂದ ಸಾಯುತ್ತಿರು

ವನಾದರೆ ಸಾಯಲಿ, ಗತಿಗೆಟ್ಟು ಅಲೆದಾಡುತ್ತಿದ್ದರೆ ಇರಲಿ, ನಾನೇಕೆ ಅವನಿಗಾಗಿ ಚಿಂತಿಸಬೇಕು? ಅವನಿಗೆ ಬೇಕಾದ ವ್ಯವಸ್ಥೆಯನ್ನು ಅವನ ಅಪ್ಪನೇ ಮಾಡಿ ಸಾಯಬೇಕಿತ್ತು. ಅವನು ತನ್ನ ಮಕ್ಕಳಿಗೇನಾದರೂ ಮಾಡಿಟ್ಟು ಅಥವಾ ವಿಮೆ ಮಾಡಿಟ್ಟು ಸಾಯಬೇಕಿತ್ತು. ನನ್ನ ನೆರೆಹೊರೆಯಲ್ಲಿ ವಿಧವೆಯರು ಪಾಡು ಪಡುತ್ತಿದ್ದರೆ ನನಗೇನು? ಅವಳ ಗಂಡನು ಅವಳ ಬಗ್ಗೆ ಯೋಚಿಸಬೇಕಿತ್ತು. ಪ್ರಯಾಣಿಕನೊಬ್ಬನು ಕಷ್ಟಕ್ಕೀಡಾಗಿದ್ದಾನೆಂದಾದರೆ ಇರಲಿ, ಆ ಮೂರ್ಖನು ತನ್ನ ಪ್ರಯಾಣಕ್ಕೆ ಸರಿಯಾದ ವ್ಯವಸ್ಥೆ ಮಾಡಿಕೊಳ್ಳದೆ ಮನೆಯಿಂದ ಹೊರಟದ್ದೇ ಏಕೆ? ಯಾರಾದರೂ ಕಷ್ಟ-ಕಾರ್ಪಣ್ಯಗಳಿಗೆ ಬಲಿಯಾಗಿದ್ದಾನೆಂದಾದರೆ ಇರಲಿ. ದೇವನು ನನಗೆ ಕೈ ಕಾಲುಗಳನ್ನು ಕೊಟ್ಟಂತೆಯೇ ಅವನಿಗೂ ಕೊಟ್ಟಿದ್ದಾನೆ. ಅವನ ಅವಶ್ಯಕತೆಗಳನ್ನು ಅವನು ಸ್ವತಃ ಪೂರೈಸಿಕೊಳ್ಳಬೇಕು; ಅವನಿಗೆ ನಾನೇಕೆ ಸಹಾಯ ನೀಡಲಿ? ಒಂದು ವೇಳೆ ನಾನು ಅವನಿಗೆ ಕೊಡುವುದಿದ್ದರೂ ಸಾಲ ರೂಪದಲ್ಲಿ ಕೊಟ್ಟೇನು. ಅಸಲಿನೊಂದಿಗೆ ಬಡ್ಡಿಯನ್ನೂ ವಸೂಲು ಮಾಡುವೆನು. ಏಕೆಂದರೆ ನನ್ನಲ್ಲಿರುವ ಹಣ ವ್ಯರ್ಥವೇನೂ ಅಲ್ಲ. ನಾನು ಅದರಿಂದ ಒಂದು ಮನೆ ಕಟ್ಟುತ್ತಿದ್ದೆ, ವಾಹನ ಕೊಂಡುಕೊಳ್ಳುತ್ತಿದ್ದೆ ಅಥವಾ ಅದನ್ನು ಇತರ ಲಾಭದಾಯಕ ಕಾರ್ಯದಲ್ಲಿ ವಿನಿಯೋಗಿಸುತ್ತಿದ್ದೆ. ಅವನೂ ಇದರಿಂದ ಒಂದಲ್ಲೊಂದು ವಿಧದಿಂದ ಲಾಭವನ್ನೇ ಪಡೆಯುವನಲ್ಲವೇ? ನಾನು ಅವನ ಲಾಭದಿಂದ ನನ್ನ ಪಾಲನ್ನೇಕೆ ವಸೂಲು ಮಾಡಬಾರದು? ಎಂದು ಅವನು ವಾದಿಸುತ್ತಾನೆ.

ಈ ತರದ ಸ್ವಾರ್ಥ ಮನೋವೃತ್ತಿಯನ್ನು ಹೊಂದಿದ ಹಣವಂತನು ಕೊಪ್ಪರಿಗೆ ಸರ್ಪವಾಗಿರುತ್ತಾನೆ. ಅವನು ಖರ್ಚು ಮಾಡುವುದಿದ್ದರೆ ತನ್ನ ಲಾಭಕ್ಕಾಗಿ ಮಾತ್ರ, ಸ್ವಂತ ಲಾಭವೇನೂ ತೋರದಿದ್ದಲ್ಲಿ ಅವನು ತನ್ನ ಕಿಸೆಯಿಂದ ಚಿಕ್ಕಾಸನ್ನೂ ಹೊರ ತೆಗೆಯಲಾರ, ಎಲ್ಲಾದರೂ ಅಪ್ಪಿತಪ್ಪಿ ಬಡವನಿಗೆ ಸಹಾಯ ಮಾಡಿಬಿಟ್ಟರೂ ಅದರ ಬದಲಿಗೆ ಅವನನ್ನು ಸುಲಿದೇ ಬಿಡುವನು. ತಾನು ಕೊಟ್ಟುದಕ್ಕಿಂತ ಹೆಚ್ಚು ವಸೂಲು ಮಾಡುವನು. ನಿರ್ಗತಿಕನಿಗೇನಾದರೂ ಕೊಟ್ಟುಬಿಟ್ಟರೂ ಅವನ ಮೇಲೆ ಸಾವಿರಾರು ಉಪಕಾರಭಾರಗಳನ್ನಿರಿಸಿ ಅವನನ್ನು ಅರೆಜೀವ ಮಾಡಿಬಿಡುವನು. ಅವನಲ್ಲಿ ಸ್ವಾಭಿಮಾನ ಸ್ವಲ್ಪವೂ ಉಳಿಯದ ಹಾಗೆ ಅವನನ್ನು ನಿಂದಿಸುವನು. ಸಾಮೂಹಿಕ ಕಾರ್ಯಗಳಲ್ಲಿ ಭಾಗವಹಿಸುವಾಗ ಅದರಿಂದ ತನಗೆ ಎಷ್ಟು ಲಾಭ ಬರಬಹುದೆಂದು ಮೊದಲೇ ಲೆಕ್ಕ ಹಾಕಿಕೊಳ್ಳುವನು. ಆ ಕಾರ್ಯಗಳಿಂದ ಇವನ ಸ್ವಂತಕ್ಕೇನೂ ಲಾಭ ಸಿಗದೆಂದಾದರೆ ಅದಕ್ಕೆ ಇವನ ಸಹಾಯ ಸಿಗದು.

ಸ್ವಾರ್ಥ ಮನೋವೃತ್ತಿಯ ದುಷ್ಪರಿಣಾಮಗಳು

ಇಂತಹ ಮನೋವೃತ್ತಿಯ ಪರಿಣಾಮಗಳೇನು? ಇದರ ಪರಿಣಾಮವು ಸಾಮುದಾಯಿಕ ಜೀವನಕ್ಕೆ ವಿನಾಶಕರ ಮಾತ್ರವೇ ಅಲ್ಲ, ಅವನು ತನಗೆ ಲಾಭದಾಯಕವೆಂದು ತಿಳಿದುಕೊಂಡಿದ್ದ ಈ ಸಂಕುಚಿತ ಮನೋವೃತ್ತಿಯು ಕೊನೆಗೆ ಅವನಿಗೆ ಹಾನಿಕರವಾಗಿ ಪರಿಣಮಿಸುತ್ತದೆ. ಈ ಮನೋವೃತ್ತಿಯು ಜನರಲ್ಲುಂಟಾದಾಗ ಸಂಪತ್ತು ಕೆಲವೇ ಮಂದಿಯ ಕೈಯಲ್ಲಿ ಒಟ್ಟಾಗುತ್ತದೆ.

ಹೆಚ್ಚಿನವರು ನಿರ್ಗತಿಕರಾಗುತ್ತಾರೆ. ಧನಿಕರು ತಮ್ಮ ಧನಬಲದಿಂದ ಹಣ ಹೀರತೊಡಗಿ ಅದರಿಂದ ಬಡವರ ಜೀವನ ದಿನೇ ದಿನೇ ಸಂಕೀರ್ಣವಾಗುತ್ತಾ ಬರುತ್ತದೆ. ಸಮಾಜದಲ್ಲಿ ಬಡತನ ನೆಲೆಸಿದಾಗ ಅದು ನಾನಾ ತರದ ದೋಷಗಳಲ್ಲಿ ಸಿಕ್ಕಿಬೀಳುತ್ತದೆ. ಜನರ ಆರೋಗ್ಯ ಕೆಡುತ್ತದೆ. ರೋಗ ರುಜಿನಗಳು ಹಬ್ಬುತ್ತವೆ. ಸಮಾಜದಲ್ಲಿ ಗಳಿಕೆಯ ಶಕ್ತಿ ಕುಗ್ಗುತ್ತದೆ. ಅಜ್ಞಾನ ವ್ಯಾಪಾಕವಾಗುತ್ತದೆ. ಚಾರಿತ್ರ್ಯ ಕೆಡುತ್ತ ಬರುತ್ತದೆ. ಜನರು ತಮ್ಮ ಅಗತ್ಯಗಳನ್ನು ಪೂರೈಸ ಲಿಕ್ಕಾಗಿ ನಾನಾ ತರದ ಅಪರಾಧಗಳನ್ನು ಮಾಡುತ್ತಾರೆ: ಕೊನೆಗೆ ಸುಲಿಗೆ ದರೋಡೆಗಳನ್ನೆಸ ಗುವಷ್ಟು ದುರ್ಗತಿಯುಂಟಾಗುತ್ತದೆ. ಸಾಮೂಹಿಕ ಕ್ರಾಂತಿಯುಂಟಾಗುತ್ತದೆ. ಧನಿಕರ ಕೊಲೆ ಯಾಗುತ್ತದೆ. ಅವರ ಮನೆಮಾರುಗಳನ್ನು ದೋಚಲಾಗುತ್ತದೆ. ಕೊನೆಗಂತೂ ಅವರು ತಮ್ಮ ಹೆಸರೂ ಸಹ ಉಳಿಯದ ರೀತಿಯಲ್ಲಿ ಅಳಿದು ಹೋಗುತ್ತಾರೆ.

ವ್ಯಕ್ತಿಯ ಹಿತ ಸಮಾಜದ ಹಿತದಲ್ಲಿ ಅಡಗಿದೆ

ಚೆನ್ನಾಗಿ ಯೋಚಿಸಿದರೆ, ವ್ಯಕ್ತಿಯ ಏಳಿಗೆಯು ಅವನಿರುವ ಸಮಾಜದ ಏಳಿಗೆಯಲ್ಲಡಕ ವಾಗಿದೆಯೆಂಬುದು ನಿಮಗೆ ತಿಳಿಯುವುದು. ನೀವು ನಿಮ್ಮ ಸಂಪತ್ತಿನಿಂದ ನಿಮ್ಮ ಇತರ ಬಂಧು ಗಳಿಗೆ ಸಹಾಯಾರ್ಥವಾಗಿ ಕೊಟ್ಟಾಗ ಆ ಹಣವು ಸುತ್ತಾಡುತ್ತಾ ಹಲವು ವಿಧದ ಲಾಭಗಳೊಂದಿಗೆ ನಿಮ್ಮಲ್ಲಿಗೇ ಮರಳಿ ಬರುತ್ತದೆ. ನೀವು ಸಂಕುಚಿತ ದೃಷ್ಟಿಯೊಂದಿಗೆ ಅದನ್ನು ನಿಮ್ಮಲ್ಲೇ ಕೂಡಿ ಹಾಕಿಟ್ಟುಕೊಂಡರೆ ಅಥವಾ ನಿಮ್ಮ ಸ್ವಂತ ಲಾಭಕ್ಕಾಗಿ ಮಾತ್ರ ಖರ್ಚು ಮಾಡುತ್ತಿದ್ದರೆ ಕ್ರಮೇಣ ಅದು ಕ್ಷಯಿಸುತ್ತಾ ಬರುವುದು. ಉದಾ: ನೀವು ಒಬ್ಬ ಅನಾಥ ಮಗುವನ್ನು ಸಾಕಿದಿರಿ. ವಿದ್ಯೆಬುದ್ಧಿಗಳನ್ನಿತ್ತು ಅವನನ್ನು ಸಮಾಜದ ಓರ್ವ ದುಡಿಯುವ ವ್ಯಕ್ತಿಯನ್ನಾಗಿ ಮಾಡಿದಿರಿ. ಈ ಮೂಲಕ ನೀವು ಸಮಾಜದ ಆರ್ಥಿಕ ಬಲವನ್ನು ವರ್ಧಿಸಿದಂತಾಯಿತು. ನಿಮ್ಮ ಸಮಾಜದ ಆರ್ಥಿಕ ಬಲದಲ್ಲಿ ವೃದ್ಧಿಯುಂಟಾದಾಗ ನೀವೂ ಸಮಾಜದ ಒಂದಂಗವಾಗಿರುವುದರಿಂದ ನಿಮಗೂ ಅದರಿಂದ ಪಾಲು ಸಿಗುವುದು. ಅದನ್ನು ಲೆಕ್ಕ ಹಾಕಿ ಹೇಳಲು ಸಾಧ್ಯವಾಗದಿರ ಬಹುದು. ಆದರೆ ಆ ಅನಾಥ ಮಗುವನ್ನು ನಾನೇಕೆ ಸಾಕಲಿ? ಅವನ ಪೋಷಣೆಗೆ ತಕ್ಕ ವ್ಯವಸ್ಥೆಯನ್ನು ಅವನ ತಂದೆಯೇ ಮಾಡಿಡಬೇಕಿತ್ತೆಂದು ನೀವು ಸಂಕುಚಿತ ಹಾಗೂ ಸ್ವಾರ್ಥ ಮನೋವೃತ್ತಿಯಿಂದ ವರ್ತಿಸಿದರೆ ಅವನು ಅಲೆಮಾರಿಯಾಗಿ ಬೆಳೆಯುತ್ತ ನಿಷ್ಪ್ರಯೋಜಕನಾಗ ಬಹುದು. ಅವನಲ್ಲಿ ಸ್ವತಃ ದುಡಿದು ಸಮಾಜದ ಸಂಪತ್ತನ್ನು ಹೆಚ್ಚಿಸುವ ಅರ್ಹತೆಯುಂಟಾಗ ಲಾರದು. ಅವನು ದರೋಡೆಕೋರನಾಗಿ ಬೆಳೆದು ಒಂದು ದಿನ ನಿಮ್ಮ ಮನೆಗೇ ಕನ್ನ ಹಾಕಲೂಬಹುದು. ಹೀಗೆ ನೀವು ಸಮಾಜದ ಒಬ್ಬ ವ್ಯಕ್ತಿಯನ್ನು ಸುಧಾರಿಸದೆ ಅವನನ್ನು ಹಾಳಾಗಲು ಬಿಟ್ಟಾಗ ಅದರಿಂದ ಅವನ ಸ್ವಂತಕ್ಕೇ ಕೇಡಾಗುವುದು ಮಾತ್ರವಲ್ಲದೆ, ಈ ಮೂಲಕ ನೀವು ಸ್ವತಃ ನಿಮಗೂ ಹಾನಿಯನ್ನುಂಟು ಮಾಡಿಕೊಳ್ಳುವಿರೆಂಬುದು ಇದರಿಂದ ವ್ಯಕ್ತವಾಗುತ್ತದೆ. ಈ ಒಂದು ಉದಾಹರಣೆಯ ಆಧಾರದಲ್ಲಿ ನೀವು ವಿಶಾಲ ದೃಷ್ಟಿಯಿಂದ ಇನ್ನಷ್ಟು ವಿಷಯಗಳನ್ನು ಗಮನಿಸಿದಾಗ- ಸ್ವಾರ್ಥರಹಿತನಾಗಿ ಸಾಮೂಹಿಕ ಅಭಿವೃದ್ಧಿಗಾಗಿ ಖರ್ಚು ಮಾಡುವವನ ಹಣವು

ಬಾಹ್ಯ ದೃಷ್ಟಿಗೆ ಅವನ ಕಿಸೆಯಿಂದ ಖರ್ಚಾದಂತೆ ಕಂಡರೂ ವಾಸ್ತವ ದಲ್ಲಿ ಅದು ಪರೋಕ್ಷವಾಗಿ ವೃದ್ಧಿ ಹೊಂದುತ್ತ ಹೋಗುತ್ತಿರುತ್ತದೆ. ಕೊನೆಗೆ ಅದೇ ಹಣ ಅನೇಕಾನೇಕ ಲಾಭಗಳೊಂದಿಗೆ ಹೊರಟ ಕಿಸೆಗೇ ಮರಳಿ ಬರುತ್ತದೆ. ಸಂಕುಚಿತ ಹಾಗೂ ಸ್ವಾರ್ಥ ಮನೋವೃತ್ತಿಯಿಂದ ಹಣವನ್ನು ತನ್ನಲ್ಲೇ ಹಿಡಿದಿಟ್ಟುಕೊಂಡು ಸಮಾಜದ ಹಿತಕ್ಕಾಗಿ ಖರ್ಚು ಮಾಡದೆ ಇದ್ದಾತನ ಹಣವು ಬಾಹ್ಯ ನೋಟಕ್ಕೆ ಅವನಲ್ಲೇ ಸುರಕ್ಷಿತವಾಗಿ ಇಟ್ಟು ಕೊಂಡಿರುವಂತೆ ಅಥವಾ ಬಡ್ಡಿ ವಸೂಲು ಮಾಡಿ ಅದನ್ನು ಹೆಚ್ಚಿಸುತ್ತಿರುವಂತೆ ಕಂಡರೂ ವಾಸ್ತವದಲ್ಲಿ ಅವನು ತನ್ನ ಮೂರ್ಖತನದಿಂದ ಸಂಪತ್ತನ್ನು ಕ್ಷಯಿಸಿಕೊಂಡು ತನ್ನ ಕೈಯಿಂದಲೇ ತನ್ನ ವಿನಾಶವನ್ನು ಬಗೆಯುತ್ತಾನೆ. ಈ ರಹಸ್ಯವನ್ನೇ ಅಲ್ಲಾಹನು ಕುರ್‌ಆನಿನಲ್ಲಿ ಈ ರೀತಿ ವಿವರಿಸಿರುತ್ತಾನೆ:

يَمْحَقُ اللهُ الرِّبٰوا وَيُرْبِي الصَّدَقٰتِ ۗ

"ಅಲ್ಲಾಹ್ ಬಡ್ಡಿಯ ವ್ಯವಹಾರವನ್ನು ಅಳಿಸಿಬಿಡುತ್ತಾನೆ ಮತ್ತು ದಾನ ಧರ್ಮಗಳನ್ನು ವೃದ್ಧಿಸುತ್ತಾನೆ." (ಅಲ್‌ಬಕರಃ: 276)

وَمَآ اٰتَيْتُمْ مِّنْ رِّبًا لِّيَرْبُوَا۟ فِيْٓ اَمْوَالِ النَّاسِ فَلَا يَرْبُوْا عِنْدَ اللّٰهِ ۚ
وَمَآ اٰتَيْتُمْ مِّنْ زَكٰوةٍ تُرِيْدُوْنَ وَجْهَ اللّٰهِ فَاُولٰٓئِكَ هُمُ الْمُضْعِفُوْنَ ﴿٣٩﴾

"ಜನರ ಸೊತ್ತಿನಲ್ಲಿ ಸೇರಿ ವೃದ್ಧಿಯಾಗಬೇಕೆಂದು ನೀವು ಕೊಡುವ ಬಡ್ಡಿಯು ಅಲ್ಲಾಹನ ಬಳಿ ವೃದ್ಧಿಸುವುದಿಲ್ಲ. ನೀವು ಅಲ್ಲಾಹನ ಸಂಪ್ರೀತಿ ಬಯಸಿ ಕೊಡುವ ಝಕಾತ್- ಇದನ್ನು ನೀಡುವವರೇ ವಾಸ್ತವದಲ್ಲಿ ತಮ್ಮ ಸಂಪತ್ತನ್ನು ವೃದ್ಧಿಸಿಕೊಳ್ಳುತ್ತಾರೆ."

(ಅರ್‍ರೂಮ್: 39)

ಆದರೆ ಈ ರಹಸ್ಯವನ್ನು ತಿಳಿಯಲಿಕ್ಕೂ ಅದರಂತೆ ಕಾರ್ಯಾಚರಣೆ ಮಾಡಲಿಕ್ಕೂ ಮಾನವನ ಸಂಕುಚಿತ ಮನೋಭಾವ ಮತ್ತು ಅಜ್ಞಾನವು ಅನುಮತಿಸುವುದಿಲ್ಲ. ಮಾನವನು ಇಂದ್ರಿಯ ಸುಖಗಳ ದಾಸ. ಅವನು ತನ್ನ ಕಿಸೆಯಲ್ಲಿರುವ ಹಣವನ್ನು ಮಾತ್ರ ನೋಡಬಲ್ಲ ಮತ್ತು ತಿಳಿಯಬಲ್ಲ. ತನ್ನ ಖಾತೆಯಲ್ಲಿದ್ದು ವೃದ್ಧಿಯಾಗುತ್ತಿರುವ ಹಣವನ್ನು ಮಾತ್ರ ಕಾಣಬಲ್ಲ. ಆದರೆ ಅವನ ಕೈಯಿಂದ ಹೊರಟು ಹೋದ ಹಣವು ಎಲ್ಲಿ, ಹೇಗೆ ಮತ್ತು ಎಷ್ಟು ವೃದ್ಧಿಸುತ್ತಾ ಇರುತ್ತದೆ ಮತ್ತು ಅದು ಎಂತಹ ಲಾಭ ಮತ್ತು ಪ್ರಯೋಜನಗಳೊಂದಿಗೆ ಯಾವಾಗ ಹಿಂದಿರುಗುತ್ತದೆ ಎಂಬುದು ಅವನಿಗೆ ಕಾಣುವುದಿಲ್ಲ. ಅವನಂತೂ ತನ್ನ ಕೈಯಿಂದ ಹೋದ ಹಣ ಶಾಶ್ವತವಾಗಿ ಹೋಗಿ ಬಿಟ್ಟಿತೆಂದೇ ತಿಳಿಯುತ್ತಾನೆ.

ಅಜ್ಞಾನದ ಈ ಗೋಡೆಯನ್ನು ತನ್ನ ವಿವೇಕ ಮತ್ತು ಸ್ವಪ್ರಯತ್ನದಿಂದ ಬೀಳಿಸಲು ಮಾನವನಿಗೆ ಈ ತನಕ ಸಾಧ್ಯವಾಗಿಲ್ಲ. ಇದು ಇಡೀ ಪ್ರಪಂಚದ ಅವಸ್ಥೆಯಾಗಿದೆ. ಒಂದು ಕಡೆ ಬಂಡವಾಳಶಾಹಿಗಳ ಜಗತ್ತಿದೆ, ಅಲ್ಲಿನ ಎಲ್ಲ ವ್ಯವಹಾರಗಳೂ ಬಡ್ಡಿಯ ಆಧಾರದಲ್ಲೇ

ನಡೆಯುತ್ತವೆ. ಆದರೆ ಅಲ್ಲಿ ಧಾರಾಳ ಸಂಪತ್ಸಮೃದ್ಧಿಯಿದ್ದರೂ ಕಷ್ಟ-ಕಾರ್ಪಣ್ಯಗಳು ದಿನೇದಿನೇ ಹೆಚ್ಚುತ್ತಲೇ ಹೋಗುತ್ತಿವೆ. ಇನ್ನೊಂದು ಕಡೆ ಹೃದಯದಲ್ಲಿ ಮತ್ಸರಾಗ್ನಿಯು ಭುಗಿಲೇಳುವ ಗುಂಪೊಂದು ತಲೆಯೆತ್ತಿ ಸಂಖ್ಯೆಯಲ್ಲಿ ಹೆಚ್ಚುತ್ತಾ ಹೋಗುತ್ತಿದೆ. ಇದು ಬಂಡವಾಳ ಶಾಹಿಗಳ ತಿಜೋರಿಗಳನ್ನು ಕೊಳ್ಳೆ ಹೊಡೆದು ಮಾನವ ನಾಗರಿಕತೆಯನ್ನೇ ಬುಡಮೇಲು ಮಾಡ ಬಯಸುತ್ತದೆ.

ಸಂಕಷ್ಟಗಳಿಗೆ ಪರಿಹಾರ

ಈ ತೊಡಕನ್ನು ಮಹಾ ವಿವೇಕಪೂರ್ಣನೂ ಮಹಾ ಧೀಮಂತನೂ ಆಗಿರುವ ಅಲ್ಲಾಹನು ತನ್ನ ಗ್ರಂಥದಲ್ಲಿ ಬಗೆಹರಿಸಿರುತ್ತಾನೆ. ಅಲ್ಲಾಹನ ಮೇಲಿನ ವಿಶ್ವಾಸ ಮತ್ತು ಪರಲೋಕದ ಮೇಲಿನ ವಿಶ್ವಾಸವೇ ಈ ಪರಿಹಾರ. ಮಾನವನು ಅಲ್ಲಾಹನ ಮೇಲೆ ವಿಶ್ವಾಸವಿರಿಸಿ ಭೂಮಿ-ಆಕಾಶಗಳ ಅನಂತ ಭಂಡಾರದ ಮಾಲಿಕನು ಅಲ್ಲಾಹನೆಂದೂ ಮಾನವನ ಸರ್ವ ಆಗುಹೋಗುಗಳು ಅಲ್ಲಾಹನ ಅಂಕೆಯಲ್ಲೇ ಇವೆಯೆಂದೂ, ಅವನ ಬಳಿ ಒಂದೊಂದು ಕಣದ ಲೆಕ್ಕವೂ ಇದೆಯೆಂದೂ, ಮಾನವನ ಸರ್ವ ಒಳಿತು ಕೆಡುಕುಗಳ ಅಂತಿಮ ಸತ್ಫಲ - ದುಷ್ಫಲಗಳೆಲ್ಲಾ ಒಂದಿಷ್ಟೂ ಹೆಚ್ಚು ಕಡಿಮೆಯಾಗದಂತೆ ಪರದಲ್ಲಿ ಸಿಕ್ಕಲಿರುವುದೆಂದೂ ಖಾತ್ರಿಯಾಗಿ ತಿಳಿದುಕೊಂಡಾಗ ಅವನು ತನ್ನ ದೃಷ್ಟಿಯ ಮೇಲೆ ಭರವಸೆ ಇಡುವುದನ್ನು ಬಿಟ್ಟು ಅಲ್ಲಾಹನ ಮೇಲೆ ಭರವಸೆಯಿಡುತ್ತಾನೆ. ತನ್ನ ಸಂಪತ್ತನ್ನು ದೇವಮಾರ್ಗದಲ್ಲಿ ವಿನಿಯೋಗಿಸುತ್ತಾನೆ. ಅದರ ಲಾಭ ನಷ್ಟಗಳನ್ನು ಅಲ್ಲಾಹನಿಗೆ ಸಮರ್ಪಿಸುತ್ತಾನೆ. ಈ ವಿಶ್ವಾಸದೊಂದಿಗೆ ಅವನು ಖರ್ಚು ಮಾಡುವುದೆಲ್ಲಾ ಅಲ್ಲಾಹನಿಗೆ ಕೊಟ್ಟ ಹಾಗೆ. ಅದರ ಲೆಕ್ಕಾಚಾರವೂ ಅಲ್ಲಾಹನ ಖಾತೆಯಲ್ಲಿ ದಾಖಲಾಗುವುದು. ಅವನ ಉಪಕಾರಗಳು ಈ ಲೋಕದಲ್ಲಿ ಯಾರ ತಿಳುವಳಿಕೆಗೂ ಬಾರದೆ ಹೋದರೂ ಅಲ್ಲಾಹನು ನಿಶ್ಚಯವಾಗಿಯೂ ಅದನ್ನು ತಿಳಿಯುವನು. ಅದರ ಸತ್ಫಲವನ್ನು ತಾನು ನೀಡುವೆನೆಂದು ಆತನು ವಾಗ್ದಾನ ಮಾಡಿದ ಮೇಲೆ ಅದು ಖಂಡಿತವಾಗಿಯೂ ಸಿಗುವುದು. ಅದು ಪರಲೋಕದಲ್ಲಿ ಸಿಗಬಹುದು ಅಥವಾ ಇಹ-ಪರಗಳೆರಡರಲ್ಲೂ ಸಿಗಬಹುದು.

'ಇನ್‌ಫಾಕ್'ನ ಸಾಮಾನ್ಯ ವಿಧಿಗಳು

ಎರಡು ಬಗೆಯ ಆದೇಶಗಳು

ಮುಸ್ಲಿಮ್ ಬಂಧುಗಳೇ! ಅಲ್ಲಾಹನು ತನ್ನ ಶರೀಅತ್‌ನಲ್ಲಿ (ಧರ್ಮಶಾಸ್ತ್ರದಲ್ಲಿ) ಒಂದು ನಿಯಮವನ್ನಿರಿಸಿಕೊಂಡಿದ್ದಾನೆ. ಅದೇನೆಂದರೆ ಜನರು ತಮ್ಮ ಜೀವನದಲ್ಲಿ ಒಳ್ಳೆಯ ಕೆಲಸ ಗಳನ್ನು ಕೈಗೊಳ್ಳುವಂತೆ ಮಾಡಲಿಕ್ಕಾಗಿ ಮೊತ್ತಮೊದಲು ಸತ್ಕಾರ್ಯಗಳ ಒಂದು ಸಾರ್ವತ್ರಿಕ ಆದೇಶವನ್ನು ನೀಡಲಾಗುತ್ತದೆ. ಅನಂತರ ಆ ಸತ್ಕಾರ್ಯವನ್ನು ವಿಶಿಷ್ಟವಾಗಿ ಆಚರಿಸಲಿಕ್ಕಾಗಿ ಅದರ ವಿಶಿಷ್ಟ ರೂಪಗಳನ್ನು ನಿಶ್ಚಯಿಸಿ ಕೊಡಲಾಗುತ್ತದೆ.

ದೇವಸ್ಮರಣೆಯ ಸಾರ್ವತ್ರಿಕ ಆದೇಶ

ಒಂದು ಉದಾಹರಣೆಯನ್ನು ನೋಡಿರಿ. ದೇವಸ್ಮರಣೆಯು ಒಂದು ಸತ್ಕಾರ್ಯ. ಮಾತ್ರವಲ್ಲ, ಅದು ಎಲ್ಲಾ ಸತ್ಕಾರ್ಯಗಳ ಮೂಲವಾಗಿದೆ. ಆದುದರಿಂದ ಅಲ್ಲಾಹನನ್ನು ಸದಾ ಸ್ಮರಿಸುತ್ತಿರಬೇಕು. ಯಾವ ಸ್ಥಿತಿಯಲ್ಲಿಯೂ ಅವನ ಸ್ಮರಣೆಯಿಂದ ವಿರಹಿತರಾಗಬಾರ ದೆಂಬುದು ಸಾಮಾನ್ಯ ವಿಧಿ -

فَاذْكُرُوا اللّٰهَ قِيٰمًا وَّقُعُوْدًا وَّعَلٰى جُنُوْبِكُمْ

"ನಿಂತಿರುವಾಗಲೂ ಕುಳಿತಿರುವಾಗಲೂ ಮಲಗಿರುವಾಗಲೂ ಎಲ್ಲ ಅವಸ್ಥೆಗಳಲ್ಲೂ ಅಲ್ಲಾಹನನ್ನು ಸ್ಮರಿಸುತ್ತಲಿರಿ."

(ಅನ್ನಿಸಾ: 103)

وَاذْكُرُوا اللّٰهَ كَثِيْرًا لَّعَلَّكُمْ تُفْلِحُوْنَ ۝

"ಅಲ್ಲಾಹನನ್ನು ಅತಿ ಹೆಚ್ಚಾಗಿ ಸ್ಮರಿಸಿರಿ. ನಿಮಗೆ ವಿಜಯ ಪ್ರಾಪ್ತಿಯಾದೀತೆಂದು ನಿರೀಕ್ಷಿಸಬಹುದು."

(ಅಲ್ ಅನ್‌ಫಾಲ್: 45)

إِنَّ فِي خَلْقِ السَّمٰوٰتِ وَالْأَرْضِ وَاخْتِلَافِ الَّيْلِ وَالنَّهَارِ لَاٰيٰتٍ لِّأُولِي الْأَلْبَابِ ﴿١٩٠﴾ الَّذِينَ يَذْكُرُونَ اللّٰهَ قِيٰمًا وَّقُعُودًا وَّعَلٰى جُنُوبِهِمْ وَيَتَفَكَّرُونَ فِي خَلْقِ السَّمٰوٰتِ وَالْأَرْضِ ۚ رَبَّنَا مَا خَلَقْتَ هٰذَا بَاطِلًا ۚ

"ಭೂಮಿ-ಆಕಾಶಗಳ ಸೃಷ್ಟಿಯಲ್ಲಿಯೂ ರಾತ್ರಿ ಹಗಲುಗಳು ಅನುಕ್ರಮವಾಗಿ ಬರುತ್ತಿರುವುದರಲ್ಲಿಯೂ ಬುದ್ಧಿಜೀವಿಗಳಿಗೆ ಸಾಕಷ್ಟು ನಿದರ್ಶನಗಳಿವೆ. ಅವರು ಎದ್ದಾಗಲೂ ಕುಳಿತಾಗಲೂ ಮಲಗಿದಾಗಲೂ ಎಲ್ಲ ಸ್ಥಿತಿಗಳಲ್ಲೂ ಅಲ್ಲಾಹನನ್ನು ಸ್ಮರಿಸುತ್ತಾರೆ ಮತ್ತು ಭೂಮಿ-ಆಕಾಶಗಳ ನಿರ್ಮಾಣದ ಬಗ್ಗೆ ಪರ್ಯಾಲೋಚಿಸುತ್ತಾರೆ. (ಅವರು ಪರವಶರಾಗಿ ಹೀಗೆನ್ನುತ್ತಾರೆ): ಪ್ರಭೂ, ನೀನು ಇವುಗಳನ್ನೆಲ್ಲ ವ್ಯರ್ಥ ಹಾಗೂ ಉದ್ದೇಶರಹಿತವಾಗಿ ಸೃಷ್ಟಿಸಲಿಲ್ಲ." (ಆಲಿ ಇಮ್‌ರಾನ್: 190, 191)

وَلَا تُطِعْ مَنْ أَغْفَلْنَا قَلْبَهُ عَنْ ذِكْرِنَا وَاتَّبَعَ هَوٰىهُ وَكَانَ أَمْرُهُ فُرُطًا ﴿٢٨﴾

"ನಾವು ನಮ್ಮ ಸ್ಮರಣೆಯಿಂದ ಬೋಧಶೂನ್ಯವಾಗಿ ಮಾಡಿರುವಂಥವನನ್ನೂ ತನ್ನ ದೇಹೇಚ್ಛೆಗಳ ಅನುಸರಣೆಯನ್ನು ಸ್ವೀಕರಿಸಿಕೊಂಡಿರುವವನನ್ನೂ ಮಿತಿತಪ್ಪಿ ವರ್ತಿಸುವಂಥವನನ್ನೂ ಅನುಸರಿಸಬೇಡಿರಿ." (ಅಲ್‌ಕಹ್ಫ್: 28)

ಕುರ್‌ಆನಿನ ಇಂತಹ ಅನೇಕ ಆಯತ್(ವಾಕ್ಯ)ಗಳಲ್ಲಿ ಸದಾ ಕಾಲವೂ ಎಲ್ಲಾ ಸ್ಥಿತಿಯಲ್ಲೂ ಅಲ್ಲಾಹನ ಸ್ಮರಣೆಯನ್ನು ಮನದಲ್ಲಿರಿಸಿಕೊಳ್ಳಬೇಕೆಂಬ ಆಜ್ಞೆ ನೀಡಲಾಗಿದೆ. ಏಕೆಂದರೆ ದೇವ ಸ್ಮರಣೆಯು ಮಾತ್ರ ಮಾನವನ ವ್ಯವಹಾರಗಳನ್ನು ಸರಿಯಾಗಿಸಬಲ್ಲುದು ಮತ್ತು ಅವನನ್ನು ನೇರ ಮಾರ್ಗದಲ್ಲಿರಿಸಬಲ್ಲುದು. ಮಾನವನು ದೇವನ ಸ್ಮರಣೆಯಿಂದ ವಿರಹಿತ ನಾದನೆಂದರೆ ವಿಷಯಾಸಕ್ತಿ ಮತ್ತು ಶೈತಾನನ ಮಿಥ್ಯ ಭ್ರಮೆಗಳು ಅವನನ್ನು ಅಧೀನ ಗೊಳಿಸುತ್ತವೆ. ಇದರ ಪರಿಣಾಮವಾಗಿ ಅವನು ಸನ್ಮಾರ್ಗದಿಂದ ವ್ಯತಿಚಲಿಸಿ ತನ್ನ ಜೀವನದ ವ್ಯವಹಾರಗಳಲ್ಲಿ ಮಿತಿಮೀರಿ ವರ್ತಿಸುತ್ತಾನೆ.

ದೇವಸ್ಮರಣೆಯ ವಿಶೇಷ ಆದೇಶ

ಇದು ಸಾಮಾನ್ಯ ವಿಧಿ. ಇನ್ನು ಈ ದೇವ ಸ್ಮರಣೆಗಾಗಿ ಒಂದು ನಿರ್ದಿಷ್ಟ ರೂಪವನ್ನು ನಿಶ್ಚಯಿಸಲಾಗಿದೆ. ಅದುವೇ ನಮಾಝ್. ನಮಾಝಿನಲ್ಲೂ ಐದು ಹೊತ್ತುಗಳಲ್ಲಿ ಕೆಲವು ರಕಅತ್‌ಗಳನ್ನು ಕಡ್ಡಾಯಗೊಳಿಸಲಾಗಿದೆ. ಅದಕ್ಕಾಗಿ ಒಮ್ಮೆಗೆ 8-10 ನಿಮಿಷಗಳಿಗಿಂತ ಹೆಚ್ಚು ಕಾಲ ವ್ಯಯವಾಗುವುದಿಲ್ಲ. ಹೀಗೆ ಬೇರೆಬೇರೆ ವೇಳೆಗಳಲ್ಲಿ ಕೆಲವು ನಿಮಿಷಗಳ ನಮಾಝ್ ಕಡ್ಡಾಯಗೊಳಿಸಿದುದರ ಉದ್ದೇಶವು ಅಷ್ಟು ಹೊತ್ತು ಮಾತ್ರ ದೇವಸ್ಮರಣೆ ಮಾಡಿ ಉಳಿದ

ಸಮಯ ಅವನನ್ನು ಮರೆತುಬಿಡಬೇಕೆಂದಲ್ಲ. ನಿಜವಾಗಿ ಅದರ ಉದ್ದೇಶವು ಕನಿಷ್ಠಪಕ್ಷ ಅಷ್ಟು ಕಾಲ ನೀವು ಸಂಪೂರ್ಣವಾಗಿ ಅವನ ಸ್ಮರಣೆಯಲ್ಲೇ ಇರಬೇಕೆಂದೂ, ಅನಂತರ ನಿಮ್ಮ ಕೆಲಸ ಕಾರ್ಯಗಳನ್ನು ಮಾಡಿಕೊಂಡಿರುತ್ತಾ ಅವನನ್ನು ಸ್ಮರಿಸುತ್ತಿರಬೇಕೆಂದೂ ಆಗಿದೆ.

ದಾನದ ಸಾರ್ವತ್ರಿಕ ಆದೇಶ

ಝುಕಾತಿನ ವಿಷಯದಲ್ಲಿಯೂ ಹೀಗೆಯೇ. ಇಲ್ಲೂ ಒಂದು ಸಾಮಾನ್ಯ ವಿಧಿ ಇದೆ. ಇನ್ನೊಂದು ನಿರ್ದಿಷ್ಟ ವಿಧಿ ಇದೆ. ಒಂದೆಡೆ ಜಿಪುಣತನ ಮತ್ತು ಸಂಕುಚಿತ ಮನೋವೃತ್ತಿಗಳು ಕೆಡುಕು ಮತ್ತು ಪಾಪಗಳ ಮೂಲವಾಗಿರುವುದರಿಂದ ಅವುಗಳಿಂದ ದೂರವಿರಬೇಕೆಂದು ಆಜ್ಞಾಪಿಸಲಾಗಿದೆ. ನಿಮ್ಮ ನೀತಿಯಲ್ಲಿ ಅಲ್ಲಾಹನ ವರ್ಣವಿರಲಿ. ಅಲ್ಲಾಹನಿಗೆ ಯಾರಿಗೂ ಏನನ್ನೂ ನೀಡಬೇಕೆಂಬ ಬಾಧ್ಯತೆಯಾಗಲೀ, ಕರ್ತವ್ಯವಾಗಲಿ ಇಲ್ಲವಾದರೂ; ಜನರು ಹಕ್ಕಿನ ರೂಪದಲ್ಲಿ ಅವನಿಂದ ಏನನ್ನೂ ಕೇಳುವಂತಿಲ್ಲವಾದರೂ ಆತನು ತನ್ನ ಸೃಷ್ಟಿಗೆ ತನ್ನ ಅನಂತ ಅನುಗ್ರಹಗಳ ಪ್ರವಾಹವನ್ನೇ ಹರಿಸುತ್ತಿರುತ್ತಾನೆ. ನೀವು ದೇವ ಮಾರ್ಗದಲ್ಲಿ ಖರ್ಚು ಮಾಡಲು ಸಾಧ್ಯವಿರುವಷ್ಟನ್ನು ಖರ್ಚು ಮಾಡಿರಿ. ನಿಮ್ಮ ಅವಶ್ಯಕತೆಗಳಿಂದ ಸಾಧ್ಯವಿದ್ದಷ್ಟನ್ನು ಉಳಿಸಿಟ್ಟು, ಅದರಿಂದ ಇತರ ಬಡಜೀವಿಗಳ ಅವಶ್ಯಕತೆಗಳನ್ನು ಪೂರ್ತಿಗೊಳಿಸಿರಿ. ಧರ್ಮ ಸೇವಾ ಕಾರ್ಯ ಗಳಿಗಾಗಿಯೂ ಅಲ್ಲಾಹನ ನಾಮವನ್ನು ಉನ್ನತಗೊಳಿಸಲಿಕ್ಕಾಗಿಯೂ ತನು-ಮನ-ಧನಗಳನ್ನು ಸವೆಸಲು ಹಿಂಜರಿಯಬೇಡಿರಿ. ನೀವು ಅಲ್ಲಾಹನನ್ನು ಪ್ರೀತಿಸುತ್ತೀರಾದರೆ ಧನಮೋಹವನ್ನು ಅಲ್ಲಾಹನ ಪ್ರೇಮಕ್ಕಾಗಿ ತ್ಯಾಗ ಮಾಡಿರಿ. ಇವೆಲ್ಲಾ ಸಾಮಾನ್ಯ ವಿಧಿಗಳು.

ದಾನದ ನಿರ್ದಿಷ್ಟ ಆದೇಶ

ಅದೇ ರೀತಿ ನಿಮ್ಮಲ್ಲಿ ಇಂತಿಷ್ಟು ಸಂಪತ್ತು ಇದ್ದರೆ ಅದರಿಂದ ಕನಿಷ್ಠಪಕ್ಷ ಇಷ್ಟನ್ನು ದೇವಮಾರ್ಗದಲ್ಲಿ ಕಡ್ಡಾಯವಾಗಿ ವ್ಯಯಿಸಬೇಕು. ನಿಮ್ಮ ಹೊಲಗಳಿಂದ ಇಷ್ಟು ಉತ್ಪತ್ತಿ ದೊರೆತರೆ ಇಂತಿಷ್ಟು ಪಾಲನ್ನು ಕಡ್ಡಾಯವಾಗಿ ಅಲ್ಲಾಹನಿಗೆ ಅರ್ಪಿಸಬೇಕೆಂಬುದು ನಿರ್ದಿಷ್ಟ ಆದೇಶ. ಕೆಲವು ರಕಅತ್ ನಮಾಝುನ್ನು ಮಾತ್ರ ಕಡ್ಡಾಯಗೊಳಿಸಿರುವ ಉದ್ದೇಶವು ಈ ರಕಅತ್‌ಗಳನ್ನು ನೆರವೇರಿಸುತ್ತಿರುವಾಗ ಮಾತ್ರ ದೇವಸ್ಮರಣೆ ಮಾಡಬೇಕೆಂದೂ, ಉಳಿದ ಸಮಯದಲ್ಲಿ ಮರೆತುಬಿಡಬೇಕೆಂದೂ ಅಲ್ಲವಷ್ಟೆ. ಅದೇ ರೀತಿಯಲ್ಲಿ ಸಂಪತ್ತಿನ ಒಂದು ಕಿಂಚಿತ್ ಭಾಗವನ್ನು ದೇವಮಾರ್ಗದಲ್ಲಿ ಕಡ್ಡಾಯವಾಗಿ ವ್ಯಯಿಸಬೇಕೆಂಬ ಆಜ್ಞೆಯ ಅರ್ಥ ಕೂಡಾ ಇಂತಿಷ್ಟು ಸಂಪತ್ತುಳ್ಳವನು ಮಾತ್ರ ದೇವ ಮಾರ್ಗದಲ್ಲಿ ಖರ್ಚು ಮಾಡಬೇಕೆಂದಾಗಲಿ, ಅಷ್ಟು ಸಂಪತ್ತಿಲ್ಲದವರು ಕೈಕಟ್ಟಿ ಕುಳಿತಿರಬೇಕೆಂದಾಗಲಿ ಅಲ್ಲ. ಧನಿಕರು ತಮ್ಮ ಮೇಲೆ ಕಡ್ಡಾಯವಾಗಿರುವಷ್ಟು ಮಾತ್ರ ಝುಕಾತನ್ನು ದೇವ ಮಾರ್ಗದಲ್ಲಿ ವಿನಿಯೋಗಿಸಬೇಕೆಂದೂ, ಅನಂತರ ಯಾರಾದರೂ ನಿರ್ಗತಿಕನು ಬಂದರೆ ಅವನನ್ನು ಹಿಂದಕ್ಕಟ್ಟಬೇಕೆಂದೂ ಅಥವಾ ಧಾರ್ಮಿಕ ಸೇವಾ ಕಾರ್ಯಗಳಲ್ಲಿ ವ್ಯಯಿಸುವ ಸಂದರ್ಭ ಬಂದಾಗ, ನಾವು ಝುಕಾತ್

ಕೊಟ್ಟಾಗಿದೆ, ಇನ್ನು ನಮ್ಮಿಂದ ಒಂದು ಚಿಕ್ಕಾಸನ್ನೂ ಯಾರೂ ನಿರೀಕ್ಷಿಸಬಾರದೆಂದು ಹೇಳಬೇಕೆಂದೂ ಇದರ ಅರ್ಥವಲ್ಲ. ಝಕಾತನ್ನು ಕಡ್ಡಾಯಗೊಳಿಸಿರುವುದರ ಅರ್ಥ ಖಂಡಿತ ಇದಲ್ಲ. ನಿಜವಾಗಿ ಇದರ ಅರ್ಥ ಕನಿಷ್ಠಪಕ್ಷ ಇಷ್ಟಂಶ ಹಣವನ್ನು ಒಬ್ಬ ಧನಿಕನು ದೇವಮಾರ್ಗದಲ್ಲಿ ಕಡ್ಡಾಯವಾಗಿ ಕೊಡಲೇಬೇಕು ಮತ್ತು ಅದಕ್ಕಿಂತ ಹೆಚ್ಚು ತನಗೆ ಸಾಧ್ಯ ವಿದ್ದಷ್ಟನ್ನು ಖರ್ಚು ಮಾಡುತ್ತಿರಬೇಕು ಎಂದಾಗಿದೆ.

ದಾನದ ಸಾರ್ವತ್ರಿಕ ಆದೇಶದ ಸಂಕ್ಷಿಪ್ತ ವಿವರ

ನಾನೀಗ ಮೊತ್ತಮೊದಲು ಝಕಾತಿನ ಸಾರ್ವತ್ರಿಕ ಆದೇಶದ ಕುರಿತು ಸಂಕ್ಷಿಪ್ತವಾಗಿ ಕೆಲವು ವಿವರಣೆಗಳನ್ನು ಕೊಟ್ಟು ಅನಂತರದ ಉಪನ್ಯಾಸದಲ್ಲಿ ಅದರ ನಿರ್ದಿಷ್ಟ ವಿಧಿಯನ್ನು ವಿವರಿಸುವೆನು.

ಕುರ್‌ಆನಿನ ಒಂದು ದೊಡ್ಡ ವೈಶಿಷ್ಟ್ಯವೇನೆಂದರೆ, ಅದು ಯಾವುದಾದರೊಂದು ಆಜ್ಞೆ ನೀಡುವಾಗ ಆ ಆಜ್ಞೆಯನ್ನು ಯಾಕೆ ನೀಡಲಾಗಿದೆ? ಅದರಿಂದೇನು ಪ್ರಯೋಜನ? ಎಂಬ ವಿಷಯ ಆಜ್ಞಾಪಾಲಕನಿಗೆ ಚೆನ್ನಾಗಿ ಸ್ಪಷ್ಟವಾಗಲಿಕ್ಕಾಗಿ ಆ ಆಜ್ಞೆಯ ಉದ್ದೇಶವನ್ನೂ ಔಚಿತ್ಯವನ್ನೂ ಪ್ರಯೋಜನಗಳನ್ನೂ ವಿವರಿಸುತ್ತದೆ. ಕುರ್‌ಆನನ್ನು ತೆರೆದ ಕೂಡಲೇ ಮೊದಲಾಗಿ ಕಣ್ಣಿಗೆ ಬೀಳುವ ಸೂಕ್ತ ಹೀಗಿದೆ:

ಸತ್ಪಥದಲ್ಲಿ ನಡೆಯಲು ಬೇಕಾದ ಮೂರು ಶರತ್ತುಗಳು

ذٰلِكَ الْكِتٰبُ لَا رَيْبَ ۛ فِيْهِ ۛ هُدًى لِّلْمُتَّقِيْنَ ﴿٢﴾ الَّذِيْنَ يُؤْمِنُوْنَ بِالْغَيْبِ وَيُقِيْمُوْنَ
الصَّلٰوةَ وَمِمَّا رَزَقْنٰهُمْ يُنْفِقُوْنَ ﴿٣﴾

"ಈ ಕುರ್‌ಆನ್ ಅಲ್ಲಾಹನ ಗ್ರಂಥ. ಸಂದೇಹಾತೀತವಿದು. ಇದು ಪರೋಕ್ಷದ ಮೇಲೆ ವಿಶ್ವಾಸವಿಡುವ, ನಮಾಝನ್ನು ಸಂಸ್ಥಾಪಿಸುವ ಮತ್ತು ನಾವು ನೀಡಿದ ಜೀವನಾಧಾರಗಳಿಂದ ಖರ್ಚು ಮಾಡುವ ಮುತ್ತಕೀ(ಧರ್ಮನಿಷ್ಠ)ಗಳಿಗೆ ನೇರ ಮಾರ್ಗವನ್ನು ತೋರಿಸಿಕೊಡುತ್ತದೆ."

(ಅಲ್‌ಬಕರಃ: 2, 3)

ಇಹಜೀವನದಲ್ಲಿ ನೇರ ಮಾರ್ಗದಲ್ಲಿ ನಡೆಯಲು ಮೂರು ಅನಿವಾರ್ಯ ಶರತ್ತುಗಳಿವೆಯೆಂಬ ಮೂಲ ತತ್ವವನ್ನು ಈ ಸೂಕ್ತದಲ್ಲಿ ತಿಳಿಸಲಾಗಿದೆ: "1] ಪರೋಕ್ಷದ ಮೇಲೆ ವಿಶ್ವಾಸ.* 2] ನಮಾಝನ್ನು ಸಂಸ್ಥಾಪಿಸುವುದು. 3] ಅಲ್ಲಾಹನು ನೀಡಿದ ಜೀವನಾಧಾರ ಗಳಿಂದ ಅವನ ಮಾರ್ಗದಲ್ಲಿ ವ್ಯಯಿಸುವುದು."

ಇನ್ನೊಂದು ಕಡೆ ಹೀಗಿದೆ:

---

*ಅಲ್ಲಾಹ್, ಪ್ರವಾದಿ ಮತ್ತು ಪರಲೋಕ ಇತ್ಯಾದಿಗಳ ಮೇಲಿನ ವಿಶ್ವಾಸವೂ ಇವರಲ್ಲೇ ಒಳಗೊಂಡಿವೆ.

لَنْ تَنَالُوا الْبِرَّ حَتّٰى تُنْفِقُوْا مِمَّا تُحِبُّوْنَ

"ನೀವು ನಿಮಗೆ ಬಹಳ ಪ್ರಿಯವಾಗಿರುವ ವಸ್ತುಗಳನ್ನು (ಅಲ್ಲಾಹನ ಮಾರ್ಗದಲ್ಲಿ) ವ್ಯಯಿಸುವ ತನಕವೂ ಪುಣ್ಯದ ಮಟ್ಟವನ್ನು ತಲಪಲಾರಿರಿ." (ಆಲಿ ಇಮ್‌ರಾನ್: 92)

ಅನಂತರ ಹೀಗೆ ಹೇಳಿದೆ:

اَلشَّيْطٰنُ يَعِدُكُمُ الْفَقْرَ وَيَاْمُرُكُمْ بِالْفَحْشَآءِ

"(ನೀವು ಖರ್ಚು ಮಾಡಿದರೆ ನಿರ್ಗತಿಕರಾಗಿ ಬಿಡುವಿರೆಂದು) ಶೈತಾನನು ನಿಮ್ಮನ್ನು ದಾರಿದ್ರ್ಯದ ಬಗ್ಗೆ ಹೆದರಿಸುತ್ತಾನೆ. ಅವನು ನಿಮಗೆ ಲಜ್ಜಾಸ್ಪದವಾದ ಜಿಪುಣತೆಯನ್ನು ಬೋಧಿಸುತ್ತಾನೆ." (ಅಲ್‌ಬಕರ:: 268)

ಬೇರೆ ಒಂದೆಡೆ ಹೀಗೆ ಹೇಳಲಾಗಿದೆ:

وَاَنْفِقُوْا فِيْ سَبِيْلِ اللّٰهِ وَلَا تُلْقُوْا بِاَيْدِيْكُمْ اِلَى التَّهْلُكَةِ

"ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿರಿ. ನಿಮ್ಮ ಕೈಗಳಿಂದಲೇ ನೀವು ನಿಮ್ಮ ವಿನಾಶವನ್ನು ಮಾಡಿಕೊಳ್ಳಬೇಡಿರಿ." (ದೇವ ಮಾರ್ಗದಲ್ಲಿ ಖರ್ಚು ಮಾಡದಿರುವುದೇ ವಿನಾಶ) (ಅಲ್‌ಬಕರ:: 195)

ಕೊನೆಗೆ ಹೀಗೆ ಹೇಳಿದೆ:

وَمَنْ يُّوْقَ شُحَّ نَفْسِهٖ فَاُولٰٓئِكَ هُمُ الْمُفْلِحُوْنَ ۝٩

"ವಾಸ್ತವದಲ್ಲಿ ಯಾರು ತಮ್ಮ ಮನಸ್ಸಿನ ಸಂಕುಚಿತತೆಯಿಂದ ರಕ್ಷಿಸಲ್ಪಟ್ಟರೋ ಅವರೇ ವಿಜಯಿಗಳು." (ಅಲ್‌ಹಶ್ರ್: 9)

ಎರಡು ಬಗೆಯ ಜೀವನ ವಿಧಾನಗಳು

ಈ ಸೂಕ್ತಗಳಿಂದ ತಿಳಿದು ಬರುವಂತೆ ಈ ಲೋಕದಲ್ಲಿ ಮನುಷ್ಯನಿಗೆ ಜೀವನ ನಡೆಸುವ ಎರಡು ಮಾರ್ಗಗಳಿವೆ. ಒಂದನೆಯದು- ಒಳಿತು, ವಿಜಯ ಹಾಗೂ ಕೃತಾರ್ಥತೆಗಳನ್ನು ನೀಡುವ ದೇವಮಾರ್ಗ. ಈ ಮಾರ್ಗದಲ್ಲಿ ನಡೆಯಲು ಪಾಲಿಸಬೇಕಾದ ನಿಯಮವೇನೆಂದರೆ ಮನುಷ್ಯನ ಹೃದಯ ವಿಶಾಲವಾಗಿದ್ದು ಅಲ್ಲಾಹನು ತನಗೆ ಕೊಟ್ಟದ್ದು ಸ್ವಲ್ಪವಿರಲಿ ಅಥವಾ ಹೆಚ್ಚಿರಲಿ ಅದರಿಂದ ಅವನು ತನ್ನ ಸ್ವಂತ ಅವಶ್ಯಕತೆಗಳನ್ನು ಪೂರೈಸಿಕೊಂಡು ತನ್ನ ಸೋದರರಿಗೂ ಸಹಾಯ ಮಾಡಬೇಕು. ಅಲ್ಲಾಹನ ನಾಮೋತ್ತುಂಗಕ್ಕಾಗಿಯೂ ವ್ಯಯಿಸುತ್ತಿರಬೇಕು. ಇನ್ನೊಂದು ಶೈತಾನನ ಮಾರ್ಗ- ಅದರಲ್ಲಿ ಪ್ರತ್ಯಕ್ಷವಾಗಿ ಲಾಭವೇ ತೋರುತ್ತದೆ. ಆದರೆ ವಾಸ್ತವದಲ್ಲಿ ಕೇಡು ಮತ್ತು ವಿನಾಶಗಳ

ಹೊರತು ಇನ್ನೇನೂ ಇಲ್ಲ. ಧನ ಶೇಖರಣೆ, ಹಣಕ್ಕಾಗಿ ಜೀವ ಬಿಡುವುದು, ಜಿಪುಣತೆಯಿಂದಾಗಿ ಖರ್ಚನ್ನೇ ಮಾಡದಿರುವುದು, ಒಂದು ವೇಳೆ ಖರ್ಚು ಮಾಡುವುದಿದ್ದರೂ ತನ್ನ ದೇಹೇಚ್ಛೆಗಳಿಗಾಗಿ ಮಾತ್ರ ಖರ್ಚು ಮಾಡುವುದು, ಇವೇ ಈ ಮಾರ್ಗದ ನಿಯಮಗಳು.

ದೇವ ಮಾರ್ಗದಲ್ಲಿ ವ್ಯಯಿಸುವ ವಿಧಾನಗಳು

ದೇವಮಾರ್ಗದಲ್ಲಿ ನಡೆಯುವವರಿಗೆ ದೇವಮಾರ್ಗದಲ್ಲಿ ವ್ಯಯಿಸುವ ಯಾವ ವಿಧಾನಗಳನ್ನು ತೋರಿಸಿಕೊಡಲಾಗಿದೆಯೆಂಬುದನ್ನು ಈಗ ನಾನು ಕ್ರಮಾನುಗತವಾಗಿ ವಿವರಿಸುವೆನು.

1. ಕೇವಲ ದೇವ ಸಂಪ್ರೀತಿಗಾಗಿ ಕೊಡಬೇಕು

ಖರ್ಚು ಮಾಡುವ ಉದ್ದೇಶವು ದೇವಸಂಪ್ರೀತಿ ಮತ್ತು ದೇವಸಂತುಷ್ಟಿ ಮಾತ್ರವಾಗಿರಬೇಕು. ಇತರರ ಮೇಲೆ ಉಪಕಾರಭಾರವನ್ನಿರಿಸಲಿಕ್ಕಾಗಿ ಅಥವಾ ಲೌಕಿಕ ಕೀರ್ತಿಗಾಗಿ ವ್ಯಯಿಸಬಾರದು.

وَمَا تُنْفِقُوْنَ اِلَّا ابْتِغَآءَ وَجْهِ اللّٰهِ ؕ

"ನೀವು ದಾನಧರ್ಮಗಳಲ್ಲಿ ಖರ್ಚು ಮಾಡುವುದೆಲ್ಲಾ ನಿಮ್ಮ ಸ್ವಂತದ ಒಳಿತಿಗಾಗಿ ಮಾತ್ರ. ಅಲ್ಲಾಹನ ಸಂಪ್ರೀತಿಯನ್ನು ಬಯಸಿಯೇ ನೀವು ಖರ್ಚು ಮಾಡುತ್ತೀರಷ್ಟೆ."
(ಅಲ್‌ಬಕರಃ: 272)

يٰۤاَيُّهَا الَّذِيْنَ اٰمَنُوْا لَا تُبْطِلُوْا صَدَقٰتِكُمْ بِالْمَنِّ وَالْاَذٰى ۙ كَالَّذِىْ يُنْفِقُ
مَالَهٗ رِئَآءَ النَّاسِ وَلَا يُؤْمِنُ بِاللّٰهِ وَالْيَوْمِ الْاٰخِرِ ؕ فَمَثَلُهٗ كَمَثَلِ صَفْوَانٍ
عَلَيْهِ تُرَابٌ فَاَصَابَهٗ وَابِلٌ فَتَرَكَهٗ صَلْدًا ؕ

"ಸತ್ಯವಿಶ್ವಾಸಿಗಳೇ! ತನ್ನ ಸಂಪತ್ತನ್ನು ಆಡಂಬರಕ್ಕಾಗಿ ಖರ್ಚು ಮಾಡುವವನಂತೆ ಹಾಗೂ ಅಲ್ಲಾಹ್ ಮತ್ತು ಆಖಿರತ್‌ನಲ್ಲಿ(ಅಂತಿಮ ದಿವಸ) ವಿಶ್ವಾಸವಿರಿಸದವನಂತೆ ನೀವು ಉಪಕಾರಭಾರವಿರಿಸಿಯೂ ನೋಯಿಸಿಯೂ ನಿಮ್ಮ ದಾನ ಧರ್ಮಗಳನ್ನು ನಿಷ್ಫಲಗೊಳಿಸಬೇಡಿರಿ. ಅಂಥವನ ಖರ್ಚಿನ ಉಪಮೆ - ಮಣ್ಣಿನ ಮೇಲ್ಪದರವಿರುವ ಒಂದು ಬಂಡೆಯಿದ್ದು ಜೋರಾಗಿ ಮಳೆ ಸುರಿದಾಗ ಮಣ್ಣೆಲ್ಲಾ ಕೊಚ್ಚಿಹೋಗಿ ಕೇವಲ ಬರಡು ಬಂಡೆ ಮಾತ್ರ ಉಳಿದಿರುವಂತಿದೆ."
(ಅಲ್‌ಬಕರಃ: 264)

2. ಋಣಭಾರವಿರಿಸಬಾರದು

ಯಾರಿಗಾದರೂ ಹಣ ಸಹಾಯ ಮಾಡಿ, ಉಣಿಸಿ ಅಥವಾ ಬಟ್ಟೆಯುಡಿಸಿ ಋಣಭಾರವನ್ನಿರಿಸಬಾರದು ಮತ್ತು ಅವನ ಮನ ನೋಯಿಸುವಂತಹ ಯಾವುದೇ ಕೆಲಸ ಮಾಡಬಾರದು-

ٱلَّذِينَ يُنفِقُونَ أَمْوَٰلَهُمْ فِى سَبِيلِ ٱللَّهِ ثُمَّ لَا يُتْبِعُونَ مَآ أَنفَقُوا۟ مَنًّا وَلَآ أَذًى لَّهُمْ أَجْرُهُمْ عِندَ رَبِّهِمْ وَلَا خَوْفٌ عَلَيْهِمْ وَلَا هُمْ يَحْزَنُونَ ﴿٢٦٢﴾

قَوْلٌ مَّعْرُوفٌ وَمَغْفِرَةٌ خَيْرٌ مِّن صَدَقَةٍ يَتْبَعُهَآ أَذًى

"ಅಲ್ಲಾಹನ ಮಾರ್ಗದಲ್ಲಿ ತಮ್ಮ ಸಂಪತ್ತನ್ನು ಖರ್ಚು ಮಾಡುವವರ, ಖರ್ಚು ಮಾಡಿದುದನ್ನು ಆಡಿಕೊಳ್ಳದವರ ಮತ್ತು ಪರಪೀಡನೆಗೈಯ್ಯದವರ ಪ್ರತಿಫಲವು ಅವರ ಪ್ರಭುವಿನ ಬಳಿ ಇದೆ. ಅವರಿಗೆ ಯಾವತ್ತೂ ಭಯ ಮತ್ತು ವ್ಯಥೆಯು ಸಂಭವವಿಲ್ಲ. ಒಂದು ಸವಿನುಡಿ ಮತ್ತು ಕ್ಷಮಾಗುಣವು ಮನ ನೋಯಿಸುವ ದಾನಕ್ಕಿಂತ ಉತ್ತಮ."

(ಅಲ್‌ಬಕರ:: 262,263)

3. ಉತ್ತಮವಾದುದನ್ನೇ ಕೊಡಬೇಕು

ದೇವ ಮಾರ್ಗದಲ್ಲಿ ಅತ್ಯುತ್ತಮವಾದುದನ್ನು ಕೊಡಬೇಕು. ಕೆಟ್ಟದ್ದನ್ನು ಆಯ್ದು ಕೊಡಬಾರದು. ದರಿದ್ರನಿಗೆ ಕೊಡಲು ಹರಕು ಬಟ್ಟೆಗಳನ್ನೂ ಬಡವನಿಗೆ ಉಣಿಸಲು ಕೀಳು ತರಗತಿಯ ಆಹಾರವನ್ನೂ ಆಯ್ದಿಡುವವರು ಅಲ್ಲಾಹನಿಂದಲೂ ಇದೇ ತರದ ಕೆಳಮಟ್ಟದ ಪ್ರತಿಫಲವನ್ನು ನಿರೀಕ್ಷಿಸಬೇಕು-

يَٰٓأَيُّهَا ٱلَّذِينَ ءَامَنُوٓا۟ أَنفِقُوا۟ مِن طَيِّبَٰتِ مَا كَسَبْتُمْ وَمِمَّآ أَخْرَجْنَا لَكُم مِّنَ ٱلْأَرْضِ ۖ وَلَا تَيَمَّمُوا۟ ٱلْخَبِيثَ مِنْهُ تُنفِقُونَ

"ಸತ್ಯವಿಶ್ವಾಸಿಗಳೇ! ನೀವು ಸಂಪಾದಿಸಿದ ಸಂಪತ್ತಿನಿಂದ ಮತ್ತು ನಾವು ನಿಮಗಾಗಿ ಭೂಮಿಯಿಂದ ಉತ್ಪಾದಿಸಿದವುಗಳಿಂದ ಉತ್ತಮವಾದವುಗಳನ್ನು ದೇವಮಾರ್ಗದಲ್ಲಿ ಖರ್ಚು ಮಾಡಿರಿ. ಅವನ ಮಾರ್ಗದಲ್ಲಿ ಕೊಡಲು ಅತ್ಯಂತ ಕೆಟ್ಟ ವಸ್ತುವನ್ನು ವಿಂಗಡಿಸಬಾರದು."

(ಅಲ್‌ಬಕರ:: 267)

4. ಆದಷ್ಟು ಗುಪ್ತವಾಗಿ ಕೊಡಬೇಕು

ತೋರಿಕೆ ಮತ್ತು ಆಡಂಬರಗಳು ದಾನದೊಂದಿಗೆ ಬೆರೆತುಹೋಗದಂತಾಗಲು ದಾನವನ್ನು ಸಾಧ್ಯವಾದಷ್ಟು ರಹಸ್ಯವಾಗಿ ಕೊಡಿರಿ. ಬಹಿರಂಗವಾಗಿ ಕೊಡುವುದರಿಂದೇನೂ ಅಡ್ಡಿಯಿಲ್ಲವಾದರೂ ಮುಚ್ಚಿ-ಮರೆಸಿ ಕೊಡುವುದೇ ಅತ್ಯುತ್ತಮ-

إِنْ تُبْدُوا الصَّدَقٰتِ فَنِعِمَّا هِيَ ۚ وَإِنْ تُخْفُوهَا وَتُؤْتُوهَا الْفُقَرَاءَ فَهُوَ خَيْرٌ لَّكُمْ ۚ وَيُكَفِّرُ عَنْكُمْ مِّنْ سَيِّاٰتِكُمْ ۗ

"ನಿಮ್ಮ ದಾನ ಧರ್ಮಗಳನ್ನು ಬಹಿರಂಗವಾಗಿ ಕೊಡುವುದಿದ್ದರೂ ಒಳ್ಳೆಯದೇ. ಆದರೆ ರಹಸ್ಯವಾಗಿ ಬಡಬಗ್ಗರಿಗೆ ಕೊಡುವುದು ಹೆಚ್ಚು ಉತ್ತಮ. ಈ ಕ್ರಮದಿಂದಾಗಿ ನಿಮ್ಮ ಹಲವಾರು ದೋಷಗಳು ಪರಿಹಾರಗೊಳ್ಳುವುವು."

(ಅಲ್‌ಬಕರಃ: 271)

5. ಮೂರ್ಖರಿಗೆ ಅಗತ್ಯಕ್ಕಿಂತ ಹೆಚ್ಚು ಕೊಡಬಾರದು

ಮೂರ್ಖರಿಗೂ ತಿಳಿಗೇಡಿಗಳಿಗೂ ಅವರ ಅವಶ್ಯಕತೆಗಿಂತ ಹೆಚ್ಚಿಗೆ ಕೊಡಬಾರದು. ಹಾಗೆ ಕೊಟ್ಟರೆ ಅವರು ಹಾಳಾಗುವ ಮತ್ತು ದುರಭ್ಯಾಸಗಳಿಗೆ ಬಲಿ ಬೀಳುವ ಸಾಧ್ಯತೆ ಇದೆ. ಅಂಥವರಿಗೆ ಅವರ ಸ್ಥಿತಿಗನುಸಾರ ಕೊಡಬೇಕು. ಹೊಟ್ಟೆಗೆ ಅನ್ನ, ಉಡಲು ಬಟ್ಟೆ ಇವುಗಳು ಪ್ರತಿಯೊಬ್ಬ ನೀಚನಿಗೂ ದುಷ್ಟನಿಗೂ ಸಿಗಲೇಬೇಕೆಂದು ಅಲ್ಲಾಹನ ಇಚ್ಛೆ. ಆದರೆ ಮದ್ಯಪಾನಿಗಳು, ಅಫೀಮು - ಗಾಂಜಾಗಳ ಸೇವನೆ ಮಾಡುವವರು ಮತ್ತು ಜೂಜುಕೋರರಂತಹ ಲಫಂಗರಿಗೆ ಎಂದೆಂದಿಗೂ ಹಣ ಕೊಡಬಾರದು-

وَلَا تُؤْتُوا السُّفَهَاءَ أَمْوَالَكُمُ الَّتِي جَعَلَ اللّٰهُ لَكُمْ قِيٰمًا وَّارْزُقُوهُمْ فِيهَا وَاكْسُوهُمْ

"ಅಲ್ಲಾಹನು ನಿಮಗೆ ಜೀವನ ಸಾಧನವನ್ನಾಗಿ ನಿಶ್ಚಯಿಸಿರುವ ಸಂಪತ್ತನ್ನು ತಿಳಿಗೇಡಿಗಳ ವಶಕ್ಕೆ ಒಪ್ಪಿಸಬೇಡಿರಿ. ಆದರೆ ಅವರಿಗೆ ಉಣ್ಣಲಿಕ್ಕೂ ಉಡಲಿಕ್ಕೂ ಕೊಡಿರಿ ಮತ್ತು ಅವರಿಗೆ ಸದ್ಬೋಧನೆ ಮಾಡಿರಿ."

(ಅನ್ನಿಸಾ: 5)

6. ಸಾಲಗಾರನನ್ನು ಪೀಡಿಸಬಾರದು

ಒಬ್ಬ ಬಡವನಿಗೆ ಆತನ ಅವಶ್ಯಕತೆಗಳಿಗಾಗಿ ಸಾಲ ಕೊಟ್ಟರೆ, ಅದನ್ನು ಮರಳಿ ಕೇಳಿ ಕಾಡಿಸಬಾರದು. ಅವನು ಅದನ್ನು ಸುಲಭವಾಗಿ ಮರುಪಾವತಿ ಮಾಡಲು ಸಾಧ್ಯವಾಗುವಷ್ಟು ಸಮಯಾವಕಾಶ ಕೊಡಬೇಕು. ಅವನು ನಿಜಕ್ಕೂ ಮರುಪಾವತಿ ಮಾಡಲು ಅಸಮರ್ಥನೆಂದು ಕಂಡಾಗ, ನಿಮ್ಮಲ್ಲಿ ಸಾಕಷ್ಟು ಸಂಪತ್ತಿದ್ದು, ನೀವು ಸುಲಭವಾಗಿ ಅದನ್ನು ಕ್ಷಮಿಸಬಲ್ಲಿರೆಂದಾದರೆ ಕ್ಷಮಿಸಿ ಬಿಡುವುದೇ ಉತ್ತಮ-

وَإِنْ كَانَ ذُو عُسْرَةٍ فَنَظِرَةٌ إِلَىٰ مَيْسَرَةٍ ۚ وَأَنْ تَصَدَّقُوا خَيْرٌ لَكُمْ ۖ إِنْ كُنْتُمْ تَعْلَمُونَ ﴿٢٨٠﴾

"ಸಾಲ ಮಾಡಿದವನು ಬಡವನಾದರೆ ಅವನು ಸ್ಥಿತಿವಂತನಾಗುವವರೆಗೆ ಅವನಿಗೆ ಕಾಲಾವಕಾಶ ನೀಡಿರಿ. ಇನ್ನು ಅದನ್ನು ದಾನ ರೂಪದಲ್ಲಿ ಬಿಡುವುದರ ಪ್ರಯೋಜನವನ್ನು ನೀವು ಅರಿತಿರುವಿರಾದರೆ ದಾನ ಮಾಡಿ ಬಿಡುವುದೇ ಅತ್ಯುತ್ತಮ."

(ಅಲ್‌ಬಕರಃ: 280)

7. ದಾನದಲ್ಲಿ ಸಮತೋಲನ

ದಾನ ಧರ್ಮ ಮಾಡುವಾಗಲೂ ಹದ ಮೀರಬಾರದು. ಮನುಷ್ಯನು ತನ್ನ ಹಾಗೂ ತನ್ನ ಮಕ್ಕಳು ಮರಿಗಳ ಹೊಟ್ಟೆ ಕಟ್ಟಿ ಇದ್ದುದನ್ನೆಲ್ಲಾ ದಾನ ಮಾಡಬೇಕೆಂದು ಅಲ್ಲಾಹನ ಉದ್ದೇಶವಲ್ಲ. ಸರಳ ಜೀವನ ನಡೆಸಲು ತನಗೆ ಬೇಕಾದಷ್ಟನ್ನು ತನಗಾಗಿಯೂ ತನ್ನ ಮಕ್ಕಳು ಮರಿಗಳಿ ಗಾಗಿಯೂ ಪ್ರತಿಯೊಬ್ಬನೂ ಖರ್ಚು ಮಾಡಬೇಕೆಂದೂ, ಉಳಿದುದನ್ನು ದೇವಮಾರ್ಗದಲ್ಲಿ ಕೊಡಬೇಕೆಂದೂ ಅವನು ಬಯಸುತ್ತಾನೆ-

وَيَسْأَلُونَكَ مَاذَا يُنْفِقُونَ ۖ قُلِ الْعَفْوَ ۗ

"ನಾವು ದೇವ ಮಾರ್ಗದಲ್ಲಿ ಏನನ್ನು ಖರ್ಚು ಮಾಡಬೇಕೆಂದು ಕೇಳುತ್ತಾರೆ. "ನಿಮ್ಮ ಅವಶ್ಯಕತೆಗಿಂತ ಮಿಕ್ಕಿರುವುದನ್ನು" ಎಂದು ಹೇಳಿರಿ."

(ಅಲ್‌ಬಕರಃ: 219)

وَالَّذِينَ إِذَا أَنْفَقُوا لَمْ يُسْرِفُوا وَلَمْ يَقْتُرُوا وَكَانَ بَيْنَ ذَٰلِكَ قَوَامًا ﴿٦٧﴾

"ಅವರು ಖರ್ಚು ಮಾಡುವಾಗ ದುಂದುವೆಚ್ಚವನ್ನೂ ಮಾಡುವುದಿಲ್ಲ. ಜಿಪುಣತೆಯನ್ನೂ ತೋರುವುದಿಲ್ಲ. ಅವರ ಖರ್ಚು ಇವೆರಡರ ನಡುವೆ ಸಮತೂಕದಲ್ಲಿ ನಿಂತಿರುತ್ತದೆ."

(ಅಲ್ ಫುರ್ಕಾನ್: 67)

وَلَا تَجْعَلْ يَدَكَ مَغْلُولَةً إِلَىٰ عُنُقِكَ وَلَا تَبْسُطْهَا كُلَّ الْبَسْطِ
فَتَقْعُدَ مَلُومًا مَحْسُورًا ﴿٢٩﴾

"ನಿಮ್ಮ ಕೈಯನ್ನು ಕೊರಳಿಗೆ ಕಟ್ಟಿಕೊಂಡಿರಲೂ ಬೇಡಿರಿ ಮತ್ತು ನಿಂದ್ಯರೂ ನಿಸ್ಸಹಾಯಕರೂ ಆಗಿ ಬಿಡುವಂತೆ ಅದನ್ನು ಸಂಪೂರ್ಣವಾಗಿ ತೆರೆದಿಟ್ಟು ಬಿಡಲೂ ಬೇಡಿರಿ."

(ಬನೀ ಇಸ್ರಾಈಲ್: 29)

ದಾನಕ್ಕೆ ಅರ್ಹರು ಯಾರು?

ಕೊನೆಯದಾಗಿ ಅಲ್ಲಾಹನು ದಾನ ಪಡೆಯಲರ್ಹರಾದವರ ಒಂದು ಸಂಪೂರ್ಣ ಯಾದಿಯನ್ನೇ ಕೊಟ್ಟಿರುವುದನ್ನು ಗಮನಿಸಿರಿ. ಅದನ್ನು ಕಂಡಾಗ ನಿಮ್ಮಿಂದ ಸಹಾಯ ಪಡೆಯಲು ಅರ್ಹರಾದವರು ಯಾರು? ಮತ್ತು ಅಲ್ಲಾಹ್ ನಿಮ್ಮ ಸಂಪಾದನೆಯಲ್ಲಿ ಯಾರದೆಲ್ಲ ಹಕ್ಕಿಟ್ಟಿರುವನೆಂದು ತಿಳಿದು ಬರುವುದು.

وَاٰتِ ذَا الْقُرْبٰى حَقَّهٗ وَالْمِسْكِيْنَ وَابْنَ السَّبِيْلِ

"ಸಂಬಂಧಿಕನಿಗೆ ಅವನ ಹಕ್ಕನ್ನೂ ದರಿದ್ರನಿಗೂ ಪ್ರಯಾಣಿಕನಿಗೂ ಅವನವನ ಹಕ್ಕನ್ನೂ ಕೊಡಿರಿ."

(ಬನೀ ಇಸ್ರಾಈಲ್: 26)

وَاٰتَى الْمَالَ عَلٰى حُبِّهٖ ذَوِى الْقُرْبٰى وَالْيَتٰمٰى وَالْمَسٰكِيْنَ وَابْنَ السَّبِيْلِ ۙ
وَالسَّآئِلِيْنَ وَفِى الرِّقَابِ ۚ

"ಅಲ್ಲಾಹನು ಅವತೀರ್ಣಗೊಳಿಸಿದ ಗ್ರಂಥವನ್ನೂ ಅವನ ಸಂದೇಶವಾಹಕರನ್ನೂ ಹೃತ್ಪೂರ್ವಕ ಒಪ್ಪಿಕೊಳ್ಳುವುದೂ ಅಲ್ಲಾಹನ ಸಂಪ್ರೀತಿಗಾಗಿ ತನ್ನ ಮನಮೆಚ್ಚುಗೆಯ ಸಂಪತ್ತನ್ನು ಬಂಧುಗಳಿಗೂ ಅನಾಥರಿಗೂ ನಿರ್ಗತಿಕರಿಗೂ ಪ್ರಯಾಣಿಕರಿಗೂ ಸಹಾಯಾರ್ಥಿಗಳಿಗೂ ದಾಸ್ಯವಿಮೋಚನೆಗಾಗಿಯೂ ವ್ಯಯಿಸುವುದೂ."

(ಅಲ್‌ಬಕರಃ: 177)

وَّبِالْوَالِدَيْنِ اِحْسَانًا وَّبِذِى الْقُرْبٰى وَالْيَتٰمٰى وَالْمَسٰكِيْنِ وَالْجَارِ ذِى
الْقُرْبٰى وَالْجَارِ الْجُنُبِ وَالصَّاحِبِ بِالْجَنْۢبِ وَابْنِ السَّبِيْلِ ۙ وَمَا مَلَكَتْ اَيْمَانُكُمْ ۗ

"ಮಾತಾಪಿತರೊಂದಿಗೆ ಸೌಜನ್ಯದಿಂದ ವರ್ತಿಸಿರಿ. ಸಂಬಂಧಿಕರೊಂದಿಗೂ ಅನಾಥರೊಂದಿಗೂ ನಿರ್ಗತಿಕರೊಂದಿಗೂ ಆಪ್ತರಾದ ನೆರೆಹೊರೆಯವರೊಂದಿಗೂ ಅಪರಿಚಿತ ನೆರೆಹೊರೆಯವರೊಂದಿಗೂ ಅನುಚರರೊಂದಿಗೂ ಪ್ರಯಾಣಿಕರೊಂದಿಗೂ ನಿಮ್ಮ ಅಧೀನದಲ್ಲಿರುವ ದಾಸ ದಾಸಿಯರೊಂದಿಗೂ ಉತ್ತಮ ರೀತಿಯಿಂದ ವರ್ತಿಸಿರಿ."

(ಅನ್ನಿಸಾ: 36)

وَيُطْعِمُونَ الطَّعَامَ عَلَىٰ حُبِّهِ مِسْكِينًا وَيَتِيمًا وَأَسِيرًا ﴿٨﴾ إِنَّمَا
نُطْعِمُكُمْ لِوَجْهِ اللَّهِ لَا نُرِيدُ مِنكُمْ جَزَاءً وَلَا شُكُورًا ﴿٩﴾ إِنَّا نَخَافُ
مِن رَّبِّنَا يَوْمًا عَبُوسًا قَمْطَرِيرًا ﴿١٠﴾

"(ಸಜ್ಜನರು) ಅಲ್ಲಾಹನ ಮೇಲಿನ ಪ್ರೇಮದಿಂದ ದರಿದ್ರರಿಗೂ ಅನಾಥರಿಗೂ ಸೆರೆಯಾಳುಗಳಿಗೂ ಊಟ ಕೊಡುತ್ತಾರೆ. (ಮತ್ತು ಅವರೊಡನೆ ಹೇಳುತ್ತಾರೆ): ನಾವು ನಿಮಗೆ ಕೇವಲ ಅಲ್ಲಾಹನಿಗಾಗಿ ಉಣಿಸುತ್ತಿದ್ದೇವೆ. ನಾವು ನಿಮ್ಮಿಂದ ಯಾವುದೇ ಪ್ರತಿಫಲವನ್ನಾಗಲಿ, ಕೃತಜ್ಞತೆಯನ್ನಾಗಲಿ ಬಯಸುವುದಿಲ್ಲ. ನಮಗಂತು, ನಮ್ಮ ಪ್ರಭುವಿನಿಂದ ಆ ತೀವ್ರ ಕಾಠಿಣ್ಯದ ಅತ್ಯಂತ ಸುದೀರ್ಘ ದಿನದ ಭಯವಿದೆ." (ಅದ್ದಹ್ರ್: 8-10)

وَفِي أَمْوَالِهِمْ حَقٌّ لِّلسَّائِلِ وَالْمَحْرُومِ ﴿١٩﴾

"ಅವರ ಸೊತ್ತುಗಳಲ್ಲಿ ಬೇಡುವವರಿಗೂ ವಂಚಿತರಿಗೂ ಹಕ್ಕಿದೆ." (ಅದ್ದಾರಿಯಾತ್: 19)

لِلْفُقَرَاءِ الَّذِينَ أُحْصِرُوا فِي سَبِيلِ اللَّهِ لَا يَسْتَطِيعُونَ ضَرْبًا فِي الْأَرْضِ
يَحْسَبُهُمُ الْجَاهِلُ أَغْنِيَاءَ مِنَ التَّعَفُّفِ تَعْرِفُهُم بِسِيمَاهُمْ لَا يَسْأَلُونَ النَّاسَ
إِلْحَافًا ۗ وَمَا تُنفِقُوا مِنْ خَيْرٍ فَإِنَّ اللَّهَ بِهِ عَلِيمٌ ﴿٢٧٣﴾

"ಅಲ್ಲಾಹನ ಮಾರ್ಗದಲ್ಲಿ ಕಾರ್ಯವೆಸಗುವ ಭರದಲ್ಲಿ ತಮ್ಮ ಸ್ವಂತ ಜೀವನೋಪಾಯಕ್ಕಾಗಿ ಭೂಮಿಯಲ್ಲಿ ಶ್ರಮ ಪಡಲು ಸಾಧ್ಯವಾಗದಿರುವ ಬಡಜನರು ಮುಖ್ಯವಾಗಿ ಸಹಾಯಕ್ಕೆ ಅರ್ಹರಾಗಿದ್ದಾರೆ. ಅರಿವಿಲ್ಲದವನು ಅವರ ಸ್ವಾಭಿಮಾನವನ್ನು ಕಂಡು ಅವರು ಸ್ಥಿತಿವಂತ ರಾಗಿದ್ದಾರೆಂದೇ ಊಹಿಸುತ್ತಾರೆ. ನೀವು ಅವರ ಮುಖಭಾವಗಳಿಂದ ಅವರ ಆಂತರಿಕ ಸ್ಥಿತಿಯನ್ನು ತಿಳಿದುಕೊಳ್ಳಬಲ್ಲಿರಿ. ಆದರೆ, ಅವರು ಜನರ ಬೆಂಬತ್ತಿ ಬೇಡುವವರಲ್ಲ. ಅವರ ಸಹಾಯಾರ್ಥ ವಾಗಿ ನೀವು ಖರ್ಚು ಮಾಡುವ ಸಂಪತ್ತು ಅಲ್ಲಾಹನಿಂದ ಮರೆಯಾಗಿರದು."

(ಅಲ್‌ಬಕರ:: 273)

ಝಕಾತಿನ ನಿರ್ದಿಷ್ಟ ವಿಧಿಗಳು

ಮುಸ್ಲಿಮ್ ಬಂಧುಗಳೇ!

ಅಲ್ಲಾಹನ ಮಾರ್ಗದಲ್ಲಿ ವ್ಯಯಿಸುವ ಸಾಮಾನ್ಯ ವಿಧಿಗಳನ್ನು ಹಿಂದಿನ ಖುತ್‌ಬಾದಲ್ಲಿ ವಿವರಿಸಿರುತ್ತೇನೆ. ಈಗ ಝಕಾತಿಗೆ ಸಂಬಂಧಿಸಿದ ಇನ್ನೊಂದು ಭಾಗದ(ಕಡ್ಡಾಯಗೊಳಿಸಲಾಗಿರುವ ವಿಧಿ) ವಿವರಗಳನ್ನು ತಿಳಿಸುವೆನು.

ಮೂರು ಆದೇಶಗಳು

ಝಕಾತಿನ ಕುರಿತು ಅಲ್ಲಾಹನು ಪವಿತ್ರ ಕುರ್‌ಆನಿನ ಮೂರು ಕಡೆಗಳಲ್ಲಿ ಪ್ರತ್ಯ ಪ್ರತ್ಯೇಕ ವಿಧಿಗಳನ್ನು ವಿವರಿಸಿರುತ್ತಾನೆ -

يَٰٓأَيُّهَا ٱلَّذِينَ ءَامَنُوٓا۟ أَنفِقُوا۟ مِن طَيِّبَٰتِ مَا كَسَبْتُمْ وَمِمَّآ أَخْرَجْنَا

لَكُم مِّنَ ٱلْأَرْضِ

1. "ಓ ಸತ್ಯ ವಿಶ್ವಾಸಿಗಳೇ, ನೀವು ಸಂಪಾದಿಸಿದ ಸಂಪತ್ತಿನಿಂದ ಮತ್ತು ನಾವು ನಿಮಗಾಗಿ ಭೂಮಿಯಿಂದ ಉತ್ಪಾದಿಸಿದವುಗಳಿಂದ ಉತ್ತಮವಾದವುಗಳನ್ನು ದೇವಮಾರ್ಗದಲ್ಲಿ ಖರ್ಚು ಮಾಡಿರಿ." (ಅಲ್‌ಬಕರಃ: 267)

2. ಸೂರಃ ಅಲ್ ಅನ್‌ಆಮ್‌ನಲ್ಲಿ, ಅಲ್ಲಾಹನು ಭೂಮಿಯಿಂದ ತೋಟಗಳನ್ನೂ ಹೊಲಗಳನ್ನೂ ಉಂಟು ಮಾಡಿರುವನೆಂಬ ಅನುಗ್ರಹವನ್ನು ನೆನಪಿಸಿದ ಬಳಿಕ ಹೀಗೆ ಹೇಳಲಾಗಿದೆ:

كُلُوا۟ مِن ثَمَرِهِۦٓ إِذَآ أَثْمَرَ وَءَاتُوا۟ حَقَّهُۥ يَوْمَ حَصَادِهِۦ ۖ

"ಅವುಗಳು ಫಲಿಸಿದಾಗ ಫಲಗಳನ್ನು ತಿನ್ನಿರಿ. ಅವುಗಳ ಬೆಳೆಯನ್ನು ಕೊಯ್ಯಾಗ ಅಲ್ಲಾಹನ ಹಕ್ಕನ್ನು ಸಂದಾಯ ಮಾಡಿರಿ." (ಸೂಕ್ತ: 141)

ಈ ಎರಡು ಸೂಕ್ತಗಳು ಭೂಮಿಯ ಬೆಳೆಗಳಿಗೆ ಸಂಬಂಧಿಸಿರುತ್ತವೆ. ಹನಫೀ ಕರ್ಮ ಶಾಸ್ತ್ರಜ್ಞರ ಅಭಿಪ್ರಾಯದಂತೆ ತಾನಾಗಿ ಬೆಳೆಯುವ ಕಟ್ಟಿಗೆ, ಹುಲ್ಲು, ಬಿದಿರುಗಳ ಹೊರತು

ಇತರ ಧಾನ್ಯ, ತರಕಾರಿ, ಹಣ್ಣುಹಂಪಲುಗಳ ಸಾಲಿಗೆ ಸೇರುವ ಎಲ್ಲ ವಸ್ತುಗಳಿಂದಲೂ ಅಲ್ಲಾಹನ ಹಕ್ಕನ್ನು ಪ್ರತ್ಯೇಕಿಸಬೇಕು. ಮಳೆನೀರಿನ ಸಹಾಯದಿಂದ ಬೆಳೆಸುವ ಬೆಳೆಗಳಿಂದ ಹತ್ತರ ಲ್ಲೊಂದಂಶವನ್ನೂ ಮಾನವನು ನೀರಾವರಿಯಿಂದ ಬೆಳೆಸುವ ಬೆಳೆಗಳಿಂದ ಇಪ್ಪತ್ತರಲ್ಲೊಂದಂಶ ವನ್ನೂ ಬೆಳೆಯ ಕೊಯ್ಲಾದ ಕೂಡಲೇ ಅಲ್ಲಾಹನ ಹಕ್ಕಿಗಾಗಿ ವಿಂಗಡಿಸಬೇಕಾದುದು ಕಡ್ಡಾಯವೆಂದು ಹದೀಸಿನಲ್ಲಿದೆ.

وَالَّذِينَ يَكْنِزُونَ الذَّهَبَ وَالْفِضَّةَ وَلَا يُنفِقُونَهَا فِي سَبِيلِ اللَّهِ فَبَشِّرْهُم بِعَذَابٍ أَلِيمٍ ﴿٣٤﴾ يَوْمَ يُحْمَىٰ عَلَيْهَا فِي نَارِ جَهَنَّمَ فَتُكْوَىٰ بِهَا جِبَاهُهُمْ وَجُنُوبُهُمْ وَظُهُورُهُمْ ۖ هَٰذَا مَا كَنَزْتُمْ لِأَنفُسِكُمْ فَذُوقُوا مَا كُنتُمْ تَكْنِزُونَ ﴿٣٥﴾

3. "ಚಿನ್ನವನ್ನೂ ಬೆಳ್ಳಿಯನ್ನೂ ಸಂಗ್ರಹಿಸಿಟ್ಟು ಅವುಗಳನ್ನು ದೇವಮಾರ್ಗದಲ್ಲಿ ಖರ್ಚು ಮಾಡದವರಿಗೆ ವೇದನಾಯುಕ್ತ ಯಾತನೆಯ ಸುವಾರ್ತೆ ನೀಡಿರಿ. ಈ ಚಿನ್ನ - ಬೆಳ್ಳಿಗಳ ಮೇಲೆ ನರಕಾಗ್ನಿಯನ್ನು ಉರಿಸಲಾಗುವುದು. ತರುವಾಯ ಅದರಿಂದಲೇ ಅವರ ಹಣೆಗಳಿಗೂ ಪಾರ್ಶ್ವಗಳಿಗೂ ಬೆನ್ನುಗಳಿಗೂ ಬರೆಹಾಕಲಾಗುವುದು - ನೀವು ನಿಮಗಾಗಿ ಸಂಗ್ರಹಿಸಿಟ್ಟಿದ್ದ ಸಂಪತ್ತು ಇದುವೇ, ಈಗ ನೀವು ಕೂಡಿ ಹಾಕಿದ್ದ ಸಂಪತ್ತನ್ನು ಸವಿಯಿರಿ." (ಎನ್ನಲಾಗುವುದು) (ಅತ್ತೌಬ:: 34, 35)

إِنَّمَا الصَّدَقَاتُ لِلْفُقَرَاءِ وَالْمَسَاكِينِ وَالْعَامِلِينَ عَلَيْهَا وَالْمُؤَلَّفَةِ قُلُوبُهُمْ وَفِي الرِّقَابِ وَالْغَارِمِينَ وَفِي سَبِيلِ اللَّهِ وَابْنِ السَّبِيلِ ۖ فَرِيضَةً مِّنَ اللَّهِ ۗ وَاللَّهُ عَلِيمٌ حَكِيمٌ ﴿٦٠﴾

"ವಾಸ್ತವದಲ್ಲಿ ಈ 'ಕಡ್ಡಾಯದಾನ'ಗಳು ಫಕೀರ(ಬಡವ)ರಿಗೆ, ಮಿಸ್ಕೀನ್(ದರಿದ್ರ)ರಿಗೆ, 'ಕಡ್ಡಾಯದಾನ'ಗಳ ಕಾರ್ಯಗಳಲ್ಲಿ ನೇಮಕಗೊಂಡವರಿಗೆ, ಮನವೊಲಿಸಬೇಕಾದ ಅಗತ್ಯವಿರುವವರಿಗೆ, ಕೊರಳು ಬಿಡಿಸುವುದಕ್ಕೆ, ಸಾಲಗಾರರಿಗೆ ನೆರವು ನೀಡಲಿಕ್ಕೆ ಅಲ್ಲಾಹನ ಮಾರ್ಗದಲ್ಲಿ ಮತ್ತು ಪ್ರಯಾಣಿಕರ ಆದರಕ್ಕಾಗಿ ಖರ್ಚು ಮಾಡಲಿಕ್ಕಾಗಿರುತ್ತವೆ. ಅಲ್ಲಾಹನ ಕಡೆಯ ಒಂದು ಕಡ್ಡಾಯವಿದು. ಅಲ್ಲಾಹನು ಸರ್ವಜ್ಞನೂ ಮಹಾ ಧೀಮಂತನೂ ಆಗಿರುತ್ತಾನೆ." (ಅತ್ತೌಬ:: 60)

ಆ ಬಳಿಕ ಹೀಗೆನ್ನಲಾಗಿದೆ:

خُذْ مِنْ أَمْوَالِهِمْ صَدَقَةً تُطَهِّرُهُمْ وَتُزَكِّيهِمْ بِهَا

"ಓ ಪೈಗಂಬರರೇ, ನೀವು ಅವರ ಸಂಪತ್ತುಗಳಿಂದ 'ದಾನ ಧರ್ಮ'ಗಳನ್ನು ಪಡೆದು ಅವರನ್ನು ಶುದ್ಧೀಕರಿಸಿರಿ." (ಅತ್ತೌಬಃ: 103)

ಸಂಪತ್ತನ್ನು ಸಂಗ್ರಹಿಸಿ, ಅದನ್ನು ವೃದ್ಧಿಸಿ, ಅದರಿಂದ ದೇವಮಾರ್ಗದಲ್ಲಿ ಖರ್ಚು ಮಾಡದಿರುವುದರಿಂದ ಅದು ಮಲಿನವಾಗುತ್ತದೆಂದೂ, ಅದರಿಂದ ಅಲ್ಲಾಹನ ಹಕ್ಕನ್ನು ತೆಗೆದು ಅವನ ದಾಸರಿಗೆ ಕೊಡುವುದರ ಮೂಲಕ ಮಾತ್ರ ಅದನ್ನು ಶುದ್ಧಗೊಳಿಸಬಹುದೆಂದೂ ಮೇಲಿನ ಮೂರು ಸೂಕ್ತಗಳಿಂದ ತಿಳಿಯಿತು. ಹದೀಸಿನಲ್ಲಿ ತಿಳಿಸಲಾಗಿರುವಂತೆ ಚಿನ್ನ ಬೆಳ್ಳಿಗಳನ್ನು ಸಂಗ್ರಹಿಸುವವರ ಕುರಿತು ಅಲ್ಲಾಹನ ಯಾತನೆಯ ಎಚ್ಚರಿಕೆ ಅವತೀರ್ಣಗೊಂಡಾಗ ಮುಸ್ಲಿಮರು ಬಹಳ ಚಿಂತೆಗೊಳಗಾದರು. ಏಕೆಂದರೆ ಒಂದು ದಿರ್‌ಹಮ್ (ಆ ಕಾಲದ ಬೆಳ್ಳಿಯ ನಾಣ್ಯ) ಕೂಡಾ ತಮ್ಮ ವಶದಲ್ಲಿಟ್ಟುಕೊಳ್ಳದೆ ಎಲ್ಲವನ್ನೂ ಖರ್ಚು ಮಾಡಬೇಕೆಂದು ಅದರ ಅರ್ಥವಾಗು ತ್ತಿತ್ತು. ಕೊನೆಗೆ ಹ. ಉಮರ್‌ರವರು(ರ) ಪ್ರವಾದಿಯವರ(ಸ) ಬಳಿ ಹೋಗಿ ಸಮುದಾಯದ ವ್ಯಾಕುಲವನ್ನು ತಿಳಿಸಿದರು. ಆಗ ಅವರು(ಸ), "ಝಕಾತ್ ಕೊಟ್ಟ ಬಳಿಕ ಉಳಿಯುವ ಸಂಪತ್ತು ನಿಮಗೆ ಶುದ್ಧಗೊಳ್ಳುವುದಕ್ಕಾಗಿಯೇ ಅದನ್ನು ಕಡ್ಡಾಯಗೊಳಿಸಲಾಗಿದೆ" ಎಂದರು. ಇದೇ ರೀತಿಯ ಐತಿಹ್ಯವೊಂದು ಅಬೂಸಈದ್ ಖುದ್‌ರೀಯವರಿಂದ(ರ) ಉಲ್ಲೇಖಿತವಾಗಿದೆ. ಅದರಲ್ಲಿ, "ನೀನು ನಿನ್ನ ಸಂಪತ್ತಿನಿಂದ ಝಕಾತನ್ನು ಪ್ರತ್ಯೇಕಿಸಿ ಕೊಟ್ಟು ಬಿಟ್ಟರೆ ನಿನ್ನ ಮೇಲೆ ವಾಜಿಬ್ (ನಿರ್ಬಂಧ) ಆದ ಋಣವು ಸಂದಾಯವಾದಂತಾಯಿತು" ಎಂದಿದೆ.

ಮೇಲೆ ಉಲ್ಲೇಖಿಸಿದ ಸೂಕ್ತಗಳಲ್ಲಿ ಭೂಮಿಯ ಉತ್ಪತ್ತಿ ಮತ್ತು ಚಿನ್ನ - ಬೆಳ್ಳಿಗಳ ಝಕಾತ್‌ಗಳ ವಿಧಿ ಇದೆ. ಆದರೆ ವ್ಯಾಪಾರದ ಸರಕು, ಒಂಟೆ, ದನ ಮತ್ತು ಆಡುಗಳ ಮೇಲೂ ಝಕಾತ್ ಇದೆ ಎಂದು ಹದೀಸ್‌ಗಳಿಂದ ತಿಳಿಯುತ್ತದೆ.

ಕೆಲವು ವಸ್ತುಗಳ ಝಕಾತ್‌ನ ಪ್ರಮಾಣ

ಬೆಳ್ಳಿಯ 'ನಿಸಾಬ್' (ಝಕಾತ್ ಕಡ್ಡಾಯವಾಗಲು ಇರಬೇಕಾದ ಕನಿಷ್ಠತಮ ಸೊತ್ತು) ಇನ್ನೂರು ದಿರ್ಹಮ್ ಅರ್ಥಾತ್ ಸುಮಾರು ಐವತ್ತೆರಡುವರೆ ತೊಲೆಯಷ್ಟು. ಚಿನ್ನದ ನಿಸಾಬ್ ಏಳೂವರೆ ತೊಲೆ. ಆಡುಗಳ ನಿಸಾಬ್ 40 ಆಡುಗಳು. ದನಗಳ ನಿಸಾಬ್ 30. ಅರ್ಥಾತ್ ಒಬ್ಬನ ಬಳಿ ಇಷ್ಟು ಸೊತ್ತು ಇದ್ದು, ಅದರ ಮೇಲೆ ಒಂದು ವರ್ಷ ಕಳೆದರೆ ಅದರಿಂದ ನಲ್ವತ್ತನೇ ಒಂದಂಶ ಝಕಾತ್ ಕೊಡಬೇಕಾದುದು ಕಡ್ಡಾಯವಾಗಿದೆ. ಚಿನ್ನ ಮತ್ತು ಬೆಳ್ಳಿ ಬೇರೆ ಬೇರೆಯಾಗಿ ನಿಸಾಬ್‌ನಷ್ಟು ಇಲ್ಲವಾದರೂ ಎರಡೂ ಸೇರಿದಾಗ ಅವುಗಳ ಬೆಲೆಯು ಯಾವುದಾದರೂ ಒಂದರ ನಿಸಾಬನ್ನು ತಲಪಿದರೆ, ಅವುಗಳ ಮೇಲೆ ಝಕಾತ್ ಕೊಡಬೇಕಾದುದು ಕಡ್ಡಾಯವಾಗಿದೆಯೆಂದು ಹನಫೀ ಕರ್ಮಶಾಸ್ತ್ರಜ್ಞರು ಹೇಳುತ್ತಾರೆ.

ಆಭರಣಕ್ಕೆ ಝುಕಾತ್

ಚಿನ್ನ-ಬೆಳ್ಳಿಗಳು ಆಭರಣಗಳ ರೂಪದಲ್ಲಿದ್ದರೆ ಹ. ಉಮರ್ ಮತ್ತು ಹ. ಇಬ್ನ್ ಮಸ್‌ಊದ್‌ರವರ(ರ) ಅಭಿಪ್ರಾಯ ಪ್ರಕಾರ ಝುಕಾತ್ ಕೊಡಬೇಕಾದುದು ಕಡ್ಡಾಯ. ಇಮಾಮ್ ಅಬೂ ಹನೀಫಾರವರೂ(ರ) ಈ ಅಭಿಪ್ರಾಯವನ್ನೇ ಅಂಗೀಕರಿಸಿಕೊಂಡಿದ್ದಾರೆ. ಪ್ರವಾದಿಯವರು(ಸ) ಇಬ್ಬರು ಮಹಿಳೆಯರ ಕೈಗಳಲ್ಲಿ ಚಿನ್ನದ ಕಂಕಣ ಕಂಡಾಗ, "ನೀವಿದರ ಝುಕಾತ್ ಕೊಡುತ್ತೀರಾ?" ಎಂದು ಕೇಳಿದರು. ಆಗ ಒಬ್ಬಾಕೆ, ಇಲ್ಲವೆಂದಳು. ಆಗ ಪ್ರವಾದಿ ಯವರು(ಸ), "ನೀನು ಅದರ ಬದಲಿಗೆ ನಿರ್ಣಾಯಕ ದಿನದಂದು ಅಗ್ನಿಯ ಕಂಕಣಗಳು ತೊಡಿಸಲ್ಪಡುವುದನ್ನು ಇಷ್ಟಪಡುವೆಯಾ?" ಎಂದು ಕೇಳಿದರೆಂದು ಹದೀಸಿನಲ್ಲಿದೆ. ಇದೇ ಪ್ರಕಾರ ಹ. ಉಮ್ಮು ಸಲಮರಿಂದ(ರ) ಹೀಗೆ ಉಲ್ಲೇಖಿತವಾಗಿದೆ: "ನನ್ನ ಹತ್ತಿರ ಚಿನ್ನದ ಕಾಲ್ಬಳೆ ಇತ್ತು. ನಾನು ಪ್ರವಾದಿಯವರೊಡನೆ(ಸ) ಇದೂ 'ಕನ್ಝ್' (ಸಂಗ್ರಹ) ಆಗಿದೆಯೇ? ಎಂದು ಕೇಳಿದೆ. ಆಗ ಅವರು, ಅದರಲ್ಲಿ ಝುಕಾತಿನ ನಿಸಾಬ್‌ನಷ್ಟು ಚಿನ್ನ ಬೆರೆತಿದ್ದರೆ ಮತ್ತು ಅದರಿಂದ ಝುಕಾತ್ ಪ್ರತ್ಯೇಕಿಸಿದರೆ ಅದು 'ಕನ್ಝ್' ಅಲ್ಲವೆಂದರು." ಈ ಎರಡು ಹದೀಸ್‌ಗಳಿಂದ ಚಿನ್ನ - ಬೆಳ್ಳಿಗಳು ಆಭರಣಗಳ ರೂಪದಲ್ಲಿದ್ದರೂ ನಗದು ರೂಪದಲ್ಲಿದ್ದಂತೆಯೇ ಝುಕಾತ್ ಕಡ್ಡಾಯವಾಗಿರುತ್ತದೆ ಎಂದು ತಿಳಿಯುತ್ತದೆ. ಆದರೆ ಅದರೊಂದಿಗಿರುವ ಮುತ್ತು ರತ್ನಗಳ ಮೇಲೆ ಝುಕಾತ್ ಇಲ್ಲ.

ಝುಕಾತ್‌ನ ಹಕ್ಕುದಾರರು

ಪವಿತ್ರ ಕುರ್‌ಆನಿನಲ್ಲಿ ಝುಕಾತಿನ ಎಂಟು ಹಕ್ಕುದಾರರ ವಿವರಣೆ ಇದೆ. ಅದು ಈ ಕೆಳಗಿನಂತಿದೆ:

1) ಪುಕರಾಅ್ (ದರಿದ್ರರು)- ಇವರ ಬಳಿಯಿರುವ ಅಲ್ಪಸ್ವಲ್ಪ ಸೊತ್ತು ಅವರ ಅವಶ್ಯಕತೆಗೆ ಸಾಕಾಗುವುದಿಲ್ಲ. ಬಹಳ ಕಷ್ಟದಿಂದ ಅವರ ಜೀವನ ಸಾಗುತ್ತಿರುತ್ತದೆ. ಅವರು ಯಾರೊಡನೆಯೂ ಬೇಡುವುದಿಲ್ಲ. ಇಮಾಮ್ ಝುಹ್ರೀ, ಇಮಾಮ್ ಅಬೂ ಹನೀಫಾ, ಇಬ್ನ್ ಅಬ್ಬಾಸ್, ಹಸನ್ ಬಸ್‌ರೀ, ಅಬುಲ್ ಹಸನ್ ಕರ್‌ಖೀ(ರ) ಮತ್ತಿನ್ನಿತರ ಮಹನೀಯರು 'ಫಕೀರ್' ಎಂಬ ಪದಕ್ಕೆ ನೀಡಿದ ವ್ಯಾಖ್ಯೆ ಇದೇ ಆಗಿದೆ.

2) ಮಸಾಕೀನ್ (ನಿರ್ಗತಿಕರು)- ಇವರು ಅತ್ಯಂತ ದುರವಸ್ಥೆಯಲ್ಲಿರುವವರು, ತಮ್ಮ ಹೊಟ್ಟೆ ಹೊರೆಯಲಿಕ್ಕೂ ಗತಿಯಿಲ್ಲದವರು. ಹ. ಉಮರ್‌ರವರು(ರ) ಸಂಪಾದನೆ ಮಾಡಲು ಸಾಧ್ಯವಿದ್ದು ಉದ್ಯೋಗವೇನೂ ಸಿಗದಿರುವವರನ್ನೂ ನಿರ್ಗತಿಕರ ಸಾಲಿನಲ್ಲಿ ಸೇರಿಸಿದ್ದಾರೆ.

3) ಆಮಿಲೀನ ಅಲೈಹಾ- ಅರ್ಥಾತ್ ಝುಕಾತ್ ವಸೂಲು ಮಾಡಲಿಕ್ಕಾಗಿ ಇಸ್ಲಾಮೀ ಸರಕಾರದಿಂದ ನೇಮಿಸಲ್ಪಟ್ಟವರು. ಅವರಿಗೆ ಝುಕಾತ್ ಖಾತೆಯಿಂದ ಸಂಬಳ ಕೊಡಲಾಗುವುದು.

4) ಮುಅಲ್ಲಫತುಲ್ ಕುಲೂಬ್- ಅರ್ಥಾತ್ ಇಸ್ಲಾಮಿನ ಬೆಂಬಲಕ್ಕಾಗಿ ಅಥವಾ ಇಸ್ಲಾಮಿನ ವಿರೋಧವನ್ನು ತಡೆಯಲಿಕ್ಕಾಗಿ ಹಣ ಖರ್ಚು ಮಾಡಬೇಕಾಗಿ ಬರುವುದು. ಇದರಲ್ಲಿ ನಿಶ್ಚಿಂತರನ್ನಾಗಿ ಮಾಡಬೇಕಾದ ನವ ಮುಸ್ಲಿಮರೂ ಸೇರುತ್ತಾರೆ. ಅವರು ತಮ್ಮ ಕಾಫಿರ್

ಸಮುದಾಯವನ್ನು ತ್ಯಜಿಸಿ ಬಂದು ಮುಸ್ಲಿಮರನ್ನು ಸೇರಿಕೊಂಡ ಕಾರಣದಿಂದ ನಿರುದ್ಯೋಗಿಗಳಾದರೆ ಅಥವಾ ಕಷ್ಟಗಳಿಗೊಳಗಾದರೆ ಆಗಂತೂ ಅವರಿಗೆ ಸಹಾಯವೊದಗಿಸಬೇಕಾದುದು ಮುಸ್ಲಿಮರ ಕರ್ತವ್ಯವೇ ಆಗಿರುತ್ತದೆ. ಆದರೆ ಅವರ ಮನಸ್ಸು ಇಸ್ಲಾಮಿನಲ್ಲಿ ನೆಲೆ ನಿಲ್ಲಲಿಕ್ಕಾಗಿ ಅವರು ಧನಿಕರಾಗಿದ್ದರೂ ಅವರಿಗೆ ಝಕಾತ್ ಕೊಡಬಹುದು. ಪ್ರವಾದಿಯವರು(ಸ) ಹುನೈನ್ ಯುದ್ಧ ಕಾಲದಲ್ಲಿ ಸಮರಾರ್ಜಿತ ಸೊತ್ತಿನಿಂದ ನವ ಮುಸ್ಲಿಮರಿಗೆ ಧಾರಾಳವಾಗಿ ಕೊಟ್ಟಿದ್ದರು. ಆಗ ಒಬ್ಬೊಬ್ಬ ನವ ಮುಸ್ಲಿಮನ ಪಾಲಿಗೆ ನೂರು ಒಂಟೆಗಳು ಸಿಕ್ಕಿದುವು. ಅನ್ಸಾರರು ಈ ಬಗ್ಗೆ ದೂರಿತ್ತಾಗ ಪ್ರವಾದಿಯವರು(ಸ), "ಇವರು ಈಗತಾನೇ ಕುಫ್ರ್‌ನಿಂದ ಇಸ್ಲಾಮಿನೊಳಗೆ ಪ್ರವೇಶಿಸಿದ್ದಾರಷ್ಟೆ. ನಾನು ಅವರ ಮನಸ್ಸನ್ನು ಸಂತೋಷಗೊಳಿಸಲಿಚ್ಛಿಸುತ್ತೇನೆ" ಎಂದರು. ಆದುದರಿಂದಲೇ ಇಮಾಮ್ ಝುಹ್‌ರೀಯವರು(ರ) "ಮುಅಲ್ಲಫತುಲ್ ಕುಲೂಬ್" ಎಂಬುದನ್ನು "ಇಸ್ಲಾಮ್ ಪ್ರವೇಶಿಸಿದ ಕ್ರೈಸ್ತ, ಯಹೂದಿ ಅಥವಾ ಇತರ ಮುಸ್ಲಿಮೇತರನು, ಅವನು ಧನಿಕನೇ ಆಗಿದ್ದರೂ ಸಹ" ಎಂದು ವ್ಯಾಖ್ಯಾನಿಸಿದ್ದಾರೆ.*

5) 'ಫಿರ್ರಿಕಾಬ್'- ಅರ್ಥಾತ್ ದಾಸ್ಯ ಬಂಧನದಿಂದ ವಿಮೋಚನೆಗೊಳ್ಳ ಬಯಸುವ ಗುಲಾಮನು ತನ್ನ ಮಾಲಿಕನಿಗೆ ಹಣಕೊಟ್ಟು ಬಿಡುಗಡೆಗೊಳ್ಳಲು ಆತನಿಗೆ ಝಕಾತ್ ಕೊಡಬಹುದು. ಈ ಕಾಲದಲ್ಲಿ ಗುಲಾಮಗಿರಿ ಪದ್ಧತಿ ಎಲ್ಲೂ ಇಲ್ಲ. ಆದುದರಿಂದ ಜುಲ್ಮಾನೆ ಕೊಡಲಿಕ್ಕಾಗದೆ ಸೆರೆವಾಸ ಅನುಭವಿಸುತ್ತಿರುವವರನ್ನು ಬಿಡುಗಡೆಗೊಳಿಸಲಿಕ್ಕಾಗಿ ಝಕಾತಿನ ಹಣದಿಂದ ಸಹಾಯ ಮಾಡಬಹುದು. ಇದು 'ಫಿರ್ರಿಕಾಬ್'ನ ವ್ಯಾಪ್ತಿಯಲ್ಲೇ ಸೇರುತ್ತದೆಂದು ನನ್ನ ಅಭಿಪ್ರಾಯ.

6) 'ಅಲ್‌ಗಾರಿಮೀನ್' (ಸಾಲಗಾರರು)- ಒಬ್ಬನ ಹತ್ತಿರ ಸಾವಿರಾರು ರೂಪಾಯಿಗಳಿದ್ದು ಅಂಥವನು ಕೇವಲ ಕೆಲವು 100 ರೂಪಾಯಿಗಳ ಸಾಲಗಾರನಾಗಿದ್ದರೂ ಅವನಿಗೆ ಸಹಾಯ ಮಾಡಬೇಕೆಂದು ಇದರ ಅರ್ಥವಲ್ಲ. ಒಬ್ಬನು ತನ್ನ ಸಾಲ ಸಂದಾಯ ಮಾಡಿದ ಬಳಿಕ ಅವನಲ್ಲಿ 'ನಿಸಾಬ್'ಗಿಂತಲೂ ಕಡಿಮೆ ಉಳಿಯುವುದೆಂದಾದರೆ, ಅಂಥವನಿಗೆ ಝಕಾತ್ ಕೊಡಬಹುದು. ಯಾರಾದರೂ ದುಂದು ವೆಚ್ಚ ಮಾಡಿ ಅಥವಾ ದುಷ್ಚಟಗಳ ಕಾರಣದಿಂದ ಸಾಲಗಾರನಾಗಿದ್ದರೆ ಅಂಥವನಿಗೆ ಝಕಾತ್ ಕೊಡುವುದು 'ಮಕ್ರೂಹ್' (ಅಪೇಕ್ಷಣೀಯವಲ್ಲದ ಕಾರ್ಯ) ಎಂದು ಕರ್ಮಶಾಸ್ತ್ರಜ್ಞರು ಹೇಳಿದ್ದಾರೆ. ಏಕೆಂದರೆ ಅಂಥವನು ತನಗೆ ಝಕಾತ್ ಸಿಗಲಿದೆಯೆಂದೂ ಅದರಿಂದ ಸಾಲ ತೀರಿಸುವೆನೆಂದೂ ನಂಬಿ, ಇನ್ನಷ್ಟು ಧೈರ್ಯದಿಂದ ದುಷ್ಕೃತ್ಯಗಳನ್ನೂ ದುಂದು ವೆಚ್ಚವನ್ನೂ ಮಾಡತೊಡಗುವನು.

7) 'ಫೀ ಸಬೀಲಿಲ್ಲಾಹ್'- ಇದು ಎಲ್ಲಾ ಸತ್ಕಾರ್ಯಗಳಿಗೂ ಅನ್ವಯಿಸುವ ಸಾಮಾನ್ಯ ಪದ. ಆದರೆ ನಿರ್ದಿಷ್ಟವಾಗಿ ಇದರ ಅರ್ಥ ಸತ್ಯ ಧರ್ಮದ ಉತ್ಥಾನಕ್ಕಾಗಿ ನಡೆಸುತ್ತಿರುವ

---

*ಇಲ್ಲಿ ಈ ಕುರಿತು ಕರ್ಮಶಾಸ್ತ್ರ ಪರವಾದ ವಿವರಗಳನ್ನು ನೀಡಲು ಅವಕಾಶವಿಲ್ಲ. ಈ ಕುರಿತು ಹೆಚ್ಚಿನ ವಿವರಗಳನ್ನು 'ತಫ್ಹೀಮುಲ್ ಕುರ್‌ಆನ್' (ಕುರ್‌ಆನ್ ವ್ಯಾಖ್ಯಾನ ಗ್ರಂಥದಲ್ಲಿ) ಅತ್ತೌಬಃ ಅಧ್ಯಾಯದ ವ್ಯಾಖ್ಯಾನದಲ್ಲಿ ಕಾಣಬಹುದು.

ಎಲ್ಲಾ ತರದ ಹೋರಾಟಗಳಿಗೆ ಸಹಾಯ ನೀಡುವುದು ಎಂದಾಗಿದೆ. ಧನಿಕನಿಗೆ ಝಕಾತ್ ಪಡೆಯುವುದು ನಿಷಿದ್ಧವಾದರೂ ಅವನು ಜಿಹಾದ್‌ಗಾಗಿ (ಧರ್ಮಕ್ಕಾಗಿ ಹೋರಾಟ) ಸಹಾಯ ಬಯಸುವವನಾದರೆ ಅವನಿಗೆ ಝಕಾತ್ ಕೊಡಬೇಕೆಂದು ಪ್ರವಾದಿ(ಸ) ಹೇಳಿರುತ್ತಾರೆ. ಏಕೆಂದರೆ ಒಬ್ಬನು ಸ್ವತಃ ಧನಿಕನಾಗಿರಬಹುದು. ಆದರೆ ಜಿಹಾದ್‌ಗೆ ಬೇಕಾಗುವ ಮೊಬಲಗಿಗೆ ಮಿತಿಯಿಲ್ಲ. ಅದನ್ನು ಒಬ್ಬನೇ ತನ್ನ ಸ್ವಂತ ಹಣದಿಂದ ಪೂರೈಸಿಕೊಳ್ಳಲಾರ. ಈ ಕಾರ್ಯಕ್ಕೆ ಝಕಾತಿ ನಿಂದ ಸಹಾಯ ಮಾಡಬೇಕು.

8) 'ಇಬ್ನುಸ್ಸಬೀಲ್' (ಪ್ರಯಾಣಿಕ)- ಒಬ್ಬ ಪ್ರಯಾಣಿಕನಿಗೆ ಸ್ವಂತ ಊರಲ್ಲಿ ಎಷ್ಟು ಸಂಪತ್ತಿದ್ದರೂ ಅವನು ಪ್ರಯಾಣಾವಸ್ಥೆಯಲ್ಲಿ ಕಂಗಾಲಾಗಿದ್ದರೆ ಅವನಿಗೆ ಝಕಾತ್ ಕೊಡಬೇಕು.

ಝಕಾತ್ ಯಾರಿಗೆ ಕೊಡಬೇಕು? ಯಾರಿಗೆ ಕೊಡಬಾರದು?

ಈಗ ವಿವರಿಸಲಾದ ಈ ಎಂಟು ವರ್ಗಗಳಲ್ಲಿ ಯಾರಿಗೆ ಯಾವ ಸ್ಥಿತಿಯಲ್ಲಿ ಝಕಾತ್ ಕೊಡಬೇಕು ಮತ್ತು ಯಾವ ಸ್ಥಿತಿಯಲ್ಲಿ ಝಕಾತ್ ಕೊಡಬಾರದೆಂಬ ಪ್ರಶ್ನೆ ಉಳಿಯುತ್ತದೆ. ಅದರ ವಿವರಣೆಯನ್ನು ಸ್ವಲ್ಪ ಮಟ್ಟಿಗೆ ಕೊಡುವೆನು-

1) ಯಾರೂ ತನ್ನ ತಂದೆ ಅಥವಾ ಮಗನಿಗೆ ಝಕಾತ್ ಕೊಡಬಾರದು. ಪತಿಯು ತನ್ನ ಪತ್ನಿಗೂ, ಪತ್ನಿಯು ತನ್ನ ಪತಿಗೂ ಕೊಡಬಾರದು. ಇದರಲ್ಲಿ ಕರ್ಮಶಾಸ್ತ್ರಜ್ಞರು ಒಮ್ಮತರಾಗಿ ರುತ್ತಾರೆ. ನಿಮ್ಮ ಪರಿಪಾಲನೆಯಲ್ಲಿರುವಂತಹ ಸಮೀಪದ ಸಂಬಂಧಿಕರಿಗೂ ಶರೀಅತ್ (ಧರ್ಮಶಾಸ್ತ್ರ) ಪ್ರಕಾರ ವಾರೀಸುದಾರರಾಗುವವರಿಗೂ ಝಕಾತ್ ಕೊಡಬಾರದೆಂದು ಕೆಲವು ಕರ್ಮಶಾಸ್ತ್ರಜ್ಞರು ಹೇಳುತ್ತಾರೆ. ಆದರೆ ದೂರದ ಸಂಬಂಧಿಕರು ಝಕಾತನ್ನು ಪಡೆಯುವ ಹಕ್ಕುದಾರರಾಗಿರುತ್ತಾರೆ. ಮಾತ್ರವಲ್ಲ ಇತರರಿಗಿಂತ ಇವರೇ ಹೆಚ್ಚು ಹಕ್ಕುಳ್ಳವರು. ಆದರೆ ಝಕಾತ್ ತೆಗೆದಿಟ್ಟು ತನ್ನ ಸಂಬಂಧಿಕರನ್ನೇ ಹುಡುಕುತ್ತಿರಬಾರದೆಂದು ಇಮಾಮ್ ಔಝಾಈ(ರ) ಹೇಳುತ್ತಾರೆ.

2) ಝಕಾತ್ ಕೇವಲ ಮುಸ್ಲಿಮರ ಹಕ್ಕು. ಮುಸ್ಲಿಮೇತರರಿಗೆ ಅದರಲ್ಲಿ ಹಕ್ಕಿಲ್ಲ.

تُؤْخَذُ مِنْ أَغْنِيَائِكُمْ وَتُرَدُّ فِي فُقَرَائِكُمْ

"ಅದನ್ನು ನಿಮ್ಮ ಧನಿಕರಿಂದ ಪಡೆದು ನಿಮ್ಮ ಬಡವರಿಗೆ ವಿತರಣೆ ಮಾಡಲಾಗುವುದು" ಎಂದು ಹದೀಸಿನಲ್ಲಿದೆ. ಇತರ ಸಾಮಾನ್ಯ ದಾನ ಧರ್ಮಗಳಲ್ಲಿ ಮುಸ್ಲಿಮೇತರರಿಗೂ ಪಾಲು ಕೊಡಲಾಗುವುದು. ಅಂತಹ ದಾನಗಳನ್ನು ಮುಸ್ಲಿಮರಿಗೆ ಮಾತ್ರ ಕೊಟ್ಟು ಸಹಾಯಾರ್ಹರಾದ ಮುಸ್ಲಿಮೇತರರಿಗೆ ಕೊಡದಿರುವುದು ಸರಿಯಲ್ಲ.

3) ಇಮಾಮ್ ಅಬೂ ಹನೀಫಾ, ಇಮಾಮ್ ಅಬೂ ಯೂಸುಫ್ ಮತ್ತು ಇಮಾಮ್ ಅಹ್ಮದ್‌ರವರು(ರ) ಆಯಾ ಊರಿನ ಝಕಾತ್ ಆಯಾ ಊರಲ್ಲೇ ವಿತರಣೆಯಾಗಬೇಕೆನ್ನುತ್ತಾರೆ. ಅದೇ ಊರಲ್ಲಿ ಝಕಾತ್ ಪಡೆಯತಕ್ಕ ಹಕ್ಕುದಾರರು ಇಲ್ಲದಿದ್ದಾಗ ಅಥವಾ ಪ್ರವಾಹ- ಬರಗಾಲ ಮೊದಲಾದವುಗಳಿಗೆ ತುತ್ತಾದ ಇತರ ಊರವರಿಗೆ ಸಹಾಯ ಒದಗಿಸಬೇಕಾದಾಗ ಝಕಾತನ್ನು ಇನ್ನೊಂದೂರಿಗೆ ಕಳುಹಿಸಬಹುದು. ಇಮಾಮ್ ಮಾಲಿಕ್ ಮತ್ತು ಸುಫಿಯಾನ್ ಸೂರಿಯವರ(ರ) ಅಭಿಪ್ರಾಯಗಳೂ ಹೀಗೆಯೇ ಇದೆ. ಆದರೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಝಕಾತನ್ನು ಕಳುಹಿಸಿಕೊಡಲೇ ಬಾರದೆಂದು ಇದರ ಅರ್ಥವಲ್ಲ.

4) ಕೆಲವು ವಿದ್ವಾಂಸರ ಅಭಿಪ್ರಾಯ ಪ್ರಕಾರ ಎರಡು ಹೊತ್ತಿನ ಊಟಕ್ಕೆ ಬೇಕಾಗುವಷ್ಟು ಇರುವವರು ಝಕಾತ್ ಪಡೆಯಬಾರದು. ತಮ್ಮ ಬಳಿ ಹತ್ತು ರೂಪಾಯಿ ಇರುವವರು ಝಕಾತ್ ಪಡೆಯಬಾರದೆಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು ಹನ್ನೆರಡುವರೆ ರೂಪಾಯಿ ಇರುವವರು ಝಕಾತ್ ಪಡೆಯಬಾರದೆನ್ನುತ್ತಾರೆ. ಆದರೆ ಇಮಾಮ್ ಅಬೂ ಹನೀಫಾ(ರ) ಮತ್ತು ಎಲ್ಲಾ ಹನಫೀ ಕರ್ಮಶಾಸ್ತ್ರಜ್ಞರ ಅಭಿಪ್ರಾಯ ಪ್ರಕಾರ ತಮ್ಮ ಬಳಿ ಐವತ್ತು ರೂಪಾಯಿಗಿಂತ ಕಡಿಮೆಯಿರುವವರು ಝಕಾತ್ ಪಡೆಯಬಹುದು. ಇದರಲ್ಲಿ ಮನೆ, ಮನೆಯ ಸಾಮಾನು, ಸವಾರಿ ಮಾಡುವ ಕುದುರೆ ಮತ್ತು ನೌಕರರು ಸೇರುವುದಿಲ್ಲ. ಈ ವಿಷಯದಲ್ಲಿ ಕಾನೂನಿನ ವಿಚಾರ ಒಂದಾದರೆ ಔನ್ನತ್ಯದ ವಿಚಾರ ಇನ್ನೊಂದಾಗಿದೆ. ಇವೆರಡರಲ್ಲಿ ಅಂತರವಿದೆ. ಬೆಳಗು ಬೈಗುಗಳ ಆಹಾರ ಸಾಮಗ್ರಿಗಳಿರುವಾತನು ಯಾಚನೆಗಾಗಿ ಕೈಚಾಚಿದರೆ, ಅವನು ತನ್ನ ಪಾಲಿಗೆ ಅಗ್ನಿಯನ್ನು ಕೂಡಿ ಹಾಕುತ್ತಾನೆಂದು ಪ್ರವಾದಿ(ಸ) ಹೇಳಿರುತ್ತಾರೆ. ಇನ್ನೊಂದು ಹದೀಸಿನಲ್ಲಿ- ಒಬ್ಬನು ಯಾಚನೆಗಾಗಿ ಕೈಯೊಡ್ಡುವುದಕ್ಕಿಂತ ಸೌದೆ ಕಡಿದು ತನ್ನ ಹೊಟ್ಟೆ ಹೊರೆಯುವುದನ್ನು ನಾನು ಮೆಚ್ಚುತ್ತೇನೆಂದು ಪ್ರವಾದಿ(ಸ) ಹೇಳಿರುತ್ತಾರೆ. ಝಕಾತ್ ಪಡೆಯುವ ಕಾರ್ಯವು ಊಟಕ್ಕಿರುವ ಮತ್ತು ಸಂಪಾದನೆ ಮಾಡಲು ಶಕ್ತಿಯುಳ್ಳವನಿಗೆ ಹೇಳಿಸಿದುದಲ್ಲವೆಂದು ಮೂರನೆಯ ಹದೀಸೊಂದರಲ್ಲಿದೆ. ಆದರೆ ಇದು ಔನ್ನತ್ಯದ ಬೋಧನೆಯಾಯಿತು. ಇನ್ನು ಕಾನೂನಿನ ವಿಚಾರ, ಕಾನೂನು ಪ್ರಕಾರ ಒಬ್ಬನು ಝಕಾತ್ ಪಡೆಯುವ ಹಕ್ಕನ್ನು ಹೊಂದಿರಬೇಕಾದರೆ ಅದರ ಅಂತಿಮ ಮೇರೆ ಎಷ್ಟೆಂದು ತಿಳಿಸಬೇಕಾದುದು ಅಗತ್ಯ. ಈ ವಿಷಯ ಇನ್ನೊಂದು ಹದೀಸಿನಲ್ಲಿ ಸಿಗುತ್ತದೆ. ಉದಾ: لِلسَّائِلِ حَقٌّ وَإِنْ جَاءَ عَلَى الْفَرَسِ "ಯಾಚಕನು ಕುದುರೆಯನ್ನೇರಿ ಬಂದರೂ ಅವನಿಗೆ ಹಕ್ಕಿದೆ"ಯೆಂದು ಪ್ರವಾದಿ(ಸ) ಹೇಳಿರುತ್ತಾರೆ. "ನನ್ನಲ್ಲಿ ಹತ್ತು ರೂಪಾಯಿಗಳಿವೆ. ನಾನು ನಿರ್ಗತಿಕನೇ?" ಎಂದೊಬ್ಬನು ಪ್ರವಾದಿಯವರೊಡನೆ(ಸ) ಕೇಳಿದಾಗ ಅವರು 'ಹೌದು' ಎಂದರು. ಒಮ್ಮೆ ಇಬ್ಬರು ಬಂದು ಪ್ರವಾದಿಯವರೊಡನೆ(ಸ) ಝಕಾತ್ ಬೇಡಿದರು. ಪ್ರವಾದಿಯವರು(ಸ) ಅವರ ಕಡೆಗೆ ದಿಟ್ಟಿಸಿ ನೋಡಿ, "ನೀವು ಪಡೆಯಲು ಇಷ್ಟಪಡುವಿರಾದರೆ ನಾನು ಕೊಡುವೆನು. ಆದರೆ ಈ ಸೊತ್ತಿನಲ್ಲಿ ಧನಿಕರಿಗೆ ಮತ್ತು ದುಡಿಯಲು ಸಾಧ್ಯವಿರುವ

ದೃಢಕಾಯರಿಗೆ ಪಾಲಿಲ್ಲ" ಎಂದರು. ಈ ಎಲ್ಲಾ ಹದೀಸ್ ಗಳಿಂದ 'ನಿಸಾಬ್'ಗಿಂತ ಕಡಿಮೆ ಆರ್ಥಿಕ ಬಲವಿರುವವರು ದರಿದ್ರರ ಸಾಲಿಗೆ ಬರುತ್ತಾರೆ ಮತ್ತು ಅಂಥವರಿಗೆ ಝಕಾತ್ ಕೊಡಬಹುದು ಎಂದು ತಿಳಿಯುತ್ತದೆ. ಝಕಾತ್ ಪಡೆಯುವ ಹಕ್ಕು ಸಹಜವಾಗಿಯೂ ಬಡವನಿಗೆ ಮಾತ್ರ ಸಲ್ಲುತ್ತದೆಂಬ ಮಾತು ಬೇರೆ.

ಝಕಾತ್‌ನ ಸಾಮೂಹಿಕ ವ್ಯವಸ್ಥೆಯ ಅಗತ್ಯ

ಝಕಾತಿನ ವಿಷಯದಲ್ಲಿ ಅಗತ್ಯವುಳ್ಳ ವಿಧಿಗಳನ್ನು ನಾನೀಗ ವಿವರಿಸಿದೆ. ಆದರೆ ಇವೆಲ್ಲವುಗಳೊಂದಿಗೆ ಅತಿ ಪ್ರಮುಖವೂ ಅವಶ್ಯವೂ ಆದ ಇನ್ನೊಂದು ವಿಷಯವಿದೆ. ಇಂದು ಮುಸ್ಲಿಮರು ಮರೆತೇ ಬಿಟ್ಟಿರುವ ಈ ವಿಷಯದ ಕಡೆಗೂ ನಿಮ್ಮ ಗಮನ ಸೆಳೆಯಬೇಕಾದುದು ಅಗತ್ಯವೆಂದು ಭಾವಿಸುತ್ತೇನೆ. ಇಸ್ಲಾಮಿನ ಎಲ್ಲಾ ಕಾರ್ಯಗಳೂ ಸಾಮೂಹಿಕ ವ್ಯವಸ್ಥೆ ಯೊಂದಿಗೆ ನಡೆಯುತ್ತವೆ. ವೈಯಕ್ತಿಕತೆಯನ್ನು ಇಸ್ಲಾಮ್ ಮೆಚ್ಚುವುದಿಲ್ಲ. ನೀವು ಮಸೀದಿ ಯಿಂದ ದೂರವಿದ್ದಾಗ ಒಬ್ಬೊಬ್ಬರಾಗಿ ನಮಾಝ್ ಮಾಡಿದರೂ ಆಗಿ ಹೋಗುತ್ತದೆ. ಆದರೆ ನೀವು ಜಮಾಅತಿನೊಂದಿಗೆ (ಸಾಮೂಹಿಕವಾಗಿ) ನಮಾಝ್ ಮಾಡಬೇಕೆಂದು ಧರ್ಮಶಾಸ್ತ್ರ ಹೇಳುತ್ತದೆ. ಇದೇ ರೀತಿಯಲ್ಲಿ ಝಕಾತಿನ ಸಾಮೂಹಿಕ ವ್ಯವಸ್ಥೆ ಇಲ್ಲದಿದ್ದಾಗ ವೈಯಕ್ತಿಕವಾಗಿ ಝಕಾತ್ ವಿತರಣೆ ಮಾಡಿದರೆ ತಪ್ಪಿಲ್ಲ. ಆದರೆ ಝಕಾತನ್ನು ಒಂದೇ ಕೇಂದ್ರದಲ್ಲಿ ಶೇಖರಿಸಿ ಅದನ್ನು ವ್ಯವಸ್ಥಿತವಾಗಿ ವಿತರಣೆ ಮಾಡುವ ಪ್ರಯತ್ನ ಕೈಗೊಳ್ಳಬೇಕಾದುದು ಅತ್ಯಗತ್ಯ. ಕುರ್‌ಆನಿನಲ್ಲಿ ಇದೇ ವಿಷಯದ ಕಡೆಗೆ ಸೂಚನೆ ನೀಡಲಾಗಿದೆ-

ಉದಾ: خُذْ مِنْ أَمْوَالِهِمْ صَدَقَةً "ನೀವು ಅವರಿಂದ ಝಕಾತ್ ವಸೂಲು ಮಾಡಿರಿ" (ಸೂರಃ ಅತ್ತೌಬಃ 103) ಎಂದು ಅಲ್ಲಾಹನು ಪ್ರವಾದಿವರ್ಯರಿಗೆ(ಸ) ಆಜ್ಞಾಪಿಸಿದ್ದಾನೆ. ನೀವು ಝಕಾತನ್ನು ಬೇರೆ ಬೇರೆಯಾಗಿ ಖರ್ಚು ಮಾಡಿರೆಂದು ಮುಸ್ಲಿಮರೊಡನೆ ಹೇಳಲಿಲ್ಲ. ಇದೇ ರೀತಿಯಲ್ಲಿ ಝಕಾತ್ ಸಂಗ್ರಹ ಮಾಡುವ ಕಾರ್ಯಕರ್ತರನ್ನೂ ಝಕಾತಿನ ಹಕ್ಕುದಾರರನ್ನಾಗಿ ನಿಶ್ಚಯಿಸಿರುವುದರಿಂದ ಇಸ್ಲಾಮೀ ಸರಕಾರವು ಮುಸ್ಲಿಮರಿಂದ ಕ್ರಮವಾಗಿ ಝಕಾತನ್ನು ವಸೂಲು ಮಾಡಿ ಅದನ್ನು ಕ್ರಮವಾಗಿ ವಿತರಣೆ ಮಾಡುವುದೇ ಸರಿಯಾದ ನಿಯಮವೆಂದು ತಿಳಿದು ಬರುತ್ತದೆ. ಇದೇ ರೀತಿಯಲ್ಲಿ -

أُمِرْتُ أَنْ آخُذَ الصَّدَقَةَ مِنْ أَغْنِيَاءِكُمْ وَأَرُدَّهَا فِيْ فُقَرَاءِكُمْ.

"ನಿಮ್ಮ ಧನಿಕರಿಂದ ಝಕಾತನ್ನು ವಸೂಲು ಮಾಡಿ, ಅದನ್ನು ನಿಮ್ಮ ದರಿದ್ರರಿಗೆ ವಿತರಣೆ ಮಾಡಬೇಕೆಂದು ಅಲ್ಲಾಹ್ ನನಗೆ ಆಜ್ಞೆ ನೀಡಿರುತ್ತಾನೆಂದು" ಪ್ರವಾದಿ(ಸ) ಹೇಳಿರುವರು. ಈ ಕ್ರಮವೇ ಪ್ರವಾದಿಯವರ(ಸ) ಮತ್ತು ಖುಲಫಾಉರ್ರಾಷಿದೀನ್‌ರ ಕಾಲದಲ್ಲಿಯೂ

ಆಚರಣೆಯಲ್ಲಿತ್ತು. ಇಸ್ಲಾಮೀ ಸರಕಾರದ ಉದ್ಯೋಗಿಗಳು ಝಕಾತನ್ನು ವಸೂಲು ಮಾಡುತ್ತಿದ್ದರು. ಅದನ್ನು ಕೇಂದ್ರ ಸರಕಾರದ ಮೂಲಕ ವಿತರಣೆ ಮಾಡಲಾಗುತ್ತಿತ್ತು. ಇಂದು ಇಸ್ಲಾಮೀ ಸರಕಾರವಿಲ್ಲದಿರುವಾಗ ಹಾಗೂ ಝಕಾತ್‌ನ ವಸೂಲಿ ಮತ್ತು ವಿತರಣೆ ಮಾಡುವ ಸಾಮೂಹಿಕ ವ್ಯವಸ್ಥೆಯೂ ಇಲ್ಲದಿರುವಾಗ ನೀವು ಪ್ರತ್ಯಪ್ರತ್ಯೇಕವಾಗಿ ನಿಮ್ಮನಿಮ್ಮ ಝಕಾತ್ ತೆಗೆದು ಧಾರ್ಮಿಕ ಕಾರ್ಯಗಳಲ್ಲಿ ವಿನಿಯೋಗಿಸಬಹುದು. ಆದರೆ ಝಕಾತ್ ಸಂಗ್ರಹ ಮತ್ತು ವಿತರಣೆಯ ಒಂದು ಸಾಮೂಹಿಕ ವ್ಯವಸ್ಥೆಯನ್ನು ರೂಪಿಸುವ ದಿಸೆಯಲ್ಲಿ ಯೋಚಿಸಿ ಅದನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನ ನಡೆಸಬೇಕಾದುದು ಎಲ್ಲಾ ಮುಸ್ಲಿಮರ ಕರ್ತವ್ಯ. ಅದಿಲ್ಲದೆ ಹೋದರೆ ಝಕಾತ್ ಕಡ್ಡಾಯಗೊಳಿಸಿರುವುದರ ಉದ್ದೇಶವೇ ಅಪೂರ್ಣವಾಗಿ ಉಳಿದು ಹೋಗುತ್ತದೆ.

❖ ❖ ❖

ಅಧ್ಯಾಯ -6

ಹಜ್ಜ್

○

- ಹಜ್ಜ್
- ಹಜ್ಜ್‌ಯಾತ್ರೆಯ ಇತಿಹಾಸ
- ಹಜ್ಜ್‌ಯಾತ್ರೆಯ ಪ್ರಯೋಜನಗಳು
- ಹಜ್ಜ್: ಜಾಗತಿಕ ಸಮ್ಮೇಳನ

○

ಹಜ್ಜ್

ಮುಸ್ಲಿಮ್ ಬಾಂಧವರೇ,

ಹಿಂದಿನ ಖುತ್ಬಾಗಳಲ್ಲಿ ನಮಾಝ್, ಉಪವಾಸ ವ್ರತ ಮತ್ತು ಝಕಾತ್‌ಗಳೆಂಬ ಇಬಾದತ್‌ಗಳು ಮಾನವ ಜೀವನದಲ್ಲಿ ಹೇಗೆ ಇಸ್ಲಾಮಿನ ಅಚ್ಚಿನಲ್ಲೊತ್ತುತ್ತವೆ ಮತ್ತು ಅಲ್ಲಾಹನ ದಾಸ್ಯ-ಅನುಸರಣೆಗೆ ಅಣಿಗೊಳಿಸುತ್ತವೆ ಎಂಬುದನ್ನು ವಿವರವಾಗಿ ಹೇಳಿದ್ದೇನೆ. ಇನ್ನು ಇಸ್ಲಾಮಿನ ಕಡ್ಡಾಯ ವಿಧಿಗಳ ಪೈಕಿ ಹಜ್ಜ್ ಮಾತ್ರ ಉಳಿದಿದೆ. ಅದರ ಪ್ರಯೋಜನ ಗಳನ್ನು ನಿಮ್ಮ ಮುಂದೆ ವಿವರಿಸಬೇಕಾಗಿದೆ.

ಹಜ್ಜ್‌ನ ಅರ್ಥ

ಅರಬಿ ಭಾಷೆಯಲ್ಲಿ 'ಹಜ್ಜ್' ಎಂದರೆ ಯಾತ್ರಾರ್ಥಿಯಾಗುವುದು. ಹಜ್ಜ್‌ನಲ್ಲಿ ಜನರು ಎಲ್ಲಾ ದಿಕ್ಕುಗಳಿಂದಲೂ ಕಲಬಾದ ಯಾತ್ರಾರ್ಥಿಗಳಾಗಿ ಬರುತ್ತಾರೆ. ಆದುದರಿಂದ ಅದನ್ನು ಹಜ್ಜ್ ಎಂದು ಕರೆಯಲಾಗಿದೆ. ಇದರ ಪ್ರಾರಂಭ ಹೇಗಾಯಿತೆಂಬುದರ ಚರಿತ್ರೆಯು ತುಂಬಾ ಪಾಠಬೋಧಕವಾಗಿದೆ. ಹಜ್ಜ್ ಯಾತ್ರೆಯ ನಿಜ ಸ್ವರೂಪವನ್ನರಿಯಲು ಇವನ್ನು ಶ್ರದ್ಧೆಯಿಂದ ಆಲಿಸಿರಿ. ಆಗ ಅದರ ಪ್ರಯೋಜನಗಳೂ ಸುಲಭದಲ್ಲಿ ನಿಮಗೆ ತಿಳಿಯುವುದು.

ಹಝ್ರತ್ ಇಬ್ರಾಹೀಮ್‌ರ(ಅ) ಕಾಲಘಟ್ಟದ ಸ್ಥಿತಿಗತಿ

ಹ. ಇಬ್ರಾಹೀಮ್‌ರನ್ನು(ಅ) ಅರಿಯದ ಮುಸ್ಲಿಮನಾಗಲೀ, ಕ್ರೈಸ್ತನಾಗಲೀ, ಯಹೂದಿಯನಾಗಲೀ ಇಲ್ಲ. ಹ. ಮೂಸಾ, ಹ. ಈಸಾ(ಅ) ಮತ್ತು ಹ.ಮುಹಮ್ಮದ್(ಸ) ಮೂವರೂ ಅವರ ಸಂತತಿಯವರಾಗಿರುತ್ತಾರೆ. ಅವರು ಬೆಳಗಿದ ಜ್ಯೋತಿಯಿಂದಲೇ ಇಡೀ ಜಗತ್ತಿಗೆ ಬೆಳಕು ಹಬ್ಬಿತು. ನಾಲ್ಕು ಸಾವಿರ ವರ್ಷಗಳ ಹಿಂದೆ ಅವರು ಇರಾಕಿನಲ್ಲಿ ಜನಿಸಿದರು. ಆ ಕಾಲದಲ್ಲಿ ಇಡೀ ಜಗತ್ತೇ ದೇವನನ್ನು ಮರೆತಿತ್ತು. ಇಡೀ ಲೋಕದಲ್ಲಿ ಯಾರೊಬ್ಬನೂ ತನ್ನ ಒಡೆಯನನ್ನು ಅರಿತಿರಲಿಲ್ಲ. ಅವನ ಮುಂದೆ ತಲೆಬಾಗುತ್ತಿರಲಿಲ್ಲ. ಅವರು ಕಣ್ತೆರೆದ ಜನಾಂಗವು ಆ ಕಾಲದ ಅತ್ಯಂತ ನಾಗರಿಕ ಜನಾಂಗವಾಗಿತ್ತು. ಆದರೆ ಮಾರ್ಗಭ್ರಷ್ಟತೆಯಲ್ಲಿ ಅದುವೇ ಎಲ್ಲರಿಗಿಂತಲೂ ಮುಂದಿತ್ತು. ಶಿಕ್ಷಣ, ಕಲೆ, ಕೈಗಾರಿಕೆಗಳಲ್ಲಿ ತುಂಬಾ ಅಭಿವೃದ್ಧಿ ಹೊಂದಿದ್ದರೂ ಸೃಷ್ಟಿಯು ಎಷ್ಟು ಮಾತ್ರಕ್ಕೂ ಆರಾಧ್ಯವಾಗುವ ಅರ್ಹತೆ ಪಡೆದಿಲ್ಲವೆಂಬ

ಇಷ್ಟು ಚಿಕ್ಕ ವಿಷಯ ಅವರಿಗೆ ಹೊಳೆದಿರಲಿಲ್ಲ. ಅವರಲ್ಲಿ ನಕ್ಷತ್ರಗಳ ಮತ್ತು ವಿಗ್ರಹಗಳ ಪೂಜೆ ನಡೆಯುತ್ತಿತ್ತು. ಜ್ಯೋತಿಷ್ಯ, ಶಕುನ, ಭವಿಷ್ಯಕಥನ, ಮಾಟ-ಮಾರಣ, ತಾಯಿತ ಮೊದಲಾದ ಕ್ಷುದ್ರ ವೃತ್ತಿಗಳು ಅವರಲ್ಲಿ ಧಾರಾಳವಾಗಿತ್ತು. ಇಂದು ಹಿಂದೂಗಳಲ್ಲಿ ಪಂಡಿತರೂ ಪುರೋಹಿತರೂ ಇರುವಂತೆಯೇ ಆ ಕಾಲದಲ್ಲೂ ದೇವಾಲಯಗಳ ರಕ್ಷಣೆ ಮಾಡುತ್ತಿದ್ದ ಪುರೋಹಿತ ವರ್ಗವೊಂದಿತ್ತು. ಅದು ಜನರಿಂದ ಪೂಜೆ ಮಾಡಿಸುತ್ತಿತ್ತು. ಮದುವೆ-ಮರಣಗಳ ವಿಧಿ ಕರ್ಮಗಳನ್ನು ನೆರವೇರಿಸಿ ಕೊಡುತ್ತಿತ್ತು. ಜನರಿಗೆ ಭವಿಷ್ಯವಾಣಿ ಹೇಳುವ ಕಪಟ ನಾಟಕವನ್ನು ಆಡುತ್ತಿತ್ತು. ಜನಸಾಮಾನ್ಯರು ಅವರ ಜಾಲದಲ್ಲಿ ಸಿಲುಕಿ ಅವರನ್ನೇ ತಮ್ಮ ಭಾಗ್ಯವಿಧಾತರೆಂದು ತಿಳಿದಿದ್ದರು. ಅವರು ಕುಣಿಸಿದಂತೆ ತಾವೂ ಕುಣಿಯುತ್ತಿದ್ದರು ಮತ್ತು ಮರುಮಾತೆತ್ತದೆ ಅವರ ಸ್ವೇಚ್ಛೆಗಳ ದಾಸ್ಯ-ಆರಾಧನೆ ಮಾಡುತ್ತಿದ್ದರು. ಏಕೆಂದರೆ ಇವರು ದೇವತೆಗಳ ಸಾಮೀಪ್ಯ ಹೊಂದಿದವರಾದುದರಿಂದ ಇವರ ಇಚ್ಛೆಗಳಿಗನುಸಾರ ದೇವತೆಗಳು ಒಲಿಯುವರೆಂದೂ ಅನ್ಯಥಾ ನಶಿಸಿ ಹೋಗುವೆವೆಂದೂ ಅವರ ನಂಬಿಕೆಯಾಗಿತ್ತು. ಪುರೋಹಿತ ವರ್ಗದೊಂದಿಗೆ ಅರಸರ ಸಹಭಾಗಿತ್ವವೂ ಇತ್ತು. ಜನಸಾಮಾನ್ಯರನ್ನು ತಮ್ಮ ದಾಸರನ್ನಾಗಿ ಮಾಡಿಡುವುದರಲ್ಲಿ ಅರಸರು ಪುರೋಹಿತರಿಗೂ ಪುರೋಹಿತರು ಅರಸರಿಗೂ ಸಹಾಯಕರಾಗಿದ್ದರು. ಒಂದೆಡೆ ಸರಕಾರವು ಆ ಪುರೋಹಿತರನ್ನು ಬೆಂಬಲಿಸುತ್ತಿತ್ತು. ಇನ್ನೊಂದೆಡೆ ಆ ಪುರೋಹಿತರು ಜನಸಾಮಾನ್ಯರಿಗೆ "ರಾಜಾ ಪ್ರತ್ಯಕ್ಷ ದೇವತಾ" ಎಂದು ಬೋಧಿಸುತ್ತಿದ್ದರು. ಅರಸನೇ ರಾಷ್ಟ್ರ ಮತ್ತು ಪ್ರಜೆಗಳ ಒಡೆಯನೆಂದೂ ಅವನ ಮಾತೇ ಶಾಸನವೆಂದೂ ಪ್ರಜೆಗಳ ಪ್ರಾಣ ಮತ್ತು ಸೊತ್ತುಗಳ ಮೇಲೆ ಅವನಿಗೆ ಸಂಪೂರ್ಣ ಒಡೆತನವಿದೆಯೆಂದೂ ಜನರ ಮನಸ್ಸಿನಲ್ಲಿ ಅಚ್ಚೊತ್ತಿ ಬಿಟ್ಟಿದ್ದರು. ಅಷ್ಟೇ ಅಲ್ಲ, ಆರಾಧನಾ ವಿಧಿಗಳೆಲ್ಲಾ ಅರಸನ ಮುಂದೆಯೇ ನೆರವೇರಿಸುವಂತೆ ಮಾಡಿ, ಪ್ರಜೆಗಳ ಮನ-ಮಸ್ತಿಷ್ಕಗಳಲ್ಲಿ ಅವರ ದೇವತ್ವ ಭಾವನೆ ನೆಲೆಸುವಂತೆ ಮಾಡಿದ್ದರು.

ಹ. ಇಬ್ರಾಹೀಮ್‌ರ(ಅ) ಮನೆತನ

ಇಂತಹ ಕಾಲಘಟ್ಟದಲ್ಲಿ ಮತ್ತು ಇಂತಹ ಜನಾಂಗದಲ್ಲಿ ಹಝ್ರತ್ ಇಬ್ರಾಹೀಮ್(ಅ) ಜನಿಸಿದರು. ಅವರು ಜನಿಸಿದ ಮನೆತನವು ಪುರೋಹಿತರದ್ದೇ ಆಗಿದ್ದುದು ಸ್ವಾರಸ್ಯಕರ. ಅವರ ಹಿರಿಯರು ಸಮುದಾಯದ ಪಂಡಿತರೂ ಪುರೋಹಿತರೂ ಆಗಿದ್ದರು. ಆ ಮನೆಯಲ್ಲಿ ಪಂಡಿತ ಪುತ್ರನಿಗೆ ಸಿಗುವ ಶಿಕ್ಷಣವೇ ಅವರಿಗೂ ಸಿಗಬಹುದಾಗಿತ್ತು. ಬಾಲ್ಯದಿಂದಲೂ ಕಿವಿಯೊಳಗೆ ಬೀಳುತ್ತಿದ್ದುದು ಆ ಮಾತುಗಳೇ. ತಮ್ಮ ನೆಂಟರಿಷ್ಟರಲ್ಲೂ ಸ್ವಜಾತಿಯವರಲ್ಲೂ ಆ ರೀತಿನೀತಿಗಳನ್ನೇ ಅವರು ಕಾಣುತ್ತಿದ್ದರು. ಅದೇ ದೇವಾಲಯದ ಪೀಠವು ಅವರಿಗಾಗಿ ಕಾದಿತ್ತು. ಅದರ ಮೇಲೆ ಕುಳಿತು ತಮ್ಮ ಜನಾಂಗದ ಪುರೋಹಿತರಾಗಬಹುದಿತ್ತು. ಅವರ ಕುಟುಂಬದವರ ಸಂಪನ್ನತೆಗೆ ಕಾರಣವಾದ ಹರಿಕೆ, ಕಾಣಿಕೆ, ಪ್ರಸಾದ ಪುರಸ್ಕಾರಗಳು ಅವರಿಗಾಗಿಯೂ ಕಾದಿದ್ದುವು. ಜನರು ಅವರ ಮುಂದೆಯೂ ಕೈಕಟ್ಟಿ, ಭಯ-ಭಕ್ತಿಗಳಿಂದ ನಿಲ್ಲಲು ಸಿದ್ಧರಿದ್ದರು. ತಮ್ಮ ಸಂಬಂಧವನ್ನು ದೇವತೆಗಳೊಂದಿಗೆ ಕಲ್ಪಿಸಿಕೊಂಡು ಪರೋಕ್ಷ ಜ್ಞಾನಿಗಳೆಂಬ ಸೋಗಿನಲ್ಲಿ

ಸಾಮಾನ್ಯ ರೈತನಿಂದ ಆಳರಸನ ತನಕ ಪ್ರತಿಯೊಬ್ಬನನ್ನೂ ತಮ್ಮ ಜಾಲದಲ್ಲಿ ಸಿಲುಕಿಸಿಡಬಹುದಿತ್ತು. ಈ ಗಾಢಾಂಧಕಾರದಲ್ಲಿ ಸತ್ಯವನ್ನು ಅರಿಯುವವನಾಗಲೀ ಸ್ವೀಕರಿಸುವವನಾಗಲೀ ಇರಲಿಲ್ಲ. ಎಲ್ಲಿಂದಲೂ ಸತ್ಯದ ಪ್ರಕಾಶವೊದಗುವ ಸಂಭವವೇ ಇರಲಿಲ್ಲ. ಸ್ವಂತಕ್ಕೆ ಹಾಗೂ ಕುಟುಂಬಕ್ಕೆ ಸಿಗುವ ಇಷ್ಟೊಂದು ಅಧಿಕ ಲಾಭವನ್ನು ತುಳಿದು ಬಿಟ್ಟು ಸತ್ಯಕ್ಕಾಗಿ ಎಲ್ಲಿಲ್ಲದ ಕಷ್ಟಗಳನ್ನು ಖರೀದಿಸಿಕೊಳ್ಳಲು ಓರ್ವ ಸಾಮಾನ್ಯ ವ್ಯಕ್ತಿಯಿಂದ ಖಂಡಿತ ಸಾಧ್ಯವಿಲ್ಲ.

ಹ. ಇಬ್ರಾಹೀಮ್‌ರ(ಅ) ವಿರಕ್ತತೆಯ ಘೋಷಣೆ

ಆದರೆ ಹ. ಇಬ್ರಾಹೀಮ್‌ರವರು(ಅ) ಅಂತಹ ಸಾಮಾನ್ಯ ವ್ಯಕ್ತಿಯಾಗಿರಲಿಲ್ಲ. ಅವರ ಉತ್ಪತ್ತಿ ಯಾವುದೋ ವಿಶಿಷ್ಟ ಮಣ್ಣಿನಿಂದಾಗಿದ್ದಿರಬೇಕು. ಬುದ್ಧಿಯರಿತೊಡನೆ ಅವರು ಹೀಗೆ ಯೋಚಿಸತೊಡಗಿದರು- "ಸ್ವತಃ ಗುಲಾಮರಂತೆ ಸುತ್ತುತ್ತಿರುವ ಈ ಸೂರ್ಯ, ಚಂದ್ರ, ನಕ್ಷತ್ರಾದಿಗಳೂ ಮಾನವನ ಸ್ವಂತ ಕೈಗಳಿಂದ ನಿರ್ಮಿಸಲ್ಪಟ್ಟ ಈ ವಿಗ್ರಹಗಳೂ ನಮ್ಮಂತೆಯೇ ಮನುಷ್ಯರಾಗಿರುವ ಈ ಅರಸರೂ ದೇವರಾಗುವುದು ಹೇಗೆ? ಸ್ವತಃ ಅಲುಗಾಡಲಿಕ್ಕೂ ಸಾಧ್ಯವಾಗದ, ತಮ್ಮ ಸ್ವಂತ ಕೆಲಸಗಳನ್ನು ಮಾಡಿಕೊಳ್ಳಲಾಗದ, ತಮ್ಮ ಸ್ವಂತ ಜೀವನ-ಮರಣಗಳ ಮೇಲೂ ಅಧಿಕಾರವಿಲ್ಲದಿರುವ ಇವೆಲ್ಲವುಗಳ ಮುಂದೆ ಆರಾಧನೆಗಾಗಿ ತಲೆಬಾಗಬೇಕಾದರೆ, ಅವರೊಡನೆ ಯಾಚಿಸಬೇಕಾದರೆ, ಅವರನ್ನು ಭಯಪಡಬೇಕಾದರೆ, ಅವರ ಸೇವೆ ಹಾಗೂ ಅನುಕರಣೆ ಮಾಡಬೇಕಾದರೆ, ಅವರ ಬಳಿ ಏನಿದೆ? ಭೂಮಿ ಮತ್ತು ಆಕಾಶಗಳಲ್ಲಿ ನಮಗೆ ಕಾಣುವ ಮತ್ತು ನಾವು ಒಂದಲ್ಲೊಂದು ರೀತಿಯಲ್ಲಿ ತಿಳಿದಿರುವ ಪೈಕಿ ಆಶ್ರಿತವಲ್ಲದ ಮತ್ತು ಅವನತಿ ಹೊಂದದಿರುವ ವಸ್ತು ಯಾವುದೂ ಇಲ್ಲ. ವಸ್ತುಸ್ಥಿತಿ ಹೀಗಿರುವಾಗ ಇವುಗಳ ಪೈಕಿ ಯಾವುದೇ ಆದರೂ 'ಪ್ರಭು' ಆಗುವುದು ಹೇಗೆ? ಇವುಗಳ ಪೈಕಿ ಯಾರೊಬ್ಬರೂ ನನ್ನನ್ನು ಉಂಟು ಮಾಡಿದ್ದಲ್ಲ ಮತ್ತು ಇವರ ಕೈಯಲ್ಲಿ ನನ್ನ ಸಾವು-ಬದುಕು, ಲಾಭ-ನಷ್ಟ, ಜೀವನಾಧಾರ ಮತ್ತು ಇಷ್ಟಾರ್ಥ ಸಿದ್ಧಿಯ ಬೀಗದ ಕೈಯೂ ಇಲ್ಲ. ಹೀಗಿರುವಾಗ ನಾನೇಕೆ ಇವರನ್ನು ಪಾಲಕ ಪ್ರಭುವೆನ್ನಲಿ? ನಾನೇಕೆ ಇವರ ಮುಂದೆ ದಾಸ್ಯ-ಆರಾಧನೆಯೊಂದಿಗೆ ತಲೆಬಾಗಲಿ? ಸರ್ವರನ್ನೂ ಸೃಷ್ಟಿಸಿದವನು, ಎಲ್ಲರ ಆಶ್ರಯದಾತನು, ಜೀವನ-ಮರಣ ಮತ್ತು ಲಾಭ-ನಷ್ಟಗಳ ಅಧಿಕಾರವುಳ್ಳವನು ಮಾತ್ರ ನನ್ನ ಪ್ರಭುವಾಗ ಬಲ್ಲನು ಎಂದು ಕಂಡುಕೊಂಡು ತಮ್ಮ ಸಮುದಾಯವು ಪೂಜಿಸುವ ಆರಾಧ್ಯ ವಸ್ತುಗಳನ್ನು ತಾನೆಂದೂ ಪೂಜಿಸಲಾರೆನೆಂದು ಖಡಾಖಂಡಿತವಾಗಿ ನಿರ್ಧರಿಸಿಕೊಂಡರು. ಈ ನಿರ್ಧಾರಕ್ಕೆ ಬಂದ ಬಳಿಕ ಅವರು,

إِنِّي بَرِيءٌ مِّمَّا تُشْرِكُونَ

"ನೀವು ದೇವತ್ವದಲ್ಲಿ ಭಾಗೀದಾರರನ್ನಾಗಿ ಮಾಡಿ ಕೊಂಡವುಗಳಿಗೂ ನನಗೂ ಯಾವ ಸಂಬಂಧವೂ ಇಲ್ಲ." (ಪವಿತ್ರ ಕುರ್‌ಆನ್, 6:78)

إِنِّي وَجَّهْتُ وَجْهِيَ لِلَّذِي فَطَرَ السَّمَاوَاتِ وَالْأَرْضَ حَنِيفًا وَمَا أَنَا مِنَ الْمُشْرِكِينَ

ನಾನು ಎಲ್ಲರನ್ನೂ ಉಪೇಕ್ಷಿಸಿ ನನ್ನ ಆರಾಧನೆಗಳನ್ನು ಭೂಮಿ-ಆಕಾಶಗಳ ಸೃಷ್ಟಿಕರ್ತನಿಗೆ ಕಾಯ್ದಿರಿಸಿಕೊಂಡಿದ್ದೇನೆ. ನಾನು ಎಷ್ಟಕ್ಕೂ ಶಿರ್ಕ್ (ಬಹುದೇವಾರ್ಚನೆ) ಮಾಡುವವನಲ್ಲ" (ಪವಿತ್ರ ಕುರ್‌ಆನ್, 6:79) ಎಂದು ಘಂಟಾಘೋಷವಾಗಿ ಸಾರಿಬಿಟ್ಟರು.

ಸಂಕಷ್ಟಗಳ ಸರಮಾಲೆ

ಈ ಘೋಷಣೆಯ ಬಳಿಕ ಹ. ಇಬ್ರಾಹೀಮ್‌ರವರ(ಅ) ಮೇಲೆ ಸಂಕಷ್ಟಗಳ ಸರಮಾಲೆಯೇ ಎರಗಿಬಿತ್ತು. ತಂದೆಯು, "ನಿನ್ನನ್ನು ನನ್ನ ಸೊತ್ತಿನಿಂದ ಹಕ್ಕುಭ್ರಷ್ಟನನ್ನಾಗಿ ಮಾಡಿ ಮನೆಯಿಂದ ಹೊರಕ್ಕಟ್ಟಿ ಬಿಡುವೆನೆಂದನು." ಸಮುದಾಯದವರು, "ನಿನಗೆ ನಾವು ಯಾವ ರಕ್ಷಣೆಯನ್ನೂ ನೀಡಲಾರೆವೆಂದರು." ಸರಕಾರವೂ ಅವರನ್ನು ಬೆನ್ನಟ್ಟಲಾರಂಭಿಸಿತು. ಅರಸನ ಮುಂದೆ ದಾವೆ ಹೂಡಲಾಯಿತು. ಆದರೆ ಈ ಹೋರಾಟದಲ್ಲಿ ಏಕಾಂಗಿಯಾಗಿ ಸತ್ಯದಲ್ಲೇ ಸ್ಥಿರವಾಗಿ ನಿಂತರು. "ಅಪ್ಪಾ! ನನಗೆ ಲಭಿಸಿದ ದಿವ್ಯಜ್ಞಾನ ನಿಮಗೊದಗಲಿಲ್ಲ. ಆದುದರಿಂದ ನಾನು ನಿಮ್ಮನ್ನನುಸರಿಸುವ ಬದಲಿಗೆ ನೀವು ನನ್ನನ್ನನುಸರಿಸಬೇಕಾಗುತ್ತದೆ" ಎಂದು ತಂದೆಗೆ ವಿನಯಪೂರ್ವಕ ಉತ್ತರ ನೀಡಿದರು. ಸಮುದಾಯದ ಬೆದರಿಕೆಗೆ ಪ್ರತ್ಯುತ್ತರವಾಗಿ ಅವರ ವಿಗ್ರಹಗಳನ್ನು ತಮ್ಮ ಸ್ವಂತ ಕೈಗಳಿಂದ ಒಡೆದು ಚೂರು ಚೂರು ಮಾಡಿ, ಅವರು ಪೂಜಿಸುತ್ತಿರುವವುಗಳು ಸ್ವತಃ ಎಷ್ಟು ಅಸಹಾಯಕವಾಗಿವೆ ಎಂಬುದನ್ನು ಸಾಬೀತು ಪಡಿಸಿಕೊಟ್ಟರು. ಚಕ್ರವರ್ತಿಯ ತುಂಬಿದ ಆಸ್ಥಾನಕ್ಕೆ ಹೋಗಿ, ನೀನು ನನ್ನ ಪ್ರಭುವಲ್ಲ, ಯಾರ ಕೈಯಲ್ಲಿ ನನ್ನ ಮತ್ತು ನಿನ್ನ ಜೀವನ - ಮರಣಗಳಿವೆಯೋ ಯಾರ ನಿಯಮ ಬಂಧನದಲ್ಲಿ ಸೂರ್ಯನು ಕೂಡಾ ಬಂಧಿತನಾಗಿರುತ್ತಾನೋ ಅವನೇ ನನ್ನ ಪ್ರಭುವೆಂದರು. ಕೊನೆಗೆ ಅವರನ್ನು ಜೀವಂತ ಸುಟ್ಟು ಹಾಕಬೇಕೆಂಬ ತೀರ್ಪು ಚಕ್ರವರ್ತಿಯ ಆಸ್ಥಾನದಿಂದ ಹೊರಬಿತ್ತು. ಆದರೆ, ಕೇವಲ ಏಕೈಕ ದೇವನ ಮೇಲಿನ ವಿಶ್ವಾಸದಲ್ಲಿ ಪರ್ವತಕ್ಕಿಂತಲೂ ನಿಶ್ಚಲನಾದ ಆ ಮಹಾನ್ ವ್ಯಕ್ತಿ ಇಂತಹ ಕಠೋರ ಶಿಕ್ಷೆಯನ್ನು ಅನುಭವಿಸಲಿಕ್ಕೂ ಸನ್ನದ್ಧವಾಗಿಬಿಟ್ಟರು. ಅಲ್ಲಾಹನು ತನ್ನ ಮಹಾ ಮಹಿಮೆಯಿಂದ ಅವರನ್ನು ಅಗ್ನಿಯಲ್ಲಿ ಸುಟ್ಟು ಹೋಗದಂತೆ ರಕ್ಷಿಸಿದನು. ಅನಂತರ ಅವರು ತಮ್ಮ ಮನೆಯವರನ್ನೂ ನೆಂಟರಿಷ್ಟರನ್ನೂ ಸಮುದಾಯವನ್ನೂ ಸ್ವದೇಶವನ್ನೂ ಸರ್ವಸ್ವವನ್ನೂ ತ್ಯಜಿಸಿ ಕೇವಲ ತಮ್ಮ ಪತ್ನಿ ಮತ್ತು ಓರ್ವ ಭ್ರಾತೃಜನೊಂದಿಗೆ ದೇಶಾಂತರ ವಾಸಿಯಾಗಲು ಹೊರಟೇ ಬಿಟ್ಟರು. ಯಾರಿಗಾಗಿ ಪುರೋಹಿತ ಪೀಠವು ಸಿದ್ಧವಿತ್ತೋ ಯಾರು ಆ ಪೀಠದಲ್ಲಿ ಕುಳಿತು ತಮ್ಮ ಜನಾಂಗದ ಮಹಾ ಪುರೋಹಿತನಾಗಬಹುದಿತ್ತೋ ಯಾರು ತಮ್ಮ ಸಂತತಿಯನ್ನೂ ಅದೇ ಪೌರೋಹಿತ್ಯದ ಪೀಠದಲ್ಲಿ ಲೌಕಿಕ ಸುಖಭೋಗಾಸಕ್ತರಾಗಿ ಜೀವಿಸಲು ಬಿಟ್ಟು ಹೋಗಬಹುದಿತ್ತೋ ಅಂಥವರು ತಮಗಾಗಿ ಮತ್ತು ತಮ್ಮ ಸಂತತಿಗಾಗಿ ದೇಶಭ್ರಷ್ಟ ಹಾಗೂ ದಾರಿದ್ರ್ಯದ ಜೀವನವನ್ನೇ ಆಯ್ದುಕೊಂಡರು. ಏಕೆಂದರೆ ಜಗತ್ತನ್ನು ಹುಸಿ ದೇವರುಗಳ

ಜಾಲದಲ್ಲಿ ಸಿಲುಕಿಸಿ, ಸ್ವತಃ ಸುಖಭೋಗಗಳನ್ನು ಪಡೆಯಲು ಅವರಿಗೆ ಇಷ್ಟವಿರಲಿಲ್ಲ. ಅದರ ಬದಲಿಗೆ ಜನತೆಗೆ ಏಕದೇವೋಪಾಸನೆಯ ಕರೆ ನೀಡಿ, ಅದರ ಫಲವಾಗಿ ಎಲ್ಲೂ ನೆಮ್ಮದಿ ಸಿಗದೇ ಹೋದರೂ ಅದೇ ಅವರಿಗೆ ಮೆಚ್ಚುಗೆಯಾಗಿತ್ತು.

ಹಿಜ್ರತ್

ಹ. ಇಬ್ರಾಹೀಮ್‌ರವರು(ಅ) ಸ್ವದೇಶದಿಂದ ಹೊರಟು ಸಿರಿಯಾ, ಫೆಲೆಸ್ತೀನ್, ಈಜಿಪ್ಟ್ ಮತ್ತು ಅರಬ್ ದೇಶಗಳಲ್ಲಿ ಅಲೆದಾಡುತ್ತಲಿದ್ದರು. ಈ ದೇಶಾಂತರವಾಸದಲ್ಲಿ ಅವರ ಮೇಲೆ ಏನೆಲ್ಲಾ ವಿಪತ್ತುಗಳು ಬಂದೆರಗಿದುವೆಂಬುದನ್ನು ಅಲ್ಲಾಹನೇ ಬಲ್ಲ. ಹೊರಡುವಾಗ ಕೈಯಲ್ಲಿ ಚಿಕ್ಕಾಸೂ ಇರಲಿಲ್ಲ. ಹೊರಟ ಮೇಲೂ ಹೊಟ್ಟೆ ಹೊರೆಯಲಿಕ್ಕಾಗಿ ಅಲೆದಾಟ ನಡೆಸಲಿಲ್ಲ. ಜನರನ್ನು ದೇವೇತರರ ದಾಸ್ಯ-ಆರಾಧನೆಯಿಂದ ತಪ್ಪಿಸಿ ಕೇವಲ ಏಕದೇವನ ದಾಸರನ್ನಾಗಿ ಮಾಡುವ ಚಿಂತೆಯಲ್ಲೇ ಹಗಲಿರುಳುಗಳನ್ನು ಕಳೆಯುತ್ತಿದ್ದರು. ಈ ಮನೋವೃತ್ತಿಯನ್ನು ಸ್ವಂತ ಪಿತನೂ ಜನಾಂಗವೂ ಸಹಿಸದಿರುವಾಗ ಇತರರು ಸಹಿಸುವುದಾದರೂ ಹೇಗೆ? ಇಂತಹವರನ್ನು ಯಾರು ಸ್ವಾಗತಿಸುತ್ತಾರೆ. ಹೋದ ಹೋದಲ್ಲೆಲ್ಲ ಅದೇ ಪೌರೋಹಿತ್ಯ ಮತ್ತು ಸ್ವಯಂ ದೇವರೆನ್ನುವ ಅರಸರ ಮತ್ತು ಅವರ ಮಿಥ್ಯ ದೇವಜಾಲದಲ್ಲಿ ಸಿಲುಕಿ ಬಿದ್ದಿದ್ದ ಅಜ್ಞಾನಿ ಜನಸಾಮಾನ್ಯರು ಮಾತ್ರ ಕಂಡು ಬರುತ್ತಿದ್ದರು. ಇಂಥವರ ನಡುವೆ ಕೇವಲ ಏಕದೇವನ ಹೊರತು ಇನ್ನಾರನ್ನೂ ಇನ್ನಾವುದನ್ನೂ ದೇವನೆನ್ನಲು ಎಷ್ಟಕ್ಕೂ ಸಿದ್ಧನಾಗದವನು, ಇತರರೊಡನೆ ಏಕೈಕ ದೇವನ ಹೊರತು ನಿಮ್ಮ ಪ್ರಭು, ನಿಮ್ಮ ಒಡೆಯ, ಇನ್ನೊಬ್ಬನಿಲ್ಲವೆಂದೂ, ಉಳಿದ ಸಕಲ ದೇವತ್ವ ಹಾಗೂ ಮಾಲಿಕತ್ವಗಳನ್ನು ಬುಡಮೇಲು ಮಾಡಿಬಿಡಿರೆಂದೂ, ಕೇವಲ ಆ ಏಕೈಕ ದೇವನ ಮಾತ್ರ ದಾಸರಾಗಿರಬೇಕೆಂದು ಬೋಧಿಸುವಾತನು ನೆಮ್ಮದಿಯಿಂದ ಕೂತಿರುವುದಾದರೂ ಹೇಗೆ? ಆದುದರಿಂದ ಹ. ಇಬ್ರಾಹೀಮ್‌ರವರಿಗೆ(ಅ) ಎಲ್ಲೂ ನೆಲೆ ಸಿಗಲಿಲ್ಲ. ಅನೇಕ ವರ್ಷಗಳ ತನಕವೂ ಮನೆಮಾರಿಲ್ಲದೆ ಅಲೆದಾಡಿದರು. ಒಮ್ಮೆ ಕನ್‌ಆನಿನ ಹಳ್ಳಿಗಳಲ್ಲಿದ್ದರೆ ಇನ್ನೊಮ್ಮೆ ಈಜಿಪ್ಟ್ ದೇಶದಲ್ಲಿ, ಮತ್ತೊಮ್ಮೆ ಅರೇಬಿಯಾದ ಮರಳುಗಾಡಲ್ಲಿ ಕಂಡುಬರುತ್ತಿದ್ದರು. ಹೀಗೆ ಯೌವನಾವಸ್ಥೆ ದಾಟಿತು. ತಲೆಗೂದಲು ಹಣ್ಣಾಯಿತು.

ಮಕ್ಕಳು ಮತ್ತವರ ಪರಿಪಾಲನೆ

ತೊಂಭತ್ತು ವರ್ಷ ಪ್ರಾಯವಾಗಲು ಇನ್ನು ನಾಲ್ಕು ವರ್ಷಗಳು ಮಾತ್ರ ಉಳಿದಿದ್ದುವು. ಈ ವೃದ್ಧಾಪ್ಯದಲ್ಲಿ ಸಂತತಿಯಿಂದ ನಿರಾಶರಾಗಿದ್ದಾಗ ಅಲ್ಲಾಹನು ಅವರಿಗೆ ಸಂತತಿಯನ್ನು ದಯಪಾಲಿಸಿದನು. ಇಷ್ಟರ ತನಕ ಮನೆಮಾರಿಲ್ಲದೆ ಅಲೆಮಾರಿ ಜೀವನ ನಡೆಸಿದ್ದಾಯಿತು. ಕನಿಷ್ಠಪಕ್ಷ ಮುಂದೆ ತನ್ನ ಮಕ್ಕಳಿಗಾದರೂ ಸಂಪಾದನೆಯ ಮಾರ್ಗವನ್ನು ತೋರಿಸುತ್ತೇನೆ- ಅವರನ್ನಾದರೂ ಯಾವುದಾದರೊಂದು ಕೆಲಸಕ್ಕೆ ಹಚ್ಚಿ, ಜೀವನ ಸಾಗಿಸಲು ಒಂದು ಆಧಾರ

ಸಿಗುವಂತೆ ಮಾಡಿಕೊಳ್ಳುತ್ತೇನೆ ಎಂಬ ಚಿಂತೆ ಒಂದಿಷ್ಟಾದರೂ ಅವರಿಗಾಯಿತೇ? ಇಲ್ಲ; ಈ ವೃದ್ಧ ಆಜ್ಞಾಪಾಲಕನಿಗಿದ್ದುದು ಒಂದೇ ಒಂದು ಚಿಂತೆ. ಯಾವ ಸಿದ್ಧಾಂತದ ಪ್ರಚಾರಕ್ಕಾಗಿ ತನ್ನ ಇಡೀ ಜೀವಮಾನವನ್ನು ಸವೆಸಿದನೋ ಅದನ್ನು ತನ್ನ ಮರಣಾನಂತರವೂ ಪ್ರಚಾರಪಡಿಸುತ್ತಿರಬೇಕೆಂಬ ಏಕೈಕ ಚಿಂತೆ. ಇದಕ್ಕಾಗಿ ಅಲ್ಲಾಹನೊಡನೆ ಸಂತತಿಯನ್ನು ಬಯಸಿದ್ದರು. ಅಲ್ಲಾಹನು ಸಂತತಿ ಕೊಟ್ಟೊಡನೆ ತಮ್ಮ ಆ ಕಾರ್ಯವನ್ನು ಮುಂದುವರಿಸಲಿಕ್ಕಾಗಿ ಅದನ್ನು ಅಣಿಗೊಳಿಸತೊಡಗಿದರು. ಆ ಸಿದ್ಧಪುರುಷನ ಇಡೀ ಜೀವನವು ಒಬ್ಬ ಯಥಾರ್ಥ ಮುಸ್ಲಿಮನ ಜೀವನವಾಗಿತ್ತು. ಆರಂಭದಲ್ಲಿ ಬುದ್ಧಿಯರಿತ ಬಳಿಕ ಅವರು ತಮ್ಮ ದೇವನನ್ನು ಅರಿತಾಗ ದೇವನು ಅವರೊಡನೆ أَسْلِمْ 'ಅಸ್ಲಿಮ್' (ಇಸ್ಲಾಮ್ ಸ್ವೀಕರಿಸು, ಆತ್ಮ ಸಮರ್ಪಣೆ ಮಾಡು, ನನ್ನವನಾಗಿರು) ಎಂದಿದ್ದನು. ಅದಕ್ಕುತ್ತರವಾಗಿ ಅವರು أَسْلَمْتُ لِرَبِّ الْعَالَمِينَ 'ಅಸ್ಲಮ್ತು ಲಿರಬ್ಬಿಲ್ ಆಲಮೀನ್' (ನಾನು ಇಸ್ಲಾಮನ್ನು ಸ್ವೀಕರಿಸಿದೆನು. ನಾನು ನನ್ನ ಪಾಲಕ ಪ್ರಭುವಿನವನಾದೆನು. ಆತನಿಗೆ ಆತ್ಮ ಸಮರ್ಪಣೆ ಮಾಡಿದೆನು) ಎಂದರು. ಈ ಕರಾರು ಮತ್ತು ವಾಗ್ದಾನಗಳನ್ನು ಆ ಸತ್ಯವಾದಿಯು ತಮ್ಮ ಜೀವಮಾನವಿಡೀ ಸಂಪೂರ್ಣ ಶ್ರದ್ಧೆಯಿಂದ ಪಾಲಿಸಿ ತೋರಿಸಿಕೊಟ್ಟರು. ಅನೇಕ ಶತಮಾನಗಳಿಂದ ಆಚರಿಸಿಕೊಂಡು ಬಂದಿದ್ದ ಹಿರಿಯರ ಮತ ಕಟ್ಟಳೆಗಳನ್ನೂ ವಿಶ್ವಾಸಗಳನ್ನೂ ತ್ಯಜಿಸಿದರು. ಮಠಾಧಿಪತ್ಯವನ್ನು ಸ್ವೀಕರಿಸಿಕೊಳ್ಳುವುದರಿಂದ ಲಭಿಸಬಹುದಾಗಿದ್ದ ಸಕಲ ಲೌಕಿಕ ಲಾಭಗಳನ್ನು ತ್ಯಾಗ ಮಾಡಿದರು. ಸ್ವಂತ ಕುಟುಂಬವನ್ನೂ ಸಮುದಾಯವನ್ನೂ ಸ್ವದೇಶವನ್ನೂ ಬಿಟ್ಟುಬಿಟ್ಟರು. ತಮ್ಮ ಸ್ವಂತ ದೇಹವನ್ನೇ ಅಗ್ನಿಗಾಹುತಿ ಮಾಡಬೇಕಾದಂತಹ ಗಂಡಾಂತರ ಬಂದಾಗಲೂ ಎದೆಗುಂದಲಿಲ್ಲ. ದೇಶಾಂತರ ವಾಸದ ಕಷ್ಟ ಕಾರ್ಪಣ್ಯಗಳನ್ನು ಸಹಿಸಿದರು. ಊರೂರು ಅಲೆದರು. ಜೀವಮಾನದ ಪ್ರತಿಕ್ಷಣವನ್ನೂ ಸರ್ವಲೋಕಪಾಲಕನ ದಾಸ್ಯ-ಅನುಸರಣೆಯಲ್ಲಿಯೂ ಆತನ ದೀನ್‌ನ (ಧರ್ಮ) ಪ್ರಚಾರ ಕಾರ್ಯದಲ್ಲಿಯೂ ವ್ಯಯಿಸಿದರು. ವೃದ್ಧಾಪ್ಯದಲ್ಲಿ ಸಂತತಿ ಪ್ರಾಪ್ತವಾದಾಗ ಅದಕ್ಕೂ ಇದೇ ದೀನ್ ಮತ್ತು ಇದೇ ಕಾರ್ಯವನ್ನು ಆಯ್ದುಕೊಟ್ಟರು.

ಅತ್ಯಂತ ದೊಡ್ಡ ಪರೀಕ್ಷೆ

ಆದರೆ ಈ ಎಲ್ಲಾ ಪರೀಕ್ಷೆಗಳ ನಂತರ ಕಟ್ಟಕಡೆಯ ಪರೀಕ್ಷೆಯೊಂದು ಉಳಿದು ಹೋಗಿತ್ತು. ಅದರ ಹೊರತು ಈ ವ್ಯಕ್ತಿಯು ಸಕಲ ವಸ್ತುಗಳಿಗಿಂತಲೂ ಅತ್ಯಧಿಕವಾಗಿ ವಿಶ್ವಪಾಲಕನ ಮೇಲೆ ವ್ಯಾಮೋಹವಿರಿಸಿದವರೆಂಬುದು ಸಾಬೀತಾಗುತ್ತಿರಲಿಲ್ಲ. ವೃದ್ಧಾಪ್ಯದಲ್ಲಿ ಸಂಪೂರ್ಣ ನಿರಾಶೆಯ ಬಳಿಕ ಅವರಿಗೆ ಸಂತತಿ ಪ್ರಾಪ್ತವಾಗಿತ್ತು. ಆ ಏಕಮಾತ್ರ ಮುದ್ದು ಮಗನನ್ನು ವಿಶ್ವಪಾಲಕನಿಗಾಗಿ ಅವನು ಬಲಿಯರ್ಪಿಸುವನೋ ಇಲ್ಲವೋ ಎಂಬ ಪರೀಕ್ಷೆಯಾಗಿತ್ತದು. ಆ ಪರೀಕ್ಷೆಯೂ ನಡೆದು ಹೋಯಿತು. ಸೂಚನೆ ಸಿಕ್ಕಿದೊಡನೆ ಅವರು ತಮ್ಮ ಮಗನನ್ನು ಸ್ವಹಸ್ತದಿಂದ ಬಲಿಕೊಡಲು

ಸಿದ್ಧರಾಗಿಯೇ ಬಿಟ್ಟರು. ಆಗ, "ನೀನು ಮುಸ್ಲಿಮನಾಗಿರುತ್ತೀಯೆಂಬ ವಾದವನ್ನು ಈಗ ಸಂಪೂರ್ಣವಾಗಿ ಸಿದ್ಧಪಡಿಸಿಕೊಟ್ಟೆ. ನೀನೀಗ ಸಮಸ್ತ ಲೋಕದ ಜನನಾಯಕನಾಗಲು ಅರ್ಹನಾಗಿರುತ್ತಿ" ಎಂಬ ತೀರ್ಪು ಬಂತು. ಇದನ್ನೇ ಕುರ್‌ಆನಿನಲ್ಲಿ ಹೀಗೆ ವಿವರಿಸಲಾಗಿದೆ:

ಲೋಕನಾಯಕತ್ವದ ಸ್ಥಾನ

وَإِذِ ابْتَلَىٰ إِبْرَاهِيمَ رَبُّهُ بِكَلِمَاتٍ فَأَتَمَّهُنَّ ۖ قَالَ إِنِّي جَاعِلُكَ لِلنَّاسِ إِمَامًا ۖ قَالَ وَمِن ذُرِّيَّتِي ۖ قَالَ لَا يَنَالُ عَهْدِي الظَّالِمِينَ ﴿١٢٤﴾

"ಇಬ್ರಾಹೀಮರನ್ನು ಅವರ ಪ್ರಭುವು ಕೆಲವು ವಿಷಯಗಳಲ್ಲಿ ಪರೀಕ್ಷಿಸಿದ ಹಾಗೂ ಅವರು ಅವುಗಳಲ್ಲೆಲ್ಲಾ ಉತ್ತೀರ್ಣರಾದ ಸಂದರ್ಭವನ್ನು ಸ್ಮರಿಸಿರಿ. ಆಗ ಅಲ್ಲಾಹನು ನಿಮ್ಮನ್ನು ಸರ್ವ ಜನರ ನಾಯಕನನ್ನಾಗಿ ಮಾಡುವವನಿದ್ದೇನೆ" ಎಂದನು. ಇಬ್ರಾಹೀಮರು, "ನನ್ನ ಸಂತಾನ ಗಳಿಗೂ ಇದೇ ವಾಗ್ದಾನವೇ?" ಎಂದು ಭಿನ್ನವಿಸಿದರು. ಆಗ ಅಲ್ಲಾಹನು, "ನನ್ನ ವಾಗ್ದಾನವು ಅಕ್ರಮಿಗಳಿಗೆ ಅನ್ವಯಿಸುವುದಿಲ್ಲ" ಎಂದುತ್ತರಿಸಿದನು. (ಅಲ್‌ಬಕರಃ: 124)

ಹೀಗೆ ಹ. ಇಬ್ರಾಹೀಮ್‌ರಿಗೆ(ಅ) ಲೋಕನಾಯಕತ್ವ ವಹಿಸಿಕೊಡಲಾಯಿತು. ಅವರು ಅಂತಾರಾಷ್ಟ್ರೀಯ ಇಸ್ಲಾಮೀ ಆಂದೋಲನದ ನಾಯಕರಾಗಿ ನೇಮಕವಾದರು. ಆಗ ಅವರಿಗೆ ಇತರ ಕಡೆಗಳಲ್ಲೂ ಈ ಆಂದೋಲನ ಪ್ರಸಾರದ ನಾಯಕತ್ವ ವಹಿಸಿ ಕಾರ್ಯ ನಿರ್ವಹಿಸಲು ಅವರ ಸಹಾಯಕರೆಂಬ ನೆಲೆಯಲ್ಲಿ ಅರ್ಹರಾದವರ ಅಗತ್ಯ ಬಿದ್ದಿತು. ಇದಕ್ಕಾಗಿ ಮೂವರ ಸಹಕಾರವೂ ಸಿಕ್ಕಿತು. ಒಬ್ಬರು ಅವರ ಭ್ರಾತೃಜರಾದ ಹ. ಲೂತ್(ಅ), ಇನ್ನೊಬ್ಬರು ಅವರ ಸುಪುತ್ರ ಹ. ಇಸ್ಮಾಈಲ್(ಅ). ಅಲ್ಲಾಹನು ನಿಮ್ಮ ಆತ್ಮಾತ್ಯಾಗ ಬೇಕೆಂದಿದ್ದಾನೆಂದು ತಿಳಿಸಿದಾಗ ಹಿಂದು ಮುಂದು ನೋಡದೆ ಆತ್ಮಸಂತೋಷದಿಂದ ತಮ್ಮ ಶಿರಸ್ಸನ್ನು ಕತ್ತಿಯ ಕೆಳಗಿಡಲು ಸಿದ್ಧರಾಗಿದ್ದವರು ಇವರೇ. ಮೂರನೆಯವರು ಅವರ ಕಿರಿಯ ಮಗ ಹ.ಇಸ್‌ಹಾಕ್(ಅ).

ಹ. ಲೂತ್‌ರನ್ನು(ಅ) 'ಸದೂಮ್' ಪ್ರಾಂತ್ಯಕ್ಕೆ ಕಳಿಸಿದರು

ಹ. ಇಬ್ರಾಹೀಮ್‌ರವರು(ಅ) ತಮ್ಮ ಭ್ರಾತೃಜನನ್ನು ಈಗ ಟ್ರಾನ್ಸ್ ಜಾರ್ಡೇನಿಯ ಎಂದು ಕರೆಯಲಾಗುತ್ತಿರುವ 'ಸದೂಮ್' ಪ್ರಾಂತ್ಯಕ್ಕೆ ನೇಮಕ ಮಾಡಿದನು. ಅಲ್ಲಿ ಆ ಕಾಲದ ಅತ್ಯಂತ ದುಷ್ಟ ಜನಾಂಗ ವಾಸಿಸುತ್ತಿತ್ತು. ಆ ಜನಾಂಗವನ್ನು ಸಂಸ್ಕರಿಸಬೇಕಾಗಿತ್ತು. ಅದರೊಂದಿಗೆ ಅದರ ಸುತ್ತಮುತ್ತಲಿನ ಪ್ರದೇಶಗಳ ಮೇಲೂ ಪ್ರಭಾವ ಬೀರಬೇಕಾಗಿತ್ತು. ಏಕೆಂದರೆ ಇರಾನ್, ಇರಾಕ್ ಮತ್ತು ಈಜಿಪ್ಟ್‌ಗಳ ನಡುವೆ ವ್ಯಾಪಾರ ಮಾಡುತ್ತಿದ್ದ ವ್ಯಾಪಾರಿ ತಂಡಗಳು ಆ ಮಾರ್ಗವಾಗಿಯೇ ಸಾಗುತ್ತಿದ್ದುವು. ಅಲ್ಲಿದ್ದುಕೊಂಡು ಉಭಯ ಕಡೆಗಳಲ್ಲೂ ತಬ್ಲೀಗ್ (ಧರ್ಮಾಹ್ವಾನ) ಕಾರ್ಯವನ್ನು ಜಾರಿಯಲ್ಲಿಡಬಹುದಾಗಿತ್ತು.

ಹ. ಇಸ್‌ಹಾಕ್‌ರನ್ನು(ಅ) 'ಫೆಲಸ್ತೀನ್' ಪ್ರಾಂತ್ಯಕ್ಕೆ ಕಳಿಸಿದರು

ಕಿರಿಯ ಪುತ್ರ ಹ. ಇಸ್‌ಹಾಕ್‌ರನ್ನು(ಅ) 'ಕನ್‌ಆನ್' (ಈಗಿನ ಫೆಲಸ್ತೀನ್) ಪ್ರಾಂತ್ಯದಲ್ಲಿ ನೆಲೆಸುವಂತೆ ಮಾಡಿದರು. ಇದು ಸಿರಿಯಾ ಮತ್ತು ಈಜಿಪ್ಟ್ ದೇಶಗಳ ನಡುವಿನಲ್ಲಿದೆ. ಇದು ಕರಾವಳಿಯಲ್ಲಿರುವುದರಿಂದ ಇತರ ದೇಶಗಳ ಮೇಲೂ ಇಲ್ಲಿಂದಲೇ ಪ್ರಭಾವ ಬೀರಲು ಸಾಧ್ಯವಿತ್ತು. ಇಲ್ಲಿಂದಲೇ ಹ. ಇಸ್‌ಹಾಕ್‌ರವರ(ಅ) ಪುತ್ರರಾದ ಹ. ಯಅ್‌ಕೂಬ್(ಅ) (ಅವರ ಹೆಸರು ಇಸ್ರಾಈಲ್ ಎಂದೂ ಇತ್ತು) ಮತ್ತು ಮೊಮ್ಮಗ ಹ. ಯೂಸುಫ್‌ರ(ಅ) ಮೂಲಕ ಇಸ್ಲಾಮೀ ಆಂದೋಲನವು ಈಜಿಪ್ಟನ್ನು ತಲಪಿತು.

ಹ. ಇಸ್ಮಾಈಲ್‌ರನ್ನು(ಅ) 'ಮಕ್ಕಾ'ದಲ್ಲಿ ನೇಮಿಸಿದರು

ಹಿರಿಯ ಪುತ್ರ ಹ. ಇಸ್ಮಾಈಲ್‌ರನ್ನು(ಅ) ಮಕ್ಕಾದಲ್ಲಿ ನೇಮಿಸಿ, ತಾವೂ ಅವರ ಜೊತೆಯಲ್ಲಿದ್ದು ಅರೇಬಿಯಾದ ಮೂಲೆಮೂಲೆಗಳಿಗೂ ಈ ಸಂದೇಶವನ್ನು ಪ್ರಸಾರ ಮಾಡಿದರು.

ಕಅಬಾ ಭವನದ ನಿರ್ಮಾಣ

ತಂದೆ ಮಗ ಇಬ್ಬರೂ ಸೇರಿ ಇಲ್ಲೇ 'ಕಅಬಾ' ಎಂದು ಕರೆಯಲ್ಪಡುತ್ತಿರುವ ಇಸ್ಲಾಮೀ ಆಂದೋಲನದ ಕೇಂದ್ರ ಸ್ಥಾನವನ್ನು ನಿರ್ಮಿಸಿದರು. ಅದೀಗ ಅಖಿಲ ಜಗತ್ತಿನಲ್ಲೇ ಖ್ಯಾತಿ ಪಡೆದಿದೆ. ಈ ಕೇಂದ್ರ ಸ್ಥಾನದ ಆಯ್ಕೆಯನ್ನು ಸ್ವಂತ ಅಲ್ಲಾಹನೇ ಮಾಡಿದನು. ಅದಕ್ಕೆ ಬೇಕಾದ ಸ್ಥಾನವನ್ನೂ ಆತನೇ ಸೂಚಿಸಿದನು. ಈ ಕಟ್ಟಡವು ಸಾಮಾನ್ಯ ಮಸೀದಿಗಳಿರುವಂತೆ ಕೇವಲ ಆರಾಧನಾಲಯ ಮಾತ್ರವಲ್ಲ, ಅದನ್ನು ಜಾಗತಿಕ ಇಸ್ಲಾಮೀ ಆಂದೋಲನದ ಪ್ರಚಾರ ಕೇಂದ್ರವನ್ನಾಗಿ ಆರಂಭದಿಂದಲೇ ಮಾಡಲಾಗಿತ್ತು. ಏಕದೇವ ವಿಶ್ವಾಸಿಗಳೆಲ್ಲಾ ಆಕರ್ಷಿತರಾಗಿ ಇಲ್ಲಿ ಒಟ್ಟು ಸೇರಿ, ಒಟ್ಟಾಗಿ ಆರಾಧನೆ ನಡೆಸುವ ಉದ್ದೇಶವನ್ನಿರಿಸಲಾಗಿತ್ತು. ಇಲ್ಲಿಂದ ಇಸ್ಲಾಮಿನ ಈ ಸಂದೇಶವನ್ನು ಪಡೆದುಕೊಂಡು ಪುನಃ ತಂತಮ್ಮ ದೇಶಗಳಿಗೆ ಹಿಂದಿರುಗ ಬೇಕು. ಈ ಮಹಾ ಸಮ್ಮೇಳನವನ್ನೇ 'ಹಜ್ಜ್' ಎಂದು ಕರೆಯಲಾಗಿದೆ. ಈ ಕೇಂದ್ರ ಸ್ಥಾನದ ನಿರ್ಮಾಣ ಹೇಗಾಯಿತು? ಎಂತಹ ಭಾವ ಮತ್ತು ಯಾವ ಪ್ರಾರ್ಥನೆಗಳೊಂದಿಗೆ ತಂದೆ ಮಗ ಇಬ್ಬರೂ ಈ ಕಟ್ಟಡದ ಗೋಡೆಗಳನ್ನು ಕಟ್ಟಿದರು. 'ಹಜ್ಜ್'ನ ಆರಂಭ ಹೇಗಾಯಿತು ಎಂಬುದರ ವಿವರಗಳು ಕುರ್‌ಆನಿನಲ್ಲಿ ಹೀಗೆ ಬಂದಿವೆ:

إِنَّ أَوَّلَ بَيْتٍ وُضِعَ لِلنَّاسِ لَلَّذِي بِبَكَّةَ مُبَارَكًا وَهُدًى لِّلْعَالَمِينَ ﴿٩٦﴾

فِيهِ آيَاتٌ بَيِّنَاتٌ مَّقَامُ إِبْرَاهِيمَ ۖ وَمَن دَخَلَهُ كَانَ آمِنًا ۗ

"ನಿಶ್ಚಯವಾಗಿಯೂ ಮಾನವರಿಗಾಗಿ ನಿರ್ಮಿಸಲ್ಪಟ್ಟ ಪ್ರಥಮ ಆರಾಧನಾಲಯವು ಮಕ್ಕಾದಲ್ಲಿರುವುದೇ ಆಗಿರುತ್ತದೆ. ಅದಕ್ಕೆ ಶುಭ ಸಮೃದ್ಧಿಗಳನ್ನು ನೀಡಲಾಗಿತ್ತು ಮತ್ತು ಅದು

ಸಮಗ್ರ ಲೋಕದವರಿಗೆ ಸನ್ಮಾರ್ಗದರ್ಶನದ ಕೇಂದ್ರವನ್ನಾಗಿ ಮಾಡಲ್ಪಟ್ಟಿತ್ತು. ಅದರಲ್ಲಿ ಸುವ್ಯಕ್ತ ಕುರುಹುಗಳಿವೆ. 'ಮಕಾಮು ಇಬ್‌ರಾಹೀಮ್' (ಇಬ್‌ರಾಹೀಮರು ದೇವಾರಾಧನೆಗಾಗಿ ನಿಂತ ಸ್ಥಾನ) ಇದೆ ಮತ್ತು ಅದರೊಳಗೆ ಪ್ರವೇಶಗೊಂಡವನು ಸಂರಕ್ಷಣೆ ಹೊಂದಿದನು."

(ಆಲಿ ಇಮ್ರಾನ್: 96-97)

أَوَلَمْ يَرَوْا أَنَّا جَعَلْنَا حَرَمًا آمِنًا وَيُتَخَطَّفُ النَّاسُ مِنْ حَوْلِهِمْ ۚ

"ನಾವು ಒಂದು ಶಾಂತಿಪೂರ್ಣ 'ಹರಮ್' (ಸನ್ಮಾನ್ಯ ಸ್ಥಳ) ಮಾಡಿರುವುದನ್ನು ಇವರು ನೋಡುವುದಿಲ್ಲವೇ? ವಸ್ತುತಃ ಇವರ ಆಸುಪಾಸಿನಲ್ಲಿ ಜನರು ಅಪಹರಿಸಲ್ಪಡುತ್ತಾರೆ. ಹೀಗಿದ್ದೂ ಇವರು ಮಿಥ್ಯದ ಮೇಲೆ ವಿಶ್ವಾಸವಿರಿಸಿ ಅಲ್ಲಾಹನ ಕೊಡುಗೆಯ ಬಗ್ಗೆ ಕೃತಘ್ನರಾಗುತ್ತಾರೆಯೇ? (ಅರಬ್ ದೇಶದಲ್ಲಿ ಎಲ್ಲೆಲ್ಲೂ ಲೂಟಿ, ಕೊಲೆ, ದರೋಡೆ, ಯುದ್ಧಗಳು ತಾಂಡವವಾಡುತ್ತಿರುವಾಗ ಈ 'ಹರಮ್'ನಲ್ಲಿ ಶಾಂತಿ ನೆಲೆಸಿತ್ತು. ಅನಾಗರಿಕ ಹಳ್ಳಿಗನು ಕೂಡ ಅದರ ಮೇರೆಯೊಳಗೆ ತನ್ನ ತಂದೆಯ ಹಂತಕನನ್ನು ಕಂಡರೂ ಅವನ ಮೇಲೆ ಕೈಯೆತ್ತುವ ಸಾಹಸಪಡುತ್ತಿರಲಿಲ್ಲ.)" (ಅಲ್ ಅಂಕಬೂತ್: 67)

ಹ. ಇಬ್ರಾಹೀಮ್‌ರವರ(ಅ) ಪ್ರಾರ್ಥನೆಗಳು

وَإِذْ جَعَلْنَا الْبَيْتَ مَثَابَةً لِّلنَّاسِ وَأَمْنًا ۖ وَاتَّخِذُوا مِن مَّقَامِ إِبْرَاهِيمَ مُصَلًّى ۖ
وَعَهِدْنَا إِلَىٰ إِبْرَاهِيمَ وَإِسْمَاعِيلَ أَن طَهِّرَا بَيْتِيَ لِلطَّائِفِينَ وَالْعَاكِفِينَ وَالرُّكَّعِ السُّجُودِ ﴿١٢٥﴾
وَإِذْ قَالَ إِبْرَاهِيمُ رَبِّ اجْعَلْ هَٰذَا بَلَدًا آمِنًا وَارْزُقْ أَهْلَهُ مِنَ الثَّمَرَاتِ مَنْ آمَنَ
مِنْهُم بِاللَّهِ وَالْيَوْمِ الْآخِرِ ۖ قَالَ وَمَن كَفَرَ فَأُمَتِّعُهُ قَلِيلًا ثُمَّ أَضْطَرُّهُ إِلَىٰ عَذَابِ
النَّارِ ۖ وَبِئْسَ الْمَصِيرُ ﴿١٢٦﴾ وَإِذْ يَرْفَعُ إِبْرَاهِيمُ الْقَوَاعِدَ مِنَ الْبَيْتِ وَإِسْمَاعِيلُ ۖ
رَبَّنَا تَقَبَّلْ مِنَّا ۖ إِنَّكَ أَنتَ السَّمِيعُ الْعَلِيمُ ﴿١٢٧﴾ رَبَّنَا وَاجْعَلْنَا مُسْلِمَيْنِ لَكَ وَمِن
وَمِن ذُرِّيَّتِنَا أُمَّةً مُّسْلِمَةً لَّكَ وَأَرِنَا مَنَاسِكَنَا وَتُبْ عَلَيْنَا ۖ إِنَّكَ أَنتَ التَّوَّابُ
الرَّحِيمُ ﴿١٢٨﴾ رَبَّنَا وَابْعَثْ فِيهِمْ رَسُولًا مِّنْهُمْ يَتْلُو عَلَيْهِمْ آيَاتِكَ وَيُعَلِّمُهُمُ الْكِتَابَ وَالْحِكْمَةَ
وَيُزَكِّيهِمْ ۚ إِنَّكَ أَنتَ الْعَزِيزُ الْحَكِيمُ ﴿١٢٩﴾

"ನಾವು ಆ ಭವನ(ಕಅಬಾ)ವನ್ನು ಜನರಿಗೆ ಕೇಂದ್ರ ಹಾಗೂ ಶಾಂತಿ ಸ್ಥಾನವನ್ನಾಗಿ ನಿಶ್ಚಯಿಸಿದ ಸಂದರ್ಭ(ವನ್ನು ಸ್ಮರಿಸಿರಿ). "ಇಬ್‌ರಾಹೀಮರು ಆರಾಧನೆಗಾಗಿ ನಿಲ್ಲುವ ಸ್ಥಾನವನ್ನು ನೀವು ಸ್ಥಿರವಾದ ನಮಾಝ್‌ನ ತಾಣವನ್ನಾಗಿಸಿಕೊಳ್ಳಿರಿ" ಎಂದು ನಾವು ಜನರಿಗೆ ಆಜ್ಞಾಪಿಸಿದ್ದೆವು. "ನನ್ನ ಈ ಭವನದ ಪ್ರದಕ್ಷಿಣೆ ಮತ್ತು ತಪಶ್ಚರ್ಯೆಗೆ ಬಾಗುವವರಿಗಾಗಿ ಹಾಗೂ ಸಾಷ್ಟಾಂಗ ವೆರಗುವವರಿಗಾಗಿ ನಿರ್ಮಲವಾಗಿರಿಸಿರಿ" ಎಂದು ಇಬ್‌ರಾಹೀಮ್ ಮತ್ತು ಇಸ್ಮಾಈಲರಿಗೆ ತಾಕೀತು ಮಾಡಿದ್ದೆವು. ಇಬ್‌ರಾಹೀಮರು, "ಓ ನನ್ನ ಪ್ರಭೂ! ಈ ನಗರವನ್ನು ಶಾಂತಿಯ ನಗರವನ್ನಾಗಿ ಮಾಡು ಮತ್ತು ಇಲ್ಲಿಯ ನಿವಾಸಿಗಳ ಪೈಕಿ ಅಲ್ಲಾಹ್ ಮತ್ತು ಅಂತಿಮ ದಿನದಲ್ಲಿ ವಿಶ್ವಾಸವಿಡುವವರಿಗೆ ನಾನಾ ಫಲಗಳ ಆಹಾರವನ್ನು ನೀಡು" ಎಂದ ಸಂದರ್ಭ(ವನ್ನು ಸ್ಮರಿಸಿರಿ). ಅವರ ಪ್ರಭುವು, "ನಾನು ಭೂಲೋಕದ ಅಲ್ಪಕಾಲದ ಜೀವನಾಧಾರವನ್ನು ಅವಿಶ್ವಾಸಿಗೂ ಕೊಡುವೆನು. ಆದರೆ ಆ ಮೇಲೆ ಅವನನ್ನು ನರಕಕ್ಕೆ ತಳ್ಳುವೆನು. ಅದು ಅತ್ಯಂತ ನಿಕೃಷ್ಟ ನೆಲೆಯಾಗಿರುತ್ತದೆ" ಎಂದು ಉತ್ತರಿಸಿದನು. ಇಬ್‌ರಾಹೀಮರೂ ಇಸ್ಮಾಈಲರೂ ಆ ಭವನದ ಭಿತ್ತಿಗಳನ್ನೇರಿಸುತ್ತಿರುವಾಗ (ಹೀಗೆ) ಪ್ರಾರ್ಥಿಸುತ್ತಲೇ ಇದ್ದರು-"ಓ ನಮ್ಮ ಪ್ರಭೂ! ನಮ್ಮಿಂದ ಈ ಸೇವೆಯನ್ನು ಸ್ವೀಕರಿಸು; ನಿಶ್ಚಯವಾಗಿಯೂ ನೀನು ಎಲ್ಲವನ್ನೂ ಆಲಿಸುವವನೂ ಎಲ್ಲವನ್ನೂ ತಿಳಿದವನೂ ಆಗಿರುತ್ತೀ. ಓ ಪ್ರಭೂ, ನಮ್ಮಿಬ್ಬರನ್ನು ನಿನ್ನ ಆಜ್ಞಾನುಸಾರಿಗಳಾಗಿ ಮಾಡು. ನಮ್ಮ ಸಂತತಿಯಲ್ಲಿ ನಿನ್ನ ಆಜ್ಞಾನುಸಾರಿಯಾದ ಒಂದು ಸಮುದಾಯವನ್ನು ಎಬ್ಬಿಸು. ನಮಗೆ ನಿನ್ನ ದಾಸ್ಯ-ಆರಾಧನೆಯ ಕ್ರಮಗಳನ್ನು ತೋರಿಸಿಕೊಡು ಮತ್ತು ನಮ್ಮ ಅಪರಾಧಗಳನ್ನು ಕ್ಷಮಿಸು. ನೀನು ಮಹಾ ಕ್ಷಮಾದಾನಿಯೂ ಕರುಣಾನಿಧಿಯೂ ಆಗಿರುತ್ತೀಯೆ. ಓ ಪ್ರಭೂ, ಅವರಿಗೆ ನಿನ್ನ ವಚನಗಳನ್ನು ಪಠಿಸಿ ಹೇಳುವ ಮತ್ತು ಗ್ರಂಥವನ್ನೂ ಯುಕ್ತಿಯನ್ನೂ ಬೋಧಿಸುವ ಹಾಗೂ ಅವರ ಜೀವನವನ್ನು ಸಂಸ್ಕರಿಸುವ ಓರ್ವ ಸಂದೇಶವಾಹಕನನ್ನು ಅವರೊಳಗಿಂದಲೇ ನಿಯೋಜಿಸು. ನೀನು ಮಹಾಪ್ರತಾಪಿಯೂ ಯುಕ್ತಿಪೂರ್ಣನೂ ಆಗಿರುತ್ತೀಯೆ."

(ಅಲ್‌ಬಕರ: 125-129)

وَإِذْ قَالَ إِبْرَٰهِيمُ رَبِّ ٱجْعَلْ هَٰذَا ٱلْبَلَدَ ءَامِنًا وَٱجْنُبْنِى وَبَنِىَّ
أَن نَّعْبُدَ ٱلْأَصْنَامَ ﴿٣٥﴾ رَبِّ إِنَّهُنَّ أَضْلَلْنَ كَثِيرًا مِّنَ ٱلنَّاسِ ۖ فَمَن تَبِعَنِى
فَإِنَّهُۥ مِنِّى ۖ وَمَنْ عَصَانِى فَإِنَّكَ غَفُورٌ رَّحِيمٌ ﴿٣٦﴾ رَّبَّنَآ إِنِّىٓ أَسْكَنتُ مِن ذُرِّيَّتِى
بِوَادٍ غَيْرِ ذِى زَرْعٍ عِندَ بَيْتِكَ ٱلْمُحَرَّمِ رَبَّنَا لِيُقِيمُوا۟ ٱلصَّلَوٰةَ فَٱجْعَلْ
أَفْـِٔدَةً مِّنَ ٱلنَّاسِ تَهْوِىٓ إِلَيْهِمْ وَٱرْزُقْهُم مِّنَ ٱلثَّمَرَٰتِ لَعَلَّهُمْ يَشْكُرُونَ ﴿٣٧﴾

ಇಬ್ರಾಹೀಮರು ಪ್ರಾರ್ಥಿಸಿದ ಸಂದರ್ಭವನ್ನು ನೆನೆಯಿರಿ. "ಓ ನನ್ನ ಪ್ರಭೂ, ಈ ಪಟ್ಟಣ(ಅರ್ಥಾತ್ ಮಕ್ಕಾ)ವನ್ನು ಶಾಂತಿ ನಗರವನ್ನಾಗಿ ಮಾಡು ಮತ್ತು ನನ್ನನ್ನೂ ನನ್ನ ಸಂತತಿಯನ್ನೂ ವಿಗ್ರಹಾರಾಧನೆಯಿಂದ ರಕ್ಷಿಸು. ಓ ನನ್ನ ಪ್ರಭೂ, ಈ ವಿಗ್ರಹಗಳು ಅನೇಕರನ್ನು ದಾರಿಗೆಡಿಸಿವೆ. (ಇವು ನನ್ನ ಸಂತತಿಯನ್ನೂ ಪಥಭ್ರಷ್ಟಗೊಳಿಸಿಬಿಡಲೂಬಹುದು. ಆದುದರಿಂದ ಅವರ ಪೈಕಿ) ನನ್ನ ಪದ್ಧತಿಯಲ್ಲಿ ನಡೆಯುವವನು ನನ್ನವನು ಮತ್ತು ಯಾರಾದರೂ ನನ್ನದಕ್ಕೆ ವಿರುದ್ಧವಾದ ರೀತಿಯಲ್ಲಿ ನಡೆದರೆ, ನಿಶ್ಚಯವಾಗಿಯೂ ನೀನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಿ. ಓ ನನ್ನ ಪ್ರಭೂ, ನಾನು ನನ್ನ ಸಂತತಿಯ ಒಂದು ಭಾಗವನ್ನು ಒಂದು ಬಂಜರು ಕಣಿವೆಯಲ್ಲಿ ನಿನ್ನ ಸನ್ಮಾನ್ಯ ಗೃಹದ ಬಳಿ ತಂದು ನೆಲೆಗೊಳಿಸಿದ್ದೇನೆ. ಓ ನನ್ನ ಪ್ರಭೂ, ಇವರು ನಮಾಝನ್ನು ಸಂಸ್ಥಾಪಿಸಲೆಂದು ಹೀಗೆ ಮಾಡಿದ್ದೇನೆ. ಆದುದರಿಂದ ನೀನು ಜನಮನಗಳು ಇವರ ಕಡೆಗೆ ಒಲಿಯುವಂತೆ ಮಾಡು ಮತ್ತು ಇವರಿಗೆ ತಿನ್ನಲು ಫಲ ಗಳನ್ನು ನೀಡು. ಇವರು ಕೃತಜ್ಞರಾಗಲೂಬಹುದು." (ಇಬ್ರಾಹೀಮ್: 35-37)

وَإِذْ بَوَّأْنَا لِإِبْرَاهِيمَ مَكَانَ الْبَيْتِ أَن لَّا تُشْرِكْ بِي شَيْئًا وَطَهِّرْ بَيْتِيَ لِلطَّائِفِينَ وَالْقَائِمِينَ وَالرُّكَّعِ السُّجُودِ ﴿٢٦﴾ وَأَذِّن فِي النَّاسِ بِالْحَجِّ يَأْتُوكَ رِجَالًا وَعَلَىٰ كُلِّ ضَامِرٍ يَأْتِينَ مِن كُلِّ فَجٍّ عَمِيقٍ ﴿٢٧﴾ لِّيَشْهَدُوا مَنَافِعَ لَهُمْ وَيَذْكُرُوا اسْمَ اللَّهِ فِي أَيَّامٍ مَّعْلُومَاتٍ عَلَىٰ مَا رَزَقَهُم مِّن بَهِيمَةِ الْأَنْعَامِ ۖ فَكُلُوا مِنْهَا وَأَطْعِمُوا الْبَائِسَ الْفَقِيرَ ﴿٢٨﴾

ನಾವು ಇಬ್ರಾಹೀಮರಿಗೆ ಈ ಭವನ(ಕಅಬಾ)ದ ಸ್ಥಳವನ್ನು ಗೊತ್ತುಪಡಿಸಿಕೊಟ್ಟ ಸಂದರ್ಭವನ್ನು ಸ್ಮರಿಸಿರಿ. (ಅವರಿಗೆ ಹೀಗೆ ಆದೇಶಿಸಲಾಗಿತ್ತು;) "ನನ್ನ ಜೊತೆ ಯಾವುದೇ ವಸ್ತುವನ್ನೂ ಸಹಭಾಗಿಯಾಗಿ ಮಾಡದಿರಿ. ನನ್ನ ಭವನವನ್ನು ಪ್ರದಕ್ಷಿಣೆ ಮಾಡುವವರಿಗಾಗಿಯೂ (ನಮಾಝಿಗೆ) ನಿಲ್ಲುವವರಿಗಾಗಿಯೂ ಬಾಗುವವರಿಗಾಗಿಯೂ ಸಾಷ್ಟಾಂಗ ಮಾಡುವವರಿಗಾಗಿಯೂ ನಿರ್ಮಲವಾಗಿರಿಸಿರಿ- ಮತ್ತು ಜನರಿಗೆ ಹಜ್ಜ್ ಯಾತ್ರೆಗಾಗಿ ಸಾರ್ವತ್ರಿಕ ಕರೆ ನೀಡಿರಿ. ಅವರು ದೂರದೂರದ ಪ್ರದೇಶಗಳಿಂದೆಲ್ಲ ಕಾಲ್ನಡಿಗೆಯಲ್ಲೂ ಒಂಟೆಗಳ ಮೇಲೆ ಸವಾರಿ ಮಾಡಿಕೊಂಡೂ ನಿಮ್ಮ ಬಳಿಗೆ ಬರುವಂತಾಗಲಿ." (ಈ ರೀತಿ) ಅವರು ಇಲ್ಲಿ ಅವರಿಗಾಗಿ ಇರಿಸಲಾಗಿರುವ ಪ್ರಯೋಜನಗಳನ್ನು ಪ್ರತ್ಯಕ್ಷವಾಗಿ ನೋಡುವಂತಾಗಲಿ ಮತ್ತು ಅವರು ಕೆಲವು ನಿಶ್ಚಿತ ದಿನಗಳಲ್ಲಿ ಅಲ್ಲಾಹನು ಅವರಿಗೆ ದಯಪಾಲಿಸಿರುವ ಜಾನುವಾರುಗಳ ಮೇಲೆ ಅವನ ನಾಮವನ್ನುಚ್ಚರಿಸಲಿ. ಸ್ವತಃ ತಿನ್ನಲಿ ಮತ್ತು ಬಡಬಗ್ಗರಿಗೂ ಕೊಡಲಿ." (ಅಲ್‌ಹಜ್ಜ್: 26 -28)

ಮುಸ್ಲಿಮ್ ಬಾಂಧವರೇ, ಇಸ್ಲಾಮಿನ ಐದನೆಯ ಆಧಾರಸ್ತಂಭವನ್ನಾಗಿರಿಸಲಾದ ಹಜ್ಜ್‌ನ ಪ್ರಾರಂಭದ ಚರಿತ್ರೆಯಿದು. ಜಗತ್ತಿನಲ್ಲಿ ಪ್ರಪ್ರಥಮವಾಗಿ ಜಾಗತಿಕ ಇಸ್ಲಾಮಿ ಆಂದೋಲನಕ್ಕಾಗಿ ನಿಯುಕ್ತರಾದವರು ಪ್ರವಾದಿ ಇಬ್ರಾಹೀಮ್‌ರೆಂದು(ಅ) ಇದರಿಂದ ವ್ಯಕ್ತವಾಗುತ್ತದೆ. ಮಕ್ಕಾಪಟ್ಟಣವು ಈ ಪ್ರಚಾರ ಕಾರ್ಯದ ಕೇಂದ್ರವಾಗಿತ್ತು. 'ಕಅಬಾ' ಎಂಬುದು ಧರ್ಮಾಹ್ವಾನವು ಜಗತ್ತಿನ ಮೂಲೆಮೂಲೆಗಳಿಗೂ ತಲಪಿಸುವ ಕೇಂದ್ರ. ಏಕದೇವೋಪಾಸನೆಯ ಕರಾರನ್ನು ಮಾಡಿ ಅವನೊಬ್ಬನ ದಾಸ್ಯ-ಅನುಸರಣೆಯಲ್ಲಿ ಸೇರಿದವನು, ಯಾವ ಜನಾಂಗ ಅಥವಾ ದೇಶಕ್ಕೆ ಸಂಬಂಧಿಸಿದವನೇ ಆಗಿರಲಿ, ಎಲ್ಲರೂ ಆ ಏಕ ಕೇಂದ್ರಕ್ಕೆ ತನ್ನನ್ನು ಸಂಬಂಧಿಸಿಟ್ಟುಕೊಳ್ಳಲಿಕ್ಕಾಗಿ ಮತ್ತು ವರ್ಷಂಪ್ರತಿ ಅಲ್ಲಿ ಒಟ್ಟು ಸೇರಿ ಆ ಕೇಂದ್ರಕ್ಕೆ ಪ್ರದಕ್ಷಿಣೆ ಬರುವಂತಾಗಲಿಕ್ಕಾಗಿ ಹಜ್ಜ್‌ನ ಈ ರೂಢಿಯನ್ನು ನಿಶ್ಚಯಿಸಿಕೊಡಲಾಗಿತ್ತು. ಹೀಗೆ ಅವರ ಜೀವನವು ಒಂದು ಅಕ್ಷದಲ್ಲಿ ತಿರುಗುತ್ತಿರುವ ಚಕ್ರದಂತಿದೆ ಎಂಬ ಅಂತರಂಗದ ಸ್ಥಿತಿಗತಿಗಳನ್ನು ಪ್ರಕಟಪಡಿಸುವಂತಾಗುತ್ತದೆ.

○

ಹಜ್ಜ್ ಯಾತ್ರೆಯ ಇತಿಹಾಸ

ಮುಸ್ಲಿಮ್ ಬಾಂಧವರೇ,

'**ಹಜ್ಜ್**' ಯಾತ್ರೆಯು ಹೇಗೆ ಮತ್ತು ಯಾಕಾಗಿ ಆರಂಭವಾಗಿತ್ತೆಂಬುದನ್ನು ಹಿಂದಿನ ಉಪನ್ಯಾಸದಲ್ಲಿ ಹೇಳಿರುತ್ತೇನೆ. ಹಝ್ರತ್ ಇಬ್ರಾಹೀಮ್‌ರವರು(ಅ) ಮಕ್ಕಾ ಪಟ್ಟಣವನ್ನು ಇಸ್ಲಾಮೀ ಆಂದೋಲನದ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡಿದ್ದರೆಂದೂ ಅಲ್ಲಿ ಈ ಆಂದೋಲನ ಜಾರಿಗೊಳಿಸಲು ತಮ್ಮ ಹಿರಿಯ ಪುತ್ರ ಹ. ಇಸ್ಮಾಈಲ್‌ರನ್ನು(ಅ) ನೇಮಿಸಿದ್ದರೆಂದೂ ಈ ಹಿಂದೆ ಹೇಳಿರುತ್ತೇನೆ.

ಇಬ್ರಾಹೀಮ್ ಸಂತತಿಗಳ ವಿಗ್ರಹಾರಾಧನೆಯ ಆರಂಭ

ಹ. ಇಸ್ಮಾಈಲ್‌ರವರ(ಅ) ಕಾಲಾನಂತರ ಅವರು ಬಿಟ್ಟು ಹೋಗಿದ್ದ ಅದೇ ದೀನ್ (ಧರ್ಮ)ನಲ್ಲಿ ಅವರ ಸಂತತಿಯು ಎಷ್ಟು ಕಾಲ ಸ್ಥಿರವಾಗಿ ನಿಂತಿತ್ತೆಂಬುದನ್ನು ದೇವನೇ ಬಲ್ಲ. ಅಂತು, ಕೆಲವೇ ಶತಮಾನಗಳಲ್ಲಿ ಅವರು ತಮ್ಮ ಹಿರಿಯರ ಬೋಧನೆಗಳನ್ನೂ ಪದ್ಧತಿಗಳನ್ನೂ ಮರೆತು ಬಿಟ್ಟರು. ಕ್ರಮೇಣ ಇತರ ಅಜ್ಞಾನಿ ಜನಾಂಗಗಳಲ್ಲಿ ಹಬ್ಬಿ ಹೋಗಿದ್ದ ಪಥಭ್ರಷ್ಟತೆಗಳಿಗೆ ಅವರೂ ಬಲಿಯಾದರು. ಏಕದೇವೋಪಾಸನೆಯ ಕೇಂದ್ರವನ್ನಾಗಿಸಿದ್ದ ಅದೇ ಕಅಬಾದಲ್ಲಿ ನೂರಾರು ಮೂರ್ತಿಗಳು ಇರಿಸಲ್ಪಟ್ಟವು. ಮಾತ್ರವಲ್ಲ, ತಮ್ಮ ಇಡೀ ಜೀವಮಾನವನ್ನೇ ವಿಗ್ರಹಾರಾಧನೆಯ ಮೂಲೋತ್ಪಾಟನೆಗಾಗಿ ಸವೆಸಿದ್ದ ಹ.ಇಬ್ರಾಹೀಮ್ ಮತ್ತು ಹ. ಇಸ್ಮಾಈಲ್‌ರವರ(ಅ) ಮೂರ್ತಿಗಳನ್ನೂ ಮಾಡಿ ಅಲ್ಲಿ ಇರಿಸಿಬಿಟ್ಟರು. ಏಕದೇವನಿಷ್ಠರಾದ ಹ.ಇಬ್ರಾಹೀಮ್‌ರ(ಅ) ಸಂತತಿಗಳು ಲಾತ್, ಮನಾತ್, ಹುಬಲ್, ನಸರ್, ಯಗೂಸ್, ಉಝ್ಝಾ, ಅಸಾಫ್, ಸಾಯಿಲಃ ಮುಂತಾದ ವಿವಿಧ ಹೆಸರುಗಳ ವಿಗ್ರಹಗಳನ್ನು ಮಾಡಿ ಪೂಜಿಸಿದರು. ಚಂದ್ರ, ಬುಧ, ಶುಕ್ರ, ಶನಿ ಮೊದಲಾದ ಗ್ರಹಗಳನ್ನು ಆರಾಧಿಸಿದರು. ಯಕ್ಷ, ಭೂತ, ಪ್ರೇತ, ದೇವಚರ ಮತ್ತು ಮೃತರಾಗಿದ್ದ ಪೂರ್ವಿಕರ ಆತ್ಮಗಳನ್ನು ಪೂಜಿಸಿದರು. ಮನೆಯಿಂದ ಹೊರಟ ನಂತರ ಎಲ್ಲೂ ತಮ್ಮ ಕುಲದೇವರ ವಿಗ್ರಹ ಸಿಗದಿದ್ದಾಗ, ದಾರಿಯಲ್ಲಿ ಸಿಕ್ಕಿದ ನುಣುಪಾದ ಕಲ್ಲನ್ನು ಎತ್ತಿಕೊಂಡು ಅದನ್ನೂ ಪೂಜಿಸುತ್ತಿದ್ದರು. ಕಲ್ಲೂ ಸಿಗದೆ ಹೋದಾಗ ಮಣ್ಣನ್ನು ನೀರಲ್ಲಿ ಕಲಸಿ, ಹದಕೊಟ್ಟು, ಒಂದು ಪಿಂಡದಂತೆ ಮಾಡಿಕೊಂಡು ಅದಕ್ಕೆ ಮೇಕೆಯ ಹಾಲನ್ನು ಹನಿಸಿದಾಗ, ಆ ನಿರ್ಜೀವ ಪಿಂಡವು ಅವರ ದೇವನಾಗಿ ಬಿಡುತ್ತಿತ್ತು.

ಅವರ ಪೂರ್ವಿಕರಾದ ಹ. ಇಬ್ರಾಹೀಮ್‌ರವರು(ಅ) ಇರಾಕಿನಲ್ಲಿ ಯಾವುದರ ವಿರುದ್ಧ ಹೋರಾಟ ನಡೆಸಿದ್ದರೋ ಅದೇ ಪೌರೋಹಿತ್ಯ ಮತ್ತು ಮಠಾಧಿಪತ್ಯವು ಅವರ ಮನೆಯಲ್ಲೇ ನುಸುಳಿ ಬಂತು. ಕಅಬಾವನ್ನು ಕಾಶಿ, ಹರಿದ್ವಾರಗಳಂತೆ ಮಾಡಿಕೊಂಡು ಸ್ವತಃ ಅದರ ಮಠಾಧಿಪತಿಗಳಾಗಿ ಕುಳಿತುಬಿಟ್ಟರು. ಹಜ್ಜ್‌ಯಾತ್ರೆಯನ್ನು ತೀರ್ಥಯಾತ್ರೆಯನ್ನಾಗಿ ಮಾಡಿ ಕೊಂಡು 'ತೌಹೀದ್'ನ (ಏಕದೇವತ್ವ) ಪ್ರಚಾರಕ್ಕಾಗಿ ನಿರ್ಮಿಸಲಾಗಿದ್ದ ಆ ಗೃಹದಿಂದ ವಿಗ್ರಹಾರಾಧನೆಯ ಪ್ರಚಾರ ಮಾಡತೊಡಗಿದರು. ಅವರು ಪೂಜಾರಿ ವರ್ಗದವರ ಎಲ್ಲ ವಿಧದ ತಂತ್ರಗಳನ್ನು ಬಳಸಿ, ಅರೇಬಿಯಾದ ನಾನಾ ಭಾಗಗಳಿಂದ ಬರುವ ಯಾಂತ್ರಿಕರಿಂದ ಹರಕೆ, ಕಾಣಿಕೆಗಳನ್ನು ವಸೂಲು ಮಾಡತೊಡಗಿದರು. ಹೀಗೆ ಹ. ಇಬ್ರಾಹೀಮ್(ಅ) ಮತ್ತು ಹ. ಇಸ್ಮಾಈಲ್‌ರವರು(ಅ) ಮಾಡಿ ಹೋಗಿದ್ದ ಎಲ್ಲಾ ಸತ್ಕಾರ್ಯಗಳೂ ಮಣ್ಣುಪಾಲಾದವು. ಅವರು 'ಹಜ್ಜ್' ಸಂಪ್ರದಾಯವನ್ನು ಜಾರಿಗೆ ತಂದಿದ್ದ ಆ ಸದುದ್ದೇಶದ ಸ್ಥಾನದಲ್ಲಿ ಬೇರೆಯೇ ತರದ ಕಾರ್ಯಗಳಾಗತೊಡಗಿದವು.

ಹಜ್ಜ್‌ನಲ್ಲಿ ಕೆಡುಕಿನ ರೂಪಗಳು

ಕವಿಗೋಷ್ಠಿಗಳು

ಅಂದಿನ ಅಜ್ಞಾನ ಕಾಲದಲ್ಲಿ ಆಗುತ್ತಿದ್ದ 'ಹಜ್ಜ್'ಯಾತ್ರೆಯು ವರ್ಷಂಪ್ರತಿ ಜರಗುವ ಒಂದು ಜಾತ್ರೆಯಾಗಿ ಮಾರ್ಪಟ್ಟಿತು. ದೊಡ್ಡ ದೊಡ್ಡ ಗೋತ್ರಗಳು ತಂತಮ್ಮ ಕೂಟ ಗಳೊಂದಿಗೆ ಅಲ್ಲಿ ಬಂದು ತಂಗುತ್ತಿದ್ದವು. ಪ್ರತಿ ಗೋತ್ರದ ಕವಿಗಳು ಅಥವಾ ವಂದಿ ಮಾಗಧರು ತಂತಮ್ಮ ಗೋತ್ರಗಳ ಸಾಧನೆ, ಕೀರ್ತಿ, ಗೌರವ, ಶಕ್ತಿ, ದಾನ-ಧರ್ಮಾಧಿಗಳ ಪ್ರಶಂಸೆ, ಅನುವರ್ಣನೆಗಳನ್ನು ಆಕಾಶ ಬಿರಿಯುವಂತೆ ಮಾಡುತ್ತಿದ್ದರು. ಈ ಹೆಗ್ಗಳಿಕೆಗಳು ಇತರರ ನಿಂದೆ, ದೂಷಣೆಗಳ ವರೆಗೂ ಮುಂದುವರಿಯುತ್ತಿದ್ದವು.

ದಾನಶೂರತೆಯ ಪ್ರದರ್ಶನ

ಅನಂತರ ದಾನಶೂರತೆಯ ಮೇಲಾಟ ನಡೆಯುತ್ತಿತ್ತು. ಪ್ರತಿಯೊಂದು ಗೋತ್ರದ ಸರದಾರನು ತನ್ನ ಪ್ರತಿಷ್ಠೆಯ ಪ್ರದರ್ಶನಕ್ಕಾಗಿಯೂ ಇತರರನ್ನು ಕೀಳಾಗಿ ತೋರಿಸಲಿಕ್ಕಾಗಿಯೂ ಒಂಟೆಗಳನ್ನು ಕೊಯ್ದು ದೊಡ್ಡದೊಡ್ಡ ಕಡಾಯಿಗಳಲ್ಲಿ ಬೇಯಿಸುತ್ತಿದ್ದನು. ಈ ಅನಾವ್ರಯದ ಉದ್ದೇಶವು ಆ ಜಾತ್ರೆಯ ವೇಳೆ ತಮ್ಮ ಕೀರ್ತಿಯನ್ನು ಬೆಳಗಿಸುವುದೂ ತಾವು ಇಂತಿಷ್ಟು ಒಂಟೆಗಳನ್ನು ಕೊಯ್ದು ಇಂತಿಷ್ಟು ಜನರಿಗೆ ಔತಣ ಮಾಡಿಸಿದೆವೆಂದು ಪ್ರಚಾರಪಡಿಸುವುದೂ ಆಗಿತ್ತು. ಆ ಸಭೆಗಳಲ್ಲಿ ಸಂಗೀತ, ಮದ್ಯಪಾನ, ವ್ಯಭಿಚಾರವೇ ಮೊದಲಾದ ಅಶ್ಲೀಲ ಕಾರ್ಯಗಳು ಏನೊಂದೂ ಅಡೆ-ತಡೆಯಿಲ್ಲದೆ ನಡೆಯುತ್ತಿದ್ದುವು. ದೇವಸ್ಮರಣೆಯಂತೂ ಯಾರಿಗೂ ಉಂಟಾಗುತ್ತಿರಲಿಲ್ಲ.

ನಗ್ನ ಪ್ರದಕ್ಷಿಣೆ

ಕಅಬಾದ 'ತವಾಫ್' (ಪ್ರದಕ್ಷಿಣೆ) ನಡೆಯುತ್ತಿತ್ತು ಆದರೆ ಹೇಗೆ? ಸ್ತ್ರೀಯರೂ ಪುರುಷರೂ ನಗ್ನರಾಗಿ ಸುತ್ತುಬರುತ್ತಿದ್ದರು. ನಾವು ನಮ್ಮ ತಾಯಂದಿರ ಹೊಟ್ಟೆಯಿಂದ ಹೊರಬಂದ ಸ್ಥಿತಿಯಲ್ಲೇ ದೇವನ ಮುಂದೆ ಹೋಗುತ್ತಿದ್ದೇವೆನ್ನುತ್ತಿದ್ದರು. ಹ.ಇಬ್ರಾಹೀಮ್‌ರವರ(ಅ) ಮಸೀದಿಯಲ್ಲಿ ಆರಾಧನೆ ನಡೆಯುತ್ತಿತ್ತು. ಅದೂ ಹೇಗೆ? ಚಪ್ಪಾಳೆ ಹೊಡೆಯುತ್ತಾ, ಸಿಳ್ಳುಹಾಕುತ್ತಾ, ಕಹಳೆಗಳನ್ನೂದುತ್ತಾ! ದೇವನಾಮವನ್ನು ಉಚ್ಚರಿಸಲಾಗುತ್ತಿತ್ತು. ಯಾವ ರೀತಿಯಲ್ಲಿ?

لَبَّيْكَ اَللّٰهُمَّ لَبَّيْكَ لَاشَرِيْكَ لَكَ اِلَّا شَرِيْكًا هُوَلَكَ تَمْلِكُهٗ وَمَامَلَكَ۔

"ಲಬ್ಬೈಕಲ್ಲಾಹುಮ್ಮ ಲಬ್ಬೈಕ್, ಲಾ ಶರೀಕಲಕ ಇಲ್ಲಾ ಶರೀಕನ್ ಹುವ ಲಕ ತಮ್ಲಿಕುಹೂ ವಮಾ ಮಲಕ." (ಅರ್ಥಾತ್ - ನಾನು ಹಾಜರಿದ್ದೇನೆ ನನ್ನ ದೇವಾ, ನಾನು ಹಾಜರಿದ್ದೇನೆ. ನಿನ್ನವನಾದುದರಿಂದ ನಿನ್ನ ಭಾಗೀದಾರನಾಗಿರುವವನ ಹೊರತು ನಿನ್ನ ಭಾಗೀದಾರರಾರೂ ಇಲ್ಲ. ನೀನು ಅವನ ಮಾಲಿಕನೂ ಆಗಿರುತ್ತೀ, ಅವನ ಸೊತ್ತಿನ ಮಾಲಿಕನೂ ಆಗಿರುತ್ತೀ.)

ಬಲಿದಾನದ ಕಲ್ಪನೆ

ದೇವನಾಮದಲ್ಲಿ ಬಲಿದಾನವನ್ನು ಎಂತಹ ಅಸಭ್ಯ ರೀತಿಯಲ್ಲಿ ಕೊಡುತ್ತಿದ್ದರೆಂದರೆ ಬಲಿಕೊಟ್ಟ ಪ್ರಾಣಿಯ ರಕ್ತವನ್ನು ಕಅಬಾದ ಗೋಡೆಗಳಿಗೆ ಬಳಿಯಲಾಗುತ್ತಿತ್ತು. ಮಾಂಸವನ್ನು ದ್ವಾರದ ಮುಂದೆ ತಂದು ಹಾಕಲಾಗುತ್ತಿತ್ತು. ಈ ರಕ್ತ-ಮಾಂಸಗಳು ದೇವನಿಗೆ ಬೇಕಾಗಿವೆ ಯೆಂಬುದು ಅವರ ನಂಬಿಕೆಯಾಗಿತ್ತು.

ನಿಷೇಧಿತ ತಿಂಗಳುಗಳಿಗೆ ಅಗೌರವ

ಹ. ಇಬ್ರಾಹೀಮ್‌ರವರು(ಅ) ಹಜ್ಜ್ ಯಾತ್ರೆಯ ನಾಲ್ಕು ತಿಂಗಳುಗಳನ್ನು ನಿಷೇಧಿತ ಮಾಸಗಳೆಂದು ಸಾರಿ, ಆ ಕಾಲಾವಧಿಯಲ್ಲಿ ಯಾವತ್ತೂ ಯುದ್ಧಗಳಾಗಬಾರದೆಂದು ಸಾರಿದ್ದರು. ಈ ನಿಯಮವನ್ನೇನೋ ಸ್ವಲ್ಪಮಟ್ಟಿಗೆ ಅವರು ಪಾಲಿಸುತ್ತಿದ್ದರು. ಆದರೆ, ಹೋರಾಡಬೇಕೆಂದು ಇಚ್ಛೆಯಾದಾಗ ತಮ್ಮ ಸ್ವೇಚ್ಛೆಯಿಂದ ನಿಷಿದ್ಧ ಮಾಸವನ್ನು ಹಲಾಲ್ (ಅನುವದನೀಯ) ಮಾಸವೆಂದು ಪರಿಗಣಿಸಿ, ಮುಂದಿನ ವರ್ಷ ಅದರ ನಷ್ಟ ಭರ್ತಿ ಮಾಡಿಕೊಳ್ಳುತ್ತಿದ್ದರು.

ಕೆಲವು ಸ್ವಯಂಕೃತ ನಿರ್ಬಂಧಗಳು

ಅವರು ತಮ್ಮ ಮತಾಚರಣೆಯಲ್ಲಿ ಪ್ರಾಮಾಣಿಕರಾಗಿದ್ದರೂ ತಮ್ಮ ಅಜ್ಞಾನದಿಂದ ವಿಚಿತ್ರ ರೀತಿಯ ಪದ್ಧತಿಗಳನ್ನು ಕಲ್ಪಿಸಿಕೊಂಡಿದ್ದರು. ಕೆಲವರು ದಾರಿವೆಚ್ಚ ಇಲ್ಲದೆಯೇ ಹಜ್ಜ್ ಯಾತ್ರೆಗೆಂದು ಭಿಕ್ಷೆ ಬೇಡುತ್ತಾ ಹೋಗುತ್ತಿದ್ದರು. ಅವರ ದೃಷ್ಟಿಯಲ್ಲಿ ಇದೊಂದು ಪುಣ್ಯ

ಕಾರ್ಯವಾಗಿತ್ತು. ನಾವು ದೇವನ ಮೇಲೆ ನಿಶ್ಚಲ ಭಕ್ತಿ-ವಿಶ್ವಾಸವುಳ್ಳವರಾಗಿದ್ದು ದೇವಮಂದಿರದ ಕಡೆಗೆ ಸಾಗುತ್ತಿರುವಾಗ ಲೌಕಿಕ ಸಾಮಾನು ಸರಂಜಾಮುಗಳನ್ನು ಏಕೆ ಒಯ್ಯಬೇಕೆನ್ನುತ್ತಿದ್ದರು. ಹಜ್ಜ್ ಯಾತ್ರೆಯಲ್ಲಿ ಸಾಮಾನ್ಯವಾಗಿ ದುಡಿಮೆ ಮತ್ತು ಸಂಪಾದನೆಗಳು ವರ್ಜ್ಯವೆಂದು ತಿಳಿಯಲಾಗುತ್ತಿತ್ತು. ಅನೇಕರು ಹಜ್ಜ್ ಯಾತ್ರೆಯಲ್ಲಿ ಆಹಾರ ಪಾನೀಯಗಳ ಸೇವನೆಯನ್ನೂ ತ್ಯಜಿಸಿ ಇದನ್ನು ಭಕ್ತಿಯೆನ್ನುತ್ತಿದ್ದರು. ಕೆಲವರು ಹಜ್ಜ್ ಯಾತ್ರೆಗೆ ಹೊರಟ ಬಳಿಕ ಮಾತನಾಡುವುದನ್ನೇ ನಿಲ್ಲಿಸಿ ಬಿಡುತ್ತಿದ್ದರು. ಇದಕ್ಕೆ 'ಮೂಕ ಹಜ್ಜ್ ಯಾತ್ರೆ' ಎನ್ನಲಾಗುತ್ತಿತ್ತು. ಇಂತಹ ನಾನಾ ವಿಧದ ತಪ್ಪು ಕಂದಾಚಾರಗಳ ವಿವರ ಹೇಳಿ ನಿಮ್ಮ ಸಮಯ ಹಾಳು ಮಾಡಲು ನಾನು ಬಯಸುವುದಿಲ್ಲ.

ಹ. ಇಬ್ರಾಹೀಮ್‌ರವರ(ಅ) ಪ್ರಾರ್ಥನೆಯ ಸ್ವೀಕಾರ

ಈ ದುರವಸ್ಥೆಯು ಹೆಚ್ಚು ಕಡಿಮೆ ಎರಡು ಸಾವಿರ ವರ್ಷಗಳವರೆಗಿದ್ದಿತು. ಈ ದೀರ್ಘಾವಧಿಯಲ್ಲಿ ಅರಬ್ ದೇಶದಲ್ಲಿ ಸಂದೇಶವಾಹಕರಾರೂ ಬರಲಿಲ್ಲ. ಇತರ ಸಂದೇಶ ವಾಹಕರ ನೈಜ ಬೋಧನೆಗಳು ಅಲ್ಲಿಗೆ ತಲಪಲೂ ಇಲ್ಲ. ಕೊನೆಗೆ ಹ.ಇಬ್ರಾಹೀಮ್‌ರವರು(ಅ) ಕಅಬಾದ ಗೋಡೆಗಳನ್ನು ಕಟ್ಟುತ್ತಿರುವಾಗ ಅಲ್ಲಾಹನೊಡನೆ ಮಾಡಿದ ಪ್ರಾರ್ಥನೆಯು ಈಡೇರುವ ಕಾಲ ಬಂದಿತು. "ಓ ಪ್ರಭೂ, ಅವರಿಗೆ ನಿನ್ನ ವಚನಗಳನ್ನು ಪಠಿಸಿ ಹೇಳುವ ಮತ್ತು ಗ್ರಂಥವನ್ನೂ ಯುಕ್ತಿಯನ್ನೂ ಬೋಧಿಸುವ ಹಾಗೂ ಅವರನ್ನು ಸಂಸ್ಕರಿಸುವ ಓರ್ವ ಸಂದೇಶವಾಹಕನನ್ನು ಅವರೊಳಗಿಂದಲೇ ನಿಯೋಜಿಸು" ಎಂಬ ಪ್ರಾರ್ಥನೆ ಅದಾಗಿತ್ತು. ಆ ಪ್ರಕಾರ ಹ. ಇಬ್ರಾಹೀಮ್‌ರವರ(ಅ) ಸಂತತಿಯಿಂದ ಮುಹಮ್ಮದ್ ಬಿನ್ ಅಬ್ದುಲ್ಲಾ(ಸ) ಎಂಬ ಆ ಸಿದ್ಧಪುರುಷನ ಉದ್ಭವವಾಯಿತು. ಹ. ಇಬ್ರಾಹೀಮ್‌ರವರು(ಅ) ಪುರೋಹಿತರ ಹಾಗೂ ಮಠಾಧಿಪತಿಗಳ ಮನೆತನದಲ್ಲಿ ಕಣ್ತೆರೆದಂತೆಯೇ ಹ. ಮುಹಮ್ಮದ್‌ರವರೂ(ಸ) ಅನೇಕ ಶತಮಾನಗಳಿಂದ ಕಅಬಾ ತೀರ್ಥ ಕ್ಷೇತ್ರದ ಮಠಾಧಿಪತಿಗಳಾಗಿದ್ದವರ ಮನೆತನದಲ್ಲಿ ಜನ್ಮತಾಳಿದರು. ಹ. ಇಬ್ರಾಹೀಮ್‌ರವರು(ಅ) ತಮ್ಮ ಮನೆತನದ ಪೌರೋಹಿತ್ಯಕ್ಕೆ ಕೊಡಲಿಯೇಟು ಹಾಕಿದಂತೆಯೇ ಹ. ಮುಹಮ್ಮದ್‌ರವರೂ(ಸ) ಹಾಕಿದುದು ಮಾತ್ರವಲ್ಲ ಅದರ ಮೂಲವನ್ನೇ ಕಿತ್ತೊಗೆದರು. ಹ. ಇಬ್ರಾಹೀಮ್‌ರವರು(ಅ) ಸಮಸ್ತ ಮಿಥ್ಯ ವಿಶ್ವಾಸ ಮತ್ತು ಕೃತಕ ದೇವರುಗಳನ್ನು ಅಳಿಸಲಿಕ್ಕೂ ಏಕದೇವೋಪಾಸನೆಯನ್ನು ಪ್ರಚಾರಪಡಿಸಲಿಕ್ಕೂ ಶ್ರಮಿಸಿದ್ದರು. ಅದೇ ಕೆಲಸವನ್ನು ಹ. ಮುಹಮ್ಮದ್‌ರವರೂ(ಸ) ಅದೇ ರೀತಿಯಲ್ಲಿ ಮಾಡಿ, ಹ. ಇಬ್ರಾಹೀಮ್‌ರವರು(ಅ) ತಂದಿದ್ದ ಮೂಲ ಧರ್ಮದ ಪುನರುತ್ಥಾನಗೊಳಿಸಿದರು. ಇಪ್ಪತ್ತೊಂದು ವರ್ಷಗಳ ಅವಧಿಯಲ್ಲಿ ಈ ಕೆಲಸವನ್ನು ಪರಿಪೂರ್ಣಗೊಳಿಸಿದ ಬಳಿಕ ಅಲ್ಲಾಹನ ಅನುಜ್ಞೆ ಪ್ರಕಾರ ಹಿಂದಿನ ರೀತಿಯಲ್ಲೇ ಕಅಬಾವನ್ನು ದೇವಾರಾಧಕರ ಕೇಂದ್ರ ಸ್ಥಾನವನ್ನಾಗಿ ಘೋಷಿಸಿದರು. ಎಲ್ಲಾ ದಿಸೆಗಳಿಂದಲೂ ಹಜ್ಜ್ ಯಾತ್ರೆಗಾಗಿ ಈ ಕೇಂದ್ರದ ಕಡೆಗೆ ಬರಬೇಕೆಂದು ಘಂಟಾಘೋಷವಾಗಿ ಸಾರಿದರು.

وَلِلّٰهِ عَلَى النَّاسِ حِجُّ الْبَيْتِ مَنِ اسْتَطَاعَ إِلَيْهِ سَبِيْلًا ۚ وَمَنْ كَفَرَ فَإِنَّ اللّٰهَ غَنِيٌّ عَنِ الْعٰلَمِيْنَ ﴿٩٧﴾

"ಈ ಭವನದವರೆಗೆ ತಲಪಲು ಸಾಧನಾನುಕೂಲತೆಗಳಿರುವವನು ಅದರ 'ಹಜ್ಜ್' ಯಾತ್ರೆ ಕೈಗೊಳ್ಳಬೇಕೆಂಬುದು ಜನರ ಮೇಲೆ ಅಲ್ಲಾಹನ ಹಕ್ಕಾಗಿರುತ್ತದೆ. ಈ ಆಜ್ಞೆಯ ಅನುಸರಣೆಯನ್ನು ಯಾರಾದರೂ (ಸಾಧ್ಯವಿದ್ದೂ) ನಿರಾಕರಿಸಿದರೆ, ಅಲ್ಲಾಹನು ಸಕಲ ಜಗತ್ತಿನವರಿಂದ ನಿರಪೇಕ್ಷನಾಗಿರುತ್ತಾನೆಂಬುದನ್ನು ಅವನು ಅರಿತಿರಬೇಕು." (ಆಲಿ ಇಮ್ರಾನ್: 97)

ಇಬ್ರಾಹೀಮ್‌ರವರ(ಅ) ಚರ್ಯೆಯ ಪುನರುಜ್ಜೀವನ

ಹೀಗೆ 'ಹಜ್ಜ್' ಯಾತ್ರೆಯ ಪುನರಾರಂಭದೊಂದಿಗೆ ಗತ ಎರಡು ಸಹಸ್ರ ವರ್ಷಗಳಿಂದ ಆಚರಣೆಯಲ್ಲಿದ್ದ ಅಜ್ಞಾನ ಕಾಲದ ಕಂದಾಚಾರಗಳನ್ನು ಒಮ್ಮೆಲೆ ತೊಡೆದು ಹಾಕಲಾಯಿತು.

ವಿಗ್ರಹಾರಾಧನೆಯ ಅಂತ್ಯ

ಕಅಬಾದಲ್ಲಿದ್ದ ಎಲ್ಲಾ ವಿಗ್ರಹಗಳು ಒಡೆದು ಹಾಕಲ್ಪಟ್ಟವು. ಅಲ್ಲಿ ಆಗುತ್ತಲಿದ್ದ ದೇವೇತರರ ಪೂಜೆಗಳನ್ನು ಸಾದ್ಯಂತ ತಡೆಯಲಾಯಿತು. ಎಲ್ಲಾ ಮೂಢ ಕಟ್ಟುಪಾಡುಗಳು ಅಳಿಸಲ್ಪಟ್ಟವು. ಜಾತ್ರೆ, ಉತ್ಸವ, ಮನರಂಜನಾದಿಗಳು ನಿಂತು ಹೋದವು. ಈಗ ತೋರಿಸಲಾಗುತ್ತಿರುವ ರೀತಿಯಲ್ಲಿಯೇ ಮುಂದೆ ಇಲ್ಲಿ ಆರಾಧನಾವಿಧಿಗಳನ್ನು ನೆರವೇರಿಸಬೇಕೆಂದು ಆದೇಶವನ್ನೀಯಲಾಯಿತು.

وَاذْكُرُوْهُ كَمَا هَدٰىكُمْ ۚ وَإِنْ كُنْتُمْ مِّنْ قَبْلِهٖ لَمِنَ الضَّآلِّيْنَ ﴿١٩٨﴾

"ಆತನು ನಿಮಗೆ ಮಾರ್ಗದರ್ಶನ ಮಾಡಿದ ರೀತಿಯಲ್ಲೇ ಸ್ಮರಿಸಿರಿ. ಇದಕ್ಕೆ ಮುಂಚೆ ನೀವು ಪಥಭ್ರಷ್ಟರಾಗಿದ್ದಿರಿ." (ಅಲ್‌ಬಕರಃ: 198)

ಅಸಭ್ಯ ಕಾರ್ಯಗಳಿಂದ ತಡೆ

ಎಲ್ಲ ಅಸಭ್ಯ ಕಾರ್ಯಗಳು ಕಟ್ಟುನಿಟ್ಟಾಗಿ ರದ್ದುಗೊಳಿಸಲ್ಪಟ್ಟವು.

فَلَا رَفَثَ وَلَا فُسُوْقَ ۙ وَلَا جِدَالَ فِي الْحَجِّ ۗ

"ಹಜ್ಜ್ ಕಾಲಾವಧಿಯಲ್ಲಿ ಯಾವುದೇ ಕಾಮಾಪೇಕ್ಷೆಯ, ದುರಾಚಾರದ ಮತ್ತು ಕಲಹದ ಕಾರ್ಯಗಳು ತನ್ನಿಂದ ಸಂಭವಿಸದಂತೆ ಜಾಗರೂಕನಾಗಿರಬೇಕು." (ಅಲ್‌ಬಕರಃ: 197)

ಕವಿಗಳ ಮೇಲಾಟವನ್ನು ನಿಲ್ಲಿಸಲಾಯಿತು

ಕವಿಗಳ ಮೇಲಾಟ, ಪೂರ್ವಿಕರ ಸಾಧನೆಗಳ ಹೆಗ್ಗಳಿಕೆ, ಹೊಗಳಿಕೆ ಮತ್ತು ಪರನಿಂದೆಗಳ ಸ್ಪರ್ಧೆಗಳೆಲ್ಲಾ ನಿಲ್ಲಿಸಲ್ಪಟ್ಟವು.

فَإِذَا قَضَيْتُم مَّنَاسِكَكُمْ فَاذْكُرُوا اللَّهَ كَذِكْرِكُمْ آبَاءَكُمْ أَوْ أَشَدَّ ذِكْرًا

"ನೀವು ಹಜ್ಜ್‌ನ ವಿಧಿ ವಿಧಾನಗಳನ್ನು ನಿರ್ವಹಿಸಿದ ಬಳಿಕ, ಹಿಂದೆ ನೀವು ಪೂರ್ವಿಕರನ್ನು ಸ್ಮರಿಸುತ್ತಿದ್ದಂತೆಯೇ ಅಲ್ಲಾಹನನ್ನು ಸ್ಮರಿಸಿರಿ; ಮಾತ್ರವಲ್ಲ ಅದಕ್ಕಿಂತಲೂ ಅಧಿಕವಾಗಿ ಸ್ಮರಿಸಿರಿ." (ಅಲ್‌ಬಕರಃ: 200)

ಡಂಬಾಚಾರದ ನಿರ್ಮೂಲನ

ಕೇವಲ ಆಡಂಬರಕ್ಕಾಗಿಯೂ ಕೀರ್ತಿ ಗಳಿಸಲಿಕ್ಕಾಗಿಯೂ ನಡೆಯುತ್ತಿದ್ದ ದಾನ-ಧರ್ಮಾದಿಗಳ ಸ್ಪರ್ಧೆಗಳನ್ನು ಕೊನೆಗೊಳಿಸಲಾಯಿತು. ಇದರ ಸ್ಥಾನದಲ್ಲಿ ಕೇವಲ ಅಲ್ಲಾಹನ ಹೆಸರಿನಲ್ಲಿ ಪ್ರಾಣಿಗಳನ್ನು ಬಲಿಯರ್ಪಿಸಿ ಧನಿಕರ ಬಲಿದಾನಗಳಿಂದ ಬಡ ಹಜ್ಜ್ ಯಾತ್ರಿಕರಿಗೂ ಉಣ್ಣುವ ಸಂದರ್ಭವೊದಗುವಂತೆ ಮಾಡಲಾಯಿತು.

وَكُلُوا وَاشْرَبُوا وَلَا تُسْرِفُوا ۚ إِنَّهُ لَا يُحِبُّ الْمُسْرِفِينَ ﴿٣١﴾

"ತಿನ್ನಿರಿ, ಕುಡಿಯಿರಿ: ಆದರೆ ಮಿತಿಮೀರಬೇಡಿರಿ. ಅಲ್ಲಾಹ್ ಮಿತಿಮೀರುವವರನ್ನು ಮೆಚ್ಚುವುದಿಲ್ಲ." (ಅಲ್ ಅಅ್‌ರಾಫ್: 31)

فَاذْكُرُوا اسْمَ اللَّهِ عَلَيْهَا صَوَافَّ ۖ فَإِذَا وَجَبَتْ جُنُوبُهَا فَكُلُوا
مِنْهَا وَأَطْعِمُوا الْقَانِعَ وَالْمُعْتَرَّ

"ಪ್ರಾಣಿಗಳನ್ನು ನಿಲ್ಲಿಸಿ ಅವುಗಳ ಮೇಲೆ ಅಲ್ಲಾಹನ ನಾಮವನ್ನು ಉಚ್ಚರಿಸಿರಿ ಮತ್ತು (ಬಲಿಯರ್ಪಿಸಿದ ಬಳಿಕ) ಅವುಗಳ ಬೆನ್ನುಗಳು ನೆಲಕ್ಕೆ ತಾಗಿದ ಮೇಲೆ ಅವುಗಳಿಂದ ಸ್ವತಃ ತಿನ್ನಿರಿ ಹಾಗೂ(ಇದ್ದುದರಲ್ಲಿ) ಸಂತೃಪ್ತಿ ಪಡುವವರಿಗೂ ಅಪೇಕ್ಷೆ ಪ್ರಕಟಿಸುವವರಿಗೂ ತಿನ್ನಿಸಿರಿ." (ಅಲ್‌ಹಜ್ಜ್: 36)

ಬಲಿದಾನದ ಮಾಂಸ ಮತ್ತು ರಕ್ತ ಲೇಪನದಿಂದ ತಡೆ

ಬಲಿದಾನದ ರಕ್ತವನ್ನು ಕಲಬಾದ ಗೋಡೆಗಳಿಗೆ ಲೇಪಿಸುವುದನ್ನು ಹಾಗೂ ಮಾಂಸವನ್ನು ತಂದು ಹಾಕುವುದನ್ನು ನಿಲ್ಲಿಸಲಾಯಿತು. ಆದೇಶ ಹೀಗಿದೆ:

لَنْ يَّنَالَ اللّٰهَ لُحُوْمُهَا وَلَا دِمَآؤُهَا وَلٰكِنْ يَّنَالُهُ التَّقْوٰى مِنْكُمْ

"ಅಲ್ಲಾಹನಿಗೆ ಆ ಪ್ರಾಣಿಗಳ ಮಾಂಸವಾಗಲೀ, ರಕ್ತವಾಗಲೀ ತಲಪುವುದಿಲ್ಲ. ಬದಲಾಗಿ ನಿಮ್ಮ ಧರ್ಮನಿಷ್ಠೆ ಮತ್ತು ದೇವಭಕ್ತಿ ತಲುಪುತ್ತದೆ." (ಅಲ್‌ಹಜ್ಜ್: 37)

ನಗ್ನ ಪ್ರದಕ್ಷಿಣೆಯ ನಿಷೇಧ

ಬೆತ್ತಲೆಯಾಗಿ ತವಾಫ್(ಪ್ರದಕ್ಷಿಣೆ) ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಯಿತು. ಆದೇಶ ಹೀಗಿದೆ:

قُلْ مَنْ حَرَّمَ زِيْنَةَ اللّٰهِ الَّتِيْٓ اَخْرَجَ لِعِبَادِهٖ

"ಓ ಪೈಗಂಬರರೇ, ಅವರೊಡನೆ ಕೇಳಿರಿ - ಅಲ್ಲಾಹನು ತನ್ನ ದಾಸರಿಗಾಗಿ, ಹೊರ ತೆಗೆದಿರುವ ವಸ್ತ್ರ ಭೂಷಣಗಳನ್ನು ನಿಷಿದ್ಧಗೊಳಿಸಿದವನಾರು?" (ಅಲ್ ಅಅ್‌ರಾಫ್: 32)

قُلْ اِنَّ اللّٰهَ لَا يَاْمُرُ بِالْفَحْشَآءِ

"ಅಲ್ಲಾಹನು ಅಶ್ಲೀಲ ಕಾರ್ಯಗಳನ್ನು ಮಾಡಲು ಎಂದೆಂದಿಗೂ ಅಪ್ಪಣೆ ಕೊಡುವುದಿಲ್ಲವೆಂದು ಇವರೊಡನೆ ಹೇಳಿರಿ." (ಅಲ್ ಅಅ್‌ರಾಫ್: 28)

ಹಜ್ಜ್‌ನ ತಿಂಗಳುಗಳನ್ನು ಅದಲು ಬದಲು ಮಾಡುವುದರಿಂದ ತಡೆ

يٰبَنِيْٓ اٰدَمَ خُذُوْا زِيْنَتَكُمْ عِنْدَ كُلِّ مَسْجِدٍ

ಓ ಆದಮನ ಸಂತತಿಯವರೇ, ಪ್ರತಿಯೊಂದು ಆರಾಧನಾ ಕರ್ಮದ ವೇಳೆ ನಿಮ್ಮ ಅಲಂಕಾರ (ಅರ್ಥಾತ್ ಉಡುಪು)ವನ್ನು ಧರಿಸಿಕೊಂಡು ಇರಿ." (ಅಲ್ ಅಅ್‌ರಾಫ್: 31)

ಹಜ್ಜ್ ಯಾತ್ರೆಗೆಂದು ಮೀಸಲಾಗಿರಿಸಿದ್ದ ತಿಂಗಳುಗಳನ್ನು ಅದಲು ಬದಲು ಮಾಡುವ ಮತ್ತು ನಿಷೇಧಿತ ಮಾಸಗಳನ್ನು ಕಲಹಕ್ಕಾಗಿ ಹಲಾಲ್ (ಅನುವದನೀಯ) ಮಾಡುವ ಕ್ರಮವನ್ನು ಸಂಪೂರ್ಣ ನಿಲ್ಲಿಸಲಾಯಿತು.

اِنَّمَا النَّسِيْٓءُ زِيَادَةٌ فِي الْكُفْرِ يُضَلُّ بِهِ الَّذِيْنَ كَفَرُوْا يُحِلُّوْنَهٗ عَامًا

وَّيُحَرِّمُوْنَهٗ عَامًا لِّيُوَاطِـُٔوْا عِدَّةَ مَا حَرَّمَ اللّٰهُ فَيُحِلُّوْا مَا حَرَّمَ اللّٰهُ

"'ನಸೀ' ಎಂಬುದು ಸತ್ಯನಿಷೇಧದಲ್ಲಿ ಇನ್ನೊಂದು ಹೆಚ್ಚಳ. ಇದರಿಂದ ಸತ್ಯನಿಷೇಧಿಗಳು ಪಥಭ್ರಷ್ಟತೆಯಲ್ಲಿ ಸಿಲುಕಿಸಲ್ಪಡುತ್ತಾರೆ. ಅಲ್ಲಾಹನು ನಿಷಿದ್ಧಗೊಳಿಸಿದ ತಿಂಗಳುಗಳ ಸಂಖ್ಯೆ ಭರ್ತಿಯಾಗುವಂತೆ ಹಾಗೂ ಅಲ್ಲಾಹನು 'ನಿಷಿದ್ಧ'ಗೊಳಿಸಿದುದನ್ನು 'ಧರ್ಮಸಮ್ಮತ'ವನ್ನಾಗಿ

ಮಾಡಿಕೊಳ್ಳಲಿಕ್ಕಾಗಿ ಒಂದು ವರ್ಷ, ಒಂದು ತಿಂಗಳನ್ನು ಧರ್ಮಬದ್ಧಗೊಳಿಸಿಕೊಳ್ಳುತ್ತಾರೆ ಮತ್ತು ಇನ್ನೊಂದು ವರ್ಷ ಅದನ್ನು 'ನಿಷಿದ್ಧ'ಗೊಳಿಸಿಕೊಳ್ಳುತ್ತಾರೆ." (ಅತ್ತೌಬಃ : 37)

ದಾರಿ ವೆಚ್ಚವನ್ನು ಕೊಂಡೊಯ್ಯುವ ಆದೇಶ

ದಾರಿವೆಚ್ಚವನ್ನು ತ್ಯಜಿಸಿ ಹಜ್ಜ್ ಯಾತ್ರೆಗೆ ಹೊರಡುವುದನ್ನು ನಿಲ್ಲಿಸಲಾಯಿತು. ಆದೇಶ ಹೀಗಿದೆ:

وَتَزَوَّدُوا فَإِنَّ خَيْرَ الزَّادِ التَّقْوَىٰ

"ಹಜ್ಜ್ ಯಾತ್ರೆಗೆ ಹೋಗುವಾಗ ದಾರಿವೆಚ್ಚವನ್ನು ಕೊಂಡು ಹೋಗಿರಿ. ಅತ್ಯುತ್ತಮ ದಾರಿವೆಚ್ಚವು ಧರ್ಮನಿಷ್ಠೆ ಆಗಿರುತ್ತದೆ." (ಅಲ್‌ಬಕರಃ: 197)

ಹಜ್ಜ್‌ನಲ್ಲಿ ಸಂಪಾದನೆಗೆ ಅನುಮತಿ

ಹಜ್ಜ್ ಯಾತ್ರೆಯಲ್ಲಿ ಸಂಪಾದನೆ ಮಾಡುವುದನ್ನು ಪುಣ್ಯ ಕಾರ್ಯವಲ್ಲವೆಂದೂ ಸಂಪಾದನೆ ನಿಷಿದ್ಧವೆಂದೂ ಭಾವಿಸುತ್ತಿದ್ದುದನ್ನು ಖಂಡಿಸಲಾಯಿತು.

لَيْسَ عَلَيْكُمْ جُنَاحٌ أَنْ تَبْتَغُوا فَضْلًا مِّنْ رَّبِّكُمْ

"ನೀವು ಹಜ್ಜ್ ಯಾತ್ರೆಯ ಜೊತೆಯಲ್ಲೇ ನಿಮ್ಮ ಪ್ರಭುವಿನ ಅನುಗ್ರಹವನ್ನರಸುತ್ತ ಹೋಗುವುದರಲ್ಲೇನೂ ಅಡ್ಡಿಯಿಲ್ಲ." (ಅಲ್‌ಬಕರಃ: 198)

ಅಜ್ಞಾನ ಕಾಲದ ಕಂದಾಚಾರಗಳನ್ನು ಕೊನೆಗೊಳಿಸಲಾಯಿತು

ಮೂಕ ಹಜ್ಜ್ ಮತ್ತು ಹಸಿವು ದಾಹಗಳ ಹಜ್ಜ್‌ಗಳನ್ನು ತಡೆಯಲಾಯಿತು. ಹೀಗೆ ಅಜ್ಞಾನ ಕಾಲದ ಇನ್ನಿತರ ಕಂದಾಚಾರಗಳನ್ನೆಲ್ಲ ಅಳಿಸಿ, ಹಜ್ಜ್ ಯಾತ್ರೆಯನ್ನು ದೇವಭಯ, ಪಾವಿತ್ರ್ಯ, ಸರಳತೆ, ಸಾತ್ವಿಕತೆಗಳ ಪರಿಪೂರ್ಣ ಮಾದರಿಯನ್ನಾಗಿ ಮಾಡಲಾಯಿತು. ನಿಮ್ಮ ಮನೆಗಳಿಂದ ಯಾತ್ರೆಗೆ ಹೊರಡುವಾಗ ಎಲ್ಲಾ ವಿಧದ ಲೌಕಿಕ ಮಾಲಿನ್ಯಗಳಿಂದ ಪರಿಶುದ್ಧರಾಗಿ ಹೊರಡಿರೆಂದೂ ಕಾಮಾಪೇಕ್ಷೆಗಳನ್ನು ತ್ಯಜಿಸಿರೆಂದೂ ನಿಮ್ಮ ಪತ್ನಿಯರೊಂದಿಗೆ ಆ ಅವಧಿಯಲ್ಲಿ ಲೈಂಗಿಕ ಸಂಪರ್ಕವನ್ನಿರಿಸಿಕೊಳ್ಳಬೇಡಿರೆಂದೂ ಬಯ್ದಾಟವೇ ಮುಂತಾದ ಅಸಭ್ಯ ವರ್ತನೆಗಳನ್ನು ವರ್ಜಿಸಿರೆಂದೂ ಹಾಜಿಗಳಿಗೆ (ಹಜ್ಜ್ ಯಾತ್ರಿಕರಿಗೆ) ಆದೇಶಿಸಲಾಯಿತು.

ಮೀಕಾತ್(ಮೇರೆಗಳ) ನಿರ್ಣಯ

ಕಅಬಾದ ಕಡೆಗೆ ಬರಲಿಕ್ಕಿರುವ ಎಲ್ಲ ದಾರಿಗಳಲ್ಲೂ ಅನೇಕ ಮೈಲಿಗಳ ದೂರದಲ್ಲಿ ಗಡಿಗಳನ್ನು ನಿಶ್ಚಯಿಸಲಾಯಿತು. ಬಡವ-ಬಲ್ಲಿದರೆಂಬ ಹಾಗೂ ವಿಭಿನ್ನ ಜನಾಂಗಗಳೆಂಬ

ಭೇದಭಾವ ಮಾಸಿ ಹೋಗುವಂತೆ ಮತ್ತು ಎಲ್ಲರೂ ಒಂದಾಗಿ ಅಲ್ಲಾಹನ ಆಸ್ಥಾನದಲ್ಲಿ ವಿನಯಿಗಳಾಗಿ ಹಾಜರಾಗುವಂತೆ ಆ ಗಡಿಗಳನ್ನು ದಾಟುವ ಮುನ್ನ ಎಲ್ಲರೂ ತಮ್ಮ ಉಡುಪನ್ನು ಬದಲಾಯಿಸಿ, 'ಇಹ್ರಾಮ್'ನ ಸಾತ್ವಿಕ ಉಡುಪನ್ನು ಧರಿಸಿಕೊಂಡೇ ಮುಂದುವರಿಯಬೇಕೆಂಬ ನಿಯಮವನ್ನಿರಿಸಲಾಯಿತು. ಪಾಶವೀ ಗುಣದ ನಿರ್ಮೂಲನವಾಗಿ, ಶಾಂತಿಪ್ರಿಯತೆಯು ನೆಲೆನಿಂತು, ಮಾನವ ಸ್ವಭಾವಗಳಲ್ಲಿ ಆಧ್ಯಾತ್ಮಿಕತೆಯ ಪ್ರಭಾವ ವೃದ್ಧಿಗೊಳ್ಳಬೇಕಾಗಿದೆ.

ಶಾಂತಿಯ ವಾತಾವರಣ

ಮಾನವನ ರಕ್ತಪಾತವಂತಿರಲಿ - ಇಹ್ರಾಮ್ ಕಟ್ಟಿದ ಬಳಿಕ ಪ್ರಾಣಿ ಬೇಟೆಯನ್ನೂ ಅದಕ್ಕಾಗಿ ನಿಷೇಧಿಸಲಾಯಿತು. 'ಕಅಬಾ'ಕ್ಕೆ ಹೋಗಿ ಬರಲಿಕ್ಕಿರುವ ನಾಲ್ಕು ತಿಂಗಳುಗಳನ್ನು ಹರಾಮ್(ನಿಷೇಧ)ಗೊಳಿಸಿ, ಆ ಅವಧಿಯಲ್ಲಿ ಯಾವತ್ತು ಕಲಹಗಳಿಲ್ಲದೆ ಶಾಂತಿ ನೆಲೆಗೊಳ್ಳು ವಂತೆಯೂ ಯಾತ್ರಿಕರನ್ನು ಯಾರೂ ಕೆಣಕದಂತೆಯೂ ಮಾಡಲಾಯಿತು. ಇಷ್ಟು ಗೌರವದಿಂದ 'ಹರಮ್'ನ್ನು ತಲಪುವ ಹಾಜಿ ಅಲ್ಲಿ ಜಾತ್ರೆ, ಆಟ, ನೃತ್ಯಾದಿಗಳಲ್ಲಿ ಪಾಲ್ಗೊಳ್ಳುವುದಿಲ್ಲ. ಹೆಚ್ಚೆಹೆಚ್ಚಿಗೂ ದೇವಸ್ಮರಣೆ, ನಮಾಝ್, ಆರಾಧನೆ, ತ್ಯಾಗ, ಬಲಿದಾನ, ತವಾಫ್‌ಗಳನ್ನು ಮಾಡುವುದರ ಜೊತೆಗೆ 'ತಲ್ಬಿಯ' ಎಂಬ ಈ ಘೋಷಣೆ ಹೇಳಬೇಕಾಗಿದೆ.

ಒಂದೇ ಘೋಷಣೆ - ತಲ್ಬಿಯ

لَبَّيْكَ اَللّٰهُمَّ لَبَّيْكَ، لَبَّيْكَ لَاشَرِيْكَ لَكَ لَبَّيْكَ، إِنَّ الْحَمْدَ
وَالنِّعْمَةَ لَكَ وَالْمُلْكَ، لَاشَرِيْكَ لَكَ۔

"ಲಬ್ಬೈಕ ಅಲ್ಲಾಹುಮ್ಮ ಲಬ್ಬೈಕ, ಲಬ್ಬೈಕ್ ಲಾ ಶರೀಕ ಲಕ ಲಬ್ಬೈಕ್, ಇನ್ನಲ್‌ಹಮ್ದ ವನ್ನಿಅ್‌ಮತ ಲಕ ವಲ್‌ಮುಲ್ಕ್ ಲಾ ಶರೀಕಲಕ್." (ನಾನು ಹಾಜರಾಗಿದ್ದೇನೆ. ನನ್ನ ದೇವಾ ನಾನು ಹಾಜರಾಗಿದ್ದೇನೆ. ನಾನು ಹಾಜರಾಗಿದ್ದೇನೆ. ನಿನ್ನ ಸಹಭಾಗಿ ಯಾರೂ ಇಲ್ಲ. ನಾನು ಹಾಜರಾಗಿದ್ದೇನೆ. ನಿಶ್ಚಯವಾಗಿಯೂ ಸರ್ವ ಪ್ರಶಂಸೆಗಳೂ ನಿನಗಾಗಿವೆ. ಅನುಗ್ರಹಗಳೆಲ್ಲವೂ ನಿನ್ನದಾಗಿವೆ. ಸಾಮ್ರಾಜ್ಯ ನಿನ್ನದು. ನಿನ್ನ ಸಹಭಾಗಿ ಯಾರೂ ಇಲ್ಲ.)

مَنْ حَجَّ لِلّٰهِ فَلَمْ يَرْفُثْ وَلَمْ يَفْسُقْ رَجَعَ كَيَوْمٍ وَلَدَتْهُ أُمُّهُ۔

ಈ ತರದ ಪಾವನ ಹಾಗೂ ಅಪ್ಪಟ ನಿಷ್ಠಾಪೂರ್ವಕ 'ಹಜ್ಜ್' ಯಾತ್ರೆಯ ಬಗ್ಗೆ ಪ್ರವಾದಿಯವರು(ಸ) ಹೀಗೆ ನುಡಿದಿರುತ್ತಾರೆ. "ಕೇವಲ ಅಲ್ಲಾಹನಿಗಾಗಿ ಹಜ್ಜ್ ಯಾತ್ರೆ ಕೈಗೊಂಡಾತನು ಮತ್ತು ಅದರಲ್ಲಿ ಕಾಮಾಪೇಕ್ಷೆ, ದುರಾಚಾರ, ಅಪರಾಧ, ಪಾಪ ಕಾರ್ಯ

ಗಳನ್ನು ವರ್ಜಿಸಿದಾತನು ತನ್ನ ತಾಯಿಯ ಉದರದಿಂದ ಇಂದು ತಾನೇ ಹುಟ್ಟಿ ಬಂದ ರೀತಿಯಲ್ಲಿ ಹಿಂದಿರುಗಿ ಬರುತ್ತಾನೆ."

ಹಜ್ಜ್‌ನ ಪ್ರಾಮುಖ್ಯತೆ

ಇನ್ನು ಹಜ್ಜ್ ಯಾತ್ರೆಯ ಪ್ರಯೋಜನಗಳನ್ನು ನಿಮ್ಮ ಮುಂದೆ ವಿವರಿಸುವುದಕ್ಕೆ ಮುಂಚೆ ಇದೆಂತಹ ಕಡ್ಡಾಯ ವಿಧಿಯೆಂಬುದನ್ನು ತಿಳಿಸಬೇಕಾದುದು ಅಗತ್ಯ. ಪವಿತ್ರ ಕುರ್‌ಆನಿನಲ್ಲಿ ಅಲ್ಲಾಹನ ವಾಣಿ ಹೀಗಿದೆ:

وَلِلّٰهِ عَلَى النَّاسِ حِجُّ الْبَيْتِ مَنِ اسْتَطَاعَ إِلَيْهِ سَبِيْلًا ۚ وَمَنْ كَفَرَ فَإِنَّ اللّٰهَ غَنِيٌّ عَنِ الْعٰلَمِيْنَ ﴿٩٧﴾

"ಈ ಭವನದವರೆಗೆ ತಲಪಲು ಸಾಧನಾನುಕೂಲತೆಗಳಿರುವವನು ಅದರ 'ಹಜ್ಜ್' ಯಾತ್ರೆ ಕೈಗೊಳ್ಳಬೇಕೆಂಬುದು ಜನರ ಮೇಲೆ ಅಲ್ಲಾಹನ ಹಕ್ಕಾಗಿರುತ್ತದೆ. ಈ ಆಜ್ಞೆಯ ಅನುಸರಣೆಯನ್ನು ಯಾರಾದರೂ (ಸಾಧ್ಯವಿದ್ದೂ) ನಿರಾಕರಿಸಿದರೆ, ಅಲ್ಲಾಹನು ಸಕಲ ಜಗತ್ತಿನವರಿಂದ ನಿರಪೇಕ್ಷನಾಗಿರುತ್ತಾನೆಂಬುದನ್ನು ಅವನು ಅರಿತಿರಬೇಕು." (ಆಲಿ ಇಮ್ರಾನ್: 97)

ಶಕ್ತಿಯಿದ್ದೂ ಉದ್ದೇಶಪೂರ್ವಕವಾಗಿ ಹಜ್ಜ್‌ಯಾತ್ರೆ ಮಾಡದಿರುವುದನ್ನು 'ಕುಫ್ರ್' ಎಂದು ಹೇಳಲಾಗಿದೆ. ಅದರ ವಿವರಣೆಯು ಪ್ರವಾದಿಯವರ(ಸ) ಈ ಎರಡು ಹದೀಸ್‌ಗಳಿಂದ ತಿಳಿದು ಬರುತ್ತದೆ.

مَنْ مَلَكَ زَادًا وَّ رَاحِلَةً تُبَلِّغُهُ اِلٰى بَيْتِ اللّٰهِ وَلَمْ يَحُجَّ
فَلَا عَلَيْهِ اَنْ يَّمُوْتَ يَهُوْدِيًّا اَوْنَصْرَانِيًّا۔

"ದಾರಿವೆಚ್ಚ ಹಾಗೂ ದೇವ ಮಂದಿರವನ್ನು ತಲಪಲು ಬೇಕಾದ ವಾಹನ ಸೌಕರ್ಯ ವಿರುವಾತನು ಇನ್ನೂ ಹಜ್ಜ್ ಯಾತ್ರೆ ಕೈಗೊಳ್ಳದಿದ್ದರೆ, ಆ ಸ್ಥಿತಿಯಲ್ಲಿ ಅವನ ಮರಣವು ಯಹೂದೀ ಅಥವಾ ನಸ್ರಾನೀ ಆಗಿ ಹೊಂದುವ ಮರಣಕ್ಕೆ ಸಮಾನ ಆಗಿದೆ."

مَنْ لَّمْ يَمْنَعْهُ مِنَ الْحَجِّ حَاجَةٌ ظَاهِرَةٌ اَوْسُلْطَانٌ جَائِرٌ
اَوْمَرَضٌ حَابِسٌ فَمَاتَ وَلَمْ يَحُجَّ فَلْيَمُتْ اِنْ شَآءَ
يَهُوْدِيًّا وَّاِنْ شَآءَ نَصْرَانِيًّا۔

ನಿರ್ದಿಷ್ಟ ಅವಶ್ಯಕತೆ, ದುಷ್ಟ ಅರಸ ಅಥವಾ ಗುಣವಾಗದ ರೋಗ ಇವುಗಳ ಪೈಕಿ ಯಾವುದೂ ಹಜ್ಜ್ ಯಾತ್ರೆಗೆ ಆತಂಕವನ್ನುಂಟು ಮಾಡದಿದ್ದರೂ ಹಜ್ಜ್ ಯಾತ್ರೆ ಕೈಗೊಳ್ಳದವನಿಗೆ ಅದೇ ಸ್ಥಿತಿಯಲ್ಲಿ ಮರಣ ಬಂದು ಬಿಟ್ಟರೆ, ಅವನು ಯಹೂದಿಯಾಗಿಯೋ ಅಥವಾ ನಸ್ರಾನಿಯಾಗಿಯೋ ಸಾಯಬಹುದಾಗಿದೆ.

ಇದರ ವ್ಯಾಖ್ಯಾನವನ್ನೇ ಹ. ಉಮರ್‌ರವರು(ರ) ಈ ರೀತಿ ಮಾಡಿದರು: "ಸಾಮರ್ಥ್ಯವಿದ್ದೂ ಹಜ್ಜ್ ಯಾತ್ರೆ ಕೈಗೊಳ್ಳದವರ ಮೇಲೆ ಜಿಝಿಯಾ ವಿಧಿಸಬೇಕೆಂದು ನನಗನಿಸುತ್ತದೆ. ಅವರು ಮುಸ್ಲಿಮರಲ್ಲ, ಅವರು ಮುಸ್ಲಿಮರಲ್ಲ."

ಇಷ್ಟವಿದ್ದರೆ ನೆರವೇರಿಸಬಹುದು. ಇಲ್ಲವಾದರೆ ಬಿಟ್ಟುಬಿಡಬಹುದಾದಂತಹ ಕಡ್ಡಾಯ ವಿಧಿ ಇದಲ್ಲವೆಂದೂ ಕಅಬಾದ ವರೆಗೆ ಹೋಗಿ ಬರಲು ಬೇಕಾದ ಖರ್ಚನ್ನು ಸಹಿಸಿಕೊಳ್ಳಲು ಸಮರ್ಥನಾದವನೂ ಅಂಗವಿಕಲನಲ್ಲದವನೂ ಅವನ ಮೇಲೆ ಮಕ್ಕಳು ಮರಿಗಳು ವ್ಯಾಪಾರ-ವಹಿವಾಟುಗಳು, ಉದ್ಯೋಗ ಇತ್ಯಾದಿ ಎಂತಹುದೇ ಹೊಣೆಗಾರಿಕೆಗಳು ಬಿದ್ದಿರಲಿ, ಅವನು ಭೂಮಂಡಲದ ಯಾವ ಮೂಲೆಯಲ್ಲಿ ವಾಸಿಸುತ್ತಿದ್ದರೂ ಜೀವಮಾನದಲ್ಲಿ ಒಂದು ಬಾರಿ ಹಜ್ಜ್ ಯಾತ್ರೆಯನ್ನು ಕೈಗೊಳ್ಳಬೇಕಾದುದು ಅತ್ಯಂತ ಕಡ್ಡಾಯ ವಿಧಿಯಾಗಿರುತ್ತದೆಂದು ಅಲ್ಲಾಹನ ಆದೇಶ. ಪ್ರವಾದಿಯವರ(ಸ) ಹೇಳಿಕೆ ಮತ್ತು ಖಲೀಫರ(ರ) ನಿರೂಪಣೆಗಳಿಂದ ಸ್ಪಷ್ಟವಾಗುತ್ತದೆ! ಸಾಮರ್ಥ್ಯವಿದ್ದೂ ಹಜ್ಜ್ ವಿಧಿಯನ್ನು ಮುಂದೂಡುವವರೂ ಸಾವಿರಾರು ಕೆಲಸ ಬಾಹುಳ್ಯಗಳ ನೆಪಗಳನ್ನೊಡ್ಡುತ್ತ ಕಾಲಹರಣ ಮಾಡುತ್ತಿರುವವರೂ ತಮ್ಮ ಈಮಾನಿಗೇ ವಿದಾಯ ಹೇಳಬೇಕಾಗಿದೆ. ಇನ್ನು ಲೋಕವಿಡೀ ಸಂಚಾರ ಮಾಡುತ್ತಿರುತ್ತಾ ಯುರೋಪ್ ಎಂಬ ಕಅಬಾಕ್ಕೆ ಹೋಗುತ್ತ ಬರುತ್ತ, ಅಲ್ಲಿಂದ ಕೆಲವೇ ಮೈಲುಗಳ ದೂರದಲ್ಲಿರುವ ಮಕ್ಕಾ ಪಟ್ಟಣ ವಿರುವ ಹಿಜಾಝಿನ ಕರಾವಳಿಯ ಪಕ್ಕದಿಂದಲೇ ಸಾಗುತ್ತಲಿದ್ದರೂ ಹೃದಯದಲ್ಲಿ ಹಜ್ಜ್ ಯಾತ್ರೆಯ ನೆನಪು ಸಹ ಉಂಟಾಗದಂಥವರು ಖಂಡಿತ ಮುಸ್ಲಿಮರಲ್ಲ, ತಾವು ಮುಸ್ಲಿಮ ರೆಂದು ಹೇಳಿಕೊಳ್ಳುತ್ತಿದ್ದರೆ ಅದು ಹಸಿ ಸುಳ್ಳು. ಅಂಥವರನ್ನು ಮುಸ್ಲಿಮರೆಂದು ತಿಳಿಯು ವವರು ಕುರ್‌ಆನಿನ ಬಗ್ಗೆ ಅಜ್ಞಾನಿಗಳಾಗಿದ್ದಾರೆ. ಅವರ ಹೃದಯದಲ್ಲಿ ಮುಸ್ಲಿಮರ ಬಗ್ಗೆ ಅನುಕಂಪ ವಿದ್ದರೆ ಇರಲಿ. ಅಲ್ಲಾಹನ ದಾಸ್ಯ-ಅನುಸರಣೆ ಮತ್ತು ಅವನ ಆದೇಶಗಳ ಮೇಲಿನ ವಿಶ್ವಾಸದ ಕಳಕಳಿಯಂತೂ ಅವರ ಹೃದಯದಲ್ಲಿ ಇಲ್ಲವೇ ಇಲ್ಲ.

○

ಹಜ್ಜ್ ಯಾತ್ರೆಯ ಪ್ರಯೋಜನಗಳು

ಮುಸ್ಲಿಮ್ ಬಂಧುಗಳೇ,

ಪವಿತ್ರ ಕುರ್‌ಆನಿನಲ್ಲಿ ಅಲ್ಲಾಹನು ಹ. ಇಬ್ರಾಹೀಮ್‌ರವರಿಗೆ(ಅ) ಹಜ್ಜ್ ಯಾತ್ರೆಯ ಸಾರ್ವತ್ರಿಕ ಘೋಷಣೆ ನೀಡಲು ಆದೇಶಿಸಿರುವಲ್ಲಿ, ಅದರ ಒಂದನೆಯ ಕಾರಣವನ್ನು ಹೀಗೆ ವಿವರಿಸಲಾಗಿದೆ -

لِّيَشْهَدُوا مَنَافِعَ لَهُمْ

"(ಈ ರೀತಿ) ಅವರು ಇಲ್ಲಿ ಅವರಿಗಾಗಿ ಇರಿಸಲಾಗಿರುವ ಪ್ರಯೋಜನಗಳನ್ನು ಪ್ರತ್ಯಕ್ಷವಾಗಿ ನೋಡುವಂತಾಗಲಿ." (ಅಲ್ ಹಜ್ಜ್: 28)

ಅದೆಂದರೆ ಜನರು ಈ ಪ್ರಯಾಣ ಕೈಗೊಂಡು, ಇಲ್ಲಿ ಒಟ್ಟು ಸೇರಿ, ಎಲ್ಲವನ್ನೂ ಕಣ್ಣಾರೆ ಕಂಡು ಇವೆಲ್ಲಾ ತಮ್ಮ ಲಾಭಕ್ಕಾಗಿಯೇ ಇವೆ ಎಂಬುದನ್ನು, ಇದರ ಪ್ರಯೋಜನ ಗಳನ್ನು ಕಣ್ಣಾರೆ ಕಂಡಾಗ ಮಾತ್ರ ಮನವರಿಕೆ ಮಾಡಿಕೊಳ್ಳಬಹುದು. ಹ. ಇಮಾಮ್ ಅಬೂ ಹನೀಫಾರವರಿಗೆ(ರ) ಇಸ್ಲಾಮೀ ಆರಾಧನೆಗಳ ಪೈಕಿ ಅತ್ಯಂತ ಶ್ರೇಷ್ಠವಾದುದು ಯಾವುದೆಂಬ ಬಗ್ಗೆ ಅನುಮಾನವಿತ್ತು. ಆದರೆ ಅವರು ಸ್ವತಃ ಹಜ್ಜ್ ಯಾತ್ರೆ ಮಾಡಿ, ಇದರಲ್ಲಿ ಅಡಗಿರುವ ಅಗಣಿತ ಪ್ರಯೋಜನಗಳನ್ನು ಕಂಡಾಗ ಖಂಡಿತವಾಗಿಯೂ ಹಜ್ಜ್ ಎಲ್ಲಕ್ಕಿಂತಲೂ ಶ್ರೇಷ್ಠವೆಂಬುದರಲ್ಲಿ ಸಂದೇಹವೇ ಇಲ್ಲವೆಂದು ಸಾರಿಬಿಟ್ಟರೆಂದು ಅವರ ಕುರಿತು ಉಲ್ಲೇಖವಿದೆ.

ಈಗ ನಾನು ಆ ಪ್ರಯೋಜನಗಳನ್ನು ಸಂಕ್ಷಿಪ್ತ ಮಾತುಗಳಲ್ಲಿ ವಿವರಿಸುವೆನು.

ಹಜ್ಜ್ ಪ್ರಯಾಣದ ವಿಧಗಳು

ಜನರು ಸಾಮಾನ್ಯವಾಗಿ ಎರಡು ವಿಧದ ಪ್ರವಾಸಗಳನ್ನು ಮಾತ್ರ ಬಲ್ಲರು. ಉಪಜೀವನ ಸಂಪಾದನೆಗಾಗಿ ಮಾಡುವ ಪ್ರವಾಸ ಒಂದು, ವಿಹಾರಕ್ಕಾಗಿ ಮಾಡುವ ಪ್ರವಾಸ ಇನ್ನೊಂದು. ಈ ಎರಡೂ ವಿಧದ ಪ್ರಯಾಣಗಳಲ್ಲೂ ತನ್ನ ಸ್ವಂತ ಲಾಭ ಮತ್ತು ಇಚ್ಛೆ ಅವನನ್ನು ಹೊರಡಲು ಪ್ರಚೋದಿಸುತ್ತದೆ. ಮನೆ ಬಿಡುವುದು ಸ್ವಾರ್ಥಕ್ಕಾಗಿ, ಮಕ್ಕಳು ಮರಿಗಳನ್ನೂ ಬಂಧು-ಬಳಗದವರನ್ನೂ ಅಗಲುವುದು ಸ್ವಲಾಭಕ್ಕಾಗಿ. ಹಣವನ್ನಾಗಲೀ ಸಮಯವನ್ನಾಗಲಿ ವಿನಿಯೋಗಿಸುವುದು ಸ್ವಹಿತಕ್ಕಾಗಿ. ಆದುದರಿಂದ ಇದರಲ್ಲಿ ತ್ಯಾಗದ ಪ್ರಶ್ನೆಯೇ ಇಲ್ಲ. ಆದರೆ

ಹಜ್ಜ್ ಎಂದು ಕರೆಯಲಾಗುವ ಈ ಪ್ರಯಾಣ ಇತರ ಪ್ರಯಾಣಗಳಿಗಿಂತ ತೀರಾ ಭಿನ್ನವಾಗಿದೆ. ಈ ಪ್ರಯಾಣವು ತನ್ನ ದೇಹೇಚ್ಛೆಗಾಗಿ ಅಥವಾ ತನ್ನ ಯಾವುದಾದರೊಂದು ಸ್ವಾರ್ಥ ಸಾಧನೆಗಾಗಿರುವುದಿಲ್ಲ. ಇದು ಕೇವಲ ಅಲ್ಲಾಹನಿಗಾಗಿ ಮತ್ತು ಅಲ್ಲಾಹನು ನಿಶ್ಚಯಿಸಿರುವ ಕಡ್ಡಾಯ ವಿಧಿಯನ್ನು ನೆರವೇರಿಸಲಿಕ್ಕಾಗಿದೆ. ಒಬ್ಬನ ಹೃದಯದಲ್ಲಿ ಅಲ್ಲಾಹನ ಮೇಲೆ ಪ್ರೇಮ, ಅವನ ಭಯ ಮತ್ತು ಅವನು ನಿರ್ಣಯಿಸಿದ ಕಡ್ಡಾಯ ವಿಧಿಯನ್ನು ಕಡ್ಡಾಯ ವಿಧಿಯೆಂದು ತಿಳಿಯುವ ಯೋಚನೆ ಉಂಟಾಗುವವರೆಗೆ ಯಾರೊಬ್ಬನೂ ಈ ಪ್ರಯಾಣಕ್ಕೆ ಹೊರಡಲಾರನು. ಆದುದರಿಂದ ತನ್ನ ಮನೆಮಾರುಗಳಿಂದ, ಬಂಧು-ಬಳಗದವರಿಂದ ಒಂದು ದೀರ್ಘ ಕಾಲದ ವರೆಗಿನ ಅಗಲುವಿಕೆಯನ್ನೂ ತನ್ನ ವ್ಯವಹಾರಗಳ ನಷ್ಟ, ಹಣದ ವ್ಯಯ, ಈ ಪ್ರಯಾಣದ ಕಷ್ಟ ಪರಂಪರೆಗಳನ್ನೂ ಸಹಿಸಿಕೊಂಡು ಹಜ್ಜ್ ಯಾತ್ರೆಗೆ ಸಿದ್ಧನಾಗಿ ಹೊರಡುವುದೇ ಅವನಲ್ಲಿ ದೇವಭಯ, ದೇವಪ್ರೇಮ, ಕರ್ತವ್ಯ ಪ್ರಜ್ಞೆಯಿದೆಯೆಂದೂ ಯಾವ ಸಂದರ್ಭದಲ್ಲಾದರೂ ಅಲ್ಲಾಹನ ಮಾರ್ಗದಲ್ಲಿ ಹೊರಡುವ ಅಗತ್ಯ ಬಿದ್ದಾಗ ಕೂಡಲೇ ಹೊರಡಬಲ್ಲನು, ಕಷ್ಟಗಳನ್ನು ಸಹಿಸಬಲ್ಲನು. ತನ್ನ ಹಣ, ತನ್ನ ದೇಹ-ಸುಖಾದಿಗಳನ್ನು ಅಲ್ಲಾಹನ ಸಂಪ್ರೀತಿ ಗಳಿಸಲಿಕ್ಕಾಗಿ ತ್ಯಾಗ ಮಾಡಲು ಸಿದ್ಧನಾಗಬಲ್ಲನೆಂಬುದನ್ನೂ ವ್ಯಕ್ತಪಡಿಸುತ್ತದೆ.

ಪುಣ್ಯ ಹಾಗೂ ದೇವಭಯದಲ್ಲಿ ಆಸಕ್ತಿ

ಇಷ್ಟೊಂದು ನಿಷ್ಕಳಂಕ ಇರಾದೆಯಿಂದ ಅವನು ಪ್ರಯಾಣಕ್ಕೆ ಸಿದ್ಧನಾಗುವಾಗ ಅವನ ಮಾನಸಿಕ ಸ್ಥಿತಿಯೇ ಬೇರೆಯಾಗಿರುತ್ತದೆ. ಹೃದಯದಲ್ಲಿ ದೇವಪ್ರೇಮ ಪ್ರಜ್ವಲಿಸುತ್ತಿರುವಾತನ ಹಾಗೂ ಆ ಕಡೆಯ ಯೋಚನೆ ಹಿಡಿದಾತನ ಮನಸ್ಸಿನಲ್ಲಿ ಪರಿಶುದ್ಧ ಭಾವನೆಗಳೇ ಬರಲಾರಂಭಿಸುತ್ತವೆ. ಅವನು ಪಾಪಗಳಿಗಾಗಿ ಪಶ್ಚಾತ್ತಾಪಪಡುತ್ತಾನೆ. ಜನರಿಗೆ ತನ್ನಿಂದ ಸಂಭವಿಸಿ ಹೋಗಿರಬಹುದಾದ ತಪ್ಪುಗಳಿಗಾಗಿ ಅವರಲ್ಲಿ ಕ್ಷಮೆ ಬೇಡುತ್ತಾನೆ. ಇತರರ ಋಣಭಾರ ಅವನ ಮೇಲಿದ್ದರೆ, ದೇವಸನ್ನಿಧಿಗೆ ಸೃಷ್ಟಿಗಳ ಋಣಭಾರ ಹೊತ್ತುಕೊಂಡು ಹೋಗುವುದರ ಬದಲಿಗೆ ಅದನ್ನು ಇಲ್ಲೇ ಸಂದಾಯ ಮಾಡುವ ಯೋಚನೆಯಲ್ಲಿರುತ್ತಾನೆ. ಮನಸ್ಸಿನಲ್ಲಿ ಕೆಡುಕಿನ ಬಗ್ಗೆ ದ್ವೇಷವುಂಟಾಗಲಾರಂಭವಾಗುತ್ತದೆ. ಸ್ವಾಭಾವಿಕವಾಗಿ ಸುಕೃತ್ಯಗಳ ಕಡೆಗೆ ವಾಲುವಿಕೆ ಹೆಚ್ಚುತ್ತದೆ. ಅನಂತರ ಪ್ರಯಾಣವನ್ನಾರಂಭಿಸಿ ದೇವ ಭವನವನ್ನು ಸಮೀಪಿಸುತ್ತಿದ್ದಂತೆಯೇ ಅವನೊಳಗೆ ಹೆಚ್ಚೆಚ್ಚು ಪುಣ್ಯ ಕಾರ್ಯಾಸಕ್ತಿಯುಂಟಾಗುತ್ತಾ ಹೋಗುತ್ತದೆ. ತನ್ನಿಂದ ಯಾರಿಗೂ ತೊಂದರೆಯುಂಟಾಗಬಾರದೆಂದೂ ತನ್ನಿಂದಾದಷ್ಟು ಸೇವೆ ಮತ್ತು ಸಹಾಯ ಮಾಡಬೇಕೆಂದೂ ಅವನು ಪ್ರಯತ್ನಿಸುತ್ತಾನೆ. ಅವಾಚ್ಯ ಮಾತು, ಅಸಭ್ಯ ವರ್ತನೆ, ನಿರ್ಲಜ್ಜೆ, ಅಪ್ರಾಮಾಣಿಕತೆ, ಕಲಹ, ಕ್ಷೋಭೆ ಇತ್ಯಾದಿಗಳಿಂದ ಅವನ ಮನಸ್ಸು ಒಳಗಿಂದಲೇ ತಡೆ ಯುತ್ತದೆ. ಏಕೆಂದರೆ ಅವನು ದೇವ ಮಾರ್ಗದಲ್ಲಿ ಸಾಗುತ್ತಿದ್ದಾನೆ. ಪವಿತ್ರ ಹರಮಿನ ಯಾತ್ರಿಕನಾಗಿದ್ದೂ ದುಷ್ಕಾರ್ಯಗಳನ್ನೆಸಗುತ್ತ ಹೋಗುವುದೇ? ಇಂತಹ ಲಜ್ಜಾಸ್ಪದ ಕೆಲಸ ಈ ಯಾತ್ರಿಕನಿಂದ

ಸಂಭವಿಸುವುದು ಹೇಗೆ? ಅವನ ಪ್ರಯಾಣವಂತು ಸಂಪೂರ್ಣ ಇಬಾದತ್ (ದಾಸ್ಯ-ಆರಾಧನೆ) ಆಗಿದೆ. ಈ ಆರಾಧನಾವಧಿಯಲ್ಲಿ ಅತ್ಯಾಚಾರ, ಧರ್ಮಭ್ರಷ್ಟತೆಗಳಿಗೆ ಎಡೆಯೆಲ್ಲಿ? ಆದುದರಿಂದ ಇತರ ಎಲ್ಲ ವಿಧದ ಪ್ರಯಾಣಗಳಿಗೆ ವ್ಯತಿರಿಕ್ತವಾಗಿ ಇದು ಕ್ಷಣ ಕ್ಷಣಕ್ಕೂ ಆತ್ಮಶುದ್ಧಿ ಮಾಡುತ್ತಲಿರುವಂತಹ ಪ್ರಯಾಣವಾಗಿರುತ್ತದೆ. ಇದು ಹಜ್ಜ್ ಯಾತ್ರೆಗೆ ಹೋಗುವ ಪ್ರತಿಯೊಬ್ಬ ಮುಸ್ಲಿಮನಿಗೂ ಅಗತ್ಯವಾಗಿ ಅನುಭವಿಸಿಯೇ ತೀರಬೇಕಾದ ಪರಿಷ್ಕರಣಾ ಕಾಲಾವಧಿಯೆಂದೇ ತಿಳಿದುಕೊಳ್ಳಿ.

ಇಹ್ರಾಮ್ ಮತ್ತು ಅದರ ಶರತ್ತುಗಳು

ಪ್ರಯಾಣದ ಒಂದಂಶ ಮುಗಿದ ಬಳಿಕ ಒಂದು ನಿಶ್ಚಿತ ಗಡಿ ಬರುತ್ತದೆ. ಅಲ್ಲಿಂದ ಮಕ್ಕಾಕ್ಕೆ ಹೋಗಲು ಬಯಸುವ ಮುಸ್ಲಿಮನು ಇಹ್ರಾಮ್ ಕಟ್ಟದೆ ಮುಂದೆ ಸಾಗಬಾರದು. ಈ ಇಹ್ರಾಮ್ ಎಂದರೇನು? ಒಂದು ಪಂಚೆ, ಒಂದು ಚಾದರ ಮತ್ತು ಪಾದರಕ್ಷೆಯ ವಿನಾ ಬೇರೇನೂ ಇಲ್ಲದ ಸಾತ್ವಿಕ ಉಡುಪು. ಇದರ ಅರ್ಥವೇನೆಂದರೆ ಇಷ್ಟರ ತನಕ ನೀವು ಏನಾಗಿದ್ದರೂ ಸರಿ. ಆದರೆ ಈಗ ನೀವು ದೇವಸನ್ನಿಧಿಗೆ ಹೋಗಬೇಕಾದರೆ ಸಾಧುವಾಗಿಯೇ ಹೋಗಬೇಕು. ಬಹಿರಂಗವಾಗಿಯೂ ಹೃದಯದಲ್ಲೂ ಸಾಧುವಾಗಲು ಪ್ರಯತ್ನಿಸಬೇಕು. ಬಣ್ಣಬಣ್ಣದ ಬಟ್ಟೆಗಳನ್ನೂ ಅಲಂಕಾರದ ಒಡವೆಗಳನ್ನೂ ಕಳಚಿಬಿಡಿರಿ. ಸರಳ ಹಾಗೂ ಸಾತ್ವಿಕ ಉಡುಪನ್ನು ಧರಿಸಿರಿ. ಕಾಲ್ಚೀಲಗಳನ್ನು ಧರಿಸಬೇಡಿರಿ. ತಲೆ ಬಿಟ್ಟಿರಿ. ಸುಗಂಧ ಪೂಸಬೇಡಿರಿ. ಕ್ಷೌರ ಮಾಡಿಸಬೇಡಿರಿ. ಎಲ್ಲ ತರದ ಅಲಂಕಾರಗಳನ್ನೂ ವರ್ಜಿಸಿರಿ. ಲೈಂಗಿಕ ಸಂಬಂಧವನ್ನು ವರ್ಜಿಸಿರಿ. ಇಷ್ಟೇ ಅಲ್ಲ, ಅದಕ್ಕೆ ಪ್ರಚೋದನೆ ಕೊಡುವ ಅಥವಾ ಅದರ ನೆನಪು ಹುಟ್ಟಿಸುವ ಯಾವುದೇ ಕೆಲಸ ಮಾಡಬೇಡಿರಿ. ಬೇಟೆಯಾಡಬೇಡಿರಿ. ಬೇಟೆಗಾರನಿಗೆ ಬೇಟೆಯ ಪರಿಚಯ ಅಥವಾ ಸುಳಿವನ್ನೂ ಕೊಡಬೇಡಿರಿ. ಬಹಿರಂಗವಾಗಿ ಈ ವರ್ಣ ತಾಳಿದಾಗ ಅದರ ಪ್ರಭಾವ ಅಂತರಂಗದ ಮೇಲೆಯೂ ಬೀಳುವುದು. ಒಳಗಿಂದ ನಿಮ್ಮ ಮನಸ್ಸೂ ಸಾಧುವಾಗುವುದು. ಅಹಂಭಾವ ಅಹಂಕಾರಗಳು ತೊಲಗುವುವು. ಸಾತ್ವಿಕತೆ, ಶಾಂತಿಪ್ರಿಯತೆಗಳುಂಟಾಗುವುವು. ಜಗತ್ತು ಮತ್ತು ಅದರ ಸುಖಾಡಂಬರಗಳಲ್ಲಿ ಸಿಲುಕಿದ್ದ ಪರಿಣಾಮವಾಗಿ ನಿಮ್ಮ ಆತ್ಮಕ್ಕೆ ತಗಲಿಹೋಗಿರಬಹುದಾದ ಕೊಳೆ-ಕಶ್ಮಲಗಳು ನೀಗುವುವು. ದೇವಭಕ್ತಿಯು ನಿಮ್ಮನ್ನು ಆವರಿಸಿಕೊಳ್ಳುವುದು.

ತಲ್ಬಿಯ

ಇಹ್ರಾಮ್ ಕಟ್ಟುವುದರೊಂದಿಗೆ ಹಾಜಿಯು (ಹಜ್ಜ್ ಯಾತ್ರಿಕನು) ಪ್ರತಿ ನಮಾಝಿನ ಬಳಿಕ ಪ್ರತಿಯೊಂದು ತಗ್ಗಿನಲ್ಲಿ ಪ್ರತಿಯೊಂದು ಯಾತ್ರಿಕರ ತಂಡವನ್ನು ಸಂಧಿಸುವಾಗ, ಪ್ರತಿ ಮುಂಜಾನೆ ನಿದ್ದೆಯಿಂದೆದ್ದಾಗ ಉಚ್ಚ ಸ್ವರದಿಂದ ಕೂಗಿ ಹೇಳುವ ಮಾತಿದು:

لَبَّيْكَ اَللّٰهُمَّ لَبَّيْكَ، لَبَّيْكَ لَاشَرِيْكَ لَكَ لَبَّيْكَ، إِنَّ الْحَمْدَ وَالنِّعْمَةَ لَكَ وَالْمُلْكَ، لَاشَرِيْكَ لَكَ۔

"ಲಬ್ಬೈಕ್ ಅಲ್ಲಾಹುಮ್ಮ ಲಬ್ಬೈಕ್. ಲಬ್ಬೈಕ ಲಾ ಶರೀಕ ಲಕ ಲಬ್ಬೈಕ್ ಇನ್ನಲ್ ಹಮ್ದ ವನ್ನಿಅ್‌ಮತ ಲಕ ವಲ್ ಮುಲ್ಕ್- ಲಾ ಶರೀಕ ಲಕ್."

ಇದು ವಾಸ್ತವದಲ್ಲಿ 45 ಶತಮಾನಗಳ ಹಿಂದೆ ಹ. ಇಬ್ರಾಹೀಮ್‌ರವರು(ಅ) ದೇವಾದೇಶ ಪ್ರಕಾರ ಕೊಟ್ಟ ಕರೆಯ ಉತ್ತರವಾಗಿದೆ. ಅಲ್ಲಾಹನ ದಾಸರೇ, ಅಲ್ಲಾಹನ ಭವನದ ಕಡೆಗೆ ಬನ್ನಿರಿ. ಭೂಮಿಯ ಮೂಲೆಮೂಲೆಗಳಿಂದ ಬನ್ನಿರಿ, ನಡೆದು ಬನ್ನಿರಿ. ಇಲ್ಲವೇ ವಾಹನಗಳಲ್ಲಿ ಬನ್ನಿರಿ ಎಂದು ಅಲ್ಲಾಹನ ಆ ಘೋಷಕನು ನಾಲ್ಕೂವರೆ ಸಹಸ್ರ ವರ್ಷಗಳ ಹಿಂದೆ ಕೂಗಿ ಕರೆದಿದ್ದನು. ಅದರ ಉತ್ತರವಾಗಿ ಪವಿತ್ರ ಹರಮಿನ ಪ್ರತಿಯೊಬ್ಬ ಪ್ರಯಾಣಿಕನು, "ನಾನು ಹಾಜರಾಗಿದ್ದೇನೆ. ಓ ನನ್ನ ಅಲ್ಲಾಹ್, ನಾನು ಹಾಜರಾಗಿದ್ದೇನೆ. ನಾನು ಹಾಜರಾಗಿದ್ದೇನೆ. ನಿನ್ನ ಭಾಗೀದಾರನು ಯಾರೂ ಇಲ್ಲ. ನಾನು ಕೇವಲ ನಿನ್ನ ಕರೆಗೆ ಓಗೊಟ್ಟು ಬಂದಿರುತ್ತೇನೆ. ಸರ್ವಸ್ತುತಿಯೂ ನಿನಗಾಗಿದೆ. ಕೊಡುಗೆಗಳೆಲ್ಲ ನಿನ್ನವು. ಸಾಮ್ರಾಜ್ಯ ನಿನ್ನದು. ಯಾವುದರಲ್ಲಿಯೂ ನಿನಗೆ ಭಾಗೀದಾರನಿಲ್ಲ" ಎಂದು ಉಚ್ಚ ಸ್ವರದಿಂದ ಹೇಳುತ್ತಾನೆ. ಹೀಗೆ ಲಬ್ಬೈಕ್‌ನ ಪ್ರತಿಯೊಂದು ಧ್ವನಿಯೊಂದಿಗೆ ಹಾಜಿಯ ಸಂಬಂಧವು ಹ. ಇಬ್ರಾಹೀಮ್ ಮತ್ತು ಹ. ಇಸ್ಮಾಈಲ್‌ರವರ(ಅ) ಕಾಲದಿಂದಲೇ ನಡೆದು ಬರುತ್ತಿರುವ ಆ ಸಹಜವಾದ ಮತ್ತು ನಿಷ್ಕಳಂಕ ದೇವಭಕ್ತಿಯ ಆಂದೋಲನದೊಂದಿಗೆ ಸೇರಿ ಹೋಗುತ್ತದೆ. ನಾಲ್ಕುವರೆ ಸಾವಿರ ವರ್ಷಗಳ ಅವಧಿಯು ಮಧ್ಯದಿಂದ ಸರಿದು ಹೋಗುತ್ತದೆ. ಅತ್ತ ಹ. ಇಬ್ರಾಹೀಮ್(ಅ) ಅಲ್ಲಾಹನ ಕಡೆಯ ಕರೆ ನೀಡುತ್ತಾರೆ. ಇತ್ತ ಇವನು ಅದಕ್ಕೆ ಉತ್ತರ ಕೊಡುತ್ತಾನೆ ಮತ್ತು ಕೊಡುತ್ತ ಹೋಗುತ್ತಾನೆ..... ಮುಂದೆ ಮುಂದೆ ಹೋದಂತೆ ಉತ್ಸುಕತೆ ಹೆಚ್ಚು ಹೆಚ್ಚಾಗುತ್ತ ಹೋಗುತ್ತದೆ. ಪ್ರತಿಯೊಂದು ಏರಿನಲ್ಲೂ ಇಳಿಜಾರಲ್ಲೂ ಇವನ ಕಿವಿಯಲ್ಲಿ ಅಲ್ಲಾಹನ ಘೋಷಕನ ಸ್ವರ ಪ್ರತಿಧ್ವನಿಸುತ್ತದೆ ಮತ್ತು ಇವನು 'ಲಬ್ಬೈಕ್' (ಹಾಜರಾಗಿದ್ದೇನೆ) ಎನ್ನುತ್ತಾ ಮುಂದುವರಿಯುತ್ತಾನೆ. ಪ್ರತಿಯೊಂದು ಯಾತ್ರಿಕರ ತಂಡವೂ ಅವನಿಗೆ ಅಲ್ಲಿಯ ಸಂದೇಶ ವಾಹಕ ಎಂಬಂತೆ ಭಾಸವಾಗುತ್ತಿದ್ದು, ಅವನ ಸಂದೇಶವನ್ನು ಕೇಳಿ ಇನ್ನೊಬ್ಬನು ಅನುರಕ್ತನಂತೆ "ನಾನು ಹಾಜರಾಗಿದ್ದೇನೆ, ನಾನು ಹಾಜರಾಗಿದ್ದೇನೆ" ಎಂದು ಕೂಗುತ್ತಾನೆ. ಪ್ರತಿ ಉಷಃಕಾಲವು ಇವನಿಗೆ ಸ್ನೇಹದ ಸಂದೇಶ ನೀಡುತ್ತದೆ. ಜ್ಯೋತಿಯು ಮುಂಬೆಳಕಿನಲ್ಲಿ ಕಣ್ಣು ತೆರೆದೊಡನೆ "ಲಬ್ಬೈಕ್ ಅಲ್ಲಾಹುಮ್ಮ ಲಬ್ಬೈಕ್"ನ ಧ್ವನಿ ಮೊಳಗಲಾರಂಭಿಸುತ್ತದೆ. ಹೀಗೆ ಎಡೆಬಿಡದ ಕೂಗು, ಈ ಸಾತ್ವಿಕ ಉಡುಪು, ಪ್ರಯಾಣದ ಈ ಸ್ಥಿತಿ ಮತ್ತು ಕಅಬಾವನ್ನು ಸಮೀಪಿಸುತ್ತ ಹೋಗುತ್ತಿರುವ ಈ ವಿದ್ಯಮಾನದೊಂದಿಗೆ ಸೇರಿ ಉಂಟಾಗುವ ಸನ್ನಿವೇಶವು ಹಾಜಿಯನ್ನು ದೇವ ವ್ಯಾಮೋಹದಲ್ಲಿ ತಲ್ಲೀನಗೊಳಿಸಿಬಿಡುತ್ತದೆ. ಮಿತ್ರನ ಸ್ಮರಣೆಯ ಹೊರತು ಇನ್ನೇನೂ ಇರದಂತಹ ಮಾನಸಿಕ ಸ್ಥಿತಿ ಉಂಟಾಗುತ್ತದೆ.

ಝಿಯಾರತ್(ಸಂದರ್ಶನ)ನ ತವಾಫ್

ಹಾಜಿಯು ಇಷ್ಟೊಂದು ಘನತೆಯಿಂದ ಮಕ್ಕಾ ತಲಪಿದೊಡನೆ ನೇರವಾಗಿ ತಾನು ಕರೆಯಲ್ಪಟ್ಟ ದ್ವಾರದ ಕಡೆಗೆ ನಡೆಯುತ್ತಾನೆ. ಅದರ ಪವಿತ್ರ ಹೊಸ್ತಿಲನ್ನು ಪ್ರೀತಿಯಿಂದ ಚುಂಬಿಸುತ್ತಾನೆ. ತನ್ನ ವಿಶ್ವಾಸ, ಶ್ರದ್ಧೆ ಮತ್ತು ಮತಧರ್ಮಗಳ ಆ ಕೇಂದ್ರದ ಸುತ್ತು ತಿರುಗುತ್ತಾನೆ. ಪ್ರತಿಯೊಂದು ಸುತ್ತು ಆ ಚುಂಬನದೊಂದಿಗೆ ಪ್ರಾರಂಭವಾಗುತ್ತದೆ ಮತ್ತು ಅದರೊಂದಿಗೇ ಅಂತ್ಯಗೊಳ್ಳುತ್ತದೆ.* ಅನಂತರ 'ಮಕಾಮು ಇಬ್ರಾಹೀಮ್'ನಲ್ಲಿ ಎರಡು ರಕಅತ್ ನಮಾಝನ್ನು ವಂದನಾರ್ಪಣೆಗಾಗಿ ಮಾಡುತ್ತಾನೆ. ಆ ಬಳಿಕ ಅಲ್ಲಿಂದ ಹೊರಟು 'ಸಫಾ' ಬೆಟ್ಟವನ್ನೇರಿ ಅಲ್ಲಿ ಕಅಬಾದ ಕಡೆ ನೋಡಿ ಹೀಗೆ ಹೇಳುತ್ತಾನೆ:

لَااِلٰهَ اِلَّااللّٰهُ وَلَانَعْبُدُ اِلَّا اِيَّاهُ مُخْلِصِيْنَ لَهُ الدِّيْنَ وَلَوْ كَرِهَ الْكٰفِرُوْنَ۔

"ಅಲ್ಲಾಹನ ಹೊರತು ಆರಾಧ್ಯನಾರೂ ಇಲ್ಲ. ನಾವು ಇನ್ನಾರ ಆರಾಧನೆಯನ್ನೂ ಮಾಡುವುದಿಲ್ಲ. ನಮ್ಮ ದಾಸ್ಯ-ಅನುಸರಣೆ ಕೇವಲ ಅಲ್ಲಾಹನಿಗೆ ಮೀಸಲು. ಇದು ಸತ್ಯ ನಿಷೇಧಿಗಳಿಗೆ ಎಷ್ಟೇ ಅಪ್ರಿಯವೆನಿಸಲಿ."

ಸಫಾ-ಮರ್ವಾಗಳ ನಡುವೆ ಸಈ

ಅನಂತರ ಅವನು ಸಫಾ-ಮರ್ವಾ ಬೆಟ್ಟಗಳ ನಡುವೆ ಓಡುತ್ತಾನೆ. ತನ್ನ ಒಡೆಯನ ಸೇವೆಯಲ್ಲಿ ಮತ್ತು ಅವನ ಸಂಪ್ರೀತಿಗಾಗಿ ಹೀಗೆಯೇ ಓಡಾಟ ನಡೆಸುತ್ತಿರುವೆನೆಂಬ ಬಗ್ಗೆ ಆಧಾರ ಪ್ರಮಾಣ ನೀಡುತ್ತಾನೆ. ಈ ಓಡಾಟದಲ್ಲಿ ಅವನ ಬಾಯಿಯಿಂದ ಕೆಲವೊಮ್ಮೆ ಹೀಗೆ ಹೊರಡುತ್ತದೆ:

اَللّٰهُمَّ اسْتَعْمِلْنِىْ بِسُنَّةِ نَبِيِّكَ وَتَوَفَّنِىْ عَلٰى مِلَّتِهٖ
وَاَعِذْنِىْ مِنْ مُضِلَّاتِ الْفِتَنِ۔

"ದೇವಾ! ನಿನ್ನ ಪ್ರವಾದಿಯವರ(ಸ) ಚರ್ಯೆಯ ಪ್ರಕಾರ ನನ್ನಿಂದ ಕೆಲಸ ಮಾಡಿಸು ಮತ್ತು ನಿನ್ನ ಪ್ರವಾದಿಯವರ(ಸ) ಪಥದಲ್ಲೇ ನನಗೆ ಮರಣ ಕೊಡು. ಸನ್ಮಾರ್ಗದಿಂದ ತಪ್ಪಿಸುವಂತಹ ಅನಿಷ್ಟಗಳಿಂದ ನನ್ನನ್ನು ಜೀವಮಾನದಲ್ಲಿ ರಕ್ಷಿಸು."

---

* ಹಜರುಲ್ ಅಸ್ವದ್(ಕರಿಶಿಲೆ)ನ ಚುಂಬನವನ್ನು ಅವಿವೇಕಿಗಳು ಸಾಮಾನ್ಯವಾಗಿ ಟೀಕಿಸುತ್ತಾರೆ. ಇದೂ ಒಂದು ತರದ ಮೂರ್ತಿ ಪೂಜೆಯೆಂಬುದೇ ಅವರ ವಾದ. ಆದರೆ ವಾಸ್ತವದಲ್ಲಿ ಇದು ಸಾನ್ನಿಧ್ಯ ಚುಂಬನವಲ್ಲದೆ ಇನ್ನೇನೂ ಅಲ್ಲ. ಹಝ್ರತ್ ಇಬ್ರಾಹೀಮ್(ಅ) ಮತ್ತು ಹಝ್ರತ್ ಮುಹಮ್ಮದ್ ರವರು(ಸ) ಆ ಸ್ಥಳವನ್ನು ಅದಕ್ಕಾಗಿಯೇ ನಿಶ್ಚಯಿಸಿಕೊಂಡಿದ್ದರು. ಹಝ್ರತ್ ಉಮರ್‌ರವರು(ರ) ಅದನ್ನುದ್ದೇಶಿಸಿ, "ನೀನೊಂದು ಬರೇ ಶಿಲೆಯೆಂದು ನನಗೆ ಗೊತ್ತಿದೆ. ಅಲ್ಲಾಹನ ಸಂದೇಶವಾಹಕರು ನಿನ್ನನ್ನು ಚುಂಬಿಸದಿರುತ್ತಿದ್ದರೆ ನಾನೂ ನಿನ್ನನ್ನು ಚುಂಬಿಸುತ್ತಿರಲಿಲ್ಲ" ಎಂದು ಹೇಳಿದ ಮಾತು ಚುಂಬನಕ್ಕಾಗಿರುವ ಆ ಶಿಲೆಯಲ್ಲಿ ಯಾವುದೇ ಮಹಿಮೆಯಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ.

ಇನ್ನು ಕೆಲವೊಮ್ಮೆ -

رَبِّ اغْفِرْ وَارْحَمْ وَتَجَاوَزْ عَمَّا تَعْلَمُ، اِنَّكَ اَنْتَ الْاَعَزُّ الْاَكْرَمُ-

"ಓ ನನ್ನ ಪ್ರಭೂ! ಕ್ಷಮೆ ನೀಡು. ಕೃಪೆ ತೋರು, ನನ್ನ ಅಪರಾಧಗಳನ್ನು ನೀನು ತಿಳಿದಿರುತ್ತಿ. ಅವುಗಳಿಗಾಗಿ ನನ್ನನ್ನು ಮನ್ನಿಸು. ನಿನ್ನ ಶಕ್ತಿ ಪ್ರಬಲವಾಗಿದೆ ಮತ್ತು ನಿನ್ನ ಪ್ರಸನ್ನತೆಯೂ ಎಲ್ಲಕ್ಕಿಂತಲೂ ಮಿಗಿಲಾಗಿದೆ."

ಮಿನಾ, ಅರಫಾ ಮತ್ತು ಮುಝ್ದಲಿಫಾದಲ್ಲಿ ತಂಗುವುದು

ಇದರ ಅನಂತರ ಅವನು ಅಲ್ಲಾಹನ ಯೋಧನಾಗಿ ಬಿಡುತ್ತಾನೆ. ಮುಂದೆ ಐದಾರು ದಿನ ಶಿಬಿರಾರ್ಥಿಯ ಜೀವನ ನಡೆಸಬೇಕಾಗುತ್ತದೆ. ಒಂದು ದಿನ ಮಿನಾದಲ್ಲಿ ಠಾಣೆ, ಮರುದಿನ ಅರಫಾತ್‌ನಲ್ಲಿ ಬೀಡುಬಿಟ್ಟು ಸೇನಾ ನಾಯಕನ ಆದೇಶಗಳನ್ನು ಆಲಿಸುವುದು, ರಾತ್ರಿ ಮುಝ್ದಲಿಫಾದಲ್ಲಿ ತಂಗುವುದು.

ಜಮ್ರಾದ ಕಲ್ಲೆಸೆತ

ಬೆಳಗಾದೊಡನೆ ಪುನಃ ಮಿನಾಕ್ಕೆ ಪ್ರಯಾಣ. ಅಲ್ಲಿ ಅಸ್‌ಹಾಬುಲ್ ಫೀಲ್ (ಆನೆಯವರ ದಂಡು) ಕಅಬಾವನ್ನು ಬೀಳಿಸಲಿಕ್ಕೆ ಬಂದಿದ್ದ ಸ್ಥಾನಗಳಲ್ಲಿರುವ ಸ್ತಂಭಗಳಿಗೆ ಹರಳು ಕಲ್ಲುಗಳಿಂದ ಗುರಿಯಿಟ್ಟು ಹೊಡೆಯುವುದು. ಪ್ರತಿ ಹರಳು ಕಲ್ಲೆಸೆಯುವಾಗ ಅಲ್ಲಾಹನ ಯೋಧನು ಹೀಗೆನ್ನುತ್ತಾನೆ: اَللّٰهُ اَكْبَرُ رَغْمًا لِلشَّيْطٰنِ وَحِزْبِهٖ "ದೇವಾ ನಿನ್ನ ಧರ್ಮವನ್ನು ಅಳಿಸಲಿಕ್ಕಾಗಿಯೂ ನಿನ್ನ ವಚನವನ್ನು ಕೀಳಾಗಿಸಲಿಕ್ಕಾಗಿಯೂ ಏಳುವಾತನ ವಿರೋಧ ನಿನ್ನ ವಚನೋತ್ತುಂಗತೆಗಾಗಿ ಹೀಗೆ ಹೋರಾಡುವೆನು" ಮತ್ತು اَللّٰهُمَّ تَصْدِيْقًا بِكِتَابِكَ وَاِتِّبَاعًا لِسُنَّةِ نَبِيِّكَ "ದೇವಾ! ನಾನು ನಿನ್ನ ಗ್ರಂಥದ ಮೇಲೆ ವಿಶ್ವಾಸ ತಂದಿರುತ್ತೇನೆ ಮತ್ತು ನಿನ್ನ ಪ್ರವಾದಿಯವರ ಅನುಸರಣೆ ಮಾಡುವವನಾಗಿರುತ್ತೇನೆ." ಅನಂತರ ಮಿನಾದಲ್ಲಿ ಪ್ರಾಣಿ ಬಲಿ ಕೊಟ್ಟು ದೇವಮಾರ್ಗದಲ್ಲಿ ರಕ್ತ ಸುರಿಸುವ ಸಂಕಲ್ಪವನ್ನೂ ಕಾರ್ಯರೂಪದಲ್ಲಿ ತೋರುವಂತೆ ಮಾಡುತ್ತಾನೆ. ಅನಂತರ ಸಿಪಾಯಿಯು ತನ್ನ ಕರ್ತವ್ಯವನ್ನು ಪೂರೈಸಿ ಮುಖ್ಯ ಠಾಣೆಯ ಕಡೆಗೆ ವಿಜಯಿಯಾಗಿ ಹಿಂದಿರುಗುವ ಯೋಧನಂತೆ ಮಿನಾದಿಂದ ಕಅಬಾದ ಕಡೆಗೆ ಬರುತ್ತಾನೆ. ಅಲ್ಲಿ ತವಾಫ್ ಮತ್ತು ಎರಡು ರಕಅತ್ ನಮಾಝ್ ನೆರವೇರಿಸುವುದರೊಂದಿಗೆ ಇಹ್ರಾಮಿನಿಂದ ಮುಕ್ತನಾಗುತ್ತಾನೆ. ಇಷ್ಟರ ತನಕ ಹರಾಮ್(ನಿಷಿದ್ಧ) ಆಗಿದ್ದುದೆಲ್ಲ ಪುನಃ ಹಲಾಲ್(ಧರ್ಮಬದ್ಧ) ಆಗುತ್ತದೆ. ಈಗ ಹಾಜಿಯ ಜೀವನ ಯಥಾ ಪ್ರಕಾರ ಆರಂಭವಾಗುತ್ತದೆ. ಅನಂತರ ಅವನು ಮಿನಾಕ್ಕೆ ಮರಳಿ

ಪುನಃ ಶಿಕಾಣಿ ಹೊಡುತ್ತಾನೆ ಮತ್ತು ಮಾರನೆ ದಿನ ಆ ಮೂರು ಶಿಲಾಸ್ತಂಭಗಳಿಗೆ ಸರದಿ ಪ್ರಕಾರ ಹರಳು ಕಲ್ಲುಗಳಿಂದ ಗುರಿಯಿಟ್ಟು ಹೊಡೆಯುತ್ತಾನೆ. ಇದನ್ನು 'ಜಮರಾತ್' ಎಂದು ಕರೆಯಲಾಗುತ್ತದೆ. ಇದು ಆನೆಯ ಸೈನ್ಯದ ಪರಾಭವದ ನೆನಪನ್ನು ತಂದು ಕೊಡುತ್ತದೆ. ಆ ಸೇನೆಯನ್ನು ಪ್ರವಾದಿಯವರು(ಸ) ಜನಿಸಿದ ವರ್ಷವೇ ಹಜ್ಜ್‌ನ ಕಾಲದಲ್ಲಿ ಅಲ್ಲಾಹನ ಆದೇಶದಿಂದ ಗಗನಪಕ್ಷಿಗಳು ಹರಳು ಕಲ್ಲುಗಳಿಂದ ಹೊಡೆದು ನಾಶಗೊಳಿಸಿದ್ದವು.* ಮೂರನೆಯ ದಿನ ಪುನಃ ಆ ಸ್ತಂಭಗಳಿಗೆ ಸರದಿ ಪ್ರಕಾರ ಗುರಿಯಿಟ್ಟು ಹೊಡೆದ ಬಳಿಕ ಹಾಜಿಯು ಮಕ್ಕಾಕ್ಕೆ ಹಿಂದಿರುಗುತ್ತಾನೆ ಮತ್ತು ಏಳು ಬಾರಿ ತನ್ನ ಧರ್ಮ ಕೇಂದ್ರ ಸ್ಥಾನಕ್ಕೆ ಪ್ರದಕ್ಷಿಣೆ ಮಾಡುತ್ತಾನೆ. ಇದನ್ನು 'ತವಾಫೆ ವಿದಾ' (ಬೀಳ್ಕೊಡುಗೆಯ ತವಾಫ್) ಎನ್ನಲಾಗುತ್ತದೆ. ಈಗ ಅವನ ಹಜ್ಜ್ ಯಾತ್ರೆ ಪೂರ್ಣಗೊಂಡಿತು.

ಹಜ್ಜ್‌ನ ಸಮೃದ್ಧಿ ಮತ್ತು ಪರಿಣಾಮಗಳು

ನೀವೀಗ ಕೇಳಿದ ಈ ವಿವರಣೆಗಳಿಂದ ಹಜ್ಜ್ ಯಾತ್ರೆಯ ಇರಾದೆ ಮತ್ತು ಅದರ ಸಿದ್ಧತೆಯಿಂದ ಆರಂಭಿಸಿ, ಹಿಂದಿರುಗಿ ಮನೆಯನ್ನು ತಲಪುವ ವರೆಗಿನ ಎರಡು ಮೂರು ತಿಂಗಳುಗಳ ಈ ಕಾಲಾವಧಿಯಲ್ಲಿ ನಿಮ್ಮ ಮನ-ಮಸ್ತಿಷ್ಕಗಳು ಎಷ್ಟು ಪ್ರಭಾವಿತವಾಗುತ್ತವೆ ಯೆಂಬುದನ್ನು ಅಂದಾಜಿಸಬಹುದು. ಇದರಲ್ಲಿ ಸಮಯದ ತ್ಯಾಗವಿದೆ, ಧನ ತ್ಯಾಗವಿದೆ, ಸುಖ-ಸೌಕರ್ಯಗಳ ತ್ಯಾಗವಿದೆ. ಅನೇಕ ವಿಧದ ಲೌಕಿಕ ಸಂಬಂಧಗಳ ತ್ಯಾಗವಿದೆ. ಹಲವು ತರದ ದೇಹೇಚ್ಛೆ ಮತ್ತು ರಸಾಸ್ವಾದಗಳ ತ್ಯಾಗವಿದೆ. ಇವೆಲ್ಲ ಅಲ್ಲಾಹನಿಗಾಗಿ ಮಾತ್ರ ಆಗಿರುತ್ತದೆ. ಯಾವತ್ತೂ ವೈಯಕ್ತಿಕ ಹಿತ ಇದರಲ್ಲಿ ಅಡಗಿರುವುದಿಲ್ಲ. ಇದಲ್ಲದೆ ಈ ಪ್ರಯಾಣದಲ್ಲಿ ಮಾನವನಲ್ಲುಂಟಾಗುವ ಸಂಯಮ, ಧರ್ಮನಿಷ್ಠೆಗಳೊಂದಿಗೆ ನಿರಂತರ ದೇವಸ್ಮರಣೆ ಮತ್ತು ದೇವ ವ್ಯಾಮೋಹಗಳ ಅವಸ್ಥೆಗಳು ಮನಸ್ಸಿನೊಳಗೆ ಶಾಶ್ವತ ಮುದ್ರೆಯನ್ನೊತ್ತಿ ಬಿಟ್ಟು ಅದರ ಪ್ರಭಾವ ಅನೇಕ ವರ್ಷಗಳ ತನಕ ನೆಲೆಸಿರುತ್ತದೆ. ಇಷ್ಟೇ ಅಲ್ಲ. ಹರಮಿನ ಪಾವನಭೂಮಿಗೆ ತಲಪಿ ಅಲ್ಲಾಹನ ಆರಾಧನೆ ಮತ್ತು ದಾಸ್ಯ-ಅನುಸರಣೆಯಲ್ಲಿ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿದ, ಇಡೀ ಬಾಹ್ಯ ಜಗತ್ತಿನೊಡನೆ ಹೋರಾಡಿದ, ಕಷ್ಟಪರಂಪರೆಗಳನ್ನನುಭವಿಸಿದ, ದೇಶಭ್ರಷ್ಟರಾದ, ಅತ್ಯಾಚಾರಗಳನ್ನು ಸಹಿಸಿದ

* ಹ. ಇಬ್ರಾಹೀಮ್‌ರವರು(ಅ) ಹ. ಇಸ್ಮಾಈಲ್‌ರನ್ನು(ಅ) ಬಲಿದಾನ ಕೊಡಲು ಹೊರಟಾಗ ಶೈತಾನನು ಬಂದು ತಪ್ಪುದಾರಿಗೆಳೆಯಲು ಪ್ರಯತ್ನಿಸಿದನು. ಆಗ ಹ. ಇಬ್ರಾಹೀಮ್(ಅ) ಅವನಿಗೆ ಕಲ್ಲುಗಳನ್ನೆಸೆದಿದ್ದರು. ಹಜ್ಜ್ ಯಾತ್ರೆಯ ಸಮಯ ಹರಳು ಕಲ್ಲುಗಳನ್ನೆಸೆಯುವ ಈ ಕ್ರಿಯೆಯು ಆ ಘಟನೆಯ ನೆನಪಿಗಾಗಿದೆಯೆಂದು ಪ್ರತೀತಿ ಇದೆ ಅಥವಾ ಹ. ಇಸ್ಮಾಈಲ್‌ರವರ(ಅ) ಪರಿಹಾರ ರೂಪದಲ್ಲಿ ಹ. ಇಬ್ರಾಹೀಮ್‌ರವರಿಗೆ(ಅ) ನೀಡಲಾಗಿದ್ದ ಟಗರು ಓಡಿ ಹೋಯಿತೆಂದೂ ಅದಕ್ಕೆ ಅವರು ಕಲ್ಲುಗಳನ್ನೆಸೆದಿದ್ದರೆಂದೂ ಆ ಕ್ರಿಯೆಯು ಆ ಘಟನೆಗೆ ಸಂಬಂಧಿಸಿದೆಯೆಂದೂ ಹೇಳುತ್ತಾರೆ. ಆದರೆ ಪ್ರವಾದಿಯವರಿಂದ(ಸ) ಈ ಬಗ್ಗೆ ಯಾವುದೇ ಪ್ರಾಮಾಣಿಕ ಹದೀಸ್ ವರದಿಯಾಗಿಲ್ಲ.

ಮತ್ತು ಕಟ್ಟಕಡೆಗೆ ಅಲ್ಲಾಹನ ಸಾಮೀಪ್ಯವನ್ನು ಮಾಡಿ ಮಾನವನಿಂದ ಅಲ್ಲಾಹನ ಹೊರತು ಇತರರ ಆರಾಧನೆ ಮಾಡಿಸುತ್ತಿದ್ದ ಪ್ರತಿಯೊಂದು ಮಿಥ್ಯ ಶಕ್ತಿಯನ್ನು ಸದೆಬಡಿದೇ ಬಿಟ್ಟವರ ಕುರುಹುಗಳನ್ನು ಅಲ್ಲಿ ಕಾಣುತ್ತಾನೆ. ಈ ಸುವ್ಯಕ್ತ ನಿದರ್ಶನಗಳನ್ನೂ ಪವಿತ್ರ ಕುರುಹುಗಳನ್ನೂ ಕಂಡಾಗ ಓರ್ವ ದೇವಭಕ್ತನಲ್ಲಿ ಉಂಟಾಗುವ ಸಾಹಸ, ದೃಢ ನಿರ್ಧಾರ ಮತ್ತು ದೇವಮಾರ್ಗದಲ್ಲಿ ಹೋರಾಟ ನಡೆಸುವ ಪಾಠವು ಬೇರೆ ಯಾವುದರಿಂದಲೂ ಸಿಗಲು ಸಾಧ್ಯವಿಲ್ಲ. ಇಷ್ಟು ಮಾತ್ರ ಅಲ್ಲ. ಕಅಬಾ ತವಾಫ್‌ನಿಂದ ಧರ್ಮಕೇಂದ್ರ ಸ್ಥಾನದೊಂದಿಗೆ ಉಂಟಾಗುವ ಆತ್ಮೀಯತೆ, ಹಜ್ಜ್ ವಿಧಿಕರ್ಮಗಳಲ್ಲಿ ಓಡಾಟ, ಪ್ರಯಾಣ, ಶಿಬಿರವಾಸಾದಿ ಗಳಿಂದ ಧರ್ಮಯೋಧನಾಗಲು ಸಿಗುವ ಈ ತರಬೇತಿಯನ್ನು ನಮಾಝ್, ಉಪವಾಸ ಮತ್ತು ಝಕಾತ್‌ಗಳೊಂದಿಗೆ ಸೇರಿಸಿ ನೋಡಿದಾಗ ಇಸ್ಲಾಮ್ ಓರ್ವ ಮುಸ್ಲಿಮನಿಂದ ಪಡೆಯಲಿಚ್ಛಿಸುವ ಯಾವುದೋ ಒಂದು ಮಹೋನ್ನತ ಕಾರ್ಯದ ತರಬೇತಿಗಳಿವು ಎಂದು ನಿಮಗೆ ತಿಳಿದು ಬರುವುದು. ಆದುದರಿಂದಲೇ ಈ ತರಬೇತಿಯನ್ನು ಸಂಪೂರ್ಣವಾಗಿ ಪಡೆದಿರು ವಂತಹ ಮುಸ್ಲಿಮರ ಸಂಖ್ಯೆಯು ಎಲ್ಲಾ ಕಾಲಗಳಲ್ಲಿಯೂ ಅತ್ಯಧಿಕ ಸಂಖ್ಯೆಯಲ್ಲಿರು ವಂತಾಗಲಿಕ್ಕಾಗಿ ಕಅಬಾದ ವರೆಗೆ ಹೋಗಿ ಬರಲು ಸಾಧ್ಯವಿರುವ ಪ್ರತಿಯೊಬ್ಬ ಮುಸ್ಲಿಮರ ಮೇಲೆ ಹಜ್ಜ್ ಯಾತ್ರೆಯನ್ನು ಕಡ್ಡಾಯಗೊಳಿಸಲಾಗಿದೆ.

ಹಜ್ಜ್ : ಒಂದು ಸಾಮೂಹಿಕ ಆರಾಧನಾ ಕರ್ಮ

ಮುಸ್ಲಿಮನು ಒಬ್ಬೊಬ್ಬನಾಗಿ ಹಜ್ಜ್ ಯಾತ್ರೆ ಕೈಗೊಳ್ಳುವುದಲ್ಲ. ಪರಂತು ಇಡೀ ಭೂಮಂಡಲದ ಮುಸ್ಲಿಮರಿಗೆ ಹಜ್ಜ್ ಯಾತ್ರೆಗೆ ಒಂದೇ ಕಾಲವನ್ನು ನಿಶ್ಚಯಿಸಿ ಕೊಡ ಲಾಗಿದೆ ಮತ್ತು ಸಾವಿರವಲ್ಲ- ಲಕ್ಷಗಟ್ಟಲೆ ಮುಸ್ಲಿಮರು ಒಟ್ಟಾಗಿ ಏಕಕಾಲದಲ್ಲಿ ಹಜ್ಜ್ ನೆರವೇರಿಸುತ್ತಾರೆಂಬ ವಿಷಯವನ್ನು ನೀವು ಮನಸ್ಸಿನಲ್ಲಿಟ್ಟುಕೊಳ್ಳದಿದ್ದರೆ ಹಜ್ಜ್‌ನ ಪ್ರಯೋಜನಗಳ ಸಂಪೂರ್ಣ ಅಂದಾಜು ಮಾಡಿಕೊಳ್ಳಲು ನಿಮಗೆ ಸಾಧ್ಯವಾಗದು. ಈ ಹಿಂದೆ ನಿಮಗೆ ನೀಡಿದ ವಿವರಣೆಯಿಂದ ವ್ಯಕ್ತಿಗತವಾಗಿ ಒಬ್ಬ ಹಜ್ಜ್ ಯಾತ್ರಿಕನ ಮೇಲೆ ಈ ಆರಾಧನಾ ವಿಧಿಯ ಪರಿಣಾಮ ಏನಾಗುತ್ತದೆಂಬ ವಿಚಾರ ಮಾತ್ರ ನಿಮ್ಮ ಮುಂದೆ ಬಂದಿತ್ತು. ಇಡೀ ಭೂ ಮಂಡಲದ ಮುಸ್ಲಿಮರಿಗೆ ಏಕಕಾಲದಲ್ಲಿ ಹಜ್ಜ್ ಯಾತ್ರೆ ಕೈಗೊಳ್ಳುವ ವ್ಯವಸ್ಥೆ ಮಾಡಿ ಈ ಪ್ರಯೋಜನಗಳನ್ನು ಹೇಗೆ ಲಕ್ಷಾವಧಿ ಪಟ್ಟು ವೃದ್ಧಿಸಲಾಗಿರುತ್ತದೆಂಬುದನ್ನು ಮುಂದಿನ ಉಪನ್ಯಾಸದಲ್ಲಿ ವಿವರಿಸುವೆನು. ಒಂದು ವಿಷಯವನ್ನು ಇಮ್ಮಡಿಸುವುದು ಮಾತ್ರವಲ್ಲ ಸಾವಿರಾರು ಪಟ್ಟು ವೃದ್ಧಿಸುವುದು ಇಸ್ಲಾಮಿನ ವೈಶಿಷ್ಟ್ಯ. ನಮಾಝ್ ಒಬ್ಬೊಬ್ಬರಾಗಿ ಮಾಡಿದರೂ ಅದರ ಪ್ರಯೋಜನಗಳೇನೂ ಕಡಿಮೆಯಿರಲಿಲ್ಲ. ಆದರೆ ಅದರೊಂದಿಗೆ 'ಜಮಾಅತ್'ನ (ಸಾಮೂಹಿಕತೆಯ) ಶರತ್ತು ಹಾಕಿ, ಇಮಾಮತ್‌ನ(ನಾಯಕತ್ವ) ಕಾಯಿದೆಗಳನ್ನು ನಿಶ್ಚಯಿಸಿ, ಅದರೊಂದಿಗೆ ಜುಮಾ(ಶುಕ್ರವಾರ) ಮತ್ತು ಎರಡು ಈದ್(ಹಬ್ಬ)ಗಳ ದೊಡ್ಡ ಕೂಟಗಳನ್ನೇರ್ಪಡಿಸಿ, ಆ ಪ್ರಯೋಜನಗಳನ್ನು ಅಸಂಖ್ಯಾತವಾಗಿ

ವೃದ್ಧಿಪಡಿಸ ಲಾಯಿತು. ಉಪವಾಸ ಒಬ್ಬೊಬ್ಬರಾಗಿ ಹಿಡಿಯುವುದೂ ತರಬೇತಿ ಮತ್ತು ಸಂಸ್ಕರಣೆಯ ಒಂದು ಉತ್ತಮ ಮಾರ್ಗವೇ ಆಗಿತ್ತು. ಆದರೆ ಸಕಲ ಮುಸ್ಲಿಮರಿಗೂ ರಮಝಾನಿನ ಒಂದೇ ತಿಂಗಳನ್ನು ಉಪವಾಸಕ್ಕಾಗಿ ನಿಶ್ಚಯಿಸಿ, ಅದರ ಪ್ರಯೋಜನಗಳನ್ನು ಎಣಿಸಲಾಗದಷ್ಟು ವೃದ್ಧಿಗೊಳಿಸಲಾಯಿತು. ಝಕಾತ್ ಒಬ್ಬೊಬ್ಬರಾಗಿ ಕೊಡುವುದರಿಂದಲೂ ತುಂಬಾ ಲಾಭವಿತ್ತು. ಆದರೆ ಅದರೊಂದಿಗೆ 'ಬೈತುಲ್ ಮಾಲ್'ನ (ಸಾಮೂಹಿಕ ಭಂಡಾರ) ವ್ಯವಸ್ಥೆ ಮಾಡಿ, ಅದರ ಲಾಭವನ್ನು ಎಷ್ಟು ಹೆಚ್ಚಿಸಲಾಗಿದೆಯೆಂದರೆ, ಇಸ್ಲಾಮೀ ಆಡಳಿತ ಸ್ಥಾಪನೆಯಾಗಿ ಎಲ್ಲ ಮುಸ್ಲಿಮರ ಝಕಾತ್ ಒಂದೇ ಕಡೆ ಜಮೆ ಮಾಡಿ ಒಂದೇ ವ್ಯವಸ್ಥೆಯ ಮೂಲಕ ಅದರ ಹಕ್ಕುದಾರರಿಗೆ ವಿತರಣೆ ಮಾಡುವುದರಲ್ಲಿ ಎಷ್ಟು ಶುಭ ಸಮೃದ್ಧಿಗಳಿವೆ ಯೆಂಬುದನ್ನು ನೀವು ಸ್ವತಃ ಕಣ್ಣಾರೆ ಕಾಣದೆ ಅದರ ಸರಿಯಾದ ಅಂದಾಜು ಆಗಲಾರದು. ಹಜ್ಜ್ ಯಾತ್ರೆಯ ವಿಷಯದಲ್ಲೂ ಹಾಗೆಯೇ. ಒಬ್ಬೊಬ್ಬನೇ ಪ್ರತ್ಯಪ್ರತ್ಯೇಕ ಹಜ್ಜ್ ಯಾತ್ರೆ ಮಾಡಿದರೂ ಅವನ ಜೀವನದಲ್ಲಿ ಒಂದು ಮಹಾ ಕ್ರಾಂತಿಯುಂಟಾಗಲು ಸಾಧ್ಯವಿದೆ. ಆದರೆ ಜಗತ್ತಿನ ಸಕಲ ಮುಸ್ಲಿಮರಿಗೆ ಏಕಕಾಲದಲ್ಲಿ ಒಟ್ಟಾಗಿ ಹಜ್ಜ್ ಯಾತ್ರೆ ಕೈಗೊಳ್ಳುವ ಕಾಯಿದೆಯನ್ನು ನಿಶ್ಚಯಿಸಿ, ಆ ಪ್ರಯೋಜನಗಳಿಗೆ ಮಿತಿಯೇ ಇಲ್ಲದಂತೆ ಮಾಡಲಾಗಿದೆ. ಈ ವಿಷಯಕ್ಕೆ ಸ್ವಲ್ಪ ಹೆಚ್ಚು ವಿವರಣೆಯ ಅಗತ್ಯವಿದೆ. ಮುಂದಿನ ಉಪನ್ಯಾಸದಲ್ಲಿ ಅದನ್ನು ಸವಿವರವಾಗಿ ಹೇಳುವೆನು. ಇನ್‌ಶಾ ಅಲ್ಲಾಹ್.

○

ಹಜ್ಜ್: ಜಾಗತಿಕ ಸಮ್ಮೇಳನ

ಜಾಗತಿಕ ಇಸ್ಲಾಮೀ ನವಚೇತನ

ಮುಸ್ಲಿಮ್ ಬಾಂಧವರೆ,

'**ಹಜ್ಜ್**' ಯಾತ್ರೆ ಕಡ್ಡಾಯಗೊಳಿಸಲ್ಪಟ್ಟವರು ಅರ್ಥಾತ್ ಕಅಬಾದ ವರೆಗೆ ಹೋಗಿ ಬರಲು ಶಕ್ತರಾದವರು ಒಬ್ಬಿಬ್ಬರಿರುವುದೇನೂ ಅಲ್ಲ. ಪ್ರತಿ ಗ್ರಾಮದಲ್ಲೂ ಗಣನೀಯ ಸಂಖ್ಯೆಯಲ್ಲಿರುತ್ತಾರೆ. ಪ್ರತಿ ನಗರದಲ್ಲಿ ಸಾವಿರಾರು ಮತ್ತು ಪ್ರತಿಯೊಂದು ದೇಶದಲ್ಲಿ ಲಕ್ಷಾವಧಿ ಸಂಖ್ಯೆಯಲ್ಲಿರುತ್ತಾರೆ. ಅವರ ಪೈಕಿ ಪ್ರತಿ ವರ್ಷವೂ ಅನೇಕರು ಹಜ್ಜ್ ಯಾತ್ರೆಯ ಇರಾದೆಯಿಂದ ಹೊರಡುತ್ತಾರೆ. ಹಜ್ಜ್ ಯಾತ್ರೆಯ ಕಾಲ ಬಂತೆಂದರೆ ಜಗತ್ತಿನ ಮೂಲೆ ಮೂಲೆಗಳಲ್ಲಿ ಮುಸ್ಲಿಮರು ವಾಸಿಸುತ್ತಿರುವಲ್ಲೆಲ್ಲಾ ಇಸ್ಲಾಮೀ ಜೀವನ ಹೇಗೆ ನವಚೇತನ ಪಡೆಯುತ್ತದೆ, ಎಂತಹ ಚಟುವಟಿಕೆಯುಂಟಾಗುತ್ತದೆ ಮತ್ತು ಅದು ಎಷ್ಟು ಕಾಲದ ವರೆಗೆ ಉಳಿದಿರುತ್ತದೆಂಬುದನ್ನು ಊಹಿಸಿರಿ. ಸುಮಾರು ರಮಝಾನ್ ತಿಂಗಳಿಂದ ಆರಂಭವಾಗಿ ದುಲ್ಕಅದಃ ತಿಂಗಳ ವರೆಗೆ ಜಗತ್ತಿನ ನಾನಾ ಭಾಗಗಳಿಂದ ಬಗೆಬಗೆಯ ಜನರು ಹಜ್ಜ್ ಯಾತ್ರೆಗೆ ಸಿದ್ಧರಾಗಿ ಹೊರಡುತ್ತಾರೆ. ಅತ್ತ ದುಲ್‌ಹಜ್ಜ್ ತಿಂಗಳಾಂತ್ಯದಿಂದ ಮುಹರ್ರಮ್, ಸಫರ್ ಮತ್ತು ರಬೀವುಲ್ ಅವ್ವಲ್ ತಿಂಗಳುಗಳ ತನಕ ಹಿಂದಿರುಗಿ ಬರುವ ಪರಂಪರೆ ಜಾರಿಯಲ್ಲಿರುತ್ತದೆ. ಈ ಆರೇಳು ತಿಂಗಳ ಕಾಲ ಎಡೆಬಿಡದೆ ಇಡೀ ಜಗತ್ತಿನಲ್ಲಿ ಮುಸ್ಲಿಮರು ನೆಲೆಸಿರುವಲ್ಲೆಲ್ಲ ಒಂದು ತರದ ಧಾರ್ಮಿಕ ಚಟುವಟಿಕೆ ಜಾರಿಯಲ್ಲಿರುತ್ತದೆ. ಹಜ್ಜ್ ಯಾತ್ರೆಗೆ ಹೋಗುವವರು ಮತ್ತು ಅಲ್ಲಿಂದ ಹಿಂದಿರುಗುವವರಂತೂ ಧಾರ್ಮಿಕತೆಯಲ್ಲಿ ಉನ್ಮತ್ತರೇ ಆಗಿರುತ್ತಾರೆ. ಆದರೆ ಹೋಗದವರ ಮೇಲೂ ಅದರ ಪ್ರಭಾವ ಬೀಳದಿರುವುದಿಲ್ಲ. ಹಾಜಿಯವರನ್ನು ಬೀಳ್ಕೊಡುವ, ಬೇರೆ ಬೇರೆ ಪ್ರದೇಶಗಳಿಂದ ಹಾದು ಹೋಗುವಾಗಲೂ ಹಿಂದಿರುಗಿ ಬರುವಾಗಲೂ ಅವರನ್ನು ಸ್ವಾಗತಿಸುವ ಮತ್ತು ಅವರೊಡನೆ ಹಜ್ಜ್ ಯಾತ್ರೆಯ ವಿವರಗಳನ್ನು ಕೇಳಿ ತಿಳಿಯುವ ಕಾರ್ಯಕ್ರಮಗಳಿಂದ ಧಾರ್ಮಿಕ ಫಲಗಳ ಅಲ್ಪಸ್ವಲ್ಪ ಪಾಲು ಇವರಿಗೂ ಸಿಕ್ಕದಿರುವುದಿಲ್ಲ.

ದೇವನಿಷ್ಠೆ ಮತ್ತು ದೇವ ಪ್ರೇಮದ ವರ್ಧನೆ

ಪ್ರತಿಯೊಬ್ಬ ಹಾಜಿಯು ಹಜ್ಜ್ ಯಾತ್ರೆಯ ನಿಯ್ಯತ್ (ಸಂಕಲ್ಪ) ಮಾಡುವುದರೊಂದಿಗೆ ಅವನನ್ನು ದೇವಭಯ, ಇಂದ್ರಿಯ ನಿಗ್ರಹ, ಪಶ್ಚಾತ್ತಾಪ, ಕ್ಷಮಾಯಾಚನೆ ಮತ್ತು ಸತ್ಪ್ರಭಾವಗಳು ಆವರಿಸಿಕೊಳ್ಳಲಾರಂಭಿಸುತ್ತವೆ. ಅವನು ತನ್ನ ಸಂಬಂಧಿಕರಿಂದಲೂ ಸ್ನೇಹಿತರಿಂದಲೂ ವ್ಯವಹಾರ ಸಂಬಂಧವಿರುವ ಪ್ರತಿಯೊಬ್ಬರಿಂದಲೂ ಅಗಲುತ್ತಿರುವ ವೇಳೆ ತನ್ನ ವ್ಯವಹಾರಗಳನ್ನು ತೀರಿಸಿಕೊಳ್ಳುತ್ತಿರುವುದನ್ನು ಕಂಡಾಗ, ಅವನೀಗ ಹಿಂದಿನ ವ್ಯಕ್ತಿಯಲ್ಲವೆಂದೂ ಅಲ್ಲಾಹನ ಕಡೆ ಒಲವುಂಟಾಗಿರುವುದರಿಂದ ಅವನ ಮನಸ್ಸು ನಿರ್ಮಲಗೊಳ್ಳುತ್ತಿದೆ ಯೆಂದೂ ಭಾಸವಾಗುತ್ತದೆ. ಪ್ರತಿಯೊಬ್ಬ ಹಾಜಿಯ ಈ ಪರಿಸ್ಥಿತಿಯು ಎಷ್ಟು ಮಂದಿಯ ಮೇಲೆ ಪ್ರಭಾವ ಬೀರಬಹುದೆಂಬುದನ್ನು ಯೋಚಿಸಿರಿ. ವರ್ಷಂಪ್ರತಿ ಜಗತ್ತಿನ ನಾನಾ ಭಾಗಗಳಿಂದ ಸರಾಸರಿ ಒಂದು ಲಕ್ಷ ಮಂದಿಯಾದರೂ ಈ ಪ್ರಕಾರದಿಂದ ಹಜ್ಜ್ ಯಾತ್ರೆಗೆ ಸಿದ್ಧವಾಗುತ್ತಿರುವರೆಂದಾದರೆ, ಅವರ ಪ್ರಭಾವವು ಮಿಕ್ಕ ಇನ್ನಷ್ಟು ಲಕ್ಷ ಮಂದಿಯ ಚಾರಿತ್ರ್ಯದ ಮೇಲೆ ಬೀಳುತ್ತಿರಬಹುದು! ಇದಲ್ಲದೆ ಹಜ್ಜ್ ಯಾತ್ರಿಕರ ತಂಡಗಳು ಹಾದು ಹೋಗುತ್ತಿರು ವಲ್ಲೆಲ್ಲಾ ಅವರನ್ನು ಕಂಡು, ಅವರನ್ನು ಭೇಟಿಯಾಗಿ ಅವರ 'ಲಬ್ಬೈಕ್'ನ ಧ್ವನಿ ಕೇಳಿ, ಎಷ್ಟು ಮಂದಿಯ ಮನಸ್ಸು ಕಾವೇರುತ್ತಿರಬಹುದು! ಎಷ್ಟು ಮಂದಿಯ ಗಮನ ಅಲ್ಲಾಹನ ಕಡೆಗೆ ಮತ್ತು ಅಲ್ಲಾಹನ ಭವನದ ಕಡೆಗೆ ತಿರುಗುತ್ತಿರಬಹುದು! ಎಷ್ಟು ಮಂದಿಯ ನಿದ್ದೆ ಹೋದ ಅಂತಃಕರಣಗಳು ಹಜ್ಜ್‌ನ ಆಸಕ್ತಿಯಿಂದ ಜಾಗೃತಗೊಳ್ಳುತ್ತಿರಬಹುದು! ಇಷ್ಟೇ ಅಲ್ಲ; ಇವರು ತಮ್ಮ ಕೇಂದ್ರದಿಂದ ಹಜ್ಜ್‌ನ ವೈಶಿಷ್ಟ್ಯಗಳ ಮತ್ತಿನೊಂದಿಗೆ ಜಗತ್ತಿನ ನಾನಾ ಭಾಗಗಳಿಗೆ ಹಿಂದಿರುಗುವಾಗ ಅವರನ್ನು ಭೇಟಿಯಾಗಿ ಅವರ ಸ್ಥಿತಿಗತಿಗಳಿಂದಲೂ ಅವರ ಮಾತು ಗಳಿಂದಲೂ ಅಲ್ಲಾಹನ ಭವನದ ವಿಷಯಗಳನ್ನು ಕೇಳಿದ ಅದೆಷ್ಟೋ ವರ್ತುಲಗಳಲ್ಲಿ ಧಾರ್ಮಿಕ ಚೈತನ್ಯ ಕುದುರುತ್ತಿರಬಹುದು.

ಜಾಗತಿಕ ಇಸ್ಲಾಮೀ ನವಜಾಗೃತಿಯ ಕಾಲ

ರಮಝಾನ್ ತಿಂಗಳು ಸಮಸ್ತ ಮುಸ್ಲಿಮ್ ಜಗತ್ತಿನಲ್ಲಿ 'ತಕ್ವಾ'(ಧರ್ಮನಿಷ್ಠೆ)ದ ಸುಗ್ಗಿಯ ಕಾಲವಾಗಿರುವಂತೆಯೇ ಈ ಹಜ್ಜ್‌ಯಾತ್ರೆಯ ಕಾಲವೂ ಇಡೀ ಜಗತ್ತಿನಲ್ಲಿ ಇಸ್ಲಾಮಿನ ಜೀವಕಳೆ ತುಂಬುವ ಮತ್ತು ನವಜಾಗೃತಿಯ ಕಾಲವಾಗಿರುತ್ತದೆಂದು ಹೇಳಿದರೆ ತಪ್ಪಾಗಲಾರದು. ಇದೇ ರೀತಿಯಲ್ಲಿ ಜಗತ್ತಿನ ಸ್ಥಿತಿಗತಿಗಳು ಎಷ್ಟೇ ಹದಗೆಟ್ಟಿದ್ದರೂ ಕಾಲವು ಎಷ್ಟೇ ಕೆಟ್ಟು ಹೋಗಿದ್ದರೂ ಇಸ್ಲಾಮಿನ ಸಾರ್ವಲೌಕಿಕ ಆಂದೋಲನವು ಲೋಕಾವಸಾನದ ವರೆಗೂ ಅಳಿಯದಂತೆ ಧರ್ಮಶಾಸ್ತ್ರ ನಿರ್ಮಾಪಕನಾದ ಆ ಮಹಾ ಧೀಮಂತ ಅದ್ವಿತೀಯ ವ್ಯವಸ್ಥೆ ಮಾಡಿರುತ್ತಾನೆ. ಮಾನವ ದೇಹದಲ್ಲಿ ಹೃದಯವನ್ನಿರಿಸಿರುವಂತೆಯೇ ಈ 'ಕಅಬಾ'ವನ್ನು ಇಸ್ಲಾಮೀ ಜಗತ್ತೆಂಬ ದೇಹದ ಹೃದಯವೆಂಬಂತೆ ಇರಿಸಲಾಗಿದೆ. ಮನುಷ್ಯನು ನಾನಾ ತರದ

ವ್ಯಾಧಿಗಳಿಂದ ತತ್ತರಿಸಿ ಅಲುಗಾಡದ ಸ್ಥಿತಿಯಲ್ಲಿದ್ದರೂ ಹೃದಯ ಬಡಿತ ಇರುವವರೆಗೂ ಅವನು ಸಾಯಲಾರ. ಅದೇ ಪ್ರಕಾರ ಜಗತ್ತಿನ ಈ ಹೃದಯ ಕಮಲವೂ ವರ್ಷಂಪ್ರತಿ ತನ್ನ ದೂರದೂರದ ರಕ್ತನಾಳಗಳಿಂದ ರಕ್ತವನ್ನು ಎಳೆಯುತ್ತಲೇ ಇದ್ದು ಅದನ್ನು ಪುನಃ ನಾಡಿನಾಡಿಗಳಿಗೂ ಮುಟ್ಟಿಸುತ್ತದೆ. ತನ್ನ ಕಡೆಗೆ ಎಳೆದುಕೊಳ್ಳುವ ಮತ್ತು ಪುನಃ ಹೊರಟಲ್ಲಿಗೆ ಮುಟ್ಟಿಸುವ ಹೃದಯಕಮಲದ ಈ ಪರ್ಯಾಯ ಚಟುವಟಿಕೆ ಜಾರಿಯಲ್ಲಿರುವವರೆಗೂ ರೋಗಗಳಿಂದ ದೇಹವು ಎಷ್ಟು ಕಂಗೆಟ್ಟಿದ್ದರೂ ಅದರ ಬಾಳುವೆ ಕೊನೆಗೊಳ್ಳಲು ಸಾಧ್ಯವೇ ಇಲ್ಲ.

ಸಮುದಾಯ ಏಕತೆಯ ಮನಮೋಹಕ ದೃಶ್ಯ

ಸ್ವಲ್ಪ ಹೊತ್ತು ಕಣ್ಣು ಮುಚ್ಚಿ ಈ ಚಿತ್ರವನ್ನು ಸ್ಮೃತಿಪಟಲಕ್ಕೆ ತನ್ನಿರಿ. ಇತ್ತ ಪೂರ್ವದಿಂದ, ಅತ್ತ ದಕ್ಷಿಣದಿಂದ ಪಶ್ಚಿಮದಿಂದಲೂ ಮತ್ತು ಉತ್ತರದಿಂದಲೂ ಅಗಣಿತ ಜನಾಂಗಗಳಿಂದ, ಅಸಂಖ್ಯಾತ ದೇಶಗಳಿಂದ ಸಾವಿರಾರು ದಾರಿಗಳಿಂದ ಜನರು ಒಂದೇ ಸ್ಥಾನದ ಕಡೆಗೆ ಬರುತ್ತಲಿದ್ದಾರೆ. ವಿವಿಧ ಮುಖಮುದ್ರೆಗಳ ವಿವಿಧ ವರ್ಣಗಳ ನಾನಾ ಭಾಷೆಗಳನ್ನಾಡುವ ಮತ್ತು ನಾನಾ ತರದ ಉಡುಪು ಧರಿಸಿದ ಜನರಾಗಿದ್ದರೂ ಕೇಂದ್ರ ಸ್ಥಾನದ ಸಮೀಪ ಒಂದು ನಿಶ್ಚಿತ ಸ್ಥಾನವನ್ನು ತಲಪಿದೊಡನೆ ತಂತಮ್ಮ ಜನಾಂಗಗಳ ಉಡುಪನ್ನು ಕಳಚಿ ಬಿಡುತ್ತಾರೆ. ಎಲ್ಲರೂ ಒಂದೇ ರೀತಿಯ ಸಾದಾ ಸಮವಸ್ತ್ರ ಧರಿಸಿಕೊಳ್ಳುತ್ತಾರೆ. ಇಹ್ರಾಮಿನ ಈ ಸಮವಸ್ತ್ರ ವನ್ನು ಧರಿಸಿದ ಬಳಿಕ ಈ ಭೂಮಂಡಲದ ಸಾವಿರಾರು ಜನಾಂಗಗಳಿಂದ ಭರ್ತಿಗೊಂಡಿರುವ ವಿಶ್ವಚಕ್ರವರ್ತಿಯಾದ ಭೂಮಿ-ಆಕಾಶಗಳ ಸಾರ್ವಭೌಮನ ಈ ಸೇನೆಯು ಏಕ ಸಾಮ್ರಾಟನ ಸೇನೆಯಾಗಿರುತ್ತದೆಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ದಾಸ್ಯ-ಆರಾಧನೆ ಮತ್ತು ದಾಸ್ಯ-ಅನುಸರಣೆಯ ಒಂದೇ ಲಾಂಛನ ಅವರೆಲ್ಲರ ಮೇಲೆ ಗೋಚರಿಸುತ್ತದೆ. ಕೇವಲ ಒಬ್ಬನ ನಿಷ್ಠರೆಂಬ ಬಂಧನದಲ್ಲಿ ಎಲ್ಲರೂ ಬಂಧಿತರಾಗಿದ್ದಾರೆ ಮತ್ತು ಒಂದೇ ರಾಜಧಾನಿಯ ಕಡೆಗೆ ತಮ್ಮ ಸಾಮ್ರಾಟನ ಕುಡಿನೋಟದ ಮುಂದೆ ಹಾಜರಾಗಲು ಹೋಗುತ್ತಿರುತ್ತಾರೆ. ಈ ಸಮವಸ್ತ್ರಧಾರಿ ಸಿಪಾಯಿಗಳು 'ಮೀಕಾತ್(ಗಡಿ)'ನಿಂದ ಮುಂದೆ ನಡೆಯುವಾಗ ಎಲ್ಲರ ಬಾಯಿಯಿಂದ.

لَبَّيْكَ، اَللّٰهُمَّ لَبَّيْكَ، لَاشَرِيكَ لَكَ لَبَّيْكَ.

"ಲಬ್ಬೈಕ್ ಅಲ್ಲಾಹುಮ್ಮ ಲಬ್ಬೈಕ್ ಲಬ್ಬೈಕ ಲಾ ಶರೀಕ ಲಕ ಲಬ್ಬೈಕ..."

ಎಂಬ ಒಂದೇ ಒಂದು ಉದ್ಘೋಷ! ಆಡುವ ಭಾಷೆಗಳಲ್ಲಿ ವೈವಿಧ್ಯಗಳಿದ್ದರೂ ಎಲ್ಲರ ಉದ್ಘೋಷ ಒಂದೇ! ಮಾತ್ರವಲ್ಲ, ಕೇಂದ್ರಸ್ಥಾನ ಸಮೀಪಿಸುತ್ತಿದ್ದಂತೆ ಮಂಡಲವು ಸಂಕುಚಿಸಿ ಚಿಕ್ಕದಾಗುತ್ತ ಹೋಗುತ್ತದೆ. ಬೇರೆಬೇರೆ ದೇಶಗಳ ತಂಡಗಳು ಸೇರುತ್ತ ಹೋಗುತ್ತವೆ.

ಎಲ್ಲರೂ ಒಟ್ಟುಗೂಡಿ ಏಕಪ್ರಕಾರವಾಗಿ ನಮಾಝ್ ಮಾಡುತ್ತಾರೆ. ಈಗ ಎಲ್ಲರ ಸಮವಸ್ತ್ರವೊಂದೇ. ಎಲ್ಲರ ಇಮಾಮ್ (ನಾಯಕ) ಒಬ್ಬನೇ. ಎಲ್ಲರ ಚಲನೆಯೊಂದೇ, ಭಾಷೆಯೊಂದೇ. ಎಲ್ಲರೂ ಒಂದೇ 'ಅಲ್ಲಾಹು ಅಕ್ಬರ್' ಎಂಬ ಇರಾದೆಯೊಂದಿಗೆ ಏಳುತ್ತಾರೆ, ಕೂರುತ್ತಾರೆ, ಬಾಗುತ್ತಾರೆ, ಸಾಷ್ಟಾಂಗವೆರಗುತ್ತಾರೆ. ಎಲ್ಲರೂ ಒಂದೇ ಅರಬೀ ಭಾಷೆಯ ಕುರ್‌ಆನನ್ನು ಪಠಿಸುತ್ತಾರೆ ಮತ್ತು ಆಲಿಸುತ್ತಾರೆ. ಹೀಗೆ ಭಾಷೆ, ಜನಾಂಗ, ದೇಶ ಮತ್ತು ವಂಶಗಳ ವೈವಿಧ್ಯತೆ ಮುರಿಯುತ್ತದೆ. ಈ ರೀತಿಯಲ್ಲಿ ದೇವಭಕ್ತರ ಒಂದು ಜಾಗತಿಕ ಕೂಟವು ರೂಪ ಗೊಳ್ಳುತ್ತದೆ. ಈ ಯಾತ್ರಿಕರ ತಂಡಗಳೆಲ್ಲ ಏಕಕಂಠದಿಂದ "ಲಬ್ಬೈಕ್, ಲಬ್ಬೈಕ್"ನ ಉದ್ಘೋಷ ಮೊಳಗಿಸುತ್ತ ನಡೆಯುತ್ತಿರುವಾಗ, ಪ್ರತಿಯೊಂದು ಏರಿನಲ್ಲಿ, ಇಳಿತದಲ್ಲಿ, ಈ ಉದ್ಘೋಷವೇ ಕೇಳುತ್ತಿರುವಾಗ, ತಂಡಗಳು ಪರಸ್ಪರ ಸಂಧಿಸುವಾಗಲೂ ಭೇಟಿಯಾಗು ವಾಗಲೂ ಇಕ್ಕಡೆಗಳಿಂದಲೂ ಈ ಘೋಷಣೆಯೇ ಕೇಳಿ ಬರುವಾಗ, ನಮಾಝ್‌ನ ವೇಳೆ ಉಷಃಕಾಲದ ಮುಂಬೆಳಕಿನಲ್ಲಿ ಈ ಧ್ವನಿಯೇ ಪ್ರತಿಧ್ವನಿಸುವಾಗ ಒಂದು ವೈಚಿತ್ರ್ಯಪೂರ್ಣ ಸನ್ನಿವೇಶವುಂಟಾಗುತ್ತದೆ. ಪ್ರತಿಯೊಬ್ಬನೂ ಅದರ ಅಮಲಿನಲ್ಲಿ ಉನ್ಮತ್ತನಾಗಿ ತನ್ನನ್ನು ತಾನೇ ಮರೆತು ಈ 'ಲಬ್ಬೈಕ್' ಧ್ವನಿಯಲ್ಲಿ ತನ್ಮಯನಾಗಿ ಬಿಡುತ್ತಾನೆ. ಅನಂತರ ಜಗತ್ತಿನಾದ್ಯಂತ ದಿಂದ ಬಂದವರೆಲ್ಲರೂ ಸಮವಸ್ತ್ರಧಾರಿಗಳಾಗಿಯೇ ಕಅಬಾ ತಲಪಿ ಆ ಏಕಕೇಂದ್ರದ ಸುತ್ತುಬರುವುದು, ಆ ಬಳಿಕ ಸಫಾ-ಮರ್ವಾಗಳ ನಡುವೆ 'ಸಈ' (ಓಡಾಟ) ನಡೆಸುವುದು, ಎಲ್ಲರೂ ಮಿನಾದಲ್ಲಿ ಠಾಣೆ ಹೂಡುವುದು, ಅನಂತರ ಎಲ್ಲರೂ ಅರಫಾತ್‌ಗೆ ಪಯಣ ಬೆಳೆಸುವುದು, ಅಲ್ಲಿ ಓರ್ವ ಇಮಾಮ್(ನಾಯಕ)ನ ಖುತ್‌ಬಾ (ಉಪನ್ಯಾಸ) ಕೇಳುವುದು, ಅಲ್ಲಿಂದ ಮುಝ್ದಲಿಫಾಕ್ಕೆ ಬಂದು ರಾತ್ರೆ ಅಲ್ಲಿ ತಂಗುವುದು, ಆ ಬಳಿಕ ಎಲ್ಲರೂ ಒಟ್ಟಾಗಿ ಮಿನಾದ ಕಡೆಗೆ ಹಿಂದಿರುಗುವುದು, ಎಲ್ಲರೂ ಒಟ್ಟಾಗಿ 'ಜಮರಃ ಅಕಬಾ'ದ ಮೇಲೆ ಗುರಿಯಿಟ್ಟು ಕಲ್ಲುಗಳನ್ನೆಸೆಯುವುದು, ಆ ಮೇಲೆ ಎಲ್ಲರೂ ಪ್ರಾಣಿಬಲಿ ಕೊಡುವುದು, ಅನಂತರ ಎಲ್ಲರೂ ಒಟ್ಟೊಟ್ಟಾಗಿ ಕಅಬಾಕ್ಕೆ ಮರಳಿ ಅದರ ತವಾಫ್ (ಪ್ರದಕ್ಷಿಣೆ) ಮಾಡುವುದು ಮತ್ತು ಒಂದೇ ಕೇಂದ್ರದ ಸುತ್ತಲೂ ನಿಂತು ನಮಾಝ್ ಮಾಡುವುದು, ಈ ಎಲ್ಲ ವಿಷಯಗಳೂ ತಮ್ಮಲ್ಲಿರಿಸಿಕೊಂಡಿರುವ ಪ್ರಭಾವಗಳ ಉದಾಹರಣೆಯು ಜಗತ್ತಿನಲ್ಲಿ ಇನ್ನೆಲ್ಲೂ ಸಿಗಲಾರದು.

ಒಂದೇ ಗುರಿ, ಒಂದೇ ಕೇಂದ್ರದಲ್ಲಿ ಜಮಾವಣೆ

ಜಗತ್ತಿನ ನಾನಾ ಜನಾಂಗಗಳಿಂದ ಹೊರಟವರು ಒಂದೇ ಕೇಂದ್ರ ಸ್ಥಾನದಲ್ಲಿ ಸೇರುವುದು. ಒಮ್ಮನಸ್ಸಿನಿಂದ ಐಕ್ಯದೊಂದಿಗೆ ಏಕಾಭಿಪ್ರಾಯ, ಸಾಮರಸ್ಯದೊಂದಿಗೆ ನಿರ್ಮಲ ಭಾವ, ನಿರ್ಮಲ ಧ್ಯೇಯ, ನಿರ್ಮಲ ಕಾರ್ಯಗಳೊಂದಿಗೆ ಸೇರುವುದು ವಾಸ್ತವದಲ್ಲಿ ಒಂದು ಮಹಾ ಕೊಡುಗೆಯಾಗಿದ್ದು ಇದನ್ನು ಮಾನವರಿಗೆ ಇಸ್ಲಾಮಿನ ಹೊರತು ಇನ್ನಾವುದೂ ನೀಡಿಲ್ಲ. ಸಕಲ ಜಗತ್ತಿನ ಜನಾಂಗಗಳು ಆಗಾಗ ಪರಸ್ಪರ ಒಟ್ಟುಗೂಡುತ್ತಿರುತ್ತವೆ.

ಆದರೆ ಹೇಗೆ? ಯುದ್ಧರಂಗದಲ್ಲಿ ರುಂಡಗಳ ಚೆಂಡಾಡಲಿಕ್ಕೆ! ಅಥವಾ ಒಪ್ಪಂದಗಳ ಕಾನ್ಫರೆನ್ಸ್‌ಗಳಲ್ಲಿ, ದೇಶಗಳ ವಿಭಜನೆ ಮತ್ತು ಜನಾಂಗಗಳನ್ನೊಡೆಯಲಿಕ್ಕಾಗಿ ಅಥವಾ ಒಂದು ಜನಾಂಗವು ಇನ್ನೊಂದು ಜನಾಂಗದ ವಿರುದ್ಧ ಮೋಸ, ವಂಚನೆ, ಕುತಂತ್ರ, ಒಳಸಂಚು ಮತ್ತು ವಿಶ್ವಾಸ ಘಾತಕಗಳ ಬಲೆಬೀಸಿ ಇತರರ ಹಾನಿಯಿಂದ ತಮ್ಮ ಲಾಭ ಗಿಟ್ಟಿಸಿಕೊಳ್ಳಲಿಕ್ಕಾಗಿರುವ ವಿಶ್ವಸಂಸ್ಥೆಯಲ್ಲಿ! ಆದರೆ ಎಲ್ಲಾ ಜನಾಂಗಗಳ ಜನಸಾಮಾನ್ಯರು ನಿರ್ಮಲ ಮನಸ್ಸಿನಿಂದ, ಸುನೀತಿ, ನಿರ್ಮಲ ಭಾವಗಳೊಂದಿಗೆ ಪ್ರೇಮ ಮತ್ತು ನಿರ್ವಂಚನೆಗಳಿಂದ ಹೃದಯ ಮತ್ತು ಆತ್ಮಗಳ ಐಕ್ಯದೊಂದಿಗೆ ವಿಚಾರ ಹಾಗೂ ಆಚಾರ ಮತ್ತು ಉದ್ದೇಶಗಳ ಸಾಮರಸ್ಯಗಳೊಂದಿಗೆ ಒಟ್ಟು ಸೇರುವುದು, ಅದೂ ಒಮ್ಮೆ ಮಾತ್ರ ಸೇರಿ ಅಗಲಿ ಬಿಡುವುದಲ್ಲ. ಸದಾಕಾಲ ವರ್ಷಂಪ್ರತಿ ಇದೇ ತರದಲ್ಲಿ ಒಟ್ಟುಗೂಡುತ್ತಲೇ ಇರುವಂತಹ ಭವ್ಯ ಕೊಡುಗೆಯು ಇಸ್ಲಾಮಿನ ಹೊರತು ಮಾನವ ಕೋಟಿಗೆ ಬೇರೆಲ್ಲಾದರೂ ಲಭಿಸುತ್ತಿದೆಯೇ? ವಿಶ್ವಶಾಂತಿಗೆ, ಜನಾಂಗಗಳೊಳಗಿನ ಹಗೆತನವನ್ನು ಹೋಗಲಾಡಿಸಲು ಮತ್ತು ಕಲಹ- ಯುದ್ಧಗಳ ಬದಲಿಗೆ ಪ್ರೇಮ, ಸ್ನೇಹ-ಸೌಹಾರ್ದಗಳ ವಾತಾವರಣವನ್ನು ಉಂಟು ಮಾಡಲು ಇದಕ್ಕಿಂತ ಶ್ರೇಷ್ಠ ಸಿದ್ಧೌಷಧವನ್ನು ಇನ್ನಾರು ತೋರಿಸಿಕೊಟ್ಟಿದ್ದಾರೆ?

ಶಾಂತಿ ಪಾಲನೆಯ ಸಾರ್ವಕಾಲಿಕ ಯೋಜನೆ

ಇಸ್ಲಾಮಿನಲ್ಲಿ ಇಷ್ಟು ಮಾತ್ರವಿರುವುದಲ್ಲ, ಇಲ್ಲಿ ಇದಕ್ಕಿಂತಲೂ ಹೆಚ್ಚು ಬಹಳಷ್ಟು ಇದೆ. ಹಜ್ಜ್ ಮತ್ತು 'ಉಮ್ರಾ'ಗಳಿಗಾಗಿ ಕಾದಿರಿಸಲ್ಪಟ್ಟಿರುವ ವರ್ಷದ ನಾಲ್ಕು ತಿಂಗಳುಗಳಲ್ಲಿ ಕಅಬಾದ ಕಡೆಗೆ ಬರುವ ಎಲ್ಲ ದಾರಿಗಳಲ್ಲಿಯೂ ಶಾಂತಿ ನೆಲೆಸುವಂತೆ ವ್ಯವಸ್ಥೆ ಮಾಡಬೇಕಾದುದನ್ನು ಅದು ಕಡ್ಡಾಯಗೊಳಿಸಿದೆ. ಇದು ವಿಶ್ವಶಾಂತಿ ಪಾಲನೆಯ ಅತಿದೊಡ್ಡ ಸಾರ್ವಕಾಲಿಕ ಯೋಜನೆ. ಅಂತಾರಾಷ್ಟ್ರೀಯ ರಾಜಕೀಯದ ಲಗಾಮು ಇಸ್ಲಾಮಿನ ಕೈಯಲ್ಲಿರುತ್ತಿದ್ದರೆ ಹಜ್ಜ್ ಮತ್ತು ಉಮ್ರಾ ನಿರ್ವಹಿಸಲಾಗದಂತಹ ಅಶಾಂತಿಯ ವಾತಾವರಣವನ್ನು ಜಗತ್ತಿನಿಂದ ಅಳಿಸಲು ಪ್ರಯತ್ನಿಸುತ್ತಿತ್ತು.

ಜಗತ್ತಿನ ಏಕೈಕ ಶಾಂತಿಗೇಹ

ಇಸ್ಲಾಮ್ ಧರ್ಮವು ಲೋಕಾವಸಾನದ ತನಕ ಶಾಂತಿಯ ನಗರವೆನಿಸಿದ ಹರಮನ್ನು (ಶಾಂತಿಗೇಹ) ದಯಪಾಲಿಸಿದೆ. ಅದರಲ್ಲಿ ಮಾನವ ಬೇಟೆಯಂತಿರಲಿ, ಪ್ರಾಣಿಬೇಟೆಯೂ ನಿಷೇಧವಾಗಿರುತ್ತದೆ. ಅಲ್ಲಿ ಹುಲ್ಲನ್ನು ಕೊಯ್ಯಲಿಕ್ಕೂ ಅನುಮತಿಯಿಲ್ಲ. ಆ ನೆಲದ ಮುಳ್ಳುಗಳನ್ನೂ ಮುರಿಯಕೂಡದು. ಅಲ್ಲಿ ಯಾರದೇ ವಸ್ತು ಬಿದ್ದಿದ್ದರೆ ಅದನ್ನು ಮುಟ್ಟ ಬೇಡಿರೆಂಬ ಆದೇಶವಿದೆ.

ಅದು ಆಯುಧಗಳನ್ನು ತರಲು ನಿಷೇಧಿಸಿದಂತಹ ಒಂದು ಪಟ್ಟಣವನ್ನು ಜಗತ್ತಿಗೆ ನೀಡಿದೆ. ಅಲ್ಲಿ ಧಾನ್ಯಗಳನ್ನೂ ಅಗತ್ಯವುಳ್ಳ ಇತರ ಸಾಮಗ್ರಿಗಳನ್ನೂ ತಡೆಹಿಡಿದು ಅವುಗಳ

ಬೆಲೆಯೇರಿಸುವುದು ಮನುಷ್ಯನನ್ನು ನಾಸ್ತಿಕತೆಯ ಗಡಿ ತನಕ ಒಯ್ಯುತ್ತದೆ. ಅಲ್ಲಿ ಅತಿಕ್ರಮ ಮಾಡುವವನಿಗೆ - نُذِقْهُ مِنْ عَذَابٍ أَلِيمٍ ಅರ್ಥಾತ್ - "ನಾವು ವೇದನಾಯುಕ್ತ ಶಿಕ್ಷೆ ನೀಡುವೆವು" ಎಂಬ ಬೆದರಿಕೆಯನ್ನು ಅಲ್ಲಾಹ್ ನೀಡಿರುತ್ತಾನೆ.

ನೈಜ ಸಮಾನತೆಯ ಕೇಂದ್ರಸ್ಥಾನ

ಅದು ಜಗತ್ತಿಗೆ ಒಂದು ಕೇಂದ್ರ ಸ್ಥಾನವನ್ನು ನೀಡಿದ್ದು, ಅದನ್ನು ಈ ರೀತಿ ಪರಿಚಯಿಸಲಾಗಿದೆ:

سَوَآءً ٱلْعَٰكِفُ فِيهِ وَٱلْبَادِ (الحج : ٢٥)

ಅರ್ಥಾತ್- ಅಲ್ಲಾಹನ ಸಾರ್ವಭೌಮತೆ ಮತ್ತು ಹ. ಮುಹಮ್ಮದ್‌ರವರ(ಸ) ಮಾರ್ಗದರ್ಶನವನ್ನು ಸ್ವೀಕರಿಸಿ ಇಸ್ಲಾಮೀ ಭ್ರಾತೃತ್ವದಲ್ಲಿ ಸೇರಿಕೊಂಡ ಸಕಲ ಮಾನವರ ಹಕ್ಕುಗಳು ಅಲ್ಲಿ ಸರಿಸಮಾನವಾಗಿವೆ. ಅಮೇರಿಕದವನಾಗಿರಲಿ, ಆಫ್ರಿಕದವನಾಗಿರಲಿ, ಚೀನಾದವನಾಗಿರಲಿ, ಭಾರತೀಯನಾಗಿರಲಿ ಅವನು ಮುಸ್ಲಿಮನಾದರೆ ಮಕ್ಕಾದ ನಾಡಿನಲ್ಲಿ ಮಕ್ಕಾವಾಸಿಗಳಿಗಿರುವಷ್ಟೇ ಹಕ್ಕುಗಳು ಅವನಿಗೂ ಇವೆ. ಇಡೀ ಹರಮಿನ ನೆಲೆಯು ಒಂದು ಮಸೀದಿಯಂತಿದೆ. ಒಬ್ಬನು ಮಸೀದಿಯೊಳಗೆ ಪ್ರವೇಶಿಸಿ ಒಂದೆಡೆ ತನ್ನ ಠಿಕಾಣಿ ಹೂಡಿ ಬಿಟ್ಟನೆಂದರೆ ಆ ಸ್ಥಳ ಅವನದೇ. ಯಾರೂ ಅವನನ್ನು ಅಲ್ಲಿಂದ ಎಬ್ಬಿಸುವಂತಿಲ್ಲ. ಅವನಿಂದ ಬಾಡಿಗೆ ವಸೂಲಿ ಮಾಡುವಂತಿಲ್ಲ. ಆದರೆ ಅವನು ತನ್ನ ಜೀವಮಾನವಿಡೀ ಅಲ್ಲೇ ಕುಳಿತಿದ್ದರೂ ಆ ಸ್ಥಳ ತನ್ನದೆನ್ನುವ ಹಕ್ಕು ಅವನಿಗಿಲ್ಲ. ಅವನು ಅದನ್ನು ವಿಕ್ರಯಿಸುವಂತಿಲ್ಲ. ಅದರ ಬಾಡಿಗೆ ವಸೂಲು ಮಾಡುವಂತಿಲ್ಲ. ಅವನು ಅಲ್ಲಿಂದ ಎದ್ದೊಡನೆ ಅವನಷ್ಟೇ ಹಕ್ಕು ಇನ್ನೊಬ್ಬನಿಗೂ ಇದೆ. ಇದೇ ಸ್ಥಿತಿ ಇಡೀ ಹರಮಿನದ್ದಾಗಿರುತ್ತದೆ.

مَكَّةُ مُنَاخٌ لِمَنْ سَبَقَ،

ಪ್ರವಾದಿಯವರು(ಸ), "ಈ ಪಟ್ಟಣದ ಯಾವ ಭಾಗದಲ್ಲಾದರೂ ಯಾರು ಮೊದಲು ಇಳಿದನೋ ಆ ಸ್ಥಳ ಅವನದೇ. ಅಲ್ಲಿರುವ ಮನೆಗಳ ಬಾಡಿಗೆ ವಸೂಲು ಮಾಡುವುದು ಧರ್ಮಬದ್ಧವಲ್ಲ" ಎಂದೂ, ಹ. ಉಮರ್‌ರವರು(ರ) "ನಿಮ್ಮ ಮನೆಗಳ ಹೊರಾಂಗಣಗಳಿಗೆ ಬಾಗಿಲುಗಳನ್ನಿರಿಸಬೇಡಿರಿ. ಇಷ್ಟವಿದ್ದವರು ಅಲ್ಲಿ ಬಂದು ಉಳಕೊಳ್ಳಲಿ" ಎಂದೂ ಅಲ್ಲಿಯ ಜನರಿಗೆ ಆದೇಶ ನೀಡಿದ್ದರು. ಮಕ್ಕಾ ಪಟ್ಟಣದ ಕಟ್ಟಡಗಳು ಯಾರ ಖಾಸಗಿ ಸೊತ್ತು ಅಲ್ಲ. ಅವು ವಾರೀಸುದಾರರಿಗೆ ಪಿತ್ರಾರ್ಜಿತ ಸೊತ್ತಾಗಿ ವರ್ಗಾಯಿಸಲ್ಪಡಲು ಸಾಧ್ಯವಿಲ್ಲವೆಂದೂ ಕೆಲವು ಕರ್ಮಶಾಸ್ತ್ರಜ್ಞರು ಹೇಳಿರುತ್ತಾರೆ.

ಇಸ್ಲಾಮಿನ ಹೊರತು ಇನ್ನೆಲ್ಲಾದರೂ ಇಂತಹ ಸೌಭಾಗ್ಯಗಳು ಕಾಣಸಿಗಬಹುದೇ?

ಇದರಲ್ಲಿ ಎಷ್ಟು ಪ್ರಯೋಜನಗಳಿವೆಯೆಂಬುದನ್ನು ನೋಡಿ ನೋಡಿರಿ ಎಂದು ಹೇಳಲಾಗಿರುವ ಹಜ್ಜ್ ಯಾತ್ರೆ ಇದುವೇ. ಇದರ ಪ್ರಯೋಜನಗಳೆಲ್ಲವನ್ನೂ ವಿವರಿಸುವಷ್ಟು

ಶಕ್ತಿ ನನ್ನಲ್ಲಿಲ್ಲ. ಆದರೂ ಈಗ ತಾನೇ ನಿಮ್ಮ ಮುಂದಿಟ್ಟಿರುವ ಇದರ ಪ್ರಯೋಜನಗಳ ಸಂಕ್ಷಿಪ್ತ ರೂಪರೇಷೆಗಳಿಂದಲೇ ಇದೇನೆಂದು ನೀವು ತಿಳಿದುಕೊಂಡಿರಬಹುದು.

ನಮ್ಮ ಕೃತಘ್ನತೆ

ಆದರೆ, ಇದನ್ನೆಲ್ಲ ಕೇಳಿದ ಬಳಿಕ ನನ್ನ ಹೃದಯದ ಬೇಗುದಿಯಿಂದುಂಟಾಗಿರುವ ಕೆಲವು ಮಾತುಗಳನ್ನೂ ಕೇಳಿಕೊಳ್ಳಿರಿ! ಹುಟ್ಟು ಮುಸ್ಲಿಮರಾದ ನಿಮ್ಮ ಉಪಮೆ ವಜ್ರದ ಗನಿಯಲ್ಲಿ ಜನಿಸಿದ ಮಗುವಿನಂತಿದೆ. ಆ ಮಗು ತನ್ನ ಸುತ್ತಮುತ್ತಲೂ ವಜ್ರಗಳನ್ನೇ ಕಂಡು ಅವುಗಳೊಂದಿಗೆ ಕಲ್ಲಾಟವಾಡುತ್ತಿರುವುದರಿಂದ ಅದರ ದೃಷ್ಟಿಯಲ್ಲಿ ವಜ್ರಗಳು ಕಲ್ಲುಗಳಂತೆ ಕೀಳಾಗಿ ಕಾಣುತ್ತವೆ. ನಿಮ್ಮ ಅವಸ್ಥೆಯೂ ಇದೇ ತೆರನಾಗಿದೆ. ಜಗತ್ತು ಯಾವ ಸಂಪತ್ಸೌಭಾಗ್ಯ ಗಳಿಂದ ವಂಚಿತವಾಗಿ ಕಷ್ಟ-ಪರಂಪರೆಗಳಲ್ಲಿ ಸಿಲುಕಿ, ಅವುಗಳನ್ನು ಪಡೆಯಲಿಕ್ಕಾಗಿ ತಳಮಳಗೊಳ್ಳುತ್ತಿದೆಯೋ ಅವೆಲ್ಲವೂ ನೀವು ಸೌಭಾಗ್ಯವಶಾತ್ ಮುಸ್ಲಿಮರ ಮನೆಗಳಲ್ಲಿ ಜನಿಸಿದುದರಿಂದ ನಿಮಗೆ ಯಾವುದೇ ಪರಿಶ್ರಮವಿಲ್ಲದೆ ಪುಕ್ಕಟೆಯಾಗಿ ಸಿಕ್ಕಿಬಿಟ್ಟಿವೆ. ಮಾನವ ಜೀವನದ ಸಕಲ ಜಟಿಲತೆಗಳನ್ನೂ ತೊಡಕುಗಳನ್ನೂ ಬಿಡಿಸಿ, ಸುಗಮವಾದ ನೇರ ದಾರಿಯನ್ನು ಮಾಡಿ ಕೊಡತಕ್ಕ "ಕಲಿಮತುತ್ತೌಹೀದ್" (ಏಕದೇವವಾದದ ವಚನ) ಚಿಕ್ಕಂದಿನಿಂದಲೇ ನಿಮ್ಮ ಕಿವಿಗಳೊಳಗೆ ಬಿದ್ದಿತ್ತು. ಪಶುಗಳನ್ನು ಮಾನವರನ್ನಾಗಿಯೂ ಮಾನವರನ್ನು ದೇವಭಕ್ತರ ನ್ನಾಗಿಯೂ ಪರಸ್ಪರ ಸಹೋದರರನ್ನಾಗಿಯೂ ಆತ್ಮೀಯ ಸ್ನೇಹಿತರನ್ನಾಗಿಯೂ ಪರಿವರ್ತಿಸ ಬಲ್ಲ ಇದಕ್ಕಿಂತ ಉತ್ತಮ ಔಷಧಿಗಳು ಯಾವ ಕಾಲದಲ್ಲೂ ಕಂಡು ಹಿಡಿಯಲ್ಪಡಲಿಲ್ಲ. ಆದರೆ ಆ ವಿಶ್ವಭೇಷಜಗಳು ನಮಾಝ್ ಮತ್ತು ಉಪವಾಸಗಳೆಂಬ ರೂಪದಲ್ಲಿ ನೀವು ಕಣ್ತೆರೆದೊಡನೆ ತನ್ನಿಂತಾನೇ ಪಿತ್ರಾರ್ಜಿತ ಸೊತ್ತಿನಂತೆ ನಿಮಗೆ ಸಿಕ್ಕಿದವು. ಝಕಾತಿನ ಅಪ್ರತಿಮ ಆರ್ಥಿಕ ವ್ಯವಸ್ಥೆಯು ಮಾನವನ ಮನಸ್ಸಿನಿಂದ ಧನದಾಸೆಯ ಕೊಳೆಯನ್ನು ತೊಳೆದುಬಿಡುತ್ತದೆ ಮತ್ತು ಅದು ಇಡೀ ಜಗತ್ತಿನ ಆರ್ಥಿಕತೆಯನ್ನು ಸುಧಾರಿಸಬಲ್ಲದು. ಇಂತಹ ಒಂದು ವ್ಯವಸ್ಥೆಯು ಆಚಾರದಲ್ಲಿಲ್ಲದಿರುವುದರಿಂದ ಇಡೀ ಜಗತ್ತಿನ ಮಾನವರು ಪರಸ್ಪರ ಮುಖ ಪರಚಿಕೊಳ್ಳುತ್ತಿರುವುದನ್ನು ನೀವು ಕಣ್ಣಾರೆ ಕಾಣುತ್ತಿರುವಿರಿ. ಇತರರು ಹುಡುಕಾಡುತ್ತ ಅಲೆದಾಡುತ್ತಿರುವ ಈ ರೋಗ ಚಿಕಿತ್ಸಾ ವಿಧಾನವೂ ಮಹಾ ಧೀಮಂತ ವೈದ್ಯನ ಮಗುವಿಗೆ ಶ್ರಮವಿಲ್ಲದೆ ಸಿಗುವಂತೆಯೇ ನಿಮಗೂ ಸಿಕ್ಕಿದೆ. ತದ್ರೀತಿಯಲ್ಲೇ 'ಹಜ್ಜ್'ನ ಅತ್ಯುಜ್ವಲ ಪದ್ಧತಿ ಕೂಡಾ. ಇದು ಇಂದು ಜಗತ್ತಿನಲ್ಲೆಲ್ಲೂ ಸರಿಸಾಟಿಯಿಲ್ಲದ ಒಂದು ವ್ಯವಸ್ಥೆ. ಒಂದು ಆಂದೋಲನವನ್ನು ಚತುರ್ದಿಶೆಗಳಲ್ಲಿ ಹರಡಿಸಲಿಕ್ಕೂ ಅದನ್ನು ಶಾಶ್ವತವಾಗಿ ಜೀವಂತವಿರಿಸಲಿಕ್ಕೂ ಬೇಕಾದ ಬಲವಾದ ಒಂದು ವ್ಯವಸ್ಥೆ. ಮಾನವನ ಎಲ್ಲಾ ಸಂತತಿಗಳನ್ನು ಭೂಮಿಯ ಮೂಲೆ ಮೂಲೆಗಳಿಂದ ಆಕರ್ಷಿಸಿ ತಂದು ಏಕದೇವನ ಹೆಸರಲ್ಲಿ ಏಕಸ್ಥಾನದಲ್ಲಿ ಒಟ್ಟುಗೂಡಿಸುವ ವ್ಯವಸ್ಥೆ. ಅಸಂಖ್ಯಾತ ಪೀಳಿಗೆಗಳನ್ನೂ ಜನಾಂಗಗಳನ್ನೂ ಏಕದೇವಭಕ್ತಿ ಹೊಂದಿದ ಸತ್ಸಂಕಲ್ಪವುಳ್ಳ ಪರಸ್ಪರ ಹಿತಾಕಾಂಕ್ಷಿ ಭ್ರಾತೃತ್ವದಲ್ಲಿ ಪೋಣಿಸಿಡುವ ವ್ಯವಸ್ಥೆ. ಅಹುದು, ಇಂತಹ ಅಪ್ರತಿಮ ವ್ಯವಸ್ಥೆ ಕೂಡ ನಿಮಗೆ ಏನೊಂದೂ ಹುಡುಕಾಟ ನಡೆಸದೆ,

ಸರ್ವಸಿದ್ಧವಾಗಿ ನೂರಾರು ವರ್ಷಗಳಿಂದ ನಡೆದುಕೊಂಡು ಬಂದುದೇ ಸಿಕ್ಕಿಹೋಯಿತು. ಆದರೆ, ನೀವು ಇಂತಹ ಭೂರಿ ಕೊಡುಗೆಗಳ ಮಹತ್ವವನ್ನು ಮನಗಾಣಲಿಲ್ಲ. ಅವುಗಳನ್ನು ಗೌರವಿಸಲಿಲ್ಲ. ಏಕೆಂದರೆ ಅವು ಕಣ್ತೆರೆದೊಡನೆ ನಿಮ್ಮ ಮನೆಯಲ್ಲೇ ನಿಮಗೆ ಸಿಕ್ಕಿಬಿಟ್ಟವು. ನೀವೀಗ ವಜ್ರದ ಗನಿಯಲ್ಲಿ ಜನಿಸಿದ ಬುದ್ಧಿಹೀನ ಮಗು ಆ ವಜ್ರಗಳನ್ನು ಹರಳುಕಲ್ಲು ಗಳೆಂದು ತಿಳಿದುಕೊಂಡು ಅವುಗಳೊಂದಿಗೆ ಆಡುವಂತೆ ಆಡುತ್ತಿದ್ದೀರಿ. ನೀವು ನಿಮ್ಮ ಅಜ್ಞಾನ ಮತ್ತು ಕಿಡಿಗೇಡಿತನಗಳ ಮೂಲಕ ಈ ಮಹಾ ಸಂಪತ್ತನ್ನೂ ಶಕ್ತಿಯನ್ನೂ ಹಾಳು ಮಾಡು ತ್ತಿರುವ ದೃಶ್ಯವನ್ನು ಕಾಣುವಾಗ ಮನಸ್ಸು ಕುದಿಯುತ್ತಿದೆ. ಬಂಡೆಯೊಡೆಯುವವರ ಕೈಗಳಿಂದ ನವರತ್ನಗಳು ಪುಡಿಯಾಗುತ್ತಿರುವುದನ್ನು ಕಣ್ಣಾರೆ ಕಂಡು ಸಹಿಸುವ ಆ ಸಹನಾ ಬಲವನ್ನು ನಾನೆಲ್ಲಿಂದ ತರಲಿ! ನನ್ನ ಮಿತ್ರರೇ, ನೀವು ಓರ್ವ ಕವಿಯ ಪರ್ಶಿಯನ್ ಕವಿತೆಯೊಂದನ್ನು ಕೇಳಿರಬಹುದು-

ಖರೇ ಈಸಾ ಅಗರ್ ಬ ಮಕ್ಕರವದ್|
ಚೂಂ ಬಯಾಯದ್ ಹನೂಝ್ ಖರ್ ಬಾ ಶುದ್||

ಅರ್ಥಾತ್-ಕತ್ತೆಯು ಹ.ಈಸಾರವರಂತಹ(ಅ) ಮಹಾ ಪ್ರವಾದಿಯವರ ಕತ್ತೆಯಾಗಿದ್ದರೇನು? ಅದು ಮಕ್ಕಾ ಸಂದರ್ಶನದ ಫಲವನ್ನು ಹೊಂದಲಾರದು. ಅದು ಅಲ್ಲಿಗೆ ಹೋಗಿ ಬಂದ ಬಳಿಕವೂ ಮೊದಲಿನಂತೆಯೇ ಕತ್ತೆಯಾಗಿಯೇ ಇರುವುದು.

ನಮಾಝ್ ಆಗಲಿ, ಉಪವಾಸ ವ್ರತವಾಗಲಿ ಅಥವಾ ಹಜ್ಜ್ ಯಾತ್ರೆಯಾಗಿರಲಿ ಇವೆಲ್ಲ ಬುದ್ಧಿ ಇದ್ದಂತಹ ಮಾನವರ ತರಬೇತಿಗಾಗಿರುತ್ತವೆ. ಅವು ಪ್ರಾಣಿಗಳನ್ನು ಪಳಗಿಸುವುದಕ್ಕಾಗಿರು ವುದಲ್ಲ. ಅವುಗಳ ಅರ್ಥ-ತಾತ್ಪರ್ಯಗಳನ್ನು ತಿಳಿಯದವರೂ ಅವುಗಳ ಉದ್ದೇಶದ ಬಗ್ಗೆ ಅಲಕ್ಷ್ಯದಿಂದಿರುವವರೂ ಆ ಆರಾಧನಾ ವಿಧಾನಗಳಲ್ಲಿರುವ ಪ್ರಯೋಜನಗಳನ್ನು ಪಡೆಯ ಬಯಸದವರೂ ಮನ-ಮಸ್ತಿಷ್ಕಗಳಲ್ಲಿ ಅವುಗಳ ವಿಭಾವನೆಯನ್ನೇ ಇರಿಸದವರು ತಮ್ಮ ಪೂರ್ವಜರು ಮಾಡುವಂತೆಯೇ ಮಾಡಿದರೆ ಅದರಿಂದ ಯಾವ ಪರಿಣಾಮವನ್ನು ತಾನೆ ನಿರೀಕ್ಷಿಸಬಹುದು? ದೌರ್ಭಾಗ್ಯವಶಾತ್ ಇಂದಿನ ಮುಸ್ಲಿಮರು ಈ ಕರ್ಮ ವಿಧಾನಗಳನ್ನು ಇದೇ ರೀತಿಯಲ್ಲಿ ನೆರವೇರಿಸುತ್ತಾರೆ. ಪ್ರತಿಯೊಂದು ಇಬಾದತ(ಆರಾಧನೆ)ನ್ನು ಅದರ ಬಾಹ್ಯ ರೂಪದಂತೆ ಮಾಡಿಟ್ಟು ಬಿಡುತ್ತಾರೆ. ಆ ರೂಪವು ನಿರ್ಜೀವವಾಗಿರುತ್ತದೆ. ವರ್ಷಂಪ್ರತಿ ಸಾವಿರಾರು ಮಂದಿ ಯಾತ್ರಿಕರು ಇಸ್ಲಾಮಿನ ಕೇಂದ್ರ ಸ್ಥಾನಕ್ಕೆ ಹೋಗಿ ಹಜ್ಜ್ ಕರ್ಮದಿಂದ ಪುನೀತರಾಗಿ ಹಿಂದಿರುಗುವುದನ್ನು ನೀವು ಕಾಣುತ್ತೀರಿ. ಆದರೆ, ಅವರಲ್ಲಿ ಓರ್ವ ಹರಮಿನ ಯಾತ್ರಿಕನಲ್ಲಿರಬೇಕಾದ ಆ ನೈಜ ವೈಶಿಷ್ಟ್ಯವು ಹೋಗುವಾಗಲೂ ಇರುವುದಿಲ್ಲ. ಅಲ್ಲಿಂದ ಬಂದನಂತರ ಅವರಲ್ಲಿ ಹಜ್ಜ್‌ನ ಪ್ರಭಾವವೂ ಉಳಿದಿರುವುದಿಲ್ಲ. ಅವರು ಹೋಗುವ ಮತ್ತು ಬರುವ ದಾರಿಯುದ್ದಕ್ಕೂ ವಾಸಿಸುವ ಮುಸ್ಲಿಮರ ಮತ್ತು ಮುಸ್ಲಿಮೇತರರ ಮೇಲೆ ಬೀರಲೇ ಬೇಕಾದ ನೈತಿಕ ಪ್ರಭಾವವನ್ನೂ ಅವರು ಬೀರುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಅವರಲ್ಲಿ ಹೆಚ್ಚಿನವರು ತಮ್ಮ ಮಾಲಿನ್ಯ, ದುರ್ಬುದ್ಧಿ, ನೈತಿಕ ಅಧಃಪತನಗಳ ಪ್ರದರ್ಶನ ಮಾಡಿ ಇಸ್ಲಾಮಿನ ಗೌರವಕ್ಕೆ ಕುಂದುಂಟು ಮಾಡುತ್ತಾರೆ. ಅವರ ಜೀವನ ಕ್ರಮವನ್ನು ನೋಡಿ ಇತರರಲ್ಲಿ ಧರ್ಮದ ಶ್ರೇಷ್ಠತೆಯ ಮುದ್ರೆ ಬೀಳುವ ಬದಲಿಗೆ ಸ್ವತಃ ತನ್ನವರ ದೃಷ್ಟಿಯಲ್ಲೇ ಅವರು ಅವಮಾನಿತರಾಗುತ್ತಾರೆ.

ಆದುದರಿಂದಲೇ ನಮ್ಮ ಜನಾಂಗದ ಅನೇಕ ಮಂದಿ ತರುಣರು ಈ ಹಜ್ಜ್ ಯಾತ್ರೆಯಿಂದ ಸಿಗುವ ಪ್ರಯೋಜನಗಳನ್ನು ವಿವರಿಸಿ ಹೇಳಿರಿ ಎನ್ನುತ್ತಾರೆ. ವಾಸ್ತವದಲ್ಲಿ ಹಜ್ಜ್ ಯಾತ್ರೆಯನ್ನು ಅದರ ಘನತೆಗೆ ತಕ್ಕ ಹಾಗೆ ನೆರವೇರಿಸುತ್ತಿದ್ದರೆ ಅದರಿಂದ ಸಿಗುವ ಪ್ರಯೋಜನಗಳನ್ನು ಕಣ್ಣಾರೆ ಕಂಡು ಸತ್ಯನಿಷೇಧಿಗಳೂ ವಿಶ್ವಾಸ ತರುತ್ತಿದ್ದರು. ಒಂದು ಆಂದೋಲನದ ಸಾವಿರಾರಲ್ಲ ಲಕ್ಷಾವಧಿ ಸದಸ್ಯರು ವರ್ಷಂಪ್ರತಿ ಜಗತ್ತಿನ ನಾನಾ ಭಾಗಗಳಿಂದ ಆಕರ್ಷಿಸಲ್ಪಟ್ಟು ಒಂದು ಕಡೆ ಸೇರಿ ಅನಂತರ ತಂತಮ್ಮ ಊರುಗಳಿಗೆ ಮರಳಿದಾಗ ದೇಶ ದೇಶಗಳಲ್ಲೂ ಊರೂರುಗಳಲ್ಲೂ ತಮ್ಮ ನಿರ್ಮಲ ವ್ಯವಹಾರ ಜೀವನ, ಪರಿಶುದ್ಧ ವಿಚಾರ, ಉನ್ನತ ಚಾರಿತ್ರ್ಯಗಳನ್ನು ಪ್ರದರ್ಶಿಸುತ್ತ ಹೋದಾಗ ಅವರು ತಂಗಿದಲ್ಲೂ ಹಾದೂ ಹೋಗುವಲ್ಲೂ ತಮ್ಮ ಆಂದೋಲನದ ಮೂಲೋದ್ದೇಶಗಳನ್ನು ಪ್ರಚಾರ ಪಡಿಸುತ್ತಲೂ ತಮ್ಮ ಕರ್ಮ ಜೀವನದ ಮೂಲಕ ಅವುಗಳನ್ನು ಪ್ರಕಟಗೊಳಿಸುತ್ತಲೂ ಹೋದಾಗ, ಈ ಪರಂಪರೆಯು ಹತ್ತಿಪ್ಪತ್ತು ವರ್ಷಗಳಿಂದೀಚೆಗಲ್ಲ - ಅನೇಕ ಶತಮಾನಗಳಿಂದಲೂ ವರ್ಷಂ ಪ್ರತಿ ನಡೆಯುತ್ತ ಬರುತ್ತಿರುವಾಗ ಇತರರಿಗೆ ಅದರ ಪ್ರಯೋಜನಗಳನ್ನು ಕೇಳಿ ತಿಳಿದುಕೊಳ್ಳಬೇಕಾದ ಅಗತ್ಯ ಬೀಳಬಹುದೇ ಎಂಬುದನ್ನು ನೀವೇ ಯೋಚಿಸಿರಿ. ಈ ಕಾರ್ಯವು ಸರಿಯಾದ ಕ್ರಮದಲ್ಲಿ ಜರಗುತ್ತಲಿದ್ದರೆ, ದೇವನಾಣೆಗೂ ಕುರುಡರೂ ಇದರ ಪ್ರಯೋಜನಗಳನ್ನು ಕಾಣುತ್ತಿದ್ದರು. ಕಿವುಡರೂ ಇದರ ಪ್ರಯೋಜನಗಳನ್ನು ಕೇಳುತ್ತಿದ್ದರು. ವರ್ಷಂಪ್ರತಿ ನಡೆಯುತ್ತಿರುವ ಈ ಹಜ್ಜ್ ಯಾತ್ರೆಯು ಕೋಟ್ಯಾವಧಿ ಮುಸ್ಲಿಮರನ್ನು ನಿಷ್ಠಾವಂತರನ್ನಾಗಿ ಮಾಡಿಬಿಡುತ್ತಿತ್ತು. ಸಾವಿರಾರು ಮುಸ್ಲಿಮೇತರರನ್ನು ಇಸ್ಲಾಮಿನ ಪರಿಧಿಯೊಳಕ್ಕೆ ಆಕರ್ಷಿಸುತ್ತಿತ್ತು ಮತ್ತು ಲಕ್ಷಾವಧಿ ಮುಸ್ಲಿಮೇತರರ ಹೃದಯಗಳಲ್ಲಿ ಇಸ್ಲಾಮಿನ ಬಗ್ಗೆ ಗೌರವ ಭಾವನೆಯು ಮೂಡುತ್ತಿತ್ತು. ಆದರೆ ಅಜ್ಞಾನವು ಹಾಳಾಗಿ ಹೋಗಲಿ! ಅಜ್ಞಾನಿಗಳ ಕೈಗೆ ಸಿಲುಕಿ ಇಷ್ಟೊಂದು ಬೆಲೆಬಾಳುವ ವಸ್ತು ಹೇಗೆ ನಷ್ಟವಾಗುತ್ತಿದೆ!

ಹಜ್ಜ್‌ನಿಂದ ಸಂಪೂರ್ಣ ಪ್ರಯೋಜನ ಪಡೆಯುವ ಮಾರ್ಗ

ಹಜ್ಜ್ ಯಾತ್ರೆಯ ಸಂಪೂರ್ಣ ಪ್ರಯೋಜನ ಪ್ರಾಪ್ತವಾಗಲಿಕ್ಕೆ ಇಸ್ಲಾಮಿನ ಕೇಂದ್ರ ಸ್ಥಾನದಲ್ಲಿ ವಿಶ್ವವ್ಯಾಪೀ ಶಕ್ತಿಯಿಂದ ಕಾರ್ಯವೆಸಗುವ ಕೈ ಇರಬೇಕಿತ್ತು. ಪ್ರತಿವರ್ಷವೂ ಇಡೀ ಜಗತ್ತಿನ ದೇಹಕ್ಕೆ ಶುದ್ಧ ರಕ್ತವನ್ನು ಹರಿಯಿಸುವಂತಹ ಹೃದಯ ಕಮಲವಿರಬೇಕಿತ್ತು. ಸಾವಿರಾರು ಲಕ್ಷಾವಧಿ ಸ್ವಭಾವಸಿದ್ಧ ದೂತರ ಮುಖಾಂತರ ಜಗತ್ತಿನಾದ್ಯಂತ ಇಸ್ಲಾಮಿನ ಸಂದೇಶವನ್ನು ಪ್ರಸಾರ ಮಾಡಲು ಪ್ರಯತ್ನಿಸುವಂತಹ ಮೆದುಳಿರಬೇಕಿತ್ತು. ಇದೇನೂ ಇಲ್ಲದಿದ್ದರೂ ಕನಿಷ್ಠಪಕ್ಷ ಅಲ್ಲಿ ನಿಷ್ಕಳಂಕ ಇಸ್ಲಾಮೀ ಜೀವನದ ಒಂದು ಪರಿಪೂರ್ಣ ಮಾದರಿ ಇದ್ದು ಅಲ್ಲಿಂದ ಪ್ರತಿ ವರ್ಷವೂ ಜಗತ್ತಿನ ಮುಸ್ಲಿಮರು ಸಹಜ ಧಾರ್ಮಿಕತೆಯ ಹೊಸ ಪಾಠವನ್ನು ಹೊಂದಿ ಮರಳುವಂತಹ ವ್ಯವಸ್ಥೆ ಇರಬೇಕಿತ್ತು. ಆದರೆ ಏನು ಹೇಳಲಿ? ಅಲ್ಲಿ ಏನೂ ಇಲ್ಲ. ದೀರ್ಘ ಕಾಲದಿಂದ ಅರಬ್ ದೇಶದಲ್ಲಿ ಅಜ್ಞಾನವು ಪೋಷಿಸಲ್ಪಡುತ್ತಿದೆ. 'ಅಬ್ಬಾಸೀ' ಮನೆತನದವರ ಕಾಲದಿಂದ 'ಉಸ್ಮಾನೀ' ಮನೆತನದವರ ಕಾಲದವರೆಗೆ ಪ್ರತಿಯೊಬ್ಬ ಅರಸನು ಅರಬ್ ದೇಶವನ್ನು ಅಭಿವೃದ್ಧಿಗೊಳಿಸುವ ಬದಲಿಗೆ ತನ್ನ ರಾಜಕೀಯ ದುರುದ್ದೇಶ ಸಾಧನೆಗಾಗಿ ನಿರಂತರ

ಅಧೋಗತಿಗೆ ತಳ್ಳಲು ಪ್ರಯತ್ನಿಸುತ್ತಲಿದ್ದನು. ಅವರು ಅರಬರನ್ನು ಶಿಕ್ಷಣ, ಸಚ್ಚಾರಿತ್ರ್ಯ, ನಾಗರಿಕತೆ ಮೊದಲಾದ ಎಲ್ಲ ರಂಗಗಳಲ್ಲೂ ಅಧಃಪತನದ ಅಂತಿಮ ಮಟ್ಟಕ್ಕೆ ತಂದಿಳಿಸಿದರು. ಇದರ ಪರಿಣಾಮವಾಗಿ ಒಂದು ಕಾಲದಲ್ಲಿ ಯಾವ ಸ್ಥಾನದಿಂದ ಇಸ್ಲಾಮಿನ ಭಾಗ್ಯಜ್ಯೋತಿಯು ಇಡೀ ಜಗತ್ತಿಗೆ ಹಬ್ಬಿತ್ತೋ ಅದೇ ಇಂದು ಅದಕ್ಕಿಂತಲೂ ಹಿಂದಿನ ಅಜ್ಞಾನವನ್ನು ಸಮೀಪಿಸುತ್ತಲಿದೆ. ಅಲ್ಲಿ ಈಗ ಇಸ್ಲಾಮಿನ ಶಿಕ್ಷಣವೂ ಇಲ್ಲ, ಸಚ್ಚಾರಿತ್ರ್ಯವೂ ಇಲ್ಲ, ಆದರ್ಶ ಜೀವನವೂ ಇಲ್ಲ. ಜನರು ದೂರದೂರದ ಪ್ರದೇಶಗಳಿಂದ ಅತ್ಯುನ್ನತ ಆಶೋತ್ತರಗಳೊಂದಿಗೆ ಪವಿತ್ರ ಹರಮಿನ ಯಾತ್ರೆ ಕೈಗೊಳ್ಳುತ್ತಾರೆ. ಆದರೆ ಆ ಪ್ರದೇಶವನ್ನು ತಲಪಿ ಎಲ್ಲೆಲ್ಲೂ ಅಜ್ಞಾನ, ಮಾಲಿನ್ಯ, ದುರಾಸೆ, ನಿರ್ಲಜ್ಜೆ, ಲೋಕಾರಾಧನೆ, ಅನೈತಿಕತೆ, ಅವ್ಯವಸ್ಥೆ ಮತ್ತು ಸಾಮಾನ್ಯ ಜನರ ಎಲ್ಲಾ ವಿಧದ ಅಧೋಗತಿಯನ್ನು ಕಂಡಾಗ ಅವರು ಕಟ್ಟಿಕೊಂಡು ಹೋಗಿದ್ದ ಆಶಾಗೋಪುರಗಳೆಲ್ಲಾ ಕುಸಿದು ಬೀಳುತ್ತವೆ. ಇದರ ಪರಿಣಾಮವಾಗಿ ಅನೇಕರು ಹಜ್ಜ್ ಯಾತ್ರೆ ಕೈಗೊಂಡು ತಮ್ಮ ಈಮಾನನ್ನು (ಸತ್ಯವಿಶ್ವಾಸವನ್ನು) ವೃದ್ಧಿಸುವ ಬದಲಿಗೆ ಸ್ವಲ್ಪ ಕಳೆದುಕೊಳ್ಳುತ್ತಾರೆ. ಹ. ಇಬ್ರಾಹೀಮ್‌ರವರ(ಅ) ಕಾಲಾನಂತರ ಅಜ್ಞಾನ ಕಾಲದಲ್ಲಿ ಕಅಬಾದಲ್ಲಿ ಹ.ಮುಹಮ್ಮದ್‌ರವರು(ಸ) ಕೊನೆಗೊಳಿಸಿದ್ದ ಆ ಮಠಾಧಿಪತ್ಯವು ಪುನಃ ಬೆಳೆದು ನಿಂತಿದೆ. ಕಅಬಾದ ಹರಮಿನ ವ್ಯವಸ್ಥಾಪಕರು ಪುನಃ ಹಿಂದಿನಂತೆಯೇ ಪೀಠಾಧಿಪತಿಗಳಾಗಿ ಕೂತುಬಿಟ್ಟಿದ್ದಾರೆ. ದೇವಭವನವು ಅವರ ಸ್ವಂತ ಆಸ್ತಿಯಾಗಿ ಬಿಟ್ಟಿದೆ. ಹಜ್ಜ್ ಅವರಿಗೊಂದು ವ್ಯಾಪಾರವಾಗಿ ಹೋಗಿದೆ. ಹಜ್ಜ್ ಯಾತ್ರಿಕರನ್ನು ಅವರು ತಮ್ಮ ಗಿರಾಕಿಗಳೆಂದು ಭಾವಿಸಿದ್ದಾರೆ. ಈ ಗಿರಾಕಿಗಳನ್ನು ಕೂಡಿಹಾಕಿ ರವಾನಿಸಲಿಕ್ಕಾಗಿ ಬೇರೆಬೇರೆ ದೇಶಗಳಲ್ಲಿ ಅವರಿಂದ ದೊಡ್ಡದೊಡ್ಡ ಸಂಬಳ ಪಡೆಯುವ ಏಜಂಟರು ನೇಮಿಸಲ್ಪಟ್ಟಿದ್ದಾರೆ. ಬೇರೆ ಬೇರೆ ದೇಶಗಳಿಂದ ಈ ಗಿರಾಕಿಗಳನ್ನು ಜಮೆ ಮಾಡಿ ತರಲಿಕ್ಕಾಗಿ ಅಜಮೀರಿನ ಮುಜಾವರರಂತೆ ವರ್ಷಂಪ್ರತಿ ದಲಾಲರ ಮತ್ತು ಪ್ರಯಾಣಿಕ ಏಜಂಟರ ಪಡೆಗಳೇ ಮಕ್ಕಾದಿಂದ ಹೊರಡುತ್ತವೆ, ಅವರು ಕುರ್‌ಆನಿನ ಸೂಕ್ತಗಳನ್ನೂ ಪ್ರವಾದಿ ವಚನಗಳನ್ನೂ ಉಪದೇಶಿಸುವುದು ಜನರಿಗೆ ಅಲ್ಲಾಹನು ವಿಧಿಸಿರುವ ಕಡ್ಡಾಯ ವಿಧಿಯನ್ನು ನೆನಪಿಸಲಿಕ್ಕಾಗಿ ಅಲ್ಲ, ಕೇವಲ ಆ ಆದೇಶಗಳನ್ನು ಕೇಳಿ ಜನರು ಹಜ್ಜ್ ಯಾತ್ರೆಗೆ ಹೊರಟು ಅವರ ಆದಾಯ ಹೆಚ್ಚಿಸಲಿಕ್ಕಾಗಿ. ಆ ಪೀಠಾಧಿಪತಿ ಗಳನ್ನೂ ದಲಾಲರನ್ನೂ ಸಾಕಲಿಕ್ಕಾಗಿ ಅಲ್ಲಾಹ್ ಮತ್ತು ಪ್ರವಾದಿಯವರು(ಸ) ಇದನ್ನೆಲ್ಲ ಮಾಡಿರುವಂತಿದೆ. ಇಷ್ಟೇ ಅಲ್ಲ, ಒಬ್ಬನು ಈ ಕಡ್ಡಾಯ ವಿಧಿಯನ್ನು ನೆರವೇರಿಸಲು ತನ್ನ ಮನೆಯಿಂದ ಪ್ರಯಾಣಕ್ಕೆ ಹೊರಟು ಹಿಂದಿರುಗಿ ಬರುವವರೆಗೂ ಹೋದಲ್ಲೆಲ್ಲ ಈ ಧರ್ಮ ಸೇವಕರು ಮತ್ತು ವ್ಯಾಪಾರಿಗಳ ಪರಸ್ಪರ ಭೇಟಿಯಾಗುತ್ತದೆ. ಮುಅಲ್ಲಿಮ್, ಮುತವ್ವಿಫರು, ಅವರ ಮಧ್ಯಸ್ಥಗಾರರು, ಕಅಬಾದ ಕೀಲಿಧಾರಿಗಳ (Key holders) ಜೊತೆ ಸೌದಿ ಸರಕಾರವೂ ಈ ವ್ಯಾಪಾರದಲ್ಲಿ ಪಾಲುಗಾರ. ಹಜ್ಜ್ ಯಾತ್ರೆಯ ಎಲ್ಲ ವಿಧಿಗಳನ್ನೂ ಪ್ರತಿಫಲ ಪಡೆದೇ ನೆರವೇರಿಸಿ ಕೊಡಲಾಗುತ್ತದೆ. ಅಲ್ಲಾಹನೇ ಕಾಪಾಡಬೇಕು. ಓರ್ವ ಮುಸ್ಲಿಮನಿಗಾಗಿ ಕಅಬಾದ ದ್ವಾರವೂ ಕೂಡ ಶುಲ್ಕವಿಲ್ಲದೆ ತೆರೆಯಲಾಗುವುದಿಲ್ಲ. ಈ ಪರಿಸ್ಥಿತಿಯನ್ನು ಇಲ್ಲಿಗೆ ತಂದೊಡ್ಡಿದುದು ಪೀಠಾಧಿಪತ್ಯ ವ್ಯವಹಾರದ ಬೇರನ್ನೇ ಕಿತ್ತೆಸೆದ ಆ ಧರ್ಮದ ತಥಾಕಥಿತ ಸೇವಕರೂ ಕೇಂದ್ರ ಆರಾಧನಾಲಯದ

ಮುಜಾವರರೂ ಆಗಿರುತ್ತಾರೆ. ಆರಾಧನೆ ಮಾಡಿಸುವ ಕಾರ್ಯಗಳು ಕೂಲಿ ಕೆಲಸ ಮತ್ತು ವ್ಯಾಪಾರವಾಗಿ ಹೋದಾಗ, ಆರಾಧನಾಲಯಗಳನ್ನು ಆದಾಯ ಮೂಲವನ್ನಾಗಿ ಮಾಡಿಕೊಂಡಾಗ, ದೇವಾದೇಶಗಳನ್ನು ಕೇಳಿ ಜನರು ಕಡ್ಡಾಯ ವಿಧಿಗಳನ್ನು ನೆರವೇರಿಸಲು ನಿರ್ಬಂಧಿತರಾಗುವಲ್ಲಿ ಅವುಗಳನ್ನು ಅವರ ಕಿಸೆಗಳಲ್ಲಿರುವ ಹಣ ಸುಲಿಯಲಿಕ್ಕಾಗಿ ಉಪಯೋಗಿಸಿಕೊಂಡಾಗ, ಆರಾಧನೆಯ ಪ್ರತಿಯೊಂದು ವಿಧಿಯನ್ನು ಪ್ರತಿಫಲ ಕೊಟ್ಟೇ ನೆರವೇರಿಸಬೇಕಾಗಿ ಬಂದಾಗ ಮತ್ತು ಧಾರ್ಮಿಕ ಕಲ್ಯಾಣ ಕಾರ್ಯಗಳು ಒಂದು ತರದ ಕ್ರಯವಿಕ್ರಯದ ಸಾಮಗ್ರಿಯಾಗಿ ಹೋದಾಗ ಆರಾಧನೆಯ ಜೀವಾಳ ಉಳಿಯುವುದಾದರೂ ಹೇಗೆ? ಈ ಎಲ್ಲ ಕಾರ್ಯಗಳು ವ್ಯಾಪಾರಿ ಮತ್ತು ಗ್ರಾಹಕ ಮನೋವೃತ್ತಿಗಳಿಂದ ನಡೆಯುತ್ತಿರುವಾಗ, ಹಜ್ಜ್ ಯಾತ್ರೆ ಮಾಡುವವರಿಗೂ ಮಾಡಿಸುವವರಿಗೂ ಈ ಆರಾಧನೆಯ ನಿಜವಾದ ನೈತಿಕ, ಆಧ್ಯಾತ್ಮಿಕ ಪ್ರಯೋಜನ ಸಿಗಬಹುದೆಂದು ಆಶಿಸುವುದಾದರೂ ಹೇಗೆ?

ಈ ಪ್ರಸ್ತಾಪವನ್ನೆತ್ತಿ ನಾನು ಯಾರನ್ನಾದರೂ ದೂಷಿಸಲು ಉದ್ದೇಶಿಸುವುದಿಲ್ಲ. ಹಜ್ಜ್ ಯಾತ್ರೆಯಂತಹ ಮಹೋನ್ನತ ಶಕ್ತಿಯನ್ನು ಇಂದು ಯಾವಯಾವ ವಿಷಯಗಳು ನಿಸ್ತೇಜ ಗೊಳಿಸಿವೆಯೆಂಬುದನ್ನು ಜನರಿಗೆ ತಿಳಿಯಪಡಿಸುವುದೇ ನನ್ನ ಉದ್ದೇಶವಾಗಿದೆ. ಇಸ್ಲಾಮ್ ಧರ್ಮದಲ್ಲಾಗಲಿ ಅಥವಾ ಅದು ಜಾರಿಗೊಳಿಸಿರುವ ವಿಧಿನಿಯಮಗಳಲ್ಲಾಗಲಿ ದೋಷಗಳಿರ ಬಹುದೆಂಬ ತಪ್ಪಾಭಿಪ್ರಾಯ ಯಾರಲ್ಲೂ ಉಂಟಾಗಬಾರದು. ಲೋಪ ದೋಷಗಳಿರುವುದು ಇಸ್ಲಾಮಿನ ಸರಿಯಾದ ಅನುಸರಣೆ ಮಾಡದಿರುವವರಲ್ಲಿ. ನಿಮ್ಮನ್ನು ಮಾನವತೆಯ ಒಂದು ಪರಿಪೂರ್ಣ ಮಾದರಿಯನ್ನಾಗಿ ಮಾಡಬಲ್ಲ ನಿಯಮಗಳ ಅನುಸರಣೆಯನ್ನು ಸರಿಯಾಗಿ ಮಾಡಿದ್ದಲ್ಲಿ ನೀವು ಜಗತ್ತಿನ ಸುಧಾರಕರೂ ನಾಯಕರೂ ಆಗಬಹುದಾಗಿತ್ತು. ಆದರೆ ನಿಮ್ಮ ಸ್ವಂತ ಕೈಗಳಿಂದಾದ ಪ್ರಮಾದದಿಂದಾಗಿಯೇ ಇಂದು ಯಾವ ಒಳ್ಳೆಯ ಫಲವೂ ತೋರುವುದಿಲ್ಲ. ಜನರಿಗೆ ಸ್ವತಃ ಆ ಪದ್ಧತಿಗಳು ಫಲಕಾರಿಯೆಂಬ ಬಗ್ಗೆ ಸಂಶಯವುಂಟಾಗತೊಡಗಿವೆ. ಇದರ ಉಪಮೆ ಹೀಗಿದೆ: ಒಬ್ಬ ಮಹಾ ವೈದ್ಯ ಶಿರೋಮಣಿಯು ಗುಂಡು ನಾಟುವಂತೆ ನಾಟುವ ಕೆಲವು ಪರಿಣಾಮಕಾರಿ ಚಿಕಿತ್ಸೆಗಳನ್ನು ಶೋಧಿಸಿಟ್ಟು ಹೋಗಿದ್ದನು. ಅವು ಅವನ ಅನಂತರದ ಅಜ್ಞಾನಿ ಉತ್ತರಾಧಿಕಾರಿಗಳ ಕೈಸೇರಿ ವಿಫಲವಾದುದೇ ಮಾತ್ರವಲ್ಲ ಕೆಟ್ಟ ಹೆಸರನ್ನೂ ಪಡೆದಂತಿದೆ. ಚಿಕಿತ್ಸೆಯು ಅದೆಷ್ಟೇ ಉತ್ತಮವಾಗಿದ್ದರೂ ಅದರಿಂದ ಸರಿಯಾದ ಫಲ ಪಡೆಯಲು ಪಾಂಡಿತ್ಯ ಮತ್ತು ಬುದ್ಧಿವಂತಿಕೆ ಗಳಿರಬೇಕಾದುದು ಅಗತ್ಯ. ತಿಳಿಗೇಡಿಗಳು ಅದನ್ನು ಉಪಯೋಗಿಸಿದರೆ ಅದು ವಿಫಲವಾಗುವುದು ಮಾತ್ರವಲ್ಲ ಹಾನಿಕಾರಕವಾಗುವುದು. ಸ್ವತಃ ಚಿಕಿತ್ಸೆಯನ್ನು ಪರೀಕ್ಷಿಸುವ ಸಾಮರ್ಥ್ಯವಿಲ್ಲದ ಅಜ್ಞಾನಿಗಳು ಆ ಚಿಕಿತ್ಸೆಯೇ ಸರಿಯಾದುದಲ್ಲವೆಂದು ತಪ್ಪಾಗಿ ಭಾವಿಸುತ್ತಾರೆ.

ಅಧ್ಯಾಯ -7

ಜಿಹಾದ್

○

- ಜಿಹಾದ್
  - ಜಿಹಾದ್‌ನ ಮಹತ್ವ

○

ಜಿಹಾದ್

ಮುಸ್ಲಿಮ್ ಬಂಧುಗಳೇ,

ನಾನು ನಿಮಗೆ ಈ ಹಿಂದಿನ ಉಪನ್ಯಾಸಗಳಲ್ಲಿ ಪದೇಪದೇ ಸೂಚಿಸಿರುವಂತೆ, ಅಲ್ಲಾಹನು ನಿಮ್ಮ ಮೇಲೆ ಕಡ್ಡಾಯಗೊಳಿಸಿರುವ ಮತ್ತು ಇಸ್ಲಾಮಿನ ಆಧಾರಸ್ತಂಭಗಳೆಂದು ಸಾರಿರುವ ನಮಾಝ್, ಉಪವಾಸ ವ್ರತ, ಝಕಾತ್ ಮತ್ತು ಹಜ್ಜ್ ಎಂಬ ಕರ್ಮಗಳು ಇತರ ಕೆಲವು ಧರ್ಮಗಳಲ್ಲಿರುವ ಪೂಜಾ ವಿಧಿಗಳಂತೆ ಕೇವಲ ಪೂಜೆ, ಭಜನೆ, ಹರಕೆ, ಜಾತ್ರೆಗಳಂತಹ ಕಟ್ಟಳೆಗಳಲ್ಲ. ಆದ್ದರಿಂದ ನೀವು ಕೇವಲ ಇವುಗಳನ್ನು ನಿರ್ವಹಿಸಿದ ಮಾತ್ರಕ್ಕೆ ಅಲ್ಲಾಹನು ನಿಮ್ಮನ್ನು ಮೆಚ್ಚಿಬಿಡುವುದಿಲ್ಲ. ವಾಸ್ತವದಲ್ಲಿ ಒಂದು ಮಹೋನ್ನತ ಧ್ಯೇಯಕ್ಕಾಗಿ ನಿಮ್ಮನ್ನು ಸಿದ್ಧಗೊಳಿಸಲಿಕ್ಕಾಗಿ ಮತ್ತು ಒಂದು ಮಹತ್ಕಾರ್ಯದ ಸಾಧನೆಗಾಗಿ ನಿಮ್ಮನ್ನು ತರಬೇತಿಗೊಳಿಸುವ ಉಪಕ್ರಮವಾಗಿ ಇವುಗಳನ್ನು ನಿಮ್ಮ ಮೇಲೆ ಕಡ್ಡಾಯಗೊಳಿಸಲಾಗಿದೆ. ಈ ತಯಾರಿ ಮತ್ತು ತರಬೇತಿಯ ವಿಧಿ ವಿಧಾನಗಳನ್ನು ಈಗಾಗಲೇ ನಾನು ವಿವರವಾಗಿ ಚರ್ಚಿಸಿರುವುದರಿಂದ ಇದೀಗ ಈ ಸಿದ್ಧತೆಗಳನ್ನೆಲ್ಲಾ ಯಾವ ಉದ್ದೇಶಕ್ಕಾಗಿ ಮಾಡಲಾಗು ತ್ತಿದೆ ಎಂಬುದನ್ನು ತಿಳಿಸಬೇಕಾದ ಸಮಯ ಬಂದಿದೆ.

ಇಸ್ಲಾಮಿನ ನೈಜ ಉದ್ದೇಶ

ಬಹಳ ಸಂಕ್ಷಿಪ್ತವಾಗಿ ಹೇಳುವುದಾದರೆ, ಮಾನವನ ಮೇಲೆ ಮಾನವನ ಪ್ರಭುತ್ವವನ್ನು ಕೊನೆಗಾಣಿಸಿ ಅಲ್ಲಾಹನ ಪ್ರಭುತ್ವವನ್ನು ಸಂಸ್ಥಾಪಿಸಬೇಕೆಂಬುದೇ ಆ ಉದ್ದೇಶವಾಗಿದೆ. ಈ ಉದ್ದೇಶಕ್ಕಾಗಿ ತನುಮನಗಳನ್ನು ತೊಡಗಿಸಿ ಹೋರಾಡುವುದಕ್ಕೆ ಜಿಹಾದ್ ಎನ್ನುತ್ತಾರೆ. ನಮಾಝ್, ಉಪವಾಸ ವ್ರತ, ಝಕಾತ್ ಮತ್ತು ಹಜ್ಜ್‌ಗಳ ಗುರಿಯು ಈ ಕಾರ್ಯಕ್ಕಾಗಿ ಮಾನವರನ್ನು ಸಿದ್ಧಗೊಳಿಸುವುದೇ ಆಗಿದೆ. ಆದರೆ ಕಳೆದ ದೀರ್ಘ ಕಾಲದಿಂದ ನೀವು ಈ ಉದ್ದೇಶವನ್ನೇ ಮರೆತು ಬಿಟ್ಟಿರುವುದರಿಂದ ಮತ್ತು ಈ ಇಬಾದತ್‌ಗಳೆಲ್ಲವೂ ನಿಮ್ಮ ದೃಷ್ಟಿಯಲ್ಲಿ ಕೇವಲ ಆಧ್ಯಾತ್ಮಿಕ ಕಟ್ಟಳೆಗಳಾಗಿ ಬಿಟ್ಟಿರುವುದರಿಂದ ನನ್ನ ಪ್ರಸ್ತುತ ಸಂಕ್ಷಿಪ್ತ ಹೇಳಿಕೆಯು ನಿಮ್ಮ ಪಾಲಿಗೆ ಕೇವಲ ಒಂದು ಒಗಟಾಗಿ ಉಳಿಯಬಹುದು. ಆದುದರಿಂದ ನಾನಿಲ್ಲಿ ಈ ಉದ್ದೇಶವನ್ನು ತುಸು ವಿಸ್ತಾರವಾಗಿ ವಿವರಿಸುತ್ತಿದ್ದೇನೆ.

ಸರಕಾರದ ಭ್ರಷ್ಟತೆಯೇ ಎಲ್ಲ ಭ್ರಷ್ಟತೆಗಳ ಮೂಲ

ನೀವಿಂದು ಜಗತ್ತಿನಲ್ಲಿ ಕಾಣುತ್ತಿರುವ ಹೆಚ್ಚಿನೆಲ್ಲಾ ದೋಷಗಳಿಗೆ ಮೂಲತಃ ಸರಕಾರದ ದೋಷವೇ ಕಾರಣವಾಗಿದೆ. ಶಕ್ತಿ ಮತ್ತು ಸಂಪತ್ತು ಯಾವಾಗಲೂ ಸರಕಾರದ ಕೈಯಲ್ಲಿರುತ್ತದೆ. ಕಾನೂನುಗಳನ್ನು ಸರಕಾರವೇ ನಿರ್ಮಿಸುತ್ತದೆ. ಆಡಳಿತ ನಿರ್ವಹಣೆಗೆ ಸಂಬಂಧಿಸಿದ ಎಲ್ಲ ಅಧಿಕಾರಗಳು ಸರಕಾರದ ನಿಯಂತ್ರಣದಲ್ಲಿರುತ್ತವೆ. ಪೊಲೀಸ್ ಮತ್ತು ಸೇನೆಯ ಬಲ ಸರಕಾರದ ಮುಷ್ಟಿಯಲ್ಲಿರುತ್ತದೆ. ಆದ್ದರಿಂದ ಜನರ ನಡುವೆ ಹರಡುವ ಕೆಡುಕುಗಳೆಲ್ಲಾ ಒಂದೋ ಸರಕಾರವೇ ಹರಡಿದ ಕೆಡುಕುಗಳಾಗಿರುತ್ತವೆ, ಅದಲ್ಲವಾದರೆ ಸರಕಾರದ ಬೆಂಬಲ ದಿಂದ ಹರಡಲ್ಪಟ್ಟ ಕೆಡುಕುಗಳಾಗಿರುತ್ತವೆ. ಏಕೆಂದರೆ ಯಾವುದಾದರೂ ಕೆಡುಕನ್ನು ವ್ಯಾಪಕವಾಗಿ ಹರಡಲು ಬೇಕಾಗುವಂತಹ ಶಕ್ತಿಯು ಸರಕಾರದ ಬಳಿಯೇ ಇರುತ್ತದೆ. ಉದಾಹರಣೆಗೆ, ಬಹಿರಂಗವಾಗಿ ವ್ಯಭಿಚಾರ ನಡೆಯುತ್ತಿರುವುದನ್ನು ಮತ್ತು ಹಾಡುಹಗಲಲ್ಲೇ ವೇಶ್ಯಾ ಕೇಂದ್ರಗಳಲ್ಲಿ ಈ ವ್ಯವಹಾರವು ರಾಜಾರೋಷವಾಗಿ ನಡೆಯುತ್ತಿರುವುದನ್ನು ನೀವು ಕಾಣುತ್ತಿರುವಿರಿ. ಇದಕ್ಕೆ ಕಾರಣವೇನು? ಇದಕ್ಕಿರುವ ಒಂದೇ ಒಂದು ಕಾರಣವೇನೆಂದರೆ ಸರಕಾರೀ ಅಧಿಕಾರಗಳು ಯಾರ ಕೈಯಲ್ಲಿವೆಯೋ ಅವರ ದೃಷ್ಟಿಯಲ್ಲಿ ವ್ಯಭಿಚಾರವೆಂಬುದು ಒಂದು ಅಪರಾಧವೇ ಅಲ್ಲ. ಅವರು ಈ ಕುಕೃತ್ಯವನ್ನು ಸ್ವತಃ ತಾವೂ ಮಾಡುತ್ತಾರೆ ಮತ್ತು ಇತರರಿಗೂ ಮಾಡಲು ಬಿಡುತ್ತಾರೆ. ಅನ್ಯಥಾ, ಈ ಅನೈತಿಕತೆಯನ್ನು ನಿಲ್ಲಿಸಿ ಬಿಡಲು ಅವರು ಮನಸ್ಸು ಮಾಡಿದ್ದರೆ ಇದು ಇಷ್ಟು ರಾಜಾರೋಷವಾಗಿ ನಡೆಯಲು ಖಂಡಿತ ಸಾಧ್ಯವಿರಲಿಲ್ಲ. ಸಮಾಜದಲ್ಲಿ ಬಡ್ಡಿ ವ್ಯವಹಾರವು ಬಹಳ ವ್ಯಾಪಕವಾಗಿ ನಡೆಯುತ್ತಿದ್ದು ಶ್ರೀಮಂತರು ಬಡವರ ರಕ್ತ ಹೀರುತ್ತಿರುವುದನ್ನು ನೀವು ಕಾಣುತ್ತೀರಿ. ಇದು ಹೇಗೆ ಸಾಧ್ಯವಾಯಿತು? ನಿಜವಾಗಿ ಸ್ವತಃ ನಮ್ಮ ಸರಕಾರವೇ ಬಡ್ಡಿ ತಿನ್ನುತ್ತಿರುವುದು, ಬಡ್ಡಿ ತಿನ್ನುವವರಿಗೆ ನೆರವು ನೀಡುತ್ತಿರುವುದು, ಸರಕಾರದ ಸಂಸ್ಥೆಗಳು ಬಡ್ಡಿಕೋರರಿಗೆ ಮಾನ್ಯತೆ ನೀಡುತ್ತಿರುವುದು ಮತ್ತು ಅದರ ಶ್ರೀರಕ್ಷೆಯಲ್ಲೇ ದೊಡ್ಡ ಸಾಹುಕಾರರು ಮತ್ತು ಬ್ಯಾಂಕುಗಳು ತಮ್ಮ ವ್ಯವಹಾರ ನಡೆಸುತ್ತಿರುವುದೇ ಈ ಅವಸ್ಥೆಗೆ ಕಾರಣವಾಗಿದೆ.

ಸಮಾಜದಲ್ಲಿ ಅಶ್ಲೀಲತೆ ಮತ್ತು ಅನೈತಿಕತೆಗಳು ದಿನೇದಿನೇ ಹೆಚ್ಚುತ್ತಿರುವುದನ್ನು ನೀವು ಕಾಣುತ್ತಿರುವಿರಿ. ಸರಕಾರವು ಜನರ ಶಿಕ್ಷಣ ಮತ್ತು ತರಬೇತಿಗೆ ಒದಗಿಸಿರುವಂತಹ ವ್ಯವಸ್ಥೆಯ ಸ್ವರೂಪವೇ ಇದಕ್ಕೆ ಕಾರಣ. ಚಾರಿತ್ರ್ಯ ಮತ್ತು ನೈತಿಕತೆಯ ರಂಗದಲ್ಲಿ ಇಂದು ಕಾಣಿಸುತ್ತಿರುವಂತಹ ಮಾದರಿಗಳನ್ನೇ ಸರಕಾರ ಇಷ್ಟ ಪಡುತ್ತದೆ. ನೀವೀಗ ಜನರಿಗೆ ಬೇರೊಂದು ಬಗೆಯ ಶಿಕ್ಷಣ ಮತ್ತು ತರಬೇತಿ ನೀಡಿ ಇಂದಿನವರಿಗಿಂತ ಭಿನ್ನವಾದ ಚಾರಿತ್ರ್ಯದ ಜನರನ್ನು ತಯಾರಿಸ ಬಯಸಿದರೆ ಅದಕ್ಕೆ ಬೇಕಾದ ಸೌಲಭ್ಯಗಳನ್ನು ಎಲ್ಲಿಂದ ತರುವಿರಿ? ಇನ್ನು ನೀವು ಅಂತಹ ಕೆಲವು ಸಜ್ಜನರನ್ನು ನಿರ್ಮಾಣ ಮಾಡಿದರೂ ಅವರು ಸಲ್ಲುವುದೆಲ್ಲಿ? ಉದ್ಯೋಗ, ವೃತ್ತಿ ಮತ್ತಿತರ ಕ್ಷೇತ್ರಗಳೆಲ್ಲಾ ನೇರವಾಗಿ ಅಥವಾ ಪರೋಕ್ಷವಾಗಿ ಸರಕಾರದ ನಿಯಂತ್ರಣದಲ್ಲೇ ಇವೆ.

ನೀವಿಂದು ಜಗತ್ತಿನಲ್ಲಿ ವ್ಯಾಪಕ ರಕ್ತಪಾತವನ್ನು ಕಾಣುತ್ತಿದ್ದೀರಿ. ಮಾನವನ ಜ್ಞಾನವೆಲ್ಲಾ ಮಾನವನ ವಿನಾಶಕ್ಕಾಗಿಯೇ ವಿನಿಯೋಗಿಸಲ್ಪಡುತ್ತಿದೆ. ಮನುಷ್ಯನ ಪರಿಶ್ರಮದ ಫಲಗಳೆಲ್ಲಾ ಬೆಂಕಿಗಾಹುತಿಯಾಗುತ್ತಿವೆ. ಅಮೂಲ್ಯ ಮಾನವ ಜೀವಗಳನ್ನು ನಿರ್ದಯವಾಗಿ ಹರಣ ಮಾಡಲಾಗುತ್ತಿದೆ. ಇದಕ್ಕೆ ಕಾರಣವೇನೆಂದರೆ, ಮಾನವರ ಪೈಕಿ ಅತ್ಯಂತ ಕೀಳ್ಮಟ್ಟದ ದುಷ್ಟ ದುರಾತ್ಮರೇ ಜಗತ್ತಿನ ವಿವಿಧ ರಾಷ್ಟ್ರಗಳ ಆಡಳಿತ ಸೂತ್ರಗಳನ್ನು ಹಿಡಿದುಕೊಂಡಿದ್ದಾರೆ. ಶಕ್ತಿಯು ಇಂದು ಅವರ ಕೈಯಲ್ಲಿದೆ. ಆದ್ದರಿಂದ ಅವರು ನಡೆಸಿದ ದಿಕ್ಕಿನಲ್ಲೇ ಜಗತ್ತು ನಡೆಯುತ್ತಿದೆ. ಜೀವ, ಜ್ಞಾನ, ಸಂಪತ್ತು, ಪರಿಶ್ರಮ ಇವೆಲ್ಲಾ ಅವರು ವಿನಿಯೋಗಿಸ ಬಯಸುವಂತಹ ಸ್ಥಳಗಳಲ್ಲೇ ವಿನಿಯೋಗಿಸಲ್ಪಡುತ್ತಿವೆ.

ಲೋಕದಲ್ಲಿಂದು ಎಲ್ಲೆಡೆಯೂ ಅಕ್ರಮ, ಅನ್ಯಾಯಗಳು ನಡೆಯುತ್ತಿರುವುದನ್ನು ನೀವು ನೋಡುತ್ತೀರಿ. ದುರ್ಬಲರಿಗೆ ಎಲ್ಲೂ ನ್ಯಾಯ ದೊರೆಯುವುದಿಲ್ಲ. ಬಡವರ ಪಾಲಿಗೆ ಜೀವನವೇ ದುಸ್ತರವಾಗಿ ಬಿಟ್ಟಿದೆ. ನ್ಯಾಯಾಲಯಗಳು ಕೇವಲ ಹಣ ಚೆಲ್ಲುವವರಿಗೆ ನ್ಯಾಯ ಒದಗಿಸುವ ಅಂಗಡಿಗಳಾಗಿ ಬಿಟ್ಟಿವೆ. ಜನತೆಯಿಂದ ತೆರಿಗೆಯ ಹೆಸರಲ್ಲಿ ಅಪಾರ ಹಣ ದೋಚಿ ಅದನ್ನು ರಾಜಕಾರಣಿಗಳ ಭೋಗವಿಲಾಸಕ್ಕೆ, ಅಧಿಕಾರಿಗಳ ದುಬಾರಿ ವೇತನಗಳಿಗೆ, ಭವ್ಯ ಕಟ್ಟಡಗಳ ನಿರ್ಮಾಣಕ್ಕೆ, ಶಸ್ತ್ರಾಸ್ತ್ರ ಖರೀದಿಗೆ ಮತ್ತು ಇಂತಹದೇ ಇತರ ಕಾರ್ಯಗಳಿಗೆ ವಿನಿಯೋಗಿಸಿ ಪೋಲುಗೊಳಿಸಲಾಗುತ್ತಿದೆ. ಸಾಹುಕಾರರು, ಜಮೀನ್ದಾರರು, ಶ್ರೀಮಂತರು, ಪುಡಾರಿಗಳು, ಪೀಠಾಧಿಪತಿಗಳು, ಧರ್ಮಾಧಿಕಾರಿಗಳು, ಸಿನಿಮಾ ಮಂದಿರಗಳ ಮಾಲಕರು, ಮದ್ಯ ವ್ಯಾಪಾರಿಗಳು, ಅಶ್ಲೀಲ ಪುಸ್ತಕ, ಪತ್ರಿಕೆ ಇತ್ಯಾದಿಗಳ ಪ್ರಕಾಶಕರು, ಜೂಜು ಕೇಂದ್ರ ಗಳನ್ನು ನಡೆಸುವವರು ಮತ್ತು ಇಂತಹ ಇತರ ಅನೇಕರು ಜನಸಾಮಾನ್ಯರ ಜೀವ, ಸೊತ್ತು, ಗೌರವ, ಚಾರಿತ್ರ್ಯ ಎಲ್ಲವನ್ನೂ ಸೂರೆಗೈಯುತ್ತಿದ್ದಾರೆ. ಇವರನ್ನೆಲ್ಲಾ ತಡೆಯುವವರು ಯಾರೂ ಇಲ್ಲವಾಗಿದ್ದಾರೆ. ಇದಕ್ಕೆಲ್ಲಾ ಕಾರಣ ಒಂದೇ- ಸರಕಾರ ಸಂಪೂರ್ಣ ಭ್ರಷ್ಟವಾಗಿ ಬಿಟ್ಟಿದೆ. ಯಾರ ಕೈಯಲ್ಲಿ ಅಧಿಕಾರ ಸೂತ್ರಗಳಿವೆಯೋ ಅವರು ಕೆಟ್ಟವರಾಗಿ ಬಿಟ್ಟಿದ್ದಾರೆ. ಅವರು ಸ್ವತಃ ತಾವೂ ಅಕ್ರಮ ಮಾಡುತ್ತಾರೆ ಇತರ ಅಕ್ರಮಿಗಳಿಗೆ ಬೆಂಬಲವನ್ನೂ ನೀಡುತ್ತಾರೆ. ಇಲ್ಲಿ ನಡೆಯುತ್ತಿರುವ ಅನ್ಯಾಯಗಳೆಲ್ಲಾ ಒಂದೋ ಈ ಆಡಳಿತಾರೂಢರು ಸ್ವತಃ ಇವುಗಳನ್ನು ಬಯಸುವುದರಿಂದಾಗಿ, ಅದಲ್ಲವಾದರೆ ಅವರು ಇವುಗಳನ್ನು ತಣ್ಣಗೆ ಸಹಿಸಿಕೊಳ್ಳುತ್ತಿರುವುದರಿಂದಾಗಿ ಮಾತ್ರ ನಡೆಯುತ್ತಿವೆ.

ಈ ಉದಾಹರಣೆಗಳಿಂದ ಒಂದು ವಿಷಯವು ಈಗಾಗಲೇ ನಿಮಗೆ ಮನವರಿಕೆ ಆಗಿರಬಹುದು. ಅದೇನೆಂದರೆ ಸರಕಾರದ ಭ್ರಷ್ಟತೆಯೇ ಎಲ್ಲ ಭ್ರಷ್ಟತೆಗಳ ಮೂಲವಾಗಿದೆ. ಜನರ ವಿಚಾರಗಳು ಮಲಿನವಾಗುವುದು, ಚಾರಿತ್ರ್ಯ ಕೆಟ್ಟು ಹೋಗುವುದು, ಮಾನವರ ಸಾಮರ್ಥ್ಯ ಮತ್ತು ಪ್ರತಿಭೆಗಳೆಲ್ಲಾ ತಪ್ಪು ಹಾದಿಗಳಲ್ಲಿ ದುರ್ಬಳಕೆಯಾಗುತ್ತಿರುವುದು, ವ್ಯಾಪಾರ ವ್ಯವಹಾರಗಳ ದುಷ್ಟ ವಿಧಾನಗಳು ಚಲಾವಣೆಗೆ ಬರುವುದು, ತೀರಾ ಕೆಟ್ಟ ಜೀವನ ಕ್ರಮಗಳು ಜನಪ್ರಿಯವಾಗಿ ಬಿಡುವುದು, ಅನ್ಯಾಯ ಅಕ್ರಮ ಮತ್ತು ದುಷ್ಕೃತ್ಯಗಳು ವ್ಯಾಪಕವಾಗಿ ಹರಡುವುದು;

ಮಾನವ ಸಮಾಜ ನಾಶವಾಗುವುದು ಇವೆಲ್ಲಾ ಸಮಾಜದ ಆಡಳಿತ ಸೂತ್ರವು ದುಷ್ಟರ ಕೈಗಳಲ್ಲಿ ಇರುವುದರ ಫಲಿತಾಂಶಗಳಾಗಿವೆ. ಆಡಳಿತದ ಚುಕ್ಕಾಣಿಯು ದುಷ್ಟರ ಮುಷ್ಟಿಯಲ್ಲಿ ಕೈದಿಯಾದಾಗ ಮತ್ತು ಜನಸಾಮಾನ್ಯರ ಜೀವನಾಧಾರಗಳೆಲ್ಲಾ ಇಂತಹವರ ನಿಯಂತ್ರಣದಲ್ಲಿದ್ದಾಗ ಅವರು ಕೆಡುಕನ್ನೇ ಹಬ್ಬಿಸುವರು ಮತ್ತು ಸಮಾಜದಲ್ಲಿ ಹರಡುವ ಎಲ್ಲ ಬಗೆಯ ಕೆಡುಕುಗಳಿಗೆ ಈ ವರ್ಗದವರ ಕುಮ್ಮಕ್ಕೇ ಕಾರಣವಾಗಿರುವುದು ಎಂಬುದು ವ್ಯಕ್ತ. ಆದ್ದರಿಂದಲೇ ಸಮಾಜದ ಆಡಳಿತಾಧಿಕಾರಿಗಳು ಇಂತಹವರ ಕಪಿಮುಷ್ಟಿಯಲ್ಲಿರುವ ತನಕ ಯಾವ ರಂಗದಲ್ಲೂ ಸುಧಾರಣೆಯಾಗಲು ಸಾಧ್ಯವೇ ಇಲ್ಲ.

ಆಡಳಿತ ಸುಧಾರಣೆಗಾಗಿ ಅನಿವಾರ್ಯ ಹೆಜ್ಜೆಗಳು

ಇದಿಷ್ಟು ನಿಮಗೆ ಮನವರಿಕೆಯಾದ ಬಳಿಕ, ಸರಕಾರದಲ್ಲಿರುವ ದೋಷವನ್ನು ನಿವಾರಿಸದೆ ಜನತೆಯನ್ನು ಸುಧಾರಿಸಲು ಮತ್ತು ಅವರನ್ನು ವಿನಾಶದ ಹಾದಿಯಿಂದ ರಕ್ಷಿಸಿ ಕಲ್ಯಾಣ ಮತ್ತು ಸಾರ್ಥಕತೆಯ ಹಾದಿಯಲ್ಲಿ ತೊಡಗಿಸಲು ಸಾಧ್ಯವಿಲ್ಲ ಎಂಬುದು ನಿಮಗೆ ಸುಲಭವಾಗಿ ಅರ್ಥವಾಗುವುದು. ಯಾವ ಸಮಾಜದಲ್ಲಿ ವ್ಯಭಿಚಾರ ಮಾಡಲು ಅವಕಾಶ ಮತ್ತು ಸ್ವಾತಂತ್ರ್ಯ ಇರುತ್ತದೋ ಅಲ್ಲಿ ವ್ಯಭಿಚಾರದ ವಿರುದ್ಧ ಜನರಿಗೆ ಎಷ್ಟೇ ಉಪದೇಶಗಳನ್ನು ನೀಡಿದರೂ ವ್ಯಭಿಚಾರವನ್ನು ಪೂರ್ಣವಾಗಿ ನಿಲ್ಲಿಸಿ ಬಿಡಲು ಸಾಧ್ಯವಿಲ್ಲವೆಂಬುದು ಸಾಮಾನ್ಯ ಬುದ್ಧಿಯುಳ್ಳವನಿಗೂ ಅರ್ಥವಾಗುತ್ತದೆ. ಆದರೆ ಸರಕಾರಕ್ಕಿರುವಂತಹ ಆಡಳಿತಾಧಿಕಾರವನ್ನು ಉಪಯೋಗಿಸಿಕೊಂಡು ಬಲಾತ್ಕಾರವಾಗಿ ವ್ಯಭಿಚಾರಕ್ಕೆ ತಡೆ ಹಾಕಿಬಿಟ್ಟರೆ ಜನರು ತಾವಾಗಿಯೇ ಧರ್ಮಬಾಹಿರ ಮಾರ್ಗವನ್ನು ಕೈಬಿಟ್ಟು ಧರ್ಮಬದ್ಧವಾದ ದಾರಿ ಹಿಡಿಯುತ್ತಾರೆ. ಹಾಗೆಯೇ ಶರಾಬು, ಜೂಜು, ಲಂಚ, ಅಶ್ಲೀಲ ಕಾರ್ಯಕ್ರಮಗಳು, ನಿರ್ಲಜ್ಜ ವಸ್ತ್ರಧಾರಣೆ, ಚಾರಿತ್ರ್ಯ ನಾಶ ಮಾಡುವ ಶಿಕ್ಷಣ ವ್ಯವಸ್ಥೆ ಮುಂತಾದ ಅನಿಷ್ಟಗಳನ್ನೆಲ್ಲಾ ಕೇವಲ ಬೋಧನೆಗಳ ಮೂಲಕ ನಿರ್ಮೂಲನ ಮಾಡಬಯಸಿದರೆ ನೀವು ಖಂಡಿತ ಯಶಸ್ವಿಯಾಗಲಾರಿರಿ. ಆದರೆ ಅಧಿಕಾರದ ಬಲದಿಂದ ಈ ಅನಿಷ್ಟಗಳನ್ನು ತೊಡೆದು ಹಾಕಲು ಖಂಡಿತ ಸಾಧ್ಯವಿದೆ. ಜನತೆಯನ್ನು ದೋಚುತ್ತಿರುವ ಮತ್ತು ಅವರ ಚಾರಿತ್ರ್ಯವನ್ನು ನಾಶ ಮಾಡುತ್ತಿರುವ ಜನರೆಲ್ಲಾ ಕೇವಲ ನಿಮ್ಮ ಬೋಧನೆ ಮತ್ತು ಉಪನ್ಯಾಸಗಳಿಂದ ಪ್ರಭಾವಿತರಾಗಿ ತಮ್ಮ ಪ್ರಸ್ತುತ 'ಲಾಭದಾಯಕ' ಚಟುವಟಿಕೆಗಳಿಗೆ ವಿದಾಯ ಹೇಳುವರೆಂದು ನಿರೀಕ್ಷಿಸುವುದು ಖಂಡಿತ ವ್ಯರ್ಥ. ಇಂತಹವರ ಸಮಾಜದಲ್ಲಿ ಅಧಿಕಾರವನ್ನು ಕೈಗೆ ತೆಗೆದುಕೊಂಡು ಇವರ ಕಿಡಿಗೇಡಿ ಚಟುವಟಿಕೆಗಳನ್ನು ಬಲ ಪ್ರಯೋಗಿಸಿ ಕೊನೆಗಾಣಿಸಿದಾಗ ಮಾತ್ರ ಈ ಕೆಡುಕುಗಳು ನಿರ್ಮೂಲನವಾಗಲು ಸಾಧ್ಯ.

ಜನತೆಯ ಶ್ರಮ, ಸಂಪತ್ತು, ಬುದ್ಧಿ ಮತ್ತು ಪ್ರತಿಭೆಗಳು ಕೆಟ್ಟ ಹಾದಿಗಳಲ್ಲಿ ಪೋಲಾಗದೆ ಸರಿಯಾದ ಹಾದಿಯಲ್ಲಿ ಬಳಸಲ್ಪಡಬೇಕು, ಅನ್ಯಾಯ ಅಳಿದು ನ್ಯಾಯ ಮೆರೆಯಬೇಕು, ಭೂಮಿಯಲ್ಲಿ ಅಶಾಂತಿ-ಪ್ರಕ್ಷೋಭೆಗಳು ಇರಬಾರದು, ಮನುಷ್ಯನು ಮನುಷ್ಯನ ರಕ್ತ ಹೀರಬಾರದು, ಯಾರೂ ಯಾರದೇ ರಕ್ತ ಹರಿಸಬಾರದು, ತುಳಿಯಲ್ಪಟ್ಟ ಮತ್ತು ಮರ್ದಿತ

ಜನವರ್ಗಗಳು ಮೇಲೆತ್ತಲ್ಪಡಬೇಕು, ಸಕಲ ಮಾನವರಿಗೂ ಸಮಾನ ಗೌರವ, ಶಾಂತಿ, ಭದ್ರತೆ, ಸಂಪನ್ನತೆ ಮತ್ತು ಪ್ರಗತಿಯ ಅವಕಾಶಗಳು ದೊರೆಯಬೇಕು ಎಂದೆಲ್ಲಾ ನೀವು ಅಪೇಕ್ಷಿಸುತ್ತಿದ್ದೀರಿ ಎಂದಾದರೆ ಕೇವಲ ಉಪದೇಶಗಳಿಂದ ನಿಮ್ಮ ಈ ಅಪೇಕ್ಷೆಗಳು ಈಡೇರಲಾರವು. ಸರಕಾರದ ಶಕ್ತಿ ನಿಮ್ಮ ಕೈಯಲ್ಲಿದ್ದಾಗ ಮಾತ್ರ ನೀವು ಈ ಎಲ್ಲ ಕಾರ್ಯಗಳನ್ನು ಸಾಧಿಸಬಲ್ಲಿರಿ.

ಒಟ್ಟಿನಲ್ಲಿ, ಕೈಯಲ್ಲಿ ಅಧಿಕಾರವಿಲ್ಲದಿದ್ದರೆ ಸಮಾಜದ ಸುಧಾರಣೆಯ ಯಾವ ಯೋಜನೆಯೂ ಯಶಸ್ವಿಯಾಗಲಾರದು ಎಂಬುದು ಹೆಚ್ಚು ಚಿಂತನೆ ಮಾಡದೆಯೇ ಅರ್ಥವಾಗಿ ಬಿಡುವಂತಹ ಒಂದು ಸುವ್ಯಕ್ತವಾದ ಸರಳ ವಾಸ್ತವಿಕತೆಯಾಗಿದೆ. ಅಲ್ಲಾಹನ ಈ ಭೂಮಿ ಕೆಡುಕುಗಳಿಂದ ಮುಕ್ತವಾಗಬೇಕು ಮತ್ತು ಮಾನವರ ಸುಧಾರಣೆ ಆಗಬೇಕು ಎಂದು ಬಯಸುವಾತನು ಕೇವಲ ಉಪದೇಶಕನಾಗುವುದು ವ್ಯರ್ಥ. ಅವನು ಮುಂದೆ ಬಂದು ತಪ್ಪು ಬುನಾದಿಗಳಲ್ಲಿ ಕಟ್ಟಲ್ಪಟ್ಟಿರುವಂತಹ ಆಡಳಿತ ವ್ಯವಸ್ಥೆಯನ್ನು ಕೊನೆಗಾಣಿಸಿ, ದುಷ್ಟರ ಕೈಗಳಿಂದ ಅಧಿಕಾರವನ್ನು ಕಿತ್ತುಕೊಂಡು ಸರಿಯಾದ ತತ್ವಾದರ್ಶಗಳ ಆಧಾರದಲ್ಲಿ ಸರಿಯಾದ ವಿಧಾನದಿಂದ ನಡೆಯುವ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸಬೇಕು.

ಆಡಳಿತದ ಭ್ರಷ್ಟತೆಗೆ ಮಾನವನ ಮೇಲೆ ಮಾನವನ ಆಳ್ವಿಕೆಯೇ ಕಾರಣ

ಇಷ್ಟನ್ನು ಮನನ ಮಾಡಿಕೊಂಡ ಬಳಿಕ ಇದೀಗ ನಾವು ಇನ್ನೊಂದು ಹೆಜ್ಜೆ ಮುಂದೆ ಹೋಗೋಣ. ಜನತೆಯ ಜೀವನಗಳಲ್ಲಿ ಹರಡುವಂತಹ ಕೆಡುಕುಗಳಿಗೆ ಆಡಳಿತ ವ್ಯವಸ್ಥೆಯ ದೋಷವೇ ಮೂಲ ಕಾರಣವಾಗಿದ್ದು ಜನತೆಯನ್ನು ಸುಧಾರಿಸಬೇಕಿದ್ದರೆ ಈ ಮೂಲದೋಷವನ್ನೇ ನಿವಾರಿಸಬೇಕಾದುದು ಅನಿವಾರ್ಯ ಎಂಬುದನ್ನು ಈಗಾಗಲೇ ನೀವು ತಿಳಿದುಕೊಂಡಿರಿ. ಇಲ್ಲೀಗ, ಈ ಆಡಳಿತ ವ್ಯವಸ್ಥೆ ಕೆಟ್ಟು ಹೋಗಲು ಪ್ರಮುಖ ಕಾರಣವೇನು? ಈ ದೋಷದ ಬೇರು ಎಲ್ಲಿದೆ? ಮೇಲೆ ಪ್ರಸ್ತಾಪಿಸಿದಂತಹ ಕೆಡುಕುಗಳು ಹುಟ್ಟದಂತೆ ತಡೆಯಲು ಮಾಡ ಬೇಕಾದ ಮೂಲಭೂತ ಸುಧಾರಣೆ ಯಾವುದು? ಎಂಬ ಪ್ರಶ್ನೆಗಳು ತಲೆಯೆತ್ತುತ್ತವೆ.

ಈ ಪ್ರಶ್ನೆಗಳಿಗೆ ಉತ್ತರವೇನೆಂದರೆ ಮನುಷ್ಯನ ಆಡಳಿತವೇ ಎಲ್ಲ ಕೆಡುಕುಗಳ ಮೂಲವಾಗಿದ್ದು, ಮನುಷ್ಯನ ಮೇಲೆ ಅಲ್ಲಾಹನ ಆಡಳಿತ ನಡೆಯುವಂತೆ ಮಾಡುವುದೇ ಸುಧಾರಣೆಯ ಏಕೈಕ ಮಾರ್ಗವಾಗಿದೆ. ಅಷ್ಟು ದೊಡ್ಡ ಪ್ರಶ್ನೆಗೆ ಇಷ್ಟು ಸಂಕ್ಷಿಪ್ತವಾದ ಉತ್ತರ ಕೇಳಿ ನೀವು ಆಶ್ಚರ್ಯ ಪಡಬೇಕಾಗಿಲ್ಲ. ನೀವು ಈ ಪ್ರಶ್ನೆಗಳ ಬಗ್ಗೆ ಎಷ್ಟು ಚಿಂತನೆ ಮಾಡಿದರೂ ಎಷ್ಟು ಸಂಶೋಧನೆಗಳನ್ನು ನಡೆಸಿದರೂ ಅಂತಿಮವಾಗಿ ನಿಮಗೆ ಈ ಉತ್ತರವೇ ಸಿಗಲಿದೆ.

ಸ್ವಲ್ಪ ಚಿಂತಿಸಿ ನೋಡಿ, ನೀವು ವಾಸಿಸುತ್ತಿರುವ ಈ ಭೂಮಿಯನ್ನು ನಿರ್ಮಿಸಿದ್ದು ಅಲ್ಲಾಹನೋ ಇತರರೋ? ಭೂಮಿಯಲ್ಲಿರುವ ಈ ಮಾನವರನ್ನು ಸೃಷ್ಟಿಸಿದ್ದು ಅಲ್ಲಾಹನೋ ಇತರರೋ? ಈ ಮಾನವರೆಲ್ಲಾ ಯಾವ ಜೀವನಾಧಾರಗಳನ್ನು ಬಳಸುತ್ತಾ ಜೀವಿಸುತ್ತಿರುವರೋ ಅವುಗಳನ್ನು ಒದಗಿಸಿದ್ದು ಅಲ್ಲಾಹನೋ ಅಥವಾ ಇತರರೋ? ಭೂಮಿಯನ್ನು, ಮಾನವರನ್ನು ಮತ್ತು ಈ ಎಲ್ಲ ಜೀವನಾವಶ್ಯಕ ಸೌಲಭ್ಯಗಳನ್ನು ಅಲ್ಲಾಹನೇ ಸೃಷ್ಟಿಸಿದನೆಂಬುದೇ ಈ ಎಲ್ಲ

ಪ್ರಶ್ನೆಗಳಿಗಿರುವ ಉತ್ತರವೆಂದಾದರೆ, ಸಾಮ್ರಾಜ್ಯವೂ ಅಲ್ಲಾಹನದು, ಖಜಾನೆಯೂ ಅಲ್ಲಾಹನದು ಮತ್ತು ಪ್ರಜೆಗಳೂ ಅಲ್ಲಾಹನ ಪ್ರಜೆಗಳು ಎಂದಾಯಿತು. ಹೀಗಿರುತ್ತಾ ಈ ದೇವ ನಿರ್ಮಿತ ಜಗತ್ತಿನಲ್ಲಿ ತನ್ನ ಅಧಿಕಾರ ನಡೆಸಲು ಅವನ ಹೊರತು ಇತರ ಯಾರಾದರೂ ಹಕ್ಕುದಾರರಾಗಲು ಹೇಗೆ ಸಾಧ್ಯ? ಅಲ್ಲಾಹನ ಭೂಮಿಯಲ್ಲಿ, ಅವನ ಪ್ರಜೆಗಳು ತಮ್ಮ ಸ್ವಂತ ಕಾನೂನುಗಳನ್ನು ಜಾರಿಗೊಳಿಸಿದರೆ ಅದು ಹೇಗೆ ತಾನೇ ಸಮಂಜಸವೆನಿಸೀತು? ಒಬ್ಬನ ದೇಶದಲ್ಲಿ ಇನ್ನೊಬ್ಬನು ರಾಜ್ಯಭಾರ ನಡೆಸುವುದು, ಒಬ್ಬನ ಸೊತ್ತಿಗೆ ಇನ್ನೊಬ್ಬನು ಮಾಲಕನಾಗಿ ಬಿಡುವುದು, ಯಾರದೋ ಪ್ರಜೆಗಳ ಮೇಲೆ ಯಾರೋ ಪ್ರಭುತ್ವ ನಡೆಸುವುದು- ಇದನ್ನು ನಿಮ್ಮ ವಿವೇಕವು ಹೇಗೆ ತಾನೇ ಸ್ವೀಕರಿಸಿಕೊಳ್ಳಬಲ್ಲುದು? ಹೀಗೆಲ್ಲಾ ಆಗುವುದು ಸತ್ಯ ಮತ್ತು ನ್ಯಾಯಕ್ಕೆ ವಿರುದ್ಧವಾಗಿದೆ. ಆದ್ದರಿಂದ ಹೀಗಾದಾಗಲೆಲ್ಲಾ ಅದರಿಂದ ಕೆಟ್ಟ ಫಲಿತಾಂಶಗಳೇ ಹೊರಡುತ್ತವೆ. ಕಾನೂನು ನಿರ್ಮಿಸುವ ಮತ್ತು ಆಡಳಿತ ನಡೆಸುವ ಅಧಿಕಾರ ಮನುಷ್ಯರ ಕೈಗೆ ಬರುತ್ತಲೇ ಅವರು ಅನಿವಾರ್ಯವಾಗಿ ತಮ್ಮ ಅಜ್ಞಾನದಿಂದ ಅನೇಕ ತಪ್ಪುಗಳನ್ನು ಮಾಡುತ್ತಾರೆ. ಇದು ಸಾಲದೆಂಬಂತೆ, ತಮ್ಮ ಸ್ವೇಚ್ಛೆಯನ್ನನುಸರಿಸುತ್ತಾ ಉದ್ದೇಶಪೂರ್ವಕವಾಗಿಯೂ ಅನೇಕ ಅಕ್ರಮ, ಅನ್ಯಾಯಗಳನ್ನು ಮಾಡಲಾರಂಭಿಸುತ್ತಾರೆ. ಏಕೆಂದರೆ ಮೊದಲನೆಯದಾಗಿ ಅವರ ಬಳಿ, ಜನರ ವ್ಯವಹಾರಗಳನ್ನೆಲ್ಲಾ ನಡೆಸಲು ಬೇಕಾದ ಸರಿಯಾದ ಕಾನೂನು, ನಿಯಮಗಳನ್ನು ರಚಿಸುವಷ್ಟು ಸಮಗ್ರ ಜ್ಞಾನ ಇರುವುದಿಲ್ಲ. ಇದಕ್ಕಿಂತಲೂ ಅಪಾಯಕಾರಿಯಾದ ಎರಡನೆಯ ಅಂಶವೇನೆಂದರೆ, ಅವರಲ್ಲಿ ದೇವ ಭಯವಾಗಲಿ, ಅವನೆದುರು ತಾವು ವಿಚಾರಣೆಗೆ ಒಳಗಾಗಲಿರುವವರು ಎಂಬ ಪ್ರಜ್ಞೆಯಾಗಲಿ ಇಲ್ಲದಿರುವುದರಿಂದ ಸ್ವಾಭಾವಿಕವಾಗಿಯೇ ಅವರು ನಿಯಂತ್ರಣ ತಪ್ಪಿದ ಮದ್ದಾನೆಯಂತಾಗುತ್ತಾರೆ. ದೇವಭಯವಾಗಲಿ, ಅವನ ವಿಚಾರಣೆಯ ಬಗೆಗಿನ ಪ್ರಜ್ಞೆಯಾಗಲಿ ಇಲ್ಲದ ಮತ್ತು ತನ್ನನ್ನು ಕೇಳುವವರಾರೂ ಇಲ್ಲವೆಂದು ಭಾವಿಸುವ ಮನುಷ್ಯನು ಈ ರೀತಿ ನಿರಂಕುಶನಾಗದೆ ಇರಲು ಸಾಧ್ಯವೇ ಇಲ್ಲ ಎಂಬುದು ಸುಲಭದಲ್ಲಿ ಅರ್ಥವಾಗುವ ವಿಷಯವಾಗಿದೆ. ಜನರ ಜೀವನಾಧಾರದ ಸೂತ್ರಗಳೆಲ್ಲಾ ಇಂತಹ ಒಬ್ಬ ವ್ಯಕ್ತಿಯ ಮುಷ್ಟಿಯೊಳಗಿರುವಾಗ, ಜನರ ಪ್ರಾಣ, ಸಂಪತ್ತುಗಳಿಗೆಲ್ಲಾ ಅವನೇ ನಿಯಂತ್ರಕನಾದಾಗ ಮತ್ತು ಸಹಸ್ರಾರು ಮಂದಿಯ ಶಿರಗಳು ಅವನ ಮುಂದೆ ಬಾಗುತ್ತಿರುವಾಗ, ಅಂತಹವನು ಸತ್ಯ ಮತ್ತು ನ್ಯಾಯದಲ್ಲೇ ಸ್ಥಿರವಾಗಿ ನಿಲ್ಲಬಲ್ಲನೇ? ಇಂಥವನು ನಿಜಕ್ಕೂ ಸಾರ್ವಜನಿಕ ಸೊತ್ತಿನ ಸಂರಕ್ಷಣೆ ಮಾಡಬಲ್ಲನೇ? ಅವನು ಜನರ ಹಕ್ಕುಗಳಿಗೆ ಧಕ್ಕೆ ಮಾಡದೆ, ಧರ್ಮ ಬಾಹಿರವಾಗಿ ಸಂಪತ್ತನ್ನು ಕಬಳಿಸದೆ, ಜನರನ್ನು ತನ್ನ ಸ್ವೇಚ್ಛೆಗಳ ಗುಲಾಮರಾಗಿ ಮಾಡದೆ ಇರಬಲ್ಲನೇ? ಇಂತಹ ಒಬ್ಬ ವ್ಯಕ್ತಿ ಸ್ವತಃ ತಾನೂ ಸನ್ಮಾರ್ಗದಲ್ಲಿ ನಡೆಯಬಲ್ಲನು ಮತ್ತು ಇತರರನ್ನೂ ಸರಿಯಾದ ದಾರಿಯಲ್ಲಿ ನಡೆಸಬಲ್ಲನೆಂದು ನೀವು ನಿರೀಕ್ಷಿಸುವಿರಾ? ಇದೆಲ್ಲಾ ಖಂಡಿತ ಸಾಧ್ಯವಿಲ್ಲದ ವಿಷಯಗಳು, ಹೀಗಾಗಲು ಸಾಧ್ಯವಿಲ್ಲವೆಂದು ಮನುಷ್ಯ ಸಮಾಜದ ಸಹಸ್ರಾರು ವರ್ಷಗಳ ಇತಿಹಾಸವೇ ಸಾಕ್ಷಿ ನುಡಿಯುತ್ತಿದೆ. ದೇವಭಯವಾಗಲಿ ಪರಲೋಕದ ವಿಚಾರಣೆಯ ಪ್ರಜ್ಞೆಯಾಗಲಿ ಇಲ್ಲದ ಜನರು ಅಧಿಕಾರ ಪಡೆದಾಗ ಅವರು ಎಂತಹ

ಅಕ್ರಮಿಗಳಾಗಿ, ವಂಚಕರಾಗಿ ಮತ್ತು ದುರ್ಮಾರ್ಗಗಾಮಿಗಳಾಗಿ ಮಾರ್ಪಡುತ್ತಾರೆ ಎಂಬುದನ್ನು ನೀವೇ ಇಂದು ಈ ಜಗತ್ತಿನಲ್ಲಿ ಕಣ್ಣಾರೆ ಕಾಣುತ್ತಿರುವಿರಿ.

ಸುಧಾರಣೆಯ ತಳಹದಿ- ಮಾನವನ ಮೇಲೆ ದೇವನ ಆಡಳಿತದ ಸ್ಥಾಪನೆ

ಆದ್ದರಿಂದ ಆಡಳಿತ ವ್ಯವಸ್ಥೆಯ ತಳಹದಿಯಲ್ಲೇ ಒಂದು ದೊಡ್ಡ ಸುಧಾರಣೆ ಆಗ ಬೇಕಾಗಿದೆ. ಅದೇನೆಂದರೆ, ಮಾನವನ ಮೇಲೆ ಮಾನವನ ಆಡಳಿತ ಕೊನೆಗೊಂಡು ದೇವನ ಆಡಳಿತ ಸ್ಥಾಪನೆಯಾಗಬೇಕು. ಈ ಆಡಳಿತವನ್ನು ನಡೆಸುವವರು ತಾವೇ ನಾಡಿನ ಒಡೆಯರೆನಿಸಿಕೊಳ್ಳುವ ಬದಲು ಅಲ್ಲಾಹನೇ ನೈಜ ಆಡಳಿತಗಾರನೆಂಬುದನ್ನು ಅಂಗೀಕರಿಸಿ ತಾವು ಆತನ ಅಧೀನರು ಹಾಗೂ ಪ್ರತಿನಿಧಿಗಳೆಂಬ ನೆಲೆಯಲ್ಲಿ ಕಾರ್ಯ ನಿರ್ವಹಿಸಬೇಕು. ಕೊನೆಗೊಮ್ಮೆ ತಾವು, ಗುಪ್ತ ಹಾಗೂ ವ್ಯಕ್ತವಾದ ಸಕಲ ವಿಷಯಗಳನ್ನೂ ಬಲ್ಲ ಆ ನೈಜ ಸಾಮ್ರಾಟನ ಮುಂದೆ ತಮ್ಮ ಆಡಳಿತದ ಬಗ್ಗೆ ಲೆಕ್ಕ ಒಪ್ಪಿಸಲಿಕ್ಕಿದೆ ಎಂಬ ಅರಿವಿನೊಂದಿಗೆ ಅವರು ತಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕು. ಅವರ ಸರಕಾರದ ಕಾನೂನು ನಿಯಮಗಳೆಲ್ಲಾ, ಸಕಲ ವಾಸ್ತವಿಕತೆಗಳ ಜ್ಞಾನ ಹೊಂದಿರುವ ಮತ್ತು ಜಾಣ್ಮೆಯ ಮೂಲ ಭಂಡಾರವಾಗಿರುವ ಅಲ್ಲಾಹನು ನೀಡಿದ ಮಾರ್ಗದರ್ಶನದಲ್ಲಿ ಅಧಿಷ್ಠಿತವಾಗಿರಬೇಕು. ಈ ಕಾನೂನುಗಳು ಮಾನವರ ಅಜ್ಞಾನ, ಸ್ವಾರ್ಥ, ಸಂಕುಚಿತತೆ ಅಥವಾ ದುರಾಗ್ರಹಗಳ ಹಸ್ತಕ್ಷೇಪದಿಂದ ವಿಕೃತವಾಗಿ ಬಿಡುವ ಸಾಧ್ಯತೆ ಇರಬಾರದು. ಆದ್ದರಿಂದ ಅವುಗಳನ್ನು ಪರಿವರ್ತಿಸುವ ಅಥವಾ ತಿದ್ದುವ ಅಧಿಕಾರ ಯಾರಿಗೂ ಇರಬಾರದು.

ಇದುವೇ ಇಸ್ಲಾಮ್ ಧರ್ಮವು ಮಾಡಬಯಸುವ ಮೂಲಭೂತ ಸುಧಾರಣೆ. ಅಲ್ಲಾಹನನ್ನು ತಮ್ಮ ಪ್ರಭುವೆಂದು (ಕೇವಲ ಕಾಲ್ಪನಿಕ ಪ್ರಭುವಲ್ಲ, ವಾಸ್ತವಿಕ ಪ್ರಭುವೆಂದು) ಅಂಗೀಕರಿಸಿ, ಅವನು ತನ್ನ ಸಂದೇಶವಾಹಕರ ಮೂಲಕ ಕಳುಹಿಸಿರುವ ಕಾನೂನಿನ ಮೇಲೆ ವಿಶ್ವಾಸವಿರಿಸುವ ಜನರು ಆ ತಮ್ಮ ಪ್ರಭುವಿನ ಸಾಮ್ರಾಜ್ಯದಲ್ಲಿ ಆತನ ಕಾನೂನನ್ನು ಜಾರಿಗೊಳಿಸಲು ಕಂಕಣ ಬದ್ಧರಾಗಬೇಕು, ಅವನ ಪ್ರಜೆಗಳ ಪೈಕಿ ವಿದ್ರೋಹಿಗಳಾಗಿ ಬಿಟ್ಟಿರುವ ಮತ್ತು ತಾವೇ ಪ್ರಭುಗಳೆಂದು ಮೆರೆಯುತ್ತಿರುವ ಜನರ ಪ್ರಾಬಲ್ಯವನ್ನು ಮುರಿಯಬೇಕು ಮತ್ತು ಅಲ್ಲಾಹನ ದಾಸರನ್ನು ಅನ್ಯರ ದಾಸ್ಯದಿಂದ ಮುಕ್ತಗೊಳಿಸಬೇಕು ಎಂದು ಇಸ್ಲಾಮ್ ಧರ್ಮವು ಆಗ್ರಹಿಸುತ್ತದೆ.

ಇಸ್ಲಾಮಿನ ದೃಷ್ಟಿಯಲ್ಲಿ, ನೀವು ಅಲ್ಲಾಹನ ಕಾನೂನನ್ನು ಸರಿಯಾದ ಕಾನೂನೆಂದು ಅಂಗೀಕರಿಸಿ ಬಿಟ್ಟರೆ ಮಾತ್ರ ಸಾಲದು. ನೀವೆಲ್ಲೇ ಇದ್ದರೂ, ಯಾವ ಭೂಭಾಗದ ನಿವಾಸಿ ಗಳಾಗಿದ್ದರೂ ಅಲ್ಲಿ ಅಲ್ಲಾಹನ ದಾಸರ ಸುಧಾರಣೆಗಾಗಿ ಎದ್ದು ನಿಲ್ಲಬೇಕು, ಆಡಳಿತ ವ್ಯವಸ್ಥೆಯ ತಪ್ಪು ನಿಯಮಗಳನ್ನು ಕಿತ್ತೊಗೆದು ಸರಿಯಾದ ನಿಯಮಗಳನ್ನು ಜಾರಿಗೊಳಿಸಬೇಕು, ಅಧಿಕಾರ ಸೂತ್ರಗಳನ್ನು ದೇವಭಯವಿಲ್ಲದ, ಸ್ವೇಚ್ಛಾಚಾರಿಗಳ ಕಪಿಮುಷ್ಟಿಯಿಂದ ಕಿತ್ತುಕೊಂಡು ಜನಸಾಮಾನ್ಯರಿಗೆ ಮಾರ್ಗದರ್ಶನ ಮತ್ತು ನೇತೃತ್ವ ಒದಗಿಸುವ ಕರ್ತವ್ಯವನ್ನು ಸ್ವತಃ

ಕೈಗೆತ್ತಿಕೊಂಡು ದೇವದತ್ತ ಕಾನೂನಿಗನುಸಾರವಾಗಿ, ಪರಲೋಕದ ವಿಚಾರಣೆಯ ಪ್ರಜ್ಞೆಯೊಂದಿಗೆ ಮತ್ತು ಅಲ್ಲಾಹನು ಎಲ್ಲ ಸುಪ್ತ ವಿಚಾರಗಳನ್ನೂ ಬಲ್ಲವನೆಂಬ ವಿಶ್ವಾಸ ಹಾಗೂ ಅರಿವಿನೊಂದಿಗೆ ಆಡಳಿತ ವ್ಯವಹಾರವನ್ನು ನಡೆಸಬೇಕು. ಇದು ನಿಮ್ಮ ಸಹಜ ಕರ್ತವ್ಯವಾಗಿದೆ ಎಂದು ಇಸ್ಲಾಮ್ ಧರ್ಮ ಹೇಳುತ್ತದೆ. ಈ ನಿಟ್ಟಿನಲ್ಲಿ ನಡೆಸುವ ಪ್ರಯತ್ನ ಹಾಗೂ ಹೋರಾಟವನ್ನೇ 'ಜಿಹಾದ್' ಎಂದು ಕರೆಯಲಾಗುತ್ತದೆ.

ಆಡಳಿತ - ಒಂದು ಕಠಿಣ ಸತ್ವಪರೀಕ್ಷೆ

ಆದರೆ ಆಡಳಿತ ಮತ್ತು ಅಧಿಕಾರಸ್ಥಾನವು ಅದೆಂತಹ ಕಠಿಣ ಸತ್ವ ಪರೀಕ್ಷೆಯೆಂಬುದು ನಿಮಗೆಲ್ಲಾ ಗೊತ್ತು. ಅಧಿಕಾರ ಪ್ರಾಪ್ತವಾಗುವ ಕುರಿತು ಆಲೋಚಿಸುವಾಗಲೇ ಮನುಷ್ಯನ ಮನಸ್ಸಿನಲ್ಲಿ ದುರಾಶೆಗಳ ಒಂದು ಬಿರುಗಾಳಿಯೇ ಎದ್ದು ಬಿಡುತ್ತದೆ. ಭೂಮಿಯ ಖಜಾನೆಗಳು ಮತ್ತು ಜನತೆಯ ಕೊರಳುಗಳು ತನ್ನ ಕೈಗೆ ಬಂದು ಬಿಟ್ಟೊಡನೆ ತಾನು ಮನ ಬಂದಂತೆ ಪ್ರಭುತ್ವ ನಡೆಸಬಹುದು ಎಂದು ಮನುಷ್ಯನ ಸ್ವೇಚ್ಛೆಯು ಹಂಬಲಿಸಲಾರಂಭಿಸುತ್ತದೆ. ನಿಜವಾಗಿ ಆಡಳಿತಾಧಿಕಾರಗಳನ್ನು ಸಂಪಾದಿಸಿಕೊಳ್ಳುವುದು ಹೆಚ್ಚು ಕಷ್ಟದ ಕೆಲಸವಲ್ಲ. ಆದರೆ ಅಧಿಕಾರ ಪ್ರಾಪ್ತವಾದ ಬಳಿಕ ತಾನು 'ದೇವರು' ಆಗಿ ಬಿಡುವುದನ್ನು ತಡೆದುಕೊಳ್ಳುವುದು ಮತ್ತು ದೇವನ ವಿನೀತ ದಾಸನಾಗಿ ಮುಂದುವರಿದು, ಕಾರ್ಯ ನಿರ್ವಹಿಸುವುದು ಬಹಳ ಪ್ರಯಾಸದ ಕೆಲಸ. ಒಂದು ವೇಳೆ ಈ ಪ್ರಯಾಸಕರ ಕೆಲಸವನ್ನು ಮಾಡಲು ಸಾಧ್ಯವಿಲ್ಲವೆಂದಾದರೆ, ಒಬ್ಬ ಫಿರ್‌ಔನ್‌ನನ್ನು ಅಧಿಕಾರದಿಂದ ಕೆಳಗಿಳಿಸಿ ಅವನ ಸ್ಥಾನದಲ್ಲಿ ಸ್ವತಃ ನೀವೇ ಇನ್ನೊಬ್ಬ ಫಿರ್‌ಔನ್ ಆಗಿ ಬಿಡುವುದರಲ್ಲಿ ಇರುವ ಪ್ರಯೋಜನವಾದರೂ ಏನು?

ಆದ್ದರಿಂದಲೇ ಇಸ್ಲಾಮ್ ಧರ್ಮವು ಕಠಿಣ ಸತ್ವಪರೀಕ್ಷೆಯ ಈ ಕೆಲಸದೆಡೆಗೆ ನಿಮ್ಮನ್ನು ಕರೆಯುವುದಕ್ಕೆ ಮುಂಚೆ ನಿಮ್ಮನ್ನು ಈ ಕಾರ್ಯಕ್ಕಾಗಿ ಸಿದ್ಧಗೊಳಿಸುವುದು ಅತ್ಯವಶ್ಯಕವೆಂದು ಪರಿಗಣಿಸುತ್ತದೆ. ನಿಮ್ಮ ಮನಸ್ಸು ಸ್ವಾರ್ಥ ಮತ್ತು ಸ್ವೇಚ್ಛೆಗಳ ಪ್ರಭಾವದಿಂದ ಮುಕ್ತವಾಗುವ ತನಕ ನಿಮ್ಮ ಹೋರಾಟವು ನಿಮ್ಮ ವೈಯಕ್ತಿಕ, ರಾಷ್ಟ್ರೀಯ ಅಥವಾ ಜನಾಂಗೀಯ ಸ್ವಾರ್ಥದ ಬದಲು ಕೇವಲ ಅಲ್ಲಾಹನ ಮೆಚ್ಚುಗೆ ಮತ್ತು ಜನತೆಯ ಹಿತಕ್ಕಾಗಿ ಮುಡಿಪಾಗುವಷ್ಟು ನಿಸ್ವಾರ್ಥತೆಯು ನಿಮ್ಮಲ್ಲಿ ಬೆಳೆಯುವ ತನಕ ಮತ್ತು ಅಧಿಕಾರ ಪಡೆದ ಬಳಿಕ ನೀವು ನಿಮ್ಮ ಸ್ವೇಚ್ಛೆಗಳನ್ನು ಅನುಸರಿಸುವ ಬದಲು ದೇವದತ್ತ ನಿಯಮಗಳನ್ನೇ ಅಚಲವಾಗಿ ಅನುಸರಿಸಲು ಬೇಕಾದಷ್ಟು ಸಾಮರ್ಥ್ಯವು ನಿಮ್ಮಲ್ಲಿ ಬೆಳೆಯುವ ತನಕ ನಿಮಗೆ ಸರಕಾರ ನಡೆಸುವ ಅಥವಾ ಜಗತ್ತಿನ ವಿರುದ್ಧ ಹೋರಾಟಕ್ಕಿಳಿಯುವ ಹಕ್ಕು ಪ್ರಾಪ್ತವಾಗುವುದಿಲ್ಲ.

ಕೇವಲ ನೀವು ಪವಿತ್ರ ಕಲಿಮವನ್ನು ಪಠಿಸಿ ಇಸ್ಲಾಮಿನೊಳಗೆ ಪ್ರವೇಶಿಸಿದ್ದೀರೆಂದ ಮಾತ್ರಕ್ಕೆ ಇಸ್ಲಾಮ್‌ಧರ್ಮವು ನಿಮಗೆ-ಜನತೆಯ ಮೇಲೆ ಮುಗಿ ಬೀಳಲು ಮತ್ತು ನೀವು ಕೂಡಾ ಅಲ್ಲಾಹ್ ಮತ್ತು ಪ್ರವಾದಿಯ ಹೆಸರಲ್ಲಿ ದೇವ ದ್ರೋಹಿಗಳು ಮತ್ತು ಅಕ್ರಮಿಗಳು ಮಾಡುವಂತಹ ಕೆಲಸಗಳನ್ನೇ ಮಾಡಲು ಹಕ್ಕು ನೀಡುವುದಿಲ್ಲ. ನಿಜವಾಗಿ ಇಸ್ಲಾಮ್, ಇಷ್ಟು

ದೊಡ್ಡ ಹೊಣೆಗಾರಿಕೆಯ ಭಾರವನ್ನು ನಿಮ್ಮ ಮೇಲೆ ಹೊರಿಸುವ ಮುನ್ನ ಇದನ್ನು ಹೊತ್ತುಕೊಳ್ಳಲು ಬೇಕಾದ ಶಕ್ತಿಯನ್ನು ನಿಮ್ಮೊಳಗೆ ಬೆಳೆಸ ಬಯಸುತ್ತದೆ.

ಇಬಾದತ್ - ಒಂದು ತರಬೇತಿ ಕಾರ್ಯಕ್ರಮ

ಈ ನಮಾಝ್, ಉಪವಾಸ ವ್ರತ, ಝಕಾತ್ ಮತ್ತು ಹಜ್ಜ್ ಎಂಬ ಕರ್ಮಗಳು ಇರುವುದೇ ಈ ಮಹಾತ್ಕಾರ್ಯಕ್ಕಾಗಿ ಬೇಕಾದ ತರಬೇತಿಯನ್ನು ನೀಡಲಿಕ್ಕಾಗಿ. ಜಗತ್ತಿನ ಎಲ್ಲ ಸರಕಾರಗಳು ತಮ್ಮ ಪೊಲೀಸ್, ಸೈನ್ಯ ಮತ್ತು ನಾಗರಿಕ ಸೇವಾ ಕ್ಷೇತ್ರಗಳಿಗೆ ಸೇವಕರು ಅಥವಾ ಅಧಿಕಾರಿಗಳನ್ನು ನೇಮಿಸುವುದಕ್ಕೆ ಮುಂಚೆ ಅವರಿಗೆ ವಿಶೇಷ ತರಬೇತಿ ಕೊಡಿಸುತ್ತವೆ. ಅದೇ ರೀತಿ ಅಲ್ಲಾಹನ ಧರ್ಮವಾದ ಇಸ್ಲಾಮ್ ಕೂಡಾ ಯಾರನ್ನಾದರೂ ತನ್ನ ಸೇವೆಗೆ ನಿಯುಕ್ತ ಗೊಳಿಸುವ ಮುನ್ನ ಅವರಿಗೆ ಒಂದು ನಿರ್ದಿಷ್ಟ ರೀತಿಯ ತರಬೇತಿಯನ್ನು ನೀಡುತ್ತದೆ ಮತ್ತು ತರುವಾಯ ಅವರಿಂದ ಜಿಹಾದ್ ಮತ್ತು ದಿವ್ಯ ಸರಕಾರದ ವ್ಯವಸ್ಥಾಪನೆಯಂತಹ ಕೆಲಸಗಳನ್ನು ಮಾಡಿಸುತ್ತದೆ.

ಇಲ್ಲಿರುವ ವ್ಯತ್ಯಾಸವೇನೆಂದರೆ ಲೌಕಿಕ ಸರಕಾರಗಳು ತಮ್ಮ ಸೇವಕರಿಂದ ಮಾಡಿಸ ಬಯಸುವಂತಹ ಕೆಲಸಗಳಿಗೆ ನೈತಿಕತೆ, ಚಾರಿತ್ರ್ಯ, ಸೌಜನ್ಯ, ದೇವಭಯ ಮುಂತಾದ ಯಾವುದೇ ಗುಣದ ಅಗತ್ಯವಿರುವುದಿಲ್ಲ. ಅವುಗಳಿಗೆ ಕೇವಲ ಒಂದು ದಂಡಿನ ಅಗತ್ಯವಿರುತ್ತದೆ. ಆ ದಂಡಿನಲ್ಲಿರುವವರು ವ್ಯಭಿಚಾರಿಗಳು, ಕುಡುಕರು, ಅಪ್ರಾಮಾಣಿಕರು ಮತ್ತು ದುರಾತ್ಮರಾಗಿದ್ದರೂ ಸರಿಯೇ. ಆದರೆ ದೇವಧರ್ಮವು ತನ್ನ ಸೇವಕರಿಂದ ಮಾಡಿಸಬಯಸುವ ಕೆಲಸವು ಸಾದ್ಯಂತ ನೈತಿಕ ಸ್ವರೂಪದ್ದಾಗಿದೆ. ಆದ್ದರಿಂದಲೇ ಅದು ಅವರನ್ನು ಒಂದು ದಂಡಿನ ರೂಪದಲ್ಲಿ ನಿಯುಕ್ತಗೊಳಿಸುವ ಕಾರ್ಯಕ್ಕಿಂತ ಅವರನ್ನು ದೇವಭಯವುಳ್ಳ ಸಜ್ಜನರಾಗಿ ಮಾರ್ಪಡಿಸುವುದು ಹೆಚ್ಚು ಮಹತ್ವದ ಕೆಲಸವೆಂದು ಪರಿಗಣಿಸುತ್ತದೆ. ನಾಳೆ ಅವರು ತಾವು ದೇವಸಾಮ್ರಾಜ್ಯವನ್ನು ಸ್ಥಾಪಿಸುವೆವೆಂದು ಹೊರಟಾಗ ನಿಜಕ್ಕೂ ಅದನ್ನು ಮಾಡಿ ತೋರಿಸಲು ಅವರು ಶಕ್ತರಾಗಬೇಕು ಎಂದು ಅದು ಅಪೇಕ್ಷಿಸುತ್ತದೆ. ಅವರು ಹೋರಾಡುವುದಾದಲ್ಲಿ ಅದು ಸ್ವತಃ ತಮ್ಮ ಹಿತಕ್ಕಾಗಿ, ಸಂಪತ್ತಿಗಾಗಿ ಅಥವಾ ಪ್ರಸಿದ್ಧಿಗಾಗಿ ಆಗಿರದೆ ಅಪ್ಪಟವಾಗಿ ಅಲ್ಲಾಹನ ಮೆಚ್ಚುಗೆ ಗಳಿಸಲಿಕ್ಕಾಗಿ ಮತ್ತು ಅವನ ದಾಸರ ಕಲ್ಯಾಣಕ್ಕಾಗಿರಬೇಕು. ಅವರಿಗೆ ವಿಜಯ ಪ್ರಾಪ್ತ ವಾದರೆ ಅವರು ಅಹಂಕಾರ ಪಡುವ ಬದಲು ವಿನಯದೊಂದಿಗೆ ಭಯಭಕ್ತಿಯಿಂದ ಅಲ್ಲಾಹನ ಮುಂದೆ ತಲೆಬಾಗಬೇಕು. ಅವರು ಆಡಳಿತಗಾರರಾದರೆ ಜನರನ್ನು ತಮ್ಮ ಗುಲಾಮರಾಗಿ ಮಾಡುವ ಬದಲು ಸ್ವತಃ ತಾವೂ ಅಲ್ಲಾಹನ ದಾಸರಾಗಿದ್ದು, ಜನರು ಕೂಡಾ ಅಲ್ಲಾಹನ ಹೊರತು ಇತರರ ದಾಸ್ಯಕ್ಕೆ ಒಳಗಾಗದಂತೆ ನೋಡಿಕೊಳ್ಳಬೇಕು. ಭೂಮಿಯ ಖಜಾನೆಗಳು ಅವರ ನಿಯಂತ್ರಣಕ್ಕೆ ಬಂದಾಗ ಅವರು ಸ್ವತಃ ತಮ್ಮತಮ್ಮ ಕುಟುಂಬದ ಹಾಗೂ ತಮ್ಮ ಕೋಮಿನವರ ಕಿಸೆಗಳನ್ನು ತುಂಬುವುದರಲ್ಲಿ ನಿರತರಾಗುವ ಬದಲು ದೇವದತ್ತ ಸಂಪತ್ತನ್ನು ದೇವನ ದಾಸರ ನಡುವೆ

ನ್ಯಾಯಸಮ್ಮತ ರೀತಿಯಲ್ಲಿ ವಿತರಣೆ ಮಾಡಬೇಕು ಮತ್ತು ಕರ್ತವ್ಯನಿಷ್ಠ ದಾಸರಂತೆ, ದೇವನ ಸರ್ವವೀಕ್ಷಕ ಕಣ್ಣುಗಳು ನಮ್ಮನ್ನು ಸದಾ ವೀಕ್ಷಿಸುತ್ತಿವೆ ಮತ್ತು ಆತನಿಗೆ ನಾವು ಒಂದೊಂದು ಪೈಸೆಯ ಬಗ್ಗೆ ಲೆಕ್ಕ ಸಮರ್ಪಿಸಲಿಕ್ಕಿದೆ ಎಂಬ ಪ್ರಜ್ಞೆಯೊಂದಿಗೆ ಕರ್ತವ್ಯ ನಿರ್ವಹಿಸಬೇಕು ಎಂದು ಅಪೇಕ್ಷಿಸುವ ಇಸ್ಲಾಮ್ ಧರ್ಮವು ತನ್ನ ಸೇವಕರಲ್ಲಿ ಇಂತಹ ಸಾಮರ್ಥ್ಯಗಳನ್ನು ಬೆಳೆಸಬಯಸುತ್ತದೆ. ಈ ಸಾಮರ್ಥ್ಯಗಳು ಅವರಲ್ಲಿ ಬೆಳೆಯಲಿಕ್ಕಾಗಿ ಅವರಿಗೆ ತರಬೇತಿ ನೀಡಲು ಪ್ರಸ್ತುತ ಆರಾಧನಾ ಕರ್ಮಗಳಿಗಿಂತ ಪರಿಣಾಮಕಾರಿಯಾದ ವಿಧಾನ ಬೇರಿಲ್ಲ. ಇನ್ನು ಈ ವಿಧಾನದಿಂದ ಇಸ್ಲಾಮ್ ಧರ್ಮವು ತನ್ನ ಸೇವಕರಿಗೆ ತರಬೇತಿ ಕೊಟ್ಟು ಅವರನ್ನು ಸಿದ್ಧಗೊಳಿಸಿದ ಬಳಿಕ ಅವರೊಡನೆ- ಈಗ ನೀವು ಈ ಭೂಮಿಯ ಮೇಲೆ ಅಲ್ಲಾಹನ ಅತ್ಯಂತ ಶಿಷ್ಟ ದಾಸರಾಗಿರುವಿರಿ. ಆದ್ದರಿಂದ ನೀವೀಗ ಮುಂದಡಿ ಇಡಿರಿ. ಜಗತ್ತಿನಲ್ಲಿರುವ ಎಲ್ಲ ದೇವದ್ರೋಹಿಗಳ ಕೈಗಳಿಂದ ಅಧಿಕಾರ ಕಿತ್ತುಕೊಂಡು, ಖಿಲಾಫತ್‌ನ (ದೇವ ಪ್ರಾತಿನಿಧ್ಯ) ಕರ್ತವ್ಯ ಮತ್ತು ಅಧಿಕಾರಗಳನ್ನು ಕೈಗೆತ್ತಿಕೊಳ್ಳಿರಿ- ಎಂದು ಹೇಳುತ್ತದೆ.

كُنْتُمْ خَيْرَ أُمَّةٍ أُخْرِجَتْ لِلنَّاسِ تَأْمُرُونَ بِالْمَعْرُوفِ وَتَنْهَوْنَ عَنِ الْمُنْكَرِ وَتُؤْمِنُونَ بِاللَّهِ

"ಮಾನವರ ಸನ್ಮಾರ್ಗದರ್ಶನ ಮತ್ತು ಸಂಸ್ಕಾರಗಳಿಗಾಗಿ ನಿಯೋಗಿಸಲಾಗಿರುವ ಅತ್ಯುತ್ತಮ ಜನಕೂಟವು ನಿಮ್ಮದಾಗಿರುತ್ತದೆ. ನೀವು ಒಳಿತಿನ ಆದೇಶವನ್ನೀಯುತ್ತೀರಿ, ಪಾಪ ಕಾರ್ಯಗಳಿಂದ ತಡೆಯುತ್ತೀರಿ ಮತ್ತು ಅಲ್ಲಾಹನ ಮೇಲೆ ವಿಶ್ವಾಸವಿಡುತ್ತೀರಿ."

(ಆಲಿ ಇಮ್‌ರಾನ್: 110)

ದೇವಭಕ್ತ ಆಡಳಿತದ ಅನುಗ್ರಹಗಳು

ಎಲ್ಲಿ ಪೊಲೀಸ್, ಸೇನೆ, ನ್ಯಾಯಾಲಯ, ಜೈಲು, ಕಂದಾಯ ಇಲಾಖೆ ಮತ್ತಿತರ ಎಲ್ಲ ಸರಕಾರಿ ಇಲಾಖೆಗಳು ಸಂಪೂರ್ಣವಾಗಿ, ಸದಾ ಅಲ್ಲಾಹನಿಗೆ ಭಯಪಡುತ್ತಾ ಇರುವ ಮತ್ತು ಪರಲೋಕದ ವಿಚಾರಣೆಯ ಬಗ್ಗೆ ಸದಾ ಪ್ರಜ್ಞಾವಂತರಾಗಿರುವ ಅಧಿಕಾರಿಗಳು ಮತ್ತು ನೌಕರರ ಕೈಯಲ್ಲಿರುವುವೋ, ಎಲ್ಲಿ ಸರಕಾರದ ಎಲ್ಲ ಕಾನೂನು-ನಿಯಮಗಳು ಯಾವುದೇ ಅನ್ಯಾಯ ಅಥವಾ ದೋಷಕ್ಕೆ ಎಡೆಯೀ ಇಲ್ಲದ ದಿವ್ಯಮಾರ್ಗದರ್ಶನದಲ್ಲಿ ಅಧಿಷ್ಠಿತವಾಗಿರುವುವೋ, ಎಲ್ಲಿ ಕೆಡುಕಿನ ಎಲ್ಲ ಪ್ರಕಾರಗಳನ್ನೂ ಮೂಲದಲ್ಲೇ ಹತ್ತಿಕ್ಕಿ ಬಿಡಲಾಗುತ್ತದೋ ಮತ್ತು ಎಲ್ಲಿ ಸರಕಾರವು ತನ್ನೆಲ್ಲ ಶಕ್ತಿ ಮತ್ತು ಸಂಪನ್ಮೂಲಗಳನ್ನು ತೊಡಗಿಸಿ ಒಳಿತನ್ನು ಮತ್ತು ಅದರ ಸಕಲ ಪ್ರಕಾರಗಳನ್ನು ಪ್ರೋತ್ಸಾಹಿಸಲು ಕಂಕಣ ಬದ್ಧವಾಗಿರುವುದೋ ಅಲ್ಲಿ ಜನತೆಯು ಎಷ್ಟೊಂದು ಸುಖ ಮತ್ತು ಸಂಪನ್ನತೆಯನ್ನು ಪಡೆಯಬಹುದೆಂದು ನೀವು ಸುಲಭವಾಗಿ ಊಹಿಸಬಹುದು.

ಇದೇ ರೀತಿ ಇಂತಹ ಒಂದು ಸರಕಾರವು ಕೆಲವು ಕಾಲ ಕಾರ್ಯನಿರತವಾಗಿ ಜನರ ಗುಣ-ಸ್ವಭಾವಗಳನ್ನೆಲ್ಲಾ ಸುಧಾರಿಸಿದಾಗ, ಅದು ಅಕ್ರಮ ಸಂಪಾದನೆ, ಅನ್ಯಾಯ, ವ್ಯಭಿಚಾರ, ಅಶ್ಲೀಲತೆ ಮತ್ತು ಅನೈತಿಕತೆಯ ಎಲ್ಲ ದ್ವಾರಗಳನ್ನು ಮುಚ್ಚಿ ಬಿಟ್ಟಾಗ, ಶಿಕ್ಷಣ ಮತ್ತು ತರಬೇತಿಯ ದುಷ್ಟ ಪದ್ಧತಿಗಳನ್ನು ತೊಡೆದು ಹಾಕಿ ಸರಿಯಾದ ಶಿಕ್ಷಣ ಮತ್ತು ತರಬೇತಿ ವ್ಯವಸ್ಥೆಯ ಮೂಲಕ ಜನರ ಆಚಾರ ವಿಚಾರಗಳನ್ನು ಸರಿಪಡಿಸಿದಾಗ ಮತ್ತು ಈ ಸರಕಾರದ ಆಶ್ರಯದಲ್ಲಿ ನ್ಯಾಯ, ಶಾಂತಿ, ಸೌಹಾರ್ದ ಮತ್ತು ಸೌಜನ್ಯದ ಶುಭ್ರ, ನಿರ್ಮಲ ವಾತಾವರಣದಲ್ಲಿ ಜೀವನ ಸಾಗಿಸಲು ಜನತೆಗೆ ಅವಕಾಶ ಸಿಕ್ಕಾಗ - ಶತಮಾನಗಳಿಂದ ದುಷ್ಟ, ಭ್ರಷ್ಟ ಹಾಗೂ ದೇವಭಯವಿಲ್ಲದ ಜನರ ನಾಯಕತ್ವದಡಿಯಲ್ಲಿ ಬಾಳಿದ್ದರಿಂದಾಗಿ ಕುರುಡಾಗಿ ಹೋಗಿದ್ದ ಕಣ್ಣುಗಳು ಕಾಲಕ್ರಮೇಣ ತಾವಾಗಿಯೇ ಸತ್ಯವನ್ನು ಕಾಣಲು ಮತ್ತು ಗುರುತಿಸಲು ಶಕ್ತವಾಗುವುವು. ಶತಮಾನಗಳಿಂದ ಅನೈತಿಕ ವಾತಾವರಣದಲ್ಲಿ ಸಿಲುಕಿಕೊಂಡ ಕಾರಣ ತುಕ್ಕು ಹಿಡಿದಿದ್ದ ಮನಸ್ಸುಗಳು ಕ್ರಮೇಣ ಕನ್ನಡಿಯಂತೆ ಶುಭ್ರವಾಗಲಾರಂಭಿಸುವುವು ಮತ್ತು ಸತ್ಯದ ಪ್ರತಿಬಿಂಬವನ್ನು ಸ್ವೀಕರಿಸುವ ಸಾಮರ್ಥ್ಯವು ಅವುಗಳಲ್ಲಿ ಬೆಳೆಯತೊಡಗುವುದು. ಆಗ ಜನರಿಗೆ, ಅಲ್ಲಾಹನೇ ತಮ್ಮ ನೈಜ ಆರಾಧ್ಯನಾಗಿದ್ದು ಅವನ ಹೊರತು ಬೇರಾರೂ ಆರಾಧನೆ ಮತ್ತು ದಾಸ್ಯಕ್ಕೆ ಅರ್ಹರಲ್ಲ ಎಂಬ ಹಾಗೂ ಇಂತಹ ಶ್ರೇಷ್ಠ ನಿಯಮಗಳು ಮತ್ತು ಸದ್ ವ್ಯವಸ್ಥೆಯು ಯಾವ ಪ್ರವಾದಿಗಳ ಮೂಲಕ ಮಾನವಕುಲಕ್ಕೆ ಪ್ರಾಪ್ತವಾದವೋ ಅವರು ನಿಜಕ್ಕೂ ಸತ್ಯವಂತರಾಗಿದ್ದರು ಎಂಬ ಸರಳವಾದ ವಾಸ್ತವಿಕತೆಯನ್ನು ಗ್ರಹಿಸಲು ಮತ್ತು ಅಂಗೀಕರಿಸಲು ಸ್ವಲ್ಪವೂ ಪ್ರಯಾಸವಾಗದು. ಇಂದು ಯಾವ ವಿಷಯಗಳನ್ನು ಜನರಿಗೆ ಮನವರಿಕೆ ಮಾಡಿಸುವುದು ಅತ್ಯಂತ ಪ್ರಯಾಸಕರವೆನಿಸುತ್ತದೋ ಅದೇ ವಿಷಯಗಳು ಆಗ ಜನರಿಗೆ ತನ್ನಿಂತಾನೇ ಅರ್ಥವಾಗಲಾರಂಭಿಸುವುವು. ಇಂದು ಭಾಷಣ ಮತ್ತು ಪುಸ್ತಕಗಳ ಮೂಲಕ ವಿವರಿಸಲು ಸಾಧ್ಯವಾಗದಂತಹ ಅನೇಕ ವಿಚಾರಗಳು ಆಗ ಜನರಿಗೆ ಯಾವ ತೊಡಕೂ ಇಲ್ಲದೆ ಬಹಳ ಸುಲಭದಲ್ಲೇ ಅರ್ಥವಾಗಿ ಬಿಡುವುವು.

ಹೂವು ಮತ್ತು ಮುಳ್ಳುಗಳ ನಡುವಣ ವ್ಯತ್ಯಾಸ ತಿಳಿದ ಬಳಿಕ ಹೂವನ್ನು ಆಯ್ದು ಕೊಳ್ಳುವುದು ಸುಲಭವೂ ಮುಳ್ಳನ್ನು ಆಯ್ದುಕೊಳ್ಳುವುದು ಕಷ್ಟವೂ ಆಗಿ ಬಿಡುತ್ತದೆ. ಹಾಗೆಯೇ ಮಾನವ ನಿರ್ಮಿತ ನಿಯಮಗಳ ಪ್ರಕಾರ ಈ ಜಗತ್ತಿನ ವ್ಯವಸ್ಥೆಯನ್ನು ನಡೆಸಿದರೆ ಎಂತಹ ಅವಸ್ಥೆ ಉದ್ಭವಿಸುತ್ತದೆ ಮತ್ತು ಈ ಲೋಕದ ವ್ಯವಹಾರಗಳನ್ನೆಲ್ಲಾ ದೇವ ನಿರ್ದೇಶಿತ ವಿಧಾನ ದಿಂದ ನಡೆಸಿದಾಗ ಎಂತಹ ಸುವ್ಯವಸ್ಥೆ ನೆಲೆಸುತ್ತದೆ ಎಂಬ ವ್ಯತ್ಯಾಸವನ್ನು ಜನರು ಕಣ್ಣಾರೆ ಕಂಡುಕೊಂಡಾಗ ಅವರ ಪಾಲಿಗೆ, ದೇವನು ಏಕೈಕನೆಂಬುದನ್ನೂ ಅವನ ಸಂದೇಶವಾಹಕರು ಸತ್ಯವಂತರು ಹಾಗೂ ಅನುಸರಣಾರ್ಹರೆಂಬುದನ್ನು ನಂಬುವುದು ಸುಲಭವಾಗುತ್ತದೆ ಮತ್ತು ಈ ವಾಸ್ತವಿಕತೆಯನ್ನು ತಿರಸ್ಕರಿಸುವುದು ಕಷ್ಟವಾಗಿ ಬಿಡುತ್ತದೆ. ಆಗ ಜನರಿಗೆ, ಇಸ್ಲಾಮ್ ಸತ್ಯವೆಂಬುದನ್ನು ನಿರಾಕರಿಸಲು ಹಾಗೂ ದೇವ ಧಿಕ್ಕಾರ ಹಾಗೂ ಬಹುದೇವಾರಾಧನೆಯಲ್ಲಿ ಮುಂದುವರಿಯಲು ಭಾರೀ ಹಠಮಾರಿತನ ಬೇಕಾಗುತ್ತದೆ. ಈ ಮಟ್ಟದ ಹಠಮಾರಿತನವಂತೂ ಸಾವಿರ ಮಂದಿಯ ಪೈಕಿ ಹೆಚ್ಚೆಂದರೆ ಐದಾರು ಮಂದಿಯಲ್ಲಿ ಮಾತ್ರ ಕಾಣ ಸಿಗಬಹುದು.

ಬಂಧುಗಳೇ! ಈ ನಮಾಝ್, ಉಪವಾಸ ವ್ರತ, ಝಕಾತ್ ಮತ್ತು ಹಜ್ಜ್‌ಗಳನ್ನು ಯಾವ ಉದ್ದೇಶದಿಂದ ಕಡ್ಡಾಯಗೊಳಿಸಲಾಗಿದೆ ಎಂಬುದು ಈಗಾಗಲೇ ನಿಮಗೆ ಚೆನ್ನಾಗಿ ಮನವರಿಕೆಯಾಗಿರಬಹುದು. ಈ ವರೆಗೆ ನಿಮ್ಮನ್ನು, ಈ ಆರಾಧನಾ ಕರ್ಮಗಳೆಲ್ಲಾ ಕೇವಲ ಪೂಜೆ ಪುರಸ್ಕಾರಗಳಂತಹ ಕಟ್ಟಳೆಗಳು ಮಾತ್ರ ಎಂಬ ತಪ್ಪು ತಿಳುವಳಿಕೆಗೆ ಒಳಪಡಿಸಲಾಗಿತ್ತು. ವಾಸ್ತವದಲ್ಲಿ: ಇವುಗಳ ಮೂಲಕ ನಿಮ್ಮನ್ನು ಒಂದು ಮಹಾನ್ ಸೇವೆಗೆ ಸಿದ್ಧಗೊಳಿಸಲಾಗುತ್ತಿದೆ ಎಂಬುದನ್ನು ನಿಮ್ಮಲ್ಲನೇಕರಿಗೆ ಯಾರೂ ತಿಳಿಸಿರಲಾರರು. ಆದ್ದರಿಂದಲೇ ನೀವು ಬಹುಕಾಲ ದಿಂದ ಯಾವುದೇ ಉದ್ದೇಶದ ಪ್ರಜ್ಞೆ ಇಲ್ಲದೆಯೇ ಈ ಕಡ್ಡಾಯ ಕರ್ಮಗಳನ್ನು ನಿರ್ವಹಿಸು ತ್ತಲಿದ್ದಿರಿ. ಯಾವ ಕಾರ್ಯಕ್ಕೆ ನಿಮ್ಮನ್ನು ಸಿದ್ಧಗೊಳಿಸಲಿಕ್ಕಾಗಿ ಇವುಗಳನ್ನು ಕಡ್ಡಾಯ ಗೊಳಿಸಲಾಗಿದೆಯೋ ಅದರ ಆಲೋಚನೆಯೇ ನಿಮ್ಮ ಮನಸ್ಸಿನಲ್ಲಿ ಸುಳಿಯಲಿಲ್ಲ. ಇದೀಗ ನಾನು ನಿಮ್ಮೊಡನೆ ಹೇಳುತ್ತಿದ್ದೇನೆ; ಯಾವ ಮನಸ್ಸಿನಲ್ಲಿ ಜಿಹಾದ್‌ನ ಸಂಕಲ್ಪವಿಲ್ಲವೋ ಮತ್ತು ಯಾರ ಮುಂದೆ ಜಿಹಾದ್‌ನ ಗುರಿ ಇಲ್ಲವೋ ಅವರ ಆರಾಧನೆಗಳೆಲ್ಲಾ ಅರ್ಥಹೀನವಾಗಿವೆ. ಇಂತಹ ಅರ್ಥಹೀನ ಆರಾಧನೆಗಳ ಮೂಲಕ ದೇವನ ಸಾಮಿಪ್ಯ ಪ್ರಾಪ್ತವಾಗುತ್ತದೆಂದು ನೀವು ಭ್ರಮಿಸಿಕೊಂಡಿದ್ದರೆ, ನಿಜಕ್ಕೂ ಇವು ನಿಮ್ಮನ್ನು ದೇವನಿಗೆ ಎಷ್ಟು ಸಮಿೂಪಗೊಳಿಸಿವೆ ಎಂಬುದನ್ನು ಅವನ ಬಳಿಗೆ ಹೋದಾಗ ಸ್ವತಃ ನೀವೇ ಕಂಡುಕೊಳ್ಳುವಿರಿ.

○

ಜಿಹಾದ್‌ನ ಮಹತ್ವ

ಮುಸ್ಲಿಮ್ ಬಂಧುಗಳೇ,

ಈ ಹಿಂದೆ ನಾನೊಮ್ಮೆ ನಿಮಗೆ ದೀನ್, ಶರೀಅತ್ ಮತ್ತು ಇಬಾದತ್ ಎಂಬ ಪದಗಳ ಅರ್ಥವನ್ನು ತಿಳಿಸಿದ್ದೆ. ಈಗ ನೀವು ಆ ಪಾಠವನ್ನು ಮತ್ತೊಮ್ಮೆ ನೆನಪಿಗೆ ತಂದುಕೊಳ್ಳಿರಿ -

- ದೀನ್ ಎಂದರೆ ಆಜ್ಞಾಪಾಲನೆ.
- ಶರೀಅತ್ ಎಂದರೆ ಕಾನೂನು.
- ಇಬಾದತ್ ಎಂದರೆ ದಾಸ್ಯ.

ದೀನ್ ಎಂಬುದರ ಅರ್ಥ

ನೀವು ಯಾರದಾದರೂ ಆಜ್ಞಾಪಾಲಕರಾಗಿ ಅವನನ್ನು ನಿಮ್ಮ ಆಡಳಿತಗಾರ ಎಂದು ಅಂಗೀಕರಿಸಿದರೆ ನೀವು ಆ ಮೂಲಕ ಆತನ 'ದೀನ್' ಅರ್ಥಾತ್ ಧರ್ಮವನ್ನು ಸ್ವೀಕರಿಸಿದಂತಾಗುವುದು. ಆ ಬಳಿಕ ಅವನು ನಿಮ್ಮ ಆಡಳಿತಗಾರನೂ ನೀವು ಅವನ ಪ್ರಜೆಯೂ ಆಗಿಬಿಟ್ಟಾಗ ಅವನು ಹೊರಡಿಸುವ ಆದೇಶಗಳು ಮತ್ತು ಅವನು ನಿಶ್ಚಯಿಸುವ ಕಾನೂನು-ನಿಯಮಗಳು ನಿಮ್ಮ ಪಾಲಿಗೆ ಶರೀಅತ್ ಆಗಿ ಬಿಡುವುವು. ಆ ಬಳಿಕ ನೀವು ಆತನ ಆಜ್ಞಾಪಾಲನೆ ಮಾಡುತ್ತಾ ಆತನ ಶರೀಅತ್‌ನ ಪ್ರಕಾರ ಜೀವನ ಸಾಗಿಸಲಾರಂಭಿಸಿದರೆ, ಅವನು ಕೇಳಿದ್ದನ್ನೆಲ್ಲಾ ಅವನಿಗೆ ಕೊಡಲಾರಂಭಿಸಿದರೆ, ಅವನ ಆದೇಶಗಳನ್ನು ಪಾಲಿಸ ಲಾರಂಭಿಸಿದರೆ, ಯಾವುದರಿಂದ ಅವನು ನಿಮ್ಮನ್ನು ತಡೆಯುತ್ತಾನೋ ಅದರಿಂದ ನೀವು ದೂರವಿದ್ದರೆ, ಯಾವ ಪರಿಧಿಯೊಳಗೆ ಸಕ್ರಿಯರಾಗಿರಲು ಅವನು ನಿಮಗೆ ಅನುಮತಿಸುವನೋ ಆ ಪರಿಧಿಯೊಳಗೇ ನೀವು ಇದ್ದು ಬಿಟ್ಟರೆ, ನಿಮ್ಮ ಪರಸ್ಪರ ಸಂಬಂಧಗಳು, ವ್ಯವಹಾರಗಳು, ವಿವಾದಗಳು, ಮೊಕದ್ದಮೆಗಳು ಇತ್ಯಾದಿ ವಿಷಯಗಳಲ್ಲೆಲ್ಲಾ ನೀವು ಅವನ ನಿರ್ದೇಶಗಳನ್ನೇ ಅನುಸರಿಸಲಾರಂಭಿಸಿದರೆ ಮತ್ತು ಈ ಎಲ್ಲ ವಿಷಯಗಳಲ್ಲಿ ಅವನ ತೀರ್ಮಾನಗಳಿಗೆ ತಲೆಬಾಗಿದರೆ ನಿಮ್ಮ ಈ ವರ್ತನೆಯು ಇಬಾದತ್ ಅಥವಾ ದಾಸ್ಯ-ಆರಾಧನೆ ಎನಿಸಿಕೊಳ್ಳುತ್ತದೆ.

ಈ ವ್ಯಾಖ್ಯಾನದಿಂದ ಸ್ಪಷ್ಟವಾಗುವಂತೆ, ದೀನ್ ಎಂಬುದು ವಾಸ್ತವದಲ್ಲಿ ಆಡಳಿತ ವ್ಯವಸ್ಥೆ ಅಥವಾ ಸರಕಾರದ ಹೆಸರಾಗಿದೆ. ಶರೀಅತ್ ಎಂಬುದು ಆ ಸರಕಾರದ ಕಾನೂನಾಗಿದೆ. ಇಬಾದತ್ ಎಂಬುದು ಆ ಕಾನೂನು-ನಿಯಮಗಳ ಪಾಲನೆಯಾಗಿದೆ. ನೀವು ಯಾರನ್ನಾದರೂ ನಿಮ್ಮ

ಆಡಳಿತಗಾರನೆಂದು ಅಂಗೀಕರಿಸಿ ಅವನಿಗೆ ಅಧೀನರಾಗುವುದನ್ನು ಸಮ್ಮತಿಸಿದರೆ ಆ ಮೂಲಕ ನಿಜವಾಗಿ ನೀವು ಅವನ ದೀನ್ ಅಥವಾ ಧರ್ಮವನ್ನು ಪ್ರವೇಶಿಸಿದಂತಾಗುವುದು. ಒಂದು ವೇಳೆ ಆ ನಿಮ್ಮ ಆಡಳಿತಗಾರನು ಅಲ್ಲಾಹನೇ ಆಗಿದ್ದರೆ ನೀವು ಅಲ್ಲಾಹನ ದೀನ್‌ನೊಳಗೆ ಪ್ರವೇಶಿಸಿದಂತಾಯಿತು. ಆತ ಯಾರಾದರೊಬ್ಬ ದೊರೆಯಾಗಿದ್ದರೆ ನೀವು ದೊರೆಯ ಧರ್ಮವನ್ನು ಪ್ರವೇಶಿಸಿದಂತಾಯಿತು. ಅದೊಂದು ನಿರ್ದಿಷ್ಟ ಜನಾಂಗವಾಗಿದ್ದರೆ ನೀವು ಆ ಜನಾಂಗದ ಧರ್ಮವನ್ನು ಪ್ರವೇಶಿಸಿದಂತಾಯಿತು. ಅದು ನಿಮ್ಮ ಸ್ವಂತ ಜನಾಂಗವಾಗಿದ್ದರೆ ಅಥವಾ ನಿಮ್ಮದೇ ದೇಶದ ಪ್ರಜಾಸತ್ತಾತ್ಮಕ ಬಹುಸಂಖ್ಯೆಯಾಗಿದ್ದರೆ ನೀವು ಬಹುಸಂಖ್ಯಾತರ ಧರ್ಮವನ್ನು ಪ್ರವೇಶಿಸಿದಂತಾಯಿತು. ಒಟ್ಟಿನಲ್ಲಿ ಯಾರ ಆಜ್ಞಾಪಾಲನೆಯ ನೊಗವು ನಿಮ್ಮ ಕೊರಳಲ್ಲಿದೆಯೋ ನೀವು ಯಥಾರ್ಥದಲ್ಲಿ ಅವರ ಧರ್ಮದಲ್ಲೇ ಇರುವಿರೆಂದಾಯಿತು ಮತ್ತು ಯಾರ ಕಾನೂನುಗಳನ್ನು ನೀವು ಅನುಸರಿಸುತ್ತಿರುವಿರೋ ಯಥಾರ್ಥದಲ್ಲಿ ನೀವು ಅವರದೇ ಇಬಾದತ್ ಮಾಡುತ್ತಿರುವಿರಿ ಎಂದಾಯಿತು.

ಮನುಷ್ಯನಿಗೆ ಎರಡು 'ದೀನ್'ಗಳಿರಲು ಸಾಧ್ಯವಿಲ್ಲ

ಇಷ್ಟನ್ನು ಮನವರಿಕೆ ಮಾಡಿಕೊಂಡ ಬಳಿಕ, ಒಬ್ಬ ಮನುಷ್ಯನಿಗೆ ಏಕಕಾಲದಲ್ಲಿ ಎರಡು ದೀನ್‌ಗಳಿರಲು ಸಾಧ್ಯವಿಲ್ಲ ಎಂಬ ವಾಸ್ತವಿಕತೆಯು ಯಾವ ತೊಡಕೂ ಇಲ್ಲದೆ ನಿಮಗೆ ಅರ್ಥವಾದೀತು. ಏಕೆಂದರೆ ವಿಭಿನ್ನ ಆಡಳಿತಗಾರರ ಪೈಕಿ ನಿಮಗಂತೂ ಯಾರಾದರೂ ಒಬ್ಬನ ಆಜ್ಞಾಪಾಲನೆಯನ್ನು ಮಾತ್ರ ಮಾಡಲು ಸಾಧ್ಯ. ವಿಭಿನ್ನ ಕಾನೂನುಗಳ ಪೈಕಿ ಯಾವುದಾದರೂ ಒಂದು ಕಾನೂನು ಮಾತ್ರ ನಿಮ್ಮ ಜೀವನದ ನಿಯಮವಾಗಲು ಸಾಧ್ಯ. ಹಾಗೆಯೇ ವಿಭಿನ್ನ ಆರಾಧ್ಯರುಗಳ ಪೈಕಿ ಯಾರಾದರೂ ಒಬ್ಬರ ಆರಾಧನೆಯನ್ನು ಮಾತ್ರ ಮಾಡಲು ನಿಮಗೆ ಸಾಧ್ಯ. ಈಗ ನಿಮಗೆ ಒಂದು ಉಪಾಯ ಹೊಳೆಯಬಹುದು. ನಾವು ನಂಬಿಕೆಯ ಮಟ್ಟಿಗೆ ಒಬ್ಬನನ್ನು ಆಡಳಿತಗಾರನೆಂದು ನಂಬಿ ಪ್ರಾಯೋಗಿಕವಾಗಿ ಇನ್ನೊಬ್ಬನ ಆಜ್ಞಾಪಾಲನೆ ಮಾಡಬಹುದು. ಪೂಜೆ ಪುರಸ್ಕಾರಗಳನ್ನು ಒಬ್ಬನಿಗೆ ಸಲ್ಲಿಸಿ ಇನ್ನೊಬ್ಬನ ದಾಸ್ಯ-ಆರಾಧನೆ ಮಾಡಬಹುದು, ನಮ್ಮ ಮನದಾಳದಲ್ಲಿ ಒಂದು ಕಾನೂನಿನ ಮೇಲೆ ವಿಶ್ವಾಸವಿರಿಸಿ ನಮ್ಮ ನಿತ್ಯಜೀವನದ ಎಲ್ಲ ವ್ಯವಹಾರಗಳನ್ನು ಇನ್ನೊಂದು ಕಾನೂನಿನ ಪ್ರಕಾರ ನಡೆಸಬಹುದು ಎಂಬುದೇ ಆ ಉಪಾಯ. ಖಂಡಿತವಾಗಿಯೂ ಹೀಗೆಲ್ಲಾ ಮಾಡಬಹುದು. ಮಾತ್ರವಲ್ಲ, ನಿಜಕ್ಕೂ ಹೀಗೆಯೇ ಮಾಡಲಾಗುತ್ತಿದೆ. ಆದರೆ ಹೀಗೆ ಮಾಡುವುದು ಶಿರ್ಕ್(ಬಹುದೇವ ದಾಸ್ಯ) ಆಗಿದೆ ಮತ್ತು ಈ ಶಿರ್ಕ್ ಸಾದ್ಯಂತ ಸುಳ್ಳು ಹಾಗೂ ಮಿಥ್ಯವಾಗಿದೆ. ವಾಸ್ತವದಲ್ಲಂತೂ ನೀವು ಪ್ರಾಯೋಗಿಕವಾಗಿ ಯಾರ ಆಜ್ಞಾಪಾಲನೆ ಮಾಡುತ್ತಿರುವಿರೋ ಅವರ ದೀನ್‌ನಲ್ಲೇ ಇರುವಿರಿ. ಹೀಗಿರುತ್ತಾ ನೀವು ಯಾರ ಆಜ್ಞಾಪಾಲನೆ ಮಾಡುತ್ತಿಲ್ಲವೋ ಅವನನ್ನು ನಿಮ್ಮ ಆಡಳಿತಗಾರನೆಂದು ಮತ್ತು ಅವನ ದೀನ್ ಅಥವಾ ಧರ್ಮವನ್ನು ನಿಮ್ಮ ದೀನ್ ಎಂದು ಹೇಳುವುದು ಸುಳ್ಳಲ್ಲದೆ ಮತ್ತೇನು? ಒಂದು ವೇಳೆ ನೀವು ಬಾಯಲ್ಲಿ

ಹಾಗೆ ಹೇಳಿಕೊಳ್ಳುತ್ತಲಿದ್ದರೂ ಅಥವಾ ಮನಸ್ಸಿನಲ್ಲಿ ಹಾಗೆ ಭಾವಿಸಿ ಕೊಂಡಿದ್ದರೂ ಅದರಿಂದ ಪ್ರಯೋಜನವೇನು? ಮತ್ತು ಅದರ ಪರಿಣಾಮವೇನು?

ನಿಮ್ಮ ಜೀವನದ ವ್ಯವಹಾರಗಳೆಲ್ಲವೂ ಅವನ ಶರೀಅತ್‌ನ ಪರಿಧಿಯ ಹೊರಗಿದ್ದು ಬೇರೆ ಯಾರದೋ ಶರೀಅತ್‌ನ ಪ್ರಕಾರ ನಡೆಯುತ್ತಿರುವಾಗ ನಾವು ಅವನ ಶರೀಅತ್‌ನ ಮೇಲೆ ವಿಶ್ವಾಸವಿರಿಸಿದ್ದೇವೆ ಎಂಬ ನಿಮ್ಮ ಹೇಳಿಕೆ ತೀರಾ ಅರ್ಥಹೀನವೆನಿಸುತ್ತದೆ. ನೀವು ನಿಜ ಜೀವನದಲ್ಲಿ ಇತರರ ದಾಸ್ಯ-ಆರಾಧನೆ (ಇಬಾದತ್) ಮಾಡುತ್ತಿರುವಾಗ, ನಾವು ಇಂತಹವನನ್ನೇ ನಮ್ಮ ಆರಾಧ್ಯನೆಂದು ನಂಬಿದ್ದೇವೆಂಬ ನಿಮ್ಮ ಹೇಳಿಕೆ ಮತ್ತು ನಿಮ್ಮ ಕೊರಳ ಮೇಲೆ ಅಲಂಕೃತವಾಗಿರುವ ಶಿರವನ್ನು ಅವನ ಮುಂದೆ ಸಾಷ್ಟಾಂಗವೆರಗಿ ನೆಲಕ್ಕೂರುವ ನಿಮ್ಮ ಕೃತ್ಯವು ಕೇವಲ ಒಂದು ಕೃತಕ ಹಾಗೂ ಪೊಳ್ಳು ಕೃತ್ಯವೆನಿಸುತ್ತದೆ. ವಾಸ್ತವದಲ್ಲಿ ನೀವು ಜೀವನದಲ್ಲಿ ಯಾರ ಆದೇಶಗಳ ಪಾಲನೆ ಮಾಡುತ್ತಿರುವಿರೋ, ಯಾರು ನಿಷೇಧಿಸಿದ ಕೃತ್ಯಗಳನ್ನು ನೀವು ನಿಮ್ಮ ಮೇಲೆ ನಿಷೇಧಿಸಿಕೊಳ್ಳುತ್ತೀರೋ ಯಾರು ನಿಶ್ಚಯಿಸಿದ ಮಿತಿ ಮೇರೆಗಳ ಒಳಗಿದ್ದು ನೀವು ಕಾರ್ಯ ನಿರ್ವಹಿಸುವಿರೋ, ಯಾರು ನಿಶ್ಚಯಿಸಿದ ನಿಯಮಗಳನ್ನು ನೀವು ಅನುಸರಿಸುವಿರೋ, ಯಾರು ನಿಗದಿಪಡಿಸಿದ ವಿಧಿವಿಧಾನಗಳ ಪ್ರಕಾರ ನೀವು ನಿಮ್ಮ ಸಂಪತ್ತುಗಳನ್ನು ಇತರರಿಗೆ ಕೊಡುವ ಮತ್ತು ಅವರಿಂದ ತೆಗೆದು ಕೊಳ್ಳುವ ವ್ಯವಹಾರಗಳನ್ನು ನಡೆಸುತ್ತಿರುವಿರೋ ಯಾರ ತೀರ್ಪಿಗಾಗಿ ನೀವು ನಿಮ್ಮ ಮೊಕದ್ದಮೆಗಳನ್ನು ಒಯ್ಯುತ್ತೀರೋ ನಿಮ್ಮ ಪರಸ್ಪರ ಸಂಬಂಧಗಳು ಮತ್ತು ಹಕ್ಕು ಬಾಧ್ಯತೆಗಳು ಯಾರ ಶರೀಅತ್‌ನ ಆಧಾರದಲ್ಲಿ ನಿಯಂತ್ರಿಸಲ್ಪಡುತ್ತವೆಯೋ ಮತ್ತು ಯಾರ ಆದೇಶದ ಪ್ರಕಾರ ನೀವು ನಿಮ್ಮ ಶಾರೀರಿಕ ಮತ್ತು ಮಾನಸಿಕ ಸಾಮರ್ಥ್ಯಗಳನ್ನೂ ನಿಮ್ಮ ಸಂಪಾದನೆಯನ್ನೂ ಕೊನೆಗೆ ನಿಮ್ಮ ಜೀವನಗಳನ್ನೂ ಅರ್ಪಿಸಿ ಬಿಡುತ್ತೀರೋ ಅವನೇ ನಿಮ್ಮ ನೈಜ ಆರಾಧ್ಯನಾಗಿರುವನು. ನೀವು ನಿಜಾರ್ಥದಲ್ಲಿ ಅವನ ಇಬಾದತ್ ಅಥವಾ ದಾಸ್ಯ-ಆರಾಧನೆಯನ್ನೇ ಮಾಡುತ್ತಿರುವಿರಿ.

ಈಗ, ಒಂದು ವೇಳೆ ನಿಮ್ಮ ನಂಬಿಕೆ ಒಂದು ವಿಷಯದ ಮೇಲಿದ್ದು ವಾಸ್ತವದಲ್ಲಿ ನೀವು ಮಾಡುತ್ತಿರುವುದು ಅದಕ್ಕೆ ತೀರಾ ತದ್ವಿರುದ್ಧವಾಗಿದ್ದರೆ ಆಗ ಗಣನೆಗೆ ಬರುವುದು ವಾಸ್ತವಿಕತೆಯೇ ಹೊರತು ನಂಬಿಕೆಯಲ್ಲ. ಇಂತಹ ಸನ್ನಿವೇಶದಲ್ಲಿ ನಂಬಿಕೆಗೆ ಯಾವ ಸ್ಥಾನವೂ ಇಲ್ಲ. ಇಂತಹ ನಂಬಿಕೆಗೆ ಬೆಲೆಯೂ ಇರುವುದಿಲ್ಲ. ನೀವು ವಾಸ್ತವದಲ್ಲಿ ದೊರೆಯ ದೀನ್ ಅಥವಾ ಧರ್ಮದಲ್ಲಿದ್ದರೆ ಅದರಲ್ಲಿ ಅಲ್ಲಾಹನ ದೀನ್‌ಗೆ ಯಾವ ಸ್ಥಾನವೂ ಇರಲಾರದು. ನೀವು ವಾಸ್ತವದಲ್ಲಿ ಪ್ರಜಾಸತ್ತಾತ್ಮಕ ಬಹುಸಂಖ್ಯೆಯ ದೀನ್, ಬ್ರಿಟಿಷರ ದೀನ್, ಜರ್ಮನಿಯ ದೀನ್ ಅಥವಾ ನಿಮ್ಮ ದೇಶದ ದೀನನ್ನು ಅನುಸರಿಸುವವರಾಗಿದ್ದರೆ ಈ ದೀನ್‌ಗಳಲ್ಲೂ ಅಲ್ಲಾಹನ ದೀನ್‌ಗೆ ಯಾವುದೇ ಸ್ಥಾನ ಇರಲಾರದು. ಹಾಗೆಯೇ ನೀವು ವಾಸ್ತವದಲ್ಲಿ ಅಲ್ಲಾಹನ ದೀನ್‌ನಲ್ಲಿ ಇರುವವರಾಗಿದ್ದರೆ ಇದರಲ್ಲೂ ಬೇರೆ ದೀನ್‌ಗಳಿಗೆ ಯಾವುದೇ ಅವಕಾಶವಿರಲು ಸಾಧ್ಯವಿಲ್ಲ. ಶಿರ್ಕ್ ಎಲ್ಲೇ ಇದ್ದರೂ ಅದು ಸುಳ್ಳು ಮತ್ತು ಮಿಥ್ಯವೇ ಆಗಿರುವುದು ಎಂಬ ಅಂಶವನ್ನು ಇಲ್ಲಿ ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು.

ಎಲ್ಲ ಧರ್ಮಗಳೂ ತನ್ನ ಅಧಿಕಾರವನ್ನು ಸ್ಥಾಪಿಸ ಬಯಸುತ್ತದೆ

ಪ್ರಸ್ತುತ ವಿಷಯವನ್ನು ಮನನ ಮಾಡಿಕೊಂಡ ಬಳಿಕ ನೀವು ಸುಲಭವಾಗಿ ಧರ್ಮ ಯಾವುದೇ ಆಗಿದ್ದರೂ ಅದು ತನ್ನದೇ ಆಡಳಿತ ಅಥವಾ ಸರಕಾರವನ್ನು ಸ್ಥಾಪಿಸಬಯಸುತ್ತದೆ ಎಂಬ ತೀರ್ಮಾನಕ್ಕೆ ಬರಬಹುದು. ಇದಕ್ಕೆ ಯಾವುದೇ ದೀರ್ಘ ಚರ್ಚೆ ಅಥವಾ ವಾದದ ಅಗತ್ಯ ಉಳಿಯುವುದಿಲ್ಲ. ಪ್ರಜಾಸತ್ತೆಯ ಧರ್ಮವಿರಲಿ, ದೊರೆಗಳ ಧರ್ಮವಿರಲಿ, ಸಮಾಜವಾದಿ ಧರ್ಮವಿರಲಿ, ದೇವದತ್ತ ಧರ್ಮವಿರಲಿ ಅಥವಾ ಇನ್ನಾವುದೇ ಧರ್ಮವಿರಲಿ ಪ್ರತಿಯೊಂದು ಧರ್ಮವೂ ತಾನು ಸ್ಥಾಪಿತವಾಗಬೇಕಿದ್ದರೆ ಅದಕ್ಕೆ ತನ್ನದೇ ಆದ ಸರಕಾರ ಮತ್ತು ಆಡಳಿತದ ಅಗತ್ಯವಿರುತ್ತದೆ. ಧರ್ಮದ ಬಳಿ ಸರಕಾರ ಇಲ್ಲದೆ ಇರುವಾಗ ಅದರ ಅವಸ್ಥೆಯು, ನೆಲದ ಮೇಲೆ ಅಸ್ತಿತ್ವದಲ್ಲಿಲ್ಲದ ಆದರೂ ನಿಮ್ಮ ಮನಸ್ಸಿನಲ್ಲಿರುವ ಕೇವಲ ಒಂದು ಕಾಲ್ಪನಿಕ ಕಟ್ಟಡದ ನಕಾಶೆಯಂತಿರುತ್ತದೆ. ನೀವು ನಿಜವಾಗಿ ಅಸ್ತಿತ್ವದಲ್ಲಿರುವ ಒಂದು ಕಟ್ಟಡದಲ್ಲಿ ವಾಸಿಸುತ್ತಿದ್ದೀರಿ, ಅದರ ಬಾಗಿಲುಗಳಿಂದಲೇ ಒಳ ಪ್ರವೇಶಿಸಿ ಅದರಿಂದಲೇ ಹೊರ ಬರುತ್ತೀರಿ. ಅದರ ಗೋಡೆ ಮತ್ತು ಚಪ್ಪರಗಳ ಆಶ್ರಯದಲ್ಲೇ ನೀವು ಬದುಕುತ್ತಿದ್ದೀರಿ. ನೀವು ನಿಮ್ಮ ವಾಸ್ತವ್ಯವನ್ನು ಆ ನೈಜ ಕಟ್ಟಡದ ನಕಾಶೆಗೆ ಅನುಗುಣವಾಗಿಯೇ ರೂಪಿಸಿಕೊಳ್ಳಬೇಕಾಗುತ್ತದೆ. ಹೀಗಿರುತ್ತಾ ಆ ಕಾಲ್ಪನಿಕ ನಕಾಶೆಯಿಂದ ಪ್ರಯೋಜನವೇನು? ನೀವು ಒಂದು ನಿರ್ದಿಷ್ಟ ನಕಾಶೆಯ ಕಟ್ಟಡದೊಳಗೆ ಬದುಕುತ್ತಿರುವಾಗ ಬೇರೊಂದು ಬಗೆಯ ನಕಾಶೆ ನಿಮ್ಮ ಮನಸ್ಸಿನಲ್ಲಿದ್ದರೆ ಅಥವಾ ಆ ಬಗ್ಗೆ ನಿಮಗೆ ಶ್ರದ್ಧೆ ಇದ್ದರೆ ಅದರಿಂದ ಲಾಭವೇನು? ಆ ಕಾಲ್ಪನಿಕ ನಕಾಶೆಯು ನಿಮ್ಮ ಮನಸ್ಸಿಗೇ ಸೀಮಿತವಾಗಿರುವುದು. ನೀವಂತೂ ವಾಸ್ತವದಲ್ಲಿ ಭೂಮಿಯ ಮೇಲಿರುವ ನೈಜ ಕಟ್ಟಡದಲ್ಲೇ ವಾಸಿಸುತ್ತಲಿರುತ್ತೀರಿ. ಕಟ್ಟಡ ಎಂಬ ಶಬ್ದವು ನಿಮ್ಮ ಮನಸ್ಸಿನಲ್ಲಿರುವ ಆ ಕಾಲ್ಪನಿಕ ನಕಾಶೆಗೆ ಅನ್ವಯಿಸುವುದಿಲ್ಲ. ಅಂತಹ ಕಟ್ಟಡದಲ್ಲಿ ಯಾರಿಗೂ ವಾಸಿಸಲು ಸಾಧ್ಯವಿಲ್ಲ. ಯಾವುದರ ತಳಪಾಯವು ಭೂಮಿಯಲ್ಲಿದೆಯೋ ಮತ್ತು ಯಾವುದರ ಗೋಡೆ, ಚಪ್ಪರ ಇತ್ಯಾದಿಗಳು ಭೂಮಿಯ ಮೇಲೆ ನಿರ್ಮಿತವಾಗಿವೆಯೋ ಅಂತಹ ಕಟ್ಟಡವನ್ನು ಮಾತ್ರ ಜನರು ಕಟ್ಟಡವೆಂದು ಕರೆಯುತ್ತಾರೆ. ಅಂತಹ ಕಟ್ಟಡದೊಳಗೆ ಮಾತ್ರ ಜನರಿಗೆ ವಾಸಿಸಲು ಸಾಧ್ಯವಾಗುತ್ತದೆ.

ಇದೇ ರೀತಿ ಒಂದು ಧರ್ಮವು ಸತ್ಯವೆಂದು ಕೇವಲ ನಂಬಿಕೆ ಇಟ್ಟುಕೊಳ್ಳುವುದಕ್ಕೆ ಯಾವ ಅರ್ಥವೂ ಇಲ್ಲ. ಜನರು ಪ್ರಾಯೋಗಿಕವಾಗಿ ಬೇರೊಂದು ಧರ್ಮದಲ್ಲಿದ್ದು ಅದರ ಪ್ರಕಾರ ಜೀವನ ಸಾಗಿಸುತ್ತಿರುವಾಗ ಒಂದು ಧರ್ಮದ ಮೇಲೆ ಕೇವಲ ನಂಬಿಕೆ ಇದೆ ಎಂದು ಹೇಳುವುದರಿಂದ ಯಾವ ಪ್ರಯೋಜನವೂ ಇಲ್ಲ. ಯಾವ ರೀತಿ ಕಾಲ್ಪನಿಕ ನಕಾಶೆಯನ್ನು ಕಟ್ಟಡವೆಂದು ಕರೆಯುವಂತಿಲ್ಲವೋ ಹಾಗೆಯೇ ಕಾಲ್ಪನಿಕ ದೀನ್ ಅಥವಾ ಧರ್ಮವನ್ನು ಧರ್ಮವೆಂದು ಕರೆಯುವಂತಿಲ್ಲ. ಯಾವ ರೀತಿ ಕಾಲ್ಪನಿಕ ಕಟ್ಟಡದೊಳಗೆ ಯಾರಿಗೂ ವಾಸಿಸಲು ಸಾಧ್ಯವಿಲ್ಲವೋ ಹಾಗೆಯೇ ಒಂದು ಕಾಲ್ಪನಿಕ ಧರ್ಮದೊಳಗೂ ಯಾರಿಗೂ ಬದುಕಲು ಸಾಧ್ಯವಿಲ್ಲ. ಭೂಮಿಯಲ್ಲಿ ಯಾವ ವ್ಯವಸ್ಥೆ ಅಧಿಕಾರ ಸ್ಥಾಪಿಸಿಕೊಂಡಿದೆಯೋ,

ಯಾರ ಕಾನೂನು ಜಾರಿಯಲ್ಲಿದೆಯೋ, ಯಾರ ನಿಯಮಗಳ ಪ್ರಕಾರ ಜೀವನದ ವ್ಯವಸ್ಥಾಪನೆ ನಡೆಯುತ್ತಿದೆಯೋ ಅದುವೇ ದೀನ್ ಅಥವಾ ಧರ್ಮವಾಗಿದೆ. ಆದ್ದರಿಂದಲೇ ಪ್ರತಿಯೊಂದು ಧರ್ಮವು ತನ್ನ ಸಾಕ್ಷಾತ್ ಪ್ರಕೃತಿಗನುಗುಣವಾಗಿ ತನ್ನದೇ ಆದ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸ ಬಯಸುತ್ತದೆ. ನಿಜವಾಗಿ ಧರ್ಮವು ಇರುವುದೇ ಅದು ಯಾರ ಆಧಿಪತ್ಯವನ್ನು ಜಗತ್ತು ಅಂಗೀಕರಿಸಬೇಕೆಂದು ಬಯಸುತ್ತದೋ, ಜಗತ್ತಿನಲ್ಲಿ ಆತನ ಇಬಾದತ್(ದಾಸ್ಯ-ಆರಾಧನೆ) ಮಾತ್ರ ನಡೆಯಬೇಕು ಮತ್ತು ಆತನ ಶರೀಅತ್ (ಕಾನೂನು-ನಿಯಮ) ಮಾತ್ರವೇ ಅನುಷ್ಠಾನದಲ್ಲಿರಬೇಕು ಎಂಬುದನ್ನು ಪ್ರತಿಪಾದಿಸಲಿಕ್ಕಾಗಿ.

ಕೆಲವು ಉದಾಹರಣೆಗಳು

ಪ್ರಜಾಸತ್ತೆಯ ದೀನ್

ಪ್ರಜಾಸತ್ತೆಯ ದೀನ್ ಅಥವಾ ಧರ್ಮದ ತಾತ್ಪರ್ಯವೇನು? ಒಂದು ರಾಷ್ಟ್ರದ ಜನತೆ ತಾವೇ ತಮ್ಮ ಪ್ರಭುಗಳಾಗಿರಬೇಕು, ಅವರು ನಿರ್ಮಿಸುವ ಕಾನೂನುಗಳನ್ನೇ ಅವರ ಮೇಲೆ ಜಾರಿಗೊಳಿಸಬೇಕು ಮತ್ತು ರಾಷ್ಟ್ರದ ಎಲ್ಲ ಪ್ರಜೆಗಳು ತಮ್ಮ ಪ್ರಜಾಸತ್ತಾತ್ಮಕ ಆಡಳಿತದ ಆಜ್ಞಾನುಸಾರಿಗಳಾಗಿರಬೇಕು ಎಂಬುದೇ ಅಲ್ಲವೇ? ಒಂದು ಪ್ರಜಾಸತ್ತಾತ್ಮಕ ಸರಕಾರವು ಅಧಿಕಾರ ವಹಿಸಿಕೊಂಡು ಪ್ರಜಾಸತ್ತಾತ್ಮಕ ಕಾನೂನುಗಳು ಅನುಷ್ಠಾನಗೊಳ್ಳುವ ತನಕ ಈ ಪ್ರಜಾಸತ್ತಾತ್ಮಕ ಧರ್ಮವು ಎಲ್ಲಾದರೂ ಸ್ಥಾಪಿತವಾಗಲು ಸಾಧ್ಯವೇ? ಒಂದು ರಾಷ್ಟ್ರದಲ್ಲಿ ಅಲ್ಲಿಯ ಬಹುಸಂಖ್ಯಾತ ಪ್ರಜೆಗಳ ಬದಲು ಬೇರೊಂದು ರಾಷ್ಟ್ರದವರು ಅಥವಾ ಒಬ್ಬ ದೊರೆ ಬಂದು ಅಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿಕೊಂಡು ತನ್ನ ಕಾನೂನುಗಳನ್ನು ಅಲ್ಲಿ ಜಾರಿಗೊಳಿಸಿದರೆ ಮತ್ತೆ ಅಲ್ಲಿ ಪ್ರಜಾಸತ್ತೆಯ ಧರ್ಮ ಉಳಿಯುತ್ತದೆಯೇ? ಇಂತಹ ಸ್ಥಳದಲ್ಲಿ ಯಾರಾದರೊಬ್ಬನು ತನ್ನ ಮನಸ್ಸಿನೊಳಗೆ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಇಟ್ಟುಕೊಳ್ಳಬಹುದು. ಆದರೆ ಅಲ್ಲಿ ಬೇರೊಂದು ದೇಶದ ಅಥವಾ ಒಬ್ಬ ದೊರೆಯ ಆಡಳಿತವು ಅಸ್ತಿತ್ವದಲ್ಲಿರುವ ತನಕ ಆ ವ್ಯಕ್ತಿಗೆ ಪ್ರಜಾಸತ್ತೆಯ ನಿಯಮಗಳನ್ನು ಅನುಸರಿಸಲು ಖಂಡಿತ ಸಾಧ್ಯವಾಗುವುದಿಲ್ಲ.

ರಾಜಾಳ್ವಿಕೆಯ ದೀನ್

ಇನ್ನು ನಾವು ರಾಜಾಳ್ವಿಕೆಯ ದೀನ್ ಅಥವಾ ದೊರೆಯ ಧರ್ಮವನ್ನು ತೆಗೆದು ಕೊಳ್ಳೋಣ. ಈ ದೀನ್ ಅಥವಾ ವ್ಯವಸ್ಥೆಯು ಒಬ್ಬ ದೊರೆಯನ್ನು ಪರಮೋಚ್ಚ ಆಡಳಿತಾಧಿಕಾರಿಯೆಂದು ಘೋಷಿಸುವುದು, ಎಲ್ಲರೂ ಅವನ ಆಜ್ಞಾಪಾಲನೆ ಮತ್ತು ಅನುಸರಣೆಯನ್ನೇ ಮಾಡಬೇಕು ಹಾಗೂ ಅವನ ಶರೀಅತ್ ಅಥವಾ ಕಾನೂನು-ನಿಯಮಗಳೇ ಅನುಷ್ಠಾನವಾಗಬೇಕು ಎಂಬ

ಉದ್ದೇಶದಿಂದಲ್ಲವೇ? ಹಾಗಲ್ಲದಿದ್ದರೆ ದೊರೆಯನ್ನು ದೊರೆಯೆಂದು ಮತ್ತು ಅವನೇ ಪರಮೋಚ್ಚ ಆಡಳಿತಾಧಿಕಾರಿಯೆಂದು ಅಂಗೀಕರಿಸುವುದಕ್ಕೆ ಅರ್ಥವೇನಿದೆ? ನಾಡಿನಲ್ಲಿ ಪ್ರಜಾಸತ್ತಾತ್ಮಕ ದೀನ್ ಅಥವಾ ವ್ಯವಸ್ಥೆಯು ಅಸ್ತಿತ್ವದಲ್ಲಿರುವಾಗ ಅಥವಾ ಬೇರೆ ಯಾವುದಾದರೂ ವ್ಯವಸ್ಥೆಯ ಸರಕಾರ ಅಧಿಕಾರದಲ್ಲಿರುವಾಗ ದೊರೆಯ ಧರ್ಮ ಅಲ್ಲಿ ಅಸ್ತಿತ್ವದಲ್ಲಿರಲು ಮತ್ತು ಯಾರಾದರೂ ದೊರೆಯ ಧರ್ಮವನ್ನು ಅನುಸರಿಸಲು ಹೇಗೆ ತಾನೇ ಸಾಧ್ಯ?

ಬ್ರಿಟಿಷರ ದೀನ್

ದೂರ ಹೋಗಬೇಕಾಗಿಲ್ಲ. ಸದ್ಯ ಭಾರತದ ದೀನ್ ಆಗಿರುವ ಬ್ರಿಟಿಷರ ದೀನನ್ನೇ ನೋಡಿಕೊಳ್ಳಿರಿ.* ಈ ದೀನ್ ಇಲ್ಲಿ ನಡೆಯುತ್ತಿರುವುದು ಇಲ್ಲಿ ಬ್ರಿಟಿಷರ ಬಲದಿಂದ ಅವರು ಮೆಚ್ಚುವ ದಂಡಸಂಹಿತೆ ಮತ್ತು ಪೌರ ಸಂಹಿತೆಗಳು ಅನುಷ್ಠಾನದಲ್ಲಿವೆ, ನಿಮ್ಮ ಜೀವನದ ವ್ಯವಹಾರಗಳೆಲ್ಲವೂ ಬ್ರಿಟಿಷರು ನಿಗದಿಪಡಿಸಿದ ನಿಯಮಗಳ ಪ್ರಕಾರ ನಡೆಯುತ್ತಿವೆ ಮತ್ತು ನೀವೆಲ್ಲಾ ಬ್ರಿಟಿಷ್ ಸರಕಾರದ ಆದೇಶಗಳನ್ನು ಶಿರಸಾ ವಹಿಸುತ್ತಿರುವಿರಿ ಎಂಬ ಕಾರಣದಿಂದಲೇ ಅಲ್ಲವೇ? ಈ ದೀನ್, ಧರ್ಮ ಅಥವಾ ವ್ಯವಸ್ಥೆಯು ಇಷ್ಟು ಪರಿಣಾಮಕಾರಿಯಾಗಿ ಅನುಷ್ಠಾನದಲ್ಲಿರುವ ತನಕ ನೀವು ವ್ಯಕ್ತಿಗತವಾಗಿ ಬೇರೆ ಯಾವ ವ್ಯವಸ್ಥೆಯ ಮೇಲೆ ನಂಬಿಕೆಯುಳ್ಳವರಾಗಿದ್ದರೂ ಆ ವ್ಯವಸ್ಥೆ ಅಥವಾ ದೀನ್‌ಗೆ ಇಲ್ಲಿ ಯಾವ ಸ್ಥಾನವೂ ಇರುವುದಿಲ್ಲ. ಇನ್ನು ಒಂದು ವೇಳೆ ಇಲ್ಲಿ ಪ್ರಚಲಿತ ದಂಡಸಂಹಿತೆ, ಪೌರಸಂಹಿತೆಗಳೆಲ್ಲಾ ಇಲ್ಲವಾಗಿ, ಬ್ರಿಟಿಷರ ಆಜ್ಞಾಪಾಲನೆಯೂ ನಿಂತು ಹೋದರೆ ಆ ಬಳಿಕ ಇಲ್ಲಿ ಬ್ರಿಟಿಷರ ದೀನ್ ಜಾರಿಯಲ್ಲಿದೆ ಎನ್ನುವುದಕ್ಕೆ ಯಾವ ಅರ್ಥ ತಾನೇ ಉಳಿದೀತು?

ಇಸ್ಲಾಮ್ ದೀನ್ (ಧರ್ಮ)

ಇಸ್ಲಾಮ್ ಎಂಬ ದೀನ್ ಅಥವಾ ಧರ್ಮದ ಸಂಗತಿಯೂ ಇಷ್ಟೇ. ಕೇವಲ ಅಲ್ಲಾಹನೊಬ್ಬನೇ ಭೂಮಿಯ ಮಾಲಕ ಮತ್ತು ಮಾನವರ ನೈಜ ಆಡಳಿತಗಾರ. ಆದ್ದರಿಂದ ಕೇವಲ ಅವನೊಬ್ಬನ ದಾಸ್ಯ ಮತ್ತು ಆರಾಧನೆಯೇ ನಡೆಯಬೇಕು ಮತ್ತು ಮಾನವ ಜೀವನದ ಎಲ್ಲ ವ್ಯವಹಾರಗಳು ಅವನ ಶರೀಅತ್‌ನ ಪ್ರಕಾರವೇ ನಿಯಂತ್ರಿಸಲ್ಪಡಬೇಕು ಎಂಬುದು ಈ ಧರ್ಮದ ಮೂಲ ಆಶಯ. ಅಲ್ಲಾಹನೇ ಸಾರ್ವಭೌಮನೆಂಬ ಈ ಮೂಲತತ್ವವನ್ನು ಮುಂದಿಡುವ ಮೂಲಕ ಇಸ್ಲಾಮ್ ಧರ್ಮವು ಸಾಧಿಸ ಬಯಸುವ ಉದ್ದೇಶವೂ- ಭೂಮಿಯಲ್ಲಿ ಕೇವಲ ಅಲ್ಲಾಹನ ಅಧಿಕಾರ ನಡೆಯಬೇಕು, ನ್ಯಾಯಾಲಯಗಳಲ್ಲಿ ಅವನ ಶರೀಅತ್‌ನ ಪ್ರಕಾರವೇ ತೀರ್ಪುಗಳಾಗಬೇಕು, ಪೊಲೀಸರು ಅವನ ಆದೇಶಗಳನ್ನೇ ಜಾರಿಗೊಳಿಸಬೇಕು, ವ್ಯಾಪಾರ ವ್ಯವಹಾರಗಳಲ್ಲೂ ಅವನ ಧರ್ಮದ ನಿಯಮಗಳೇ ಪಾಲಿಸಲ್ಪಡಬೇಕು, ಅವನು

*ಇವು ಸ್ವಾತಂತ್ರ್ಯ ಪೂರ್ವದಲ್ಲಿ ಹೇಳಿದ ಮಾತುಗಳು - ಅನು.

ಇಚ್ಛಿಸುವ ಪ್ರಕಾರವೇ ತೆರಿಗೆಗಳು ಸಂಗ್ರಹಿಸಲ್ಪಡಬೇಕು, ಅವನು ನಿಗದಿಪಡಿಸಿರುವಂತಹ ವಿಧಾನಗಳಲ್ಲೇ ಈ ಆದಾಯವು ವ್ಯಯಿಸಲ್ಪಡಬೇಕು. ಸಿವಿಲ್ ಸರ್ವಿಸ್ ಮತ್ತು ಸೇನಾ ಪಡೆಗಳು ಕೂಡಾ ಅವನ ಧರ್ಮದ ಆದೇಶಗಳಿಗೆ ಬದ್ಧವಾಗಿರಬೇಕು, ಜನರಿಗೆ ಕೇವಲ ಅವನೊಬ್ಬನ ಭಯ ಮಾತ್ರ ಇರಬೇಕು, ಒಟ್ಟಿನಲ್ಲಿ ಜನರು ಅವನ ಹೊರತು ಬೇರೆ ಯಾರ ದಾಸರೂ ಆಗಿರಬಾರದು- ಎಂಬುದೇ ಆಗಿದೆ. ಅಪ್ಪಟ ದೇವ ಪ್ರಧಾನ ಸರಕಾರ ನಿರ್ಮಾಣ ವಾಗುವವರೆಗೂ ಈ ಉದ್ದೇಶವು ಈಡೇರಲಾರದೆಂಬುದು ವ್ಯಕ್ತ. ಈ ಧರ್ಮ ಅಥವಾ ವ್ಯವಸ್ಥೆಯು ಬೇರಾವುದೇ ಧರ್ಮದೊಂದಿಗೆ ಸಹಭಾಗಿತ್ವವನ್ನು ಸಮ್ಮತಿಸುವುದಿಲ್ಲ. ಯಾವ ಧರ್ಮ ತಾನೇ ಬೇರೊಂದು ಧರ್ಮದೊಂದಿಗೆ ಸಹಭಾಗಿತ್ವವನ್ನು ಒಪ್ಪಿಕೊಂಡೀತು? ಬೇರೆಲ್ಲಾ ದೀನ್, ಧರ್ಮ ಅಥವಾ ವ್ಯವಸ್ಥೆಗಳಂತೆ ಈ ದೀನ್ ಕೂಡಾ ಆಡಳಿತಾಧಿಕಾರವು ಕೇವಲ ನನ್ನದಾಗಿರಬೇಕು, ಅನ್ಯ ದೀನ್‌ಗಳೆಲ್ಲಾ ನನಗೆ ಅಧೀನವಾಗಿರಬೇಕು, ಅನ್ಯಥಾ ನನ್ನ ಯಥಾರ್ಥ ಅನುಸರಣೆ ಮಾಡಲು ಜನರಿಗೆ ಸಾಧ್ಯವಾಗದು. ನಾನಿದ್ದಲ್ಲಿ ಪ್ರಜಾಸತ್ತೆಯ ದೀನ್ ಇರಬಾರದು, ರಾಜ ಮಹಾರಾಜರ ದೀನ್ ಇರಬಾರದು, ಸಮಾಜವಾದೀ ದೀನ್ ಇರಬಾರದು ಮಾತ್ರವಲ್ಲ ಬೇರೆ ಯಾವ ದೀನ್ ಕೂಡಾ ಇರಬಾರದು. ಬೇರೆ ದೀನ್‌ಗಳಿದ್ದಲ್ಲಿ ನಾನು ಇರಲಾರೆ. ಬೇರೆ ದೀನ್‌ಗಳಿರುವಲ್ಲಿ ನನ್ನನ್ನು ಕೇವಲ ಸತ್ಯವೆಂದು ಒಪ್ಪುವುದರಿಂದ ಯಾವ ಪುರುಷಾರ್ಥವನ್ನೂ ಸಾಧಿಸಿದಂತಾಗುವುದಿಲ್ಲ- ಎಂದು ಘೋಷಿಸುತ್ತದೆ. ಇದನ್ನೇ ಪವಿತ್ರ ಕುರ್‌ಆನ್ ಪದೇಪದೇ ಪುನರಾವರ್ತಿಸುತ್ತದೆ. ಉದಾ:

وَمَآ أُمِرُوٓا۟ إِلَّا لِيَعْبُدُوا۟ ٱللَّهَ مُخْلِصِينَ لَهُ ٱلدِّينَ حُنَفَآءَ

"ಅವರಿಗೆ ನೀಡಲಾಗಿದ್ದ ಆದೇಶವು- ಅವರು ತಮ್ಮ ಧರ್ಮವನ್ನು ನಿಷ್ಕಳಂಕವಾಗಿ ಅಲ್ಲಾಹನಿಗೆ ಮಾತ್ರ ಮೀಸಲಾಗಿಟ್ಟು ಏಕನಿಷ್ಠೆಯಿಂದ ಅಲ್ಲಾಹನ ದಾಸ್ಯ ಮಾಡಬೇಕು, ಎಂದಲ್ಲದೆ ಬೇರೇನನ್ನೂ ಆದೇಶಿಸಲಾಗಿಲ್ಲ." (ಅಲ್ ಬಯ್ಯಿನಃ: 5)

هُوَ ٱلَّذِىٓ أَرْسَلَ رَسُولَهُۥ بِٱلْهُدَىٰ وَدِينِ ٱلْحَقِّ لِيُظْهِرَهُۥ عَلَى ٱلدِّينِ

كُلِّهِۦ وَلَوْ كَرِهَ ٱلْمُشْرِكُونَ ﴿٣٣﴾

"ತನ್ನ ರಸೂಲರನ್ನು ಸನ್ಮಾರ್ಗ ಮತ್ತು ಸತ್ಯಧರ್ಮದೊಂದಿಗೆ ಕಳುಹಿಸಿದಾತನು ಅಲ್ಲಾಹನೇ. (ಇದು) ಅದನ್ನು ಸಕಲ ಧರ್ಮಗಳ ಮೇಲೆ ಉತ್ಥಾನಗೊಳಿಸಲಿಕ್ಕಾಗಿ. 'ಬಹುದೇವ ವಿಶ್ವಾಸಿ'ಗಳಿಗೆ ಇದು ಎಷ್ಟೇ ಅಪ್ರಿಯವಾಗಿರಲಿ." (ಅತ್ತೌಬಃ: 33)

وَقَٰتِلُوهُمْ حَتَّىٰ لَا تَكُونَ فِتْنَةٌ وَيَكُونَ ٱلدِّينُ كُلُّهُۥ لِلَّهِ

"ಓ ಸತ್ಯವಿಶ್ವಾಸಿಗಳೇ, 'ಫಿತ್ನ'(ಕ್ಷೋಭೆ) ಅಳಿದು ಹೋಗುವ ವರೆಗೂ 'ಧರ್ಮ'(ದೀನ್)

ಸರ್ವಸಂಪೂರ್ಣವಾಗಿ ಅಲ್ಲಾಹನಿಗಾಗಿ ಆಗುವವರೆಗೂ ಈ ಸತ್ಯನಿಷೇಧಿಗಳೊಡನೆ ಹೋರಾಡಿರಿ." (ಅಲ್ ಅನ್‌ಫಾಲ್: 39)

إِنِ الْحُكْمُ إِلَّا لِلَّهِ ۚ أَمَرَ أَلَّا تَعْبُدُوا إِلَّا إِيَّاهُ ۚ

"ಆಜ್ಞಾಧಿಕಾರವು ಅಲ್ಲಾಹನಿಗೆ ಹೊರತು ಇನ್ನಾರಿಗೂ ಇಲ್ಲ. ಅವನ ಹೊರತು ನೀವು ಯಾರ ಇಬಾದತನ್ನೂ (ದಾಸ್ಯ-ಆರಾಧನೆಯನ್ನೂ) ಮಾಡಬಾರದೆಂದು ಅವನ ಕಟ್ಟಪ್ಪಣೆ ಇದೆ." (ಯೂಸುಫ್: 40)

فَمَنْ كَانَ يَرْجُوا لِقَاءَ رَبِّهِ فَلْيَعْمَلْ عَمَلًا صَالِحًا وَلَا يُشْرِكْ بِعِبَادَةِ رَبِّهِ أَحَدًا ﴿١١٠﴾

"ತನ್ನ ಪ್ರಭುವನ್ನು ಭೇಟಿಯಾಗಲಿಕ್ಕಿದೆಯೆಂದು ನಿರೀಕ್ಷಿಸುವಾತನು ಸತ್ಕರ್ಮ ಗಳನ್ನು ಮಾಡಲಿ ಮತ್ತು ತನ್ನ ಪ್ರಭುವಿನ ಇಬಾದತ್‌ನಲ್ಲಿ ಬೇರಾರನ್ನೂ ಸಹಭಾಗಿಗಳಾಗಿ ಮಾಡದಿರಲಿ." (ಅಲ್‌ಕಹ್ಫ್: 110)

أَلَمْ تَرَ إِلَى الَّذِينَ يَزْعُمُونَ أَنَّهُمْ آمَنُوا بِمَا أُنْزِلَ إِلَيْكَ وَمَا أُنْزِلَ مِنْ قَبْلِكَ يُرِيدُونَ أَنْ يَتَحَاكَمُوا إِلَى الطَّاغُوتِ وَقَدْ أُمِرُوا أَنْ يَكْفُرُوا بِهِ ۖ .... وَمَا أَرْسَلْنَا مِنْ رَسُولٍ إِلَّا لِيُطَاعَ بِإِذْنِ اللَّهِ ۚ

"ನಿಮ್ಮ ಮೇಲೆ ಅವತೀರ್ಣಗೊಳಿಸಲ್ಪಟ್ಟ ಗ್ರಂಥದ ಮೇಲೂ ನಿಮಗಿಂತ ಮೊದಲು ಅವತೀರ್ಣಗೊಳಿಸಲ್ಪಟ್ಟ ಗ್ರಂಥಗಳ ಮೇಲೂ ನಾವು ವಿಶ್ವಾಸವಿಟ್ಟವೆಂದು ಕಂಠೋಕ್ತ ವಾದಿಸುವವರನ್ನು ನೀವು ನೋಡಿಲ್ಲವೇ? ಆದರೆ ಅವರು ತಮ್ಮ ವ್ಯವಹಾರಗಳ ತೀರ್ಮಾನ ಮಾಡಿಸಲು 'ತಾಗೂತ'ನ್ನು ಸಮೀಪಿಸುತ್ತಾರೆ. ವಸ್ತುತಃ ಅವರಿಗೆ ತಾಗೂತನ್ನು ನಿರಾಕರಿಸಲು ಆಜ್ಞಾಪಿಸಲಾಗಿತ್ತು.............. ನಾವು ಪ್ರತಿಯೊಬ್ಬ ಸಂದೇಶವಾಹಕನನ್ನೂ ಅಲ್ಲಾಹನ ಆಜ್ಞೆಪ್ರಕಾರ ಅನುಸರಿಸಲ್ಪಡಲಿಕ್ಕಾಗಿಯೇ ಕಳುಹಿಸಿರುತ್ತೇವೆ."

(ಅನ್ನಿಸಾ: 60-64)

ಈಗಾಗಲೇ ಇಬಾದತ್, ದೀನ್ ಮತ್ತು ಶಿರ್ಕ್ ಎಂಬ ಪದಗಳಿಗೆ ನಾನು ನೀಡಿರುವ ವಿವರಣೆಯು ನಿಮ್ಮ ಗಮನದಲ್ಲಿದ್ದರೆ, ಪ್ರಸ್ತುತ ವಾಕ್ಯಗಳ ಮೂಲಕ ಪವಿತ್ರ ಕುರ್‌ಆನ್ ಸಾರುತ್ತಿರುವುದೇನು ಎಂಬುದನ್ನು ಗ್ರಹಿಸಲು ನಿಮಗೇನೂ ಕಷ್ಟವಾಗದು.

ಇಸ್ಲಾಮಿನಲ್ಲಿ ಜಿಹಾದ್‌ನ ಮಹತ್ವ

ಇದರಿಂದ, ಇಸ್ಲಾಮ್ ಧರ್ಮದಲ್ಲಿ ಜಿಹಾದ್‌ಗೆ ಇಷ್ಟು ಹೆಚ್ಚು ಮಹತ್ವವನ್ನು ಏಕೆ ನೀಡಲಾಗಿದೆ ಎಂಬುದು ಬಹಳ ಸ್ಪಷ್ಟವಾದಂತಾಯಿತು. ಇತರೆಲ್ಲ ಧರ್ಮಗಳಂತೆ ಅಲ್ಲಾಹನ ಧರ್ಮವು ನೀವು ಕೇವಲ ಅದು ಸತ್ಯವೆಂದು ಒಪ್ಪಿದ ಮಾತ್ರಕ್ಕೆ ಮತ್ತು ನಿಮ್ಮ ನಂಬಿಕೆಯ ಸಂಕೇತವಾಗಿ ಕೆಲವು ಔಪಚಾರಿಕ ಪೂಜೆ ಪುರಸ್ಕಾರಗಳನ್ನು ನೆರವೇರಿಸಿದ ಮಾತ್ರಕ್ಕೆ ತೃಪ್ತಿ ಪಡುವುದಿಲ್ಲ. ನಿಜವಾಗಿ ನೀವು ಬೇರಾವುದಾದರೂ ದೀನ್ ಅಥವಾ ವ್ಯವಸ್ಥೆಯ ಅಧೀನದಲ್ಲಿದ್ದು ಈ ದೀನ್‌ನ ಅನುಸರಣೆ ಮಾಡಲು ಸಾಧ್ಯವೇ ಇಲ್ಲ. ಹಾಗೆಯೇ ಬೇರೆ ಯಾವುದಾದರೂ ದೀನ್‌ನ ಸಹಭಾಗಿತ್ವದಲ್ಲಿದ್ದುಕೊಂಡೂ ನೀವು ಈ ದೀನನ್ನು ಅನುಸರಿಸುವಂತಿಲ್ಲ. ಆದ್ದರಿಂದ ನೀವು ನಿಜಕ್ಕೂ ಈ ಧರ್ಮವು ಸತ್ಯವೆಂದು ನಂಬುವವರಾಗಿದ್ದರೆ ಈ ಧರ್ಮವನ್ನು ಈ ಭೂಮಿಯಲ್ಲಿ ಸ್ಥಾಪಿಸಲಿಕ್ಕಾಗಿ ನಿಮ್ಮ ಸರ್ವಸ್ವವನ್ನೂ ಮುಡಿಪಾಗಿಟ್ಟು ಹೋರಾಡುವುದು ಮತ್ತು ಹೀಗೆ ಹೋರಾಡಿ ಈ ಧರ್ಮವನ್ನು ನಿಜವಾಗಿಯೂ ಸ್ಥಾಪಿಸುವುದು ಅಥವಾ ಈ ನಿಟ್ಟಿನಲ್ಲಿ ಹೋರಾಡುತ್ತಲೇ ಪ್ರಾಣ ಬಿಡುವುದರ ಹೊರತು ನಿಮಗೆ ಬೇರೆ ಯಾವ ಮಾರ್ಗೋಪಾಯವೂ ಇಲ್ಲ. ನೀವು ಹೇಳಿಕೊಳ್ಳುವಂತಹ ಧರ್ಮವಿಶ್ವಾಸ ನಿಜಕ್ಕೂ ನಿಮ್ಮಲ್ಲಿ ಇದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಲಿಕ್ಕಿರುವ ಮಾನದಂಡವೂ ಇದುವೇ. ನಿಮ್ಮ ವಿಶ್ವಾಸವು ನೈಜವಾಗಿದ್ದರೆ ನೀವು ಅನ್ಯ ದೀನ್‌ಗಳ ಅಧೀನದಲ್ಲಿ ಬದುಕುತ್ತಿರುವಾಗ ಆ ದೀನ್‌ಗಳಿಗೆ ಸೇವೆ ಸಲ್ಲಿಸುತ್ತಾ ಅದರಿಂದ ಸಂಪಾದಿಸುವ ಅನ್ನವನ್ನು ಆಸ್ವದಿಸುತ್ತಾ ಆರಾಮವಾಗಿ ಬಾಳುವುದಂತೂ ಹಾಗಿರಲಿ, ನಿಮಗೆ ಅದರಡಿಯಲ್ಲಿ ಒಂದು ದಿನದ ಮಟ್ಟಿಗೂ ನೆಮ್ಮದಿಯ ನಿದ್ದೆ ಬರಲಾರದು. ನೀವು ಈ ದೀನ್‌ನಲ್ಲಿ ವಿಶ್ವಾಸವಿರಿಸುತ್ತಾ ಬೇರೆ ದೀನ್‌ಗಳ ಅಧೀನದಲ್ಲಿ ಕಳೆಯಬೇಕಾಗಿ ಬರುವ ಒಂದೊಂದು ಕ್ಷಣವೂ ನಿಮ್ಮ ಪಾಲಿಗೆ ಚಿತ್ರಹಿಂಸೆಯ ಕ್ಷಣವಾಗಿರುವುದು. ನಿಮ್ಮ ಹಾಸಿಗೆಯು ನಿಮಗೆ ಮುಳ್ಳಿನ ಹಾಸಿಗೆಯಂತಾಗುವುದು. ನಿಮ್ಮ ಅನ್ನವು ವಿಷಾನ್ನವೆನಿಸುವುದು. ಸತ್ಯಧರ್ಮದ ಸಂಸ್ಥಾಪನೆಗಾಗಿ ಹೋರಾಡದೆ ನಿಮಗೆ ಕಿಂಚಿತ್ತೂ ನೆಮ್ಮದಿ ಸಿಗಲಾರದು.

ಇನ್ನು ಒಂದು ವೇಳೆ, ಅಲ್ಲಾಹನ ದೀನ್‌ನ ಹೊರತು ಇತರ ದೀನ್‌ಗಳ ಅಧೀನದಲ್ಲಿ ಬದುಕುತ್ತಿರುವಾಗ ನಿಮಗೆ ನೆಮ್ಮದಿ ಸಿಗುತ್ತಿದೆಯೆಂದಾದರೆ ಮತ್ತು ನೀವು ಈ ಅವಸ್ಥೆಯ ಬಗ್ಗೆ ಸಂತೃಪ್ತರಾಗಿರುವಿರಿ ಎಂದಾದರೆ ನೀವು ಸತ್ಯವಿಶ್ವಾಸಿಯೇ ಅಲ್ಲ- ನೀವೆಷ್ಟೇ ಶ್ರದ್ಧೆಯಿಂದ ನಮಾಝ್ ನಿರ್ವಹಿಸುವವರಾಗಿದ್ದರೂ, ಎಷ್ಟು ಸುದೀರ್ಘವಾದ ದೇವಧ್ಯಾನಗಳನ್ನು ಮಾಡುವವರಾಗಿದ್ದರೂ, ಕುರ್‌ಆನ್ ಹದೀಸ್‌ಗಳನ್ನು ವ್ಯಾಖ್ಯಾನ ಮಾಡುವವರಾಗಿದ್ದರೂ, ಇಸ್ಲಾಮಿನ ತತ್ವಶಾಸ್ತ್ರದ ಬಗ್ಗೆ ಎಷ್ಟೇ ದೊಡ್ಡ ಭಾಷಣಗಳನ್ನು ಬಿಗಿಯುವವರಾಗಿದ್ದರೂ ಸರಿಯೇ.

ಇದು, ಅಲ್ಲಾಹನ ಹೊರತು ಅನ್ಯರ ಧರ್ಮಗಳ ಬಗ್ಗೆ ಸಂತೃಪ್ತರಾಗಿರುವವರ ವಿಷಯವಾಯಿತು. ಇನ್ನು ಇತರ ದೀನ್‌ಗಳ ಸೇವೆಯಲ್ಲಿ ನಿರತರಾಗಿರುವ ಮತ್ತು ಬೇರಾವುದೋ ದೀನ್

(ಉದಾ: ಪ್ರಜಾಸತ್ತೆ)ನ ಸ್ಥಾಪನೆಗಾಗಿ ಜಿಹಾದ್ ನಡೆಸುವ ಕಪಟಿಗಳ ಬಗ್ಗೆ ಏನು ತಾನೇ ಹೇಳಲಿ? ಮರಣವಂತೂ ದೂರವೇನಿಲ್ಲ. ಅದರ ಸಮಯವು ಬಂದು ಬಿಟ್ಟಾಗ, ಈ ಜನರು ತಮ್ಮ ಲೌಕಿಕ ಜೀವನದಲ್ಲಿ ಮಾಡಿದ ಸಂಪಾದನೆಯನ್ನು ಸಾಕ್ಷಾತ್ ಅಲ್ಲಾಹನೇ ಇವರ ಮುಂದೆ ಇಟ್ಟು ಬಿಡುವನು. ಇವರು ತಾವು ಮುಸ್ಲಿಮರೆಂದು ಭ್ರಮಿಸಿಕೊಂಡಿದ್ದರೆ ಭಾರೀ ಮೂರ್ಖತನಕ್ಕೆ ಒಳಗಾಗಿದ್ದಾರೆ. ಇವರಿಗೆ ಬುದ್ಧಿ-ವಿವೇಕವೆಂಬುದು ಕಿಂಚಿತ್ತಾದರೂ ಇದ್ದಿದ್ದರೆ, ಒಂದು ಧರ್ಮವನ್ನು ಸತ್ಯವೆಂದು ನಂಬಿ ಅದಕ್ಕೆದುರಾಗಿ ಇನ್ನೊಂದು ಧರ್ಮದ ಸ್ಥಾಪನೆಗಾಗಿ ನಡೆಯುವ ಹೋರಾಟದಲ್ಲಿ ಭಾಗವಹಿಸುವುದು ಅಥವಾ ಬೇರೊಂದು ಧರ್ಮದ ಸ್ಥಾಪನೆಗಾಗಿ ಹೋರಾಡುವುದು ಎಂತಹ ವಿರೋಧಾಭಾಸದ ಕೃತ್ಯವೆಂಬುದು ಅವರಿಗೆ ಮನವರಿಕೆಯಾಗುತ್ತಿತ್ತು. ಎಂದಾದರೂ ನೀರು ಮತ್ತು ಬೆಂಕಿಯು ಒಂದೆಡೆ ಸೇರಬಹುದು. ಆದರೆ ಅಲ್ಲಾಹನ ಮೇಲಿನ ವಿಶ್ವಾಸ ಮತ್ತು ಪ್ರಸ್ತುತ ಕೃತ್ಯವು ಒಂದೆಡೆ ಸೇರಿರಲು ಖಂಡಿತ ಸಾಧ್ಯವಿಲ್ಲ.

ಈ ಕುರಿತು ಪವಿತ್ರ ಕುರ್‌ಆನಿನಲ್ಲಿರುವ ಎಲ್ಲ ಮಾತುಗಳನ್ನು ಉಲ್ಲೇಖಿಸಲು ಈ ಸಂಕ್ಷಿಪ್ತ ಉಪನ್ಯಾಸದಲ್ಲಿ ಹೇಗೆ ಸಾಧ್ಯ? ಆದರೂ ಕೆಲವು ಸೂಕ್ತಗಳನ್ನು ಇಲ್ಲಿ ನಿಮ್ಮ ಮುಂದಿಡುತ್ತಿದ್ದೇನೆ:

أَحَسِبَ النَّاسُ أَنْ يُّتْرَكُوْٓا أَنْ يَّقُوْلُوْٓا اٰمَنَّا وَهُمْ لَا يُفْتَنُوْنَ ②
وَلَقَدْ فَتَنَّا الَّذِيْنَ مِنْ قَبْلِهِمْ فَلَيَعْلَمَنَّ اللّٰهُ الَّذِيْنَ صَدَقُوْا
وَلَيَعْلَمَنَّ الْكٰذِبِيْنَ ③

""ನಾವು ವಿಶ್ವಾಸವಿರಿಸಿದೆವು" ಎಂದ ಮಾತ್ರಕ್ಕೆ ಅವರನ್ನು ಬಿಟ್ಟು ಬಿಡಲಾಗುವುದೆಂದೂ ಅವರನ್ನು ಪರೀಕ್ಷೆಗೊಳಪಡಿಸಲಾಗದೆಂದೂ ಜನರು ತಿಳಿದುಕೊಂಡಿರುವರೇ? ವಸ್ತುತಃ ನಾವು ಇವರಿಗಿಂತ ಮುಂಚೆ ಗತಿಸಿ ಹೋದವರನ್ನು ಪರೀಕ್ಷೆಗೊಳಪಡಿಸಿದ್ದೆವು. ಯಾರು ಸತ್ಯವಾದಿಗಳು ಮತ್ತು ಯಾರು ಸುಳ್ಳುಗಾರರೆಂದು ಅಲ್ಲಾಹನಿಗೆ ನಿಶ್ಚಯವಾಗಿಯೂ ನೋಡಬೇಕಾಗಿದೆ."

(ಅಲ್ ಅಂಕಬೂತ್: 2-3)

وَمِنَ النَّاسِ مَنْ يَّقُوْلُ اٰمَنَّا بِاللّٰهِ فَاِذَآ اُوْذِيَ فِي اللّٰهِ جَعَلَ
فِتْنَةَ النَّاسِ كَعَذَابِ اللّٰهِ ؕ وَلَئِنْ جَآءَ نَصْرٌ مِّنْ رَّبِّكَ لَيَقُوْلُنَّ
اِنَّا كُنَّا مَعَكُمْ ؕ اَوَلَيْسَ اللّٰهُ بِاَعْلَمَ بِمَا فِيْ صُدُوْرِ الْعٰلَمِيْنَ ⑩
وَلَيَعْلَمَنَّ اللّٰهُ الَّذِيْنَ اٰمَنُوْا وَلَيَعْلَمَنَّ الْمُنٰفِقِيْنَ ⑪

"ನಾವು ಅಲ್ಲಾಹನ ಮೇಲೆ ವಿಶ್ವಾಸವಿರಿಸಿದ್ದೇವೆಂದು ಹೇಳುವವನು ಜನರಲ್ಲಿದ್ದಾನೆ. ಆದರೆ, ಅವನು ಅಲ್ಲಾಹನ ವಿಷಯದಲ್ಲಿ ಸತಾಯಿಸಲ್ಪಟ್ಟಾಗ ಜನರ ಕಡೆಯಿಂದ ಬರುವಂತಹ ಪರೀಕ್ಷೆಯನ್ನು ಅಲ್ಲಾಹನ ಯಾತನೆಯಂತೆ ಗ್ರಹಿಸಿಕೊಂಡನು. ನಿನ್ನ ಪ್ರಭುವಿನ ಕಡೆಯಿಂದ ಸಹಾಯವೊದಗಿದಾಗ ಇವನೇ, "ನಾವಂತೂ ನಿಮ್ಮ ಜೊತೆಗಿದ್ದೆವು" ಎಂದು ಹೇಳುವನು. ಲೋಕವಾಸಿಗಳ ಮನಸ್ಸಿನ ಸ್ಥಿತಿಯು ಅಲ್ಲಾಹನಿಗೆ ಚೆನ್ನಾಗಿ ತಿಳಿದಿಲ್ಲವೇ? ಸತ್ಯವಿಶ್ವಾಸಿಗಳು ಯಾರು ಹಾಗೂ ಕಪಟವಿಶ್ವಾಸಿಗಳು ಯಾರು ಎಂಬುದು ನಿಶ್ಚಯವಾಗಿಯೂ ಅಲ್ಲಾಹನಿಗೆ ಅರಿಯಲೇಬೇಕಾಗಿದೆ." (ಅಲ್ ಅಂಕಬೂತ್: 10,11)

مَا كَانَ اللّٰهُ لِيَذَرَ الْمُؤْمِنِيْنَ عَلٰى مَآ اَنْتُمْ عَلَيْهِ حَتّٰى يَمِيْزَ الْخَبِيْثَ مِنَ الطَّيِّبِ

"ಅಲ್ಲಾಹನು ಸತ್ಯವಿಶ್ವಾಸಿಗಳನ್ನು ಈಗ ನೀವು ಇರುವ ಸ್ಥಿತಿಯಲ್ಲಿ ಎಷ್ಟು ಮಾತ್ರಕ್ಕೂ ಇರಗೊಡಲಾರನು. ಅವನು ಶುದ್ಧರನ್ನು ಅಶುದ್ಧರಿಂದ ಬೇರ್ಪಡಿಸಿಯೇ ತೀರುವನು." (ಆಲಿ ಇಮ್ರಾನ್, 179)

اَمْ حَسِبْتُمْ اَنْ تُتْرَكُوْا وَلَمَّا يَعْلَمِ اللّٰهُ الَّذِيْنَ جٰهَدُوْا مِنْكُمْ وَلَمْ يَتَّخِذُوْا
مِنْ دُوْنِ اللّٰهِ وَلَا رَسُوْلِهٖ وَلَا الْمُؤْمِنِيْنَ وَلِيْجَةً

"ನಿಮ್ಮನ್ನು ಹೀಗೆಯೇ ಬಿಟ್ಟು ಬಿಡಲಾಗುವುದೆಂದು ನೀವೆಣಿಸಿದ್ದೀರಾ? ವಸ್ತುತಃ ನಿಮ್ಮ ಪೈಕಿ (ಅಲ್ಲಾಹನ ಮಾರ್ಗದಲ್ಲಿ) ಅತಿಯಾಗಿ ಪರಿಶ್ರಮಿಸಿದವರು ಮತ್ತು ಅಲ್ಲಾಹನನ್ನೂ ಸಂದೇಶ ವಾಹಕರನ್ನೂ ಸತ್ಯವಿಶ್ವಾಸಿಗಳನ್ನೂ ಹೊರತು ಅನ್ಯರನ್ನು ಆತ್ಮ ಮಿತ್ರರನ್ನಾಗಿ ಮಾಡಿಕೊಳ್ಳದವರೆಂದು ಅಲ್ಲಾಹನು ಇನ್ನೂ ಕಂಡುಕೊಳ್ಳಲೇ ಇಲ್ಲ." (ಅತ್ತೌಬಃ: 16)

اَلَمْ تَرَ اِلَى الَّذِيْنَ تَوَلَّوْا قَوْمًا غَضِبَ اللّٰهُ عَلَيْهِمْ مَا هُمْ مِّنْكُمْ وَلَا
مِنْهُمْ .... اُولٰٓئِكَ حِزْبُ الشَّيْطٰنِ اَلَآ اِنَّ حِزْبَ الشَّيْطٰنِ هُمُ الْخٰسِرُوْنَ ﴿١٩﴾
اِنَّ الَّذِيْنَ يُحَآدُّوْنَ اللّٰهَ وَرَسُوْلَهٗٓ اُولٰٓئِكَ فِى الْاَذَلِّيْنَ ﴿٢٠﴾ كَتَبَ اللّٰهُ
لَاَغْلِبَنَّ اَنَا وَرُسُلِيْ اِنَّ اللّٰهَ قَوِيٌّ عَزِيْزٌ ﴿٢١﴾

"ಅಲ್ಲಾಹನ ಕ್ರೋಧಕ್ಕೊಳಗಾಗಿರುವಂತಹ ಒಂದು ಕೂಟವನ್ನು ಮಿತ್ರರಾಗಿ ಮಾಡಿಕೊಂಡವರನ್ನು ಕಂಡಿರಾ? ಅವರು ನಿಮ್ಮವರೂ ಅಲ್ಲ, ಅವರ ಕಡೆಯವರೂ ಅಲ್ಲ..... ಅವರು ಶೈತಾನನ ಪಕ್ಷದವರು. ಎಚ್ಚರಿಕೆ! ಶೈತಾನನ ಪಕ್ಷದವರೇ ನಷ್ಟಕ್ಕೊಳಗಾಗುವವರು. ಅಲ್ಲಾಹ್ ಮತ್ತು ಅವನ ಸಂದೇಶವಾಹಕರನ್ನು ವಿರೋಧಿಸುವವರು ಖಂಡಿತವಾಗಿಯೂ ಅತ್ಯಂತ ನಿಕೃಷ್ಟ

ಜೀವಿಗಳಾಗಿದ್ದಾರೆ. ನಾನು ಮತ್ತು ನನ್ನ ಸಂದೇಶವಾಹಕರೇ ವಿಜಯಿಗಳಾಗುವೆವೆಂದು ಅಲ್ಲಾಹನು ವಿಧಿ ಬರೆದು ಬಿಟ್ಟಿರುವನು. ವಾಸ್ತವದಲ್ಲಿ ಅಲ್ಲಾಹನು ಅತ್ಯಂತ ಬಲಿಷ್ಠನೂ ಅಜೇಯನೂ ಆಗಿರುತ್ತಾನೆ.'' (ಅಲ್ ಮುಜಾದಲಃ: 14, 19-21)

ಜಿಹಾದ್: ನೈಜ ಸತ್ಯವಿಶ್ವಾಸಿಯ ಚಿಹ್ನೆ

ಭೂಮುಖದ ಮೇಲೆ ಅಲ್ಲಾಹನ ಧರ್ಮಕ್ಕೆ ಹೊರತಾದ ಇತರ ಯಾವುದಾದರೂ ಧರ್ಮವು ಸ್ಥಾಪಿತವಾಗಿದ್ದು ಅಲ್ಲಿರುವ ಓರ್ವ ಮುಸ್ಲಿಮನು ಆ ಮಿಥ್ಯ ವ್ಯವಸ್ಥೆಯನ್ನು ಉಚ್ಚಾಟಿಸಿ ಅದರ ಸ್ಥಾನದಲ್ಲಿ ಸತ್ಯಧರ್ಮದ ಸ್ಥಾಪನೆಗಾಗಿ ಪ್ರಯತ್ನಿಸುತ್ತಾನೋ ಇಲ್ಲವೋ ಎಂಬುದು ಅವನು ನೈಜ ಸತ್ಯವಿಶ್ವಾಸಿಯಾಗಿದ್ದಾನೆಂಬುದನ್ನು ಪರೀಕ್ಷಿಸುವ ಮಾನದಂಡ ವಾಗಿದೆಯೆಂದು ಪ್ರಸ್ತುತ ಸೂಕ್ತಗಳಿಂದ ಸ್ಪಷ್ಟವಾಗುತ್ತದೆ. ಅವನು ಅದಕ್ಕಾಗಿ ಪ್ರಯತ್ನಿಸುತ್ತಾನೆ, ತನ್ನ ಶಕ್ತಿಸಾಮರ್ಥ್ಯಗಳನ್ನು ವಿನಿಯೋಗಿಸುತ್ತಾನೆ, ತನ್ನ ಪ್ರಾಣವನ್ನು ಪಣಕ್ಕಿಡುತ್ತಾನೆ ಮತ್ತು ಎಲ್ಲ ರೀತಿಯ ಕಷ್ಟಕಾರ್ಪಣ್ಯಗಳನ್ನು ಸಹಿಸುತ್ತಾನೆ ಎಂದಾದರೆ ಅವನು ನೈಜ ಸತ್ಯವಿಶ್ವಾಸಿಯಾಗಿದ್ದಾನೆ. ಅವನು ತನ್ನ ಪ್ರಯತ್ನದಲ್ಲಿ ಯಶಸ್ವಿಯಾಗಲಿ ಅಥವಾ ಪರಾಜಿತನಾಗಲಿ. ಆದರೆ ಆತ ಮಿಥ್ಯ ಧರ್ಮದ ಪ್ರಾಬಲ್ಯದಲ್ಲಿ ಸಂತೃಪ್ತನಾಗಿದ್ದರೆ ಅಥವಾ ಅದರ ಪ್ರಾಬಲ್ಯದಲ್ಲಿ ಸ್ವತಃ ಭಾಗೀದಾರರಾಗುತ್ತಾನೆಂದಾದರೆ ಆತ ಸತ್ಯವಿಶ್ವಾಸಿಯೆಂದು ಹೇಳುವುದು ಸುಳ್ಳು.

ಸಂಘರ್ಷವಿಲ್ಲದೆ ಬದಲಾವಣೆ ಸಾಧ್ಯವಿಲ್ಲ

ಪ್ರಸ್ತುತ ಸೂಕ್ತಗಳಲ್ಲಿ ಪವಿತ್ರ ಕುರ್‌ಆನ್, ಸತ್ಯಧರ್ಮವನ್ನು ಸಂಸ್ಥಾಪಿಸುವ ನಿಟ್ಟಿನಲ್ಲಿ ಸಂಕಷ್ಟಗಳು ಎದುರಾಗುತ್ತವೆಂದು ನೆಪ ಹೂಡುವ ಜನರಿಗೂ ಸೂಕ್ತ ಉತ್ತರ ನೀಡಿದೆ. ಸತ್ಯ ಧರ್ಮವನ್ನು ಸ್ಥಾಪಿಸಲು ಪ್ರಯತ್ನಿಸುವಾಗಲೆಲ್ಲಾ, ಮೊದಲೇ ಪ್ರಬಲವಾಗಿ ಸ್ಥಾಪಿತವಾಗಿರುವ ಯಾವುದಾದರೂ ಮಿಥ್ಯ ವ್ಯವಸ್ಥೆಯು ಅಸ್ತಿತ್ವದಲ್ಲಿರುವುದು, ಶಕ್ತಿಯೂ ಅದರ ಬಳಿ ಇರುವುದು, ಜೀವನಾಧಾರಗಳೆಲ್ಲಾ ಅದರ ಕಪಿ ಮುಷ್ಟಿಯಲ್ಲಿರುವವು ಮತ್ತು ಜೀವನದ ಎಲ್ಲ ರಂಗಗಳಲ್ಲೂ ಆ ವ್ಯವಸ್ಥೆಯೇ ತನ್ನನ್ನು ಹೇರಿಕೊಂಡಿರುವುದು ಎಂಬುದು ವ್ಯಕ್ತ. ಇಂತಹ ಸ್ಥಾಪಿತ ವ್ಯವಸ್ಥೆಯೊಂದನ್ನು ಉಚ್ಚಾಟಿಸಿ ಅದರ ಸ್ಥಾನದಲ್ಲಿ ಸತ್ಯಧರ್ಮವನ್ನು ಸಂಸ್ಥಾಪಿಸುವ ಕೆಲಸ ಹೂಮಂಚದಲ್ಲಿ ಮಲಗುವಂತಹ ಸುಲಭದ ಕೆಲಸವಂತೂ ಅಲ್ಲ. ಈ ಕಾರ್ಯವನ್ನು ಬಹಳ ನಿರಾತಂಕವಾಗಿ, ಆರಾಮವಾಗಿ ಹೆಜ್ಜೆ ಇಡುತ್ತಾ ಸಾಧಿಸುತ್ತೇವೆಂದು ಹೊರಟರೆ ಹಿಂದೆಯೂ ಅದು ಸಾಧ್ಯವಾಗಿಲ್ಲ, ಮುಂದೆಯೂ ಅದು ಸಾಧ್ಯವಾಗಲಾರದು. ಮಿಥ್ಯ ವ್ಯವಸ್ಥೆಯ ಅಧೀನದಲ್ಲಿ ಬದುಕುತ್ತಿರುವಾಗ ದಕ್ಕುತ್ತಿರುವಂತಹ ಕಿಂಚಿತ್ ಸೌಲಭ್ಯಗಳು ಕೂಡಾ ಕೈ ಬಿಟ್ಟು ಹೋಗಬಾರದು ಮತ್ತು ಅದೇ ವೇಳೆ ಸತ್ಯಧರ್ಮದ ಸಂಸ್ಥಾಪನೆಯೂ ಆಗಿ ಬಿಡಬೇಕು ಎಂದು ನೀವು ಅಪೇಕ್ಷಿಸುವುದಾದರೆ ಇದು ಖಂಡಿತ

ಅಸಂಭವನೀಯ. ನಿಜಕ್ಕೂ ನೀವು ಸತ್ಯಧರ್ಮವನ್ನು ಸ್ಥಾಪಿಸ ಬಯಸುವುದಾದಲ್ಲಿ ಮಿಥ್ಯ ವ್ಯವಸ್ಥೆಯ ಅಧೀನದಲ್ಲಿ ನಿಮಗೆ ಸಿಗುತ್ತಿರುವ ಎಲ್ಲ ಹಕ್ಕುಗಳನ್ನು, ಎಲ್ಲ ಲಾಭಗಳನ್ನು ಮತ್ತು ಎಲ್ಲ ಸೌಲಭ್ಯ ಮತ್ತು ಐಶಾರಾಮಗಳನ್ನು ಒದ್ದು ತೊರೆದು ಬಿಡಲು ನೀವು ಸಿದ್ಧರಾಗಲೇಬೇಕು ಮತ್ತು ಈ ಹೋರಾಟದಿಂದಾಗಿ ಎದುರಾಗುವ ಎಲ್ಲ ನಷ್ಟಗಳನ್ನು ಧೈರ್ಯದಿಂದ ಸ್ವಾಗತಿಸಲು ಸಿದ್ಧರಾಗಿರಬೇಕು. ಯಾರು ಈ ಎಲ್ಲ ಸವಾಲುಗಳನ್ನು ಎದುರಿಸಬಲ್ಲರೋ ಅವರು ಮಾತ್ರ ಅಲ್ಲಾಹನ ಮಾರ್ಗದ ಈ ಜಿಹಾದ್ ಅಥವಾ ಹೋರಾಟವನ್ನು ಮಾಡಬಲ್ಲರು. ಎಲ್ಲ ಕಾಲಗಳಲ್ಲೂ ಇಂತಹವರು ಬಹಳ ಕಡಿಮೆ ಸಂಖ್ಯೆಯಲ್ಲೇ ಕಂಡು ಬರುತ್ತಾರೆ. ಅತ್ತ ತಾವು ಸತ್ಯಧರ್ಮವನ್ನು ಅನುಸರಿಸುತ್ತಲೂ ಇರಬೇಕು, ಜೊತೆಗೆ ಆರಾಮವಾಗಿಯೂ ಇರಬೇಕು ಎಂದು ಬಯಸುವವರಿಗೆ, ದೊಡ್ಡದೊಡ್ಡ ಮಾತುಗಳು ಶೋಭೆ ನೀಡುವುದಿಲ್ಲ. ಅವರು ಎಲ್ಲಾದರೂ ಆರಾಮವಾಗಿ ಕುಳಿತು ತಮಗೆ ತಾವೇ ಸೇವೆ ಸಲ್ಲಿಸಿಕೊಂಡಿರಬೇಕು ಮತ್ತು ಕೊನೆಗೊಮ್ಮೆ ದೇವ ಮಾರ್ಗದಲ್ಲಿ ಸಂಕಷ್ಟಗಳನ್ನು ಎದುರಿಸುವವರು ತಮ್ಮ ತ್ಯಾಗಗಳಿಂದ ಸತ್ಯಧರ್ಮವನ್ನು ಸಂಸ್ಥಾಪಿಸಿದಾಗ, ಮುಂದೆ ಬಂದು, "ನಾವೂ ನಿಮ್ಮ ಜೊತೆಗಿದ್ದೆವು" (ನೋಡಿರಿ, ಪವಿತ್ರ ಕುರ್‌ಆನ್- 29:10) ಎಂದು ಹೇಳುತ್ತಾ ಅದರಲ್ಲಿ ತಮ್ಮ ಪಾಲು ಕೇಳಬೇಕು.

❖ ❖ ❖

اَلْخُطْبَةُ الْاُوْلىٰ

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا۔ مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ فَلَاهَادِيَ لَهٗ۔ وَنَشْهَدُ اَنْ لَّآ اِلٰهَ اِلَّا اللّٰهُ وَحْدَهٗ لَا شَرِيْكَ لَهٗ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ۔ اَرْسَلَهٗ بِالْحَقِّ بَشِيْرًاوَّنَذِيْرًا بَيْنَ يَدَيِ السَّاعَةِ۔ مَنْ يُّطِعِ اللّٰهَ وَرَسُوْلَهٗ فَقَدْ رَشَدَ وَاهْتَدٰى وَمَنْ يَّعْصِهِمَا فَاِنَّهٗ قَدْ غَوٰى وَاِنَّهٗ لَايَضُرُّ اِلَّا نَفْسَهٗ وَلَا يَضُرُّاللّٰهَ شَيْئًا۔ اِنَّ خَيْرَ الْحَدِيْثِ كِتَابُ اللّٰهِ وَخَيْرَ الْهَدْيِ هَدْيُ مُحَمَّدٍ صَلَّى اللّٰهُ عَلَيْهِ وَسَلَّمَ وَاِنَّ خَيْرَ الْاُمُوْرِ عَوَازِمُهَا وَشَرَّالْاُمُوْرِ مُحْدَثَاتُهَا۔ كُلُّ مُحْدَثَةٍ بِدْعَةٌ وَّكُلُّ بِدْعَةٍ ضَلَالَةٌ وَّكُلُّ ضَلَا لَةٍ فِى النَّارِ۔

اَمَّا بَعْدُ فَاَعُوْذُ بِاللّٰهِ مِنَ الشَّيْطَانِ الرَّجِيْمِ بِسْمِ اللّٰهِ الرَّحْمٰنِ الرَّحِيْمِ۔ قَالَ اللّٰهُ تَعَالىٰ فِىْ كِتَابِهٖ

الْمَجِيْدِ: "يَاَيُّهَا الَّذِيْنَ اٰمَنُوْآ اِذَا نُوْدِیَ لِلصَّلٰوةِ مِنْ يَّوْمِ الْجُمُعَةِ فَاسْعَوْا اِلٰى ذِكْرِ اللّٰهِ وَذَرُوا الْبَيْعَ ط ذٰلِكُمْ خَيْرٌلَّكُمْ اِنْ كُنْتُمْ تَعْلَمُوْنَ ٥ فَاِذَا قُضِيَتِ الصَّلٰوةُ فَانْتَشِرُوْا فِى الْاَرْضِ وَابْتَغُوْا مِنْ فَضْلِ اللّٰهِ وَاذْكُرُوا اللّٰهَ كَثِيْرًا لَّعَلَّكُمْ تُفْلِحُوْنَ ٥ وَاِذَا رَاَوْا تِجَارَةً اَوْلَهْوَانِ انْفَضُّوْآ اِلَيْهَا وَتَرَكُوْكَ قَآئِمًا ط قُلْ مَاعِنْدَ اللّٰهِ خَيْرٌ مِّنَ اللَّهْوِ وَمِنَ التِّجَارَةِ ط وَاللّٰهُ خَيْرُ الرّٰازِقِيْنَ "٥

صَدَقَ اللّٰهُ الْعَلِيُّ الْعَظِيْمُ وَنَفَعَنِیْ وَاِيَّاكُمْ بِاٰيٰتِهٖ وَالذِّكْرِ الْحَكِيْمِ اِنَّهٗ تَعَالٰى جَوَّادٌ كَرِيْمٌ مَلِكٌ بَرٌّ رَّءُوْفٌ رَّحِيْمٌ٥

اَلْخُطْبَةُ الثَّانِيَةُ

اَلْحَمْدُلِلّٰهِ رَبِّ الْعٰلَمِيْنَ۔ وَالصَّلٰوةُ وَالسَّلَامُ عَلٰى رَسُوْلِهِ الْاَمِيْنِ۔ اَمَّابَعْدُ فَيَا مَعْشَرَالْمُسْلِمِيْنَ۔ اَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ قَالَ اللّٰهُ تَعَالٰى فِىْ كِتَابِهِ الْكَرِيْمِ: "اِنَّ اللّٰهَ وَمَلٰٓئِكَتَهٗ يُصَلُّوْنَ عَلَى النَّبِيِّ ط يٰٓاَيُّهَا الَّذِيْنَ اٰمَنُوْآ صَلُّوْا عَلَيْهِ وَسَلِّمُوْا تَسْلِيْمًا"o اَللّٰهُمَّ صَلِّ عَلٰى سَيِّدِنَا وَمَوْلَانَا مُحَمَّدٍ، بِعَدَدِ مَنْ صَلّٰى وَ صَامَ۔ اَللّٰهُمَّ صَلِّ عَلٰى سَيِّدِنَا وَمَوْلَانَا مُحَمَّدٍ، بِعَدَدِ مَنْ قَعَدَ وَقَامَ۔ اَللّٰهُمَّ صَلِّ عَلٰى جَمِيْعِ الْاَنْبِيَاءِ وَالْمُرْسَلِيْنَ وَعَلٰى سَائِرِ الصَّحَابَةِ وَالتَّابِعِيْنَ وَعَلٰى عِبَادِكَ الصّٰلِحِيْنَ۔ اَللّٰهُمَّ اَيِّدِ الْاِسْلَامَ وَالْمُسْلِمِيْنَ۔ اَللّٰهُمَّ انْصُرْ مَنْ نَّصَرَ دِيْنَ مُحَمَّدٍ صَلَّى اللّٰهُ عَلَيْهِ وَسَلَّمَ وَاجْعَلْنَا مِنْهُمْ وَاخْذُلْ مَنْ خَذَلَ دِيْنَ مُحَمَّدٍ صَلَّى اللّٰهُ عَلَيْهِ وَسَلَّمَ وَلَا تَجْعَلْنَا مِنْهُمْ اللّٰهُمَّ اَرِنَا الْحَقَّ حَقًّا وَّارْزُقْنَا اتِّبَاعَهٗ وَاَرِنَا الْبَاطِلَ بَاطِلًا وَّارْزُقْنَا اجْتِنَابَهٗ۔ اَللّٰهُمَّ

ثَبِّتْنَا عَلَى الْإِسْلَامِ۔ اَللّٰهُمَّ نَوِّرْ قُلُوْبَنَا بِنُوْرِالْإِيْمَانِ۔ اَللّٰهُمَّ اغْفِرْ لِلْمُؤْمِنِيْنَ وَالْمُؤْمِنٰتِ الْاَحْيَاۤءِ مِنْهُمْ وَالْاَمْوَاتِ۔

عِبَادَ اللّٰهِ۔ رَحِمَكُمُ اللّٰهُ۔ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاۤءِ ذِى الْقُرْبٰى وَيَنْهٰى عَنِ الْفَحْشَاۤءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ۔ اُذْكُرُوا اللّٰهَ يَذْكُرْكُمْ وَادْعُوْهُ يَسْتَجِبْ لَكُمْ۔ وَلَذِكْرُ اللّٰهِ تَعَالٰى اَعْلٰى وَاَوْلٰى وَاَعَزُّ وَاَجَلُّ وَاَتَمُّ وَاَهَمُّ وَاَكْبَرُ۔o

❖ ❖ ❖